5. ,, ಶಂಕರಪ್ಪ, ಜಮೀನ್ದಾರ್ ... ... ಡಿಟೋ
6. ,, ತಿಮ್ಮಪ್ಪೈಯ್ಯಂಗಾರ್, ಸ್ಕೂಲ್ ಮ್ಯಾಸ್ಟರ್ ... ಡಿಟೋ

ಲಕ್ಕುವಳ್ಳಿ ಯೂನಿಯನ್—

1. ತಾಲ್ಲೂಕು ಅಮಲ್ದಾರ್ ... ... ಚೇರ್ಮನ್ ಯಾ ಅಧ್ಯಕ್ಷ.
2. ಹೋಬಳಿ ಶೇಕದಾರ್ ... ... ಸಭಿಕ.
3. ಮಿ|| ವೆಂಕಟಗಿರಿಯಪ್ಪ, ಸ್ಕೂಲ್ ಮ್ಯಾಸ್ಟರ್ ... ... ಡಿಟೋ
4. ,, ಕೃಷ್ಣಪ್ಪ, ಪಟೇಲ್ ಮತ್ತು ಜಮೀನ್ದಾರ್ ... ... ಡಿಟೋ
5. ,, ಕೃಷ್ಣಸ್ವಾಮಿ ಪಿಳ್ಳೆ, ಜಮೀನ್ದಾರ್ ... ... ಡಿಟೋ
6. ,, ಅಮೀರ್‌ಸಾಬ್, ವರ್ತಕ ... ... ಡಿಟೋ
7. ,, ಸೂರ್ಯಜೋಯಿಸರು, ಜಮೀನ್ದಾರ್ ... ... ಡಿಟೋ

ಶಿವನೆ ಯೂನಿಯನ್—

1. ತಾಲ್ಲೂಕು ಅಮಲ್ದಾರ್ ... ... ಚೇರ್ಮನ್ ಯಾ ಅಧ್ಯಕ್ಷ.
2. ಹೋಬಳಿ ಶೇಕದಾರ್ ... ... ಸಭಿಕ.
3. ಮಿ|| ಪುರುದಪ್ಪ, ಪಟೇಲ್ ಮತ್ತು ಜಮೀನ್ದಾರ್ ... ... ಡಿಟೋ
4. ,, ಮಲ್ಲಯ್ಯ, ಜಮೀನ್ದಾರ್ ... ... ಡಿಟೋ
5. ,, ಬೈರಪ್ಪ, ಶಾನುಭೋಗ ... ... ಡಿಟೋ
6. ,, ಲಕ್ಕಣ್ಣ, ಜಮೀನ್ದಾರ್ ... ... ಡಿಟೋ
7. ,, ನಾಗಣ್ಣ, ಜಮೀನ್ದಾರ್ ... ... ಡಿಟೋ

ಬಗುವಳ್ಳಿ ಯೂನಿಯನ್—

1. ತಾಲ್ಲೂಕು ಅಮಲ್ದಾರ್ ... ... ಚೇರ್ಮನ್ ಯಾ ಅಧ್ಯಕ್ಷ.
2. ಹೋಬಳಿ ಶೇಕದಾರ್ ... ... ಸಭಿಕ.
3. ಮಿ|| ತಿಮ್ಮೆಗೌಡ, ಪಟೇಲ್ ... ... ಡಿಟೋ
4. ,, ಗುರುರಾವ್, ಜಮೀನ್ದಾರ್ ... ... ಡಿಟೋ
5. ,, ಚಿಕ್ಕಕರಿಯಪ್ಪ, ಜಮೀನ್ದಾರ್ ... ... ಡಿಟೋ
6. ,, ಕೃಷ್ಣಪ್ಪ, ಜಮೀನ್ದಾರ್ ... ... ಡಿಟೋ
7. ,, ರಾಮಯ್ಯ, ಸ್ಕೂಲ್ ಮ್ಯಾಸ್ಟರ್ ... ... ಡಿಟೋ

ಲಿಂಗದಹಳ್ಳಿ ಯೂನಿಯನ್—

1. ತಾಲ್ಲೂಕು ಅಮಲ್ದಾರ್ ... ... ಅಧ್ಯಕ್ಷ.
2. ಹೋಬಳಿ ಶೇಕದಾರ್ ... ... ಸಭಿಕ.
3. ಮಿ|| ನಂಜಪ್ಪ, ಪಟೇಲ್ ... ... ಡಿಟೋ
4. ,, ಕಳ್ಳೆಗೌಡ, ಜಮೀನ್ದಾರ್ ... ... ಡಿಟೋ
5. ,, ಗೋಪಾಲಯ್ಯ, ಜಮೀನ್ದಾರ್ ... ... ಡಿಟೋ
6. ,, ಚಂದಪ್ಪ, ಜಮೀನ್ದಾರ್ ... ... ಡಿಟೋ
7. ,, ರಾಮಪ್ಪ, ಸ್ಕೂಲ್ ಮ್ಯಾಸ್ಟರ್ ... ... ಡಿಟೋ

ತರೀಕೆರೆ ತಾಲ್ಲೂಕು.

ಮರಲೆ ಯೂನಿಯರ್ನ—

1. ,, ತಾಲ್ಲೂಕು ಅಮಲ್ದಾರ್ ... ಅಧ್ಯಕ್ಷ.
2. ,, ಹೋಬಳಿ ಶೇಕದಾರ್ ... ಸಭಿಕ.
3. ಮಿ॥ ಸೂರಪ್ಪ, ಶಾನುಭೋಗ್ ... ಡಿಟೋ
4. ,, ಕಣ್ವೇಗೌಡ, ಪಟೇಲ್ ... ಡಿಟೋ
5. ,, ಚನ್ನೇಗೌಡ, ಜವಿರ್ನಾದಾರ್ ... ಡಿಟೋ
6. ,, ಮಲ್ಲಶೆಟ್ಟಿ, ಜವಿರ್ನಾದಾರ್ ... ಡಿಟೋ
7. ,, ಕಂಟೇಗೌಡ, ಜವಿರ್ನಾದಾರ್ ... ಡಿಟೋ

ಕಳಸಾಪುರ ಯೂನಿಯರ್ನ—

1. ತಾಲ್ಲೂಕು ಅಮಲ್ದಾರ್ ... ಅಧ್ಯಕ್ಷ.
2. ಹೋಬಳಿ ಶೇಕದಾರ್ ... ಸಭಿಕ.
3. ಮಿ॥ ತಿಮ್ಮಪ್ಪಯ್ಯ, ಶಾನುಭೋಗ್ ... ಡಿಟೋ
4. ,, ಕೃಷ್ಣಪ್ಪ, ಪಟೇಲ್ ... ಡಿಟೋ
5. ,, ಲಿಂಗಣ್ಣಯ್ಯ, ಜವಿರ್ನಾದಾರ್ ... ಡಿಟೋ
6. ,, ಅನಂತರಾಮಯ್ಯ, ಜವಿರ್ನಾದಾರ್ ... ಡಿಟೋ
7. ,, ರಂಗೇಗೌಡ, ಜವಿರ್ನಾದಾರ್ ... ಡಿಟೋ
8. ,, ಈರಣ್ಣ, ಜವಿರ್ನಾದಾರ್ ... ಡಿಟೋ

ಅಂಬಳೆ ಯೂನಿಯರ್ನ—

1. ತಾಲ್ಲೂಕು ಅಮಲ್ದಾರ್ ... ಅಧ್ಯಕ್ಷ.
2. ಹೋಬಳಿ ಶೇಕದಾರ್ ... ಸಭಿಕ.
3. ಮಿ॥ ಮಂಜಯ್ಯ, ಶಾನುಭೋಗ್ ... ಡಿಟೋ
4. ,, ಸೀತಾರಾಮಯ್ಯ, ಪಟೇಲ್ ... ಡಿಟೋ
5. ,, ಚೆನ್ನಬಸವಗೌಡ, ಜವಿರ್ನಾದಾರ್ ... ಡಿಟೋ
6. ,, ಹುಲಿಗೌಡ, ಜವಿರ್ನಾದಾರ್ ... ಡಿಟೋ
7. ,, ಚಿಕ್ಕಣ್ಣ, ಜವಿರ್ನಾದಾರ್ ... ಡಿಟೋ

ತಾರೀಖು 21ನೆ ಸೆಪಟಂಬರ್ 1907.

ನಂ. 2655—ಎಲ್. ಬಿ. 63-07—2, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿನ ಮತ್ತು ಅದಕ್ಕನುಸಾರವಾಗಿ ಮಾಡಿದ ನಿಬಂಧನೆಗಳ ಉದ್ದೇಶಾರ್ಥಕ್ಕಾಗಿ, ತರೀಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಇದರಡಿ ಕಂಡ ಗ್ರಾಮಗಳನ್ನು ಯೂನಿಯರ್ನಗಳನ್ನಾಗಿ ಏರ್ಪಡಿಸಿ ಇದೆಯೆಂದು ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಮೂಲಕ ಪ್ರಕಟಿಸಿ ಇದೆ:—

(a) ತರೀಕೆರೆ ತಾಲ್ಲೂಕು.
1. ಕುಡೂರು.
2. ಲಕ್ಕವಳ್ಳಿ
3. ಶಿವನೆ.
4. ಬಗ್ಗುವಳ್ಳಿ.
5. ಲಿಂಗದಹಳ್ಳಿ.

(b) ಚಿಕ್ಕಮಗಳೂರು ತಾಲ್ಲೂಕು.
1. ಮರಲೆ.
2. ಕಳಸಾಪುರ.
3. ಅಂಬಳೆ.

ತಾರೀಖು 23ನೆ ಸೆಪಟಂಬರ್ 1907.

ನಂ. ಜೆ. 908—ಪೊ. 44-07—2, ಕೋಲಾರದ ಚಿನ್ನದ ಮೈದಾನಗಳ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಎಸ್. ಎಂ. ಪ್ರಿಚರ್ಡ್‌ಯವರನ್ನು, ಮದ್ರಾಸ್ ಸರ್ಕಾರದ ಕೆಲಸಕ್ಕೆ ವಾಪಸು ಕಳುಹಿಸಲ್ಪಟ್ಟ ಮಿ॥ ಪಿ. ಬಿ. ತಾಮ್ಸನ್ ಯವರಿಗೆ ಬದಲಾಗಿ 1907ನೆ ಇಸವಿಯ ಸೆಪಟಂಬರ್ 1ನೆ ತಾರೀಖಿನ ಲಾಗಾಯಿತು ಸದರಿ ಚಿನ್ನದ ಮೈದಾನಗಳ ಪೊಲೀಸ್ ಸೂಪರಿಂಟೆಂಡೆಂಟಾಗಿ ನೊಕರರ್ಮಾಡಿ ಇದೆ.

ತಾರೀಖು 13ನೆ ಸೆಪಟಂಬರ್ 1907.

ನಂ. ರೆ. 1953—ಲ್ಯಾ. ರೆ. 11-07—5, 1907ನೆ ಇಸವಿಯ ಜುಲೈ 10ನೆ ತಾರೀಖಿನ ರೆ. 321—ಲ್ಯಾ. ರೆ. 11-07—3ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ಮಿ॥ ಕೆ. ಶ್ರೀನಿವಾಸರಾಯರಿಗೆ ಕೊಟ್ಟ ಎರಡು ತಿಂಗಳ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಳ್ಳದೆ ಇರುವ ಸಬಬು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 13ನೆ ಸೆಪಟಂಬರ್ 1907.

ನಂ. ರೆ. 1997—ಫಾ. 31-07—13, ಮೈಸೂರು ಸರ್ವಿಸ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಫಾರೆಸ್ಟ್ ಅಸಿಸ್ಟೆಂಟ ಕನ್ಸರ್ವೇಟರ ಮಿ॥ ಬಿ. ರಾಮಸ್ವಾಮಿ ಐಯ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 14ನೆ ಸೆಪಟಂಬರ್ 1907.

ನಂ. ರೆ. 2044—ಲ್ಯಾ. ರೆ. 16-07-4, 1907ನೆ ಇಸವಿಯ ಜ್ಯುಲೈ 12ನೆ ತಾರೀಖಿನ ರೆ. 359—ಲ್ಯಾ. ರೆ. 16-07—2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ಮಿ॥ ಎ. ಕೃಷ್ಣ ಅರಸಿನವರಿಗೆ ಕೊಟ್ಟ 1 ತಿಂಗಳು 19 ದಿವಸಗಳ ಪ್ರಿವಿಲೇಜ್ ರಜಾವನ್ನು ಈ ಮೂಲಕ ಇನ್ನೂ ಎರಡು ದಿವಸಗಳ ವರೆಗೆ ಹೆಚ್ಚಿಸಿ ಇದೆ.

ತಾರೀಖು 14ನೆ ಸೆಪಟಂಬರ್ 1907.

ನಂ. ರೆ. 2075—ಲ್ಯಾ. ರೆ. 20-07—8, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿಗೆ ಈಗ ವರ್ಗಾಯಿಸಲ್ಪಟ್ಟಿರುವ ಅಮಲ್ದಾರ್ ಮಿ॥ ಎಂ. ರಂಗನಾಥರಾವ್, ಬಿ. ಎ., ಯವರನ್ನು ಕಾನಕಾನಹಳ್ಳಿ ತಾಲ್ಲೂಕಿಗೆ ವರ್ಗಾಯಿಸಿ ಇದೆ.

ರಜಾ ಮುಗಿದ ತರುವಾಯ ವರ್ಗಾಯಿಸಲ್ಪಟ್ಟ ಕೆಲಸದ ಮೇಲೆ ಹಾಜರಾಗತಕ್ಕದ್ದು.

2. ಅಮಲ್ದಾರ್ ಮಿ॥ ಎಂ. ಕೃಷ್ಣರಾಯರನ್ನು ಕಾನಕಾನಹಳ್ಳಿ ತಾಲ್ಲೂಕಿನಿಂದ ಅರಕಲಗೂಡು ತಾಲ್ಲೂಕಿಗೆ ವರ್ಗಾಯಿಸಿ ಇದೆ.

ತಾರೀಖು 16ನೆ ಸೆಪ್ಟಂಬರ್ 1907.

ನಂ. 2077—ಲ್ಯಾ. ರೆ 155-07—2, ಮಿ॥ ಕೆ. ಶ್ರೀಕಂಠಯ್ಯನವರು ಪ್ರಿವಿಲೇಜ್ ರಜಾವಿನ ಮೇಲೆ ಇರುವವರೆಗೆ ಬದಲಿ ಅಸಿಸ್ಟೆಂಟ ಕಮಿಷನರಾಗಿ ಕಡೂರು ಡಿಸ್ಟ್ರಿಕ್ಟಿಗೆ ಹಾಕಲ್ಪಟ್ಟಿರುವ ಮಿ॥ ಎ. ಕೃಷ್ಣಸಾಮಿ ಐಯ್ಯಂಗಾರ್, ಬಿ. ಎ., ಯವರು ಇನ್ನೂ ಹಾಸನದ ಡಿಸ್ಟ್ರಿಕ್ಟಿನಲ್ಲಿಯೇ ಇದ್ದು, ಸೀನಿಯರ್ ಅಸಿಸ್ಟೆಂಟ ಕಮಿಷನರ್ ಮಿ॥ ಎಂ. ಎ. ನಾರಾಯಣೈಯ್ಯಂಗಾರ್ ಕ್ವಾರ್ಯ್ಯೆಯಲ್ ರಜಾವಿನಿಂದ ವಾಪಸು ಬಂದು ಚಾರ್ಜು ವಹಿಸುವ ತನಕ, ಸಕಲೇಶಪುರದ ಸಬ್ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 16ನೆ ಸೆಪಟಂಬರ್ 1907.

ನಂ. ರೆ. 2079—ಲ್ಯಾ. ರೆ. 129-07—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮಿ॥ ವಿ. ಎಸ್. ಗುರುರಾಯರಿಗೆ 1907ನೆ ಇಸವಿಯ ಆಗಸ್ಟು 6ನೆ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಮಿ॥ ಗುರುರಾಯರು ರಜಾವಿನ ಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಎಸ್. ಶ್ರೀನಿವಾಸೈಯ್ಯಂಗಾರ್ರನ್ನು ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವಂತೆ ಮೊಕರರ್ರ್ಮಾಡಿ ಇದೆ.

ಸದರಿ ಡೆಪ್ಯುಟಿ ಅಮಲ್ದಾರ್ರು ಬೇರೆ ಕೆಲಸದ ಮೇಲೆ ಇರುವಾಗ ಶ್ರೀರಂಗಪಟ್ಟಣದ ತಾಲ್ಲೂಕಿನ ಅಮಲ್ದಾರ್ರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 17ನೆ ಸೆಪ್ಟಂಬರ್ 1907.

ನಂ. ರೆ. 2091—ಲ್ಯಾ. ರೆ. 590-06—7, ಸ್ ೯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಮತ್ತು 22 ಎಕರೆ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ ಮಣ್ಣೆಮಾರಿ ಅಮೃತಮಹಲ್ ಕಾವಲಿಗೆ ಸೇರಿಸುವದಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಅ.	ಎ. ಗು.				
ತುಮಕೂರು	ಗುಬ್ಬಿ	ಚೇಳೂರು	ಬುಡ್ಡನಗರ ಕಾವಲು	ಹುಚ್ಚೇಗೌಡ ಬಿನ್ ಚೆನ್ನೆಗೌಡ. ಗುಬ್ಬಿ ಸಮ್ಮತಿನ ಸೇರ್ವೆಗಾರ, ಪಾಳ್ಯದ ವಾಸಿ	20	ಖುಷ್ಕಿ	11 37	9 8	11 37	ಸರ್ವೆ ನಂ. 21	ಸರ್ವೆ ನಂ. 19	ಸರ್ವೆ ನಂ. 18	ಅಮೃತ ಮಹಲ್ ಕಾವಲು
					21		10 3	8 0	10 3	ಮಣ್ಣೆಮಾರಿ ಅಮೃತಮಹಲ್ ಕಾವಲು	ಸರ್ವೆ ನಂ. 20	ಮಣ್ಣೆಮಾರಿ ಅಮೃತಮಹಲ್ ಕಾವಲು	ಡಿಟ್ಟೋ

ತಾರೀಖು 19ನೆ ಸೆಪಟಂಬರ 1907.

ನಂ. ರ. 2122—ಕೋ. 48-07—2, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರ ವರ್ಗಾವರ್ಗಿಗಳನ್ನು ಮಂಜೂರ್ಮಾಡಿ ಇದೆ :—

ಮಿ|| ಮಹಮದ್ ರಜಾಯವರನ್ನು ಶಿವಮೊಗ್ಗಾದಿಂದ ಚಿತ್ರದುರ್ಗಕ್ಕೆ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿಗೆ ಹಾಕಿ ಇದೆ.

ಮಿ|| ಬಿ. ಭೀಮರಾಯರನ್ನು ಚಿತ್ರದುರ್ಗದಿಂದ ಶಿವಮೊಗ್ಗಾಕ್ಕೆ ಎಕ್ಸೈಜು ಇಲಾಖೆಯ ಕೆಲಸಕ್ಕೆ ಹಾಕಿ ಇದೆ.

ಮಿ|| ಆರ್. ಟಿ. ಮಹದೇವರಾಯರನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಎಕ್ಸೈಜು ಇಲಾಖೆಯಿಂದ ಜನರಲ್ ಡ್ಯೂಟಿ ಯಾ ಸಾಮಾನ್ಯ ಕೆಲಸಕ್ಕೆ ಹಾಕಿ ಇದೆ.

ಹುಕುಂ ಖವೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 18ನೆ ಸೆಪಟಂಬರ 1907.

ನಂ. 894—6652, ಸ್ಪೆಷಲ್ ಡ್ಯೂಟಿ ಮೇಲೆ ಇರುವ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ|| ವಿ. ಹೆಚ್. ಕಾರ್ವಿ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸ್ 1907ನೆ ಆಗಸ್ಟು 26ನೆ ತಾರೀಖು 814—6078ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಆಗಸ್ಟು 10ನೆ ತಾರೀಖಿನಾರಭ್ಯ ಕೊಟ್ಟಿದ್ದ ಒಂದು ತಿಂಗಳು ಪ್ರಿವಿಲೇಜ್ ರಜವನ್ನು ಇನ್ನೂ 11 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಖವೋಜೀಬ್,

ಬರ್ನಾರ್ಡ್ ಡಾಸ್, ಕ್ಯಾಪ್ಟನ್ ಆರ್. ಇ.,

ಪಬ್ಲಿಕ ವರ್ಕ್ಸ ಇಲಾಖಾ ಮೈಸೂರ ಗವರ್ನಮೆಂಟ ಅಂಡರ ಸೆಕ್ರಿಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಾಬ್ಲಿಷ್ ಆದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 3, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು, ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸ್ಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 30ನೆ ಸೆಪ್ಟಂಬರ 1907.

ನಂ. 2975—ಸ್ಯಾನಿಟರಿ 22–07–15, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ವರೆಗೆ.	ಅಧಿಕಾರ.
ಗ್ಯಾರವಮ್ಮನ ಹಬ್ಬ	ಗುಮ್ಮಲಾಪುರ.	ಹೊಸೂರು	ಸೇಲಂ	1—10—07	17–10–07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಸೆಪ್ಟಂಬರ 21ನೆ ತಾರೀಖು 971–ಪಿ. ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಉಚ್ಚಂಗೆಮ್ಮನ ಹಬ್ಬ.	ಉಚ್ಚಂಗಿ ದುರ್ಗ.	ಹರಪನಹಳ್ಳಿ	ಬಳ್ಳಾರಿ	8—10—07	21–10–07	ಡಿಟೋ 973–ಪಿ. ನಂಬರ್ ಮೆಮೋ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 30ನೆ ಸೆಪ್ಟಂಬರ್ 1907.

ನಂ. 2976—ಸ್ಯಾನಿಟರಿ. 22-07—14, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ಗೆ.	ಅಧಿಕಾರ.
ದೀಪಾವಳಿಹಬ್ಬ ಅಥವಾ ಜಾತ್ರೆ.	ಮಾದೇಶ್ವರನ ಗುಡ್ಡ.	ಕೊಳ್ಳೇಗಾಲ	ಕೊಯಿಮತ್ತೂರು.	26-10-07	6—11—07 (ಉಭಯ ದಿನಗಳೂ ಸೇರಿ.)	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಸೆಪ್ಟಂಬರ್ 21ನೆ ನಂಬ್ರು 975-ಪಿ. ಮೆಮೋ ಪ್ರಕಾರ.

ತಾರೀಖು 2ನೆ ಅಕ್ಟೋಬರ್ 1907.

ನಂ. 3059—ಸ್ಯಾನಿಟರಿ 34-07—7, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ್ಗೆ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಉಂಗಣಿ	ಹಾಸನ.
ಜೋಡಿ ಲೋಕನಹಳ್ಳಿ	ಡಿಟ್ಟೋ
ಕಟ್ಟೆಹಳ್ಳಿ	ಡಿಟ್ಟೋ
ಹೊಳೇನರಸೀಪುರ ಟೌನ್	ಹೊಳೇನರಸೀಪುರ.
ಚಿಕ್ಕನಹಳ್ಳಿ	ಆಲೂರು ಸಬ್ ತಾ||
ಅರೆಹಳ್ಳಿ ಕೊಪ್ಪಲು	ಡಿಟ್ಟೋ
ಜೋಡಿ ಹೊನ್ನವಳ್ಳಿ	ಡಿಟ್ಟೋ

ತಾರೀಖು 2ನೆ ಅಕ್ಟೋಬರ್ 1907.

ನಂ. 3061—ಸ್ಯಾನಿಟರಿ 34-07—8, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕ್ಯಾತನಹಳ್ಳಿ	ಹಾಸನ
ದಾಸೂರು	ಡಿಟ್ಟೋ
ಕಣತೂರು ಮಠದ ಕೊಪ್ಪಲು	ಆಲೂರು ಸಬ್ ತಾಲ್ಲೂಕು
ಚಿಡಚಪಲ್ಲಿ	ಡಿಟ್ಟೋ
ಬೊಮ್ಮೇನಹಳ್ಳಿ	ಬೇಲೂರು

ತಾರೀಖು 26ನೆ ಸೆಪ್ಟಂಬರ್ 1907.

ನಂ. ಜಿ. 949—ಕೋ. 81-07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 190 (b) 1 & ii ನೆ ಪ್ರಕರಣಗಳ ಮೇರೆಗೆ, ಬೆಂಗಳೂರು ಸಬ್ ಜಡ್ಜ್ ಮಿ|| ಜಿ. ಎಚ್. ಭಾಭಾ, ಬ್ಯಾರಿಸ್ಟರ್ ಅಟ್ ಲಾ, ಯವರಿಗೆ 1907ನೆ ಇಸವಿಯ ಸೆಪ್ಟಂಬರ್ 28ನೆ ತಾರೀಖಿನ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

2. ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಮಿ|| ಟಿ. ಇ. ಜಯರಾಮ ಅಯ್ಯರ್, ಬಿ. ಎ., ಬಿ. ಎಲ್. ರವರನ್ನು ಮಿ|| ಜಿ. ಎಚ್. ಭಾಭಾ ಯವರು ರಜಾವಿನಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ತನಕ, ಬಿ. ಷೆಡ್ಯೂಲಿನ 2ನೆ ತರಗತಿಯ ಬದಲಿ ಅಸಿಸ್ಟೆಂಟ್ ಕಮಿಷನರನ್ನಾಗಿ ಮೊಕರರ್ಮಾಡಿ ಬೆಂಗಳೂರು ಸಬ್ ಜಡ್ಜಿಯಾಗಿ ಹಾಕಿ ಇದೆ.

3. ಮಿ|| ಜಯರಾಮ ಅಯ್ಯರ್ ಬೇರೆ ಕೆಲಸದ ಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ತನಕ, ಜುಡಿಷಲ್ ಪ್ರೊಬೇಷನರ್ ಮಿ|| ಶ್ರೀನಿವಾಸರಾಘವಾಚಾರ್, ಬಿ. ಎ., ಬಿ. ಎಲ್. ರವರನ್ನು ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಆಗಿ ಬದಲಿ ಕೆಲಸ ನೋಡುವಂತೆ ಮೊಕರರ್ಮಾಡಿ ಇದೆ.

ಶುದ್ಧಾಶುದ್ಧ ಪತ್ರಿಕೆ.

ತಾರೀಖು 1ನೆ ಅಕ್ಟೋಬರ್ 1907.

ನಂ. 3021—ಮೆಡಿಕಲ್ 18-07—6, 1907ನೆ ಇಸವಿಯ ಸೆಪ್ಟಂಬರ್ 5ನೆ ತಾರೀಖಿನ ಮೈಸೂರು (ಇಂಗ್ಲಿಷ್) ಗೆಜೆಟ್ಟಿನ 1ನೆ ಭಾಗದ 534ನೆ ಪುಟದಲ್ಲಿ ಪ್ರಕಟಿಸಲ್ಪಟ್ಟ 1907ನೆ ಇಸವಿಯ ಸೆಪ್ಟಂಬರ್ 2ನೆ ತಾರೀಖಿನ 2079—ಮೆಡಿಕಲ್ 7-06—20ನೆ ನಂಬರಿನ ಇಸ್ತಿಹಾರನಾಮೆಯಲ್ಲಿ "ಮಿ|| ಜಿ. ನಾರಾಯಣರಾವ್" ಎಂಬುವುದಕ್ಕೆ ಬದಲಾಗಿ "ಮಿ|| ಎಸ್. ನಾರಾಯಣರಾವ್" ಎಂದು ಓದತಕ್ಕದ್ದು.

ನಂ. ರೆ. 2155—ಅಗ್ರಿ) 103-06-13, ಸರ್1907ನೆ ಇಸವಿಯ ಮಾರ್ಚಿ 31ನೆ ತಾರೀಖಿಗೆ ಆಖೈರಾದ ಅರ್ಧವರ್ಷದಲ್ಲಿ ಮೈಸೂರು ಸೀಮೆಯಲ್ಲಿ ರೈಲ್ವೆಯ ಮೂಲಕ (ಆಮದುರಫ್ತು) ನಡೆದು ಕೆಲವು ಚುನಾಯಿಸಲ್ಪಟ್ಟ ಜಿನಸುಗಳಲ್ಲಿ ಆದ ವ್ಯಾಪಾರವನ್ನು ತೋರಿಸುವ ಇದರಡಿ ಕಂಡ ತಃಖ್ತೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ಜಿನಸುಗಳ ಹೆಸರು.	ಮೈಸೂರಿನಿಂದ ರಫ್ತಾದದ್ದು. (82⅔ ಪೌಂಡುಗಳ ಮಣಗಳಲ್ಲಿ)	ಮೈಸೂರಿಗೆ ಆಮದು ಆದದ್ದು. (ಮಣಗಳಲ್ಲಿ)	ರಫ್ತಾದದ್ದನ್ನು ಕುರಿತು ಷರಾ.	ಆಮದನ್ನು ಕುರಿತು ಷರಾ.
1. ಆಹಾರ ಧಾನ್ಯ—				
(a) ಭತ್ತ ...	147,656	1,650	ಮುಖ್ಯವಾಗಿ ಮದರಾಸು ಆಧಿಪತ್ಯಕ್ಕೆ ರಫ್ತಾಯಿತು ...	ಮುಖ್ಯವಾಗಿ ಮದರಾಸು ಆಧಿಪತ್ಯದಿಂದ ಆಮದು ಆಯಿತು.
(b) ಅಕ್ಕಿ ...	14,217	310,593	ಡಿಟೋ ...	
(c) ರಾಗಿ	239,069	318	ಮದರಾಸು ಆಧಿಪತ್ಯಕ್ಕೆ ಮಾತ್ರವೇ ರಫ್ತಾಯಿತು	
2. ಹತ್ತಿ ...	41,785	13,101	ಮುಖ್ಯವಾಗಿ ಬೊಂಬಾಯಿ ಆಧಿಪತ್ಯಕ್ಕೆ ರಫ್ತು ...	ಮುಖ್ಯವಾಗಿ ಬೊಂಬಾಯಿ ಆಧಿಪತ್ಯದಿಂದಲೂ ಕಡಮೆಯಾಗಿ ಮದರಾಸು ಆಧಿಪತ್ಯದಿಂದಲೂ ಆಮದು.
3. ತುಪಟ (ಉಲ್) ...	548	513	...	
4. ಹತ್ತಿ ಮತ್ತು ತುಪಟದ ಸಾಮಾನುಗಳು ...	10,753	66,414	ಮುಖ್ಯವಾಗಿ ಮದರಾಸು ಆಧಿಪತ್ಯಕ್ಕೆ ರಫ್ತು ...	ಮುಖ್ಯವಾಗಿ ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳಿಂದ ಆಮದು.
5. ಸಕ್ಕರೆ ...	14,309	26,814	ಡಿಟೋ ...	ಮುಖ್ಯವಾಗಿ ಬೊಂಬಾಯಿಯಿಂದ ಆಮದು.
6. ಬೆಲ್ಲ ...	111,978	37,285	ಮುಖ್ಯವಾಗಿ ಬೊಂಬಾಯಿ ಆಧಿಪತ್ಯಕ್ಕೂ ಸ್ವಲ್ಪ ಕಡಮೆಯಾಗಿ ಮದ್ರಾಸ್ ಆಧಿಪತ್ಯಕ್ಕೂ ರಫ್ತು.	ಮುಖ್ಯವಾಗಿ ಮದರಾಸ್ ಆಧಿಪತ್ಯದಿಂದಲೂ, ಮಧ್ಯ ಪ್ರಾಂತ್ಯಗಳಿಂದಲೂ ಮತ್ತು ಬೀರಾರಿನಿಂದಲೂ ಆಮದು.
7. ಗೋಧಿ ...	2,160	36,236	ಮುಖ್ಯವಾಗಿ ಮದರಾಸ್ ಆಧಿಪತ್ಯಕ್ಕೂ ಪಂಜಾಬಿಗೂ ರಫ್ತು ...	ಮುಖ್ಯವಾಗಿ ಬೊಂಬಾಯಿ ಆಧಿಪತ್ಯದಿಂದ ಆಮದು.
8. ಎಣ್ಣೆಯ ಬೀಜಗಳು ...	205,761	34,837	ಮುಖ್ಯವಾಗಿ ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳಿಗೆ ರಫ್ತು.	ಮುಖ್ಯವಾಗಿ ಬೊಂಬಾಯಿ ಮತ್ತು ಮದರಾಸ್ ಆಧಿಪತ್ಯಗಳಿಂದ ಆಮದು
9. ಉಪ್ಪು ...	4	326,604	...	ಮದ್ರಾಸ್ ಬೊಂಬಾಯಿ ಆಧಿಪತ್ಯಗಳಿಂದ ಆಮದು.
10. ಹೊಗೆಸೊಪ್ಪು ...	2,526	30,785	ಮುಖ್ಯವಾಗಿ ಮದರಾಸ್ ಆಧಿಪತ್ಯಕ್ಕೆ ರಫ್ತು ...	ಮುಖ್ಯವಾಗಿ ಮದರಾಸ್ ಆಧಿಪತ್ಯದಿಂದ ಆಮದು.
11. ನಾಟಾ—				
(a) ತಯಾರಾದದ್ದು ...	6,611	11,987	ಮುಖ್ಯವಾಗಿ ಬೊಂಬಾಯಿ ಮತ್ತು ಮದರಾಸ್ ಆಧಿಪತ್ಯಗಳಿಗೆ ರಫ್ತು.	ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಮದರಾಸ್ ಆಧಿಪತ್ಯದಿಂದಲೇ ಆಮದು.
(b) ತಯಾರಾಗದ್ದು ...	77,664	536,745		
12. ಕೆರೋಸೀನ್ ಎಣ್ಣೆ ...	2,082	138,160	...	ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳಿಂದ ಮಾತ್ರವೇ ಆಮದು.
13. ಲೋಹಗಳು—				
(a) ತಯಾರಾದ ಪದಾರ್ಥಗಳು ...	15,545	186,112	...	ಮುಖ್ಯವಾಗಿ ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳಿಂದ ಆಮದು.
(b) ತಯಾರು ಮಾಡದೆ ಇರುವುದು ...	3,378	6,609		
14. ದನಗಳು ಸಂಖ್ಯೆ ...	1,004	410	ಮುಖ್ಯವಾಗಿ ಮದರಾಸ್ ಆಧಿಪತ್ಯಕ್ಕೆ ಮತ್ತು ಕಡಿಮೆಯಾಗಿ ಪಂಜಾಬಿಗೆ ರಫ್ತು.	ಮುಖ್ಯವಾಗಿ ಮದರಾಸ್ ಆಧಿಪತ್ಯದಿಂದ ಆಮದು.
15. ಕುದುರೆಗಳು ಸಂಖ್ಯೆ ...	191	31	ಮುಖ್ಯವಾಗಿ ಮದ್ರಾಸ್ ಆಧಿಪತ್ಯಕ್ಕೆ ರಫ್ತು ...	ಮುಖ್ಯವಾಗಿ ಮದರಾಸ್ ಮತ್ತು ಬೊಂಬಾಯಿ ಆಧಿಪತ್ಯಗಳಿಂದ ಮಾತ್ರವೇ.

ತಾರೀಖು 23ನೆ ಸೆಪ್ಟಂಬರ್ 1907.

ನಂ. ರೆ. 2177—ಲ್ಯಾ: ರೆ. 163-07—3, ಸ್ 1894ನೆಯು ವರ್ಷದ 7ನೆಯು ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಮತ್ತು 2 ಎಕರೆ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತಿಪಟೂರು ತಾಲ್ಲೂಕು ಬಾಣಸಂದ್ರ ಗ್ರಾಮದ ಬಡಾವಣೆಗಾಗಿ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ.	ಎ. ಗು.				
ತುಮಕೂರು	ತಿಪಟೂರು	ಕಿಬ್ಬನಹಳ್ಳಿ	ಬಾಣಸಂದ್ರ	1. ಕೋನೇರಿ (ಖಾತೆದಾರ).	71–4	ಖುಷ್ಕಿ	3 5	3	0 15	ರಸ್ತೆ	ಕುರಿ ಪಲ್ಲನ ಹೊಲ	ಗ್ರಾಮ	ಮೂಮಿಗನ ಹೊಲ
				2. ಕುರಿಪಲ್ಲ (ಹಿಸ್ಸೆದಾರ).					0 6	ಕೋನೇರಿ ಹೊಲ	ಹನುಮನ ಹೊಲ	ಡಿಟೋ	ಕೋನೇರಿ ಹೊಲ
				3. ರಂಗ (ಖಾತೆದಾರ) ...	71–2	ಖುಷ್ಕಿ ...	2 15	2	0 10	ನಂಜನ ಹೊಲ	ಬಿ. ರಂಗನ ಹೊಲ	ಡಿಟೋ	ನಂಜನ ಹೊಲ
				4. ನಂಜ (ಹಿಸ್ಸೆದಾರ) ...					0 10	ಹನುಮನ ಹೊಲ	ರಂಗನ ಹೊಲ	ಡಿಟೋ	ಡಿಟೋ
				4. ಹನುಮ ಬಿನ್ ಬೋರ.	71—3	ಡಿಟೋ ...	5 2	4	0 39	ಕುರಿಪಲ್ಲನ ಹೊಲ	ರಂಗನ ಹೊಲ	ಡಿಟೋ	ಡಿಟೋ
				ಜುಮ್ಲಾ ...			10 22	9	2 0				

238

ತಾರೀಖು 21ನೆ ಸೆಪ್ಟೆಂಬರ್ 1907.

ನಂ. ರೆ. 2164—ಫಾ. 63-07—3. ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1900ನೆ ಇಸವಿಯ 11ನೆ ನಂಬರ ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, ಈ ಇಸ್ತಿಹಾರ್ನಾಮೆಯ ಸಂಗಡ ಇರುವ ಷೆಡ್ಯೂಲಿನಲ್ಲಿ ತೋರಿಸಲ್ಪಟ್ಟ ಚತುರ್ಸೀಮೆಗಳುಳ್ಳ ಪ್ರದೇಶವನ್ನು ಸದರಿ ಇಸ್ತಿಹಾರಿನ ಅಡಿಯಲ್ಲಿ ನಮೂದಿಸಲ್ಪಟ್ಟ ಹಕ್ಕುಗಳ ಚಲಾವಣೆಗೆ ಬಳಪಟ್ಟು 1907ನೆ ಇಸವಿಯ ನವೆಂಬರ್ ಗು 1ನೆ ತಾರೀಖಿನ ಲಾಗಾಯಿತು ಸಂಸ್ಥಾನ ಜಂಗಲಿಯೆಂತ ಭಾವಿಸಲಾಗುತ್ತದೆಯೆಂದು ಪ್ರಕಟಿಸಲು ಹುಕುಂ ದಯಪಾಲಿಸುತ್ತಾರೆ:—

ಷೆಡ್ಯೂಲ್

ಡಿಸ್ಟ್ರಿಕ್ಟ್.	ತಾಲ್ಲೂಕು.	ಅರಣ್ಯದ ವಿಸ್ತೀರ್ಣ.	ಬ್ಲಾಕಿನ ಹೆಸರು.	ಚತುರ್ಸೀಮೆಗಳು.
ಕೋಲಾರ.	ಬಾಗೇಪಲ್ಲಿ.	92 ಚದರ ಮೈಲಿಗಳು.	ಕಾಮನಹಳ್ಳಿ ಬ್ಲಾಕು 6.	ಉತ್ತರಕ್ಕೆ.—ಮೇರೆಯ ರೇಖೆಯು ಮಿಟ್ಟೆಪಲ್ಲಿ ಗ್ರಾಮದ ಸರ್ವೆ 6ನೆ ನಂಬರಿನ ವಾಯುವ್ಯ ಮೇರೆಯಲ್ಲಿ ಸರ್ವೆ 5ನೆ ನಂಬರಿನ ವಾಯುವ್ಯ ಮೂಲೆಯಿಂದ ಈಶಾನ್ಯಕ್ಕೆ ಸುಮಾರು 1¼ ಫರ್ಲಾಂಗುಗಳ ದೂರದಲ್ಲಿ ಒಂದು ಸ್ಥಳದಿಂದ ಹೊರಟು, ಈಶಾನ್ಯಕ್ಕೆ ಬೊಂಪಲ್ಲಿ ಮತ್ತು ಮಿಟ್ಟೆಪಲ್ಲಿ ಗ್ರಾಮಗಳ ನಡುವೆ ಎಲ್ಲೆಯಲ್ಲಿ ಬೊಂಪಲ್ಲಿ, ಮಿಟ್ಟೆಪಲ್ಲಿ ಮತ್ತು ನಡಿಂಪಲ್ಲಿ ಗ್ರಾಮಗಳ ಮುಕ್ಕೂಪ್ಪಿಗೆ ಹೋಗುತ್ತದೆ. ಅಲ್ಲಿಂದ ಆಗ್ನೇಯಕ್ಕೆ ನಡಿಂಪಲ್ಲಿ ಗ್ರಾಮದ ಸರ್ವೆ 30ನೆ ನಂಬರಿನಲ್ಲಿ ಹಾದು ಆ ನಂಬರಿನ ಪೂರ್ವ ಮೇರೆಯಲ್ಲಿ ಸರ್ವೆ 29ನೆ ನಂಬರಿನ ಈಶಾನ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 1 ಫರ್ಲಾಂಗು ದೂರದಲ್ಲಿ ಒಂದು ಸ್ಥಳಕ್ಕೆ ಇನಾಮು ಬೋಡೇನಹಳ್ಳಿ ಮತ್ತು ನಡಿಂಪಲ್ಲಿ ಗ್ರಾಮಗಳ ನಡುವೆ ಎಲ್ಲೆಯಲ್ಲಿ ಹೋಗುತ್ತದೆ; ಅಲ್ಲಿಂದ ಅದೇ ಮಾರ್ಗವಾಗಿ ನಡಿಂಪಲ್ಲಿ, ಇನಾಮು ಬೋಡೇನಹಳ್ಳಿ ಮತ್ತು ಭೂವನಹಳ್ಳಿ

ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ಭೂವನಹಳ್ಳಿ ಮತ್ತು ಇನಾಮು ಬೋಡೇನಹಳ್ಳಿ ಮತ್ತು ವರದಾಪುರ ಗ್ರಾಮಗಳ ಎಲ್ಲೆಯಲ್ಲಿ ವರದಾಪುರ, ಭೂವನಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಗೆ ಹೋಗುತ್ತದೆ.

ಪೂರ್ವಕ್ಕೆ.—ಅಲ್ಲಿಂದ ನೈರುತ್ಯಕ್ಕೆ ಬತ್ತಲೂರು ಗ್ರಾಮದ ಸರ್ವೆ 28ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಸದರಿ ಬತ್ತಲೂರು, ಭೂವನಹಳ್ಳಿ ಮತ್ತು ಗುಂಪಾರ್ಲಹಳ್ಳಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಗೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮಕ್ಕೆ ಭೂವನಹಳ್ಳಿ ಗ್ರಾಮದ ಸರ್ವೆ 64ನೆ ನಂಬರಿನಲ್ಲಿ ಹಾದು ಸುಮಾರು 5 ಫರ್ಲಾಂಗುಗಳ ದೂರವಾಗಿ, ಚಿನ್ನಕಾಮನಹಳ್ಳಿ ಗ್ರಾಮದ ಸರ್ವೆ 24ನೆ ನಂಬರು ಮತ್ತು ಭೂವನಹಳ್ಳಿ ಗ್ರಾಮದ ಸರ್ವೆ 64ನೆ ನಂಬರೂ ಸೇರುವ ಬಾಂದಿಗೆ ಹೋಗುತ್ತದೆ; ಅಲ್ಲಿಂದ ನೈರುತ್ಯವಾಗಿ ಚಿನ್ನಕಾಮನಹಳ್ಳಿಯ ಪೂರ್ವ ಮೇರೆಯಲ್ಲಿ ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು 2 ಫರ್ಲಾಂಗುಗಳ ದೂರದಲ್ಲಿ ಒಂದು ಸ್ಥಳಕ್ಕೆ ಹೋಗುತ್ತದೆ. ಅಲ್ಲಿಂದ ವಾಯುವ್ಯಕ್ಕೆ ಚಿನ್ನಕಾಮನಹಳ್ಳಿಯ ಸರ್ವೆ 24ನೆ ನಂಬರಿನಲ್ಲಿ ಸುಮಾರು 2½ ಫರ್ಲಾಂಗುಗಳ ದೂರ ಸದರಿ ಗ್ರಾಮದ ಸರ್ವೆ 28ನೆ ನಂಬರಿನ (ಕೆರೆಯ) ಈಶಾನ್ಯ ಮೂಲೆಯ ಬಾಂದುಗಳಿಗೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಉತ್ತರಕ್ಕೆ ಒಂದು ಸರಳ ರೇಖೆಯಲ್ಲಿ ಸರ್ವೆ 24ನೆ ನಂಬರಿನಲ್ಲಿ ಸುಮಾರು 5 ಫರ್ಲಾಂಗುಗಳ ದೂರ ಸರ್ವೆ 19ನೆ ನಂಬರಿನ (ಕೆರೆ) ಅತ್ಯಂತ ಪೂರ್ವ ಮೂಲೆಯಲ್ಲಿನ ಬಾಂದುಗಳಿಗೆ ಹೋಗುತ್ತದೆ; ಅಲ್ಲಿಂದ ವಾಯುವ್ಯಕ್ಕೆ ಸದರಿ ನಂಬರಿನ ಈಶಾನ್ಯ ಮೇರೆಯಲ್ಲಿ ಚಿನ್ನಕಾಮನಹಳ್ಳಿ, ನಡಿಂಪಲ್ಲಿ ಮತ್ತು ಮಿಟ್ಟೆಪಲ್ಲಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಗೆ ಹೋಗಿ ಅಲ್ಲಿಂದ ವಾಯುವ್ಯಕ್ಕೆ ಮಿಟ್ಟೆಪಲ್ಲಿ ಗ್ರಾಮದ ಸರ್ವೆ 6ನೆ ನಂಬರಿನಲ್ಲಿ ಸುಮಾರು 4½ ಫರ್ಲಾಂಗುಗಳ ದೂರ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾಗಳು—

ಈ ತಾಕಿನಲ್ಲಿ ಇದರಡಿ ಕಂಡ ದಾರಿಯ ಹಕ್ಕುಗಳನ್ನು ಸಾರ್ವಕಾಲದಲ್ಲೂ ಮಂಜೂರ್ಮಾಡಿ ಇದೆ:—

(1) ನಡಿಂಪಲ್ಲಿಯಿಂದ ಭೂವನಹಳ್ಳಿಗೆ ಹೋಗುವ ಗಾಡಿದಾರಿ, 10 ಗಜಗಳ ಅಗಲ ಮತ್ತು ಸುಮಾರು 1¼ ಮೈಲಿಗಳ ಉದ್ದ. ಇದು ರಿಜರ್ವ್ ಜಂಗಲಿಯನ್ನು ಅದರ ಉತ್ತರ ಮೇರೆಯಲ್ಲಿ ನಡಿಂಪಲ್ಲಿ, ಮಿಟ್ಟೆಪಲ್ಲಿ ಮತ್ತು ಬೊಂಪಲ್ಲಿ ಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಂದ ಆಗ್ನೇಯಕ್ಕೆ ಸುಮಾರು 30 ಸರಪಣಿಗಳ ದೂರದಲ್ಲಿ ಪ್ರವೇಶಿಸಿ ದಕ್ಷಿಣಕ್ಕೆ ಸುಮಾರು 88 ಸರಪಣಿಗಳ ದೂರ ಹೋಗಿ ಚಿನ್ನಕಾಮನಹಳ್ಳಿ ಗ್ರಾಮದ 24ನೆ ಸರ್ವೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಆಗ್ನೇಯ ಮೂಲೆಯಿಂದ ಈಶಾನ್ಯಕ್ಕೆ ಸುಮಾರು 33 ಸರಪಣಿಗಳ ದೂರದಲ್ಲಿ ರಿಜರ್ವ್ ಜಂಗಲಿಯನ್ನು ಬಿಡುತ್ತದೆ.

(2). ಬೂವನಹಳ್ಳಿಯಿಂದ ರಾಮುನಿ ಚೆರುವಿಗೂ ಅಲ್ಲಿಂದ ಮುಂದಕ್ಕೆ ಇನಾಮು ಬೋಡೇನಹಳ್ಳಿಗೂ ಹೋಗುವ ಕಾಲುದಾರಿ ಮತ್ತು ದನಗಳ ದಾರಿ. 10 ಗಜಗಳ ಅಗಲ ಇದ್ದು ರಿಜರ್ವ್ ಜಂಗಲಿಯನ್ನು ಬೂವನಹಳ್ಳಿ, ಗುಂಡಾರ್ಲಹಳ್ಳಿ ಮತ್ತು ಬತ್ತಲಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದುಗಳಿಂದ ಪಶ್ಚಿಮಕ್ಕೆ ಸುಮಾರು 20 ಸರಪಣಿಗಳ ದೂರದಲ್ಲಿ ಪ್ರವೇಶಿಸಿ ಉತ್ತರಕ್ಕೆ ಚೆರುವಿಗೂ ಈಶಾನ್ಯಕ್ಕೆ ಇನಾಮು ಬೋಡೇನಹಳ್ಳಿಗೂ, ಹೋಗಿ ಇನಾಮು ಬೋಡೇನಹಳ್ಳಿ, ವರದಾಪುರ, ಬೂವನಹಳ್ಳಿ ಗ್ರಾಮಗಳ ಮುಕ್ಕುಪ್ಪೆ ಬಾಂದುಗಳ ಹತ್ತಿರ ರಿಜರ್ವ್ ಜಂಗಲಿಯನ್ನು ಬಿಡುತ್ತದೆ. ರಿಜರ್ವ್ ಜಾಗಲಿಯೊಳಗೆ ಇದರ ಉದ್ದವು ಸುಮಾರು 4½ ಫರ್ಲಾಂಗುಗಳು.

ಇದರಡಿ ಕಂಡ ಗ್ರಾಮಗಳಿಗೆ ಅವುಗಳ ಎದುರಿಗೆ ನಮೂದಿಸಿರುವ ದಾರಿಗಳ ಮೂಲಕ ಜನಜಾನ್ವಾರುಗಳಿಗೆ ರಾಮುನಿ ಚೆರುವಿನಲ್ಲಿ ಸರ್ವ ಕಾಲದಲ್ಲಿಯೂ ನೀರು ಉಪಯೋಗಿಸುವುದಕ್ಕೆ ಹಕ್ಕನ್ನು ಮಂಜೂರ್ಮಾಡಿ ಇದೆ:—

ಬೂವನಹಳ್ಳಿ ಈ ಗ್ರಾಮದ ಜನಜಾನ್ವಾರುಗಳಿಗೆ 2ನೆ ನಂಬರು ಕಾಲುದಾರಿಯ ಮೂಲಕ ಪ್ರವೇಶವನ್ನು ಮಂಜೂರ್ಮಾಡಿ ಇದೆ.

ನಡಿಂಪಲ್ಲಿ— ಈ ಗ್ರಾಮದ ಜನಜಾನ್ವಾರುಗಳಿಗೆ ಇನಾಮು ಬೋಡೇನಹಳ್ಳಿ ಸರಹದ್ದಿನಲ್ಲಿ ಉತ್ತರಗಡಿ ಸರಹದ್ದಿನ ಮೂಲಕ ಪ್ರವೇಶ ಮಂಜೂರ್ಮಾಡಿ ಇದೆ.

ತಾರೀಖು 24ನೆ ಸೆಪ್ಟಂಬರ್ 1907.

ನಂ. ರೆ. 2198—ಲ್ಯಾ. ರೆ. 169—07—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಆಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಜಗಲೂರು ತಾಲ್ಲೂಕಿನ ಬಿದರಕೆರೆ ಗ್ರಾಮದ ಬೈಠಾವಣೆಗಾಗಿ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದಾವಣಗೆರೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ಬಾಗಾಯತು ಅಥವಾ ತರಿ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಸೀಮೆ.			
							ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.					
ಚಿತ್ರದುರ್ಗ	ಜಗಲೂರು	ಜಗಲೂರು	ಬಿದರಕೆರೆ	ಗೊಂಚಿಕಾಡ ಸಂಜೀವಪ್ಪ	174	ಖುಷ್ಕಿ	1 25	8 ಆಣೆಯು ಮೇರೆಗೆ ಕಂದಾಯ ದಾಖಲಾಗಿದೆ.	ಸರ್ವೆ ನಂ. 168	ಚಿತ್ರದುರ್ಗದಿಂದ ಬರುವ ಮಾರ್ಗ	ಸರ್ವೆ ನಂ. 175	ಸರ್ವೆ ನಂ. 173
				ನರಸ ಬರ್ಗಿ ಚಿಕ್ಕಬ್ಬಲಸೈ	175	ಡಿಟೋ	1 10	ಡಿಟೋ [illegible]	ಚಿತ್ರದುರ್ಗದಿಂದ ಬರುವ ಮಾರ್ಗ	ಡಿಟೋ	ಗ್ರಾಮ ನಿವೇಶನ	ಸರ್ವೆ ನಂ. 174

ತಾರೀಖು 25ನೆ ಸೆಪ್ಟಂಬರ್ 1907.

ನಂ. ರೆ. 2243—ಲ್ಯಾ. ರೆ. 103—07—4, 1907ನೆ ಇಸವಿಯ ಆಗಸ್ಟು 24ನೆ ತಾರೀಖಿನ ರೆ. 1568—ಲ್ಯಾ. ರೆ. 103—07—2ನೆ ನಂಬರಿನಿಂದ ಆಖೈರಾದ ಇಸ್ತಿಹಾರ್ನಾಮೆಗಳಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರು ಮಿ॥ ವಿ. ಆರ್. ಸತ್ಯಾಗರಾಜ ಐಯ್ಯರ್, ಎಂ. ಎ., ಯವರಿಗೆ ಕೊಟ್ಟ 7 ತಿಂಗಳ ಬಟ್ಟು ಸೇರಿಸಲ್ಪಟ್ಟ ರಜಾವನ್ನು ಇನ್ನೂ ಒಂದು ತಿಂಗಳ ವರೆಗೆ ಈ ಮೂಲಕ ಹೆಚ್ಚಿಸಿ ಇದೆ.

ತಾರೀಖು 27ನೆ ಸೆಪ್ಟಂಬರ್ 1907.

ನಂ. ರೆ. 2283—ಫ. 55—07—4, ಹುಣಸೂರು ರೇಂಜಿನ ಚಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ ಮಿ॥ ಜಿ. ಕೃಷ್ಣಮೂರ್ತಿನಾಯಿಡುರವರಿಗೆ, ಅವರ ರೇಂಜಿನಲ್ಲಿ ಸಂಭವಿಸುವ ಜಂಗಲಿಗೆ ಸಂಬಂಧಪಟ್ಟ ತಕ್ಸೀರುಗಳ ವಿಷಯದಲ್ಲಿ, ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 53, 59, 65 I (a), 65 I (b) ಮತ್ತು 65 I (d) ಪ್ರಕರಣಗಳಲ್ಲಿ ನಮೂದಿರುವ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಈ ಮೂಲಕ ಅಧಿಕಾರ ಕೊಟ್ಟಿದೆ.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 28ನೆ ಸೆಪಟಂಬರ 1907.

ನಂ. 960—6955, ಶಿವಮೊಗ್ಗ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜನಿಯರ ಮ॥ ಟಿ. ಕೆ. ಅರುಣಾಚಲ ಪಿಯ್ಯರ್, ಎಂ. ಐ. ಇ. ಇ., ಯವರಿಗೆ ಮೈಸೂರು ಸರ್ವಿಸ ರೆಗ್ಯುಲೇಷನ 177ನೆ ಆರ್ಟಿಕಲ ಅನುಸರಿಸಿ ಸನ 1907ನೆ ಅಕ್ಟೋಬರ ನೆ ತಾರೀಖಿನಾರಭ್ಯ 2 ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 28ನೆ ಸೆಪಟಂಬರ 1907.

ನಂ. 961—6956, ಸರ್ಕಾರಿ ಕೆಲಸಗಳ ಉಪಯೋಗಕ್ಕಾಗಿ ಇದರ ಕೆಳಗೆ ನಮೂದಿಸ್ಸುವ ವರ್ಗವನ್ನ ಹುಕುಂ ಮಾಡ ಟ್ಟಿದೆ:—

ಸಬ್ ಅಸಿಸ್ಟೆಂಟು ಇಂಜನಿಯರ್ ಮ॥ ಎಮ್. ಜಿ. ರಂಗೈಯ್ಯ, ಬಿ. ಎ., ಮತ್ತು ಬಿ. ಇ. ಯವರನ್ನ ಬೆಂಗಳೂರಿಂದ ಶಿವಮೊ ಡಿವೀಜನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 30ನೆ ಸೆಪಟಂಬರ 1907.

ನಂ. 7010, ಸರ್ಕಾರಿ ಕೆಲಸಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ವರ್ಗವನ್ನ ಹುಕುಂ ಮಾಡಲ್ಪಟ್ಟಿದೆ:—

ಅಸಿಸ್ಟೆಂಟು ಇಂಜನಿಯರ ಮ॥ ಕೆ. ಅನಂತಾಚಾರಿಯಾ, ಎಲ್. ಸಿ. ಇ., ಯವರನ್ನ ಈಸ್ಟರ್ನ ಸರ್ಕಲ್ಲಿಂದ ವೆಸ್ಟರ್ನ ಸರ್ಕ ಸೇರಿದ ಚಾನಲ್ಸ ಡಿವೀಜನಿಗೆ ವರ್ಗಮಾಡಲ್ಪಟ್ಟಿದೆ. ಜಾಗ್ರತೆಯಾಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಹುಕುಂ ಬಮೋಜಿಬ್,

ಡಬ್ಲ್ಯು. ಮೆಕ್‌ಹಚಿನ್,

ಮೈಸೂರು ಗವರ್ನಮೆಂಟ ಪಬ್ಲಿಕ ವರ್ಕ್ಸ ಇಲಾಖಾ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 41.

ಬೆಂಗಳೂರು, ಗುರುವಾರ್, ಅಕ್ಟೋಬರ ತಾ|| 10, ಸ್ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಇಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲಬೋರ್ಡು ಪ್ರಸಿಡೆಂಟರು; ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಶಾಲಸ್ಥಿತೀ ರಪೋರ್ಟುಗಳು; ಪೋಸ್ಟಾಫೀಸ ನೋಟಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ

ತಾರೀಖು 9ನೆ ಅಕ್ಟೋಬರ 1907.

ನಂ. 3192—ಸ್ಯಾನಿಟರಿ 100–07—2, ಕೊಡಗಿನ ಚೀಫ್ ಕಮಿಷನರವರ ಸೆಕ್ರಿಟೆರಿಯವರ 1907ನೆ ಸೆಪಟಂಬರು 30ನೆ ಮಠ್ಯದ 1566ನೆ ನಂಬರು ಲೆಟರಿನ ಸಂಗಡ ಬಂದ ಕೊಡಗು ಚೀಫ್ ಕಮಿಷನರವರ 1907ನೆ ಸೆಪಟಂಬರು 28ನೆ ಮಠ್ಯದ 83ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಲ್ಪಟ್ಟಿರುತ್ತೆ.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 28ನೆ ಸೆಪ್ಟಂಬರ್ ಸನ್ 1907ನೆ ಇಸವಿ.

ನಂಬರ್ 83. ಕೊಡಗು ದೇಶದ ಪಾಡಿನಾಲಕ್‌ನಾಡು ತಾಲ್ಲೂಕು ತಾವುನಾಡು—ಸಂಪಾಜಿನಾಡು ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಅಫಿಷಿಯೇಟಿಂಗ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸನ್ 1907ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸನ್ 1907ನೆ ಇಸವಿ ಅಕ್ಟೋಬರ ತಾರೀಖು 7 ರಿಂದ ನವಂಬರ 20ರ ವರೆಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಎಫ್. ಪಿ. ರೆನ್ನಿ,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ತಾರೀಖು 30ನೆ ಸೆಪ್ಟಂಬರ 1907.

ನಂ. ಜೆ. 981—ಕೋ. 89-07—3, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177, 190 (b), (i) ಮತ್ತು (ii), ಮತ್ತು 191ನೆ ಪ್ರಕರಣಗಳ ಮೇರೆಗೆ ಮೈಸೂರು ಪ್ರಿನ್ಸಿಪಲ್ ಮುನ್ಸೀಫ್ ಮಿ॥ ಎನ್. ಟಿ. ಗೋಪಾಲೈಯಂಗಾರ್ರಿಗೆ 1907ನೆ ಇಸವಿಯ ಸೆಪ್ಟಂಬರ 16ನೆ ತಾರೀಖಿನಿಂದ ಅಥವಾ ಆ ತರುವಾಯ ಅವರು ರಜಾವನ್ನು ಉಪಯೋಗಿಸಿಕೊಳ್ಳುವ ತಾರೀಖಿನಿಂದ 1907ನೆ ಅಕ್ಟೋಬರ 12ನೆ ತಾರೀಖಿನ ವರೆಗೆ (ಎರಡು ದಿವಸಗಳೂ ಸೇರಿ) ಪೂರಾ ತಲಬಿನ ಮೇಲೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮಿ॥ ಗೋಪಾಲೈಯಂಗಾರ್ ಪ್ರಿವಿಲೇಜ್ ರಜಾವಿನ ಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ತನಕ ಅಡ್ವೋಕೇಟ್ ಮಿ॥ ಬಿ. ರಂಗೈಯಂಗಾರ್, ಬಿ.ಎ., ಬಿ.ಎಲ್., ರವರನ್ನು ಮುನ್ಸೀಫ್ ಆಗಿ ಬದಲಿ ಕೆಲಸ ನೋಡುವಂತೆ ಮೊಕರರ್ರ್ಮಾಡಿ ಇದೆ.

ತಾರೀಖು 30ನೆ ಸೆಪ್ಟಂಬರ 1907.

ನಂ. ಜೆ. 984—ರೆಜಿಸ್. 2-07, ಸರ್ಕಾರಿ ಕೆಲಸದ ಅನುಕೂಲತೆಗಾಗಿ, ಇದರಡಿ ಕಂಡ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ಮಂಜೂರ್ಮಾಡಿ ಇದೆ :—

		ಇಂದ.	ಗೆ.
1.	ಬಿ. ಟಿ. ರಾಮಸ್ವಾಮೈಯಂಗಾರ್	ಮಂಜರಾಬಾದು ...	ಚೆನ್ನರಾಯಪಟ್ಟಣ
2.	ಸಿ. ಜಯರಾವ್	ಚೆನ್ನರಾಯಪಟ್ಟಣ ...	ಮಂಜರಾಬಾದು
3.	ಎಂ. ನರಸಿಂಹೈಯಂಗಾರ್	ಬೇಲೂರು ...	ತುಮಕೂರು
4.	ಎಸ್. ಕೆ. ಲಿಂಗಣ್ಣಯ್ಯ	ತುಮಕೂರು ...	ಬೇಲೂರು
5.	ಎಂ. ರಾಮರಾವ್	ಚಿಕ್ಕಮಗಳೂರು ...	ಮುಳಬಾಗಲು
6.	ಎಂ. ಎಸ್. ರಾಮದಾಸಪ್ಪ	ಮುಳಬಾಗಲು ...	ಚಿಕ್ಕಮಗಳೂರು

ತಾರೀಖು 1ನೆ ಅಕ್ಟೋಬರು 1907.

ನಂ. ಜೆ. 1007—ಕೋರ್ಟ್ಸ್ 98-07—2, ಬಾಗೇಪಲ್ಲಿ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟ್ ಮಿ॥ ವಿ. ಗೋಪಾಲರಾಯರನ್ನು, 1904ನೆ ಇಸವಿಯ 2ನೆ ರೆಗ್ಯುಲೇಷನಾದ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ, 2ನೆ ತರಗತಿಯ ಮಾಜಿಸ್ಟ್ರೇಟಾಗಿ ಮೊಕರರ್ರ್ಮಾಡಿದೆ.

ತಾರೀಖು 1ನೆ ಅಕ್ಟೋಬರ 1907.

ನಂ. 3018—ಮೆಡಿಕಲ್ 5-07—16, ಇದರಡಿ ಕಂಡ ವೈದ್ಯ ಆಫಿಸರುಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿದೆ :—

ನಂಬರ.	ದರ್ಜೆ	ಹೆಸರು	ಎಲ್ಲಿಂದ	ಎಲ್ಲಿಗೆ	ಷರಾ
1	ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜನ್.	ಮಿ॥ ಎನ್. ಎಸ್. ನಂಜುಂಡೈಯ್ಯ	ಚಿಕ್ಕಮಗಳೂರಿನ ಡಿಸ್ಟ್ರಿಕ್ಟು ಆಸ್ಪತ್ರೆಯ ಕೆಲಸದಿಂದ	ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಯ ಕೆಲಸಕ್ಕೆ	ಮತ್ತೊಬ್ಬರಿಗೆ ಚಾರ್ಜು ಕೊಟ್ಟ ತರುವಾಯ ವರ್ಗಾಯಿಸಲ್ಪಟ್ಟ ಕೆಲಸಕ್ಕೆ ಹೋಗತಕ್ಕದ್ದು.
2	ಸಬ್ ಅಸಿಸ್ಟೆಂಟ್ ಸರ್ಜನ್.	ಮಿ॥ ಸಿ. ರಾಜಗೋಪಾಲ ಮುದಲಿಯಾರ್	ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಯ ಕೆಲಸದಿಂದ	ಚಿಕ್ಕಮಗಳೂರು ಡಿಸ್ಟ್ರಿಕ್ಟು ಆಸ್ಪತ್ರೆಯ ಕೆಲಸಕ್ಕೆ	ವರ್ಗಾಯಿಸಲ್ಪಟ್ಟ ಕೆಲಸಕ್ಕೆ ಹೋಗತಕ್ಕದ್ದು.

ತಾರೀಖು 1ನೆ ಅಕ್ಟೋಬರು 1907.

ನಂ. 3031—ಎಲ್. ಬಿ. 10-07—2, ಸ್ 1902ನೆ ಇಸವಿಯ 2ನೆಯದಾದ ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿನ ಮೇರೆಗೆ ಏರ್ಪಡಿಸಲ್ಪಟ್ಟ ನಿಬಂಧನೆಗಳ 17 (1)ನೆ ಪ್ಯಾರಾವಿನ ಪ್ರಕಾರ ಪುನಃ ಏರ್ಪಡಿಸಲ್ಪಟ್ಟ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡಿಗೆ ಚುನಾಯಿಸಲ್ಪಟ್ಟು ಮೊಕರರ್ರ್ಮಾಡಲ್ಪಟ್ಟ ಸಭಿಕರ ಪಟ್ಟಿಯನ್ನು ಇದರಡಿ ಕಾಣಿಸಿದೆ :—

ಉದ್ಯೋಗಪ್ರಯುಕ್ತ ಸಭಿಕರಾದವರು.

1. ಡೆಪ್ಯುಟಿ ಕಮಿಷನರು, ಪ್ರೆಸಿಡೆಂಟ್ ಯಾ ಅಧ್ಯಕ್ಷರು.
2. ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ವೈಸ್ ಪ್ರೆಸಿಡೆಂಟ್ ಯಾ ಅಧೀನಾಧ್ಯಕ್ಷರು.
3. ಚಿತ್ರದುರ್ಗ ಡಿವಿಜನಿನ, ಎಗ್ಜಿಕ್ಯೂಟಿವ್ ಇಂಜಿನಿಯರು, ಸಭಿಕರು.
4. ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್, ಸಭಿಕರು.
5. ದಾವಣಗೆರೆ ಸಬ್ ಡಿವಿಜನಿನ ಸೀನಿಯರ್ ಅಸಿಸ್ಟೆಂಟ್ ಕಮಿಷನರು, ಸಭಿಕರು.
6. ಚಿತ್ರದುರ್ಗ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರು, ಸಭಿಕರು.
7. ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು, ಸಭಿಕರು.

ಲೋಕಲ್ ಬೋರ್ಡುಗಳ ನಿಬಂಧನೆಗಳ 8ನೆ ಪ್ಯಾರಾವಿನ (*d*) ವಾಕ್ಯದ ಮೇರೆ ಏರ್ಪಟ್ಟ ಇತರ ಸಭಿಕರು.

ಸಭಿಕರ ಹೆಸರು.	ಸಭಿಕರು ಯಾವ ತಾಲ್ಲೂಕಿಗೆ ಪ್ರತಿನಿಧಿಯೋ, ಆ ತಾಲ್ಲೂಕು.
1. ಮಿ|| ಪಂಡ್ರಹಳ್ಳಿಯ ಸಾಹುಕಾರ ನಂಜುಂಡಪ್ಪ ...	ಚಿತ್ರದುರ್ಗ.
2. ,, ಚಳ್ಳಕೆರೆಯ ಶಾನುಭೋಗ ಸುಬ್ಬಣ್ಣ	ಚಳ್ಳಕೆರೆ.
3. ,, ಅಬ್ಬಿನಾಯಕನಹಳ್ಳಿಯ ನಾಡಿಗ ಸಿದ್ದರಾಮೈಯ್ಯ	ಹೊಳಲ್ಕೆರೆ.
4. ,, ಅಬ್ಬಿನಕೋಟೆಯ ಶಾನುಭೋಗ ಚನ್ನಗೌರಯ್ಯ	ಹಿರಿಯೂರು.
5. ,, ಜಗಳೂರಿನ ಪಟೇಲ ಸಂಕಪ್ಪ	ಜಗಳೂರು.
6. ,, ದಾವಣಗೆರೆಯ ಎಚ್. ಸುಬ್ಬರಾವ್	ದಾವಣಗೆರೆ.
7. ,, ಮೊಳಕಾಲ್ಮುರುವಿನ ಭಾರಿ ರುದ್ರಪ್ಪ	ಮೊಳಕಾಲ್ಮುರು.
8. ,, ಹರಿಹರದ ನಾಡಿಗ ಬಾಲಕೃಷ್ಣರಾವ್ ...	ಹರಿಹರ ಸಬ್ ತಾಲ್ಲೂಕು.
9. ,, ಪಲದಹಳ್ಳಿ ನಾಗಪ್ಪ ...	ಹೊಸದುರ್ಗ.

ಲೋಕಲ್ ಬೋರ್ಡುಗಳ ನಿಬಂಧನೆಗಳ 8ನೆ ಪ್ಯಾರಾವಿನ (*e*) ವಾಕ್ಯದ ಮೇರೆ ಏರ್ಪಟ್ಟ ಸಭಿಕರು.

1. ಮಿ|| ಅನಂತಶೆಟ್ಟಿ ಅಡ್ವೋಕೇಟ್, ಚಿತ್ರದುರ್ಗ.
2. ,, ನಾಜರ್ ದಸ್ತಗೀರ್ ಸಾಬ್, ಪಿಂಛನ್‌ದಾರ್ ಮತ್ತು ಜಮೀನ್ದಾರ್, ಚಿತ್ರದುರ್ಗ.
3. ,, ಬೆಳಗಟ್ಟ ಅಜ್ಜಪ್ಪ, ಜಮೀನ್ದಾರ್, ಚಳ್ಳಕೆರೆ ತಾಲ್ಲೂಕು.
4. ,, ಮುತಗದೂರು ಪರ್ವತಪ್ಪ, ಜಮೀನ್ದಾರ್.
5. ,, ಯಲೆ ಬಸಪ್ಪ, ಜಮೀನ್ದಾರ್, ಹಿರಿಯೂರು
6. ,, ವಿರೂಪಾಕ್ಷಪ್ಪ, ವರ್ತಕ, ದಾವಣಗೆರೆ.
7. ,, ರಾಣಿಬೆನ್ನೂರು ನಬಿಸಾಬ್, ವರ್ತಕ, ದಾವಣಗೆರೆ.
8. ,, ಖುಬಾಜಿ ದುರ್ಗಪ್ಪ, ಮೊಳಕಾಲ್ಮುರು
9. ,, ನಾರಾಯಣರಾವ್, ಜಮೀನ್ದಾರ್, ಬಾಗೂರು.

ತಾರೀಖು 3ನೆ ಅಕ್ಟೋಬರ್ 1907.

ನಂ. 1564-7—ಜ. ಫೈ. 54-07, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಸರ್ಕಾರದ ಜನರಲ್ ಮತ್ತು ರೆವಿನ್ಯು ಇಲಾಖೆಗಳ ಅಸಿಸ್ಟೆಂಟ್ ಸೆಕ್ರೆಟರಿ ಮಿ|| ಎಂ. ಎನ್. ಕೃಷ್ಣರಾಯರಿಗೆ ದಸರಾ ರಜಾ ದಿವಸಗಳ ಜತೆಗೆ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಅವರು ರಜಾವಿನ ಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರ್ಯಂತರ ರಿಟ್ರೆಂಚ್‌ಮೆಂಟ್ ಕಮಿಟಿಯ ಸೆಕ್ರೆಟರಿ ಮಿ|| ಬಿ. ಶ್ರೀನಿವಾಸೈಯ್ಯಂಗಾರ್ರವರು ತಮ್ಮ ಕೆಲಸಗಳ ಜತೆಗೆ ಸದರಿ ಅಸಿಸ್ಟೆಂಟ್ ಸೆಕ್ರೆಟರಿಯವರ ಕೆಲಸಗಳ ಚಾರ್ಜಿನಲ್ಲಿಯೂ ಇರತಕ್ಕದ್ದು.

ತಾರೀಖು 4ನೆ ಅಕ್ಟೋಬರ್ 1907.

ನಂ. 3133—ಎಡ್ಯು. 231-06-3, (1) ಈಗ ತಾಲ್ಲೂಕು ಬ್ರಾಂಚು ಮತ್ತು ಹೋಬಳಿ ಸ್ಕೂಲುಗಳೆಂದು ಕರೆಯಲ್ಪಟ್ಟ, ತಾಲ್ಲೂಕು ಕಸಬೆಯಲ್ಲಿ ಅಥವಾ ಡಿಸ್ಟ್ರಿಕ್ಟ್ ಕಸಬೆಯಲ್ಲಿ ಇಲ್ಲದೆ ಇರುವ ಸ್ಕೂಲು ಯಾ ಪಾಠಶಾಲೆಗಳು ಇತಃಪರ ಗ್ರಾಮದ ಎಲಿಮೆಂಟರಿ ಯಾ ಪ್ರಾರಂಭಕ ಪಾಠಶಾಲೆಗಳೆಂದು ಕರೆಯಲ್ಪಡತಕ್ಕದ್ದೆಂದೂ (2) 1904ನೆ ಇಸವಿಯ ಜನವರಿ 6ನೆ ತಾರೀಖಿನ 3356—ಎಡ್ಯು. ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗೆ ಬದಲಾಗಿ ಗ್ರಾಮದ ಎಲಿಮೆಂಟರಿ ಸ್ಕೂಲುಗಳ ಯಾ ಪ್ರಾರಂಭಕ ಪಾಠಶಾಲೆಗಳ ಲೋಯರ್ ಮತ್ತು ಅಪ್ಪರ್ ಪ್ರೈಮರಿ ಯಾ ಕೀಳ್ಪಟ್ಟ ಅಥವಾ ಮೇಲ್ಪಟ್ಟ ಪ್ರಾಥಮಿಕ ತರಗತಿಗಳಲ್ಲಿ (Iನೆ, IIನೆ, ಮತ್ತು IIIನೆ ಇನ್‌ಫೆಂಟ್ ಯಾನೆ ಬಾಲಶಿಕ್ಷಾ ತರಗತಿಗಳಲ್ಲಿ) 1907ನೆ ಇಸವಿಯ ಅಕ್ಟೋಬರು 1ನೆ ತಾರೀಖು ಲಾಗಾಯಿತು ಉಚಿತವಾಗಿ ಯಾ ಫೀಜಿಲ್ಲದೆ ವಿದ್ಯಾಭ್ಯಾಸವನ್ನು ಮಾಡಿಸತಕ್ಕದ್ದೆಂದೂ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 4ನೆ ಅಕ್ಟೋಬರ್ 1907.

ನಂ. 3136—ಮ್ಯು. 50-07—2, ಕೃಷ್ಣರಾಜಪೇಟೆ ಮ್ಯುನಿಸಿಪಲ್ ಬೋರ್ಡಿನ ಮೂರು ಅವ್ಯವಹಿತವಾದ ಕೂಟಗಳಿಂದ ಗೈರ್‌ಹಾಜರಾಗಿ ಸದರಿ ಬೋರ್ಡಿನಲ್ಲಿ ತಮ್ಮ ಸ್ಥಾನವನ್ನು ಕಳೆದುಕೊಂಡ ಮಿ|| ನಾಡಿಗ ಕೃಷ್ಣಪ್ಪನವರಿಗೆ ಬದಲಾಗಿ ಸದರಿ ಬೋರ್ಡಿಗೆ ಮಿ|| ಕೃಷ್ಣಶಾಸ್ತ್ರಿಗಳನ್ನು ಸಭಿಕರನ್ನಾಗಿ ನೇಮಕರಮಾಡಿದೆ.

ತಾರೀಖು 30ನೆ ಸೆಪಟಂಬರ 1907.

ನಂ. ರೆ. 2350 — ಲ್ಯಾ. ರೆ. 173-07—3, ಸನ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತಿ. ನರಸೀಪುರ ತಾಲ್ಲೂಕಿನಲ್ಲಿರುವ ಶ್ರೀರಂಗಪಟ್ಟಣ—ಸೋಸಲೆ—ಶಿವನಸಮುದ್ರ ರಸ್ತೆಗಳಲ್ಲಿ ಮರಮತ್ತು ಇಲಾಖೆಗಾಗಿ ಗ್ರಾವೆಲ ಗುಂಡಿಯನ್ನು ತೋಡುವುದಕ್ಕೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೇದಾರನ ಹೆಸರು	ಸರ್ವೆ ನಂಬರು	ಜಮೀನಿನ ಬಾಬು	ವಿಸ್ತೀರ್ಣ	ಕಂದಾಯ	ಹೋಗ ಬೇಕಾದ ವಿಸ್ತೀರ್ಣ	ಚತುರ್ಗಡಿ.			
										ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ. ಗು.	ರೂ. ಆ.	ಗುಂಟೆಗಳು. ಗಜಗಳು.				
ಮೈಸೂರು	ತಿ. ನರಸೀಪುರ	ಸೋಸಲೆ	ಸೋಸಲೆ	ಬಿಸ್ತ್ರರ ಮೊಂಡ.	534	ಖುಷ್ಕಿ	3 34	2 4	20 50	ಸರ್ವೆ ನಂ. 533	ಸರ್ವೆ ನಂ. 539	ರಸ್ತೆ	ಸರ್ವೆ ನಂ. 534 (ಉಳಿದ ಭಾಗ)
			ಹಸವಳ್ಳಿ	ಸಿದ್ದ ಬಿನ ಕುಂಡಬೋರನ ಮಂಟ್ಯ.	164	ಡಿಟ್ಟೋ	0 26	0 8	26 0	ಖಾಲಿ ನಿವೇಶನ	ಸರ್ವೆ ನಂ. 2	ರಸ್ತೆ	ಸರ್ವೆ ನಂ. 1

ತಾರೀಖು 4ನೆ ಅಕ್ಟೋಬರ 1907.

ನಂ. ಫೈ. 1571 ಎಸ್. ಆರ್. 93-07-2, ಅಸಿಸ್ಟೆಂಟ ಕಮಿಷನರುಗಳಾಗಿ ಬದಲಿ ನೋಡುತ್ತಿರುವ ಮಿ॥ ಜಿ. ಆರ್. ಶ್ರೀನಿವಾಸೈಯ್ಯಂಗಾರ್ರನ್ನೂ ಮಿ॥ ಎಂ. ರಂಗರಾಯರನ್ನೂ ಅವರಿಗೆ ಮೊದಲು ಇದ್ದ ಅಮಲ್ದಾರ ಕೆಲಸಕ್ಕೆ ವಾಪಸು ಕಳುಹಿಸಿ, ಅವರನ್ನು ಅಮಲ್ದಾರರ ದರ್ಜೆಯುಳ್ಳ ಡಿಸ್ಟ್ರಿಕ್ಟು ಅಬ್ಕಾರಿ ಅಧಿಕಾರಿಗಳಾಗಿ ಮೊಕರರ್ಮಾಡಿದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 9ನೆ ಅಕ್ಟೋಬರ 1907.

ನಂ. 982—7176, ಸನ್ 1907ನೆ ಸೆಪಟಂಬರ 30ನೆ ತಾರೀಖು 7010ನೆ ನಂಬರ ಇಸ್ತಿಹಾರ್ನಾಮೆಗೆ ಬದಲಾಗಿ ಈ ಕೆಳಗೆ ನಮೂದಿಸುವ ವರ್ಗವನ್ನು ಹುಕುಂ ಮಾಡಲ್ಪಟ್ಟಿದೆ :—

ಮಿ॥ ಎಂ. ಎ. ಆನಂದಾಳ್ವಾರ್, ಬಿ. ಎ., ಮತ್ತು ಬಿ. ಸಿ. ಇ., ಯವರನ್ನು ಬೆಂಗಳೂರು ಡಿವೀಜನಿಗೆ ಸೇರಿದ ಚನ್ನಪಟ್ಟಣ ಸಬ್ ಡಿವೀಜನಿಂದ ಚಾನಲ್ಸ್ ಡಿವೀಜನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 9ನೆ ಅಕ್ಟೋಬರ 1907.

ನಂ. 988–7190, ಕಡೂರು ಡಿವಿಜನ ಎಗ್ಜಿಕ್ಯೂಟಿವ ಇಂಜಿನಿಯರ, ಮಿ॥ ಹೆಚ್. ಜೆ. ಮಲ್ಲಾಯಿ, ಎ.ಎಂ., ಐ. ಸಿ. ಇ., ಯವರಿಗೆ ಮೈಸೂರು ಸರ್ವಿಸ ರೆಗ್ಯುಲೇಷನ್ಸ 155 (1) ಮತ್ತು 208 (a) ಆರ್ಟಿಕಲ್ಲುಗಳನುಸರಿಸಿ ಸನ್ 1907ನೆ ಆಗಸ್ಟು 27ನೆ ತಾರೀಖಿನ ಲಾಗಾಯಿತು 3 ತಿಂಗಳು ಪ್ರಿವಿಲೇಜ್ ರಜಾವನ್ನೂ ಮತ್ತು ಒಂದು ವರ್ಷ ಫರ್ಲೋರಜಾವನ್ನೂ ಕೊಡಲ್ಪಟ್ಟಿದೆ.

(2) ಅಸಿಸ್ಟೆಂಟ ಇಂಜನಿಯರ ಮಿ॥ ಆರ್. ಎಸ್. ನವರತ್ನ, ಎಲ್. ಸಿ. ಇ., ಯವರನ್ನು, ಮಿ॥ ಮಲ್ಲಾಯಿ ಯವರು ರಜಾದ ಮೇಲೆ ಇರುವವರೆವಿಗೂ ಅಥವಾ ಇನ್ನೊಂದು ಹುಕುಂ ಕೊಡುವವರೆವಿಗೂ ಕಡೂರು ಡಿವೀಜನಿನ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ ಇಂಜಿನಿಯರಾಗಿ ಮೊಕರರು ಮಾಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹಚಿಕ,
ಮೈಸೂರು ಗವರ್ನ್ಮೆಂಟ ಪಬ್ಲಿಕ ವರ್ಕ್ಸ ಇಲಾಖಾ ಸೆಕ್ರೆಟರಿ.

ಮೈಸೂರು ಗೆಜೆಟ್

ವಿಶೇಷ ಪತ್ರಿಕೆ.

ಸರ್ಕಾರದಿಂದ ಪ್ರಾಯಿಷಿಆದ್ದು.

ಮೈಸೂರು, 18ನೇ ಅಕ್ಟೋಬರ್ 1907.

ಶ್ರೀಮನ್ ಮಹಾರಾಜರಾಜಾಸಾಹೇಬ್ ಬಹದ್ದೂರ್ರವರ ಸರ್ಕಾರದಿಂದ ಕೊಡೋಣಾದ
ಇಸ್ತಿಹಾರ್‌ನಾಮೆ.

ನಂಬರ್ C. 57 ತಾರೀಖು 18ನೆ ಅಕ್ಟೋಬರ್ 1907 ಮೊಕ್ಕಾಂ ಮೈಸೂರು.

1907ನೆ ಇಸವಿ ಅಕ್ಟೋಬರ್ ತಾರೀಖು 18ರಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್ರವರು ಬಿರುದುಗಳನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರಕೆಳಗೆ ಬರುವ ಪ್ರಸಿದ್ಧಪತ್ರಿಕೆಯನ್ನು ಸರ್ವರ ತಿಳುವಳಿಕೆಬಗ್ಗೆ ಪ್ರಕಟಪಡಿಸಿರುತ್ತೆ.

ಹುಕುಂ ಬಮೋಜಿಬ್,

C. S. BALASUNDARAM IYER,

ಅಫಿಷಿಯೇಟಿಂಗ್ ಸೆಕ್ರಟರಿ, ಮೈಸೂರು ಗವರ್ನಮೆಂಟ್, ಜನರಲ್ ಮತ್ತು ರೆವಿನ್ಯೂ ಇಲಾಖಾ.

ಪ್ರಸಿದ್ಧಪತ್ರಿಕೆ.

ಶ್ರೀಃ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಳ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಳ ಕಳಾನಿಧಿ ಕುಲಕ್ರಮಾಗತ ರಾಜ ಕ್ಷಿತಿಪಾಲ ಪ್ರಮುಖ ನಿಖಿಳ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನೂಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ

ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ. ಯವರು

ಶಾಲೀವಾಹನ ಶಕ ೧೮೨೯ನೆ ಪ್ಲವಂಗ ಸಂವತ್ಸರದ ಆಶ್ವಯುಜ ಶುದ್ಧ ೧೦ ಶುಕ್ರವಾರದಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ ಆಸೂರ್ ರಂಗಸ್ವಾಮಿ ಅಯ್ಯಂಗಾರ್ರಿಗೆ "ರಾಜಕಾರ್ಯ ಪ್ರವೀಣ" ಎಂಬ ಬಿರುದನ್ನೂ, ಜ್ಯೋತಿನಗರದ ಯಜಮಾನ್ ದೊಡ್ಡಣ್ಣಶೆಟ್ರಿಗೆ "ಜನೋಪಕಾರಿ" ಎಂಬ ಬಿರುದನ್ನೂ ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ.

KRISHNARAJA WADIYAR.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ 42.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 24, ಸರ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟ್ಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕರ್ಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇರ್ಷ ವ ಎಡ್ಯುಕೇಷನ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡುಗ್ಳ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷರ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 9ನೆ ಅಕ್ಟೋಬರ 1907.

ನಂ. 3192—ಸ್ಯಾನಿಟರಿ 100-07—2; ಕೊಡಗಿನ ಚೀಫ್ ಕಮಿಷನರವರ ಸೆಕ್ರಿಟೆರಿಯವರ 1907ನೆ ಸೆಪಟಂಬರು 30ನೆ ಮರ್ಸ್ಕೂನ 1566ನೆ ನಂಬರು ಲೆಟರಿನ ಸಂಗಡ ಬಂದ ಕೊಡಗು ಚೀಫ್ ಕಮಿಷನರವರ 1907ನೆ ಸೆಪಟಂಬರು 28ನೆ ಮರ್ಸ್ಕೂನ 83ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಲ್ಪಟ್ಟಿರುತ್ತೆ.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 28ನೆ ಸೆಪ್ಟಂಬರ್ ಸರ್ 1907ನೆ ಇಸವಿ.

ನಂಬರ 83. ಕೊಡಗು ದೇಶದ ಪಾಡಿನಾಲಕ್‌ನಾಡು ತಾಲ್ಲೂಕು ತಾವುನಾಡು—ಸಂಪಾಜಿನಾಡು ಭಾಗಮಂಡ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡಿಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಅಫಿಷಿಯೇಟಿಂಗ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸರ್ 1907ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸರ್ 1907ನೆ ಇಸವಿ ಅಕ್ಟೋಬರ ತಾರೀಖು 7 ರಿಂದ ನವಂಬರ 20ರ ವರಿಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಎಫ್. ಬಿ. ರೆನ್ನೀ,

ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ತಾರೀಖು 10ನೆ ಅಕ್ಟೋಬರ್ 1907.

ನಂ. 3247 - ಸ್ಯಾನಿಟರಿ 78-07-4, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸು... ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ... ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂ... ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ... ಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ಹಾಗುಳಿದ ಪ್ರದೇಶಗಳೆಂದು ಎಣಿಸ...

ಸ್ಥಳ.	ತಾಲ್ಲೂ...
ಬಾಳೆಕೊಪ್ಪ	ಕಂಡ್ಯ ಸಬ್...
ಕೇಶವನಹಳ್ಳಿ	ಡಿಟೋ

ತಾರೀಖು 10ನೆ ಅಕ್ಟೋಬರ್ 1907.

ನಂ. 3249 – ಸ್ಯಾನಿಟರಿ 34–07—11, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪ... ದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷ... ಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ... ನಂಬರ್ 9383—ಮಿಸಲೇನಿಯಸ್ ಫೈಲ್ 21 –96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—... ಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ಹಾಗುಳಿದ... ದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂ...
ಹಾಸನ ಟೌನ್	ಹಾಸನ.
ಹನುಮಂತಕೊಪ್ಪಲು	ಡಿಟೋ
ದಾಸರಕೊಪ್ಪಲು	ಡಿಟೋ
ಹರಳಹಳ್ಳಿ	ಡಿಟೋ
ಎನ್.ತಿಪ್ಪುರ	ಆಲೂರು ಸಬ್...
ಬಿಗಳೂರು	ಡಿಟೋ
ಚಾಳಗೆರೆ	ಡಿಟೋ

ತಾರೀಖು 10ನೆ ಅಕ್ಟೋಬರ್ 1907.

3251—ಸ್ಯಾನಿಟರಿ 96—07–2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವ... ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂ... ಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 93... ಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿ... ಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ಹಾಗುಳಿದ ಪ್ರದೇಶಗಳೆಂದು ಎಣಿಸಲ್ಪಡುವ...

ಸ್ಥಳ.	ತಾಲ್ಲೂ...
ಬೆಳಗೇರಹಳ್ಳಿ	ಚಿಕ್ಕಮಗಳೂ...
ಚಿಕ್ಕನಹಳ್ಳಿ	ಡಿಟೋ
ಹಾದಿಹಳ್ಳಿ	ಡಿಟೋ
ತೊಂಡವಳ್ಳಿ	ಡಿಟೋ
ಕುಂದೂರು.	ಡಿಟೋ
ಸುಬ್ರಹ್ಮಣ್ಯದಹಳ್ಳಿ	ಡಿಟೋ
ಮಾಚೀನಕೆರೆ	ಡಿಟೋ
ಮರಳೆ	ಡಿಟೋ
ಎರೆಹಳ್ಳಿ	ಡಿಟೋ
ಸೋಮವಾರಪೇಟೆ	ಡಿಟೋ
ಉಪ್ಪಹಳ್ಳಿ	ಡಿಟೋ
ಸಿರಗುಂದಿ	ಡಿಟೋ
ಅರಳಗುಪ್ಪೆ	ಡಿಟೋ
ಕೆಸವಿನಮನೆ	ಡಿಟೋ

ತಾರೀಖು 17ನೆ ಅಕ್ಟೋಬರ್ 1907.

ನಂ. 3383—ಸ್ಯಾನಿಟರಿ 103–07—2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿ... ದರೆ:—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷ... ಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀ... 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನ... ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ಹಾಗುಳಿದ ಪ್ರದೇಶವೆ... ಲ್ಪಡುವದು.

ಸ್ಥಳ.	ತಾಲ್ಲೂಕು
ತುಮಕೂರು ಟೌನ್	

ತಾರೀಖು 17ನೆ ಅಕ್ಟೋಬರ್ 1907.

ನಂ. 3380—ಸ್ಯಾನಿಟೆರಿ 34-07—12, ಸಮಸ್ತ ಜನರ ತಿಳವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.	ತಾಲ್ಲೂಕು.
ಬಾಗೂರು	... ಚನ್ನರಾಯಪಟ್ಣ.
ಮುದ್ದನಹಳ್ಳಿ	.. ಡಿಟೋ
ಮರುವನಹಳ್ಳಿ	.. ಡಿಟೋ

ತಾರೀಖು 22ನೆ ಅಕ್ಟೋಬರ್ 1907.

ನಂ. 3477—ಸ್ಯಾನಿಟೆರಿ 22-07—18, ಸಮಸ್ತ ಜನರ ತಿಳವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಕಲಪತ್ತಿ ರಥೋತ್ಸವ.	ಕಲಪಟ್ಟ	ಪಾಲಘಾಟ.	ಮಲಬಾರ.	6—11—07	16-11-07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಅಕ್ಟೋಬರ್ 11ನೆ ಮಂಗಳವಾರ್ 1036—Pನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ತುಲಾಕಾವೇರಿ ಉತ್ಸವ.	ಮಾಶಿಗೈ (ಹೊಂಗೇನಕಾಲ್).	ಧರ್ಮಪುರಿ.	ಸೇಲಂ.	10—10—07	6-11-07	ಡಿಟೋ ನಂ. 1029-P ಮೆಮೋ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 5ನೆ ಅಕ್ಟೋಬರ್ 1907.

ನಂ. ಜೆ. 1146—ಕೋ. 48—07-4, 1904ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್ ಮಿ॥ ಆರ್. ಟಿ. ಮಹದೇವರಾಯರನ್ನು 2ನೆ ತರಗತಿಯ ಮಾಜಿಸ್ಟ್ರೇಟಾಗಿ ಮೊಕರರ್ರ್ಮಾಡಿ ಇದೆ.

ತಾರೀಖು 3ನೆ ಅಕ್ಟೋಬರ್ 1907.

ನಂ. ರೆ. 2420—ಲ್ಯಾ. ರೆ. 171—07-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ಮಳವಳ್ಳಿ ತಾಲ್ಲೂಕಿನಲ್ಲಿರುವ ಹುಲ್ಲಹಳ್ಳಿಯ ಗ್ರಾಮ ನಿವೇಶನವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಪ್ರಕರಣವನ್ನನುಸರಿಸಿ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ್.	ಖುಷ್ಕಿ ತರಿ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಅ.	ಎ. ಗು.				
ಮೈಸೂರು	ಮಳವಳ್ಳಿ	ಕಸಬಾ	ಹುಲ್ಲಹಳ್ಳಿ	ಕಾಡ ಬೀರ ಕಾಡ.	141-1	ಖುಷ್ಕಿ	2 23	1 12	1 4	ಸರ್ವೆ ನಂ. 202-206.	ಸರ್ವೆ ನಂ. 240	ಸರ್ವೆ ನಂ. 142-2	ಸರ್ವೆ ನಂ. 141-1
				ಸಿದ್ದ ಬೀರ ಕಾಡಲಿಂಗ.	142-2	ಡಿಟೋ	4 24	3 0	2 10	ಸರ್ವೆ ನಂ. 202	ಸರ್ವೆ ನಂ. 142-1	ಸರ್ವೆ ನಂ. 143	ಸರ್ವೆ ನಂ. 141-2
				ಹೊಂಬನ ಸ್ವಾಮಂಚ.	89-1	ಡಿಟೋ	1 28	1 0	0 15	ಸರ್ವೆ ನಂ. 87	ಒಣಿ	ಒಣಿ	ಸರ್ವೆ ನಂ. 89

ತಾರೀಖು 2ನೆ ಅಕ್ಟೋಬರ್ 1907.

ನಂ. ಫೈ. 1536—ಜಿ. ಎಫ್. 126-07—2, ಕಂಟ್ರೋಲರವರ ಆಫೀಸಿನಲ್ಲಿ ತರಬೇತಾಗುತ್ತಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿ॥ ಜಿ. ಬಿ. ಹೆಬ್ಬಿ ಕರರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ 177ನೆ ನಿಬಂಧನೆಯಮೇರೆ, ದಸರಾ ರಜಾವಿನ ಜತೆಗೆ ಒಂದು ತಿಂಗಳು ಹದಿನಾರು ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 9ನೆ ಅಕ್ಟೋಬರ್ 1907.

ನಂ. ರೆ. 2469—ಲ್ಯಾ. ರೆ. 72—07—3, 1907ನೆ ಇಸವಿಯ ಜುಲೈ 24ನೆ ತಾರೀಖಿನಿಂದ ಮಿ॥ ಟಿ. ಜೋಕ್ಸಣ್ಣ ಬಿ. ಎ. ಯವರಿಗೆ, ಹಿಂದಿನ ಬಿ. ಷೆಡ್ಯೂಲ್ ಯಾ ಪಟ್ಟಿಗೆ ಸೇರಿದ ಅಸಿಸ್ಟೆಂಟ್ ಕಮಿಷನರುಗಳ 3ನೆ ತರಗತಿಯಿಂದ 2ನೆ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 10ನೆ ಅಕ್ಟೋಬರ್ 1907.

ನಂ. ರೆ. 2497—ಲ್ಯಾ. ರೆ. 191—07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ತಿ. ನರಸೀಪುರ ತಾಲ್ಲೂಕಿನಲ್ಲಿರುವ ತಲಕಾಡಿನಲ್ಲಿ ಒಂದು ಮುಸಾಫರಖಾನೆಯನ್ನು ಕಟ್ಟುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನೆಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಆಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಗಡಿ			
											ಪೂರ್ವ.	ಪಶ್ಚಿಮ.	ಉತ್ತರ	ದಕ್ಷಿಣ
ಮೈಸೂರು	ತಿ. ನರಸೀಪುರ.	ತಲಕಾಡು	ತೊಡರಯಾಂಡಹಳ್ಳಿ	ಪುಟ್ಟರಂಗ ಮತ್ತು ರಂಗ, ಚಿಕ್ಕರಂಗಯ್ಯ ಮತ್ತು ಅರುಣಾಚಲಯ್ಯ.	34	ಖುಷ್ಕಿ	ಎ. ಗು. 1 21¼	ರೂ. ಪ. 1 4	ಪೂರ್ವ ಪಶ್ಚಿಮ 77⅓ ಗಜಗಳು ಉತ್ತರ ದಕ್ಷಿಣ 60⅔ ಗಜಗಳು ಒಟ್ಟು 38 ಗುಂಟೆಗಳು	ರೂ. 1	ಕೊಂಡರೆ ಬಾಯಿಯ ವಿಶಾಲ	ತಲಕಾಡು ನರಸೀಪುರ ರಸ್ತೆ	ಸರ್ವೆ ನಂ. 33	ಸರ್ವೆ 34ರ ಪೈಕಿ ಉಳಿದ ಭಾಗ

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 11ನೆ ಅಕ್ಟೋಬರ್ 1907.

ನಂ. 1207—9, ಮೈಸೂರು ಸೀಮೆಯು ಧನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟನಲ್ಲಿ ಈ ಕೆಳಗೆ ಕಂಡ ಬಡ್ತಿಯನ್ನು 1907ನೆ ಇಸವಿ ಅಕ್ಟೋಬರ್ 2ನೆ ತಾರೀಖು ಲಾಗಾಯಿತು ಮಂಜೂರ್ಮಾಡಿರುತ್ತಾರೆ :—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
ಆನಂದರಾವ್ ಭೋಸ್ಲೆ	ರೆಜಿಮೆಂಟಲ್ ದಫೇದಾರ್ ಮೇಜರ್ ..	ಜಮೂದಾರ್, 5ನೆ ಗ್ರೇಡ್..

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 16ನೆ ಅಕ್ಟೋಬರ್ 1907.

ನಂ. 1012--7374, ಎಗ್ಜಿಕ್ಯೂಟವ ಇಂಜಿನಿಯರ್ ಮೆ|| ಸಿ. ಮಾಧವರಾವಯುವರು ಪ್ಯಾಲೆಸ ಡಿವೀಜನಿನಲ್ಲಿ ಸ್ಪೆಷಲ್ ಡ್ಯೂಟಿ ಮೇಲೆ ಇರುವವರಿವಿಗೂ ಈ ಆಫೀಸಿನ ಸನ 1906ನೆ ಮಾರ್ಚಿ 21ನೆ ತಾರೀಖು 271--1865ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಹಾಸನ ಡಿವೀಜನಿನ ಅಫಿಷಿಯೇಟಿಂಗ ಎಗ್ಜಿಕ್ಯೂಟವ ಇಂಜನೀಯರಾಗಿ ನೇಮಕರೂರು ಮಾಡಲ್ಪಟ್ಟ ಮೆ|| ಎಫ. ಎ. ಸ್ಟೀಲಯುವರು ಅಫಿಷಿಯೇಟಿಂಗ ಎಗ್ಜಿಕ್ಯೂಟವ ಇಂಜನೀಯರಾಗಿರಬೇಕು.

ಹುಕುಂ ಬಮೋಜೀಬ,

ಡಬ್ಲ್ಯು. ಮೆಕಹರ್ಚಿ,

ಮೈಸೂರು ಗವರ್ನಮೆಂಟ ಪಬ್ಲಿಕ ವರ್ಕ್ಸ ಇಲಾಖಾ ಸೆಕ್ರೆಟೆರಿ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ಸಂ 43.

ಬೆಂಗಳೂರು, ಗುರುವಾರ, ಅಕ್ಟೋಬರ ತಾ|| 31, ಸರ್ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಎಡ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟ ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೆ ಅಕ್ಟೋಬರ್ 1907.

ನಂ. 3192—ಸ್ಯಾನಿಟರಿ 100—07—2, ಕೊಡಗಿನ ಚೀಫ್ ಕಮ್ಮಿಷನರವರ ಸೆಕ್ರೆಟೆರಿಯವರ 1907ನೆ ಸೆಪಟಂಬರು 30ನೆ ಮಾರ್ಕಿನ 1566ನೆ ನಂಬರು ಲೆಟರಿನ ಸಂಗಡ ಬಂದ ಕೊಡಗು ಚೀಫ್ ಕಮಿಷನರವರ 1907ನೆ ಸೆಪಟಂಬರು 28ನೆ ಮಾರ್ಕಿನ 83ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಲ್ಪಟ್ಟಿರುತ್ತೆ.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 28ನೆ ಸೆಪ್ಟಂಬರ್ ಸರ್ 1907ನೆ ಇಸವಿ.

ನಂಬರ್ 83. ಕೊಡಗು ದೇಶದ ಪಾಡಿನಾಲಕ್‌ನಾಡು ತಾಲ್ಲೂಕು ತಾವುನಾಡು—ಸಂಪಾಜೆನಾಡು ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡಿಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗಗ್ರಸ್ತಗಳಿದ್ದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಅಫಿಷಿಯೇಟಿಂಗ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸರ್ 1907ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ ಅನುಸಾರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸರ್ 1907ನೆ ಇಸವಿ ಅಕ್ಟೋಬರ್ ತಾರೀಖು 7 ರಿಂದ ನವಂಬರ್ 20ರ ವರಿಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ್ ತಗ್ಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲ್ಪಡುತ್ತಾರೆ.

ಎಫ್. ಪಿ. ರೆನ್ನೀ,
ಚೀಫ್ ಕಮಿಷನರವರ ಸೆಕ್ರೆಟೆರಿಯವರು.

ತಾರೀಖು 9ನೆ ಅಕ್ಟೋಬರ 1907.

ನಂ. 3209—ಸ್ಯಾ. 70-07-4, ಮಿ॥ ಪಿ. ಪಲ್ಪು ಎಲ್. ಎಂ. ಮತ್ತು ಎಸ್ ಮತ್ತು ಡಿ. ಪಿ. ಎಚ್., ರವರನ್ನು ಡೆಪ್ಯುಟಿ ಸ್ಯಾನಿಟರಿ ಕಮಿಷನರಾಗಿ ನೇಮಿಸಿದ ಸಂಗತಿಯನ್ನು ಗೆಜೆಟ್ಟಿನಲ್ಲಿ, 1907ನೆ ಇಸವಿಯ ಸೆಪ್ಟಂಬರು 3ನೆ ತಾರೀಖು 2127—ಸ್ಯಾನಿಟರಿ213-06ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ, ಪ್ರಕಟಪಿಸಿತ್ತಷ್ಟೆ; ಅವರನ್ನು ವ್ಯಾಕ್ಸಿನೇಷನ್ ಯಾ ಸಿಡುಬಿನ ಇನ್ಸ್‌ಪೆಕ್ಟರಾಗಿಯೂ ನೇಮಿಸಿ ಇದೆ.

ತಾರೀಖು 17ನೆ ಅಕ್ಟೋಬರು 1907.

ನಂ. 3283—ಸ್ಯಾ. 86-07-2, ಘನವಸ್ನೈರಿದ ಮೈಸೂರು ರೆಸಿಡೆಂಟರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿ ಸೆಪ್ಟಂಬರು 18ನೆ ತಾರೀಖಿನ 966ನೆ ನಂಬರಿನ ಲೆಟರಿನೊಡನೆ ತಲುಪಿದ ಆದರಡಿ ಕಂಡ ಇಂಡಿಯಾ ಸರ್ಕಾರದ ಹೋಂ ಇಲಾಖಾ ಸೆಕ್ರೆಟರಿಯವರ 1907ನೆ ಇಸವಿಯ ಆಗಸ್ಟು 17ನೆ ತಾರೀಖಿನ 1275-84 ನಂಬರಿನ ಲೆಟರನ್ನು ಸರ್ವಜನರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

"ಪ್ಲೇಗು ಜಾಡ್ಯದ ಕಾರಣವನ್ನು ವಿಚಾರ ಮಾಡುವುದಕ್ಕೆ 1905ರಲ್ಲಿ ಶಾಸ್ತ್ರಜ್ಞರ ಕಮಿಷನನ್ನು ನೇಮಿಸಿತಷ್ಟೆ. ಈ ಕಮಿಷನಿನವರು ತಮ್ಮ ಕೆಲಸದ ಪೈಕಿ ಮೊದಲ ಭಾಗವನ್ನು ಈಗ ಮುಗಿಸಿ ಈ ಜಾಡ್ಯದ ಕಾರಣವನ್ನು ಕುರಿತು ಕೆಲವು ಅಂಶಗಳನ್ನು, ನಾವು ಈಗ ನಡೆಸುತ್ತಿರುವ ಕಾರ್ಯಭಾಗಕ್ಕೆ ಪ್ರಯೋಜನವಾಗುವ ರೀತಿಯಲ್ಲಿ, ನಿಷ್ಕರ್ಷೆ ಮಾಡಿರುತ್ತಾರೆ. ಇವರು ತೊಡಗಿರುವ ಕೆಲಸದ ವಿವರವನ್ನೆಲ್ಲಾ ಪ್ರಕಟಿಸುವುದಕ್ಕೆ ಇನ್ನೂ ಸ್ವಲ್ಪಕಾಲ ಬೇಕು. ಆದರೆ ಇವರು ಬಹಳ ಯೋಚನೆಮಾಡಿ ಉಪಯೋಗವಾಗುವಂತೆ ನಡೆಸಿರುವ ಈ ಶೋಧನೆಗಳಿಂದ ತಿಳಿಯಬಂದ ಫಲಿತಾಂಶಗಳ ಪೈಕಿ ಈ ಜಾಡ್ಯ ಪರಿಹಾರಕ್ಕೆ ಮಾಡಬೇಕಾದ ಏರ್ಪಾಡುಗಳಿಗೆ ಸಂಬಂಧಪಟ್ಟವುಗಳನ್ನು ಕುರಿತು ನಿಮಗೆ ಈ ಕೂಡಲೆ ಬರೆಸಬೇಕೆಂದು ಅಪ್ಪಣೆಯಾಗಿದೆ.

2. ಹೀಗೆ ನಿಷ್ಕರ್ಷೆಯಾದ ಅಂಶಗಳ ಪೈಕಿ ಮೇಲೆ ಸೂಚಿಸಿದ ಉದ್ದೇಶದ ವಿಷಯದಲ್ಲಿ ಮುಖ್ಯವಾದುವು ಯಾವುವೆಂದರೆ:—

(1) ಪ್ಲೇಗು ಜಾಡ್ಯವನ್ನು ಸೋಂಕು ತಗುಲಿದ ಇಲಿಗಳು ಹರಡುತ್ತವೆ.

(2) ಇಲಿಯಿಂದ ಇಲಿಗೂ, ಇಲಿಯಿಂದ ಮನುಷ್ಯನಿಗೂ, ಇಲಿಯ ಮೇಲಿರುವ ಚಿಗಟವು ರೋಗವನ್ನು ತಂದು ಹಾಕುತ್ತದೆ; ಮತ್ತು

(3) ಮಣ್ಣಿನಲ್ಲಿಯೂ, ಮನೆಗಳ ನೆಲ, ಗೋಡೆ ವಗೈರೆಗಳಲ್ಲಿಯೂ ಪ್ಲೇಗ್ ಜರ್ಮ್ ಯಾ ರೋಗವಿಷಾಣುವು ಬಹಳ ಕಾಲ ಬದುಕಿರಲಾರದು.

ಮನೆಗಳಲ್ಲಿ ವಿಷಾಣುಗಳನ್ನು ಕೊಲ್ಲುವುದಕ್ಕೋಸ್ಕರ ಬಹಳ ಕಷ್ಟಪಟ್ಟು, ಖರ್ಚು ಮುಟ್ಟಿಸಿ, ಮಾಡುತ್ತಿರುವ ಅನೇಕ ಏರ್ಪಾಟುಗಳನ್ನು ಬಿಟ್ಟುಬಿಡಬಹುದೆಂದು ಸದರಿ ನಿಷ್ಕರ್ಷೆಗಳಿಂದ ವ್ಯಕ್ತವಾಗುವುದಲ್ಲದೆ, ಸೋಂಕು ತಗುಲಿದ ಇಲಿಗಳೂ ಅವುಗಳ ಮೇಲಿನ ಚಿಗಟಗಳೂ ಮನುಷ್ಯನ ಹತ್ತಿರ ಬಾರದಂತೆ ಮಾಡುವುದಕ್ಕೂ ಅಂಥಾ ಚಿಗಟಗಳು ಕಡಿಯುವುದರಿಂದ ಉಂಟಾಗುವ ಕೇಡುಗಳಿಗೆ ಪ್ರತೀಕಾರ ಮಾಡುವುದಕ್ಕೂ ತಕ್ಕ ಪ್ರಯತ್ನ ಮಾಡಬೇಕೆಂದೂ ಕೂಡ ತೋರಿ ಬರುತ್ತದೆ.

3. ಮನುಷ್ಯನಿಗೂ, ಸೋಂಕು ತಗುಲಿದ ಇಲಿಗಳು ಅವುಗಳ ಮೇಲಿನ ಚಿಗಟಗಳು ಇವುಗಳಿಗೂ, ಸಂಪರ್ಕವಾಗದಂತೆ ಅಡ್ಡಿ ಮಾಡುವುದರಲ್ಲಿ ಬಹಳ ಕಷ್ಟಗಳಿವೆ ಎಂದು ಇಂಡಿಯಾ ಸರ್ಕಾರದವರು ಒಪ್ಪುತ್ತಾರೆ. ಯಾಕೆಂದರೆ ಇಂಡಿಯಾ ದೇಶದ ಮನೆಗಳ ಪೈಕಿ ಅನೇಕ ಮನೆಗಳನ್ನು ಇಲಿಗಳು ಬಹಳವಾಗಿ ಸೇರುವುದಕ್ಕೆ ಅವಕಾಶವಾಗುವ ರೀತಿಯಲ್ಲಿ ಕಟ್ಟಿ ಇದೆ; ಸಾಮಾನ್ಯವಾಗಿ ಅಲ್ಲಿ ಅವುಗಳಿಗೆ ಬೇಕಾದಷ್ಟು ಆಹಾರ ಸಿಕ್ಕುತ್ತದೆ; ಮತ್ತು ಅನೇಕರು ಇಲಿಗಳನ್ನು ತಾವಾಗಿಯೇ ಕೊಲ್ಲುವುದಕ್ಕೆ ಇಷ್ಟಪಡದೆ ಇರುವುದಲ್ಲದೆ ಇತರರು ಕೊಲ್ಲುವುದಕ್ಕೂ ಕೂಡ ಸಹಾಯ ಕೊಡುವುದಿಲ್ಲ. ಆದರೆ ಈ ವಿಧವಾದ ಕಷ್ಟಗಳು ಎಲ್ಲಾ ಕಡೆಗಳಲ್ಲಿಯೂ ಇರುವುದಿಲ್ಲ; ಚೆನ್ನಾಗಿ ಯೋಚಿಸಿ ಏರ್ಪಾಟುಗಳನ್ನು ಮಾಡಿಕೊಂಡು, ಅವುಗಳನ್ನು ಬಿಡದೆ ನಡೆಸಿದರೆ ಇಲಿಗಳು ಬಹಳಮಟ್ಟಿಗೆ ಕಡಮೆಯಾಗಿ ತನ್ಮೂಲಕ—ಪ್ಲೇಗು ಸಂಪೂರ್ಣವಾಗಿ ನಿವಾರಣೆಯಾಗದಿದ್ದರೂ—ಅದು ಜಾಗ್ರತೆಯಾಗಿ ಹರಡದಂತೆ ಆಗುತ್ತದೆ ಎನ್ನುವುದಕ್ಕೆ ನಿದರ್ಶನವಿದೆ. ಆದರೆ ಇಲಿಗಳು ಬಹಳ ಜಾಗ್ರತೆಯಾಗಿ ವೃದ್ಧಿಹೊಂದುತ್ತವೆ ಎಂಬ ಅಂಶವನ್ನು ನಾವು ಜ್ಞಾಪಕದಲ್ಲಿಡಬೇಕು. ಇದರಿಂದ ಏನು ವ್ಯಕ್ತವಾಗುತ್ತದೆಂದರೆ, ಇಲಿಗಳನ್ನು ಕೊಲ್ಲುವ ಪ್ರಯತ್ನವನ್ನು ಕೆಲವು ಕಾಲ ಮಾಡಿ, ಕೆಲವುಕಾಲ ಬಿಟ್ಟು, ಪುನಃ ಪ್ರಾರಂಭಿಸಿ, ಈರೀತಿ ಮಾಡಿದರೂ, ಆ ಪ್ರಯತ್ನವನ್ನು ಸರಿಯಾದ ಮಾರ್ಗದಲ್ಲಿ ಮಾಡದೆ ಇದ್ದರೂ ಪ್ಲೇಗಿನ ಹಾವಳಿಯು ಲೇಶಮಾತ್ರವೂ ಕಡಮೆಯಾಗುವುದಿಲ್ಲ. ಇಷ್ಟೇ ಅಲ್ಲ, ಇದರಿಂದ ಇಲಿಗಳನ್ನು ನಾಶಮಾಡುವುದು ಒಂದರಲ್ಲೇ ಅಲ್ಲದೆ ಇತರ ಏರ್ಪಾಡುಗಳಲ್ಲಿಯೂ ಕೂಡ ಜನರಿಗೆ ನಂಬಿಕೆ ತಪ್ಪಿ ಕೆಡುಕೇ ಉಂಟಾಗಬಹುದು.

4. ಇಲಿಗಳು ಕಡಮೆಯಾಗುವಂತೆ ಮಾಡುವುದಕ್ಕೆ ಅವುಗಳನ್ನು ಕೊಲ್ಲುವುದು ಮಾತ್ರವಲ್ಲದೆ ಇತರ ಉಪಾಯಗಳೂ ಇವೆ; ಯಾವುವೆಂದರೆ, ಮನೆಯನ್ನು ಕಟ್ಟುವ ರೀತಿಯನ್ನು ಅಭಿವೃದ್ಧಿ ಪಡಿಸುವುದು. ಇದನ್ನು ಕೂಡಲೇ ಬಹಳ ಮಟ್ಟಿಗೆ ಮಾಡುವುದು ಅಸಾಧ್ಯವಾದರೂ ಕೆಲವು ಸ್ಥಳಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಮಾಡಬಹುದು; ಮತ್ತು ಕೆಲವು ಸ್ಥಳಗಳನ್ನು ಆಯ್ದು ನಾಯಿಸಿ ಅಲ್ಲಿ ಬಡ ಜನಗಳ ವಾಸಕ್ಕೆ ತಕ್ಕವಾದ ಕೆಲವು ಮನೆಗಳನ್ನು ಇಲಿಗಳು ಸುಲಭವಾಗಿ ಸೇರುವುದಕ್ಕಾಗದ ಹಾಗೆ ಕಟ್ಟಿ ಅವುಗಳನ್ನು ಮಾದರಿಗಳಾಗಿ ತೋರಿಸುವುದರಿಂದ ಬಹಳ ಪ್ರಯೋಜನ ವುಂಟಾಗಬಹುದು. ಅಂಥಾ ಮಾದರಿ ಮನೆಗಳನ್ನು ಕಟ್ಟುವ ಕೆಲಸವನ್ನು ಅನಾರೋಗ್ಯವಾಗಿಯೂ ಒತ್ತಾಗಿಯೂ ಇರುವ ಮನೆಗಳನ್ನು ತೆಗೆದುಹಾಕುವುದರ ಜತೆಯಲ್ಲಿಯೇ ಸುಲಭವಾಗಿ ಮಾಡಬಹುದು. ಈ ಏರ್ಪಾಡುಗಳಿಂದ ಇಲಿಗಳು ಸೇರುವುದಕ್ಕೆ ಅವಕಾಶವು ಕಡಮೆಯಾಗುವುದಲ್ಲದೆ ಜನಗಳಿಗೂ ಮನೆ ಕಟ್ಟುವ ತರಹವನ್ನು ಹೇಳಿಕೊಟ್ಟಂತೆ ಆಗುವುದರಿಂದ ಇವು ಅತ್ಯವಶ್ಯವಾದುವೆಂದು ಇಂಡಿಯಾ ಸರ್ಕಾರದವರು ಎಣಿಸುತ್ತಾರೆ. ಇದಲ್ಲ

ದೆ ಸಾಧಾರಣವಾಗಿ ಸಿಕ್ಕುವ ಆಹಾರವು ಕಡಮೆಯಾದಹಾಗೆ ಇಲಿಗಳೂ ಕಡಮೆಯಾಗುವುದರಿಂದ ಧಾನ್ಯದ ದಾಸ್ತಾನನ್ನು ಕಾಪಾಡಿ ಇಲಿಗಳಿಗೆ ಸಿಕ್ಕುವ ಆಹಾರವನ್ನು ಕಡಮೆ ಮಾಡಿ ಬೇಡವಾದ ಆಹಾರ ಪದಾರ್ಥಗಳನ್ನೆಲ್ಲಾ ಒಡನೇ ಆಚೆಗೆ ಸಾಗಿಸುವುದರಿಂದಲೂ ಇಲಿಗಳು ಬಹಳ ಮಟ್ಟಿಗೆ ಕಡಮೆಯಾಗುವುವು.

5. ಆದರೂ ಇಲಿಗಳನ್ನು ಕಡಮೆ ಮಾಡುವುದಕ್ಕೆ ಮಾಡುವ ಪ್ರಯತ್ನಗಳಿಂದ ಇನ್ನೂ ಕೆಲವು ಕಾಲದ ವರೆಗೆ ಅಲ್ಲಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ಇಲಿಗಳು ಕಡಮೆಯಾಗಬಹುದೆಂದು ಇಂಡಿಯಾ ಸರ್ಕಾರದವರು ಅಭಿಪ್ರಾಯಪಡುತ್ತಾರೆ, ಆದುದರಿಂದ ಅನೇಕ ಸಂದರ್ಭಗಳಲ್ಲಿ ರೋಗ ತಗುಲಿದ ಇಲಿಯ ಸೋಂಕು ಮನುಷ್ಯನಿಗೆ ತಗುಲದ ಹಾಗೆ ಮಾಡಬೇಕಾದರೆ ರೋಗ ತಗುಲಿದ ಪ್ರದೇಶವನ್ನು ಸ್ವಲ್ಪ ಕಾಲದ ಮಟ್ಟಿಗಾದರೂ ಬಿಟ್ಟು ಹೋಗುವುದರಿಂದ ಮಾತ್ರ ಸಾಧ್ಯವೇ ಹೊರತು ಬೇರೆ ಯಾವುದರಿಂದಲೂ ಸಾಧ್ಯವಲ್ಲ. ಈಗ ನಮಗೆ ತಿಳಿದಿರುವುದರಲ್ಲಿ ಪ್ಲೇಗನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ಲೇಗು ತಗುಲಿದ ಸ್ಥಳವನ್ನು ಬಿಟ್ಟು ಹೊರಟು ಹೋಗುವುದೇ ಬಹಳ ಒಳ್ಳೇ ಉಪಾಯವೆಂದು ನಾವು ಹೇಳಬಲ್ಲೆವು ಮತ್ತು ಎಷ್ಟು ಜಾಗ್ರತೆಯಾಗಿಯೂ, ಶುದ್ಧಾಂಗವಾಗಿಯೂ ಬಿಟ್ಟುಹೋದರೆ ಅಷ್ಟು ಹೆಚ್ಚಾಗಿ ಜನಗಳನ್ನು ಕಾಪಾಡಬಹುದು. ಎಂಥಾ ಒಳ್ಳೇ ಸಂದರ್ಭಗಳಲ್ಲಿಯೂ ಮನೆಗಳನ್ನು ಬಿಟ್ಟು ಹೋಗುವುದರಿಂದ ಜನಗಳಿಗೆ ಬಹಳ ಅನಾನುಕೂಲವಾಗುವುದು ಗೊತ್ತಾಗಿಯೇ ಇದೆ. ಆದುದರಿಂದ ಜನಗಳಲ್ಲಿ ಮುಖಂಡರಾದವರಿಗೆ ಬಹಳವಾಗಿ ಹೇಳಿ ಜನಗಳು ಹಂಗಾಮಿಯಾದ ಗುಡಿಸಲುಗಳಿಗೆ ಹೊರಟು ಹೋಗುವಹಾಗೆ ಮಾಡುವುದಲ್ಲದೆ ಈ ಏರ್ಪಾಟು ಕೂಡ ಎಷ್ಟುಮಟ್ಟಿಗೂ ತೊಂದರೆಯಾಗಿಲ್ಲದೆ ಇರುವ ಹಾಗೆ ಆಯಾ ಜನಗಳಿಗೆ ತಕ್ಕ ಕುಮ್ಮಕ್ಕು ಮಾಡಿ ಜನಗಳ ಸ್ಥಿತಿಗೆ ತಕ್ಕ ನಿಬಂಧನೆಗಳನ್ನು ಮಾಡುವುದು ಡಿಸ್ಟ್ರಿಕ್ಟು ಆಫಿಸರುಗಳ ಕರ್ತವ್ಯವಾಗಿದೆಯೆಂದು ಅವರಿಗೆ ಉಚಿತವಾಗಿ ತಿಳಿಸಬೇಕು. ನಾನಾ ಸ್ಥಳಗಳ ಸ್ಥಿತಿಗಳು ಬೇರೆಬೇರೆಯಾಗಿರುವುದರಿಂದ ಪ್ರತಿ ಸಂದರ್ಭದಲ್ಲಿಯೂ ಅನುಸರಿಸತಕ್ಕ ನಿಬಂಧನೆಗಳನ್ನು ಗೊತ್ತಾಗಿ ಏರ್ಪಡಿಸುವುದು ಅಸಾಧ್ಯ. ಆದುದರಿಂದ ಜನಗಳಿಗೆ ಹೇಗೆ ಸಹಾಯ ಮಾಡಬೇಕೋ ಅದನ್ನು ನಿಶ್ಚಯಿಸುವುದಕ್ಕೆ ಡಿಸ್ಟ್ರಿಕ್ಟು ಆಫಿಸರುಗಳಿಗೂ ಅವರ ಕೈಕೆಳಗಿನವರಿಗೂ ಬಹಳ ಸ್ವಾತಂತ್ರ್ಯವನ್ನು ಕೊಡಬೇಕು, ಮತ್ತು ಅವರು ವಿಧಿಸಬೇಕಾಗಿರುವ ಯಾವುದಾದರೂ ನಿಬಂಧನೆಗಳನ್ನು ಕುರಿತು ಕಸಬುದಾರಿ ವಿಷಯದಲ್ಲಿ (ಎಂದರೆ, ವೈದ್ಯ ಮತ್ತು ಇಂಜನಿಯರಿಂಗ್) ಬುದ್ಧಿವಾದವನ್ನು ಹೇಳುವವರ ಸಂಗಡ ಆಲೋಚಿಸಬೇಕು. ಒಂದು ಸ್ಥಳದಲ್ಲಿ ಹಣ ಕೊಟ್ಟು ಸಹಾಯ ಮಾಡಬೇಕಾಗಿರಬಹುದು, ಮತ್ತೊಂದು ಸ್ಥಳದಲ್ಲಿ ಮಾಫಿಯಾಗಿ ಅಥವಾ ಖರೀದಿಯನ್ನು ತೆಗೆದುಕೊಂಡು ಹುಲ್ಲಿನ ಗುಡಿಸಲನ್ನು ಕಟ್ಟುವುದಕ್ಕೆ ಬೇಕಾದ ಸಾಮಾನನ್ನು ಕೊಡುವುದು ಒಳ್ಳೇದಾಗಿರಬಹುದು, ಮತ್ತೊಂದು ಸ್ಥಳದಲ್ಲಿ ಹಂಗಾಮಿ ಮನೆಗಳನ್ನು ಕಟ್ಟುವುದಕ್ಕೆ ಕಲಾಯದ ಕಬ್ಬಿಣದ ತಗಡುಗಳನ್ನು ಕೊಟ್ಟು ಸಹಾಯ ಮಾಡುವುದು ಬಹಳ ಒಳ್ಳೆಯದಾಗಿರಬಹುದು. ದನಗಳ ನಿಗೆವಾಗಿಗೆ ಏರ್ಪಾಟುಗಳು ಆಗಾಗ್ಗೆ ಅವಶ್ಯವಾಗಿರಬಹುದು ಮತ್ತು ಜನಗಳು ತಮ್ಮ ತಮ್ಮ ಮನೆಗಳಲ್ಲಿ ಬಿಟ್ಟುಹೋಗಬೇಕಾಗಿರುವ ಸ್ವತ್ತಿನ ಕಾವಲಿಗೆ ಯಾವಾಗಲೂ ಏರ್ಪಾಡು ಮಾಡಬೇಕು. ಯಾವ ತರದ ಸಹಾಯ ಮಾಡಬೇಕೆಂದು ನಿಶ್ಚಯಿಸಿದರೂ ಅದರ ವಿಷಯದಲ್ಲಿ ನಡೆಸಬೇಕಾದ ನಡವಳಿಕೆಗಳನ್ನು ಬಹಳವಾಗಿ ಕಡಮೆ ಮಾಡಿ ಅಂಥಾ ಸಹಾಯವನ್ನು ಒಡನೇ ಮಾಡಬೇಕಲ್ಲದೆ ಅದರ ವಿಷಯದಲ್ಲಿ ಆ ಮೇಲೆ ಮಿತಿಮೀರಿ ತನಿಖೆ ಮಾಡಕೂಡದು. ಜನಗಳಿಗೆ ಯಾವ ಯಾವ ಕೆಲಸಗಳಲ್ಲಿ ಇಷ್ಟವೋ ಯಾವಯಾವ ಕೆಲಸಗಳಲ್ಲಿ ಇಷ್ಟವಿಲ್ಲವೋ ಅದನ್ನು ತಿಳಿದುಕೊಂಡು ಪ್ಲೇಗು ತಗುಲಿದ ಸ್ಥಳಗಳನ್ನು ಬಿಟ್ಟುಹೋಗುವುದಕ್ಕೆ ಕಾರಣಗಳನ್ನೂ ಹಾಗೆ ಬಿಟ್ಟು ಹೋಗುವುದರಿಂದ ತಮ್ಮನ್ನು ತಾವು ಹೇಗೆ ಕಾಪಾಡಿಕೊಳ್ಳಬಹುದೋ ಅದನ್ನೂ ಅವರಿಗೆ ತಿಳಿಯುವ ಹಾಗೆ ಹೇಳಬೇಕು. ಬಿಟ್ಟುಹೋಗುವುದು ಒಳ್ಳೇದೆಂದು ಅವರಿಗೆ ತಿಳಿಯುವಹಾಗೆ ಮಾಡಿಬಿಟ್ಟರೆ ಅವರು ಹಂಗಾಮಿಯಾಗಿ ವಾಸಮಾಡಬೇಕಾದ ಸ್ಥಳವು ಅವರು ಬಿಟ್ಟುಹೋದ ಮನೆಗಳಿಂದ ಬಹಳ ದೂರದಲ್ಲಿ ಇರಬೇಕಾದುದಿಲ್ಲ, ಅವರ ಹಿಂದೆಯೇ ಇಲಿಗಳು ಹೋಗುವುದಕ್ಕಾಗದಷ್ಟು ದೂರದಲ್ಲಿ ಇದ್ದರೆ ಸಾಕು ; ಅಲ್ಲದೆ ಅವರು ತಮ್ಮ ಮನೆಗಳಿಂದ ರೋಗ ತಗುಲಿದ ಚಿಗಟಗಳನ್ನು ತಮ್ಮ ಸಂಗಡ ತೆಗೆದುಕೊಂಡು ಬರುವುದನ್ನು ಅಡ್ಡಿ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟು ಹೊರತು ಅದಕ್ಕೆ ಮೀರಿ ಯಾವ ನಿರ್ಬಂಧಗಳನ್ನೂ ಮಾಡುವುದು ಅವಶ್ಯವಿಲ್ಲ.

6. ಇದಲ್ಲದೆ ಇನಾಕ್ಯುಲೇಷನ್ ಮಾಡುವುದು ಎಂಬ ಮತ್ತೊಂದು ವಿಷಯಕ್ಕೂ ನಿಗೆ ಕೊಡಬೇಕು. ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಪ್ಲೇಗು ತಗುಲದೆ ಇರುವುದಕ್ಕೆ ಬಹಳ ಒಳ್ಳೇದೆಂದು ನಿಸ್ಸಂದೇಹವಾಗಿ ಕಂಡುಬಂದಿದೆ, ಮತ್ತು ಅದರಿಂದ ಪ್ಲೇಗು ಬರುವುದಕ್ಕೆ ಅಡ್ಡಿಯಾಗದೆ ಹೋದರೂ ಪ್ಲೇಗು ವಾಸಿಯಾಗುವುದಕ್ಕೆ ಮತ್ತಷ್ಟು ಅನುಕೂಲವುಂಟು ಆದರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವ ವಿಷಯದಲ್ಲಿ ಜನಗಳಿಗೆ ಬಹಳ ಅಸಮಾಧಾನವಿರುವುದು ಸಭಾ ಸಮೇತರಾದ ಗವರ್ನರ್ ಜನರಲವರಿಗೆ ತಿಳಿದಿದೆ. ಆದುದರಿಂದ ಇನಾಕ್ಯುಲೇಷನಿಂದ ಉಂಟಾಗುವ ಪ್ರಯೋಜನಗಳನ್ನು ಜಾಗರೂಕತೆಯಿಂದಲೂ, ವಿವೇಕದಿಂದಲೂ ಜನಗಳಿಗೆ ಹೇಳಬೇಕು. ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದಕ್ಕೆ ಎಲ್ಲಾ ಕಡೆಯಲ್ಲಿಯೂ ಏರ್ಪಾಟು ಮಾಡುವುದು ಮುಖ್ಯೋದ್ದೇಶವಾಗಿರಬೇಕು. ಈ ಕೆಲಸಕ್ಕಾಗಿ ಸಾಧ್ಯವಾದ ಕಡೆಯಲ್ಲೆಲ್ಲಾ ಆಸ್ಪತ್ರೆಗಳ ಮತ್ತು ಡಿಸ್ಪೆನ್ಸರಿಗಳ ಶಿಬ್ಬಂದಿಗಳನ್ನು ಉಪಯೋಗಿಸಬೇಕು ಮತ್ತು ಹೆಚ್ಚು ಜನಗಳು ಬೇಕಾದಾಗ ಇನಾಕ್ಯುಲೇಷನ್ ಮಾಡುವ ಪ್ರತ್ಯೇಕವಾದ ಶಿಬ್ಬಂದಿಯನ್ನು ಕೂಡ ಇಡಬೇಕು. ಎಲ್ಲಾ ಸಂದರ್ಭಗಳಲ್ಲಿಯೂ ಇನಾಕ್ಯುಲೇಷನ್ ಮಾಡುವ ಸುಲಭವಾದ ಕ್ರಮದಲ್ಲಿ ಜನಗಳನ್ನು ತರಬೇತು ಮಾಡುವುದು ಅವಶ್ಯವಾಗಿದೆ, ಮತ್ತು ಅಂಥಾ ತರಬೇತನ್ನು ಪ್ರಾವಿನ್ಷಿಯಲ್ ಲಾಬೊರೇಟರೀಸ್ ಯಾ ಕಾರ್ಖಾನೆಗಳಲ್ಲಿಯೂ ಮತ್ತು ಅದಕ್ಕಾಗಿ ಚುನಾಯಿಸಲ್ಪಟ್ಟ ಕಮಿಷನ್ಡ್ ಮೆಡಿಕಲ್ ಆಫಿಸರುಗಳಿಂದಲೂ ಮಾಡಿಸಬಹುದು. ಈ ವಿಷಯದಲ್ಲಿ ಆಯಾ $\frac{\text{ಪ್ರೆಸಿಡೆನ್ಸಿಯ}}{\text{ಪ್ರಾಂತ್ಯದ}}$ ಅವಶ್ಯಕತೆಗಳನ್ನು $\frac{\text{ಸಭಾ ಸಮೇತರಾದ ಗವರ್ನರು,}}{\text{ಲೆಫ್ಟಿನೆಂಟ್ ಗವರ್ನರು}}$ ಒಡನೆ ಆಲೋಚನೆಗೆ ತೆಗೆದುಕೊಳ್ಳಬೇಕು.
ತಾವು

7. ಮನುಷ್ಯರಿಗೂ ಇಲಿಗಳಿಗೂ ತಗುಲಿರುವ ತೀವ್ರವಾದ ಪ್ಲೇಗು ರೋಗವು ಯಾವ ವರ್ಷದಲ್ಲೂ ಪೂರ್ತಿಯಾಗಿ ವಾಸಿಯಾಗುವುದಿಲ್ಲವೆಂದು ಕಂಡುಬಂದಿದೆ. ಪ್ಲೇಗು ಕಡಮೆಯಾಗಿರುವ ಕಾಲದಲ್ಲಿ ಯಾವ ಸ್ಥಳಗಳಲ್ಲಿ ಪ್ಲೇಗು ಪಟ್ಟಾಗಿ ಬಿಡದೆ ಇದೆ

ಯೋ ಅಲ್ಲಿಯೋ ವರ್ಷೇ ವರ್ಷೇ ಅದು ಹುಟ್ಟಿ ಜನಗಳಿಗೆಲ್ಲಾ ಹರಡಿಕೊಳ್ಳುತ್ತದೆ. ಪ್ರತಿ ಪ್ರದೇಶದಲ್ಲಿಯೂ ವರ್ಷೇ ವರ್ಷೇ ಇಂಥಾ ಸ್ಥಳಗಳು ಬೇರೆ ಬೇರೆಯಾಗಿರಬಹುದು. ಇವುಗಳನ್ನು ಗೊತ್ತುಮಾಡಿ ಬಹಳ ನಿಗೆ ಕೊಟ್ಟು ಅವುಗಳಿಂದ ಪ್ಲೇಗು ಹರಡಿಕೊಳ್ಳದಂತೆಯೂ ಅಲ್ಲಿ ಆ ಜಾಡ್ಯವು ನಿರ್ಮೂಲವಾಗುವಂತೆಯೂ ಮಾಡಬೇಕು.

8. ಜನಗಳ ವಿರೋಧವನ್ನು ಹುಟ್ಟಿಸುವ ಯಾವ ಕೆಲಸವನ್ನೂ ಮಾಡದೆ ಇರುವುದು ಎಷ್ಟು ಮುಖ್ಯವಾದ ಕೆಲಸವೋ ಅದನ್ನು ಸ್ಥಳೀಯ ಸರ್ಕಾರದವರಿಗೆ ಇನ್ನೂ ವಿಶೇಷವಾಗಿ ಹೇಳುವುದು ಅನವಶ್ಯವೆಂದು ಸಭಾ ಸಮೇತರಾದ ಗವರ್ನರ್ ಜನರಲ್‌ರವರು ಯೋಚಿಸುತ್ತಾರೆ. ಇದೇನೋ ಸ್ಪಷ್ಟವಾಗಿ ಗೊತ್ತಾಗಿದೆ. ಆದುದರಿಂದ ಈಗ ಇಲಿಗಳು ಸೇರುವುದಕ್ಕೆ ಅವಕಾಶ ಕೊಡುವುದರಿಂದ ಉಂಟಾಗುವ ಅಪಾಯವನ್ನು ಜನಗಳಿಗೆ ತಿಳಿಯುವಂತೆ ಹೇಳಿ ಅವರ ರಕ್ಷಣೆಗೆ ಅವಶ್ಯವಾದ ಪ್ರಯತ್ನಗಳನ್ನು ಮಾಡುವಂತೆ ಜನಗಳಿಗೆ ಪ್ರೇರೇಪಿಸುವುದರ ಮೂಲಕ ಪ್ಲೇಗಿನ ಕಾರಣಗಳನ್ನು ತಿಳಿದಿರುವಷ್ಟರ ಮಟ್ಟಿಗೆ ಜನಗಳಿಗೆ ವಿವರಿಸುವ ಕೆಲಸವನ್ನು ಮೊದಲು ಮಾಡಬೇಕೆಂದು ಡಿಸ್ಟ್ರಿಕ್ಟ್ ಆಫೀಸರುಗಳಿಗೆ ಅಗತ್ಯವಾಗಿ ತಿಳಿಸಬೇಕೆಂದು ಸಭಾಸಮೇತರಾದ ಗವರ್ನರವರು ಅಪೇಕ್ಷಿಸುತ್ತಾರೆ. ಜನಗಳಿಗೆ ಬಲಾತ್ಕಾರ ಮಾಡಕೂಡದು, ಆದರೂ ಅವರು ಹೇಗೆ ನಡೆಯಬೇಕೊ ಆರೀತಿಯನ್ನೂ ಅವರಿಗೆ ತೋರಿಸದೆ ಅವರಿಗೆ ಬುದ್ಧಿವಾದವನ್ನೂ ಹೇಳದೆ ಸಹಾಯವನ್ನೂ ಮಾಡದೆ ಬಿಟ್ಟುಬಿಡಬಾರದು. ಪ್ಲೇಗಿನಿಂದ ಉಂಟಾಗುವ ಭಯಂಕರವಾದ ಮರಣಗಳನ್ನು ನೋಡಿದರೆ ಜನಗಳ ಸಂಗಡ ಕೂಡಿಯಾಡುವ ಪ್ರತಿ ಒಬ್ಬ ಸರ್ಕಾರಿ ಆಫೀಸರಿಗೂ ಅನುತಾಪ ಹುಟ್ಟುವುದೆಂದು ಸಭಾ ಸಮೇತರಾದ ಗವರ್ನರ್ ಜನರಲವರು ದೃಢವಾಗಿ ನಂಬುತ್ತಾರೆ. ಆದರೆ ಹಿಂದೆ ಇಂಥಾ ಅನುತಾಪ ಹುಟ್ಟಿದ್ದರೂ ಇದಕ್ಕೆ ಪ್ರತೀಕಾರ ಮಾಡುವುದು ಅಸಾಧ್ಯವೆಂದು ನಿರಾಶೆಯು ಹುಟ್ಟಿತು. ಈ ಜಾಡ್ಯದ ಸಂಗಡ ಹೋರಾಡುವುದರಲ್ಲಿ ಈಗಲೂ ಅನೇಕ ಕಷ್ಟಗಳಿವೆ. ಆದರೆ ಈಗ ಸಂಪಾದಿಸಿರುವ ತಿಳಿವಳಿಕೆಯಿಂದ ಪ್ಲೇಗನ್ನು ನಿವಾರಿಸುವುದಕ್ಕೆ ಇನ್ನೂ ಅವಕಾಶವಿರುವ ಹಾಗೆ ಸ್ಪಷ್ಟವಾಗಿ ತೋರುತ್ತದೆ. ಆದುದರಿಂದ ನಿರಂತರವಾಗಿ ಪ್ರಯತ್ನಗಳನ್ನು ಮಾಡಿದರೆ ಪ್ಲೇಗು ಸಂಪೂರ್ಣವಾಗಿ ನಿವಾರಣೆಯಾಗದೆ ಹೋದರೂ ಬಹಳ ಮಟ್ಟಿಗಾದರೂ ಕಡಮೆಯಾಗಬಹುದು. ಈ ಸಾಂಕ್ರಾಮಿಕ ರೋಗವನ್ನು ಪರಿಹರಿಸುವುದಕ್ಕೆ ಎಲ್ಲರೂ ಒಟ್ಟಾಗಿ ಸೇರಿ ಮಾಡುವ ಪ್ರಯತ್ನದಲ್ಲಿ ಸ್ಥಳೀಯ ಸರ್ಕಾರದವರು ಉತ್ತಾಸೆಯನ್ನೂ ಸಹಾಯವನ್ನೂ ಮಾಡುವರೆಂದು ಸಭಾಸಮೇತರಾದ ಗವರ್ನರ್ ಜನರಲವರು ಸಂಪೂರ್ಣವಾಗಿ ನಂಬಿರುತ್ತಾರಲ್ಲದೆ ಅವರು ಆಡಳಿತಕ್ಕೆ ಸಂಬಂಧಪಟ್ಟ ವಿಶಿಷ್ಟ ಸಹಾಯವನ್ನೂ ತಮ್ಮ ಕೈಲಾದ ಮಟ್ಟಿಗೂ ಮಾಡಲು ಸಿದ್ಧವಾಗಿರುತ್ತಾರೆ."

ತಾರೀಖು 17ನೆ ಅಕ್ಟೋಬರ್ 1907.

ನಂ. 3284—ಸ್ಯಾ. 82-07-2, ಇಂಡಿಯಾ ದೇಶದಿಂದ ಬಸ್ರಾ ಪಟ್ಟಣಕ್ಕೆ ಹೋಗುವ ಷಿಯಾ ಯಾತ್ರಿಕರ ಮೇಲೆ ತುರ್ಕಿ ದೇಶದವರು 10 ಪೈಯಾಸ್ಟರುಗಳ ತೆರಿಗೆಯನ್ನು ವಸೂಲ್ಮಾಡುವ ವಿಷಯದಲ್ಲಿ, ಘನವನ್ನೈದಿದ ಮೈಸೂರು ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರ 1907ನೆ ಇಸವಿಯ ಸೆಪ್ಟಂಬರ್ 17ನೆ ತಾರೀಖಿನ 5939ನೆ ನಂಬರಿನ ಲೆಟರಿನೊಡನೆ ತಲುಪಿದ ಅಡಿಯಲ್ಲಿ ಕಂಡ ಕಾಗದಗಳನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ.

"ಇಂಡಿಯಾ ಸರ್ಕಾರದ ಅಂಡರ್ ಸೆಕ್ರೆಟೆರಿಯವರಾದ, ಜೆ. ಸಿ. ಫರ್ಗುಸನ್ ಎಸ್ಕ್ವೈಯರ್ ಅವರಿಂದ
ಹೋಂ ಇಲಾಖಾ ಸ್ಯಾನಿಟೆರಿ.

"ನಂ. 1330—1337.

ತಾರೀಖು 24ನೆ ಆಗಸ್ಟು 1907, ಮೊಕ್ಕಾಂ ಸಿಂಲಾ.

ಅಯ್ಯಾ.—

ಪರ್ಷಿಯಾ ಮತ್ತು ತುರ್ಕಿ ದೇಶಗಳ ಸರಹದ್ದಿನಲ್ಲಿ ನಡೆಸುತ್ತಿರುವ ಆರೋಗ್ಯ ಸಂಬಂಧವಾದ ಏರ್ಪಾಟುಗಳ ವಿಷಯವಾಗಿಯೂ ಇಂಡಿಯಾ ದೇಶದಿಂದ ಬಸ್ರಾ ಪಟ್ಟಣಕ್ಕೆ ಹೋಗುವ ಷಿಯಾ ಯಾತ್ರಿಕರ ಮೇಲೆ 10 ಪೈಯಾಸ್ಟರುಗಳ ತೆರಿಗೆಯನ್ನು ತುರ್ಕಿದೇಶದವರು ವಸೂಲ್ಮಾಡುತ್ತಿರುವ ವಿಷಯವಾಗಿಯೂ, ಕಾನ್‌ಸ್ಟಾಂಟಿನೋಪಲಿನಲ್ಲಿರುವ ಇಂಡಿಯಾ ಚಕ್ರವರ್ತಿಗಳ ಕಡೆ ರಾಯಭಾರಿಗಳಿಂದ ಬಂದ 1907ನೆ ಇಸವಿಯ ಜೂನ್ 12ನೆ ತಾರೀಖಿನ 70ನೆ ನಂಬರ್ ಲೆಟರಿನ ನಕಲನ್ನು ತಮಗೆ ಕಳುಹಿಸಬೇಕೆಂತ ಅಪ್ಪಣೆಯಾಗಿದೆ. ಸದರಿ ತೆರಿಗೆಯ ವಸೂಲಾತಿ ಬಗ್ಗೆ ಶಿಫಾರಸ್ಸು ಆಗಿರುವುದನ್ನು ಕುರಿತು ಸರಿಯಾಗಿ ಪ್ರಕಟಿಸಬೇಕೆಂದು ಪ್ರಾರ್ಥಿಸುತ್ತೇನೆ.

ನಂ. 70, ಕಮರ್ಷಲ್ (19815)

ತೆರಾಪಿಯಾ, 12ನೆ ಜೂನ್ 1907.

ಅಯ್ಯಾ.—

ಕಳೆದ ತಿಂಗಳ 21ನೆ ತಾರೀಖಿನಲ್ಲಿ ಕಾನ್‌ಸ್ಟಾಂಟಿನೋಪಲಿನ ಹೆಲ್ತ್‌ಬೋರ್ಡ್ ಯಾ ಆರೋಗ್ಯ ಸಭೆಯ ಮೀಟಿಂಗಿನಲ್ಲಿ "ದಿ ಆರ್ಗನೈಸೇಷನ್ ಆಫ್ ದಿ ಸರ್ವಿಸ್ ಆಫ್ ಕಂಟ್ರೋಲ್ ಕಮಿಷನ್ಸ್" ರಿಪೋರ್ಟು ಓದಲ್ಪಟ್ಟು ಮಂಜೂರಾಯಿತು. ಸದರಿ ರಿಪೋರ್ಟಿನ ನಕಲನ್ನು ಇದರ ಜತೆಯಲ್ಲಿ ಕಳುಹಿಸಿರುತ್ತೇನೆ.

ಸದರಿ ರಿಪೋರ್ಟಿನಲ್ಲಿ ತುರ್ಕಿ ಮತ್ತು ಪರ್ಷಿಯಾ ದೇಶಗಳ ಸರಹದ್ದಿನಲ್ಲಿರುವ ಸ್ಯಾನಿಟೆರಿ ಶಿಬ್ಬಂದಿಯ ಏರ್ಪಾಟಿನಲ್ಲಿ ಕೆಲವು ಬದಲಾವಣೆಗಳು ಸೇರಿರುತ್ತವೆ; ಅಲ್ಲದೆ, ಟೈಗ್ರಿಸ್ ಮತ್ತು ಯೂಫ್ರೆಟೀಸ್ ನದಿಗಳ ಸಂಗಮದಲ್ಲಿ ಕುರ್ನಾ ಪಟ್ಟಣದ ಹತ್ತಿರ ಒಂದು ಸ್ಯಾನಿಟೆರಿ ಸ್ಟೇಷನನ್ನು ಇಡುವ ಬಗ್ಗೆ ಸದರಿ ರಿಪೋರ್ಟಿನಲ್ಲಿ ಏರ್ಪಾಟಾಗಿದೆ.

(1) ಪರ್ಷಿಯಾ ಕೊಲ್ಲಿಯ ರೇವು ಪಟ್ಟಣದಿಂದ ಹಡಗವನ್ನೇರಿ ಬಸ್ರಾಪಟ್ಟಣಕ್ಕೆ ಹೋಗುವ ಎಲ್ಲಾ ಯಾತ್ರಿಕರೂ ಪ್ರಯಾಣಿಕರೂ ಸಹ ಆ ಪಟ್ಟಣಕ್ಕೆ ತಲುಪಿದ ತರುವಾಯ "ಸ್ಯಾನಿಟರಿ ಡ್ಯೂಸ್ ಟ್ಯಾರಿಫ್" ಎಂಬ ಸುಂಕದ ಪಟ್ಟಿಯು 4ನೆ ಪ್ರಕರಣದಲ್ಲಿ ವಿವರಿಸಿರುವ ಮೇರೆಗೆ ಇನ್ನು ಮುಂದೆ 10 ಪೈಯಾಸ್ಟರುಗಳ ತೆರಿಗೆಯನ್ನು ಕೊಡಲು ಬದ್ಧರಾಗತಕ್ಕದ್ದೆಂತಲೂ, (2) ಷಿಯಾ ಯಾತ್ರಿಕರು ಯಾವ ಸ್ಥಳದಿಂದ ಬಂದವರೇ ಆಗಲಿ, ಮೇಲ್ಕಂಡ 10 ಪೈಯಾಸ್ಟರುಗಳ ತೆರಿಗೆಗೆ ಇನ್ನು ಮೇಲೆ ಗುರಿಯಾಗುವಂತೆ ಸದರಿ ಪ್ರಕರಣವನ್ನು ತಿದ್ದುಪಾಟು ಮಾಡುವ ಬಗ್ಗೆ ಹೆಲ್ತ್ ಬೋರ್ಡಿನವರು ಮಿಕ್ಸೆಡ್ ಕಮಿಷನ್ ಎಂಬ ಮತ್ತೊಂದು ಕಮಿಷನನ್ನು ಕೇಳಬೇಕೆಂತಲೂ ಮೇಲ್ಕಂಡ ಕಮಿಷನಿನವರು ಶಿಫಾರಸ್ಸು ಮಾಡಿದರು.

ಈಗ ಆ ಪ್ರಕರಣದಲ್ಲಿ ಬರೆದಿರುವ ಮೇರೆಗೆ ಪರ್ಷಿಯಾ ದೇಶದಿಂದ ಬಂದ ಷಿಯಾ ಯಾತ್ರಿಕರು ಮಾತ್ರ ಸದರಿ ತೆರಿಗೆಯನ್ನು ಕೊಡಬೇಕಾಗಿದೆಯೇ ಹೊರತು ಇಂಡಿಯಾ ದೇಶದಿಂದ ನೆಟ್ಟಗೆ ಬಸ್ರಾ ಪಟ್ಟಣಕ್ಕೆ ಹೋಗತಕ್ಕ ಷಿಯಾ ಯಾತ್ರಿಕರು ಅದನ್ನು ಕೊಡಬೇಕಾಗಿಲ್ಲ; ಅದುದರಿಂದ ಇವರೂ ಕೂಡಾ ಸದರಿ ತೆರಿಗೆಗೆ ಒಳಪಡುವಂತೆ ಮಾಡುವುದಕ್ಕೋಸ್ಕರವೇ (2) ನೆ ನಂಬರ ಶಿಫಾರಸ್ಸನ್ನು ಮಾಡಲಾಯಿತು.

ತಾರೀಖು 30ನೆ ಅಕ್ಟೋಬರ 1907.

ನಂ. 3725—ಸ್ಯಾ. 78—07—7, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಬಂಕೀಪುರ	ಶಿವಮೊಗ್ಗ
ಕಾಚಿನಕಟ್ಟೆ	ಡಿಟೋ
ಕೋಡಿಕೊಪ್ಪ	ಹೊನ್ನಾಳಿ
ದೇವನಾಯಕನಹಳ್ಳಿ	ಡಿಟೋ
ಗಂಜಿಗನಹಳ್ಳಿ	ಡಿಟೋ
ಸುರಹೊನ್ನೆ	ಡಿಟೋ
ಅರೇಹಳ್ಳಿ	ಡಿಟೋ
ದೊಡ್ಡ ಎರೆಹಳ್ಳಿ	ಡಿಟೋ
ಗೊಲ್ಲರಹಳ್ಳಿ	ಡಿಟೋ
ಚಿಕ್ಕ ಎರೆಹಳ್ಳಿ	ಡಿಟೋ
ಅರಬಗಟ್ಟೆ	ಡಿಟೋ
ಸಾಳಂಗ	ಡಿಟೋ
ಕೊಡಚಗೊಂಡನಹಳ್ಳಿ	ಡಿಟೋ
ಹರಳಹಳ್ಳಿ	ಡಿಟೋ
ಮುಗ್ಗಹಳ್ಳಿ	ಡಿಟೋ
ಮಲಂದೂರು	ನಾಗರ
ಶಿರಗೆರೆ	ಕುಂಸಿ ಸಬ್ ತಾ||
ಎಡವಳ	ಡಿಟೋ
ಬಿನವಳ್ಳಿ	ಡಿಟೋ
ಮಂಡಿಗಟ್ಟ	ಡಿಟೋ
ನಾಗರಭಾವಿ	ಡಿಟೋ
ಹಿಟ್ಟೂರು	ಡಿಟೋ
ಗಬ್ಬೂರು	ಡಿಟೋ

ತಾರೀಖು 30ನೆ ಅಕ್ಟೋಬರ 1907.

ನಂ. 3728—ಸ್ಯಾನಿಟರಿ 73—07—6, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

	ಸ್ಥಳ.	ತಾಲ್ಲೂಕು.
1.	ಬೂದನೂರ	ಮಂಡ್ಯ.
2.	ಹೊರಳು	ಡಿಟೋ
4.	ಗುತ್ತಲು	ಡಿಟೋ
4.	ಅಂಬಳೆ	ನಂಜನಗೂಡು
5.	ಹಳ್ಳರೆ	ಡಿಟೋ
6.	ಹರದನಹಳ್ಳಿ	ಚಾಮರಾಜನಗರ.
7.	ವರುಣ	ಮೈಸೂರು.

ತಾರೀಖು 17ನೆ ಅಕ್ಟೋಬರ್ 1907.

ನಂ. 3308—ಲೋ. ಬೋ. 69-07-2, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಗ್ರಾಮಗಳನ್ನು, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ ರೆಗ್ಯುಲೇಷನಿನ ಉದ್ದೇಶಗಳಿಗಾಗಿ, 1907ನೆ ಇಸವಿಯ ನವಂಬರ್ 1ನೆ ತಾರೀಖಿನಿಂದ ಯೂನಿಯನ್‌ಗಳಾಗಿ ಏರ್ಪಡಿಸಲಾಗುವುದು ಎಂದು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ:—

ಚಿತ್ರದುರ್ಗ ತಾಲ್ಲೂಕು.
1. ಪರ್ಮಸಾಗರ.
2. ಚಿಕ್ಕೊಂಡನಹಳ್ಳಿ
3. ಹಿರೆಗುಂಟನೂರು

ಚಳ್ಳಕೆರೆ ತಾಲ್ಲೂಕು.
4. ಪರಶುರಾಮಪುರ
5. ಹಿರೆಹಳ್ಳಿ

ಹೊಸದುರ್ಗ ತಾಲ್ಲೂಕು.
6. ಬೆಳಗೂರು

ಮೊಳಕಾಲ್ಮುರು ತಾಲ್ಲೂಕು.
7. ನಾಗಸಮುದ್ರ

ಹಿರಿಯೂರು ತಾಲ್ಲೂಕು.
8. ಮರಡಿಹಳ್ಳಿ

ದಾವಣಗೆರೆ ತಾಲ್ಲೂಕು.
9. ಹದಡಿ
10. ಲೋಕಿಕೆರೆ

ಹೊಳಲ್ಕೆರೆ ತಾಲ್ಲೂಕು.
11. ರಾಮಗಿರಿ
12. ತಾಳ್ಯ
13. ದುಮ್ಮಿ

ಜಗಳೂರು ತಾಲ್ಲೂಕು.
14. ಬಿದರಕೆರೆ, ನಿಬಗೂರು ಸೇರಿ.
15. ಅಸಗೋಡು

ಹರಿಹರ ಸಬ್ ತಾಲ್ಲೂಕು.
16. ಬನುವಳ್ಳಿ

ಕ್ಯಾಂಪು ವೈಸೂರು, ತಾರೀಖು 19ನೆ ಅಕ್ಟೋಬರು 1907.

ನಂ. ಸಿ. 59, ಅರಸೀಕೆರೆ ತಾಲ್ಲೂಕಿನ ಅಮಲ್ದಾರ್ ಮಿ॥ ಕೆ. ಶ್ರೀನಿವಾಸರಾಯರು ಒಂದು ತಿಂಗಳ ಪ್ರಿವಿಲೇಜ್ ರಜಾ ಮೇಲೆ ಇರುವ ಕಾಲದಲ್ಲಿ ಸದರಿ ತಾಲ್ಲೂಕಿನ ಚಾರ್ಜಿನಲ್ಲಿರುವಂತೆ ನೇಮಿಸಲ್ಪಟ್ಟ ಮಿ॥ ಜಿ. ಎಸ್. ರಾಮಸ್ವಾಮೈಯ್ಯಂಗಾರ್‌ರಿಗೆ, ಇವರು ಸದರಿ ತಾಲ್ಲೂಕಿನ ಚಾರ್ಜಿನಲ್ಲಿ ಇರುವ ಪರ್ಯಂತ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆ, ಮೂರನೆ ತರಗತಿಯ ಮಾಜಿಸ್ಟ್ರೇಟೆ ಅಧಿಕಾರಗಳನ್ನು ಕೊಟ್ಟಿದೆ.

ತಾರೀಖು 20ನೆ ಅಕ್ಟೋಬರ್ 1907.

ನಂ. ಸಿ. 67, ತುಮಕೂರು ಡಿಸ್ಟ್ರಿಕ್ಟಿನ ಪೋಲೀಸು ಸೂಪರಿಂಟೆಂಡೆಂಟ್ ಮಿ॥ ವೈ. ವಿ. ಕೃಷ್ಣಮೂರ್ತಿ, ಬಿ.ಏ., ಯವರಿಗೆ, ವೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಅಕ್ಟೋಬರು 25ನೆ ತಾರೀಖಿನಿಂದ ಎರಡು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 20ನೆ ಅಕ್ಟೋಬರ್ 1907.

ನಂ. ಸಿ. 71, ಬೆಂಗಳೂರು ಡಿಸ್ಟ್ರಿಕ್ಟಿನ ಪೋಲೀಸು ಸೂಪರಿಂಟೆಂಡೆಂಟ್ ಮಿ॥ ಎಲ್. ಕೃಷ್ಣರಾಯರಿಗೆ, ವೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಅಕ್ಟೋಬರು 25ನೆ ತಾರೀಖಿನಿಂದ ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 21ನೆ ಅಕ್ಟೋಬರ್ 1907.

ನಂ. 1018—7419, ಕೋಲಾರ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜನಿಯರ್ ಮಿ॥ ಪಿ. ಟಂಡೋಜಿರಾವ್, ಎಲ್. ಸಿ. ಇ., ಯವರಿಗೆ ಸನ್ 1907ನೆ ಅಕ್ಟೋಬರ್ 25ನೆ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಎಂ. ಸಿಂಗಾರವೇಲು,

ಫಾರ್ ವೈಸೂರು ಗವರ್ನಮೆಂಟು ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.

51

ಮೈಸೂರು ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 44.

ಬೆಂಗಳೂರು, ಗುರುವಾರ, ನವೆಂಬರ್ ತಾ॥ 7, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಇಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾವ ಇಸ್ತಿಹಾರಗಳು ವಗೈರ ಕಾಲಸ್ಥಿತೀ ರಿಪೋರ್ಟ್‌ಗಳು; ಪ್ರೋಸ್ಪೆಕ್ಟಸ್ ನೋಟೀಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾವ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 30ನೆ ಅಕ್ಟೋಬರ್ 1907.

ನಂ. 3789—ಸ್ಯಾ. 22-07-20, ಘನವನ್ನೈದಿದ ಮೈಸೂರು ರೆಸಿಡೆಂಟರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿಯ ಅಕ್ಟೋಬರು 28ನೆ ತಾರೀಖಿನ 1063—ಪಿ. ನಂಬರಿನ ಇಂಡಾರ್ಸ್‌ಮೆಂಟನೊಡನೆ ತಲುಪಿದ ಇದರಡಿ ಕಂಡ ಮದರಾಸು ಸರ್ಕಾರದ ಇಸ್ತಿಹಾರ್ನಾಮೆಯನ್ನು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:

ರಂಜಾನ್ ತಿಂಗಳ ಕಡೆಯ ಭಾಗವು ಅನಂತರ ಬರುವ ಷವ್ವಾಲ್ ತಿಂಗಳ ಮೊದಲ ವಾರವೂ ಸೇರಿ ಆಗುವ, ಎಂದರೆ, 1907ನೆ ಇಸವಿಯ ಅಕ್ಟೋಬರು 25ರಿಂದ 1907ನೆ ಇಸವಿಯ ನವೆಂಬರ್ 15ರ ವರೆಗೆ ಈ ಎರಡು ದಿವಸಗಳೂ ಸೇರಿ ಆಗುವ ಕಾಲದಲ್ಲಿ ನೀಲಗಿರಿ ಡಿಸ್ಟ್ರಿಕ್ಟಿನಲ್ಲಿರುವ ಉಟಕಮಂಡಿಗೆ (ಉದಕಮಂಡಲಕ್ಕೆ) ಭಿಕ್ಷುಕರೂ ತಿರುಕರೂ ಪ್ರವೇಶಿಸುವುದಕ್ಕಾಗಲಿ ಅಥವಾ ಅಲ್ಲಿ ನಿಲ್ಲುವುದಕ್ಕಾಗಲಿ ಅವಕಾಶಕೊಟ್ಟರೆ ಆ ಊರಿನಲ್ಲಿ ಪ್ಲೇಗು ಉಂಟಾಗುವುದಾಗಿ ಸಭಾಸಮೇತರಾದ ಗವರ್ನರಿಗೆ ತೃಪ್ತಿಕರವಾಗಿ ತಿಳಿದಿರುವುದರಿಂದ:

ಸಾಂಕ್ರಾಮಿಕ ಜಾಡ್ಯಗಳನ್ನು ಕುರಿತ 1897ನೆ ಇಸವಿಯ ಆಕ್ಟಿನ ಮೇರೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸಮೇತರಾದ ಗವರ್ನರವರು, 1907ನೆ ಇಸವಿಯ ಅಕ್ಟೋಬರು 25ರಿಂದ ನವೆಂಬರು 15ರ ವರೆಗೆ, ಈ ಎರಡು ದಿವಸಗಳೂ ಸೇರಿ, ಯಾವ ಭಿಕ್ಷುಕರೂ ತಿರುಕರೂ ಉದಕಮಂಡಲಕ್ಕೆ ಪ್ರವೇಶಿಸಕೂಡದೆಂದೂ ಅಥವಾ ಅಲ್ಲಿ ನಿಲ್ಲಕೂಡದೆಂದೂ ನಿಷೇಧಿಸಿರುತ್ತಾರೆ; ಅಲ್ಲದೆ ಮೇಲಂಡ ಕಾಲದಲ್ಲಿ ಉದಕಮಂಡಲಕ್ಕೆ ಹೋಗುತ್ತಿರುವ ಅಥವಾ ಹೋಗುತ್ತಿದ್ದಾನೆಂದು ನಂಬಲು ಕಾರಣವಿರುವ ಯಾವ ಭಿಕ್ಷುಕನಾಗಲಿ ತಿರುಕನಾಗಲಿ, ನೀಲಗಿರಿ, ಮಲಬಾರು ಮತ್ತು ಕೊಯಿಮತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ತಮಗೆ ಯುಕ್ತ ತೋರಿದಂತೆ ಈ ಬಗ್ಗೆ ಗೊತ್ತುಮಾಡುವಂಥಾ ಸ್ಥಳಗಳಲ್ಲಿ ನಿಲ್ಲಬೇಕೆಂದೂ, ಅವರು ಗೊತ್ತುಮಾಡುವಂಥಾ ಅಧಿಕಾರಿಗಳ ಅಪ್ಪಣೆಯಮೇರೆ ಅವರು ಗೊತ್ತುಮಾಡುವ ಕ್ಯಾಂಪುಗಳಲ್ಲಿ ಇರಬೇಕೆಂದೂ ತಾತ್ಕಾಲಿಕವಾಗಿ ವಿಧಿಸಿರುತ್ತಾರೆ.

ತಾರೀಖು 1ನೆ ನವೆಂಬರ 1907.

ನಂ. 3937—ಸ್ಯಾನಿಟರಿ 18-07-4, ಹಾಸನ ಡಿಸ್ಟ್ರಿಕ್ಟ್ ಅರಕಲಗೂಡು ತಾಲ್ಲೂಕಿನ ರಾಮನಾಥಪುರಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅನಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಡಿಸೆಂಬರ 8ನೆ ತಾರೀಖಿನಿಂದ 1ನೇ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 4ನೆ ನವೆಂಬರ 1907.

ನಂ. 4016—ಸ್ಯಾನಿಟರಿ (22-07)—26, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ:

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಸುಬ್ರಹ್ಮಣ್ಯ ಷಷ್ಠಿ ಉತ್ಸವ.	ಸುಬ್ರಹ್ಮಣ್ಯ.	ಉಪ್ಪಿನಂಗಡಿ.	ದಕ್ಷಿಣ ಕನ್ನಡೀಯ.	24—11—07	11—12—07	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1907ನೆ ಇಸವಿ ಅಕ್ಟೋಬರ 29ನೆ ಮರ್ರುವಿನ 1072ನೆ ನಂಬರು ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ದೀಪೋತ್ಸವ.	ಧರ್ಮಸ್ಥಳ.	ಡಿಟೋ	ಡಿಟೋ	24—11—07	4—12—07	ಡಿಟೋ
				ಉಭಯ ದಿನಗಳೂ ಸೇರಿ.		
ಏಕಾದಸಿ ಉತ್ಸವ ಮತ್ತು ಸಂತೆ.	ಗುರುವಯೂರು.	ಪೊನ್ನಾನಿ	ಮಲಬಾರ	10—12—07	5—1—08	ಡಿಟೋ 1068ನೆ ನಂ. ಮೆಮೋ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 4ನೆ ನವೆಂಬರ 1907.

ನಂ. 4017—ಸ್ಯಾನಿಟರಿ (22-07)-27, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ದನಗಳ ಸಂತೆ ನಡೆಸುವುದನ್ನು ನಿಷೇಧಿಸಿರುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ದನಗಳ ಸಂತೆ	ಕುಲಗುಂಡ.	ಉಪ್ಪಿನಂಗಡಿ.	ದಕ್ಷಿಣ ಕನ್ನಡೀಯ.	19—11—07	15—12—07	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1907ನೆ ಅಕ್ಟೋಬರು
				ಉಭಯ ದಿನಗಳೂ ಸೇರಿ.		

ತಾರೀಖು 22ನೆ ಅಕ್ಟೋಬರ್ 1907.

ನಂ. 3552—ಮ್ಯು. 52-07-6, ಮೃತಪಟ್ಟ ಮಿ॥ ಎಸ್. ವಾಸುದೇವಾಚಾರ್‍ರ್ಯಗೆ ಬದಲಾಗಿ, ವರ್ತಕ ಮಿ" ನೀಲಂ ರಾಮಂಣನವರನ್ನು ಕಲ್ಲೂರುಕಟ್ಟೆ ಊರಿನ ಮ್ಯುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಿಸಿ ಇದೆ.

ತಾರೀಖು 30ನೆ ಅಕ್ಟೋಬರ್ 1907.

ನಂ. ಜಿ. 1337—ಪೋಲೀಸು 85-07, ಪೋಲೀಸು ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಟಿಪ್ಪು ಸುಲ್ತಾನ್ ಅಲಿ ಖಾನರವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ 177ನೆ ನಿಬಂಧನೆಯ ಮೇರೆ, 1907ನೆ ಇಸವಿಯ ಅಕ್ಟೋಬರು 25ನೆ ತಾರೀಖಿನಿಂದ ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 30ನೆ ಅಕ್ಟೋಬರ್ 1907.

ನಂ. 3753—ಎಲ್. ಬಿ. 52-07-4, ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿ ಯೂನಿಯನಿನ ಪಂಚಾಯಿತರನ್ನು ಪುನಃ ಏರ್ಪಡಿಸುವ ಬಗ್ಗೆ ಇದರಡಿ ಕಂಡ ದೊಡ್ಡ ಮನುಷ್ಯರನ್ನು ಮೋಕರರ್ ಮಾಡಿದೆ ಎಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿ ಇದೆ:—

1. ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ... ... ಚೇರ್ಮನ್
2. ಮಿ॥ ಶಾನುಭೋಗ ಸೀತಾರಾಮಯ್ಯ ... ... ಮೆಂಬರ್
3. ,, ವೆಂಕಟಪ್ಪ ಶೆಟ್ಟಿ ... ... ಡಿಟ್ಟೋ
4. ,, ರಾಮಶಾಸ್ತ್ರಿ ... ... ಡಿಟ್ಟೋ
5. ,, ತಿಮ್ಮಶೆಟ್ಟಿ ... ... ಡಿಟ್ಟೋ
6. ,, ಶಾನುಭೋಗ ರಾಮಂಣ ... ... ಡಿಟ್ಟೋ
7. ,, ಕೆಂಚಶೆಟ್ಟಿ ... ... ಡಿಟ್ಟೋ

ತಾರೀಖು 30ನೆ ಅಕ್ಟೋಬರ್ 1907.

ನಂ. 3766—ಎಲ್. ಬಿ. 123-06, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:— ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಚಾಮರಾಜನಗರ ತಾಲ್ಲೂಕು ಮೂಡನಕೂಡು ಗ್ರಾಮದ ಬಿಡಾವಣೆ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮೀಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ: ಪೂರ್ವ.	ಚತುರ್ಸೀಮೆ: ಪಶ್ಚಿಮ.	ಚತುರ್ಸೀಮೆ: ಉತ್ತರ.	ಚತುರ್ಸೀಮೆ: ದಕ್ಷಿಣ
ಮೈಸೂರು	ಚಾಮರಾಜನಗರ	ಹರದ	ಮೂಡನಕೂಡು	ಚನ್ನೇಗೌಡನ ಮಗ ಮತ್ತು ವೆಂಕಟಮ್ಮನ ಮಗ	280	ಖುಷ್ಕಿ	ಎ. ಗು. 4 0	ರೂ. ಅ. 3 0	ಎ. ಗು. 4 0	ಬೀಳು	ಬೀಳು ಮತ್ತು ಗ್ರಾಮ ಠಾಣ	ಸರ್ವೆ ನಂ. 278	ಗ್ರಾಮ ಠಾಣ

ತಾರೀಖು 30ನೆ ಅಕ್ಟೋಬರ್ 1907.

ನಂ. 3768—ಎಲ್. ಬಿ. 492-06—6, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಚೌಲುಕಟ್ಟೆ ಗ್ರಾಮದ ಬಿಡಾವಣೆಗಾಗಿ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಪಟ್ಟಾ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಚತುರ್ಗಡಿ. ಪಶ್ಚಿಮ.	ಚತುರ್ಗಡಿ. ಉತ್ತರ.	ಚತುರ್ಗಡಿ. ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ತುಮಕೂರು	ಚಿಕ್ಕನಾಯಕನಹಳ್ಳಿ	ಹಂದನಕೆರೆ	ಚೌಲುಕಟ್ಟೆ	ನೀಲ ಬಿನ್ ದೊಡ್ಡತಿಮ್ಮ ...	87—1	ಖುಷ್ಕಿ	2 23	2 4	0 36	ಈ ನಂಬರಿನಲ್ಲಿ ಉಳಿದ ಭಾಗ	ಗ್ರಾಮ ನಿವೇಶನ	ಸರ್ವೆ 90ನೆ ನಂಬರಿನ 2ನೆ ಭಾಗ	ಸರ್ವೆ ...ನೆ ನಂಬರಿನಲ್ಲಿ ಉಳಿದ ಭಾಗ
				ಮುದ್ದ ಬಿನ್ ಸಣ್ಣಯ್ಯ ...	90 1	ಡಿಟೋ	3 15	2 12	0 38	ಡಿಟೋ	ಡಿಟೋ	ಸರ್ವೆ 24ನೆ ನಂಬರ್ ಗೋಮಾಳ ಜಮೀನು	ಸರ್ವೆ 90ನೆ ನಂಬರಿನ 2ನೆ ಪೋಡ್ ನಂಬರು
				ಸಿದ್ದರಾಮ ಬಿನ್ ಸಣ್ಣನಂಜೇಗೌಡ.	90—2	ಡಿಟೋ	2 28	2 4	0 37	ಡಿಟೋ	ಡಿಟೋ	ಸರ್ವೆ 91ನೆ ನಂಬರಿನ 1ನೆ ಪೋಡ್ ನಂಬರ್	ಸರ್ವೆ ನಂಬರ್ 7
				ಜಮಾ ...			...	...	2 31				

ತಾರೀಖು 1ನೆ ನವೆಂಬರ್ 1907.

ನಂ. 3940—L. B. 46-07-6, ಸ್ 1907ನೆ ಇಸವಿಯ ಜೂನ್ 27ನೆ ತಾರೀಖಿನ ಗೆಜೆಟ್ಟಿನ 1ನೆ ಭಾಗದ 317ನೆ ಪುಟದಲ್ಲಿ ಪ್ರಕಟವಾಗಿರುವ 1907ನೆ ಇಸವಿಯ ಜೂನ್ 17ನೆ ತಾರೀಖಿನ 11936—ಎಲ್. ಬಿ. 408-06-2ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಜಗಳೂರು ತಾಲ್ಲೂಕು ಬಿಳಿಚೋಡು ಯೂನಿಯನ್ನಿನ ಸಭಿಕರ ಹೆಸರುಗಳ ಪೈಕಿ—

"6. ಮಿ॥ ನಂಜಪ್ಪ, ವ್ಯವಸಾಯಗಾರ, ಬಿಳಿಚೋಡು" ಎಂಬುವುದಕ್ಕೆ ಬದಲಾಗಿ "6. ಮಿ॥ ರುದ್ರಪ್ಪ ಬಿನ್ ನಂಜಪ್ಪ, ವ್ಯವಸಾಯಗಾರ, ಬಿಳಿಚೋಡು" ಎಂದು ತಿದ್ದಿಕೊಳ್ಳತಕ್ಕದ್ದು.

ತಾರೀಖು 4ನೆ ನವೆಂಬರ್ 1907.

ನಂ. 4018—ಮೆಡಿಕಲ್ (67-07)—2, ಸ್ 1906ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನಿನ 2ನೆ ಪ್ರಕರಣದ (1ನೆ ಕಲಮಿಗನುಸಾರವಾಗಿ, ಈ ದಿವಸದಿಂದ ಮತ್ತು ಈ ದಿವಸದ ತರುವಾಯ ಒಂದು ವರ್ಷದ ವರೆಗೆ, ಕೋಲಾರದ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನ ಅಧಿಕಾರಕ್ಕೊಳಪಟ್ಟಿರುವ ಸ್ಥಳೀಯ ಪ್ರದೇಶದಲ್ಲಿ, ಸಿಡುಬು ಸಾಕ್ರೋಣವು ಅವಶ್ಯಕವಾಗಿರತಕ್ಕದ್ದೆಂದು ಈ ಮೂಲಕ ಪ್ರಕಟಿಸಿ ಇದೆ.

ತಾರೀಖು 26ನೆ ಅಕ್ಟೋಬರು 1907.

ನಂ. ಸಿ. 91—ಲ್ಯಾ. ರೆ. 20-07-9, ಸರ್ಕಾರಿ ಕೆಲಸದ ಅನುಕೂಲತೆಯ ಬಗ್ಗೆ ಇದರಡಿ ಕಂಡ ಅಮಲ್ದಾರರುಗಳ ವರ್ಗಾವರ್ಗಿಗಳನ್ನೂ ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ:—

1. ಮಿ॥ ಪಿ. ಸುಬ್ಬರಾಯಲು ನಾಯಡು, ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕಿಗೆ—ರಜಾ ಮುಗಿದ ತರುವಾಯ ಕೆಲಸದಮೇಲೆ ಹಾಜರಾಗತಕ್ಕದ್ದು.

2. ಮಿ॥ ವಿ. ಎನ್. ಗುರುರಾವ್, ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕಿಗೆ—ರಜಾ ಮುಗಿದ ತರುವಾಯ ಕೆಲಸದಮೇಲೆ ಹಾಜರಾಗತಕ್ಕದ್ದು.

3. ಮಿ॥ ಎನ್. ಶ್ರೀನಿವಾಸರಾವ್, ಹೊಸಕೋಟೆಯಿಂದ ಎಡತೊರೆ ತಾಲ್ಲೂಕಿಗೆ—ಈಗಿನ ಚಾರ್ಜನ್ನು ಇನ್ನೊಬ್ಬರು ವಹಿಸಿದ ತರುವಾಯ ವರ್ಗ ಮಾಡಲ್ಪಟ್ಟ ಕೆಲಸದಮೇಲೆ ಹಾಜರಾಗತಕ್ಕದ್ದು.

4. ಮಿ॥ ಎನ್. ರಾಮರಾವ್, ಮೈಸೂರು ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕಿನಿಂದ ತಿ. ನರಸೀಪುರ ತಾಲ್ಲೂಕಿಗೆ—ಈಗಿನ ಚಾರ್ಜನ್ನು ಇನ್ನೊಬ್ಬರು ವಹಿಸಿದ ತರುವಾಯ ವರ್ಗ ಮಾಡಲ್ಪಟ್ಟ ಕೆಲಸದಮೇಲೆ ಹಾಜರಾಗತಕ್ಕದ್ದು.

ತಾರೀಖು 28ನೆ ಅಕ್ಟೋಬರ್ 1907.

ನಂ. ಫೈ. 2005—ಜಿ. ಎಫ್. 240-07-2, ಕಂಟ್ರೋಲರ ಕಛೇರಿಯಲ್ಲಿ ತರಬೇತಾಗುತ್ತಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್, ಮಿ॥ ಡಿ. ಶ್ರೀನಿವಾಸೈಯಂಗಾರ್ರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 177ನೆ ನಿಬಂಧನೆಯ ಮೇರೆ, 1907ನೆ ಇಸವಿಯ ನವೆಂಬರ್ 7ರಿಂದ 16ರ ವರೆಗೆ, ಈ ಎರಡು ದಿವಸಗಳೂ ಸೇರಿ 10 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 28ನೆ ಅಕ್ಟೋಬರ್ 1907.

ನಂ. ರೆ. 2685—ಲ್ಯಾ. ರೆ. 33-07-4, ಸ್ 1907ನೆ ಇಸವಿ ಜುಲೈ 17ನೆ ತಾರೀಖಿನ ರೆ. 422—ಲ್ಯಾ. ರೆ. 33-07-2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್, ಮಿ॥ ಎ. ಸುಬ್ರಹ್ಮಣ್ಯ ಐಯ್ಯರಿಗೆ ಕೊಟ್ಟ 10 ದಿವಸಗಳ ಪ್ರಿವಿಲೇಜ್ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 18ನೆ ಅಕ್ಟೋಬರ್ 1907.

ನಂ. ರೆ. 2622—ಲ್ಯಾ. ರೆ. 203—07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಮನೆಗಳನ್ನು ಕಟ್ಟುವ ಬಗ್ಯಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರ್	ಖುಷ್ಕ ಅಥವ ಬಾಗಾಯತು	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತ್ತುಗಡಿ			
										ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಮೈಸೂರು	ನಂಜನಗೂಡು	ಚಿಕ್ಕಯ್ಯನ ಛತ್ರ	ಬದರಗೂಡು	ಪ್ಯಾದೆನ್ನುಲ	209-2	ಖುಷ್ಕ	ಎ. 2 ಗು. 8	ರೂ. 2	ಎ. 2 ಗು. 8	ಸರ್ಕಾರಿ ಬಾವಿಗೆ ಹೋಗುವ ದಾರಿ	ಗ್ರಾಮ ಠಾಣಾ	ಸರ್ವೆ ನಂಬರ್ 208 ಮತ್ತು 209	ಗ್ರಾಮ ಠಾಣಾ

ತಾರೀಖು 28ನೆ ಅಕ್ಟೋಬರು 1907.

ನಂ. ರೆ. 2674—ಲ್ಯಾ. ರೆ. 103-07-6, ಸ್ 1907ನೆ ಇಸವಿಯ ಸೆಪ್ಟಂಬರು 25ನೆ ತಾರೀಖಿನ ರೆ. 2243—ಲ್ಯಾ. ರೆ. 103-07-4ನೆ ನಂಬರಿನೊಡನೆ ಮುಗಿದ ಇಸ್ತಿಹಾರ್ನಾಮೆಗಳಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ವಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ. ಯವರಿಗೆ ಕೊಟ್ಟ 3 ತಿಂಗಳ ಒಟ್ಟು ಸೇರಿಸಿದ ರಜಾವನ್ನು ಇನ್ನೂ ಒಂದು ತಿಂಗಳ ವರೆಗೆ ಹೆಚ್ಚಿಸಿ ಇದೆ.

ಹುಕುಂ ಬಮೋಜಿಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ ವರ್ಕ್ಸ ಇಸ್ತಿಹಾರ್ನಾಮೆ.

ತಾರೀಖು 31ನೆ ಅಕ್ಟೋಬರ್ 1907.

1040—7596, ಮೈಸೂರು ಪಬ್ಲಿಕ ವರ್ಕ್ಸ ಇಲಾಖೆಯ ಇಂಜನಿಯರ್ ಸಿಬ್ಬಂದಿಯಲ್ಲಿ ಈ ಕೆಳಗೆ ನಮೂದಿಸುವ ಬಡ್ತಿಗಳನ್ನು ಹುಕುಂ ಮಾಡಲ್ಪಟ್ಟವೆ :—

ಹೆಸರು.	ಖಾಲಿ ತರಗತಿ.	ಭರ್ತಿ ಮಾಡಲ್ಪಟ್ಟ ತರಗತಿ.	ಬಡ್ತಿಯ ಸ್ವಭಾವ.	ಯಾವ ಲಾಗಾಯಿತು.	ಷರಾ.
ಮಿ|| ಬಿ. ಗರುಡಾಚಾರ್ಯ ...	ಅಸಿಸ್ಟೆಂಟ್ ಇಂಜನಿಯರ್, 3ನೆ ತರಗತಿ ...	ಅಸಿಸ್ಟೆಂಟ್ ಇಂಜನಿಯರ್, 2ನೆ ತರಗತಿ...	ಅಫಿಷಿಯೇಟಿಂಗ.	3—1—07	2ನೆ ತರಗತಿ ಆಸಿಸ್ಟೆಂಟ್ ಇಂಜನಿಯರ್, ಮಿ|| ಟಿ. ಎಸ್. ಶೇಷೈಯ್ಯಂಗಾರ್ರವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿ ಹೋದ ನಿಮಿತ್ಯ .... ಮಿ|| ಎಂ. ಎ. ಆನಂದಾಳ್ವಾರ್ ಯವರು 8-3-07 ಲಾಗಾಯಿತು ತಮ್ಮ ಕೆಲಸದಮೇಲೆ ವಾಪಸು ಹೋದ್ದರಿಂದ ಸದರಿಯವರು ಅಸಿಸ್ಟೆಂಟ್ ಇಂಜನಿಯರ್ 3ನೆ ತರಗತಿಯಲ್ಲಿರತಕ್ಕದ್ದು.
,, ಎಂ. ಎ. ಆನಂದಾಳ್ವಾರ್ ...	ಡಿಟೋ ...	ಡಿಟೋ ...	ಡಿಟೋ ...	8—3—07	
,, ಎಂ. ಆನಂದಾಳ್ವಾರ್ ...	ಸಬ್ ಅಸಿಸ್ಟೆಂಟ್ ಇಂಜನಿಯರ್ 1ನೆ ತರಗತಿ.	ಅಸಿಸ್ಟೆಂಟ್ ಇಂಜನಿಯರ್, 3ನೆ ತರಗತಿ...	ಡಿಟೋ ..	3—1—07	ಮಿ|| ಕೆ. ವಿ. ದೇಶಿಕಾಚಾರ್ಯ ಯವರು, 8-3-07ರಲ್ಲಿ ತಮ್ಮ ಕೆಲಸದಮೇಲೆ ಹೋದ್ದರಿಂದ ಸದರಿಯವರು ತಮ್ಮ ಕೆಲಸಕ್ಕೆ ಹೋಗತಕ್ಕದ್ದು.
,, ಕೆ. ವಿ. ದೇಸಿಕಾಚಾರ್ಯ ..	ಡಿಟೋ ...	ಡಿಟೋ ...	ಡಿಟೋ ...	8—3—07	ಮಿ|| ಟಿ. ಕೆ. ಅರುಣಾಚಲಂ ಐಯರ್ ಯವರು ಎಲೆಕ್ಟ್ರಿಕಲ್ ಡಿಪಾರ್ಟ್ಮೆಂಟಿನಿಂದ ಪಿ. ಡಬ್ಲ್ಯು. ಡಿಪಾರ್ಟ್ಮೆಂಟಿಗೆ ವರ್ಗ ಮಾಡಲ್ಪಟ್ಟಿದ್ದರಿಂದ ಸದರಿಯವರು 24-3-07 ಲಾಗಾಯಿತು ತಮ್ಮ ಕೆಲಸದಮೇಲೆ ಹೋಗತಕ್ಕದ್ದು.
,, ಟಿ. ಕೆ. ಅರುಣಾಚಲಂಐಯ್ಯರ್.	ಡಿಟೋ	ಡಿಟೋ ...	ಡಿಟೋ ...	8—3—07	23-3-07 ವರಿವಿಗೂ ದಿಗರ ಕೆಲಸದಲ್ಲಿದ್ದರು.
,, ಬಿ. ಸುಬ್ಬರಾವ್ ...	ಎಗ್ಸಿಕ್ಯೂಟಿವ ಇಂಜನಿಯರ್ 3ನೆ ತರಗತಿ.	ಎಗ್ಸಿಕ್ಯೂಟಿವ ಇಂಜನಿಯರ್, 2ನೆ ತರಗತಿ.	ಡಿಟೋ ..	24—4—07	ಫರ್ಲೋ ರಜಾದಮೇಲೆ ಹೋದ ಮೆ|| ವೈಟ್ಲಿ ಸಾಹೇಬರವರಿಗೆ ಬದಲಾಗಿ ಮಿ|| ವೈ. ಶ್ರೀನಿವಾಸ ರಾಯರನ್ನು ಈಸ್ಟರ್ನ್ ಸರ್ಕಲ್ ಅಫಿಷಿಯೇಟಿಂಗ ಸೂಪರ್ಇಂಟೆಂಡಿಂಗ ಇಂಜನಿಯರಾಗಿ ಮಾಡಿದ ನಿಮಿತ್ಯ.
,, ಕೆ. ಕೃಷ್ಣ ಅಯ್ಯಂಗಾರ್ ...	ಡಿಟೋ 4ನೆ ತರಗತಿ.	ಡಿಟೋ 3ನೆ ತರಗತಿ.	ಡಿಟೋ ...	24—4—07	
,, ಬಿ. ಬಿ. ಗರುಡಾಚಾರ್ಯ ...	ಅಸಿಸ್ಟೆಂಟ್ ಇಂಜನಿಯರ್ 2ನೆ ತರಗತಿ ...	ಅಸಿಸ್ಟೆಂಟ್ ಇಂಜನಿಯರ್, 1ನೆ ತರಗತಿ...	ಡಿಟೋ ...	24—4—07	ಹಂಗಾಮಿ ತರೀಕು 1ನೆ ತರಗತಿ ಅಸಿಸ್ಟೆಂಟ್ ಇಂಜನಿಯರ್ ಮಿ|| ಜೆಫ್. ಡಿ. ಘ್ಯಸ ಯುವರು ಅಫಿಷಿ

ತಾರೀಖು 30ನೆ ಅಕ್ಟೋಬರ 1907.

ನಂ. 1036—7536, ಚಿತ್ರದುರ್ಗ ಡಿವೀಜನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರ ಮೆ॥ ಬಿ. ನಂಜುಂಡಾರಾಧ್ಯ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸನ್1907ನೆ ಜುಲೈ 6ನೆ ತಾರೀಖು 615—4860ನೆ ನಂಬರ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಒಂದುವರೆ ತಿಂಗಳು ಪ್ರಿವಿಲೇಜ್ ರಜಾವನ್ನ ವಜಾ ಮಾಡಲ್ಪಟ್ಟಿದೆ.

ತಾರೀಖು 1ನೆ ನವಂಬರ 1907.

ನಂ. 1043—7618, ವಾಟರಸಪ್ಲೈ ಮತ್ತು ಸ್ಟೋರ್ಸ್ ಡಿವೀಜನಿಗೆ ಸೇರಿದ ಅಸಿಸ್ಟೆಂಟ ಇಂಜನಿಯರ ಮೆ॥ ಕೆ. ಶ್ರೀನಿವಾಸ ಐಯ್ಯಂಗಾರ ಯವರಿಗೆ ಮೈಸೂರು ಸರ್ವಿಸ ರೆಗ್ಯುಲೇಷನ್ಸ 177ನೆ ಆರ್ಟಿಕಲ್ ಅನುಸರಿಸಿ ಸನ್1907ನೆ ನವಂಬರ 1ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,

ಡಬ್ಲ್ಯೂ. ಮೆಕ್‌ಹರ್ಚ,

ಮೈಸೂರು ಗವರ್ನಮೆಂಟ ಪಬ್ಲಿಕ ವರ್ಕ್ಸ ಇಲಾಖಾ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು [ನಂ 45.

ಬೆಂಗಳೂರು, ಗುರುವಾರ, ನವೆಂಬರ್ ತಾ|| 14, ಸಃ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು, ಇವರುಗಳಿಂದ ಕೊಡ್ಲೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಸಗಳು.

3ನೆ ಭಾಗ—ಲೆಜಿಸಲೇಟವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು ೬ನೆ ನವಂಬರ 1907.

ನಂ. 4120—ಸ್ಯಾನಿಟರಿ 34-07-14, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1893ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ, ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

	ಸ್ಥಳ.	ತಾಲ್ಲೂಕು.
1.	ಕದಾಳು	ಆಲೂರು ಸಬ್ ತಾಲ್ಲೂಕು.
2.	ಹಳೆಮೊರಸು	ಡಿಟೋ
3.	ಹಂಚಹಳ್ಳಿ	ಡಿಟೋ
1.	ರಾಯಪುರ	ಬೇಲೂರು ತಾಲ್ಲೂಕು.
2.	ಮಾದಿಹಳ್ಳಿ	ಡಿಟೋ
1.	ಗೌನಹಳ್ಳಿ	ಹಾಸನ ತಾಲ್ಲೂಕು.
2.	ಬೈಲಹಳ್ಳಿ	ಡಿಟೋ
3.	ಮಲ್ಲೇನಹಳ್ಳಿ	ಡಿಟೋ

ತಾರೀಖು 12ನೆ ನವಂಬರ 1907.

ನಂ. 4377--ಸ್ಯಾನಿಟರಿ 22--07-31, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:— ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಜಾತ್ರೆಗೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ಗೆ.	ಅಧಿಕಾರ.
ಷಿಬ್ಬೂರು ಕೊಡಮನತಾಯ ದೇವಸ್ಥಾನದ ಸಾಂವತ್ಸರಿಕ ಜಾತ್ರೆ.	ದೇಲಂತಬೆಟ್ಟು.	ಮಂಗಳೂರು.	ದಕ್ಷಿಣಕನ್ನಡೀಯ.	10-12-07	22-12-07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ನವಂಬರು 8ನೆ ಮರ್ಕೂಂನ 1120-Pನೆ ನಂಬರು ಮೆಮೊ ಪ್ರಕಾರ.

ತಾರೀಖು 2ನೆ ನವಂಬರ 1907.

ನಂ. ಜು. 1368--ಪೋ. 81--07-3, ತುಮಕೂರು ಡಿಸ್ಟ್ರಿಕ್ಟಿನ ಹೆಡ್‌ಕ್ವಾರ್ಟರ್ ಇನ್ಸ್‌ಪೆಕ್ಟರ್ ಮಿ|| ಪಿ. ಆರ್. ಕಲ್ಯಾಣ ಸುಂದರ ಮೊದಲಿಯಾರ್‌ರನ್ನು 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ಕೆಲಸ ನೋಡುವಂತೆ ಮೊಕರರ್ಮಾಡಿ, 1907ನೆ ಇಸವಿಯ ಅಕ್ಟೋಬರ್ 20ನೆ ತಾರೀಖಿನ ಸಿ. 67ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಪ್ರಿವಿಲೇಜ್ ರಜಾ ಕೊಡಲ್ಪಟ್ಟ ಮಿ|| ವೈ. ವಿ. ಕೃಷ್ಣಮೂರ್ತಿ, ಬಿ.ಎ., ಯವರ ಗೈರ್‌ಹಾಜರಿಯಲ್ಲಿ, ಅಥವಾ ಇನ್ನೊಂದು ಹುಕುಂ ಕೊಡುವ ತನಕ, ತುಮಕೂರು ಡಿಸ್ಟ್ರಿಕ್ಟಿಗೆ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟಾಗಿ ಹಾಕಿ ಇದೆ.

ತಾರೀಖು 1ನೆ ನವಂಬರ 1907.

ನಂ. ಜು. 1372--ಕೊ. 78--07-5, ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ|| ಎ. ವೆಂಕಟರಾಯರಿಗೆ, 1907ನೆ ಇಸವಿಯ ಜೂನ್ 12ನೆ ತಾರೀಖಿನ ಜು. 3716--ಕೊ. 261--06-4ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಮಂಜೂರಾದ 1 ತಿಂಗಳು 4 ದಿವಸಗಳ ಪ್ರಿವಿಲೇಜ್ ರಜಾವಿನ ಜತೆಗೆ ಅವರಿಗೆ ಇನ್ನೂ ಹಕ್ಕಿರುವಷ್ಟು ಪ್ರಿವಿಲೇಜ್ ರಜಾವನ್ನೂ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 155 (i)ನೆ ಪ್ರಕರಣದ ಮೇರೆಗೆ 1908ನೆ ಇಸವಿಯ ಮೇ 1ನೆ ತಾರೀಖಿನ ವರೆಗೆ ಫರ್ಲೋ ರಜಾವನ್ನೂ ಕೊಟ್ಟಿದೆ.

ತಾರೀಖು 4ನೆ ನವಂಬರ 1907.

ನಂ. ಜು. 1390--ಕೊ. 124--07-3, 1904ನೆ ಇಸವಿಯ 2ನೆ ನಂಬರ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಇದರಡಿ ಕಂಡ ಮುನಸೀಫ಼ಗಳನ್ನು 2ನೆ ತರಗತಿಯ ಮಾಜಿಸ್ಟ್ರೇಟಗಳನ್ನಾಗಿ ಸರ್ಕಾರದವರು ಮೊಕರರ್ಮಾಡಿರುತ್ತಾರೆ :—

1. ಮಿ|| ಜಿ. ಶ್ರೀನಿವಾಸ ಐಯ್ಯರ್, ಬಿ. ಎ., ಬಿ. ಎಲ್., ಕೋಲಾರದ ಮುನಸೀಫ಼.
2. ,, ಎಂ. ನರಸಪ್ಪೈಯ್ಯ, ಬಿ.ಎ., ಬಿ.ಎಲ್., ಹೊಳೆನರಸೀಪುರದ ಮುನಸೀಫ಼.
3. ,, ಎಸ್. ವೆಂಕಟಕೃಷ್ಣಯ್ಯ, ಬಿ.ಎ., ಬಿ.ಎಲ್., ಸಾಗರದ ಮುನಸೀಫ಼.

ತಾರೀಖು 9ನೆ ನವಂಬರ 1907.

ನಂ. ಜು. 1438--ಕೋ. 125--07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177, 190 (b) i ಮತ್ತು iiನೆ ಪ್ರಕರಣಗಳ ಮೇರೆಗೆ ಹೊಳೆನರಸೀಪುರದ ಮುನಸೀಫ಼ ಮಿ|| ಎಂ. ನರಸಪ್ಪಯ್ಯನವರಿಗೆ 1907ನೆ ಇಸವಿಯ ಅಕ್ಟೋಬರ್ 25ನೆ ತಾರೀಖಿನಿಂದ ಅರ್ಧ ತಲುಬಿನಮೇಲೆ 7 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 11ನೆ ನವಂಬರ 1907.

ನಂ. ಜು. 1473--ಕೋ. 48--07-8, 1904ನೆ ಇಸವಿಯ 2ನೆ ನಂಬರ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೆ ಪ್ರಕರಣದ ಮೇರೆಗೆ ಶಿವಮೊಗ್ಗ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರ್ ಮತ್ತು 2ನೆ ತರಗತಿಯ ಮಾಜಿಸ್ಟ್ರೇಟಾದ ಮಿ|| ಆರ್. ಟಿ. ಮಹಾದೇವರಾಯರಿಗೆ, ಸದರಿ ತರಗತಿಯ ಮಾಜಿಸ್ಟ್ರೇಟಿಗೆ ಸರ್ಕಾರದವರು ಕೊಡಬಹುದಾದ ಹೆಚ್ಚಿಗೆ ಅಧಿಕಾರಗಳೆಂದು 4ನೆ ಷಡ್ಯೂಲಿನಲ್ಲಿ ವಿವರಿಸಿರುವ ಇದರಡಿ ಕಂಡ ಅಧಿಕಾರಗಳನ್ನು ಕೊಟ್ಟಿದೆ :—

(1) ಛಡಿ ಸಜಾ ವಿಧಿಸುವ ಅಧಿಕಾರ, 32ನೆ ಪ್ರಕರಣ.

(2) ದರ್ಯಾಫ್ತು ಬಗ್ಗೆ ಕಮಿಟ್ ಮಾಡುವ ಅಧಿಕಾರ, 206ನೆ ಪ್ರಕರಣ.

(3) ಪ್ರಥಮ ತಕ್ಸೀರುದಾರರ ವಿಷಯದಲ್ಲಿ ಹುಕುಂ ಮಾಡುವ ಅಧಿಕಾರ, 562ನೆ ಪ್ರಕರಣ.

ತಾರೀಖು 11ನೆ ನವಂಬರ 1907.

ನಂ. ಜು. 1474--ಕೋ. 113--07-2, 1904ನೆ ಇಸವಿಯ 2ನೆ ನಂಬರ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಹೊಳಲ್ಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟ್ ಮಿ|| ಅಬ್ದುಲ್ ಹಕೀಮ್‌ಯವರನ್ನು 2ನೆ ತರಗತಿಯ ಮಾಜಿಸ್ಟ್ರೇಟಾಗಿ ಮೊಕರರ್ಮಾಡಿ ಇದೆ.

ತಾರೀಖು 11ನೆ ನವಂಬರ 1907.

ನಂ. ಜ. 1475—ಪೋ. 34—07—6, ಸನ್ 1894ನೆ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ: ಇವರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಪೋಲೀಸು ಲೈನ್ಸ್ ಕಟ್ಟಡ ಕಟ್ಟುವ ಬಗ್ಗೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಾನ್ಸಿಲಿನ ವೈಸ್ ಪ್ರೆಸಿಡೆಂಟರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ವಿವರ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.				ಷರಾಯಿ.
							ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
ಬೆಂಗಳೂರು	ಬೆಂಗಳೂರು ಸಿಟಿ	ಬೆಂಗಳೂರು ಸಿಟಿ	ಚಾಮರಾಜಪೇಟೆ 1ನೇ ರೋಡು	ಸೈಯದ್ ಅಬ್ದುಲ್ ರಹಿಮಾನ್, ಎಕ್ಸೈಸ್ ಇನ್ಸ್ಪೆಕ್ಟರ್, ಮಾಲೂರು.	ಪುರಾ ನಿವೇಶನ ನಂಬರ 1115	ಚದರ ಗಜ. 360	ಪೋಲೀಸ್ ಸ್ಕ್ವೇರ್.	1116ನೆ ನಿವೇಶನ.	ಕನ್ಸರ್ವೆನ್ಸಿ ರಸ್ತೆ	ಕಾರಬೆಟ್ ವ್ಯಾಕ್ರ ರಸ್ತೆ	* ಇದನ್ನು ಸೆಕಂಡ ಜಮಾದಾರ ಖಾತೆದಾರನಿಗೆ ಸೇರಿದೆ
				ಅಹಮದ್ ಷರೀಫ್, ಅರಳೇಪೇಟೆ.	ಡಿಟೋ 1116	ಡಿಟೋ	1115ನೆ ನಿವೇಶನ.	1117ನೆ ಡಿಟೋ			
				ಮೊಹಿದೀನ್ ಷರೀಫ್ ...	ಡಿಟೋ *1117	ಡಿಟೋ	1116ನೆ ಡಿಟೋ	1118ನೆ ಡಿಟೋ			
				ಡಿಟೋ	ಡಿಟೋ 1118	ಡಿಟೋ	1117ನೆ ಡಿಟೋ	1119ನೆ ಡಿಟೋ			
				ಖಾಸಿಮುದ್ದೀನ್ ...	ಡಿಟೋ 1119	ಡಿಟೋ	1118ನೆ ಡಿಟೋ	1120ನೆ ಡಿಟೋ			
				ಮರ್ಹುಮ್ ಅಬ್ದುಲ್ ಅಜೀಜ್.	ಡಿಟೋ 1120	ಡಿಟೋ	1119ನೆ ಡಿಟೋ	1121ನೆ ಡಿಟೋ			

ತಾರೀಖು 1ನೆ ನವಂಬರ್ 1907.

ನಂ. ರೆ. 2749—ಫಾರೆಸ್ಟು. 88—07—2, ಶಿವಮೊಗ್ಗ ಡಿಸ್ಟ್ರಿಕ್ಟಿನ ಸಬ್ ಅಸಿಸ್ಟೆಂಟ್ ಫಾರೆಸ್ಟ್ ಕನ್ಸರ್ವೇಟರ್ ಮಿ॥ ಪಿ. ಎಸ್. ಗೋವಿಂದರಾಯರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 177ನೆ ನಿಬಂಧನೆಯ ಮೇರೆ, 1907ನೆ ಇಸವಿಯ ಅಕ್ಟೋಬರು 15ರಿಂದ ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 1ನೆ ನವಂಬರ್ 1907.

ನಂ. ರೆ. 2750—ಲ್ಯಾ. ರೆ. 16—07—6, 1907ನೆಯ ಇಸವಿಯ ಸೆಪ್ಟಂಬರ್ 14ನೆ ತಾರೀಖಿನ ರೆ. 2044—ಲ್ಯಾ. ರೆ. 16—07—4ನೆ ನಂಬರಿನಿಂದ ಆಖೈರಾದ ಇಸ್ತಹಾರ್ನಾಮೆಗಳಲ್ಲಿ ಎಲ್ಲಾ ಒಟ್ಟು ಒಂದು ತಿಂಗಳೂ 21 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟ ಗುಂಡಲ್‌ಪೇಟೆ ತಾಲ್ಲೂಕಿನ ಅಮಲ್ದಾರ್ ಮಿ॥ ಎ. ಕೃಷ್ಣಅರಸಿನವರು ಸದರಿ ರಜಾವನ್ನು 1907ನೆ ಇಸವಿ ಜುಲೈ 18ನೆ ತಾರೀಖಿನ ಪೂರ್ವಾಹ್ನದಿಂದ ಉಪಯೋಗಿಸಿಕೊಂಡು ಸೆಪ್ಟಂಬರ್ 7ನೆ ತಾರೀಖಿನ ಪೂರ್ವಾಹ್ನ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ, ಉಪಯೋಗಿಸಿಕೊಳ್ಳಲ್ಪಡದೆ ಉಳಿದಿರುವ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 1ನೆ ನವಂಬರ್ 1907.

ನಂ. ರೆ. 2757 ಲ್ಯಾ. ರೆ. 209—07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮನ್ನೆ ದೊಡ್ಡಕೆರೆಯ ಕೋಡಿಯ ಮುಂಭಾಗವನ್ನು ಅಗಲಮಾಡುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಖುಷ್ಕಿ ತರಿ ಬಾಗಾಯತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಸೀಮೆ			
								ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಬೆಂಗಳೂರು	ನೆಲಮಂಗಲ	ತ್ಯಾಮಗೊಂಡ್ಲು	ದೊಡ್ಡಬಿಂಗನಹಳ್ಳಿ	ಬೈರ ಬಿನ್ ಪುಟ್ಟಯ್ಯ.	44	ಖುಷ್ಕಿ	ಎ. ಗು. 0 4	ಸರ್ವೆ ನಂ. 22 ಕೆರೆಯ ಅಂಗಳ	ಕೆರೆಯ ಅಂಗಳ	ಕೆರೆಯ ಅಂಗಳ	ಸರ್ವೆ 44ರ ನಂಬರಿನ ಭಾಗ

ತಾರೀಖು 1ನೆ ನವಂಬರ್ 1907.

ನಂ. ರೆ. 2759—ಲ್ಯಾ. ರೆ. 210—07—3, ಸನ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಕಾನಕಾನಹಳ್ಳಿ ತಾಲ್ಲೂಕು ಚಿಕ್ಕ ಮರಲವಾಡಿ ಗ್ರಾಮದ ಬಿಡಾವಣೆಗಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕ್ಲೋಸ್‌ಪೇಟೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಖುಷ್ಕಿ ತರಿ ಬಾಗಾಯತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ		ಚತುರ್ಸೀಮೆ			
							ವಿಸ್ತೀರ್ಣ	ಕಂದಾಯ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಬೆಂಗಳೂರು	ಕಾನಕಾನಹಳ್ಳಿ	ಮರಳವಾಡಿ	ಚಿಕ್ಕ ಮರಳವಾಡಿ	ವೆಂಕಟರಾಮಯ್ಯ ಬಿನ್ ಅಣ್ಣಯ್ಯ	1	ಖುಷ್ಕಿ	ಎ. ಗು. 3 20	ರೂ. ಆ. ಪೈ. 3 0 0	ಕಾಲುದಾರಿ	ಸರ್ವೆ ನಂ. 121	ಸರ್ವೆ ನಂ. 2	ಗ್ರಾಮ ಠಾಣ

ತಾರೀಖು 7ನೆ ನವಂಬರ 1907.

ನಂ. ರೆ. 2816—ಲ್ಯಾ. ರೆ. 213-07—3, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ವಡಗೇನಹಳ್ಳಿಯಲ್ಲಿ ಒಂದು ತಾಲ್ಲೂಕು ಬ್ರಾಂಚು ಸ್ಕೂಲನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಗುಂ.				
ಬೆಂಗಳೂರು	ದೇವನಹಳ್ಳಿ	ವಡಗೇನಹಳ್ಳಿ	ವಡಗೇನಹಳ್ಳಿ	1. ಕಲ್ಲಂಣ ಬಿನ್ ಅಪ್ಪೆಸಾಮಪ್ಪ.	90-1	ಖುಷ್ಕಿ	12	ಸರ್ವೆ ನಂ. 91	ಸರ್ವೆ ನಂ. 86	ದೇವನಹಳ್ಳಿಗೆ ಹೋಗುವ ರಸ್ತೆ	ಸರ್ವೆ ನಂ. 89
				2. ವೀರಭದ್ರದೇವರ ಪೂಜಾರಿ.	91	ಡಿಟೋ	12	ಸರ್ವೆ ನಂ. 43, 44, 48 ಮತ್ತು ಒಂದು ಬಣಿ	ಸರ್ವೆ ನಂ. 90	ಡಿಟೋ	ಡಿಟೋ

ತಾರೀಖು 7ನೆ ನವಂಬರ 1907.

ನಂ. ರೆ. 2818—ಲ್ಯಾ. ರೆ. 214--07-3, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಸಿರಾ ತಾಲ್ಲೂಕಿನ ಕಗ್ಗಲಡು ಗ್ರಾಮದ ಚಿಕ್ಕೆರೆಯ ದುರಸ್ತಿಗೋಸ್ಕರ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮದ್ದಗಿರಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯಿತು.	ಪೂರ್ತಿ ವಿಸ್ತೀರ್ಣ.		ಕಂದಾಯ.		ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಆ.	ಎ.	ಗು.				
ತುಮಕೂರು	ಸಿರಾ	ನಾದೂರು	ಕಗ್ಗಲಡು	1. ಜಜಣ್ಣ (ಖಾತೇದಾರ್) ಕೆಣ್ಣನರಸಪ್ಪ (ಈಗಿನ ಒಡೆಯ)	125	ಖುಷ್ಕಿ	23	31	13	0	23	31	ಸ. ನಂ. 126	ಸ. ನಂ. 124	ಸ. ನಂ. 7 ಮತ್ತು 8	ಸ. ನಂ. 127
				2. ಕರಿಯಬಿನ್ ತಿಮ್ಮ	126	ಡಿಟೋ	17	4	9	8	17	4	ಸ. ನಂ. 142 ಮತ್ತು 143	ಸ. ನಂ. 125	ಸ. ನಂ. 5	ಸ. ನಂ. 127 ಮತ್ತು 141
					2		40	35	21	8	40	35				

ಹುಕುಂ ಖಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್ ಇಸ್ತಿಹಾರ್ನಾಮೆ.

ತಾರೀಖು 4ನೆ ನವಂಬರ್ 1907.

ನಂ. 1054—7706, ಮೈಸೂರು ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನ ಅಪ್ಪರ್ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ ಇದರಡಿ ಕಂಡ ಹಂಗಾಮಿ ಬಡ್ತಿಗಳನ್ನು ಹುಕುಂ ಮಾಡಲ್ಪಟ್ಟಿದೆ :—

ಡಿವಿಜನ್.	ಹೆಸರು.	ಖಾಲಿ ತರಗತಿ.	ಭಡ್ತಿ ಮಾಡಲ್ಪಟ್ಟ ತರಗತಿ.	ಯಾವ ಲಾಗಾಯಿತು.	ಷರಾ.
ಛಾನಲ್ಸ್ ...	ಮೆ|| ಎಲ್. ಕೆ. ಸ್ವಾಮಿನಾಥ ಐಯ್ಯರ್.	ಸೂಪರ್ ವೈಜರ್, 2ನೆ ತರಗತಿ ...	ಸೂಪರ್‌ವೈಜರ್, 1ನೆ ತರಗತಿ, ಅಫಿಷಿಯೇಟಿಂಗ್.	8—8—07	1ನೆ ತರಗತಿ ಸೂಪರ್‌ವೈಜರ್ ಮತ್ತು ಆನರರಿ ಅಸಿಸ್ಟೆಂಟ್ ಆದ ಮಿ|| ಎ. ನಲ್ಲಿನಾಯಗ ಮೊದಲಿಯಾರ್ ಯವರು ರಜಾದಮೇಲೆ ಹೋದ ನಿಮಿತ್ತ.
ಹಾಸನ ..	,, ಎ. ವಿ. ಕೃಷ್ಣಸ್ವಾಮಿ ಪಿಳ್ಳೆ.	ಡಿಟೋ 3ನೆ ತರಗತಿ ..	ಸೂಪರ್‌ವೈಜರ್, 2ನೆ ತರಗತಿ	ಡಿಟೋ	
ಕೋಲಾರ ...	,, ಟಿ. ಜಿ. ಕಿಂಗ್	ಓವರ್ಸಿಯರ್, 1ನೆ ತರಗತಿ	ಡಿಟೋ 3ನೆ ತರಗತಿ ...	ಡಿಟೋ	
ಸ್ಯಾನಿಟೇರಿ	ಎಂ. ಜಿ. ಸಿಂಗರಾಚಾರ್ ..	ಡಿಟೋ 2ನೆ ತರಗತಿ	ಓವರ್ಸಿಯರ್ 1ನೆ ತರಗತಿ	ಡಿಟೋ	
ವಾಟರ್ ಸಪ್ಲೈ ಮತ್ತು ಸ್ಟೋರ್ಸ್.	ಟಿ. ನರಸಿಂಹ ಐಯ್ಯಂಗಾರ್ ...	ಡಿಟೋ 3ನೆ ತರಗತಿ	ಡಿಟೋ 2ನೆ ತರಗತಿ	ಡಿಟೋ	
ಮೈಸೂರು	ಮೆ|| ಕೆ. ಆನಂದರಾವ್	ಡಿಟೋ 1ನೆ ತರಗತಿ	ಸೂಪರ್‌ವೈಜರ್, 3ನೆ ತರಗತಿ ...	12—8—07	3ನೆ ತರಗತಿ ಸೂಪರ್‌ವೈಜರ್ ಮಿ|| ಬಿ. ರಘುನಾಥ ಐಯ್ಯಂಗಾರ್ ಯವರು ರಜಾದಮೇಲೆ ಹೋದ ನಿಮಿತ್ತ.
ಶಿವಮೊಗ್ಗ ...	ಡಿ. ನಂಜುಂಡೈಯ್ಯ	ಡಿಟೋ 2ನೆ ತರಗತಿ ...	ಓವರ್ಸಿಯರ್ 1ನೆ ತರಗತಿ ...	ಡಿಟೋ	
ಡಿಟೋ ...	ವಿ. ನಾಗರತ್ನ ಮೊದಲಿಯಾರ್ ..	ಡಿಟೋ 3ನೆ ತರಗತಿ	ಡಿಟೋ 2ನೆ ತರಗತಿ	ಡಿಟೋ	

ಹುಕುಂ ಬಮೋಜಿಬ್,

ಡಬ್ಲ್ಯು. ಮೆಕ್‌ಹಚಿನ್,

ಮೈಸೂರು ಗವರ್ನ್‌ಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.

ಮೈಸೂರ ಗೆಜೆಟ್.

[ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ 46.

ಬೆಂಗಳೂರು, ಗುರುವಾರ, ನವೆಂಬರ್ ತಾ|| 21, ಸ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫೀಸರಗಳು, ಫಾರೆಸ್ಟು, ಡೈರೆಕ್ಟರ್ ವ ಎಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿಯರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜಿಯರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರ್ಗಳಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರ ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 8ನೆ ನವಂಬರ 1907.

ನಂ. 4120—ಸ್ಯಾನಿಟರಿ 34-07-14, ಸಮಸ್ತ ಜನರಕ್ಷಿತಿಕೆ ವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವ್ವದೇನಂದರೆ :— ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳ ಮೂಲಕ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.				ತಾಲ್ಲೂಕು.
1. ಕಡಾಳು	..	..	...	ಆಲೂರು ಸಬ್ ತಾಲ್ಲೂಕು.
2. ಹಳೆಮೊರಸು	..	..	..	ಡಿಟೋ
3. ಹಂಚಿಹಳ್ಳಿ	..	...	...	ಡಿಟೋ
1. ರಾಯಪುರ	..	..	..	ಬೇಲೂರು ತಾಲ್ಲೂಕು.
2. ಮಾದಿಹಳ್ಳಿ	..	..	...	ಡಿಟೋ
1. ಗಂಗೇನಹಳ್ಳಿ	..	...	...	ಹಾಸನ ತಾಲ್ಲೂಕು.

ತಾರೀಖು 18ನೆ ನವಂಬರ್ 1907.

ನಂ. 4580—ಸ್ಯಾನಿಟರಿ 22—07—33, ಘನವನ್ನೈದಿಧ ಮೈಸೂರು ರೆಸಿಡೆಂಟರ ಮೊದಲನೆ ಅಸಿಸ್ಟೆಂ ಇಸವಿಯ ನವಂಬರ್ 9ನೆ ತಾರೀಖಿನ 1137ನೆ ನಂಬರ್ ಇಂಡಾರ್ಸುಮೆಂಟಿನೊಡನೆ ತಲಪಿದ ಇದರಡಿ ಕಂಡ ಮದರಾ ಇಸ್ತಿಹಾರ್ನಾಮೆಯನ್ನು. ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:

ಬರುವ ಆರುದ್ರಾದರ್ಶನೋತ್ಸವಕಾಲದಲ್ಲಿ ದಕ್ಷಿಣ ಆರ್ಕಾಟು ಡಿಸ್ಟ್ರಿಕ್ಟಿನ ಚಿದಂಬರಂ ತಾಲ್ಲೂಕಿನಲ್ಲಿರುವ ಚಿದಂ ಗು ಹಸುಲಿರುವುದಾಗಿ ಪ್ರಸಿದ್ಧಪಡಿಸಲ್ಪಟ್ಟಿರುವ ಬಳ್ಳಾರಿ, ಕೊಯಿಮತ್ತೂರು, ಮಲಬಾರ್, ಸೇಲಂ, ಮತ್ತು ನೀಲಗಿ ರಿಂದಲೂ, ಇತರ ಭಾಗಗಳಿಂದಲೂ, ಜನರು ಹೋಗುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳದಲ್ಲಿ ಪ್ಲೇಗುರೋಗ ಉಂ ಯವಿರುವುದಾಗಿ ಸಭಾಸಮೇತರಾದ ಗವರ್ನರಿಗೆ ತೃಪ್ತಿಕರವಾಗಿ ಕಂಡುಬಂದಿರುವುದರಿಂದ:

ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ 1897ನೆ ಇಸವಿಯ ಆಕ್ಟಿನ ಮೇರೆಗೆ ಕೊಡಲ್ಪಟ್ಟ ಅಧಿಕಾರಗ ವುದರಲ್ಲಿ ಸಭಾಸಮೇತರಾದ ಗವರ್ನರವರು 1907ನೆ ಇಸವಿಯ ಡಿಸೆಂಬರು 6ರಿಂದ 20ರ ವರೆಗೆ, ಎರಡು ದಿನ ಸದರಿ ಉತ್ಸವಕ್ಕೆ ಸದರಿ ಭಾಗಗಳಿಂದ ಜನರು ಬರಕೂಡದೆಂದು ನಿಷೇಧಿಸಿರುತ್ತಾರಲ್ಲದೆ ಸದರಿ ಉತ್ಸವಕ್ಕೆ ಹೋ ಅಥವಾ ಹೋಗಬೇಕೆಂದಿರುವುದಾಗಿ ನಂಬಲ್ಪಡುವ ಯಾವ ಮನುಷ್ಯನಿಗಾದರೂ ಸದರಿ ತಾರೀಖುಗಳ ಮಧ್ಯೆ ರೈಲು ಯಾಣ ಮಾಡುವುದಕ್ಕೆ ಟಿಕೆಟ್ಟುಗಳನ್ನು ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿಯೂ ಮದರಾಸು ರೈಲು ಮಾರ್ಗದಲ್ಲಿರುವ ಗುಡ ಮುಳನೂರು, ಪಡನ್ನೂರು, ಎಟ್ಟುಕೋಟ್ಟೆ, ಮಾಹಿ ಮತ್ತು ತಲಚೇರಿ ಸ್ಟೇಷನುಗಳಲ್ಲಿಯೂ ದಕ್ಷಿಣ ಇಂಡಿಯಾ ರೈ ರುವ ಅಲಪ್ಪಕ್ಕಂ, ಪುದುಚತ್ರಂ, ಪೋರ್ಟೋನೋವೊ, ಕಿಲ್ಲೈ, ಚಿದಂಬರಂ, ಕೊಲರೂನ್ (ಕೊಳ್ಳಿಡ) ಮತ್ತು ಳಿಗೆ ಮಾರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಉತ್ಸವಕ್ಕೆ ಹೋಗುವ ಜನರು ವಾಪಸು ಕಳುಹಿಸಲ್ಪಡುವರ

ತಾರೀಖು 18ನೆ ನವಂಬರ್ 1907.

ನಂ. 4581—ಸ್ಯಾನಿಟರಿ 22—07—34, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿ ದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ಹಸುಲಿರು ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		
				ಇಂದ.	ಗೆ.	
ಕಿಜಾರಿನಲ್ಲಿ ನಡೆಯುವ ಉತ್ಸವ ಮತ್ತು ದನಗಳ ಸಂತೆ.	ಕಿಜಾರು ...	ಕುರುಂಬ್ರನಾಡು.	ಮಲಬಾರ್.	5-12-07	20-12-07	[illegible]
				ಉಭಯ ದಿನಗಳೂ ಸೇರಿ.		

ತಾರೀಖು 12ನೆ ನವಂಬರ್ 1907.

ನಂ. 4378—ಮ್ಯು. 230—07—2, ಕೋಲಾರದ ಊರಿನಲ್ಲಿ ಒಂದು ಕಚೆರಾಗಾಡಿ ತಿರುಗುವ ದಕ್ಕೂ, ಒಂದು ರಸ್ತೆಯನ್ನು ಒಳ್ಳೆಯ ಸ್ಥಿತಿಗೆ ತರುವುದಕ್ಕೂ ಬೇಕಾಗಿದ್ದ ಕೆಲವು ಸ್ವತ್ತುಗಳನ್ನು ಪಡೆಯುವ ಕಮಿಷನರಿಗೆ ಅಧಿಕಾರ ಕೊಡುವ, 1906ನೆ ಇಸವಿಯ ಡಿಸೆಂಬರು 6ನೆ ತಾರೀಖಿನ ಮೈಸೂರು ಗೆಜೆಟ್ಟು ಪುಟದಲ್ಲಿ ಪ್ರಕಟವಾಗಿರುವ 1906ನೆ ಇಸವಿಯ ಡಿಸೆಂಬರು 5ನೆ ತಾರೀಖು 4696—ಮ್ಯು. 197—06— ಸರ್ಕಾರಿ ಇಸ್ತಿಹಾರ್ನಾಮೆಯನ್ನು ರದ್ದುಮಾಡಿ ಸಮಸ್ತರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದ ಸ್ವತ್ತುಗಳನ್ನು ಪಡೆಯಲು ಹುಕುಂ ಹೊಂದುವ ಬಗ್ಗೆ ಕೋಲಾರ ಡಿಸ್ಟ್ರಿಕ್ಟಿನ ಪ್ರೊಬೆಷನ್ ಅಸಿಸ್ಟೆಂಟ್ ಕಮಿಷನ ಬರಾಯರಿಗೆ ಅಧಿಕಾರ ಕೊಟ್ಟಿದೆ.

ತಾರೀಖು 12ನೆ ನವಂಬರ್ 1907.

ನಂ. 4380—ಎಡ್ಯು. 115—07—2, ಮೈಸೂರು ಸರ್ಕಾರಿನ ಸ್ಕೂಲುಗಳ ಇನ್ಸ್ಪೆಕ್ಟರ್ ಮಿ|| ಎಂ ರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ನಿಬಂಧನೆಯ ಮೇರೆ, 1907ನೆ ಇಸವಿಯ ಅಕ್ಟೋಬ ನಿಂದ 5 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿತು.

ತಾರೀಖು 16ನೆ ನವಂಬರ್ 1907.

ನಂ. 4537—Med. 282—06, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 155ನೆ ಪ್ರಕರಣದ ಸರ್ಜನ್ ಮಿ|| ಸಿ. ಜಿ. ಹನುಮಂತಸಿಂಗರವರಿಗೆ, 1907ನೆ ಇಸವಿಯ ಮಾರ್ಚಿ ತಿಂಗಳಲ್ಲಿ ಅವರು ರಜಾ

ತಾರೀಖು 18ನೆ ನವಂಬರು 1907.

593—Ml. 50—07-4, ಮೃತಪಟ್ಟ ಮಿ|| ಮೈಲಾರಯ್ಯ ಮತ್ತು ಮಿ|| ಅಂಚಪ್ಪನವರಿಗೆ ಬದಲಾಗಿ, ಪ್ಲೀಡರ ಸಿಂಗರಾಯರನ್ನೂ ಗಂಜಾಂನಲ್ಲಿ ರೋಮನ್ ಕ್ಯಾಥಲಿಕ್ ಪಾದ್ರಿಯಾಗಿರುವ ರೆವರೆಂಡ್ ಪಿ. ಎಫ್. ಲಾರೆಂಟರವರನ್ನೂ ದ ಮುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಕರನ್ನಾಡಿ ಇದೆ.

ತಾರೀಖು 11ನೆ ನವಂಬರ 1907.

ಸ್ಥಿ. 2266—ಜಿ. ಫೈ. 111—07-4, ಗವರ್ನಮೆಂಟ ಕಂಟ್ರೋಲರ ಮತ್ತು ಅಧಿಕಾರ ಪ್ರಯುಕ್ತವಾದ ಫೈ ಸ್ಟ್ರೆಟರಿ ಮಿ|| ಯು. ಎಲ್. ಮುಜುಮ್ದಾರ ಯವರಿಗೆ, ಕ್ರಿಸ್‌ಮಸ್ ರಜಾ ದಿವಸಗಳನ್ನೂ ಉಪಯೋಗಿಸಿಕೊಳ್ಳಬಹು ಂ ಸಿ, 1907ನೆ ಇಸವಿ ನವಂಬರ 12ನೆ ತಾರೀಖಿನಿಂದ 6 ವಾರಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅವರು ರಜಾವಿನ ಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ತನಕ, ಅಸಿಸ್ಟೆಂಟ ಕಂಟ್ರೋಲರ ರಾಜಶೆಟ್ಟಿಯವರು ತಮ್ಮ ಕೆಲಸದ ಜತೆಗೆ ಕಂಟ್ರೋಲರ ಆಫೀಸಿನ ಚಾರ್ಜಿನಲ್ಲಿ ಇರತಕ್ಕದ್ದು, ಮತ್ತು ಮಿ|| ಬಿ. ಯ್ಯಂಗಾರ್‍ರವರು ಫೈನಾನ್ಶಲ್ ಸೆಕ್ರೆಟರಿಯವರ ಆಫೀಸಿನ ಕೆಲಸವನ್ನು ನೋಡತಕ್ಕದ್ದು.

ತಾರೀಖು 13ನೆ ನವಂಬರ 1907.

. 2968—ಫಾ. 31-07-17, 1907ನೆ ಇಸವಿಯ ಸೆಪ್ಟಂಬರ 13ನೆ ತಾರೀಖಿನ ಕ. 1997—ಫಾ. 31-07-13ನೆ ಜಾರಿ ಇಸ್ತಿಹಾರ್‌ನಾಮೆಯಲ್ಲಿ ಫಾರೆಸ್ಟ್ ಅಸಿಸ್ಟೆಂಟ ಕನ್ಸರ್ವೇಟರ ಮಿ|| ಬಿ. ರಾಮಸ್ವಾಮಿ ಐಯ್ಯರಿಗೆ ಕೊಟ್ಟ ಎರಡು ಲೇಜ್ ರಜಾವನ್ನು ಈ ಮೂಲಕ ಇನ್ನೂ ಹತ್ತು ದಿವಸಗಳಿಂದ ಹೆಚ್ಚಿಸಿ ಇದೆ.

ತಾರೀಖು 13ನೆ ನವಂಬರ 1907.

. 2984—ಲ್ಯಾ. ರೆ. 120—07-4, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ, ಚನ್ನ ದ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಆಕ್ಟಿಂಗ್ ಅಸಿಸ್ಟೆಂಟ ಕಮಿಷನರ ಮಿ|| ಎಂ. ಲಕ್ಷ್ಮಣಶಾಸ್ತ್ರಿ, ಬಿ. ಎ. ಯವ ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಅವರು ರಜಾವಿನಮೇಲೆ ಇರುವಾಗ ಅಥವಾ ಇನ್ನೊಂದು ಹುಕುಂ ಕೊಡುವ ತನಕ, ಹಾಸನದ ಡಿಸ್ಟ್ರಿಕ್ಟಿನ ಡಿಸ್ಟ್ರಿ ಆಫಿಸರ ಮಿ|| ಎಂ. ರಂಗರಾವ್, ಬಿ. ಎ., ಯವರು ತಮ್ಮ ಕೆಲಸದ ಜತೆಗೆ ಚನ್ನರಾಯಪಟ್ಟಣ ಸಬ್ ಡಿವಿಜನಿನ ತಕ್ಕದ್ದು ಮತ್ತು 2ನೆ ತರಗತಿಯ ಮ್ಯಾಜಿಸ್ಟ್ರೇಟಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ಹುಕುಂ ಬಮೋಜಿಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

67

ಮೈಸೂರ ಗೆಜೆಟ್.

ಸಂ: 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ 47.

ಬೆಂಗಳೂರು, ಗುರುವಾರ, ನವೆಂಬರ್ ತಾ|| 28, ಸ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಯಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅಪ್ರಾಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೇ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 8ನೆ ನವಂಬರ್ 1907.

ನಂ. 4120—ಸ್ಯಾನಿಟರಿ 34-07-14, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.		ತಾಲ್ಲೂಕು.
1.	ಕದಾಳು	ಆಲೂರು ಸಬ್ ತಾಲ್ಲೂಕು.
2.	ಹಳೆಮೊರಸು	ಡಿಟೋ
3.	ಹಂಚಹಳ್ಳಿ	ಡಿಟೋ
1.	ರಾಯಪುರ	ಬೇಲೂರು ತಾಲ್ಲೂಕು.
2.	ಮಾದಿಹಳ್ಳಿ	ಡಿಟೋ
1.	ಗೌನಹಳ್ಳಿ	ಹಾಸನ ತಾಲ್ಲೂಕು.
2.	ಬೈಲಹಳ್ಳಿ	ಡಿಟೋ
3.	ಮಲ್ಲೇನಹಳ್ಳಿ	ಡಿಟೋ

ತಾರೀಖು 21ನೆ ನವೆಂಬರ 1907.

ನಂ. 4667—ಸ್ಯಾನಿಟೆರಿ 22-07—35, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನೆಂ ದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ರಥೋತ್ಸವ	ಕುಡುವಯೂರು	ಪಾಲಘಾಟ.	ಮಲಬಾರ.	10-12-07.	25-12-07	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1907ನೆ ನವೆಂಬರು 13ನೆ ಮುರ್ತ್ಯಂನ 1161ನೆ ನಂಬರ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		

ತಾರೀಖು 21ನೆ ನವೆಂಬರ 1907.

ನಂ. 4668—ಸ್ಯಾನಿಟೆರಿ 103-07—4, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನೆಂ ದರೆ:—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶವೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಗುಂಕರಹಳ್ಳಿ	ಮಧ್ಗಿರಿ.
ಸಿಂಕಾಪುರ	ಡಿಟೋ

ತಾರೀಖು 23ನೆ ನವೆಂಬರ 1907.

ನಂ. 4735—ಸ್ಯಾನಿಟರಿ 106—07-2, ಮೈಸೂರು ನಗರದಲ್ಲಿ ಅಬ್ಸರ್ವೇಷನ ಯಾ ಜನಗಳನ್ನು ವೈದ್ಯರು ಪರೀಕ್ಷೆ ಮಾಡುವ ಕ್ರಮವನ್ನು ಜಾರಿಯಲ್ಲಿ ತರುವ ಬಗ್ಯೆ ಅಲ್ಲಿನ ರೈಲ್ವೆ ಸ್ಟೇಷನನ್ನು ಇನ್ಸ್ಪೆಕ್ಷನ ಸ್ಟೇಷನ ಯಾ ಪರೀಕ್ಷೆ ಮಾಡುವ ಸ್ಥಳವಾಗಿ ಏರ್ಪಡಿಸುವ ಬಗ್ಯೆ ಹುಕುಂ ಮಾಡಿದ 1904ನೆ ಇಸವಿಯ ಆಗಸ್ಟ 3ನೆಯ ತಾರೀಖಿನ 924—ಸ್ಯಾ. 42—04ನೆ ನಂಬರಿನ ಇಸ್ತಿಹಾರ್ನಾಮೆಯನ್ನು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆ ಇಸವಿ ಡಿಸೆಂಬರ 15ನೆ ತಾರೀಖಿನಿಂದ ರದ್ದು ಮಾಡಲು ಹುಕುಂ ದಯಪಾಲಿಸಿರುತ್ತಾರೆ.

ತಾರೀಖು 7ನೆ ನವೆಂಬರ 1907.

ನಂ. ಜಿ. 2916—ಜಿ. ಎಂ. 12—07—31, ಆರಮನೆ ಕಿಬ್ಬಂದಿಗಳ ಚಾರ್ಜಿನಲ್ಲಿರುವ ಆಫೀಸರ ಮಿ॥ ಬಿ. ರಾಮಕೃಷ್ಣರಾಯರಿಗೆ, 1907ನೆ ಇಸವಿಯ ಸೆಪ್ಟಂಬರ 26ನೆ ತಾರೀಖಿನಿಂದ, ಬಿ. ಷೆಡ್ಯೂಲಿನ ಅಸಿಸ್ಟೆಂಟು ಕಮಿಷನರುಗಳ ಮೂರನೆ ತರಗತಿಯಿಂದ ಎರಡನೆ ತರಗತಿಗೆ ಬಡಿತಿ ಕೊಟ್ಟಿದೆ.

ತಾರೀಖು 19ನೆ ನವೆಂಬರ 1907.

ನಂ. ಜಿ. 1568—ರೆಜಿ. 2—07, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಇದರಡಿ ಕಂಡ ಸಬ ರಿಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ಮಾಡಿ ಇದೆ:—

ಹೆಸರು.	ಈಗ ಇರುವ ಸ್ಥಳ.	ವರ್ಗಾಯಿಸಲ್ಪಟ್ಟ ಸ್ಥಳ.
ಬಿ. ಜಿ. ಬಸವಲಿಂಗಪ್ಪ ...	ಮೈಸೂರು ...	ತರೀಕೆರೆ
ಎಲ್. ಕೃಷ್ಣರಾವ ...	ಶ್ರೀರಂಗಪಟ್ಟಣ ...	ಮೈಸೂರು
ಎಸ. ನರಸಿಂಹೈಂಗಾರ ...	ತರೀಕೆರೆ ...	ಶ್ರೀರಂಗಪಟ್ಟಣ.

ತಾರೀಖು 22ನೆ ನವೆಂಬರ 1907.

ನಂ. ಜಿ. 1595—ರೆಜಿಸ—2-07, ನಾಲ್ಕನೆ ತರಗತಿಯ ಸಬ ರಿಜಿಸ್ಟ್ರಾರ ಸಿ. ಸೂರ್ಯನಾರಾಯಣ ಶಾಸ್ತ್ರಿಯವರನ್ನು ಚೀಫ ಕೋರ್ಟಿನಲ್ಲಿ ಟ್ರಾನ್ಸ್ಲೇಟರಾಗಿ ಮೊಕರರ್ರುಮಾಡಿದ ಪ್ರಯುಕ್ತ, ಸಬ ರಿಜಿಸ್ಟ್ರಾರಾಗಿ ಬದಲಿ ಕೆಲಸ ನೋಡುತ್ತಿರುವ ಎಂ. ನಾರಾಯಣರಾಯರನ್ನು ನಾಲ್ಕನೆ ತರಗತಿಯ ಸಬ ರಿಜಿಸ್ಟ್ರಾರಾಗಿ ಮೊಕರರ್ರುಮಾಡಿ ಇದೆ.

ತಾರೀಖು 23ನೆ ನವಂಬರ 1907.

ನಂ. ಜಿ. 1599—ಕೋ. 101-07—2, ಮೈಸೂರು ಸರ್ವಿಸ ರೆಗ್ಯುಲೇಷನುಗಳ 177 ಮತ್ತು 190 (b) (i) ಮತ್ತು (ii) ನೆ ಪ್ರಕರಣಗಳ ಮೇರೆಗೆ, ಮಿ|| ಜಿ. ಶ್ರೀನಿವಾಸ ಐಯ್ಯರ್, ಬಿ. ಎ., ಬಿ. ಎಲ್. ರವರಿಗೆ, 1907ನೆ ಇಸವಿಯ ಸೆಪ್ಟಂಬರ 21ನೆ ತಾರೀಖಿನ ಲಾಗಾಯಿತು 14 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತು.

ಆವರು ರಜಾವಿನ ಮೇಲೆ ಗೈರ ಹಾಜರಾಗಿರುವ ಕಾಲದಲ್ಲಿ ಕೋಲಾರದ ಮುನ್ಸೀಫ ಆಗಿ ಬದಲಿ ಕೆಲಸ ನೋಡುವಂತೆ ಅಡ್ವೋಕೇಟ ಮಿ|| ಎಸ್. ವೆಂಕಟಾಚಲೈಂಗಾರ್, ಬಿ. ಎ., ಬಿ. ಎಲ್., ರವರನ್ನು ಮೊಕರರ್ರು ಮಾಡೋಣಾಯಿತು.

ತಾರೀಖು ನೆ ನವಂಬರ 1907.

ನಂ. 4670—ಎಲ್. ಬಿ. 480—06—4, ಹಿರಿಯೂರು ತಾಲ್ಲೂಕು ಬೋರ್ಡಿನಲ್ಲಿ ಅಧಿಕಾರ ಪ್ರಯುಕ್ತ ಮೆಂಬರಾಗಿರುವ ಆ ತಾಲ್ಲೂಕು ಶಿರಸ್ತೆದಾರ್ ಮಿ|| ಸುಬ್ಬಣ್ಣನವರನ್ನು ಬೋರ್ಡಿಗೆ ವೈಸ ಪ್ರೆಸಿಡೆಂಟಾಗಿ ಸದರಿ ಬೋರ್ಡಿನವರು ಚುನಾಯಿಸಿರುತ್ತಾರೆಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿ ಇದೆ.

ತಾರೀಖು 23ನೆ ನವಂಬರ 1907.

ನಂ. 4752—L. B. 140—07—2, ಶಿವಮೊಗ್ಗಾ ಡಿಸ್ಟ್ರಿಕ್ಟನಲ್ಲಿ ತೀರ್ಥಹಳ್ಳಿ ವಿನಾ ಬಾಕಿ ತಾಲ್ಲೂಕು ಬೋರ್ಡುಗಳಿಗೆ ಇದರಡಿ ಕಂಡ ದೊಡ್ಡ ಮನುಷ್ಯರನ್ನು ಹೊಸದಾಗಿ ನೇಮಿಸಿ ಇದೆ ಎಂದು ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಿ ಇದೆ:—

ತಾಲ್ಲೂಕು ಬೋರ್ಡುಗಳ ಮೆಂಬರುಗಳ ಪಟ್ಟಿ.

ಶಿವಮೊಗ್ಗಾ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರುವವರು.

1. ಶಿವಮೊಗ್ಗಾ ಸಬ್ ಡಿವಿಜನ್ ಚಾರ್ಜಿನ ಅಸಿಸ್ಟೆಂಟ ಕಮಿಷನರ್, ಪ್ರೆಸಿಡೆಂಟ.
2. ಶಿವಮೊಗ್ಗಾ ತಾಲ್ಲೂಕಿನ ಅಮಲ್ದಾರ್, ವೈಸ ಪ್ರೆಸಿಡೆಂಟ.
3. ಶಿವಮೊಗ್ಗಾ ಸಿವಿಲ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಮೆಡಿಕಲ್ ಯಾ ವೈದ್ಯ ಆಫೀಸರು.
4. ಮರಹಮ್ಮತ್ ಇಲಾಖೆಯ ಸಬ್ ಡಿವಿಜನ್ ಆಫೀಸರು.
5. ಶಿವಮೊಗ್ಗಾ ಸ್ಪೆಷಲ್ ಸಬ್ ರಿಜಿಸ್ಟ್ರಾರ್.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ಹಯಾತ್ ಬೇಗ ಸಾಬ್, ಜಮೀನ್ದಾರ್.
7. ,, ನಿಡಗಿ ನಾಗಪ್ಪ, ಡಿಟೋ ಮತ್ತು ಪಟೇಲ.
8. ,, ನಾಡಿಗ ಮಂಜಪ್ಪ ಡಿಟೋ
9. ,, ಗರ್ಗಿನ ಮಲ್ಲಪ್ಪಯ್ಯ ಡಿಟೋ

(g) ಕಲಮಿನ ಮೇರೆಗೆ.

10. ,, ಎಸ್. ಆರ್. ಬಾಲಕೃಷ್ಣರಾವ್, ಅಡ್ವೋಕೇಟ.

(h) ಕಲಮಿನ ಮೇರೆಗೆ.

11. ಮಿ|| ಹಬ್ಬುಂಡಿ ಪಟೇಲ್ ಬಸಪ್ಪ, ಜಮೀನುದಾರ್.
12. ,, ಹಿರಿಯೂರು ನಾಡಿಗ ಸೀತಾರಾಮಪ್ಪ, ಜಮೀನುದಾರ್.
13. ,, ನಾಡಿಗ ಶಂಕರಪ್ಪ, ಜಮೀನುದಾರ್.
14. ,, ಬಿಲಕಿ ಬಸಪ್ಪ, ಜಮೀನುದಾರ್.
15. ,, ನಂದಿ ಬಸಪ್ಪ, ಜಮೀನುದಾರ್.

ಕುಂಸಿ ಸಬ್ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರುವವರು.

1. ಶಿವಮೊಗ್ಗಾ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರು, ಪ್ರೆಸಿಡೆಂಟ.
2. ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್, ವೈಸ ಪ್ರೆಸಿಡೆಂಟ.
3. ಕುಂಸಿ ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ.
4. ಮರಹಮ್ಮತ್ ಇಲಾಖೆಯ ಸಬ್ ಓವರ್ಸಿಯರು.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

5. ಮಿ|| ನಾಡಿಗ ರಾಮಪ್ಪ, ಜಮೀನ್ದಾರ್.
6. ,, ನಾಡಿಗ ರಾಘವೇಂದ್ರಪ್ಪ, ಜಮೀನ್ದಾರ್.

7. ಮಿ|| ನಾಡಿಗ ಸಣ್ಣ ರಾಘವೇಂದ್ರಪ್ಪ, ಜಮೀನ್ದಾರ್.
8. ,, ಕೂನಿ ಹೊಸೂರು ಸಿದ್ದಪ್ಪ, ಜಮೀನ್ದಾರ್.

(g) ಕಲಮಿನ ಮೇರೆಗೆ.

9. ಮಿ|| ರಾಮಚಂದ್ರಪ್ಪ.

(h) ಕಲಮಿನ ಮೇರೆಗೆ.

10. ಮಿ|| ಗುರುಬಸಪ್ಪ, ಜಮೀನುದಾರ್.
11. ,, ಹಾಲಸಿದ್ದಪ್ಪ, ಜಮೀನುದಾರ್ ಮತ್ತು ಪಟೇಲ್.
12. ,, ಅಬ್ದುಲ್ ಅಜೀಜ್ ಸಾಬ್, ಜಮೀನುದಾರಿ.
13. ,, ಲಕ್ಷ್ಮೀಪತಿ ಜೋಯಿಸರು, ಡಿಟೋ
14. ,, ದೊಡ್ಡ ತಿಪ್ಪಯ್ಯ, ಸಾಹುಕಾರ್.
15. ,, ಕೃಷ್ಣರಾವ್, ಜಮೀನುದಾರ್.

ಚನ್ನಗಿರಿ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಶಿವಮೊಗ್ಗಾ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
2. ಚನ್ನಗಿರಿ ತಾಲ್ಲೂಕಿನ ಅಮಲ್ದಾರ್, ವೈಸ್ ಪ್ರೆಸಿಡೆಂಟ್.
3. ಚನ್ನಗಿರಿಯ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ್.
4. ಮರಹಮ್ಮತ್ ಇಲಾಖೆಯ ಹೊನ್ನಾಳಿ ರೇಂಜಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಇಂಜನಿಯರು ಅಥವಾ ಇತರ ಅಫಿಸರು.
5. ಚನ್ನಗಿರಿ ಸ್ಪೆಷಲ್ ಸಬ್ ರಿಜಿಸ್ಟ್ರಾರ್.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ಹೊಡಿಗೆರೆ ಅಡವೆಪ್ಪ, ಸಾಹುಕಾರ ಮತ್ತು ಜಮೀನುದಾರ
7. ,, ಸೂಳೆಕೆರೆ ಶಾಮೈಯ್ಯಂಗಾರ್, ಜಮೀನುದಾರ್.
8. ,, ಕಾಮಸಾಗರದ ಕಾಶಪ್ಪ, ಡಿಟೋ.
9. ,, ಹೊಸಹಳ್ಳಿ ವೀರಪ್ಪ, ಡಿಟೋ.

(g) ಕಲಮಿನ ಮೇರೆಗೆ.

10. ಮಿ|| ವಿಭೂತಿ ನಂಜುಂಡಪ್ಪ.

(h) ಕಲಮಿನ ಮೇರೆಗೆ.

11. ಮಿ|| ನಾಡಿಗ ನರಸಪ್ಪ, ದೇವರಹಳ್ಳಿ ಶ್ಯಾನುಭೋಗ.
12. ,, ಅಪ್ಪಾಜಪ್ಪ, ಉಬ್ರಾಣಿ ಶ್ಯಾನುಭೋಗ.
13. ,, ನಾಡಿಗ ಭೀಮರಾವ್, ಸಂತೆಬೆನ್ನೂರು ಶ್ಯಾನುಭೋಗ.
14. ,, ಪಟೇಲ್ ಲಿಂಗಪ್ಪ, ಅತ್ತಿಗಟ್ಟದ ಪಟೇಲ್.
15. ,, ಪಟೇಲ್ ಹಾಲಪ್ಪ, ನಲ್ಲೂರು ಪಟೇಲ್.

ಹೊನ್ನಾಳಿ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಶಿವಮೊಗ್ಗಾ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
2. ಹೊನ್ನಾಳಿ ತಾಲ್ಲೂಕು ಅಮಲ್ದಾರ್, ವೈಸ್ ಪ್ರೆಸಿಡೆಂಟ್.
3. ಹೊನ್ನಾಳಿ ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನ ಆಸ್ಪತ್ರೆ ಅಸಿಸ್ಟೆಂಟ್.
4. ಹೊನ್ನಾಳಿ ರೇಂಜಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಇಂಜನಿಯರು ಅಥವಾ ಇತರ ಅಫಿಸರು.
5. ಅಧಿಕಾರಪ್ರಯುಕ್ತ ಸಬ್ ರಿಜಿಸ್ಟ್ರಾರ್, ಹೊನ್ನಾಳಿ.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ಕೂಲಂಬಿ ಪಟೇಲ್ ಹಾಲಪ್ಪ, ಪಟೇಲ್ ಮತ್ತು ಜಮೀನ್ದಾರ್.
7. ,, ಬೇಲೂರು ನಾಡಿಗ ಕೃಷ್ಣಪ್ಪ, ಶಾನುಭೋಗ, ಜಮೀನ್ದಾರ್.
8. ,, ಪಟೇಲ ಶಿವಲಿಂಗಪ್ಪ, ಪಟೇಲ್ ಮತ್ತು ಜಮೀನ್ದಾರ್.
9. ,, ಚಟ್ನಹಳ್ಳಿ ನಾಡಿಗ ಗೋಪಾಲಪ್ಪ, ಶಾನುಭೋಗ ಮತ್ತು ಜಮೀನ್ದಾರ್.

(g) ಕಲಮಿನ ಮೇರೆಗೆ.

10. ,, ಪಟ್ನಶೆಟ್ಟಿ ಈರಪ್ಪ, ಸಾಹುಕಾರ.

(h) ಕಲಮಿನ ಮೇರೆಗೆ.

11. ,, ಮರಿದೇವರ ಗುರುಸಿದ್ದಯ್ಯ, ವರ್ತಕ.
12. ,, ಶಾನುಭೋಗ ಸಿದ್ದಪ್ಪ, ಶಾನುಭೋಗ
13. ,, ಚಿನಿಕಟ್ಟೆ ಪಟೇಲ್ ಹಾಲಪ್ಪ, ಪಟೇಲ್ ಮತ್ತು ಜವಿರ್ಾದಾರ.
14. ,, ಬಿ. ಶೀತಾರಾಮಪ್ಪ, ಪ್ಲೀಡರ.
15. ,, ಹೆಚ್. ಎಸ್. ರಂಗರಾವ್, ಪಟೇಲ್ ಮತ್ತು ಜವಿರ್ಾದಾರ.

ಶಿಕಾರಿಪುರ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಶಿವಮೊಗ್ಗಾ ಸಬ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಾಷನರ, ಪ್ರಸಿಡೆಂಟ.
2. ಶಿಕಾರಿಪುರ ತಾಲ್ಲೂಕಿನ ಅಮಲ್ದಾರ, ವೈಸ ಪ್ರಸಿಡೆಂಟ.
3. ಮರಹಮ್ಮತ ಇಲಾಖೆಯ ಸಬ ಓವರಿಸಿಯರು.
4. ಶಿಕಾರಿಪುರದ ಲೋಕಲ್ ಫಂಡ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ.
5. ಅಧಿಕಾರಪ್ರಯುಕ್ತ ಸಬ ರಿಜಿಸ್ಟ್ರಾರ, ಶಿಕಾರಿಪುರ.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ಶ್ರೀನಿವಾಸ ದೀಕ್ಷಿತರು, ಜವಿರ್ಾದಾರ.
7. ,, ಪಟ್ಣಶೆಟ್ಟಿ ಹಾಲಪ್ಪ, ವರ್ತಕ.
8. ,, ಚಾತಾಯಿ ಸ್ವಾಮಿರಾವ, ಜವಿರ್ಾದಾರ.
9. ,, ತೋಗರಸಿ ಮೋಹನ ದೇಶಿಕ, ಜವಿರ್ಾದಾರ.

(g) ಕಲಮಿನ ಮೇರೆಗೆ.

10. ,, ರವಾನೆಕಾರ ದುರ್ಗಪ್ಪ, ವರ್ತಕ.

(h) ಕಲಮಿನ ಮೇರೆಗೆ.

11. ,, ತಾಗರ್ತಿ ಪಟೇಲ ದೇವಪ್ಪ, ಜವಿರ್ಾದಾರ.
12. ,, ಸೈಯದಬ್ರಾ.
13. ,, ಅಗಾಡಿ ಚಿಕ್ಕಪ್ಪ.
14. ,, ಸಾಲೂರು ಶಾನುಭೋಗ ಭವಾನಿರಾವ
15. ,, ಮಂಗಲಗಣೆ ಹರಿಯಪ್ಪ, ಶಾನುಭೋಗ.

ಸೊರಬ ತಾಲ್ಲೂಕು ಬೋರ್ಡು.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಸಾಗರ ಸಬ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಾಷನರು, ಪ್ರಸಿಡೆಂಟ.
2. ಸೊರಬ ತಾಲ್ಲೂಕಿನ ಅಮಲ್ದಾರ, ವೈಸ ಪ್ರಸಿಡೆಂಟ.
3. ಸೊರಬದ ಲೋಕಲ್ ಫಂಡ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ.
4. ಮರಹಮ್ಮತ ಇಲಾಖೆಯ 2ನೆ ನಂಬರ ಸಬ ಡಿವಿಜನಿನ ಸಬ ಡಿವಿಜನ ಆಫಿಸರು.
5. ಸೊರಬದಲ್ಲಿ ಅಧಿಕಾರ ಪ್ರಯುಕ್ತ ಸಬ ರಿಜಿಸ್ಟ್ರಾರ ಆಗಿರುವವರು.

ಸರ್ಕಾರಿ ಅಧಿಕಾರಿಗಳಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ನಾಡಿಗ ಲಕ್ಷ್ಮಣರಾವ್, ಜವಿರ್ಾದಾರ.
7. ,, ನಾಡಿಗ ಭಾಸ್ಕರರಾವ್, ಜವಿರ್ಾದಾರ.
8. ,, ಎಂಣೆ ಕೊಪ್ಪದ ಲಿಂಗಪ್ಪಗೌಡ, ಜವಿರ್ಾದಾರ.
9. ,, ಹಂಚಿ ಚೆನ್ನಬಸಪ್ಪಗೌಡ, ಜವಿರ್ಾದಾರ.

(g) ಕಲಮಿನ ಮೇರೆಗೆ.

10. ,, ಹೈದರಸಾಬ.

(h) ಕಲಮಿನ ಮೇರೆಗೆ.

11. ,, ಕೋರಿ ಚನ್ನಬಸಪ್ಪಶೆಟ್ಟಿ, ಸಾಹುಕಾರ.
12. ,, ನಾಡಿಗ ಚಿಕ್ಕಪ್ಪ, ಕೆರೆಹಳ್ಳಿ ಜವಿರ್ಾದಾರ.
13. ,, ಆನವಟ್ಟಿನಾಡಿಗ ಸ್ವಾಮಿರಾವ, ಜವಿರ್ಾದಾರ.
14. ,, ಕಾಮನೂರು ರಾಮಪ್ಪ, ಜವಿರ್ಾದಾರ.
15. ,, ಮಿಾರೂರು ವೀರಪ್ಪಗೌಡ, ಜವಿರ್ಾದಾರ.

B

ಸಾಗರ ತಾಲ್ಲೂಕು ಬೋರ್ಡ್ಸ್.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಸಾಗರ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
2. ಸಾಗರ ತಾಲ್ಲೂಕು ಅಮಲ್ದಾರ್, ವೈಸ್ ಪ್ರೆಸಿಡೆಂಟ್.
3. ಸಾಗರದ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟ್.
4. ಮರಾಮತ್ ಇಲಾಖೆಯ 2ನೆ ನಂಬರ್ ಸಬ್ ಡಿವಿಜನಿನ ಸಬ್ ಡಿವಿಜರ್ನ ಆಫೀಸರು.
5. ಅಧಿಕಾರ ಪ್ರಯುಕ್ತ ಸಬ್ ರಿಜಿಸ್ಟ್ರಾರಾಗಿರುವವರು.

ಸರ್ಕಾರಿ ಅಧಿಕಾರಿಗಳಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ತೋರೆಮನೆ ಪರಮೇಶ್ವರಭಟ್ಟ, ಜಮೀನ್ದಾರ್.
7. ,, ಭರದವಳ್ಳಿ ಗುರಪ್ಪಗೌಡ, ಜಮೀನ್ದಾರ್.
8. ,, ರಾಮರಾವ್, ಪ್ಲೀಡರು ಮತ್ತು ಜಮೀನ್ದಾರ್.
9. ,, ಶಾಮರಾವ್, ಡಿಟೋ

(g) ಕಲಮಿನ ಮೇರೆಗೆ.

10. ,, ನರಸಿಂಹೈಯ್ಯಂಗಾರ್, ಪ್ಲೀಡರ್.

(h) ಕಲಮಿನ ಮೇರೆಗೆ.

11. ,, ರಟ್ಟಿಹಳ್ಳಿ ಪುಟ್ಟಪ್ಪ, ವರ್ತಕ.
12. ,, ಕಿರುವಾಸೆ ವೀರಭದ್ರಯ್ಯಗೌಡ, ಜಮೀನ್ದಾರ್.
13. ,, ಸೋಮಪ್ಪಶೆಟ್ಟಿ, ಜಮೀನ್ದಾರ್ ಮತ್ತು ವರ್ತಕ.
14. ,, ಯಾಗ್ನೈಯ್ಯನ ಸುಬ್ಬರಾವ್, ಸಾಹುಕಾರ್.
15. ,, ಚಂದಾವಾರ್ ಸುಬ್ಬರಾವ್, ಜಮೀನ್ದಾರ್ ಮತ್ತು ವರ್ತಕ.

ನಗರ ತಾಲ್ಲೂಕು ಬೋರ್ಡ್ಸ್.

ಅಧಿಕಾರ ಪ್ರಯುಕ್ತ ಮೆಂಬರಾಗಿರತಕ್ಕವರು.

1. ಸಾಗರ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
2. ನಗರ ತಾಲ್ಲೂಕು ಅಮಲ್ದಾರ್, ವೈಸ್ ಪ್ರೆಸಿಡೆಂಟ್.
3. ಕಳ್ಳೂರುಕಟ್ಟೆ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನ ಆಸ್ಪತ್ರೆ ಅಸಿಸ್ಟೆಂಟ್.
4. ಮರಾಮತ್ ಇಲಾಖೆಯ 2ನೆ ನಂಬರ್ ಸಬ್ ಡಿವಿಜನಿನ ಸಬ್ ಡಿವಿಜರ್ನ ಆಫೀಸರು.
5. ಅಧಿಕಾರ ಪ್ರಯುಕ್ತ ಸಬ್ ರಿಜಿಸ್ಟ್ರಾರ್ ಆಗಿರತಕ್ಕವರು.

ಸರ್ಕಾರಿ ಅಧಿಕಾರಸ್ಥರಲ್ಲದ ಮೆಂಬರುಗಳು.

(f) ಕಲಮಿನ ಮೇರೆಗೆ.

6. ಮಿ|| ಹರ್ತಲ್ ಮಂಜಪ್ಪ, ಜಮೀನ್ದಾರ್.
7. ,, ಗೊರಗದಾನ ಚನ್ನಬಸಯ್ಯಗೌಡ, ಜಮೀನ್ದಾರ್.
8. ,, ಅರಮನೆಕೊಪ್ಪದ ರಾಮಪ್ಪ, ಜಮೀನ್ದಾರ್.
9. ,, ಶಾಮ ಉಡುಪ, ಸಾಹುಕಾರ್.

(g) ಕಲಮಿನ ಮೇರೆಗೆ.

10. ,, ಕನಕಪ್ಪ, ವರ್ತಕ.

(h) ಕಲಮಿನ ಮೇರೆಗೆ

11. ,, ವಾಮನರಾವ್, ಸಾಹುಕಾರ್.
12. ,, ಕೀರನಹಳ್ಳಿ ಪರಮೇಶ್ವರಭಟ್ಟ, ಜಮೀನ್ದಾರ್.
13. ,, ಚಾಬುಮಿಯಾ, ಜಮೀನ್ದಾರ್ ಮತ್ತು ವರ್ತಕ.
14. ,, ಗಣಪತಿ ಸಭಾಯತ್, ರಾಮಚಂದ್ರಪುರ ಮಠದ ಏಜಂಟ್.
15. ;, ಜಾಮಹಳ್ಳಿ ನಾಗಪ್ಪ, ಜಮೀನ್ದಾರ್.

ತಾರೀಖು 25ನೆ ನವೆಂಬರ್ 1907.

ನಂ. 4784—ಎಡ್ಯು. 1-07—, ಚಿಕ್ಕಮಗಳೂರು ಹೈಸ್ಕೂಲಿನ ಹೆಡ್ ಮಾಸ್ಟರ್ ಮಿ|| ಎಂ. ಬಿ. ಶ್ರೀನಿವಾಸೈಯ್ಯಂಗಾರ್, ಎಂ. ಎ. ಯವರನ್ನು, ಕೆಲಸದಿಂದ ನಿವೃತ್ತರಾದ ಮಿ|| ಸಿ. ಕ್ರೇಸ್ ಯವರಿಗೆ ಬದಲಾಗಿ ಹಾಸನದ ಹೈಸ್ಕೂಲಿಗೆ ಹೆಡ್ ಮಾಸ್ಟರಾಗಿ ವರ್ಗಾಯಿಸಲಾಯಿತು.

ತಾರೀಖು 26ನೆ ನವಂಬರ್ 1907.

ನಂ. 4834—Med. 111—07—2, ಬೆಂಗಳೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ ಮಿ|| ಜಿ. ಎಸ್. ಡೇವಿಡ್, ಎಲ್. ಎಂ. ಮತ್ತು ಎಸ್. ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1907ನೆ ಸೆಪ್ಟಂಬರು 29ನೆ ತಾರೀಖಿನಿಂದ 1907ನೆ ಅಕ್ಟೋಬರ 9ನೆ ತಾರೀಖಿನ ವರೆಗೆ, ಉಭಯ ದಿವಸಗಳೂ ಸೇರಿ, 11 ದಿವಸಗಳ ಪ್ರಿವಿಲೇಜ್ ರಜಾ ಕೊಡಲಾಯಿತು.

8. ಪರಂತು ಸದರೀ ಹರಾಜಿನಿಂದ ಲುಕ್ಸಾನ್ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಜೋಡಿದಾರರ ಹೆಸರು	ಅಂದಾಜಾ ಬೀಜವರಿ		ಅಂದಾಜಾ ...		ಸಾಲಿಯಾನ ಜೋಡಿ ಕಂದಾಯ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಬೆಂಗಳೂರು	ಹೊಸಕೋಟೆ ಸಬ್ ತಾಲ್ಲೂಕು	ಜಡಿಗೇನಹಳ್ಳಿ	ಜೋಡಿ ...	ರಾಮಸ್ವಾಮಿ ಅಯ್ಯಂಗಾರ್ ಸಂಕಿಪುರವನಹಳ್ಳಿ ಜೋಡಿ ಬಿನ್ ...		ಎ. ಗು	ರೂ. ಅ.		ರೂ.	ರೂ. ಅ. ಪೈ.	1907ನೇ ಇಸವಿ ಮೇ ನೆಲ 20ನೇ ತಾರೀಖು ಸೋಮವಾರ ದಿ. 11 ಘಂಟೆ ಲಾಗಾಯಿತು ಹೊಸಕೋಟೆ ಸಬ್ ಡಿವಿಜನ್ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರಿಂದ ಹರಾಜು ಮಾಡಲಾಗುವದು.
					ಪರಂಪೋಕು	697 16	11 0			ವಿಶ್ವಾವಸು ಸಾಲ್ ಆಖೈರ್ ವರಿಗೆ	
					ಖುಷ್ಕಿ	141 27	75 4				
					ತರಿ	155 36	653 12				
					ಬಾಗಾಯತು	0 6	0 4				
					ಜುಮ್ಲಾ	995 5	740 4		418	433 9 3 ಮತ್ತು ಬಡ್ಡಿ ವಗೈರೆ.	

ಚತುರ್ಸೀಮೆ.
ಪೂರ್ವಕ್ಕೆ — ಪಾಳ್ಯದ ಗಡಿ.
ಪಶ್ಚಿಮಕ್ಕೆ — ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕನಾಯಕನಹಳ್ಳಿ ಗಡಿ.
ದಕ್ಷಿಣಕ್ಕೆ — ಚಿಗಳೂರು ಗಡಿ.
ಉತ್ತರಕ್ಕೆ — ಬೆಳ್ಳೂರು ಗಡಿ.

ಷರಾ— ಜೋಡಿದಾರರುಗಳಿಂದಲಾಗಲಿ ಯಾ ಕಾಯಂಗುತ್ತಾದಾರರುಗಳಿಂದ ಆಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಇದ್ದವರಿಂದಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಾಗಲಿ, ದೇಣಿಗಳಿಗೆ ಆಗಲಿ ಮತ್ತು ಹಕ್ಕುಗಳಿಗೆ ಆಗಲಿ, ಅಥವಾ ಮತ್ತಾವ ಸಂಬಂಧಗಳಿಗಾಗಲಿ ಸದರಿ ಹರಾಜು ವಳಪಟ್ಟಿರುವದಿಲ್ಲ.

ಟಿ. ಧರ್ಮರಾಜ ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜಿರವರ ಕೋರ್ಟಿನಲ್ಲಿ.

ಸರ್ 1906—07ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರು 207.

ಅರ್ಜೀದಾರ್ ದೊಡ್ಡಬಳ್ಳಾಪುರದಲ್ಲಿರುವ ಶಿದ್ದಪ್ಪನ ಹೆಂಡತಿ ಸೂರಮ್ಮ, ಮೈನರಾದ ದೊಡ್ಡಬಳ್ಳಾಪುರದ ಸ್ಥಳದ ಶಿದ್ದರಂಗಪ್ಪನ ಮಗ ಶಿದ್ದಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶಿದ್ದಪ್ಪನಿಗೆ ತಂದೆಯು ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ದೊಡ್ಡಬಳ್ಳಾಪುರದ ಸ್ಥಳದ ಸೂರಮ್ಮನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1907ನೆ ಇಸವಿ ಮೇ ತಾರೀಖು 31ನೆ ಶುಕ್ರವಾರ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸರ್ 1907ನೇ ಇಸವಿ ಮಾರ್ಚಿ ತಿಂಗಳು 19ನ್ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬ್ ಜಡ್ಜ್.

ಬೆಂಗಳೂರು ಡಿವಿಜನ್ ಸೆಂಟ್ರಲ್ ರಿಕಾರ್ಡು ಆಫೀಸು.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

1907ನೆ ಇಸವಿ ಮಾರ್ಚಿ 11.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರು 26ನೆ ಮರ್ಕುಂ 122ನೆ ನಂಬರು ರೂಲ್ಸ್ ಆಫ್ ಪ್ರಾಕ್ಟೀ... ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ಈ ಡಿವಿಜನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ನವಂಬರು 1ನೆ ತಾರೀಖು ಲಾಗಾಯಿತು 1906ನೆ ಜೂನ್ 30ನೆ ತಾರೀಖು ವರಿಗೆ ದಾಖಲಾಗಿ ಫೈಸಲಾದ ಈ ಕೆಳಗೆ ವಿವರಿಸಿರುವ ಸಿವಿಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರು ಮತ್ತು ಸಾಕ್ಷಿಗಳಿಂದ ಹಾಜರ್ಮಾಡಲ್ಪಟ್ಟ ವಿಶಿಷ್ಟ ಕಾಗದ ಪತ್ರಗಳು ವಾಪಸು ತೆಗೆದುಕೊಳ್ಳದೆ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರಾಕ್ಟೀಸಿನಲ್ಲಿ ಉದಹರಿಸಿರುವಂತೆ ನಾಶಪಡಿಸಲ್ಪಡುತ್ತೆ ತಿಳಿಸುವದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.			ಷರಾಯಿಗಳು.
		ಸಿವಿಲ್ ಮೊಕದ್ದಮೆಗಳು.	ಅಮಲ್ಜಾರಿ.	ಮಿಸಲೇನಿಯಸ್.	
ಬೆಂಗಳೂರು ಡಿಸ್ಟ್ರಿಕ್ಟ್ ಕೋರ್ಟು.	1905—06	4ನೆ ನಂಬರ ಲಾಗಾಯಿತು 10ರ ವರಿಗೆ.	9ನೆ ನಂಬರ ಲಾಗಾಯಿತು 22ರ ವರಿಗೆ.	46ನೆ ನಂಬರ ಲಾಗಾಯಿತು 96ರ ವರಿಗೆ.	...
ಬೆಂಗಳೂರು ಸಬ್ ಜಡ್ಜ್ ಕೋರ್ಟು.	ಡಿಟ್ಟೋ	302ನೆ ನಂ. ಲಾಗಾಯಿತು 825ರ ವರಿಗೆ.	428ನೆ ನಂ. ಲಾಗಾಯಿತು 1175ರ ವರಿಗೆ.	322ನೆ ನಂ. ಲಾಗಾಯಿತು 771ರ ವರಿಗೆ.	...
ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟು.	ಡಿಟ್ಟೋ	386ನೆ ನಂ. ಲಾಗಾಯಿತು 1184ರ ವರಿಗೆ.	638ನೆ ನಂ. ಲಾಗಾಯಿತು 2001ರ ವರಿಗೆ.	310ನೆ ನಂ. ಲಾಗಾಯಿತು 856ರ ವರಿಗೆ.	...
ಬೆಂಗಳೂರು ಅಡೀಷನಲ್ ಮುನ್ಸೀಫ್ ಕೋರ್ಟು.	ಡಿಟ್ಟೋ	351ನೆ ನಂ. ಲಾಗಾಯಿತು 968ರ ವರಿಗೆ.	445ನೆ ನಂ. ಲಾಗಾಯಿತು 1297ರ ವರಿಗೆ.	201ನೆ ನಂ. ಲಾಗಾಯಿತು 637ರ ವರಿಗೆ.	...
ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟು.	ಡಿಟ್ಟೋ	335ನೆ ನಂ. ಲಾಗಾಯಿತು 827ರ ವರಿಗೆ.	447ನೆ ನಂ. ಲಾಗಾಯಿತು 1205ರ ವರಿಗೆ.	203ನೆ ನಂ. ಲಾಗಾಯಿತು 494ರ ವರಿಗೆ.	...
ಕೋಲಾರದ ಮುನ್ಸೀಫ್ ಕೋರ್ಟು.	ಡಿಟ್ಟೋ	268ನೆ ನಂ. ಲಾಗಾಯಿತು 762ರ ವರಿಗೆ.	302ನೆ ನಂ. ಲಾಗಾಯಿತು 916ರ ವರಿಗೆ.	193ನೆ ನಂ. ಲಾಗಾಯಿತು 523ರ ವರಿಗೆ.	...
ಕೋಲಾರದ ಗಣಿ ಮುನ್ಸೀಫ್ ಕೋರ್ಟು.	ಡಿಟ್ಟೋ	338ನೆ ನಂ. ಲಾಗಾಯಿತು 1141ರ ವರಿಗೆ.	396ನೆ ನಂ. ಲಾಗಾಯಿತು 1116ರ ವರಿಗೆ.	128ನೆ ನಂ. ಲಾಗಾಯಿತು 385ರ ವರಿಗೆ.	...
ತುಮಕೂರು ಮುನ್ಸೀಫ್ ಕೋರ್ಟು.	ಡಿಟ್ಟೋ	648ನೆ ನಂ. ಲಾಗಾಯಿತು 1523ರ ವರಿಗೆ.	706ನೆ ನಂ. ಲಾಗಾಯಿತು 1711ರ ವರಿಗೆ.	260ನೆ ನಂ. ಲಾಗಾಯಿತು 742ರ ವರಿಗೆ.	...
ಮದಗಿರಿ ಮುನ್ಸೀಫ್ ಕೋರ್ಟು.	ಡಿಟ್ಟೋ	25[illegible]ನೆ ನಂ. ಲಾಗಾಯಿತು 641ರ ವರಿಗೆ.	229ನೆ ನಂ. ಲಾಗಾಯಿತು 618ರ ವರಿಗೆ.	104ನೆ ನಂ. ಲಾಗಾಯಿತು 303ರ ವರಿಗೆ.	...
ಚಿಕ್ಕಬಳ್ಳಾಪುರ ಮುನ್ಸೀಫ್ ಕೋರ್ಟು.	ಡಿಟ್ಟೋ	227ನೆ ನಂ. ಲಾಗಾಯಿತು 620ರ ವರಿಗೆ.	487ನೆ ನಂ. ಲಾಗಾಯಿತು 1[illegible]22ರ ವರಿಗೆ.	189ನೆ ನಂ. ಲಾಗಾಯಿತು 521ರ ವರಿಗೆ.	...

ಟಿ. ಪರಮಶಿವ ಐಯ್ಯರ್,
ಆಫೀಸರ್ ಇನ್‌ಛಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವಿಜನ್.

ಹಾಸನ ಡಿವಿಜನ್.

ನೋಟೀಸ್.

ಈ ಕೆಳಗೆ ನಮೂದಿಸಿರುವ ಹೆಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿ ಯವರಿಗೆ ಪಾವತಿಯಾಗದೆ ಈ ಆಫೀಸಿನ ಅಕೌಂಟ್ಸ್ ಡಿಪಾಜಿಟಿನಲ್ಲಿ ಬಾಕಿ ನಿಂತಿರುತ್ತೆ. ಈ ನೋಟೀಸ್ ಪ್ರಚುರವಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಆಯಾಯ ಹಕ್ಕುದಾರರೇ ಆಗಲಿ ಅಥವಾ ಅವರು ಮೃತಪಟ್ಟಿದ್ದ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ:—

ನಂ.	ಹೆಸರು.	ಸಲ್ಲಬೇಕಾದ ಮೊಬಲಗಿಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.		
			ರೂ.	ಅ.	ಪೈ.
1	ವೆಂಕಟನಾಯಕ	1904–05ನೆ ಬ್ಯಾಣಾವಾರ, ಬೇಲೂರು, ಮೂಡಿಗೆರೆ ರಸ್ತೆ ರಿಪೇರಿ	8	11	7
2	ಮುನಿಸ್ವಾಮಿ	ಡಿಟ್ಟೋ ...	1	4	9
3	ಅಲಸಿಂಗ್ರಾಚಾರ್ ಮತ್ತು ನರಸಿಂಹಾಚಾರ್	ಬುಕನೂರು ಕೆರೆ ರಿಸ್ಟೋರ್ ಮಾಡಿದ್ದು [illegible]	3	0	0
4	ಡಿ. ವೆಂಕಟನಾಯಕ	904—05ನೆ ಹಾಸನ ಚಿಕ್ಕಮಗಳೂರು ರಸ್ತೆ ರಿಪೇರಿ	24	11	0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ.

ಇಸ್ತಿಹಾರ್.

ತಾರೀಖು 23ನೆ ಮಾರ್ಚಿ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮಾರ್ಚಿ 17691—L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮೂಲ್ಸ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಮಲ್ಲೇಶ್ವರ ಎಕ್ಸ್ಟೆನ್ಷನ್ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಏಪ್ರೆಲ್ ತಾ|| 2ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡ್ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟಪಡ್ವವರು ಅದೇ ತಾರೀಖು ಪ್ರಾತಃಕಾಲ $7\frac{1}{2}$ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡ್ಸವಾಲ್ನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮಾರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

	ಮಲ್ಲೇಶ್ವರ ಎಕ್ಸ್ಟೆನ್ಶನ್.	ಅಳತೆ.	ಹರಾಜು ತಾರೀಖು.
ಹಿಂದೂ ಬ್ಲಾಕ್	2—110—111—358—359—360—373—374—375—377 & 378	100 × 30	2—4—07
ಬ್ರಾಹ್ಮಣ ಬ್ಲಾಕ್	107 & 108	116 × 30	2—4—07

1. ಹರಾಜು ಖೈದಾದ ಕೂಡ್ಲೆ ಛಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡ್ಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್ಸವಾಲ್ದಾರನ್ನ ಗುಂಪಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡ್ಸವಾಲ್ ಮೊಬಲಗ್ನ ಪ್ರತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್ಸವಾಲ್ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್ಸವಾಲ್ದಾರನ್ನ ಗುಂಪಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನ ಛಡ್ಸವಾಲ್ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟೆರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋರಿ ತರಹೆ ಮತ್ತು ಜಾಗ ಸಹ ಸ್ಯಾನಿಟೆರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನ ಸ್ಯಾನಿಟೆರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗದಲ್ಲಿ ತೆಗದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡವಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮುಕ್ತ್ಯಾವ ವಿಚಾರಣೆಯೂ ಇಲ್ಲದ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೆ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ ಪ್ರೆಸಿಡೆಂಟ್.

ನೋಟೀಸ್.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೃಷ್ಣರಾಜಪೇಟೆ ತಾಲ್ಲೂಕು ಕನ್ನಂಬಾಡಿ ಹೋಬಳಿ ಮಾವಿನಕೆರೆ ಗ್ರಾಮದಲ್ಲಿರುವ ಕಲ್ಲಹಳ್ಳಿ ಅಮ್ಮನ ತಿಮ್ಮೇಗೌಡನ ಶಿದ್ದೇಗೌಡನೆಂಬ ನನ್ನ ದತ್ತು ತಂದೆಗೆ ಈಗ್ಯೆ ಸುಮಾರು ಒಂದು ತಿಂಗಳಲಾಗಾಯಿತು ಅಂದರೆ ನನ್ನ ದತ್ತು ತಾಯಿ ಹೊಂಬಾಳಮ್ಮ ಛವತಿಯಾದ ಲಾಗಾಯಿತು ಬುದ್ಧಿಸ್ಥಿಮಿತವಿಲ್ಲದೆ ನನ್ನ ಮನೆಯ ವಿಶಿಷ್ಟ ಕಾಳ್ನಡೆ ದವಸ ಮುಂತಾದ ಚರ ಸ್ವತ್ತುಗಳನ್ನು ದುರ್ವ್ಯಯ ಮಾಡುತ್ತಾ ಇದ್ದಾನೆ. ಡಿಟೋ ಹೋಬಳಿ ಹೊಸಕೋಟೆ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಗದ್ದೆ, ಹೊಲ, ತೋಟ, ಮನೆ ಮುಂತಾದ ಸ್ಥಿರಸ್ವತ್ತುಗಳು ಇರುತ್ತವೆ. ಇವುಗಳನ್ನು ಮೇಲ್ಕಂಡ ಶಿದ್ದೇಗೌಡನಿಂದ ನನ್ನ ಸಮ್ಮತಿ ಇಲ್ಲದೆ ಗಿರ್ವಿ ವ ಪರಾಧೀನ ವಗೈರೆ ಮಾಡಿಕೊಂಡದ್ದೇ ಆದರೆ ಅಂಥಾವರಿಗೆ ವೃಥಾ ನಷ್ಟ ಸಂಭವಿಸುತ್ತಲ್ಲದೆ ಯಾವ ವಿಧವಾದ ಹಕ್ಕೂ ಉಂಟಾಗುವದಿಲ್ಲವೆಂದು ಈ ಮೂಲಕ ಯಚ್ಚರಿಸಿರುತ್ತೇನೆ. ಎಲ್ಲಾ ಜನರೂ ಆಧಾರ ಕ್ರಯ ವಗೈರೆ ಮಾಡಿಕೊಳ್ಳಕೂಡದು. ಮೇಲ್ಕಂಡ ಸ್ವತ್ತುಗಳೆಲ್ಲಾ ಮೇಲ್ಕಂಡ ನನ್ನ ದತ್ತು ತಂದೆ ಹೆಸರಿನಲ್ಲಿ ಖಾತೆ ಇರುತ್ತೆ ಮತ್ತು ನನಗೆ ದತ್ತುಪತ್ರ ಹುಟ್ಟಿ ರಿಜಿಸ್ಟ್ರಿಯಾಗಿ ಸ್ವತ್ತುಗಳೆಲ್ಲಾ ನನ್ನ ಮತ್ತು ದತ್ತು ತಂದೆ ಸ್ವಾಧೀನದಲ್ಲಿರುತ್ತೆ.

17—3—07 (ಶಿದ್ದೇಗೌಡನ ದತ್ತು ಮಗ ಶಿದ್ದೇಗೌಡನ ಗುರ್ತಿನ ರುಜುವಿಗೆ ಕೃಷ್ಣಪ್ಪನ ಬರಹಾ.

191 323

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಶಾಯಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 4, ಸನ್ 1907.

IIನೆ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 30ನೆ ಮಾರ್ಚಿ 1907.

ಕಾಕನ ಹೊಸೋಡಿ ಫಾರೆಸ್ಟು, ಶಿವಮೊಗ್ಗ ಡಿಸ್ಟ್ರಿಕ್ಟು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್, 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 16480—Ft. 205-05-2, 28—6—06; 5—7—06ನೆ ಇಸವಿಯ ಗೆಜೆಟಿನಲ್ಲಿ ಶಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಫಾರೆಸ್ಟಿನ ಹೆಸರು	ಸ್ಥಳ ಮತ್ತು ಚಕ್ಕುಬಂದಿ.
ಶಿವಮೊಗ್ಗ.	ಶಿವಮೊಗ್ಗ.	5,497 ಎಕರೆ 38 ಗುಂಟೆ ಅಥವಾ 8 ಚದರ ಮೈಲಿ 477 ಎಕರೆ, 38 ಗುಂಟೆ.	ಕಾಕನ ಹೊಸೋಡಿ.	ಸ್ಥಳ:—ಶಿವಮೊಗ್ಗ ಎಡೆಹಳ್ಳಿ ರಸ್ತೆಯ 11 12 ಮತ್ತು 13ನೆ ಮೈಲಿಗಳ ಪಶ್ಚಿಮ ಭಾಗದ ಡಿಸ್ಟ್ರಿಕ್ಟು ಜಂಗಲಿ. ಉತ್ತರಕ್ಕೆ—ನೇರಲಿ ಮತ್ತು ಚಿಟ್ಟೆಮನೆ ಗ್ರಾಮಗಳು ಸಂಧಿಸುವ ಬಾಂದಿನಿಂದ ಎಲ್ಲೆಯ ಗುರುತು ಹೊರಟು ಪೂರ್ವ ದಿಕ್ಕಾಗಿ 60 ಸರಪಣಿಗಳು, ಅನಂತರ ದಕ್ಷಿಣಕ್ಕೆ 20 ಸರಪಣಿಗಳು ಚಿಟ್ಟೆ ಮನೆ ಮತ್ತು ನೇರಲಿ ಗ್ರಾಮಗಳ ಮಧ್ಯ ಗಡಿಯನ್ನನುಸರಿಸಿ ಹೋಗಿ ನೇರಲಿ, ಚಿಟ್ಟೆಮನೆ ಮತ್ತು ಸಿದ್ದಮ್ಮಾಜಿ ಹೊಸೂರು ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 30 ಸರಪಣಿಗಳು ಸಿದ್ದಮ್ಮಾಜಿ ಹೊಸೂರ್ ಚಿಟ್ಟೆಮನೆ ಕೈತೊಟ್ಲು ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಹೋಗಿ ಸೇರುತ್ತದೆ. ಅನಂತರ ಈಶಾನ್ಯವಾಗಿ 35 ಸರಪಣಿಗಳು ಕೈತೊಟ್ಲು ಸರ್ವೆ ನಂ. 10ರಲ್ಲು ಹಾದು ಸರ್ವೆ ನಂ. 36ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 23 ಸರಪಣಿಗಳು ಕೈತೊಟ್ಲು ಸರ್ವೆ ನಂ. 36, 35ರ ದಕ್ಷಿಣ ಗಡಿಯನ್ನನುಸರಿಸಿ ಕೊನೇ ನಂಬರಿನ ಆಗ್ನೇಯ ಮೂಲೆಯನ್ನು ಸೇರಿ, ಅಲ್ಲಿಂದ ಸರ್ವೆ ನಂ. 21ರಲ್ಲಿ ಹಾದು ಸದರಿ ಗ್ರಾಮ ಸರ್ವೆ ನಂ. 23ರ ನೈರುತ್ಯ ಮೂ

ಲೆಗೆ ಹೋಗಿ ಸೇರುತ್ತದೆ. ಮತ್ತು ಅದೇ ದಿಕ್ಕಿನಲ್ಲಿ 16 ಸರಪಣಿಗಳು ಹೋಗಿ ಕೈತೊಟ್ಟು ಸರ್ವೆ ನಂ. 23, 22ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂ. 22ರ ಆಗ್ನೇಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಈಶಾನ್ಯವಾಗಿ 22 ಸರಪಣಿಗಳು ಕೈತೊಟ್ಟು ಸರ್ವೆ ನಂ. 21ರಲ್ಲಿ ಹಾದು ಸದರಿ ಗ್ರಾಮ ಸರ್ವೆ ನಂ. 20, 19ರ ಪೂರ್ವಗಡಿಯನ್ನನುಸರಿಸಿ ಸರ್ವೆ ನಂ. 19ರ ಈಶಾನ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ವಾಯುವ್ಯವಾಗಿ 32 ಸರಪಣಿಗಳು ಕೈತೊಟ್ಟು ಸರ್ವೆ ನಂ. 12ರಲ್ಲು ಹಾದು ಸದರಿ ಗ್ರಾಮದ ಸರ್ವೆ ನಂ. 9ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯುವ್ಯವಾಗಿ 58 ಸರಪಣಿಗಳು ಕೈತೊಟ್ಟು ಸರ್ವೆ ನಂ 10, 11ರ ನಡುವೆ ಇರುವ ಗಡಿಯನ್ನನುಸರಿಸಿ ಕೈತೊಟ್ಟು, ಚೋರನಡೆಹಳ್ಳಿ ಗ್ರಾಮಗಳ ಮಧ್ಯ ಗಡಿಯನ್ನ ಚೋರನಡೆಹಳ್ಳಿ ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನ್ ದಾಟುವ ಕಡೆ ಇರುವ ಕೈತೊಟ್ಟು ಸರ್ವೆ ನಂ. 10ರ ಈಶಾನ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 78 ಸರಪಣಿಗಳು ಆಗ್ನೇಯ ದಿಕ್ಕಾಗಿ 105 ಸರಪಣಿಗಳು ಚೋರನಡೆಹಳ್ಳಿ ಡಿಮಾರ್ಕೇಷನ್ ಲೈನ್ ಅನುಸರಿಸಿ ಹೋಗಿ ಹುರಳಿಹಳ್ಳಿ, ಚೋರ್ನಡೇಹಳ್ಳಿ ಮತ್ತು ಉಂಬ್ಳೆಬೈಲ್ ಸ್ಟೇಟು ಫಾರೆಸ್ಟುಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ.—ಅಲ್ಲಿಂದ ನೈರುತ್ಯವಾಗಿ 50 ಸರಪಣಿಗಳು ಗಣೇದಹಾಳ್ ಸರ್ವೆ ನಂ. 7ರಲ್ಲಿ ಹಾದು ಸಾರಿಗೆರೆ ಸರ್ವೆ ನಂ. 28ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ಪಶ್ಚಿಮವಾಗಿ 35 ಸರಪಣಿಗಳು ಸಾರಿಗೆರೆ ಸರ್ವೆ ನಂ. 29ರಲ್ಲು ಹಾದು ಸದರಿ ಗ್ರಾಮದ ಸರ್ವೆ ನಂ. 32ರ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ಅನಂತರ ನೈರುತ್ಯವಾಗಿ 20 ಸರಪಣಿಗಳು ಸಾರಿಗೆರೆಯ ಸರ್ವೆ ನಂ. 29ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂ. 30ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ನೈರುತ್ಯವಾಗಿ 5 ಸರಪಣಿಗಳು ಸಾರಿಗೆರೆ ಸರ್ವೆ ನಂ. 30ರ ಪಶ್ಚಿಮಗಡಿಯನ್ನನುಸರಿಸಿ ಹೋಗಿ, ಸದರಿ ನಂಬರಿನ ನೈರುತ್ಯ ಮೂಲೆಯನ್ನನುಸರಿಸುತ್ತದೆ. ಅನಂತರ ಸರ್ವೆ ನಂ. 29ರಲ್ಲಿ ಹಾದು 12 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ. 2ರ ಅತ್ಯಂತ ಪಶ್ಚಿಮ ಮೂಲೆಗೆ ಹೋಗುತ್ತದೆ. ಅನಂತರ ಅದೇ ದಿಕ್ಕಾಗಿ 14 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ. 4ರ ಅತ್ಯಂತ ಪಶ್ಚಿಮ ಮೂಲೆಗೆ ಹೋಗುತ್ತದೆ. ಅನಂತರ ಆಗ್ನೇಯವಾಗಿ 38 ಸರಪಣಿಗಳು ಸಾರಿಗೆರೆ ಸರ್ವೆ ನಂ. 13ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 10 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ. 15ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವ ದಿಕ್ಕಾಗಿ 5 ಸರಪಣಿಗಳು ಸಾರಿಗೆರೆ ಸರ್ವೆ ನಂ. 15ರ ದಕ್ಷಿಣಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಈಶಾನ್ಯ ದಿಕ್ಕಾಗಿ 50 ಸರಪಣಿಗಳು ಸಾರಿಗೆರೆ ಸರ್ವೆ ನಂ. 28ರಲ್ಲಿ ಹಾದು ಸದರಿ ಗ್ರಾಮ ಉಂಬಳಿ ಬೈಲ್ ಮತ್ತು ಗಣೇದಹಾಳ್ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಹೋಗಿ ಸೇರುತ್ತದೆ. ಅನಂತರ ನೈರುತ್ಯವಾಗಿ 48 ಸರಪಣಿಗಳು ಉಂಬಳಿಬೈಲ್, ಸಾರಿಗೆರೆ ಗ್ರಾಮಗಳ ಮಧ್ಯಗಡಿಯನ್ನನುಸರಿಸಿ ಉಂಬಳಿ ಬೈಲ್ ಸರ್ವೆ ನಂ. 27ರ ನೈರುತ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ದಕ್ಷಿಣ ದಿಕ್ಕಾಗಿ 53 ಸರಪಣಿಗಳು ಉಂಬಳಿಬೈಲ್ ಸರ್ವೆ ನಂ. 15ರಲ್ಲಿ ಹಾದು ಶಿವಮೊಗ್ಗಾ, ಎಡೆಹಳ್ಳಿ ರಸ್ತೆಯ ಕಲ್ಲು ಹಳ್ಳದ ಸೇತುವೆ ಪಶ್ಚಿಮಕ್ಕೆ 17 ಸರಪಣಿಗಳ ಫಾಸಲೆಯಲ್ಲಿ ಸದರಿ ಹಳ್ಳದ ಎಡದ ದಡದಲ್ಲಿ ಕಟ್ಟಿರುವ ನಂ. 1ನೆ ಕಲ್ಲುಗುಡ್ಡೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವಕ್ಕಾಗಿ 17 ಸರಪಣಿಗಳು ಕಲ್ಲುಹಳ್ಳದ ಎಡದ ದಡವನ್ನು ಅನುಸರಿಸಿ ಹೋಗಿ ಸದರಿ ಸೇತುವೆಗೆ ಸೇರುತ್ತದೆ. ಅನಂತರ ದಕ್ಷಿಣದಿಕ್ಕಾಗಿ 1 ಮೈಲಿ ಪರಿಯಂತರ ಶಿವಮೊಗ್ಗಾ, ಎಡೆಹಳ್ಳಿ ರಸ್ತೆಯನ್ನನುಸರಿಸಿ ಸದರಿ ರಸ್ತೆಯು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನ ದಾಟುವ ಸ್ಥಳಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ನೈರುತ್ಯವಾಗಿ 52 ಸರಪಣಿಗಳು ಪಶ್ಚಿಮವಾಗಿ 32 ಸರಪಣಿಗಳು ಪುನಃ ನೈರುತ್ಯವಾಗಿ 60 ಸರಪಣಿಗಳು ವಾಯುವ್ಯವಾಗಿ 69 ಸರಪಣಿಗಳು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನು ಮತ್ತು ಆರಂಬಳ್ಳಿ ಸ್ಟೇಟ್ ಫಾರೆಸ್ಟು ಡಿಮಾರ್ಕೇಷನ್ ಲೈನನ್ನನುಸರಿಸಿ ಹೋಗಿ ಶಿವಮೊಗ್ಗಾ ಡಿಸ್ಟ್ರಿಕ್ಟು ಲಿಂಗಾಪುರ, ಕಡೂರು ಡಿಸ್ಟ್ರಿಕ್ಟು ಮೊಡ್ಡವತಲಿ, ಕೊರಲಕೊಪ್ಪ ಗ್ರಾಮಗಳ ಮುಕ್ಕುಪ್ಪ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ವಾಯುವ್ಯವಾಗಿ 47 ಸರಪಣಿಗಳು ಮತ್ತು ಅದೇ ದಿಕ್ಕಿನಲ್ಲಿ 35 ಸರಪಣಿಗಳು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನನುಸರಿಸಿ ಲಿಂಗಾಪುರ ಸರ್ವೆ ನಂ. 15ರ ಪಶ್ಚಿಮ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 80 ಸರಪಣಿಗಳು ಸದರಿ ಸರ್ವೆ ನಂ. 15ರಲ್ಲಿ ಹಾದು ಸದರಿ ನಂಬರಿನ ಆಗ್ನೇಯದಿಕ್ಕು ಮೂಲೆಗೆ ಹೋಗಿ ಕೂಡುತ್ತದೆ. ಅನಂತರ ಆಗ್ನೇಯವಾಗಿ 35 ಸರಪಣಿಗಳು ಹೋಗಿ ಕಾಕನ ಹೊಸೋಡಿ ಸರ್ವೆ ನಂ. 24ರ ದಕ್ಷಿಣ ಮೂಲೆಯನ್ನು ಸೇರುತ್ತದೆ. ಅನಂತರ ಈಶಾನ್ಯವಾಗಿ 45 ಸರಪಣಿಗಳು ಕಾಕನ ಹೊಸೋಡಿ ಸರ್ವೆ ನಂ. 11ನೆ ಕೆರೆಯನ್ನ ವಿಭಾಗಿಸಿರತಕ್ಕ ಏರಿಯ ಆಗ್ನೇಯ ತುದಿಗೆ ಹೋಗಿ ಸೇರುತ್ತದೆ. ಅನಂತರ ಉತ್ತರ ದಿಕ್ಕಾಗಿ 12 ಸರಪಣಿಗಳು ಕಾಕನ ಹೊಸೋಡಿ ಸರ್ವೆ ನಂ. 11ನೆ ಕೆರೆ ಅಂಗಳದಲ್ಲಿ ಹಾದು ಸರ್ವೆ ನಂ. 10ರ ಪೂರ್ವ ಗಡಿಯನ್ನನುಸರಿಸಿ ಸದರಿ 10ನೆ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತದೆ. ಅನಂತರ ವಾಯುವ್ಯ ದಿಕ್ಕಾಗಿ 52 ಸರಪಣಿಗಳು ಕಾಕನ ಹೊಸೋಡಿ ಸರ್ವೆ ನಂ. 58ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂ. 6ರ ಈಶಾನ್ಯಮೂಲೆಗೆ ಉತ್ತರದಲ್ಲಿ ಸುಮಾರು 5 ಸರಪಣಿ ದೂರದಲ್ಲಿರುವ ಕಲ್ಲು ಹಳ್ಳವನ್ನು ಕಾಕನ ಹೊಸೋಡಿ-ಸಾರಿಗೆರೆ ಕಾಲುದಾರಿಯು ದಾಟುವ ಸ್ಥಳಕೆ ಹೋಗಿ ಸೇರುತ್ತದೆ. ಅನಂತರ ಪಶ್ಚಿಮ ದಿಕ್ಕಾಗಿ ಸುಮಾರು 1½ ಮೈಲಿ ಫಾಸಲೆ ಸದರಿ ಕಲ್ಲು ಹಳ್ಳದ ಬಲಭಾಗದ ದಡವನ್ನನುಸರಿಸಿ ಹೋಗಿ ಶಿವಮೊಗ್ಗಾ ಡಿಸ್ಟ್ರಿಕ್ಟು ಲಿಂಗಾಪುರ, ಸಿದ್ದಮ್ಮಾಜಿ ಹೊಸೂರು ಮತ್ತು ಕಡೂರು ಡಿಸ್ಟ್ರಿಕ್ಟು ಕೊರಲಕೊಪ್ಪ ಈ ಗ್ರಾಮಗಳ ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅಲ್ಲಿಂದ ವಾಯುವ್ಯ ದಿಕ್ಕಾಗಿ 52 ಸರಪಣಿಗಳು ಸಿದ್ದಮ್ಮಾಜಿ ಹೊಸೂರು ಸರ್ವೆ ನಂ. 7ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂ. 22ರ ಪೂರ್ವದ ಮೂಲೆಗೆ ಹೋಗುತ್ತದೆ. ಅನಂ

ತರ ವಾಯುವ್ಯವಾಗಿ 73 ಸರಪಣಿಗಳು ಸಿದ್ದವ್ವಾಜಿ ಹೊಸೂರು ಸರ್ವೆ ನಂ. 22ರಲ್ಲಿ ಹಾದು ಹೋಗಿ ಬಿಳಿಗಲ್ಲು-ನೇರಲು-ಸಿದ್ದವ್ವಾಜಿ ಹೊಸೂರು ಮುಕ್ಕುಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಉತ್ತರಕ್ಕಾಗಿ ನೇರಲೆ ಸರ್ವೆ ನಂ. 1 ಮತ್ತು 5 ಇವುಗಳಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಜಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಜಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲಿ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು; ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫೀಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು, ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಜಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯುವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 28ನೆ ಮಾರ್ಚಿ 1907.

ದಕ್ಷಿಣಭದ್ರಾ ಫಾರೆಸ್ಟು, ಕಡೂರು ಡಿಸ್ಟ್ರಿಕ್ಟು.

ಸ್ ೯ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೌವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 16480—Ft. 205-05-2, 28—6—06; 5—7—06ನೆ ಇಸವಿಯ ಗೆಜೆಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಕಡೂರು.	ಮೂಡಗೆರೆ	23,546 ಎಕರೆಗಳೂ 30 ಗುಂಟೆಗಳು ಅಥವಾ 36·79 ಚದರ ಮೈಲಿಗಳು.	ದಕ್ಷಿಣ ಭದ್ರಾ.	ಸ್ಥಳ :—ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕಿನಲ್ಲಿ ಉತ್ತರಕ್ಕೆ ಭದ್ರಾನದಿ ಪೂರ್ವಕ್ಕೆ ಕಳಸ, ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ದಕ್ಷಿಣ ಕನಡ ಜಿಲ್ಲಾ ಸರಹದ್ದು ಈ ಒಳಗೆ ಇರುವ ಪಶ್ಚಿಮ ಘಟ್ಟದ ಗುಡ್ಡದ ಪ್ರದೇಶಗಳು :— ಉತ್ತರಕ್ಕೆ :—ಸಂಸೆ ಗ್ರಾಮದ ಸರ್ವೆ ನಂಬರು 33ರ ಪಶ್ಚಿಮ ಎಲ್ಲೆಯುಲ್ಲಿ ಕಳಸದಿಂದ ದಕ್ಷಿಣ ಕನಡ ಜಿಲ್ಲೆಗೆ ಹೋಗುವ ಕಾಲು ದಾರಿಯು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲೆಯನ್ನು ದಾಟುವ ಸ್ಥಳದಿಂದ, ಎಲ್ಲೆಯ ರೇಖೆಯು ಹೊರಟು ಸದರಿ ಕಾಲುದಾರಿಯನ್ನನುಸರಿಸಿ ಸದರಿ ಸರ್ವೆ 33ನೆ ನಂಬರಿನೊಳಗೆ ಭದ್ರಾನದಿ ಸಿಕ್ಕುವ ವರೆಗೆ ಈಶಾನ್ಯಮುಖವಾಗಿ ಹೋಗುತ್ತದೆ ; ಅನಂತರ ಸಂಸೆ ಗ್ರಾಮದ 79ನೆ ಸರ್ವೆ ನಂಬರಿನ ನೈರುತ್ಯ ಸರಹದ್ದನ್ನು ಸೇರುವ ವರೆಗೆ ಭದ್ರಾನದಿಯ ಬಲಗಡೆ ದಡದಮೇಲೆ ಹೋಗುತ್ತದೆ ; ಅನಂತರ ಅದೇ ಗ್ರಾಮದ ಸರ್ವೆ ನಂಬರು 79–80 ಮತ್ತು 81ರ ದಕ್ಷಿಣ ಸರಹದ್ದಿನಮೇಲೆ ಪೂರ್ವಮುಖನಾಗಿ ಹೋಗುತ್ತದೆ ; ಅನಂ

ತರ ಅದೇಗ್ರಾಮದ ಸರ್ವೆ ನಂಬರು 83ರ ವಾಯುವ್ಯ ಸರಹದ್ದಿನ ಮೂಲೆಯನ್ನು ಸೇರುವ ವರಗೂ ದಕ್ಷಿಣಮುಖನಾಗಿ ಹಳ್ಳದಪಕ್ಕದಲ್ಲಿ ಹೋಗುತ್ತದೆ. ಅನಂತರ ಅದೇ ನಂಬರಿನ ನೈರುತ್ಯ ದಿಕ್ಕಿನಲ್ಲು ; ಅನಂತರ ಅದೇ ನಂಬರಿನ ಪಶ್ಚಿಮ ಸರಹದ್ದಿನಮೇಲು ; ಅನಂತರ ಒಂದು ಹಳ್ಳವನ್ನು ಮುಟ್ಟುವ ವರೆಗೂ ದಕ್ಷಿಣ ಸರಹದ್ದಿನಲ್ಲಿ ಹೋಗುತ್ತದೆ ; ಅನಂತರ ಹಳ್ಳವನ್ನು ದಾಟಿ ಅದರ ಪಕ್ಕದಲ್ಲಿ ಅದೇ ಗ್ರಾಮದ ಸರ್ವೆ ನಂಬರು 82ರ ದಕ್ಷಿಣ ಮೂಲೆಯನ್ನು ಮುಟ್ಟುವ ವರೆಗೂ ಉತ್ತರಮುಖನಾಗಿ ಹೋಗುತ್ತದೆ. ಅನಂತರ ಭದ್ರಾನದಿ ದಡ ಸಿಕ್ಕುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 82ರ ಪೂರ್ವ ಸರಹದ್ದಿನ ಮೇಲೆ ಈಶಾನ್ಯ ಮುಖನಾಗಿ ಹೋಗುತ್ತದೆ ; ಅನಂತರ ಆ ಸ್ಥಳದಿಂದ ತುಂಗಾನದಿಯ ಬಲಗಡೆ ದಡವನ್ನು ಅನುಸರಿಸಿ ಉತ್ತರ ಮತ್ತು ದಕ್ಷಿಣಮುಖನಾಗಿ ಅದೇ ಗ್ರಾಮದ ಸರ್ವೆ ನಂಬರು 90ರ ಪಶ್ಚಿಮ ಸರಹದ್ದಿನ ಮೂಲೆಯನ್ನು ಮುಟ್ಟುವ ವರೆಗೂ ಹೋಗುತ್ತದೆ ; ಅನಂತರ ಅದೇಗ್ರಾಮದ ಸರ್ವೆ ನಂಬರು 90 ಮತ್ತು 92ರ ದಕ್ಷಿಣ ಮತ್ತು ಪಶ್ಚಿಮ ಸರಹದ್ದುಗಳ ಮೇಲೆ ದಕ್ಷಿಣಮುಖನಾಗಿ ಸರ್ವೆ ನಂಬರು 92ರ ದಕ್ಷಿಣ ಮೂಲೆಗೆ ಹೋಗುತ್ತದೆ ; ಅನಂತರ ಭದ್ರಾನದಿಯ ದಡವನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 92 ಮತ್ತು 94ರ ದಕ್ಷಿಣ ಸರಹದ್ದುಗಳ ಮೇಲೆ ಈಶಾನ್ಯಮುಖನಾಗಿ ಹೋಗುತ್ತದೆ ; ಅನಂತರ ಅದೇ ಗ್ರಾಮದ ಸರ್ವೆ ನಂಬರು 95ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ನದಿಯ ಬಲಭಾಗವನ್ನನುಸರಿಸಿ ಪೂರ್ವ ಮುಖನಾಗಿಯೂ ; ಅನಂತರ ಅದೇ ನದಿಯನ್ನು ಸೇರುವ ವರೆಗೆ ಸರ್ವೆ ನಂಬರು 95ರ ಪಶ್ಚಿಮ ದಕ್ಷಿಣ ಉತ್ತರ ಸರಹದ್ದಿನ ಮೇಲೆ ಆಗ್ನೇಯ ಮತ್ತು ಉತ್ತರ ಮುಖನಾಗಿಯೂ ಹೋಗುತ್ತದೆ ; ಅನಂತರ ಸರ್ವೆ ನಂಬರು 112ರ ವಾಯುವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಸದರಿ ನದಿಯ ಬಲದಡವನ್ನು ಅನುಸರಿಸಿ ಪೂರ್ವ ಮುಖನಾಗಿ ಹೋಗುತ್ತದೆ ; ಅನಂತರ ಸರ್ವೆ ನಂಬರು 112ರ ಪಶ್ಚಿಮ, ದಕ್ಷಿಣ ಮತ್ತು ನೈರುತ್ಯ ಸರಹದ್ದಿನಮೇಲೆ ದಕ್ಷಿಣ, ಪೂರ್ವ ಮತ್ತು ದಕ್ಷಿಣ ಮುಖನಾಗಿ ಹೋಗುತ್ತದೆ ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 113 ಮತ್ತು 111ರ ದಕ್ಷಿಣ ಮತ್ತು ಪೂರ್ವ ಸರಹದ್ದಿನಮೇಲೆ ಹೋಗುತ್ತದೆ ; ಅನಂತರ ಅದೇ ಗ್ರಾಮದ ಸರ್ವೆ 110ರ ಪಶ್ಚಿಮ ಸರಹದ್ದಿನ ಮೂಲೆಯನ್ನು ಸೇರುವ ವರೆಗೆ ನದಿಯ ಬಲಭಾಗವನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ ; ಅನಂತರ ಅದೇ ಗ್ರಾಮದ ಸರ್ವೆ ನಂಬರು 110—109 ಮತ್ತು 108ರ ಪೂರ್ವ ಮತ್ತು ದಕ್ಷಿಣ ಸರಹದ್ದಿನ ಮೇಲು ; ಅನಂತರ ಸರ್ವೆ ನಂಬರು 106ರ ದಕ್ಷಿಣ ಮೂಲೆಯನ್ನು ಸೇರುವವರೆಗೆ ಸರ್ವೆ ನಂಬರು 107 ಮತ್ತು 106ರ ಪಶ್ಚಿಮ ಸರಹದ್ದಿನ ಮೇಲೆ ದಕ್ಷಿಣ ಮುಖನಾಗಿಯೂ ಹೋಗುತ್ತದೆ ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 106–105 ಮತ್ತು 104ರ ಪಶ್ಚಿಮ ಸರಹದ್ದುಗಳನ್ನು ಅನುಸರಿಸಿ ಈಶಾನ್ಯಮುಖನಾಗಿ ಹೋಗುತ್ತದೆ ; ಅನಂತರ ಸರ್ವೆ ನಂಬರು 103ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ನದಿಯ ಬಲ ದಡವನ್ನು ಅನುಸರಿಸಿ ಹೋಗುತ್ತದೆ ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 103ರ ದಕ್ಷಿಣ ಮತ್ತು ಪೂರ್ವ ಸರಹದ್ದನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ ; ಅನಂತರ ಅದೇ ಗ್ರಾಮದ ಸರ್ವೆ ನಂಬರು 157ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸದರಿ ನದಿಯ ಬಲ ದಡವನ್ನು ಅನುಸರಿಸಿ ಉತ್ತರಮುಖನಾಗಿ ಹೋಗುತ್ತದೆ ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 157ರ ಒಳಗೆ ಪೂರ್ವಮುಖನಾಗಿ ಎರಡು ಫರಲಾಂಗಿನಷ್ಟು ದೂರ ಹೋಗುತ್ತದೆ.

ಪೂರ್ವಕ್ಕೆ :—ಅನಂತರ ಅದೇಗ್ರಾಮದ ಸರ್ವೆ ನಂಬರು 158ರ ವಾಯುವ್ಯ ಮೂಲೆಯಲ್ಲಿರುವ ಒಂದು ಹಳ್ಳವನ್ನು ಸೇ
ವರೆಗೆ ಸರ್ವೆ ನಂಬರು 157ರ ಒಳಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿ ಹೋಗುತ್ತದೆ; ಅನಂತರ
ನಂಬರು 155ರ ಉತ್ತರ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ಹಳ್ಳವನ್ನು ಅನುಸರಿಸಿ ನಾಲ್ಕು ಫರಲಾಂಗಿನಷ್ಟು
ರ ದಕ್ಷಿಣಮುಖನಾಗಿ ಹೋಗುತ್ತದೆ; ಅನಂತರ ದಕ್ಷಿಣ ಮುಖನಾಗ ತಿರಿಗಿ ಸರ್ವೆ ನಂಬರು 155ರ ಪಶ್ಚಿಮ ಸರಹದ್ದಿನಲ್ಲಿ
ಗುತ್ತದೆ; ಅನಂತರ ಸರ್ವೆ ನಂಬರು 156ರ ಉತ್ತರ ಸರಹದ್ದಿನಮೇಲೆ ಪಶ್ಚಿಮ ಮುಖನಾಗಿಯೂ; ಅನಂತರ ಅದೇ ನಂ
ರ ಪಶ್ಚಿಮ ಸರಹದ್ದಿನ ಮೇಲು, ಅನಂತರ ಸರ್ವೆ ನಂಬರು 194ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ದಕ್ಷಿಣ ಮತ್ತು
ತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 127ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು
ರ ಒಳಗೆ ಹತ್ತು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಒಂದು ಹಳ್ಳವನ್ನು ಸೇರುವ ವರೆಗೆ ಸರ್ವೆ
ರು 147ರ ವರೆಗೆ ಎರಡು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ; ಅನಂತರ ಹಳ್ಳವನ್ನನುಸರಿಸಿ ಸರ್ವೆ ನಂಬ
117ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ; ಅನಂತರ ಹಳ್ಳವನ್ನು ದಾಟಿ ಸರ್ವೆ ನಂಬರು
ರ ಒಳಗೆ ಒಂದು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ ಅನಂತರ ಸುಮಾರು ಮೂರು ಫರಲಾಂಗುಗಳ ದೂರ
ರ್ವ ಮುಖನಾಗಿಯೂ ಮತ್ತೊಂದು ಹಳ್ಳವನ್ನು ಸೇರುವ ವರೆಗೆ ಮೂರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿ
; ಅನಂತರ ಎರಡನೆ ಹಳ್ಳವನ್ನು ದಾಟಿ ಸಂಸೆಯಿಂದ ಕುದುರೆ ಮುಖಕ್ಕೆ ಹೋಗುವ ಕಾಲುದಾರಿ ಸಿಕ್ಕುವ ವರೆಗೆ ಮೇಲೆ
ಡ ಸರ್ವೆ ನಂಬರಿನ ಒಳಗೆ ಎರಡು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಸರ್ವೆ ನಂಬರು 19ರ ಒಳಗೆ
ಡುವರೆ ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ಅದೇ ನಂಬರಿನೊಳಗೆ ಎರಡೂವರೆ ಫರಲಾಂಗಿನಷ್ಟು
ರ ಪೂರ್ವ ಮುಖನಾಗಿಯೂ, ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದು ಸೇರುವ ವರೆಗೆ ಮೇಲೆ ಕಂಡ ಸರ್ವೆ ನಂಬರಿನೊ
ಆರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ದಕ್ಷಿಣ ಕನ್ನಡ ಜಿಲ್ಲ ಸರಹದ್ದಿನಮೇಲೆ ಆರುಫರಲಾಂ
ಷ್ಟು ದೂರ ನೆಟ್ಟಗೆ ದಕ್ಷಿಣ ಮುಖನಾಗಿ ಹೋಗುತ್ತದೆ.

ದಕ್ಷಿಣಕ್ಕೆ :—ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದು.

ಪಶ್ಚಿಮಕ್ಕೆ :—ಸದರಿ ಲೈನ್ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಮೇಲೆ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ
ತ್ತು ಪ್ರಸಿದ್ಧಪತ್ರಿಕೆ ಘಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ
ಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಘಾಯಿಷ್ಮಾಡಿದಾಗ
ಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ
ವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸಮನೆಯನ್ನು ಕಟ್ಟಕೂಡದು, ಪ್ಲಾಂಟೇ
ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ನಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು.
ಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯ
ಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ
ಕ್ಕನ್ನುಂಟುಮಾಡಕೂಡದು ಮತ್ತು ಅಂಥಾ ಅಪ್ಪಣೆ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯುಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮೈಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಯಾಗಿ ಕ್ರಮವಾಗಿ ಅಧಿಕಾರಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುತ್ತಿ ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಒಳಪಡಿಸುವದು, ಅಥವಾ ಸಾಗಿಸುವದು

(f) ಸಾಗುವಳೀಗಾಗಲಿ, ಅಥವಾ ಇನ್ನಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲಿ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಸಲಾಗುವ ತಾರೀಖು ಲಾಗಾಯ್ತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟು ಕಲ್ಲಮ್ಮನ ಕುಮರಿ ಫಾರೆಸ್ಟನ್ನು ಮನಸ್ಸು ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷರ್ 5ನೆ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖು ಇಸ್ತಿಹಾರ್ 1907ನೆ ಇಸವಿ ಮಾರ್ಚಿ 28ನೆ ತಾರೀಖಿನ ಗೆಜೆಟ್ಟಿನ ಕನ್ನಡ 11ನೆ ಭಾಗದಲ್ಲಿ 82—83ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತದೆ.

ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ವರ್ಣಮುಖಿ ಫಾರೆಸ್ಟನ್ನು ಮನಸ್ಸು ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷರ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖು ಇಸ್ತಿಹಾರ 1907ನೆ ಇಸವಿ ಮಾರ್ಚಿ 28ನೆ ತಾರೀಖಿನ ಗೆಜೆಟ್ಟಿನ ಕನ್ನಡ 11ನೆ ಭಾಗದ 84—85ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತದೆ.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರ್.

1907ನೆ ಇಸವಿ ಮಾರ್ಚಿ 16ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪದಾರ್ಥ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ:—

ನಂಬರು.	ಸ್ಥಳ.	ಹರಾಜ್ಜುತಾರೀಖು.	ಹರಾಜು ಮಾಡಿಸುವ ಆಫಿಸರವರ ಹೆಸರು.	ಪದಾರ್ಥ ಜಿನಸಿ ಮೊತ್ತ.	
				ಅವ್ವಲಿ ಅರಗು.	ಅಳಲೆಕಾಯಿ.
				ಮಣ ಪ.	ಮಣ ಪ.
1	ಶ್ರೀರಂಗಪಟ್ಟಣದ ಕೋಠಿ	15—4—07	ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು	90 0	1,500 0

ಷರತ್ತು:—1887ನೆ ಇಸವಿ ಜೂನ್ 18ನೆ ಮುಲ್ಕಿಂ ಮೈಸೂರು ಗೆಜೆಟಿನ 287—288ನೆ ಪುಟಗಳಲ್ಲಿ ಇರುವ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮುಲ್ಕಿಂ ನೋಟಿಫಿಕೇಷನನ್ನು ನೋಡಿ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್ ತಾರೀಖು 24ನೆ ಮಾರ್ಚಿ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗೆ ನಮೂದಾಗುವ ತಪ್ಸೀಲ್ ಮೇರಿಗೆ ಶಿವಮೊಗ್ಗ ಡಿಪೋ ಚೌಬೀನೆಗಳನ್ನು ತಾರೀಖು 26ನೆ ಏಪ್ರಿಲ್ 1907ರಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರವರಿಂದಲಾಗಲಿ ಹರಾಜ್ ಮಾಡಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ಸಾಗುವಾನಿ ನಾಟ.	ಬೀಟೆ ನಾಟ.	ಹೊಂದಿ ನಾಟ.	ಇತರ ಸಣ್ಣ ಜಾತಿ ನಾಟ.	ಮತ್ತಿ ನಾಟ.	ಇತರ ಬಿಳಿ ದಿಮ್ಮಿ ನಾಟ.	ಸಾಗುವಾನಿ ಬಿಲಗು.	ಜಂಗಲಿ ಬಿಲಗು.	ಶಿರಡಿ ಬೀಜ ಸಣ್ಣ ಉರುವಲು.	ಷರಾ.
ಶಿವಮೊಗ್ಗ	26—4—1907	75	75	100	100	50	100	300	150	25	ಶಿವಮೊಗ್ಗ ಡಿಪೋ

ಹರಾಜು ಷರತ್ತು—ಗವರ್ನಮೆಂಟ್ ನೋಟಿಫಿಕೇಷನ್ ನಂಬರ್ 15229—R. F. 155-92 ತಾರೀಖು 15ನೆ ಮಾರ್ಚಿ 1895ನೇದನ್ನು ನೋಡತಕ್ಕದ್ದು.

ಜೆ. ಮಾರ್ಟೈರೊ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು.

ಸ್ಟ 1907ನೆ ಇಸವಿ ಫೆಬ್ರುವರಿ ತಾರೀಖು 15ರಲ್ಲು ತುಮಕೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ನಡಿಸಿದ ಮೀಟಂಗಿನ ಪ್ರೊಸೀಡಿಂಗ್ಸ್.

ಹಾಜರ್.

ಎಕ್ಸ್ ಅಫಿಷಿಯೋ ಮೆಂಬರುಗಳು.

(1) ಮೆ|| ಸಿ. ಎ. ಮಹದೇವ ಶಾಸ್ತ್ರಿಯವರು, ತುಮಕೂರು ಡಿ|| ಎಗ್ಜಿಕ್ಯೂಟಿವ್ ಇಂಜನಿಯರ್ರವರು (ಪ್ರಿಸೈಡ್ ಮಾಡಿದರು).

(2) ,, ಎಂ. ಶ್ರೀನಿವಾಸ ಮೂರ್ತಿಗಳು, ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು.

(3) ,, ಆನಂದರಾವ್ ಸಿರಸಿ, ತುಮಕೂರು ಡಿಸ್ಟ್ರಿಕ್ಟ್ ಮದ್ದಗಿರಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು.

(4) ,, ಎಸ್. ರಂಗಾಚಾರ್ರು, ತುಮಕೂರು ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

(1) ಮೆ|| ಜಿ. ಶಿವರಾಮಯ್ಯನವರು, ಮದ್ದಗಿರಿ.

(2) ,, ವಿ. ನಾರಣಪ್ಪನವರು, ತುರ್ವೇಕೆರೆ.

3) ,, ವೆಂಬಾಕಂ ವೆಂಕಟನರಸಿಹ್ಮಾಚಾರ್ಯರು, ಪಾವುಗಡ.

(4) ,, ಸಿ. ಶ್ರೀನಿವಾಸರಾಯರು, ಪಾವುಗಡ.

(5) ,, ಕರಣೀಕ ನಲ್ಲಪ್ಪನವರು, ತುಮಕೂರು.

(6) ,, ಶಿಂಗ್ರಾಚಾರ್ಯರು, ಕುಣಿಗಲ್.

(7) ,, ಯಲ್ಲಯ್ಯ ಬಿನ್ ದೊಡ್ಡ ಪುಟ್ಟಯ್ಯನವರು, ತುಮಕೂರು.

(8) ,, ಹೊನ್ನಲಿಗೆಗೌಡರು, ಗುಬ್ಬಿ.

(9) ,, ಆಬಿದಲ್ಲಿ ಸಾಹೇಬರು, ಕೊರಟಗೆರೆ.

(10) ,, ಕೆ. ಬಿ. ಶ್ರೀನಿವಾಸರಾಯರು, ಮದ್ದಗಿರಿ.

(11) ,, ಜಿ. ರಾಮಸ್ವಾಮಯ್ಯನವರು, ಕುಣಿಗಲ್.

(12) ,, ಕೃಷ್ಣಸ್ವಾಮಿಶೆಟ್ಟರು, ಗುಬ್ಬಿ.

(13) ,, ಕೆ. ರಾಮಾನುಜೈಯ್ಯಂಗಾರ್ರು, ಗುಬ್ಬಿ.

(14) ,, ಸಿದ್ಧಲಿಂಗಶೆಟ್ಟಿ ಬಿನ್ ಸಿದ್ದೇಗೌಡರು, ತುಮಕೂರು.

(15) ,, ಗಂಗೇಗೌಡರು, ಚಿಕ್ಕನಾಯಿಕನಹಳ್ಳಿ.

ಗೈರ ಹಾಜರ್.

ಎಕ್ಸ್ ಅಫಿಷಿಯೋ ಮೆಂಬರುಗಳು.

(1) ಮೆ|| ಕೆ. ದೊರೆಸ್ವಾಮಿ ಅಯ್ಯರ್ ಯವರು, ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ ರವರು. ಶ್ರೀಮನ್ ಮಹಾರಾಜಾ ಸಾಹೇಬರವರನ್ನು ಎದುರುಗೊಳ್ಳಲು ಕುಣಗಲಿಗೆ ದಯಮಾಡಿಸಿರುವರು.

(2) ,, ಸಿ. ನಾರಾಯಣರಾಯರು, ಗುಬ್ಬಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಮತ್ತು ಬೋರ್ಡಿನ ವೈಸ್ ಪ್ರೆಸಿಡೆಂಟರು (ರಜಾದ ಮೇಲ್ಲೆ ಇರುತ್ತಾರೆ).

(3) ,, ವಿ. ಮುತ್ತುಸ್ವಾಮಿದಾಸ್ ಯವರು, ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.

ನಾನ್ ಅಫಿಷಿಯಲ್ ಮೆಂಬರುಗಳು.

(1) ಮೆ|| ಪುಟ್ಟಸ್ವಾಮಯ್ಯ, ತಿಪಟೂರು.

(2) ,, ಶಿಂಗ್ರಿ ನಂಜಪ್ಪನವರು, ತಿಪಟೂರು. ಗೃಹಕೃತ್ಯ ಕೆಲಸವಾಗಿ ತಿಪಟೂರು ಬಿಟ್ಟು ಪರಸ್ಥಳ ಇರುವದರಿಂದ ಮೀಟಂಗಿಗೆ ಬರಲು ಅನಾನುಕೂಲವೆಂದು ತಿಳಿಸಿರುತ್ತಾರೆ.

(3) ,, ದೊಡ್ಡ ಮಲ್ಲಯ್ಯನವರು, ಶಿರಾ, ಕಾಯಿಲೆ ಸಬಬು ಮೀಟಂಗಿಗೆ ಬರಲು ಅನಾನುಕೂಲವೆಂತ ಬರೆಸಿದಾರೆ.

ನೋಟ್.—ಪ್ರೆಸಿಡೆಂಟರವರು ಮತ್ತು ವೈಸ್ ಪ್ರೆಸಿಡೆಂಟರವರು ಉಭಯತ್ರರು ಗೈರ ಹಾಜರು ಸಬಬು—ಲೋಕಲ್ ಬೋರ್ಡ್ಸ ರಗ್ಯುಲೇಷನ ಸೆಕ್ಷನ್ 15ನೆ ಕ್ಲಾಜ್ ಪ್ರಕಾರ ಹಾಜರಿದ್ದ ಮೆಂಬರುಗಳು ತುಮಕೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನೀರು ಮೆ|| ಸಿ. ಎ. ಮಹದೇವ ಶಾಸ್ತ್ರಿಗಳನ್ನು ಈ ಮೀಟಂಗಿನಲ್ಲಿ ಪ್ರಿಸೈಡ್ ಮಾಡಲು ಅಪೇಕ್ಷಿಸಿದರು.

I. ಆಡಿಟ್ ಆದ ಸ್ಟ 1906ನೆ ಇಸವಿದು ಜುಲೈ, ಆಗಸ್ಟ್, ಸಪ್ಟಂಬರ ಮಾಸಗಳ ಡಿಸ್ಟ್ರಿಕ್ಟ್ ಫಂಡು ಜಮಾ ಖರ್ಚು ಲೆಖ್ಖಗಳನ್ನು ಓದಿ ಪ್ಯಾಸ್ ಮಾಡಲಾಯಿತು.

II. I(1) ಫೈನ್ಯಾನ್ಸ ಕಮಿಟಿಯವರಿಂದ ಪ್ಯಾಸಾದ ಸ್ಟ 1907—08ನೆ ಸಾಲ್ ಬಗೆ ಡಿಸ್ಟ್ರಿಕ್ಟ್ ಫಂಡು ಬಡ್ಜೆಟನ್ನು ಮತ್ತು ಇದಕ್ಕೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸಹಾ ಓದಲಾಯಿತು.

(2) ನಡೆವಾವಿನಪುರದಿಂದ ಅಮೃತೂರಿಗೆ 7 ಮೈಲಿಗಳು 6 ಫರಲಾಂಗು ಫಾಸಲೇ ಆಗುತ್ತೆಂದು ತಿಳಿದುಬಂದಿರುವದ್ದರಿಂದ ಈ ಮೊದಲೇ ಕಳುಹಿಸಿರುವ ಮುಂದಣಸಾಲಿ ಬಗೆ ಬಡ್ಜೆಟ್ಟು ತಖ್ತೆಗಳಲ್ಲಿ ಸದರಿ ಭಂಡಿಜಾಡಿನ ರಿಪೇರಿಗಾಗಿ ದಾಖಲಾಗಿರುವ 350 ರೂಪಾಯಿಗಳಿಗೆ ಬದಲಾಗಿ 388 ರೂಪಾಯಿ ದಾಖಲ್ಮಾಡಿಸಬೇಕೆಂದು ನಮೂದಿರುವ ತುಮಕೂರು ಡಿ॥ ಎಗ್ಜಿಕ್ಯೂಟಿವ್ ಇಂಜನೀರು ಯವರ 5-8—2—07ನೆ ಮರ್ಕುಂ 55ನೆ ನಂಬರ ಡಾಕೆಟು ಓದಲಾಯಿತು.

ಬಡ್ಜೆಟಿ ಅಂಗೀಕರಿಸಲ್ಪಟ್ಟು ಇಧೆಯಂತಲೂ ಎಗ್ಜಿಕ್ಯೂಟಿವ್ ಇಂಜನೀರುಯವರು ಅಭಿಪ್ರಾಯ ಪಟ್ಟಿರುವಂತೆ ನಡೆವಾವಿನಪುರ-ಅಮೃತೂರು ಭಂಡಿಜಾಡು ರಿಪೇರಿಗಾಗಿ 388 ರೂಪಾಯಿಗಳು ಪ್ಯಾಸ್ ಮಾಡಿರುತ್ತೆಂತಲೂ ಸಹಾ, ತೀರ್ಮಾನಿಸಲಾಯಿತು.

III. ಕೊಡಿಗೇನಹಳ್ಳಿ ಗ್ರಾಮಸ್ಥರ ಆರೋಗ್ಯತೆಯನ್ನು ನೋಡಿ ಅವುಷದ ಕೊಡಲು 2 ವಾರಕ್ಕೆ ಒಂದು ದಫಾ ಮದ್ದಗಿರಿ ಹಾಸ್ಪಿಟಲ್ ಅಸಿಸ್ಟೆಂಟರು ಅಲ್ಲಿಗೆ ಹೋಗಿಬರುವ ಏರ್ಪಾಡು ಸೀನಿಯರ್ ಸರ್ಜನ್ ಯವರು ಒಪ್ಪುವದಿಲ್ಲವೆಂತಲೂ, ಅಲ್ಲಿ ಒಂದು ವೈದ್ಯಶಾಲಾ ಸ್ಥಾಪಿಸತಕ್ಕ ವಿಷಯ ಬೋರ್ಡಿನಲ್ಲಿಟ್ಟು ಅದರ ಖರ್ಚು ಬೋರ್ಡಿನವರು ವಹಿಸಲು ಇಷ್ಟವುಳ್ಳವರಾಗಿರುತ್ತಾರೆಯೋ ಎಂಬ ಅಂಶಕ್ಕೆ ಅವರ ತೀರ್ಮಾನವನ್ನು ಕಳುಹಿಸಬೇಕೆಂತಲೂ ಸಹಾ ನಮೂದಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 5—12—06ನೆ ಮರ್ಕುಂ 4695ನೆ ನಂಬರ ಡಾಕೇಟನ್ನು ಓದಲಾಯಿತು.

ಮಾಹೆಯಾನಾ 30 ರೂಪಾಯಿಗಳ ಖರ್ಚಿಗೆ ಮೀರದೇ ಒಂದು ವೈದ್ಯಶಾಲೆ ಸ್ಥಾಪಿಸಬಹುದೆಂತಲೂ, ಈ ಖರ್ಚು ಡಿಸ್ಟ್ರಿಕ್ಟು ಫಂಡಿನಿಂದ ಕೊಡತಕ್ಕದ್ದೆಂದು ತೀರ್ಮಾನಿಸಲಾಯಿತು.

IV. ತುರ್ವೇಕೆರೆ ಸಬ್ ತಾಲ್ಲೂಕು ಮುದಿಗೆರೆ ಗ್ರಾಮದ ತಿಗಳರಹಟ್ಟಿಗಾಗಿ ತೆಗೆದುಕೊಳ್ಳಬೇಕೆಂಬ ಸರ್ವೆ 84-2ನೆ ನಂಬರು ಜಮೀನಿನ ಮಾಲೀಕರು 8 ಗುಂಟೆ ಜಮೀನನ್ನು ಬಿಟ್ಟುಕೊಡಲು ಕಾಂಪೆನ್ಸೇಷನ್ ಅಪೇಕ್ಷಿಸುತ್ತಾರೆಯೋ? ಹಾಗಿದ್ದಲ್ಲಿ ಎಷ್ಟು ಮೊಬಲಗೆಂತಲೂ, ಈ ತಿಗಳರಹಟ್ಟಿ ಆಗಲು ಆವಶ್ಯಕತೆ ಕುರಿತು ಬೋರ್ಡಿನವರ ಅಭಿಪ್ರಾಯವೂ ಚುನಾಯಿಸಿರುವ ಸ್ಥಳ ಸರಿಯಾಗಿರುವದಕ್ಕೆ ಸ್ಯಾನಿಟೆರಿ ಅಥಾರಟಿಗಳ ಅಭಿಪ್ರಾಯ ಸಹಾ ಬರಿಸಿ ಕಳುಹಿಸಬೇಕಾಗಿ ನಮೂದಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿ ಯವರ 5—12—06ನೆ ಮರ್ಕುಂ 4696—L. F. 251-06—2ನೆ ನಂಬರ ಡಾಕೆಟು ಓದಲಾಯಿತು.

ತುರ್ವೇಕೆರೆ ಸಬ್ ತಾಲ್ಲೂಕು ಮೆಂಬರು ಚುನಾಯಿಸಿರುವ ಸ್ಥಳ ನೋಡಿರುವಂತೆಯೂ, ಅದು ಎತ್ತರ ಪ್ರದೇಶವಾಗಿ ಗ್ರಾಮ ಬಡಾವಣೆಗೆ ಲಾಯಖಾಗಿರುವಂತೆಯೂ ಸಹ ತಿಳಿಸುತ್ತಾರೆ. ಕಾಂಪೆನ್ಸೇಷನ್ ಏನೂ ಕೊಡತಕ್ಕದ್ದಿಲ್ಲವೆಂದು ಡೆಪ್ಯುಟಿ ಅಮಲ್ದಾರರು ರಿಪೋರ್ಟು ಮಾಡಿರುತ್ತಾರೆ. ಆದ್ದರಿಂದ ಸದರಿ ಜಮೀನನ್ನು ಗ್ರಾಮ ಬಡಾವಣೆಗಾಗಿ ತೆಗೆದುಕೊಳ್ಳತಕ್ಕದ್ದೆಂದು ಬೋರ್ಡಿನವರು ತೀರ್ಮಾನಿಸಿದರು.

V. ಮದ್ದಗಿರಿ ತಾಲ್ಲೂಕು ಕವಣದಾಳು ಗ್ರಾಮವನ್ನು ಬಡಾಯಿಸಲು ತೆಗೆದುಕೊಳ್ಳಬೇಕೆಂದು ನಮೂದಿರುವ ಜಮೀನು ಬಾಬೆ-ಸದರಿ ಗ್ರಾಮವನ್ನು ಬಡಾಯಿಸಲು ಆವಶ್ಯಕತೆ ಏನೆಂಬುವದಕ್ಕೆ ಬೋರ್ಡಿನವರ ಅಭಿಪ್ರಾಯವು ಚುನಾಯಿಸಿರುವ ಸ್ಥಳ ಲಾಯಖಾಗಿರುವದಕ್ಕೆ ಸ್ಯಾನಿಟೆರಿ ಅಥಾರಟಿಗಳ ಅಭಿಪ್ರಾಯವು ಸಹ ಬರಿಸಿ ಕಳುಹಿಸಬೇಕಾಗಿ ನಮೂದಿರುವ 6—12—06ನೆ ಮರ್ಕುಂ 4729—L. F. 248-06—2ನೆ ನಂಬರ ಡಾಕೇಟು ಓದಲಾಯಿತು.

ಹಾಲಿ ಊರು ಇರುವ ಪ್ರದೇಶವು ತಗ್ಗಾಗಿಯೂ ಜೌಗಾಗಿಯೂ ಇರುವಂತೆಯೂ, ಹಾಲಿ ಚುನಾಯಿಸಿರುವ ಸ್ಥಳವು ಎತ್ತರವಾಗಿಯೂ, ಜೌಗಿಲ್ಲದೆಯೂ ಇರುತ್ತೆಂದು ತಿಳಿದುಬರುತ್ತೆ. ಚುನಾಯಿಸಿರುವ ಸ್ಥಳವನ್ನು ತೆಗೆದುಕೊಂಡು ಗ್ರಾಮವನ್ನು ಬಡಾಯಿಸತಕ್ಕದ್ದು ಯುಕ್ತವೆಂದು ಬೋರ್ಡಿನವರು ಅಭಿಪ್ರಾಯಪಡುವದಾಗಿ ತೀರ್ಮಾನಿಸಲಾಯಿತು.

VI. ಶಿರಾ ತಾಲ್ಲೂಕು ಬಂಚೆಗ್ರಾಮದ ಬಡಾವಣೆಗಾಗಿ ತೆಗೆದುಕೊಳ್ಳಬೇಕೆಂಬ ಜಮೀನು ಬಾಬೆ-ಸದರಿ ಗ್ರಾಮವನ್ನು ಬಡಾಯಿಸತಕ್ಕ ಆವಶ್ಯಕತೆ ಕುರಿತು ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯವು ಚುನಾಯಿಸಿರುವ ಜಮೀನಿನ ಲಾಯಖಿ ವಿಚಾರದಲ್ಲಿ ಸ್ಯಾನಿಟೆರಿ ಅಥಾರಟಿಗಳ ಅಭಿಪ್ರಾಯವು ತಿಳಿಸಬೇಕೆಂತಲೂ ತೆಗೆದುಕೊಳ್ಳಬೇಕಾಗಿರುವ ಜಮೀನಿಗೆ ಕೊಡಬೇಕಾಗಿರುವ ಕಾಂಪೆನ್ಸೇಷನ್ ಮೊಬಲಗು ಏತರಿಂದ ಕೊಡತಕ್ಕದ್ದೋ ಅದನ್ನು ನಮೂದಿಸಬೇಕೆಂತಲೂ, ವಗೈರೆ ನಮೂದಿರುವ 10—12—06ನೆ ಮರ್ಕುಂ 4857—L. F. 247-06—2ನೆ ನಂಬರ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಡಾಕೆಟು ಓದಲಾಯಿತು.

ಶಿರಾ ತಾಲ್ಲೂಕು ಮೆಂಬರು ಹಾಜರಿಲ್ಲಾ. ಈ ವಿಷಯವನ್ನು ಮುಂದಣ ಬೋರ್ಡಿನ ಮೀಟಿಂಗಿನಲ್ಲಿ ತರತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಬ್ರಾಂಚ್ ಡಿಸ್ಪೆನ್ಸರಿಗಳನ್ನು ಯಾವ ಯಾವ ಗ್ರಾಮಗಳಲ್ಲಿ ಸ್ಥಾಪಿಸಬೇಕೆಂದು ಬೋರ್ಡಿನವರು ಅಭಿಪ್ರಾಯಪಡುತ್ತಾರೋ ಅಂಥಾ ಗ್ರಾಮಗಳ ಲೀಸ್ಟನ್ನು ಕಳುಹಿಸಬೇಕೆಂದು ನಮೂದಿರುವ 3—1—07ನೆ ಮರ್ಕುಂ 6002-Med. (97-06)—2ನೆ ನಂಬರ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಡಾಕೆಟನ್ನು ಓದಲಾಯಿತು.

ಬ್ರಾಂಚ್ ಡಿಸ್ಪೆನ್ಸರಿಗಳನ್ನು ಸ್ಥಾಪಿಸಲು ಅನುಕೂಲವಾದ ಸ್ಥಳಗಳನ್ನು ಚುನಾಯಿತಕ್ಕ ಬಾಬೆ-ಈ ವಿಷಯವನ್ನು ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಿರುತ್ತೆಂದು ತೀರ್ಮಾನಿಸಲಾಯಿತು.

VIII. ಕೆಲವು ಎಸ್ಟೇಟುಗಳ ಮೇಲೆ ವಸೂಲಾಗುವ ಲೋಕಲ್ ಸೆಸ್ಸಿಗೂ ಮತ್ತು ಅವುಗಳಿಗೆ ಹಾಕಿರುವ ಮತ್ತು ಡಿಸ್ಟ್ರಿಕ್ಟು ಫಂಡಿನಿಂದ ದುರಸ್ತಿ ನಲ್ಲಿಟ್ಟಿರುವ ರಸ್ತೆಗಳಿಗಾಗಿ ತಗಲುವ ಲಾಗೋಡಿಗೂ ಮೊಕಾಬಿಲೆ ನೋಡಲಾಗಿ ಸದರೀ ಲಾಗೋಡು ಭಾರಿಯಾಗಿರುತ್ತಾಗಿ ಆ ರಸ್ತೆಗಳನ್ನು ಬಿಟ್ಟುಬಿಡತಕ್ಕ ಬಾಬೆ-ಚರ್ಚಿತವಾದ ದಸರಾ ಪ್ರಜಾ ಪ್ರತಿನಿಧಿ ಸಭೆಯ 239ನೆ ನಂಬರು ಸಬ್ಜೆಕ್ಟು ಬಾಬೆ-ಬೋರ್ಡಿನವರ ಅಭಿಪ್ರಾಯ ನಿಶಿ ಬರೆಸಬೇಕಾಗಿ ನಮೂದಿರುವ 4—1—07ನೆ ಮರ್ಕುಂ 6021-8—L. F. 200-06—1ನೆ ನಂಬರು ಡಾಕೆಟು ಓದಲಾಯಿತು.

ಇಂಥಾ ರಸ್ತೆಗಳು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇಲ್ಲವಾಗಿ ಈ ವಿಷಯು ಈ ಡಿಸ್ಟ್ರಿಕ್ಟಿಗೆ ಲಗಾವು ಆಗುವದಿಲ್ಲವೆಂದು ತೀರ್ಮಾನಿಸಲಾಯಿತು.

IX. 50 ಮನೆಗಳಿಗೆ ಹೆಚ್ಚಾಗಿರುವ ಗ್ರಾಮಗಳ ಪಾಕೀಜಾಕ್ಕಾಗಿ ಲೋಕಲ್ ಫಂಡ್ ಹಣದಿಂದ ಪ್ರತ್ಯೇಕವಾಗಿ ಒಂದು ಭಾಗವನ್ನು ಇಡಿಸಬೇಕೆಂದು ನಮೂದಾದ ದಸರಾ ಪ್ರಜಾ ಪ್ರತಿನಿಧಿ ಸಭೆಯ 218ನೆ ನಂಬರು ಸಬ್ಜೆಕ್ಟ ವಿಷಯವನ್ನು ಬೋರ್ಡಿನವರ ಆಲೋಚನೆಗಾಗಿ ಬರಿಸಿರುವದಾಗಿ ನಮೂದಿರುವ 4—1—07ನೆ ಮರ್ಕುಂ 6041-8—L. F. 185-06ನೆ ನಂಬರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಡಾಕೇಟನ್ನು ಓದಲಾಯಿತು.

ಬಜೆಟ್ಟಿನಲ್ಲಿ ಗ್ರಾಮ ಪಾಕೀಜಾಕ್ಕಾಗಿ 1,500 ರೂಪಾಯಿ ದಾಖಲಾಗಿರುತ್ತೆ. ಈ ಮೊಬಲಗನ್ನು ಸದರಿ ವಿಷಯದಲ್ಲಿ ವಿನಿಯೋಗಿಸಲು ಏರ್ಪಾಡು ಮಾಡಲ್ಪಡುತ್ತೆಂದು ತೀರ್ಮಾನಿಸಲಾಯಿತು.

X. ದೊಡ್ಡಿಗೆ ದಾಖಲಾದ ಮೇಕೆಗಳ ಮೇಲೆ ವಸೂಲಾಗುವ ಜುಲ್ಮಾನೆ ಯಾ ದರ ಹೆಚ್ಚಿಸತಕ್ಕ ಬಾಬ—ದಸರಾ ಪ್ರಜಾ ಪ್ರತಿನಿಧಿ ಸಭೆಯ 230ನೆ ನಂಬರು ಸಬ್ಜೆಕ್ಟನ್ನು ಲೋಕಲ್ ಬೋರ್ಡುಗಳ ಪುನರಾಲೋಚನೆ ಬಗ್ಯೆ ಕಳುಹಿಸಿರುತ್ತೆಂದು ನಮೂದಿರುವ ರೆವಿನ್ಯೂ ಮತ್ತು ಜನರಲ್ ಸೆಕ್ರೆಟೆರಿ ಯವರ 11-1-07ನೆ ಮರ್ಕುಂ 6217-24—L. F. 196-06—1ನೆ ನಂಬರು ಡಾಕೇಟು ಓದಲಾಯಿತು.

ಆವಶ್ಯಕವಾದ ಸಂದರ್ಭಗಳಲ್ಲಿ ಜುಲ್ಮಾನೆ ದರವನ್ನು ಹೆಚ್ಚಿಸತಕ್ಕ ವಿಚಾರದಲ್ಲಿ ಗವರ್ನ್ಮೆಂಟಿಗೆ ಸ್ಪೆಷಲ್ ಆಗಿ ಶಿಫಾರ್ಸ್ ಮಾಡಲು ಪ್ರೆಸಿಡೆಂಟರವರು ಅಧಿಕಾರವುಳ್ಳವರಾಗಿರುತ್ತಾರೆಂತಲೂ, ಸಾಮಾನ್ಯವಾಗಿ ಸದರಿ ದರವನ್ನು ಹೆಚ್ಚಿಸತಕ್ಕದ್ದು ಅನಾವಶ್ಯಕವೆಂತಲೂ ತೀರ್ಮಾನಿಸಲಾಯಿತು.

XI. ಡಿಸ್ಟ್ರಿಕ್ಟ್ ಫಂಡು ರಸ್ತೆಗಳು ಸರಿಯಾಗಿ ದುರಸ್ತಿನಲ್ಲಿಡತಕ್ಕ ಬಾಬ—ಡಿಸ್ಟ್ರಿಕ್ಟ್ ಫಂಡಿನಿಂದ ಹಣ ಸಾಲದಿದ್ದರೆ ಆ ಬಗ್ಯೆ ಟೋಲ್ ಸುಂಕ ಹಾಕೋಣದರಿಂದ ಮೊಬಲಗು ಉತ್ಪತ್ತಿ ಮಾಡಿಕೊಳ್ಳುವ ಅಂಶವನ್ನು ಆಲೋಚಿಸಬಹುದೆಂದು ಗವರ್ನಮೆಂಟಿನವರು ದಸರಾ ಪ್ರಜಾ ಪ್ರತಿನಿಧಿ ಸಭೆಯ 211ನೆ ನಂಬರು ಸಬ್ಜೆಕ್ಟಿಗೆ ಜವಾಬು ಕೊಡಿಸಿರುವದನ್ನು ಬೋರ್ಡಿನವರ ಆಲೋಚನೆಗೆ ಬರಿಸಿರುವದಾಗಿ ನಮೂದಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 11—1—07ನೆ ಮರ್ಕುಂ 6241-8—L. F. 1-18-06—1ನೆ ನಂಬರ ಡಾಕೇಟನ್ನು ಓದಿ ರಿಕಾರ್ಡು ಮಾಡಲಾಯಿತು.

XII. 50 ಮನೆಗಳುಳ್ಳ ಗ್ರಾಮಗಳಿಗೆ ಸ್ಯಾನಿಟೇಷನ್ ರೂಲ್ಸ್ ಜಾರಿಗೆ ತರತಕ್ಕ ವಿಚಾರದ ದಸರಾ ಪ್ರಜಾ ಪ್ರತಿನಿಧಿ ಸಭೆಯ 223ನೆ ನಂಬರು ಸಬ್ಜೆಕ್ಟನ್ನು ಬೋರ್ಡಿನವರ ತೀರ್ಮಾನದ ನಿಶಿ ಜವಾಬು ಬರಿಸತಕ್ಕ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ 6233-40—L. F. 190-06—1ನೆ ನಂಬರು ಸೆಕ್ರೆಟೆರಿಯವರ ಡಾಕೇಟು ಓದಲಾಯಿತು.

ಈ ವಿಷಯವು ಮೊದಲು ತಾಲ್ಲೂಕು ಬೋರ್ಡುಗಳಲ್ಲಿ ಚರ್ಚಿತವಾಗಿ ಅವರುಗಳ ತೀರ್ಮಾನಗಳು ತಲ್ಪಿದ ನಂತರ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಡತಕ್ಕದ್ದೆಂದು ತೀರ್ಮಾನಿಸಲಾಯಿತು.

XIII. ಹೊಸದುರ್ಗದಿಂದ ಹೊನ್ನವಳ್ಳಿಗೆ ರಸ್ತೆ ಹಾಕತಕ್ಕ ಬಾಬ—ದಸರಾ ಪ್ರಜಾ ಪ್ರತಿನಿಧಿ ಸಭೆಯ 497ನೆ ನಂಬರು ಸಬ್ಜೆಕ್ಟನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ತೀರ್ಮಾನದ ನಿಶಿ ಜವಾಬು ಬರಿಸತಕ್ಕ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ 11—1—07ನೆ ಮರ್ಕುಂ 6316—L. F. 224-06—1ನೆ ನಂಬರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಡಾಕೇಟು ಓದಲಾಯಿತು.

ಹೊನ್ನವಳ್ಳಿಯಿಂದ ಹಲ್ಕೂರಿಗೆ ರಸ್ತೆ ಹಾಕತಕ್ಕ ಅನುಕೂಲವನ್ನು ಕುರಿತು ಮೊದಲೇ ಬೋರ್ಡಿನವರು ತೀರ್ಮಾನಿಸಿರುತ್ತಾರೆಂತಲೂ ಹೊನ್ನವಳ್ಳಿಯಿಂದ ಹೊಸದುರ್ಗಕ್ಕೆ ರಸ್ತೆ ಎಂಬುವದು ಮೇಲ್ಕಂಡ ರಸ್ತೆಗೆ ಲಗಾವಾಗಿಯೇ ಹಾಕತಕ್ಕ ರಸ್ತೆಯಾಗಿಯೇ ಕಾಣುತ್ತೆ. ಈ ವಿಷಯವು ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ಸಂಮ್ಮಂಧಪಟ್ಟದ್ದಾಗಿರುತ್ತೆಂತಲೂ ಸಹಾ ತೀರ್ಮಾನಿಸಲಾಯಿತು.

XIV. ಹುಳಿಯಾರ-ಅರಸೀಕೆರೆ ರಸ್ತೇಲಿ ಸೇತುವೆಗಳು ಇಲ್ಲದೆ ತುಂಬಾ ಅನಾನುಕೂಲವಾಗಿರುವಂತೆಯೂ ಅವುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕಟ್ಟಿಸಲು ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾಗಿ ಪ್ರೊವಿನ್ಷಿಯಲ್ ಫಂಡಿನಿಂದ ಅವುಗಳನ್ನು ಕಟ್ಟಿಸಬೇಕೆಂತಲೂ ನಮೂದಿರುವ ದಸರಾ ಪ್ರಜಾ ಪ್ರತಿನಿಧಿ ಸಭೆಯ 407ನೆ ನಂಬರು ಸಬ್ಜೆಕ್ಟಿಗೆ ಜವಾಬಾಗಿ ತಲ್ಪಿರುವ ಚೀಫ್ ಇಂಜನೀರ್ ಯವರ ಲೆಟರು ಕಾಪಿಯನ್ನು ತಿಳವಳಿಕೆ ಮತ್ತು ಸಮ್ಮಂಧಪಟ್ಟ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯ ಪಡದು, ಅವಶ್ಯಕವಾದ ನಡವಳಿಕೆ ಬಗ್ಯೆ ಕಳುಹಿಸಿರುವದಾಗಿ ನಮೂದಿರುವ 2—1—07ನೆ ಮರ್ಕುಂ 6809-10—L. B. 208-06—3ನೆ ನಂಬರು ಗವರ್ನಮೆಂಟ್ ಆರ್ಡರನ್ನು ಓದಲಾಯಿತು.

ಬೋರ್ಡಿನವರ ಆಲೋಚನೆಗಾಗಿ ಎಲ್ಲೆಲ್ಲಿ ಸೇತುವೆಗಳು ಯಾ ಮೋರಿಗಳು ಆಗಬೇಕೋ ಆ ಬಗ್ಯೆ ಒಂದು ಅಂದಾಜಾವನ್ನು ತಯಾರುಮಾಡಿಸತಕ್ಕ ಬಾಬ—ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ ಇಂಜನೀರ ರವರನ್ನು ಕೇಳಬೇಕಾಗಿ ತೀರ್ಮಾನಿಸಲಾಯಿತು.

XV. ತುಮಕೂರು ತಾಲ್ಲೂಕು ಪಳ್ಳಾವಿ ಗ್ರಾಮದ ಬಡಾವಣೆಗಾಗಿ ಬೇಕಾಗಿರುವ 7 ಎಕರೆ 33 ಗುಂಟೆ ಜಮೀನು ಬಾಬ—ಬೋರ್ಡಿನವರ ಅಭಿಪ್ರಾಯವನ್ನು ಕಳುಹಿಸಬೇಕೆಂತಲೂ, ಸದರಿ ಜಮೀನುಗಾಗಿ ಕೊಡಬೇಕಾಗಿರುವ ಪರಿಹಾರದ್ರವ್ಯ ಯಾರಿಂದ ಕೊಡತಕ್ಕದ್ದೆಂತಲೂ, ನಮೂದಿರುವ ರೆವಿನ್ಯೂ ಕಮಿಷನರವರ 21—1—04ನೆ ಮರ್ಕುಂ 3669ನೆ ನಂಬರು ಡಾಕೇಟು ಓದಲಾಯಿತು.

ಸದರಿ ಜಮೀನು ತೆಗೆದುಕೊಳ್ಳಬೇಕಾಗಿರುವದು ಅವಶ್ಯಕವಾಗಿರುತ್ತಾಗಿ ಬಜೆಟ್ಟಿನಲ್ಲಿ ಅದಕ್ಕೆ ಬೇಕಾಗಿರುವ ಮೊಬಲಗು ದಾಖಲುಮಾಡತಕ್ಕದ್ದೆಂತಲೂ, ಮತ್ತು ಇದೇರೀತಿ ಇತರೇ ಸಂದರ್ಭಗಳಲ್ಲಿ ಪರಿಹಾರದ್ರವ್ಯ ಕೊಡಲು ಬೇಕಾಗುವ ಮೊಬಲಗು ಸಹಾ ಬಜೆಟ್ಟಿನಲ್ಲಿ ದಾಖಲಾಗಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

XVI. ಕೆಲವು ರಸ್ತೆಗಳ ಮೇಲೆ ಆಮದುರಫ್ತು ಬಹಳ ಜಾಸ್ತಿಯಾಗಿರುತ್ತೆಂತಲೂ, ಅವುಗಳ ಮೈಲೇಜ್ ಗ್ರಾಂಟು ಮೈಲಿ 1ಕ್ಕೆ 200 ರೂಪಾಯಿಗಳ ಮೇರ ಹೆಚ್ಚಿಸಬೇಕೆಂತಲೂ, ಹಾಗೆ ಹೆಚ್ಚಿಸದಿದ್ದರೆ ರಸ್ತೆಗಳು ಬಹಳ ಹೀನಸ್ಥಿತಿಗೆ ಬಂದು ಪುನಃ ಅದನ್ನು ಸರಿಪಡಿಸಲು ಬಹಳ ಹೆಚ್ಚಿಗೆ ಲಾಗೋಡು ಮುಟ್ಟಿಸಬೇಕಾಗುತ್ತೆಂತಲೂ, ಅವಶ್ಯಕವಿದ್ದಲ್ಲಿ ಅವುಗಳಿಗೆ ಬೇಕಾಗುವ ಮೊಬಲಗನ್ನು ರಸ್ತೆಯ ಅನುಕೂಲವಾದ ಸ್ಥಳದಲ್ಲಿ ಟೋಲ್ ಗೇಟು ಸ್ಥಾಪನೆ ಮಾಡೋಣದರಿಂದ ಉತ್ಪತ್ತಿ ಮಾಡಬಹುದಾಗಿರುತ್ತೆಂತಲೂ ಸಹಾ ನಮೂದಿರುವ ತುಮಕೂರು ಡಿಸ್ಟ್ರಿಕ್ಟು ಎಗ್ಸಿಕ್ಯೂಟಿವ್ ಇಂಜನೀರವರ 10—1—07ನೆ ಮುಕ್ಕಾಂ 12ನೆ ನಂಬರು ಡಾಕೆಟು ಓದಲಾಯಿತು.

ಈ ವಿಷಯವನ್ನು ಮುಂದಣ ಮೀಟಿಂಗಿಗೆ ಇಡಲ್ಪಡತಕ್ಕದ್ದೆಂದು ತೀರ್ಮಾನಿಸಲಾಯಿತು.

XVII. ತಿಪಟೂರು-ದುದ್ದಾ ರಸ್ತೆ, ಮುದನಮ್ಮಾಡು-ಹಾಗಲವಾಡಿ-ಛಂಡಿಜಾಡು, ರಿಪೇರಿಗಾಗಿಯೂ, ರಾಮಪುರದ ಕೆರೆ ಏರಿ ಮೇಲೆ ಇರುವ ಕೊರಟಗೆರೆ-ಬೈಚಾಪುರ ರಸ್ತೆಗೆ ಜಲ್ಲಿ ಬಿಚಾವಣೆಗಾಗಿಯೂ, ಸಹ ಒಂದು ರಿ-ಅಪ್ರೊಪ್ರಿಯೇಷನ್ ತಃಖ್ತೆ ಬೋರ್ಡಿನವರ ಅಪ್ರೂವಲ್ ಬಗ್ಗೆ ಕಳುಹಿಸಿರುವದಾಗಿ ನಮೂದಿರುವ ತುಮಕೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರವರ 11—2—07ನೆ ಮುಕ್ಕಾಂ 57ನೆ ನಂಬರ್ ಡಾಕೆಟ್ ಓದಲಾಯಿತು.

"ರಿ" ಅಪ್ರೊಪ್ರಿಯೇಷನ್ ತಃಖ್ತೆಯನ್ನ ಮಂಜೂರು ಮಾಡಿರುತ್ತೆಂದು ತೀರ್ಮಾನಿಸಲಾಯಿತು.

XVIII. ಶಿರಾ ತಾಲ್ಲೂಕು ಛತ್ರಂಗಾವಾರ ಗ್ರಾಮದಲ್ಲಿ ಹೊಸತಾಗಿ ಒಂದು ದೊಡ್ಡಿ ಏರ್ಪಾಡಾಗಬೇಕೆಂದು ನಮೂದಾದ 26—11—06ನೆ ಮುಕ್ಕಾಂ 735ನೆ ನಂಬರ್ ತುಮಕೂರು ಡಿಸ್ಟ್ರಿಕ್ಟ ಮಧುಗಿರಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಯವರ ಯಾದಿಯನ್ನು ಓದಲಾಯಿತು.

ಅಸಿಸ್ಟೆಂಟ್ ಕಮಿಷನರವರು ಅಭಿಪ್ರಾಯಪಟ್ಟಿರುವಂತೆ ಒಂದು ಹೊಸ ದೊಡ್ಡಿ ಆಗಬಹುದೆಂದು ತೀರ್ಮಾನಿಸಲಾಯಿತು.

XIX. ತುಮಕೂರು ಹೊನ್ನುಡಿಕೆ ಗ್ರಾಮದೊಳಗೆ ಇರುವ ದೊಡ್ಡಿಯನ್ನು ತೆಗೆದು ಊರುಹೊರಗೆ ಚುನಾಯಿಸಿರುವ ಸ್ಥಳದಲ್ಲಿ ಗ್ರಾಮಸ್ಥರು ಒಂದು ದೊಡ್ಡಿ ಹೊಸತಾಗಿ ಕಟ್ಟತಕ್ಕ ಏರ್ಪಾಡಾಗಬೇಕೆಂದು ನಮೂದಿರುವ ತುಮಕೂರು ತಾಲ್ಲೂಕು ಅಮಲ್ದಾರ್ 19—12—06ನೆ ಮುಕ್ಕಾಂ 236—3ನೆ ನಂಬರ್ ರಿಪೋರ್ಟು ಓದಲಾಯಿತು.

ಸದರಿ ದೊಡ್ಡಿಯನ್ನು ಅಮಲ್ದಾರರು ಅಭಿಪ್ರಾಯಪಟ್ಟಿರುವಂತೆ ಬದಲಾಯಿಸಬೇಕೆಂದು ತೀರ್ಮಾನಿಸಲಾಯಿತು.

XX. ತುಮಕೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಯವರಿಂದ ತಲ್ಪಿದ ಕಾಂಟ್ರಾಕ್ಟರ್ಸ್ ನಿಶಿ ವಾಪಸ್ ಆದ ಅಂದಾಜುಗಳ ಲೀಸ್ಟು ಓದಿ ಪ್ಯಾಸ್ ಮಾಡಲಾಯಿತು.

XXI. ಜನವರಿ ಮಾಹೆಯಲ್ಲಿ ಡಿಸ್ಟ್ರಿಕ್ಟ ಫಂಡಿನಿಂದ ಮಂಜೂರ್ ಮಾಡಲ್ಪಟ್ಟ ಕಾಂಗಾರಿಗಳ ತಃಖ್ತೆಯನ್ನು ಓದಿ ಪ್ಯಾಸ್ ಮಾಡಲಾಯಿತು.

XXII. ಸನ್ 1905—06ನೆ ಸಾಲ್ ಬಗ್ಗೆ ಒಟ್ಟು ಸಾಲ್ ಝಾಡಾ ಲೆಖ್ಖ ಮತ್ತು ಅದರ ಮೇಲೆ ಫೈನಾನ್ಸ್ ಕಮಿಟಿಯವರು ಮಾಡಿದ ರಿವ್ಯು ಸಹಾ ಓದಿ ಪ್ಯಾಸ್ ಮಾಡಲಾಯಿತು.

XXIII. ಸಂತೆ ದಿವಸಗಳಲ್ಲಿ ಹಾಸ್ಪಿಟಲ್ ಅಸಿಸ್ಟೆಂಟರು ವಾರಕ್ಕೆ ಒಂದಾವರ್ತಿ ಅಮೃತೂರಿಗೆ ಹೋಗೋಣದರಿಂದ ಅಲ್ಲಿ ಜನಗಳಿಗೆ ಬಹಳ ಮಟ್ಟಿಗೆ ಪ್ರಯೋಜನ ಕಡಮೆಯೆಂತಲೂ, ಹಾಸ್ಪಿಟಲ್ ಅಸಿಸ್ಟೆಂಟರು ಹೋಗಿ ಬರೋಣದರಿಂದ ಅವರ ಟ್ರಾವಲಿಂಗ್ ಅಲೋಯನ್ಸ ಮಾಹೇಯಾನಾ 26 ರೂಪಾಯಿಗಳು ಖರ್ಚು ಆಗುತ್ತೆಂತಲೂ, ಮಾಹೇಯಾನಾ 10 ಅಥವಾ 12 ರೂಪಾಯಿಗಳ ಖರ್ಚಿನಲ್ಲಿ ಒಬ್ಬ ನೇಟಿವ್ ಪಂಡಿತರನ್ನು ನೇಮಿಸಬಹುದೆಂತಲೂ, ವಗೈರೆ ನಮೂದಿರುವ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಕಳುಹಿಸಿರುವದಾಗಿ ನಮೂದಿರುವ 15—1—07ನೆ ಮುಕ್ಕಾಂ 462ನೆ ನಂಬರ್ ರಿಪೋರ್ಟು ಓದಲಾಯಿತು.

ಹಾಲಿ ಇರುವ ಏರ್ಪಾಡೇ ಮುಂದಕ್ಕೂ ಇರಬಹುದೆಂದು ತೀರ್ಮಾನಿಸಲಾಯಿತು.

XXIV. ತುಮಕೂರು-ಮದ್ದೂರು ರಸ್ತೆ ಮೇಲೆ ಆಮದುರಫ್ತು ವಿಶೇಷವಾಗಿರುತ್ತೆಂತಲೂ ಇದಕ್ಕೆ ಗ್ರಾಂಟು ಬೆಂಗಳೂರು-ಮಂಗಳೂರು ರಸ್ತೆಗಿರುವ ಮೈಲೇಜು ಗ್ರಾಂಟಿಗಿಂತಲೂ ಕಮ್ಮಿ ಇರುತ್ತೆಂತಲೂ, ಈ ರಸ್ತೆಗೆ ಹೆಚ್ಚಿಗೆ ಗ್ರಾಂಟ್ ಕೊಡ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾಗಿ ಅದನ್ನು ಪ್ರೊವಿನ್ಷಿಯಲ್ ರಸ್ತೆಯನ್ನಾಗಿ ಮಾಡಿ, ಕುಣಿಗಲ್ ತಾಲ್ಲೂಕು ಸರಹದ್ದಿನೊಳಗಿರುವ ಬೆಂಗಳೂರು-ಮಂಗಳೂರು ರಸ್ತೆಯ ಭಾಗವನ್ನು ಡಿಸ್ಟ್ರಿಕ್ಟ್ ಫಂಡ್ ರಸ್ತೆಯನ್ನಾಗಿ ಮಾಡಬೇಕೆಂತಲೂ ವಗೈರೆ ನಮೂದಾದ ತಾಲ್ಲೂಕ್ ಬೋರ್ಡಿನವರ ತೀರ್ಮಾನವನ್ನು ಕಳುಹಿಸಿರುವದಾಗಿ ಕುಣಿಗಲ್ ತಾಲ್ಲೂಕು ಅಮಲ್ದಾರ್ 15—1—07ನೆ ಮುಕ್ಕಾಂ 471ನೆ ನಂಬರ್ ರಿಪೋರ್ಟು ಓದಲಾಯಿತು.

ಪ್ರೊವಿನ್ಷಿಯಲ್ ರಸ್ತೆಯನ್ನು ಡಿಸ್ಟ್ರಿಕ್ಟ್ ಫಂಡ್ ರಸ್ತೆಯನ್ನಾಗಿ ಮಾಡತಕ್ಕದ್ದು ಸಾಧ್ಯವಲ್ಲವೆಂತಲೂ, ಹಣ ಒದಗಿದರೆ ಈ ಮದ್ದೂರು-ಕುಣಿಗಲು ರಸ್ತೆಗೆ ಮೈಲೇಜು ಗ್ರಾಂಟು ಜಾಸ್ತಿ ಮಾಡತಕ್ಕ ವಿಚಾರ ಯೋಚಿಸಲ್ಪಡುತ್ತೆಂತಲೂ ಸಹ ತೀರ್ಮಾನಿಸಲಾಯಿತು.

XXV. ಕೊಡಗಿಹಳ್ಳಿ ಕೆರೆ ಏರಿ ಮೇಲೆ ಹೋಗುವ ರಸ್ತೆ ಬಹಳ ಕಿಷ್ಟಿಂಥವಾಗಿರುತ್ತಾದ್ದರಿಂದ ಅದನ್ನು ಅಗಲಪಡಿಸಬೇಕೆಂದು ವಗೈರೆ ನಮೂದಾದ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಕಳುಹಿಸಿರುವದಾಗಿ ನಮೂದಿರುವ ಕುಣಿಗಲ್ ತಾಲ್ಲೂಕು ಅಮಲ್ದಾರ್ 15—1—07ನೆ ಮುಕ್ಕಾಂ 472ನೆ ನಂಬರ್ ರಿಪೋರ್ಟು ಓದಲಾಯಿತು.

ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಈ ಬಗ್ಗೆ ಒಂದು ಅಂದಾಜು ತರಿಸಿಕೊಂಡು ಈ ವಿಚಾರ ಆಲೋಚಿಸಲ್ಪಡುತ್ತೆಂದು ತೀರ್ಮಾನಿಸಲಾಯಿತು.

XXVI. ಯಡಿಯೂರು ಬಳಿ ರಕ್ಷ್ಯೇಸಕ್ಷತ್ಪಲ್ಲಿ ಹೊಸತಾಗಿ ಒಂದು ಮುಸಾಫರಖಾನೆ ಕಟ್ಟಸಬೇಕೆಂತಲೂ, ಅಲ್ಲಿಗೆ ಹುಲಿಯೂರ ದುರ್ಗದ ಮುಸಾಫರಖಾನೇಲಿರುವ ಕೇರಟೇಕರನ್ನು ನೇಮಿಸಬೇಕೆಂತಲೂ, ವಗೈರೆ ಅಂಶಗಳುಳ್ಳ ನಮೂದಿರುವ ಕುಣಿಗಲ್ ತಾಲ್ಲೂಕು ಅಮಲ್ದಾರ್ರ 15—1—07ನೆ ಮುರ್ಕುಂ 473ನೆ ನಂಬರ ರಿಪೋರ್ಟು ಓದಲಾಯಿತು.

ಮುಂದಿನ ಮೀಟಿಂಗಿಗೆ ಈ ವಿಷಯ ಇಡಲ್ಪಡತಕ್ಕದ್ದೆಂದು ತೀರ್ಮಾನಿಸಲಾಯಿತು.

XXVII. ಕುಣಿಗಲ್ ಮುಸಾಫರಖಾನೆಯ ಒಂದು ಪ್ರದೇಶವನ್ನು ಪೊಲೀಸ್ ಇಲಾಖೆಯವರು ಪ್ರಯಾಣೀಕರಿಗೆ ಅನಾನುಕೂಲಪಡಿಸಿ ಉಪಯೋಗಿಸಲ್ಪಡುತ್ತಲಿದ್ದಾರೆ. ಅವರು ಆರೀತಿ ಉಪಯೋಗಿಸುವ ಕಾಲಕ್ಕೆ ಫೀಜು ಅವರಿಂದ ವಸೂಲ್ ಮಾಡತಕ್ಕದ್ದೆಂಬ ವಗೈರೆ ನಮೂದಾದ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಕಳುಹಿಸಿರುವದಾಗಿ ನಮೂದಿರುವ ಕುಣಿಗಲ್ ತಾಲ್ಲೂಕು ಅಮಲ್ದಾರ 16—1—07ನೆ ಮುರ್ಕುಂ 475ನೆ ನಂಬರ ರಿಪೋರ್ಟು ಓದಲಾಯಿತು.

ಈ ವಿಷಯವನ್ನು ಮುಂದಿನ ಮೀಟಂಗಿಗೆ ಇಡತಕ್ಕದ್ದೆಂದು ತೀರ್ಮಾನಿಸಲಾಯಿತು.

XXVIII. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಸರ್ 1907ನೆ ಇಸವಿ ಮೇ ತಾರೀಖು 2ರಲ್ಲು ಮಧ್ಯಾಹ್ನ 3 ಘಂಟೆಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಿ. ಎ. ಮಹದೇವ ಶಾಸ್ತ್ರಿ,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

1907ನೇ ಇಸವಿ ಫೆಬ್ರುವರಿ ಮಾಹೆ 16ನೆ ತಾರೀಖು ಶನಿವಾರ ನಡದ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಮೀಟಂಗಿನ ಪ್ರೊಸೀಡಿಂಗ್ಸ್.

ಹಾಜರಿದ್ದವರು.

1. ಪ್ರೆಸಿಡೆಂಟರು, ಮ|| ಎಂ. ಕಾಂತರಾಜ ಅರಸನವರು.
2. ಹುಣಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಎ. ಸುಬ್ರಹ್ಮಣ್ಯ ಐಯ್ಯರು.
3. ಕೃಷ್ಣರಾಜಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಬಿ. ಕೃಷ್ಣರಾಯರು.
4. ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಬಿ. ವೆಂಕೋಬರಾಯರು.
5. ಮೈಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಟಿ. ಕೆ. ಸುಂದರರಾಜೈಯ್ಯಂಗಾರು.
6. ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್, ಮ|| ಬಿ. ಸುಬ್ಬರಾಯರು.
7. ಮೈಸೂರು ಡಿಸ್ಟ್ರಿಕ್ಟು ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು ಮ|| ಎಂ. ರಾಮಸ್ವಾಮಯ್ಯನವರು.
8. ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮ|| ಎಸ್. ವೈದ್ಯನಾಥೈಯ್ಯರವರು.

"ಡಿ" ಕ್ಲಾಜಿನ ಮೇರೆ ಪ್ರಜಾ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.
ಮ|| ಅಂಬ್ಳೆ ಅಣ್ಣಯ್ಯ ಪಂಡಿತರು	ಮೈಸೂರು.
,, ಅಂತಹಳ್ಳಿ ಮುದ್ದೇಗೌಡರು	ಹುಣಸೂರು.
,, ಟಿ. ಸುಬ್ಬರಾಯರು	ಹೆಗ್ಗಡದೇವನಕೋಟೆ.
,, ಚಂದ್ರಶೇಖರೈಯ್ಯನವರು	ನಾಗಮಂಗಲ.
,, ಎ. ನರಸಿಮ್ಹಯ್ಯನವರು	ಮಳವಳ್ಳಿ.
,, ವಾಸುದೇವಯ್ಯನವರು	ಚಾಮರಾಜನಗರ.
,, ಟಿ. ಕೃಷ್ಣರಾಯರು	ಟಿ. ನರಸೀಪುರ.

"ಇ" ಕ್ಲಾಜು ಮೇರೆ ಪ್ರಜಾ ಪ್ರತಿನಿಧಿಗಳು.

ಮ|| ತಾಯೂರು ಕೃಷ್ಣರಾವ್, ಪ್ಲೀಡರ್ಸ್ ಅಮಲ್ದಾರು.
,, ಉಂಡವಾಡಿ ನರಸಿಂಗರಾವ್, ಬ್ಯಾನುಭೋಗರು ಮತ್ತು ಜಮೀನ್ದಾರು.
,, ಗುಂಡಪ್ಪನವರು, ಶ್ಯಾನುಭೋಗರು ಮತ್ತು ಜಮೀನ್ದಾರು.
,, ಮಾದಪ್ಪನವರು, ಇನಾಂದಾರು.

ಗೈರ್ ಹಾಜರಾದವರು.

1. ಮೈಸೂರು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು ಮ|| ಟಿ. ಎಸ್. ನಂಜಪ್ಪನವರು.

"ಡಿ" ಕ್ಲಾಜು ಮೇರೆ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.
ಮೆ|| ಭೀಮರಾಯರು	ನಂಜನಗೂಡು.
,, ನಾಡಿಗ ಕೃಷ್ಣಪ್ಪನವರು	ಕೃಷ್ಣರಾಜಪೇಟೆ.
,, ವೈ. ರಾಮಣ್ಣನವರು	ಮಂಡ್ಯ.
,, ಸಿದ್ದಲಿಂಗಪ್ಪನವರು	ಗುಂಡ್ಲುಪೇಟೆ.
...	ಯಡತೊರೆ.
,, ಶ್ರೀಕಂಠಶೆಟ್ಟರು	ಫ್ರೆಂಚ್‌ರಾಕ್ಸ್.
...	ಶ್ರೀರಂಗಪಟ್ಟಣ.

"ಇ" ಕ್ಲಾಜಿನ ಮೇರೆ ಪ್ರತಿನಿಧಿಗಳು.

ಅಡ್ವೊಕೇಟ್ ಮೆ|| ಎ. ರಾಮಣ್ಣನವರು.

ಜಮೀನ್ದಾರು ಮೆ|| ದಾಸಶೆಟ್ಟರು.

ಪೆನ್ಶನ್ ಅಮಲ್ದಾರು ಮೆ|| ಹರ್ಸೆ ಅಲ್ಲಿ ಬೇಗರವರು.

1. ಈ ಕೆಳಗೆ ಕಂಡ ಗಾರ್ವರ್ನಮೆಂಟು ಪ್ರೊಸಿಡಿಂಗ್ಸ್‌ಗಳು ಓದಲ್ಪಟ್ಟು ರಿಕಾರ್ಡು ಮಾಡಲ್ಪಟ್ಟವು.

(1) ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ಲಗತ್ತಾಗಿರುವ ಇನ್‌ಪೇಷಂಟು ವಾರ್ಡುಗಳನ್ನು ಹಾಸ್ಪಿಟಲ್ ಅಸಿಸ್ಟೆಂಟರುಗಳ ವಾಸಸ್ಥಾನವಾಗಿ ಮಾಡಲು ಆಗುವದಿಲ್ಲವೆಂದು ಬಂದ 9—11—06ನೆ ಮರ್ಕಂ 3783-97—L. B. 357—92-34ನೆ ನಂಬರ್ ಪ್ರೊಸೀಡಿಂಗ್ಸು.

(2) ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ ಅಜಮಾಯಿಷಿಗೆ ಒಳಪಟ್ಟು ವೈದ್ಯಶಾಲೆಗಳು ಅಮಲ್ದಾರರ ಆಡಳಿತಕ್ಕೆ ಸೇರತಕ್ಕದ್ದೆಂದು ಸಾದರಾದ 19—11—06ನೆ ಮರ್ಕಂ 4100-8—L. F. 131-06-2ನೆ ನಂಬರ್ ಗಾರ್ವರ್ನಮೆಂಟ್ ಆರ್ಡರು.

2. ಶ್ರೀರಂಗಪಟ್ಟಣದ ಟೌನಿನ ಸ್ಯಾನಿಟರಿ ಅಭಿವೃದ್ಧಿಗೋಸ್ಕರ ಡಿಸ್ಟ್ರಿಕ್ಟು ಬೋರ್ಡಿನವರು ಎಷ್ಟರಮಟ್ಟಿಗೆ ಕುಮಕು ಮಾಡುವದಕ್ಕೆ ಆಗುತ್ತೆಂಬ ವಿಷಯವನ್ನು ತಿಳಿಸಬೇಕೆಂದು ಬಂದ 16—11—06ನೆ ಮರ್ಕಂ 3995-7—Ml. 392-05—10ನೆ ನಂಬರ್ ಗಾರ್ವರ್ನಮೆಂಟು ಆರ್ಡರು ಓದಲಾಯಿತು.

ಡಿಸ್ಟ್ರಿಕ್ಟು ಬೋರ್ಡಿನವರು ಕೊಡಬಹುದಾದ ಹಣದ ವಿಚಾರ ವ್ಯವಸ್ಥೆ ಮಾಡುವದಕ್ಕೆ ಮುಂಚೆ ಸ್ಯಾನಿಟರಿ ಇಂಜನಿಯರವರಿಂದ ಆಗಬೇಕಾದ ಕೆಲಸಕ್ಕೆ ಒಂದು ಅಂದಾಜಾ ತಯಾರ್ಮಾಡಿಸಬೇಕೆಂದು ಗಾರ್ವರ್ನಮೆಂಟಿಗೆ ಬರೆಸಬೇಕೆಂದು ತೀರ್ಮಾನವಾಯಿತು.

3. ಈಗ ಡಿಸ್ಟ್ರಿಕ್ಟು ಫಂಡಿನಿಂದ ಇಟ್ಟುಕೊಂಡಿರುವ ಕೆಲವು ಎಸ್ಟೇಟುಗಳಿಗೆ ಹೋಗುವ ರಸ್ತೆಗಳನ್ನು ಬಿಟ್ಟುಬಿಡಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿಸಭೆಯ 239ನೆ ವಿಷಯವನ್ನು ಓದಲಾಯಿತು.

ಬೋರ್ಡಿನವರಿಗೂ ಮೇಲ್ಕಂಡಂತೆ ಅಭಿಪ್ರಾಯವಿದೆಯೆಂದು ತಿಳಿಸಬೇಕೆಂದು ತೀರ್ಮಾನವಾಯಿತು.

4. ವಿಲೇಜ್ ಯೂನಿಯನ್ನಿನ ಪಟೇಲರು ಪಾಂಡು ಕೀಪರಾಗಿರಕೂಡದೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 228ನೆ ನಂಬರ್ ವಿಷಯವನ್ನು ಓದಲಾಗಿ—

ಚಾಲ್ತಿಯಲ್ಲಿ ಇರುವ ಪದ್ಧತಿಯು ಸರಿಯಾಗಿರುವದರಿಂದ ಇದನ್ನೇ ಆಚರಿಸಬಹುದೆಂದು ತೀರ್ಮಾನವಾಯಿತು.

5. ಗ್ರಾಮಾಂತರದ ಸ್ಯಾನಿಟರಿ ಅಭಿವೃದ್ಧಿಗೋಸ್ಕರ ಡಿಸ್ಟ್ರಿಕ್ಟು ಫಂಡಿನ ಪೈಕಿ ಒಂದು ಭಾಗವನ್ನು ವಿಂಗಡಿಸಬೇಕೆಂಬ 1906ನೆ ದಸರಾ ಪ್ರಜಾಪ್ರತಿನಿಧಿ ಸಭೆಯ 218 ಮತ್ತು 221ನೆ ವಿಷಯಗಳನ್ನು ಓದಲಾಗಿ—

ಬೋರ್ಡಿನವರು ಈ ವಿಚಾರದಲ್ಲಿ ಮಾಡತಕ್ಕದ್ದನ್ನೆಲ್ಲಾ ಮಾಡುತ್ತಾ ಇರುವದರಿಂದ ಇದಕ್ಕಾಗಿ ಪ್ರತ್ಯೇಕವಾಗಿ ಫಂಡು ಏರ್ಪಡಿಸುವದು ಅನವಶ್ಯಕವೆಂದು ತೀರ್ಮಾನವಾಯಿತು.

6. ದೊಡ್ಡಿಗೆ ದಾಖಲಾಗುವ ದನಗಳ ಚಾರಾ ಖರ್ಚನ್ನು ಖಜಾನೆಗೆ ಇರಸಾಲು ಮಾಡದೆ ದೊಡ್ಡಿದಾರು ತಮ್ಮಲ್ಲಿ ಇಟ್ಟುಕೊಳ್ಳಬೇಕೆಂಬ 1906ನೆ ದಸರಾ ಪ್ರಜಾಪ್ರತಿನಿಧಿ ಸಭೆಯ 231ನೆ ವಿಷಯವನ್ನು ಓದಲಾಗಿ—

1894ನೆ ಗಾರ್ವರ್ನಮೆಂಟು ಪ್ರೊಸೀಡಿಂಗ್ಸ್ ಹುಟ್ಟುವದಕ್ಕೆ ಮುಂಚೆ ಇದ್ದ ಪದ್ಧತಿಯು ಈ ಸಲಹೆಗೆ ಅನುಸಾರವಾದದ್ದೆಂದು ಬೋರ್ಡಿನವರಿಗೆ ತಿಳಿಯಬಂದದ್ದರಿಂದ ಸದರಿ ಪೂರ್ವದ ಆಚರಣೆಯನ್ನು ಜಾರೀಲಿ ತಂದರೆ, ದೊಡ್ಡಿದಾರು ದೊಡ್ಡಿಗೆ ಸೇರಿದ ದನಗಳಿಗೆ ಚನ್ನಾಗಿ ರಾತೀವು ಹಾಕಲು ಅನುಕೂಲವಾಗುವದರಿಂದ ಪೂರ್ವದ ಆಚರಣೆಯನ್ನೆ ಜಾರೀಲಿ ತರಬೇಕೆಂದು ತೀರ್ಮಾನವಾಯಿತು.

ದೊಡ್ಡಿಗೆ ದಾಖಲಾದ ಆಡುಗಳ ಮೇಲೆ ವಸೂಲಾಗುವ ಜುಲ್ಮಾನೆಯನ್ನು ಜಾಸ್ತೀ ಮಾಡಬೇಕೆಂಬ 1906ನೆ ದಸರಾ ಪ್ರಜಾಪ್ರತಿನಿಧಿ ಸಭೆಯ 230ನೆ ವಿಷಯವನ್ನು ಓದಲಾಗಿ—

ವನಗಳ ಮೇಲೆ 4 ಆಣೆ ಜುಲ್ಮಾನೆ ವಸೂಲಾದರೂ ವನಗಳಿಂದ ಉಂಟಾಗುವ ನಷ್ಟಕ್ಕಿಂತಲೂ ಪೈರು ಪಚ್ಚೆಗಳಿಗೆ ಆಡುಗಳಿಂದ ಎಚ್ಚಾದ ನಷ್ಟ ಸಂಭವಿಸುವದರಿಂದ ಇವುಗಳ ಮೇಲೆ ವಸೂಲಾಗುವ ಜುಲ್ಮಾನೆಯನ್ನ ಬಂದಾಜೆಯಿಂದ ಎರಡಾಣೆಗೆ ಜಾಸ್ತಿ ಮಾಡಬೇಕೆಂದು ತೀರ್ಮಾನವಾಯಿತು.

8. 50 ಮನೆಗಳಿಗಿಂತ ಜಾಸ್ತಿಯುಳ್ಳ ಗ್ರಾಮಗಳ ವಿಲೇಜ್ ಸ್ಯಾನಿಟೇಷನ್ ರೂಲ್ಸುಗಳನ್ನ ಜಾರೀಲಿ ತರಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 223ನೆ ವಿಷಯವನ್ನ ಓದಲಾಗಿ—

ಈರೀತಿ ಜಾರೀಗೆ ತರಲು ಇನ್ನೂ ಸಕಾಲ ಪ್ರಾಪ್ತಿಯಾಗಿಲ್ಲವೆಂದು ತೀರ್ಮಾನವಾಯಿತು.

9. ಡಿಸ್ಟ್ರಿಕ್ಟ್ ಫಂಡು ರಸ್ತೆಗಳ ಸಾಲಾಬಾದು ಕಾಂಗಾರಿಗಳ ಚಾರ್ಜನ್ನ ಪ್ರಾವಿನ್ಷಿಯಲ್ ಫಂಡಿನಿಂದ ಕೊಡಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 211ನೆ ವಿಷಯವನ್ನ ಓದಲಾಯಿತು.

ಈರೀತಿಯ ಒಟ್ಟು ಸಲಹೆಯು ಅನವಶ್ಯಕವಾದದ್ದೆಂತಲೂ ಮತ್ತು ಸಕಾರಣವಾಗಿಲ್ಲವೆಂತಲೂ ಮುಖ್ಯವಾದ ಸಂದರ್ಭಗಳಲ್ಲಿ ಅವುಗಳ ವಿಷಯವನ್ನ ಕುರಿತು ಗೌರ್ನಮೆಂಟಿನ ಸುಮುಖಾಲೋಚನೆಗೆ ಬರೆಯಬಹುದೆಂತಲೂ ಸಹ ತೀರ್ಮಾನವಾಯಿತು.

10. 100 ಮನೆಗೆ ಜಾಸ್ತಿಯಾಗಿರುವ ಗ್ರಾಮಗಳಲ್ಲಿ ರಸ್ತೆಗಳನ್ನ ಮಾಡಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 213ನೆ ವಿಷಯವನ್ನು ಓದಲಾಗಿ—

ಫಂಡು ಇಲ್ಲವಾಗಿ ಈ ರೀತಿ ಮಾಡಲು ಸಾಧ್ಯವಿಲ್ಲವೆಂತಲೂ ಇಂಥಾ ಕೆಲಸಗಳು ಗ್ರಾಮಸ್ಥರು ಮಾಡತಕ್ಕದ್ದಾಗಿರುತ್ತೆಂತಲೂ ಸಹ ತೀರ್ಮಾನವಾಯಿತು.

11. ಎಲ್ಲಾ ಗ್ರಾಮಗಳಲ್ಲೂ ವಿಲೇಜ್ ಸ್ಯಾನಿಟೇಷನ್ ರೂಲ್ಸನ್ನ ಜಾರೀಲಿ ತರಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 222ನೆ ವಿಷಯವನ್ನ ಓದಲಾಗಿ—

ಇದು ಅನವಶ್ಯಕವೆಂದು ತೀರ್ಮಾನವಾಯಿತು.

12. ನಂಜನಗೂಡು ತಾಲ್ಲೂಕಿನ ಇನ್‌ಕಂಪ್ಲೀಟ್ ಕಾಂಗಾರಿಗಳನ್ನ ಪೂರೈಸಲು ಒಬ್ಬ ಸ್ಪೇಷಲ್ ಸಬ್ ಓವರ್ಸಿಯರನ್ನ ನೇಮಿಸಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 369ನೆ ವಿಷಯವನ್ನ ಓದಲಾಗಿ—

ಅಮಲ್ದಾರ್ರ ತಾಬೇಲಿರುವ ಟ್ಯಾಂಕು ಮತ್ತು ವರ್ಕ್ಸ್ ಇನ್ಸ್‌ಪೆಕ್ಟರುಗಳನ್ನ ಸದರಿ ಕೆಲಸಕ್ಕೆ ನೇಮಿಸಿಕೊಳ್ಳಬಹುದಾಗಿ ಇದಕ್ಕಾಗಿ ಬೇರೆ ಇಸಂ ಇಡುವದು ಹೆಚ್ಚೆಂದು ತೀರ್ಮಾನವಾಯಿತು.

13. ಮೈಸೂರು-ಟಿ. ನರಸೀಪುರ ರೋಡ 14ನೆ ಮೈಲಿಯಿಂದ ಚಿದರವಳ್ಳಿ ಕಲ್ಕುಣಿ ವಗೈರೆ ಗ್ರಾಮಗಳ ಮಾರ್ಗವಾಗಿ ಒಂದು ಫಂಡಿ ಮಾರ್ಗವನ್ನ ಮಾಡಿಸಿಕೊಡಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 374ನೆ ವಿಷಯವನ್ನ ಓದಲಾಗಿ—

ಮೇಲ್ಕಂಡ ಫಂಡಿ ಮಾರ್ಗವು ಅನವಶ್ಯಕವೆಂದು ತೀರ್ಮಾನವಾಯಿತು.

14. ಶ್ರೀರಂಗಪಟ್ಟಣದಿಂದ ತುಪ್ಪಸೂರಿಗೆ ಹೋಗುವ ರಸ್ತೆಗೆ ರಿಪೇರಿ ಮಾಡಿಸಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 380ನೆ ವಿಷಯವನ್ನ ಓದಲಾಗಿ—

ಸರ್ಕಾರದ ಬಾಗವಡಿನಿಂದ ಈ ರಸ್ತೆಯನ್ನ ರಿಪೇರಿ ಮಾಡಿಸುವದು ಅವಶ್ಯಕವಿಲ್ಲವೆಂದು ತೀರ್ಮಾನವಾಯಿತು.

15. 1906ನೆ ಜೂನ್ 30ನೆ ತಾರೀಖಿನಲ್ಲಿ ಸಾಲಿಗ್ರಾಮದ ಯೂನಿಯನ್ ಫೈಡಿಪಿನಲ್ಲಿ ಇದ್ದ ಹಣವನ್ನ ಅದರ ಮಾರನೆ ದಿನ ಸಾಲಿಗ್ರಾಮದಲ್ಲಿ ಏರ್ಪಡಿಸಿದ ಮ್ಯುನಿಸಿಪಲ್ ಬೋರ್ಡಿಗೆ ವರ್ಗಾಯಿಸಲು ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯವನ್ನ ತಿಳಿಸಬೇಕೆಂದು ಗೌರ್ನಮೆಂಟ್ ಸೆಕ್ರಿಟೆರಿಯೇಟಿನಿಂದ ಬಂದ 24—1—07ನೆ ಮರ್ಕೂಂ 6576ನೆ ನಂಬರ ಡಾಕೆಟನ್ನ ಓದಲಾಗಿ—

ಪುನಃ ಏರ್ಪಾಟಾದ ಮ್ಯುನಿಸಿಪಾಲಿಟಿಗೆ 30-6-06ರಲ್ಲಿ ಖರ್ಚಾಗದೆ ಬಾಕೀಲಿದ್ದ ಮೊಬಲಗನ್ನ ಪುನಃ ವರ್ಗಾಯಿಸಲು ಒಪ್ಪಿದ್ದೇವೆಂದು ತೀರ್ಮಾನವಾಯಿತು.

16. ಪೂಜಾರು-ಬಿಡಗುಲಿ ರಸ್ತೆಯನ್ನ ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಳ್ಳುತ್ತಾರೆಯೆ ಎಂಬ ವಿಷಯವನ್ನ ತಿಳಿಸಬೇಕೆಂದು ಚೀಫ್ ಇಂಜಿನಿಯರವರಿಂದ ಬಂದ 21—1—07ನೆ ಮರ್ಕೂಂ 52-483ನೆ ನಂಬರ ಡಾಕೆಟನ್ನ ಓದಲಾಗಿ—

ಈರೀತಿ ಬೋರ್ಡಿನವರು ಮಾಡುವದಕ್ಕೆ ಆಗುವದಿಲ್ಲವೆಂದು ತೀರ್ಮಾನವಾಯಿತು.

17. ಬೆಂಗಳೂರು-ಮೈಸೂರು ರೋಡು ಹೋಗುವ ಗೌಡಕೆರೆ ಏರಿಯನ್ನ ರಿಪೇರಿ ಮಾಡಲು 1,018 ರೂಪಾಯಿಗೆ ಅಂದಾಜು ಕಳುಹಿಸಿರುವದಾಗಿ ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರಿಂದ ಬಂದ 21—11—06ನೆ ಮರ್ಕೂಂ 1275ನೆ ನಂಬರ ಡಾಕೆಟು ಓದಲಾಯಿತು.

ಎಗ್ಜಿಕ್ಯೂಟಿವ್ ಇಂಜನಿಯರವರು ಸದರಿ ರಸ್ತೆಯು ಸರಿಯಾದ ಸ್ಥಿತಿಯಲ್ಲಿ ಇರಬೇಕಾದರೆ ಹಾಲಿ ರಿಪೇರಿ ಮಾಡುವದು ಅವಶ್ಯಕವೆಂದು ಹೇಳಿದ್ದರಿಂದ ಅಂದಾಜಾವನ್ನ ಒಪ್ಪಿರುತ್ತೆಂತಲೂ—

ಅವಶ್ಯಕವಾದ ಮೊಬಲಗನ್ನ ಹೆಚ್ಚಾದ ಗ್ರಾಂಟಾಗಿ ಕೊಡಬೇಕೆಂದು ಶಿಫಾರ್ಸು ಮಾಡಬೇಕೆಂದು ತೀರ್ಮಾನವಾಯಿತು.

18. ನಂಜನಗೂಡು-ನರಸೀಪುರದ ರಸ್ತೆಗೆ ಸ್ಪೆಷಲ್ ರಿಪೇರಿ ಬಗ್ಗೆ 365 ರೂಪಾಯಿಗೆ ಅಂದಾಜು ಕಳುಹಿಸಿರುವಂತೆ ಮೈಸೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರಿಂದ ಬಂದ 12—1—07ನೆ ಮರ್ಕೂಂ 42ನೆ ನಂಬರ ಡಾಕೆಟನ್ನ ಓದಲಾಯಿತು.

ಅಡಿಷನಲ್ ಗ್ರಾಂಟಾಗಿ ಮಂಜೂರ್ಮಾಡಿರುವದಾಗಿ ತೀರ್ಮಾನವಾಯಿತು.

19. ಚಾಲ್ತಿ ಸಾಲ್ ಬಡ್ಜೆಟ್ ಗ್ರಾಂಟಿಗೆ Re-appropriation Statement ಕಳುಹಿಸಿರುವದಾಗಿಯೂ ಕೆಲವು 3ನೆ ಕ್ಲಾಸು ಟ್ರಾವಲರ್ಸ್ ಬಂಗ್ಲಾಗಳನ್ನ ರಿಪೇರಿ ಮಾಡಲು 2,000 ರೂಪಾಯಿ ಅಡಿಷನಲ್ ಗ್ರಾಂಟು ಕೊಡಬೇಕೆಂತಲೂ ಸಹ ಮೈಸೂರು ಡಿವಿರ್ಜ ಎಗ್ಸಿಕ್ಯೂಟಿವ ಇಂಜನಿಯರವರಿಂದ ಬಂದ 26—12—06ನೆ ಮರ್ಕುಂ 1390ನೆ ನಂಬರ್ ಡಾಕೆಟ್ ಮತ್ತು 15—2—07ನೆ ಮರ್ಕುಂ 144ನೆ ನಂಬರ್ ಲೆಟರು ಸಹ ಓದಲಾಯಿತು.

ಬದಲಾವಣೆ ಆಗಿರುವ Re-appropriation Statement ಅಂಗೀಕರಿಸಿರುವದಾಗಿಯೂ ಈ ಸಾಲಿನಲ್ಲಿ ಮೂರ ನೇ ಕ್ಲಾಸ್ ಬಂಗ್ಲಾಗಳನ್ನ ರಿಪೇರಿ ಮಾಡದೆ ಬಿಟ್ಟರೆ ಮುಂದೆ ಬೋರ್ಡಿಗೆ ತುಂಬಾ ಖರ್ಚಾಗುತ್ತೆಂದು ಎಗ್ಸಿಕ್ಯೂಟಿವ ಇಂಜಿನಿಯರವರು ಹೇಳಿದ್ದರಿಂದ ಈ ರಿಪೇರಿಗಾಗಿ 1,500 ರೂಪಾಯಿ ಅಡಿಷನಲ್ ಗ್ರಾಂಟಾಗಿ ಕೊಡಲು ಮಂಜೂರ್ಮಾಡಿರುತ್ತೆಂದು ತೀರ್ಮಾನವಾಯಿತು.

20. ರಿಪೇರಿ ಆಗಬೇಕಾದ ಡಿಸ್ಪೆನ್ಸರಿಗಳ ತಖ್ತೆ ನಿಶಿ ಬಂದ ಮೈಸೂರು ಶೀಮೆ ಸೀನಿಯರ್ ಸರ್ಜನರವರ 29-12-06ನೆ ಮರ್ಕುಂ 4267ನೆ ನಂಬರ್ ಡಾಕೆಟನ್ನ ಓದಲಾಯಿತು.

ಈ ರಿಪೇರಿಗಾಗಿ ಡಿಸ್ಟ್ರಿಕ್ಟ ಬೋರ್ಡಿನವರು ಕೊಡಬೇಕಾದ ಭಾಗವನ್ನ ಮುಂದಲಸಾಲಿನ ಬಡ್ಜೆಟಿನಲ್ಲಿ ಶೇರಿಸಬೇಕೆಂದು ತೀರ್ಮಾನವಾಯಿತು.

21. ಟಿ. ನರಶೀಪುರ ತಾಲ್ಲೂಕು ತಲ್ಕಾಡಿನಲ್ಲಿ ಆಸ್ಪಿಟಲ್ ಅಸಿಸ್ಟೆಂಟರವರಿಗೆ ಕುಮ್ಮಕು ಮಾಡುವ ಆಳಿಗೆ ಮಾಹೆಯಾನ 3 ರೂಪಾಯಿ ಅಲೋಯನ್ಸನ್ನ ಡಿಸ್ಟ್ರಿಕ್ಟ ಫಂಡಿನಿಂದ ಕೊಡಬೇಕೆಂದು ಮೈಸೂರು ಶೀಮೆ ಸೀನಿಯರ್ ಸರ್ಜನರವರಿಂದ ಬಂದ 4—1—07ನೆ ಮರ್ಕುಂ 437ನೆ ನಂಬರ ಡಾಕೆಟನ್ನ ಓದಲಾಯಿತು.

ಗಾರ್ವಮೆಂಟನವರ ಆಲೋಚನೆಯಲ್ಲಿರುವ ಮೇರೆ ಸದರಿ ಸ್ಥಳದಲ್ಲಿ ಒಂದು ಬ್ರಾಂಚು ಡಿಸ್ಪೆನ್ಸರಿ ಏರ್ಪಡಿಸುವ ವಿಷಯವು ಇತ್ಯರ್ಥವಾಗುವವರಿಗೂ ಈ ವಿಚಾರ ವ್ಯವಸ್ಥೆ ಇಲ್ಲದೆ ಇರಬಹುದೆಂದು ತೀರ್ಮಾನವಾಯಿತು.

22. ನಾಗಮಂಗಲದ ಲೋಕಲ್ ಫಂಡ್ ಡಿಸ್ಪೆನ್ಸರಿಯಲ್ಲಿ ಇನ್‌ಪೇಷಂಟ್ ವಾರ್ಡುಗಳನ್ನ ಕಟ್ಟಿಸಬೇಕೆಂಬ ವಿಚಾರವಾಗಿ ಮೈಸೂರು ಡಿ॥ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರಿಂದ ಬಂದ 11—1—07ನೆ ಮರ್ಕುಂ 2501ನೆ ನಂಬರ್ ಮೆಮೊ ಓದಲಾಯಿತು.

ಈ ಕೆಲಸವನ್ನ ಮಂಜೂರ್ಮಾಡಿರುತ್ತೆಂತಲೂ ಈ ಬಗ್ಯೆ ತಗಲುವ ಲಾಗವಡಿನಲ್ಲಿ ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾದ ಭಾಗವನ್ನ ಮುಂದಲ ಎರಡು ಸಾಲಿನ ಬಡ್ಜೆಟ್ಟನಲ್ಲಿ ಸೇರಿಸಬೇಕೆಂತಲೂ ಸಹ ತೀರ್ಮಾನವಾಯಿತು.

23. ಮಳವಳ್ಳಿಯಲ್ಲಿರುವ ಡಿಸ್ಪೆನ್ಸರಿಯ ಸುತ್ತಲೂ ಕಾಂಪೌಂಡು ಗೋಡೆಯಾಗಲಿ ಅಥವಾ ತಂತಿ ಬೇಲಿಯಾಗಲಿ ಹಾಕಿಸಬೇಕೆಂದು ಮೈಸೂರು ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರಿಂದ ಬಂದ 9—1—07ನೆ ಮರ್ಕುಂ 2429ನೆ ನಂಬರ್ ಮೆಮೊ ಓದಲಾಯಿತು.

ಈ ಕೆಲಸದ ಅವಶ್ಯಕತೆ ಇಲ್ಲವೆಂದು ತೀರ್ಮಾನವಾಯಿತು.

24. ಹುಣಸೂರು ತಾಲ್ಲೂಕು ಹಣಗೋಡು ಗ್ರಾಮದಲ್ಲಿ ಒಂದು "Rest-house" ಕಟ್ಟಲು 2,396 ರೂಪಾಯಿಗೆ ಅಂದಾಜಾ ನಿಶಿ ಹುಣಸೂರ ಸಬ್ ಡಿವೀರ್ಜ ಆಫಿಸರವರಿಂದ ಬಂದ 11—1—07ನೆ ಮರ್ಕುಂ 102ನೆ ನಂಬರ್ ಯಾದಿಯನ್ನ ಓದಲಾಯಿತು.

ಈ ಕೆಲಸದ ಅವಶ್ಯಕತೆ ಇಲ್ಲವೆಂದು ತೀರ್ಮಾನವಾಯಿತು.

25. ಸುಮಾರು 600 ರೂಪಾಯಿ ಬೆಲೆ ಬಾಳುವ ಒಂದು ಜೊತೆ ಬೋರಿಂಗಟೂಲ್ಸನ್ನ ಡಿಸ್ಟ್ರಿಕ್ಟ ಬೋರ್ಡಿನ ಉಪಯೋಗಕ್ಕಾಗಿ ತೆಗದುಕೊಳ್ಳಬೇಕೆಂಬ ವಿಷಯವಾಗಿ ಹುಣಸೂರು ಸಬ್ ಡಿವೀರ್ಜ ಆಫಿಸರವರಿಂದ ತಲಪಿದ 10—1—07ನೆ ಮರ್ಕುಂ 140ನೆ ನಂಬರ್ ಲೆಟರು ಓದಲಾಯಿತು.

ಈ ಸಾಮಾನುಗಳನ್ನ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದು ತುಂಬಾ ಕಷ್ಟವೆಂತಲೂ ಮತ್ತು ಇದಕ್ಕಾಗಿ ತುಂಬಾ ಲಾಗವಡು ಆಗುತ್ತೆಂತಲೂ ಇವುಗಳನ್ನ ಸರಿಯಾಗಿ ಜೋಡಿಸಿ ಉಪಯೋಗಿಸುವದಕ್ಕಾಗಿ ಈ ಕೆಲಸವನ್ನ ಚೆನ್ನಾಗಿ ತಿಳಿದ ಸಿಬ್ಬಂದಿಗಳು ಬೇಕಾಗುತ್ತೆಂತಲೂ ಸಹ ಮೈಸೂರು ಡಿ॥ ಎಗ್ಸಿಕ್ಯೂಟಿವ ಇಂಜನಿಯರವರು ಹೇಳಿದ್ದರಿಂದ ಈ ವಿಷಯ ಯೋಚನೆಗೆ ತರುವದು ಮನ್ನಾಮಾಡಬಹುದೆಂದು ತೀರ್ಮಾನವಾಯಿತು.

26. ಹಲಗನಹಳ್ಳಿಯಲ್ಲಿರುವ ಒಂದು ಕೆರೆಯನ್ನ ರಿಪೇರಿ ಮಾಡಲು 192 ರೂಪಾಯಿಗೆ ಅಂದಾಜಾ ಕಳುಹಿಸಿರುವದಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ 28—11—06ನೆ ಮರ್ಕುಂ 52ನೆ ನಂಬರ್ ರಿಪೋರ್ಟಿಗೆ ಆಖೈರಾದ ನಡವಳಿಕೆ ಓದಲಾಯಿತು.

ಈ ಕೆರೆ ನೀರನ್ನ ಕುಡಿಯುವದಕ್ಕೆ ಬಹುಮಟ್ಟಿಗೆ ಉಪಯೋಗಿಸುವದಾಗಿ ರಿಪೋರ್ಟು ಆಗಿದ್ದರಿಂದ ಡಿಸ್ಟ್ರಿಕ್ಟ ಫಂಡಿನಿಂದ ಈ ಅಂದಾಜಾ ಮಂಜೂರ್ಮಾಡಬಹುದೆಂದು ತೀರ್ಮಾನವಾಯಿತು.

27. ತಿಪ್ಪೂರಿನಲ್ಲಿ ಯೂನಿರ್ಯ ಸ್ಥಾಪನೆ ಮಾಡಲು ಪ್ರಪೋಜಲ್ಸ ನಿಶಿ ಯಡತೊರೆ ತಾಲ್ಲೂಕು ಅಮಲ್ದಾರಿಂದ ಬಂದ 13—11—06ನೆ ಮರ್ಕುಂ 184ನೆ ನಂಬರ್ ರಿಪೋರ್ಟನ್ನ ಓದಲಾಯಿತು.

ಗವರ್ನ್ಮೆಂಟ ಮಂಜೂರಾತಿ ಬಗ್ಯೆ ಅಮಲ್ದಾರ್ರು ಪ್ರಪೋಜಲ್ ವಿಷಯವಾಗಿ ಬರಸಬೇಕೆಂದು ತೀರ್ಮಾನವಾಯಿತು.

28. ಹೆಗ್ಗಡದೇವನಕೋಟೆ ತಾಲ್ಲೂಕು ಅಂತರಸಂತೆಯಲ್ಲಿ ಒಂದು ಸಂತೆ ಮಾಡಲು ಮಂಜೂರಾಗಬೇಕೆಂದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಬಂದ 27—11—06ನೆ ಮರ್ಕುಂ 434ನೆ ನಂಬರ್ ನಡವಳಿಕೆ ಓದಲಾಯಿತು.

ಇವರ ಶಿಫಾರ್ಸಿನಂತೆ ಮಂಜೂರಾಗಲು ಗವರ್ನಮೆಂಟಿಗೆ ಬರಸಬೇಕೆಂದು ತೀರ್ಮಾನವಾಯಿತು.

29. ಜಾತ್ರೆ ಕಾಲದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ದನಗಳ ಒಂದು ಪ್ರದರ್ಶನವನ್ನು ಏರ್ಪಡಿಸುವ ವಿಚಾರದಲ್ಲಿ 1906ನೆ ಇಸವಿ ನವಂಬರ್ 10ನೆ ತಾರೀಖಿನ ಡಿಸ್ಟ್ರಿಕ್ಟು ಬೋರ್ಡಿನ ರೆಜಲ್ಯೂಷನ್ ಓದಲಾಯಿತು.

ಹಂಗಾಮಿಯಾಗಿ ಈ ಏರ್ಪಾಡನ್ನು ಮಂಜೂರ್ಮಾಡಬಹುದೆಂತಲೂ, ಚುಂಚನಕಟ್ಟೆ ದನಗಳ ಪ್ರದರ್ಶನದಲ್ಲಿ ನಡೆಯುವ ಮೇರೆ ಬಹುಮಾನವಾಗಿ ಕೊಡುವ ಮೊಬಲಗು ಪೈಕಿ ಅರ್ಧವನ್ನು ಮುಂದಲ ಸಾಲಿನ ಬಡ್ಜೆಟ್ಟಿನಲ್ಲಿ ಪ್ರೊವೈಡು ಮಾಡಬೇಕೆಂತಲೂ ಸದರಿ ಪ್ರದರ್ಶನದಲ್ಲಿ ವಸೂಲಾಗುವ ತೆರಿಗೆ ಮೊಬಲಗು ಮುಜರಾಯಿ ಫಂಡಿಗೆ ಕ್ರೆಡಿಟ್ಟಾಗು ವದರಿಂದ ಬಾಕಿ ಅರ್ಧ ಮೊಬಲಗನ್ನು ಸದರಿ ತೆರಿಗೆ ಮೊಬಲಗಿನಿಂದ ಕೊಡಲು ಮಂಜೂರಾಗಬೇಕೆಂದು ಗವರ್ನ ಮೆಂಟಿನವರನ್ನು ಕೇಳಬೇಕೆಂತಲೂ ಸಹ ತೀರ್ಮಾನವಾಯಿತು.

30. ಕೋಣನೂರಿನಿಂದ ಸಂತೆಮಾರಹಳ್ಳಿಗೆ ಒಂದು ರಸ್ತೆ ಮಾಡಿಸಿಕೊಡಬೇಕೆಂದು ನಂಜನಗೂಡು ತಾಲ್ಲೂಕು ಕೋಣನೂ ರು ಗ್ರಾಮಸ್ಥರಿಂದ ತಲಪಿದ 16—12—06ನೆ ಮರ್ಕುಂನ ಅರ್ಜಿಯು ಓದಲಾಯಿತು.

ಡಿಸ್ಟ್ರಿಕ್ಟು ಫಂಡಿನಿಂದ ಈ ರಸ್ತೆಯನ್ನು ಮಾಡಿಸುವ ಅವಶ್ಯಕತೆಯು ಬೋರ್ಡಿನವರಿಗೆ ತೋರುವದಿಲ್ಲವೆಂತಲೂ ಗ್ರಾಮ ಸ್ಥರು ಎಲ್ಲಾ ಮಟ್ಟಿ ಕಾಮಗಾರಿ ಮಾಡಿದ್ದಾದರೆ ಚರಂಡಿಗಳು ಮತ್ತು ಟನಲ್‌ಗಳು ಕಟ್ಟಲು ಏನಾದರು ಗ್ರಾಂ ಟು ಕೊಡಬಹುದೆ ಯೆಂಬ ವಿಷಯವನ್ನು ಬೋರ್ಡಿನವರು ಅನಂತರ ಯೋಚಿಸುತ್ತಾರೆಂದು ಅರ್ಜಿದಾರ್ರಿಗೆ ತಿಳಿಸ ಬೇಕೆಂದು ತೀರ್ಮಾನವಾಯಿತು.

31. ಪ್ರೆಸಿಡೆಂಟರವರ ಹೇಳಿಕೆಮೇರೆ ಕಳೆದ ನವಂಬರು ಮಾಹೆಯಲ್ಲಿ 495 ರೂಪಾಯಿಗೆ ಮಂಜೂರ್ಮಾಡಿದ ಅಂದಾಜಾ ಮೇರೆ ಮಂಡ್ಯ ತಾಲ್ಲೂಕು ಯಲಿಯೂರು ಮತ್ತು ಹೊಣಕೆರೆ ರೈಲ್ವೆ ಸ್ಟೇಷನ್ ಬಳಿ ರೆಸ್ಟು ಹಾಸುಗಳನ್ನು ಕಟ್ಟುವದು ಅವಶ್ಯಕ ವೆ ಇಲ್ಲವೆ ಎಂಬ ವಿಚಾರ ತನಿಖೆಯಿಂದ ತಿಳಿಯುವ ವರಿವಿಗೂ ಸದರಿ ಕಟ್ಟಡಗಳನ್ನು ಕಟ್ಟುವದನ್ನು ತಡೆ ಮಾಡಬೇಕೆಂದು ತೀರ್ಮಾನವಾಯಿತು.

32. ಬಡ್ಜೆಟ್ಟು ಗ್ರಾಂಟು ಪೈಕಿ 10—11—06 ಲಾಗಾಯಿತು 15—2—07ರ ವರಿಗೆ ಪ್ರೆಸಿಡೆಂಟರವರು ಮಂಜೂ ರ್ಮಾಡಿದ ಕಾಂಗಾರಿಗಳ ಪಟ್ಟಿಯನ್ನು ಓದಲ್ಪಟ್ಟಿತು—ಮತ್ತು ಬೋರ್ಡಿನವರು ಅಪ್ರೂವ್ ಮಾಡಿದರು.

33. ಫ್ರೆಂಚ್‌ರಾಕ್ಸ್ ಸ್ಟೇಷನಿಂದ ನೆಲ್ಲಿಗೆರೆಗೆ ಹೋಗುವ ರಸ್ತೆಯನ್ನು ಶ್ರೀರಂಗಪಟ್ಟಣದಿಂದ ಚನ್ನರಾಯಪಟ್ಟಣಕ್ಕೆ ಹೋ ಗುವ ರಸ್ತೆಯನ್ನು ಸಹ ಗೌರ್ನಮೆಂಟಿನವರು ಪ್ರೊವಿನ್ಷಿಯಲ್ ಫಂಡಿನಿಂದ ಇಟ್ಟುಕೊಳ್ಳಬೇಕೆಂಬ ಕೃಷ್ಣರಾಜಪೇಟೆ ತಾಲ್ಲೂಕು ಬೋರ್ಡಿನ 1907ನೆ ಜನವರಿ ಮಾಹೆಯ ರೆಜಲ್ಯೂಷನ್ ಓದಲಾಗಿ—

ಇಂಜಿನಿಯರ್ ಇಲಾಖೆಯವರು ಅವರ ಬಡ್ಜೆಟ ಅಲಾಟ್‌ಮೆಂಟಿನಿಂದ ಇಟ್ಟುಕೊಳ್ಳುವಷ್ಟು ಈ ರಸ್ತೆಗಳು ಮುಖ್ಯ ವಾದ್ದವುಗಳಾಗಿ ಇರುವದರಿಂದ ಅರೀತಿಮಾಡಲು ಗೌರ್ನಮೆಂಟಿನವರು ಸುಮುಖಾ ಲೋಚನೆಗೆ ತರುವಂತೆ ಶಿಫಾರ್ಸು ಮಾಡಬೇಕೆಂದು ತೀರ್ಮಾನವಾಯಿತು.

34. ರೈತರು ಅಕ್ಕಿಹೆಬ್ಬಾಳನಿಂದ ಮಾದಗೆರೆಗೆ ಹೋಗುವ ರಸ್ತೆಗೂ, ಸಂತೆಬಾಚಹಳ್ಳಿಯಿಂದ ನಾಗಮಂಗಲಕ್ಕೆ ಹೋ ಗುವ ರಸ್ತೆಗೂ 8,939 ರೂಪಾಯಿ ಬಾಳುವಷ್ಟು ಮಟ್ಟಿಕಾಮಗಾರಿ ಮಾಡಿರುತ್ತಾರೆಂದು ಕೃಷ್ಣರಾಜಪೇಟೆ ತಾಲ್ಲೂಕು ಅ ಮಲ್ದಾರ್ರು ರಿಪೋರ್ಟು ಮಾಡಿದ ವಿಚಾರದಲ್ಲಿ—ಬೋರ್ಡಿನವರು ಈ ಕೆಲಸವನ್ನು ಮೆಚ್ಚಿ ರಿಕಾರ್ಡು ಮಾಡಿರುತ್ತಾರೆಂತಲೂ ಈ ಸಂಗತಿಯನ್ನು ಅಮಲ್ದಾರ್ರ ಮೂಲಕ ರೈತರಿಗೆ ತಿಳಿಸಬೇಕೆಂತಲೂ ಸಹ ತೀರ್ಮಾನವಾಯಿತು.

35. 1907—08ನೆ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟನ್ನು ಮತ್ತು ಇದರ ವಿಚಾರವಾದ "Explanatory Memo" ವನ್ನು ಸಹ ಓದಲಾಯಿತು.

(1) ಅಂದಾಜಾ ಮೇರೆ ಹುಟ್ಟುವಳಿಯನ್ನು ಮಂಜೂರ್ಮಾಡಬಹುದೆಂತಲೂ, (2) ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ನಡೆಯಬೇಕಾದ ಕಾಂಗಾರಿಗಳಿಗೆ ಎಗ್ಜಿಕ್ಯೂಟಿವ್ ಇಂಜನಿಯರ್ರವರ ಹೇಳಿಕೆ ಮೇರೆ ಗ್ರಾಂಟು ಕೊಡಬ ಹುದೆಂತಲೂ, (3) B & C—2 ತಖ್ತೆಗಳಲ್ಲಿ ಕಂಡ ಮೇರೆ ತಾಲ್ಲೂಕು ಬೋರ್ಡಿನವರು ಪ್ರಪೋಜು ಮಾ ಡಿರುವ ಕಾಂಗಾರಿಗಳನ್ನು ಬದಲಾಯಿಸಬಹುದೆಂತಲೂ, (4) ವರ್ಕ್ಸ್ ಇನ್ಸ್‌ಪೆಕ್ಟರ ಜವಾನರಿಗೋಸ್ಕರ ಮಾ ಡಿದ್ದ ಪ್ರೊವಿಜನನ್ನು ವಜಾ ಮಾಡಬೇಕೆಂತಲೂ, (5) ಹುರದಲ್ಲಿರುವ ನೇಟಿವ್ ಪಂಡಿತನ ಅಲೋವೆನ್ಸಿ ಗಾಗಿ ಪ್ರೊವೈಡು ಮಾಡಿದ್ದರ ಪೈಕಿ ಹುರದಲ್ಲಿರುವ ಪಂಡಿತನಿಗೆ 8 ರೂಪಾಯಿ, ಕಳಲೆಯಲ್ಲಿರುವ ಪಂಡಿ ತನಿಗೆ 7 ರೂಪಾಯಿ, ಈಮೇರೆ ಬರುವ ಹಾಗೆ ಭಾಗಿಸಬೇಕೆಂತಲೂ, (6) ಬೋರ್ಡಿನವರು ಮೇಲೆ ತೀರ್ಮಾನ ಮಾಡಿರುವ ಮೇರೆ ix ಕಂಟ್ರಿಬ್ಯೂಷನ್ ಹೆಡ್ಡಿಗೆ 485 ರೂಪಾಯಿ ಜಾಸ್ತಿ ಸೇರಿಸಬೇಕೆಂತ ಲೂ, (7) ಅಮೃತಮಹಲ್ ಗೂಳಿಗಳಿಗೋಸ್ಕರ ಪ್ರೊವೈಡು ಮಾಡಿರುವದನ್ನು ಪ್ಯಾಸ್ ಮಾಡಬಹುದೆಂತ ಲೂ ಸಹ ತೀರ್ಮಾನವಾಯಿತು.

36. ಮುಂದಣ ಬೋರ್ಡಿನ ಮೀಟಂಗನ್ನು ಬರುವ ಮೇ 18ನೆ ತಾರೀಖು ಶನಿವಾರ ಮಧ್ಯಾಹ್ನ 3 ಘಂಟೆಗೆ ಮಾಡ ಬೇಕೆಂದು ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟ.

ಇಸ್ತಿಹಾರ್ನಾಮೆ.

ತಾರೀಖು 19ನೆ ಮಾರ್ಚಿ 1907.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳೀ ಜೋಡಿ ಹೊನ್ನವಳ್ಳೀ ಗ್ರಾಮವು ಜೋಡಿದಾರು ರಾಘವೇಂದ್ರಾಚಾರ ವಗೈರೇರಿಂದ ಸರ್ಕಾರಕ್ಕೆ ಬರತಕ್ಕ ಜೋಡಿ ಬಾಕೀಗಾಗಿ 1907ನೆ ಇಸವಿ ಮೇ ಮಾಹೆ 20ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಪಾಳ್ಯದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮರ್ಕ್ಕಂ ಗೆಜೆಟ್ಟಿನ IIನೆ ಭಾಗದ 88—89ನೆ ಪುಟವನ್ನು ನೋಡತಕ್ಕದ್ದು.

ತಾರೀಖು 19ನೆ ಮಾರ್ಚಿ 1907.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳೀ ಜೋಡಿ ಮಳಲಹಳ್ಳಿ ಗ್ರಾಮವು ಜೋಡಿದಾರು ವೆಂಕಟಾಚಾರು ವಗೈರೆ 6 ಜನಗಳಿಂದ ಸರ್ಕಾರಕ್ಕೆ ಬರತಕ್ಕ ಬಾಕೀಗಾಗಿ 1907ನೆ ಇಸವಿ ಮೇ ಮಾಹೆ 1ನೆ ತಾರೀಖು ಶನಿವಾರದ ದಿವಸ ದಿವಿ 11 ಘಂಟೆ ಲಾಗಾಯಿತು ಕುಂದೂರು ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪ್ಸೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮರ್ಕ್ಕಂ ಗೆಜೆಟ್ಟಿನ IIನೆ ಭಾಗದ 87—88ನೆ ಪುಟವನ್ನು ನೋಡತಕ್ಕದ್ದು.

ಟಿ. ಧರ್ಮರಾಜ ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಸರ್ 1907ನೆ ಇಸವಿ ಫೆಬ್ರುವರಿ 18ನೆ ತಾರೀಖು ಸೋಮವಾರದ ದಿವಸ ಹಾಸನ ಡಿಸ್ಟ್ರಿಕ್ಟ ಬೋರ್ಡಿನವರು ನಡಿಸಿದ ಮೀಟಿಂಗ್ ನಡವಳಿಕೆಗಳು.

ಹಾಜರು.

ಪಿ. ಆರ್. ಡಬ್ಲ್ಯು. ವೆದರಾಲ್, ಎಸ್‌ಕ್ವೈರ್ರವರು, ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ|| ಸೈಯದ್ ಅಮೀರ್‌ಹಸನ್ ಸಾಹೇಬರವರು, ಸಕಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.
,, ಎಂ. ಎ. ನಾರಣೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಜನರಲ್ ಅಸಿಸ್ಟೆಂಟ್ ಕಮಿಷನರವರು.
,, ಟಿ. ಧರ್ಮರಾಜಚೆಟ್ಟಿಯವರು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ಡಿ|| ಬೋ|| ವೈಸ್ ಪ್ರೆಸಿಡೆಂಟರು.
,, ಸಿ. ರಾಜಾರಾಮರಾಯರವರು, ಎಲ್. ಎಂ. ಎಸ್., ಹಾಸನ ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
,, ಎಂ. ಕೆ. ತಿರುಮಲಾಚಾರ್ಯರವರು, ಬಿ. ಎ., ಹಾಸನ ಡಿಸ್ಟ್ರಿಕ್ಟು ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ|| ಎಂ. ಲಕ್ಷ್ಮೀನರಸಿಹ್ಮಾಚಾರ್ಯರವರು.	ಮೆ|| ಕೆಂಚರಾಯಶೆಟ್ಟರು.
,, ಕೇಣಿ ಮಹದೇವಪ್ಪನವರು.	,, ಜಿ. ತಿರುನಾರಣೈಯ್ಯಂಗಾರು.
,, ಡಬ್ಲ್ಯು. ಎಲ್. ಕ್ರಾಫರ್ಡ್ ಸಾಹೇಬರವರು.	,, ನಂಜಂಣನವರು.
,, ಐಗೂರು ಮಲ್ಲೆಗೌಡರು	,, ಧರಣೈಯ್ಯಶೆಟ್ಟರು.
,, ಬೆಳ್ಳೂರು ನಂಜೆಗೌಡರು ವುರುಫ್ ಪುಟ್ಟೆಗೌಡರು.	,, ಸೂರ್ಯನಾರಾಯಣಶೆಟ್ಟರು.
,, ಕೆ. ತಮ್ಮಯ್ಯನವರು.	,, ಅಬ್ದುಲ್ಲಾಸಾಬರು.
,, ಹಬಿಬುಲ್ಲಾಸಾಬರು.	,, ಮಹಲಿಂಗೆಗೌಡರು.

ಗೈರ್ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ|| ಎಚ್. ಎ. ಸ್ಟೀಲ್ ಸಾಹೇಬರವರು, ಹಾಸನ ಡಿ|| ಎಗ್ಜಿಕ್ಯೂಟಿವ ಇಂಜನೀಯರ್ರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ|| ಹೆಚ್. ದಾಸಪ್ಪನವರು.	ಮೆ|| ಕೋನೇರಿ ರಾಮಶೆಟ್ಟರು.
,, ಎನ್. ಡಿ. ವೆಂಕಟರಾಮಯ್ಯನವರು.	,, ಗುರುಲಿಂಗೆಗೌಡರು.

I. 1907-08ನೆ ಸಾಲಿನ ಬಾಬತು ಫೈನಾನ್ಸ್ ಕಮಿಟಿಯವರು ತಯಾರ್ಮಾಡಿರುವ ಬಡ್ಜೆಟ್ ಅಂದಾಜಾಗಳು ಬದಲಾಯಿತು.

ತೀರ್ಮಾನ—ಮೇಲ್ಕಂಡ ಅಂದಾಜಾಗಳಲ್ಲಿ ಎ. ಪಬ್ಲಿಕ್ ವರ್ಕ್ಸ್ ಹೆಡ್ಡಿನಲ್ಲಿ ಹಾಸನ-ಅರಸೀಕೆರೆ ರಸ್ತೆ ಸ್ಪೆಷಲ್ ರಿಪೇರಿಗಾಗಿ ಫೈನಾನ್ಸ್ ಕಮಿಟಿಯವರು ದಾಖಲ್ಮಾಡಿದ್ದ 1,000 ರೂಪಾಯಿಗಳನ್ನು ವಜಾದಿಂದ ಬಿ. ಪಬ್ಲಿಕ್ ವರ್ಕ್ಸ್ ಹೆಡ್ಡಿ

ನಲ್ಲಿ ದಾಖಲ್ಮಾಡಿದ್ದ ಮೊಬಲಗಿಗೆ ಸದರಿ ಮೊಬಲಗು ಸೇರಿಸುವಂತೆ ಬದಲಾಯಿಸಿ ಫೈನಾನ್ಸ್ ಕಮಿಟಿಯವರ ರಿಪೋರ್ಟು ಮತ್ತು ಮೇಲ್ಕಂಡವೇರೆ ಬದಲಾಯಿಸಿದ ಅಂದಾಜಾವನ್ನು ಮಂಜೂರಿ ಬಗ್ಗೆ ಗವರ್ನಮೆಂಟಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

II. (A) 1907-08ನೆ ಸಾಲಿನಲ್ಲಿ ಹೊಳೆನರಸೀಪುರದ ಸೇತುವೆಮೇಲೆ ಸುಂಕ ವಸೂಲ್ಮಾಡತಕ್ಕ ಹಕ್ಕನ್ನು ಹರಾಜ್ ಮಾಡುವ ಉದ್ದಿಶ್ಯ ಗೆಜೆಟ್‌ನಲ್ಲಿ ಫಾಯಿಷ್ ಆಗತಕ್ಕ ನೋಟಿಫಿಕೇಷನ್ ನಿಶಿ ತಲಪಿದ 9-18—12—06ನೆ ಮುಕ್ಕಾಂ 1105—1387ನೆ ನಂಬರ್ ಜನರಲ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲಾಯಿತು.

(B) 1907-08ನೆ ಸಾಲಿನಲ್ಲಿ ಹಾಸನ ಮತ್ತು ಅರಸೀಕೆರೆ ರಸ್ತೆಮೇಲೆ ವಸೂಲ್ಮಾಡತಕ್ಕ ಸುಂಕದ ಹಕ್ಕನ್ನು ಸಹ ಹರಾಜ್ ಮಾಡತಕ್ಕದ್ದೆಂದು ಪ್ರೆಸಿಡೆಂಟರವರು ಇರಾದೆ ಪಟ್ಟರು.

ತೀರ್ಮಾನ — ಹೊಳೆನರಸೀಪುರದ ಸೇತುವೆಮೇಲೆ ಸುಂಕ ವಸೂಲ್ಮಾಡುವ ಹಕು ಹರಾಜ್ ನೋಟಿಫಿಕೇಷನ್ನು ಮೈಸೂರು ಗೆಜೆಟಿನಲ್ಲಿ ಫಾಯಿಷ್ ಆಗತಕ್ಕ ಬಗ್ಗೆ ಕಳುಹಿಸತಕ್ಕದ್ದೆಂದು.

ಮತ್ತು 1907-08ನೆ ಸಾಲಿನಲ್ಲಿ ಹಾಸನ ಅರಸೀಕೆರೆ ರಸ್ತೆಮೇಲೆ ವಸೂಲ್ಮಾಡತಕ್ಕ ಸುಂಕದ ಹಕ್ಕನ್ನು ಹರಾಜ್ ಮಾಡತಕ್ಕ ಬಗ್ಗೆ ಗವರ್ನಮೆಂಟಿನವರ ಮಂಜೂರಾತಿಯನ್ನು ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

III. (a) ಬೇಲೂರು ತಾಲ್ಲೂಕು ರಾಜನಸಿರಿಯೂರು ಭಾವಿ ಕಾಮಗಾರಿ ಮಾಡಿದ ಕಂಟ್ರಾಕ್ಟದಾರನಿಗೆ ಪಾವತಿ ಆಗತಕ್ಕ ಬಗ್ಯೆ 216 ರೂಪಾಯಿಗಳನ್ನು ಮಂಜೂರ್ಮಾಡಿ ಮುಂದೆ ಈ ಭಾವಿ ಕೆಲಸವನ್ನು ನಡಿಸಲು ಎಗ್ಜಿಕ್ಯೂಟಿವ್ ಇಂಜನಿಯರ್ ಮತ್ತು ಸೀನಿಯರ್ ಅಸಿಸ್ಟೆಂಟ್ ಕಮಿಷನರವರು ಸೇರಿ ಹಾಲಿ ನಡದಿರತಕ್ಕ ಕೆಲಸವನ್ನು ಅಜಮಾಯಿಷಿ ಮಾಡಿ ಮುಂದಿನ ಕೆಲಸಕ್ಕೆ ಅಂದಾಜಾ ನಿಶಿ ರಿಪೋರ್ಟು ಕಳುಹಿಸಬೇಕೆಂದು ವಗೈರೆ ನಮೂದಿನಿಂದ ತಲಪಿದ 8—9—06ನೆ ಮುಕ್ಕಾಂ 2204-5—ಲೋ. ಬೋ. (195-05)—12ನೆ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಓದಲಾಯಿತು.

(b) ಪ್ರಸಕ್ತವಾದ ವಿಷಯದಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರವರಿಂದ ತಲಪಿದ 19—1—07ನೆ ಮುಕ್ಕಾಂ 481-1656ನೆ ನಂಬರ್ ಯಾದಿಯನ್ನು ಮತ್ತು ಎಗ್ಜಿಕ್ಯೂಟಿವ್ ಇಂಜನೀಯರವರ, 21-23—1—07ನೆ ಮುಕ್ಕಾಂ 181-18ನೆ ನಂಬರ್ ಲೆಟರನ್ನು ಸಹ ಓದಲಾಯಿತು.

ತೀರ್ಮಾನ — ಎಗ್ಜಿಕ್ಯೂಟಿವ್ ಇಂಜನಿಯರವರು ಅವರ ಲೆಟರಿನಲ್ಲಿ ನಮೂದು ಮಾಡಿರುವ ಕಾರಣಗಳಿಂದ ಈಗ ಭಾವಿ ತೋಡಿರತಕ್ಕ ಜಾಗಾವನ್ನು ಬಿಟ್ಟು ಪ್ರತ್ಯೇಕ ಜಾಗವನ್ನು ಚುನಾಯಿಸತಕ್ಕದ್ದೆಂದುನ್ನು ಈ ಕೆಲಸಕ್ಕಾಗಿ ಮುಂದಿನ ವರುಷದಲ್ಲಿ ಸಾಕಾದಷ್ಟು ಹಣವಿಲ್ಲವಾಗಿ ಲೋಕಲ್ ಫಂಡ್ ಜನರಲ್‌ನಿಂದ ಈ ಕೆಲಸಕ್ಕೆ 700 ರೂಪಾಯಿ ಮಂಜೂರ್ಮಾಡಬೇಕೆಂದು ಗವರ್ನಮೆಂಟಿಗೆ ಬರೆಸತಕ್ಕದ್ದೆಂದುನ್ನು ತೀರ್ಮಾನಿಸಲಾಯಿತು.

IV. ಸಂತೆಗಳಲ್ಲಿ ಸುಂಕ ವಸೂಲ್ಮಾಡುವದಕ್ಕೆ ದುಕಾನಗಳನ್ನು ತರಗತಿವಾರಾಗಿ ವಿಂಗಡನೆ ಮಾಡಲು ಯಾವ ನಿಬಂಧನೆಯನ್ನು ಅನುಸರಿಸಿ ಯಾವ ರೀತಿ ಮಾಡತಕ್ಕದ್ದೆಂಬ ವಿಷಯದಲ್ಲಿ ರಿಪೋರ್ಟು ಮಾಡಬೇಕೆಂದು ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರಿಂದ ತಲಪಿದ 30—10—06ನೆ ಮುಕ್ಕಾಂ 3319—L. B. F. (402-05)—6ನೆ ನಂಬರ್ ಡಾಕೆಟನ್ನು ಓದಲಾಯಿತು.

ತೀರ್ಮಾನ — ದುಕಾನಗಳ ವಿಂಗಡನೆಯನ್ನು ಅವುಗಳಲ್ಲಿ ಬಿಕರಿ ಆಗತಕ್ಕ ಸಾಮಾನುಗಳ ತರಹೆ ಮತ್ತು ಮೊತ್ತಾ ಅನುಸರಿಸಿ ಮಾಡತಕ್ಕದ್ದೆಂದು ಮತ್ತು ಅಂಥಾ ಸಂತೆ ದುಕಾನಗಳ ಮೇಲೆ ಕಂದಾಯವನ್ನು ಅಮಲ್ದಾರರಿಂದ ನಿರ್ಧರಿಸಲ್ಪಟ್ಟು ತಾಲ್ಲೂಕು ಬೋರ್ಡಿನವರ ಅನುಮತಿಯನ್ನು ಪಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

V. (a) ಅರೆಹಳ್ಳಿ ಇನ್ಸ್ಪೆಕ್ಷನ್ ಲಾಡ್ಜನ್ನು ಮುಸಾಫರಖಾನಾವಾಗಿ ಉಪಯೋಗಿಸುವದಕ್ಕಾಗಿ ಮೆ|| ಹಬಿಬುಲ್ಲಾಸಾಬರಿಗೆ ಖರೀದಿಗೆ ಕೊಟ್ಟದ್ದನ್ನು ಗವರ್ನಮೆಂಟನವರು ಅಂಗೀಕರಿಸಿದ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿರುವ 10—12—06ನೆ ಮುಕ್ಕಾಂ ಪ್ರೊಸಿಡಿಂಗ್ಸಿನ 6ನೆ ನಂಬರ್ ಸಬ್ಜೆಕ್ಟನ್ನು ಓದಲಾಯಿತು.

(b) ಪ್ರಸಕ್ತವಾದ ಕಟ್ಟಡವನ್ನು ತಮ್ಮ ಹಾತಲಾಗೋಡಿನಿಂದಲೇ ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿರುತ್ತೇವೆಂಬ ಬಗ್ಯೆ ಒಪ್ಪಿ ಈದಿನ ಬೋರ್ಡಿನವರ ಮುಂದೆ ಹಾಜರ್ಮಾಡಿದ ಮೆ|| ಹಬಿಬುಲ್ಲಾಸಾಬರ ಮುಚ್ಚಳಿಕೆಯನ್ನು ಓದಲಾಯಿತು.

ತೀರ್ಮಾನ — ಕೇಳಿ ವಿಲೆ ಇಡಿಸಲಾಯಿತು.

VI. ಬಿಸಲೆಘಾಟ ರಸ್ತೆಯಲ್ಲಿ ಸ್ಥಾಪಿಸಬೇಕೆಂಬ ಟೋಲ್ ಗೇಟಿನ ವಿಷಯದಲ್ಲಿ 10—12—06ನೆ ಮುಕ್ಕಾಂನಲ್ಲಿ ನಡದ ಡಿಟೋ ಪ್ರೊಸಿಡಿಂಗ್ಸ್ ಪೈಕಿ Xನೆ ವಿಷಯವನ್ನು ಓದಲಾಯಿತು.

ಈ ವಿಚಾರದಲ್ಲಿ ಮಂಜರಾಬಾದ್ ತಾಲ್ಲೂಕು ಬೋರ್ಡಿನವರು ಮಾಡಿರುವ ತೀರ್ಮಾನ ಅಂದರೆ ಪ್ರಸಕ್ತವಾದ ಟೋಲ್ ಗೇಟ್ ಸ್ಥಾಪಿಸಬಹುದೆಂದು 28—12—06ನೆ ಮುಕ್ಕಾಂ 431—1465ನೆ ನಂಬರ್ ಯಾದಿ ವಡನೆ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲಪಿದ್ದನ್ನು ಓದಲಾಯಿತು.

ತೀರ್ಮಾನ — ಮೇಲ್ಕಂಡ ಟೋಲ್ ಗೇಟನ್ನು ಬಿಸಲೆ ಘಾಟ ರಸ್ತೆಗೆ ಕಾಲುದಾರಿ ಸೇರಿ ಇರುವ ಬಳಿ ಅಂದರೆ ವಣಗೂರು ಸಮೀಪದಲ್ಲಿ ಸ್ಥಾಪಿಸಲು ಗವರ್ನಮೆಂಟಿಗೆ ಶಿಫಾರಸ್ ಮಾಡಬೇಕೆಂದು ತೀರ್ಮಾನಿಸಲಾಯಿತು.

VII. (a) ಅರಕಲಗೋಡು ತಾಲ್ಲೂಕು ಕೇರಲಾಪುರದ ಸಮೀಪದಲ್ಲಿ ಕಾವೇರಿ ನದಿಗೆ ಬೀಳುವ ಹಳ್ಳಕ್ಕೆ ಸೇತುವೆ ಕಟ್ಟಬೇಕೆಂಬ ವಿಚಾರದಲ್ಲಿ ಈ ಡಿಸ್ಟ್ರಿಕ್ಟ್ ಬೋರ್ಡಿನವರ 22—9—06ನೆ ಮುಕ್ಕಾಂ Vನೆ ತೀರ್ಮಾನವನ್ನು ಓದಲಾಯಿತು.

(b) ಪ್ರಸಕ್ತವಾದ ಸೇತುವೆಯನ್ನು ಕಟ್ಟುವದರಿಂದ ಎಷ್ಟು ಗ್ರಾಮಗಳಿಗೆ ಅನುಕೂಲವಾಗುತ್ತೆಂಬುವದನ್ನು ತೋರಿಸುವ ತಃಖ್ತೆಯನ್ನು ಮತ್ತು ಸೇತುವೆ ಕಟ್ಟುವ ಸ್ಥಳವನ್ನು ಮತ್ತು ಇದಕ್ಕೂ ಇತರ ಗ್ರಾಮಗಳಿಗು ಇರುವ ಸ್ಥಳ ಸಮ್ಮಂಧವನ್ನು ತೋರಿಸುವ ಸ್ಕೆಚ್ ನಿಸಿ ಅರಕಲಗೂಡು ತಾಲ್ಲೂಕು ಆಮಿಲ್ದಾರಿಂದ ತಲಪಿದ 5—1—07ನೆ ಮರ್ಸ್ಕುಂ 545-1539ನೆ ನಂಬರ ರಿಪೋರ್ಟು ಓದಲಾಯಿತು.

ತೀರ್ಮಾನ—ಅರಕಲಗೂಡು ತಾಲ್ಲೂಕಿನಿಂದ ತಲಪಿದ ಮೇಲ್ಕಂಡ ತಃಖ್ತೆಯನ್ನು ಮತ್ತು ಸ್ಕೆಚ್ ಸಹಾ ಗವರ್ನಮೆಂಟಿಗೆ ಕಳುಹಿಸಬೇಕೆಂತಲೂ ಮತ್ತು ಪ್ರಸಕ್ತವಾದ ಸೇತುವೆ ಕಟ್ಟುವದಕ್ಕೋಸ್ಕರ ಬಾಕಿ ಬೇಕಾಗುವ ಖರ್ಚನ್ನು ಕೊಡಲು ಈ ಬೋರ್ಡಿನ ಹಣ ಕೇವಲ ಕಮ್ಮಿಯಾಗಿರುವದ್ದರಿಂದ ಪ್ರೊವಿಂಷಿಯಲ್ ಫಂಡಿನಿಂದ ಕೊಡಿಸತಕ್ಕ ಬಗ್ಯೆ ಗವರ್ನಮೆಂಟಿಗೆ ಬರಿಸಲು ತೀರ್ಮಾನಿಸಲಾಯಿತು.

VIII. ಶ್ರವಣಬೆಳಗುಳದಲ್ಲಿ ಸಾವುಕಾರ ಮ|| ಪದ್ಮರಾಜೈಯ್ಯನವರು ವೈದ್ಯಶಾಲೆಗೋಸ್ಕರ ಒಂದು ಲಾಯಖಾದ ಕಟ್ಟಡ ಕಟ್ಟಿಸಿಕೊಡಲು ಒಪ್ಪಿರುವದ್ದರಿಂದ ಇದಕ್ಕೆ ಸರಿಯಾದ ಜಾಗಾವನ್ನು ಎಗ್ಜಿಕ್ಯೂಟಿವ ಇಂಜನಿಯರ ಮತ್ತು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರು ಚುನಾಯಿಸಿ ಈ ಸ್ಥಳದಲ್ಲಿ ಕಟ್ಟುವ ಕಟ್ಟಡದ ಪ್ಲಾನ್ ಮತ್ತು ಅಂದಾಜಾಗಳನ್ನು ಗವರ್ನಮೆಂಟಿಗೆ ಕಳುಹಿಸುವದಲ್ಲದೆ ಕಟ್ಟಡ ಸಂಪೂರ್ಣವಾಗಿ ಕಟ್ಟಿದ ನಂತರ ವೈದ್ಯಶಾಲೆಯನ್ನು ಸ್ಥಾಪಿಸಬೇಕಾಗಿರುವದ್ದರಿಂದ ಇದರ ಖರ್ಚಿಗೆ ಅವಶ್ಯಕವಾದ ಮೊಬಲಗನ್ನು ಬರುವ ಸಾಲ ಡಿಸ್ಟ್ರಿಕ್ಟು ಫಂಡ ಬಜ್ಜಟಿನಲ್ಲಿ ದಾಖಲ್ಮಾಡಬೇಕೆಂಬದ್ದಾಗಿ ವಗ್ಯೆರೆ ನಮೂದಿರುವ ಗಾರ್ವಮೆಂಟನವರ 18—12—06ನೆ ಮರ್ಸ್ಕುಂ 5237-9—L. F. 64-05—6ನೆ ನಂಬರ ಪ್ರೊಸಿಡಿಂಗ್ಸ್ ಓದಲಾಯಿತು.

ತೀರ್ಮಾನ :—ಮೇಲ್ಕಂಡ ವೈದ್ಯಶಾಲೆಗೋಸ್ಕರ ಅವಶ್ಯಕವಾದ ಮೊಬಲಗನ್ನು ಬರುವ ಸಾಲ ಡಿಸ್ಟ್ರಿಕ್ಟು ಫಂಡ ಬಜ್ಜಟಿನಲ್ಲಿ ಸೇರಿಸಿ ಇರುತ್ತೆಯಾಗಿ ಲಾಯಖಾದ ಜಾಗಾ ಚುನಾಯಿಸತಕ್ಕ ಬಗ್ಯೆ ಎಗ್ಜಿಕ್ಯೂಟಿವ ಇಂಜನಿಯರ ಮತ್ತು ಡಿಸ್ಟ್ರಿಕ್ಟು ಮೆಡಿಕಲ್ ಸ್ಯಾನಿಟೇರಿ ಆಫಿಸರವರಿಂದ ಜವಾಬು ನಿರೀಕ್ಷಿಸಬೇಕೆಂತ ತೀರ್ಮಾನಿಸಲಾಯಿತು.

IX. ಎಸ್ಟೇಟುಗಳಿಗೆ ಹೋಗತಕ್ಕ ರಸ್ತೆಗಳನ್ನು ರಿಪೇರಿ ಮಾಡುವದಕ್ಕೆ ಬಹಳವಾಗಿ ಹಣಬೇಕಾಗುವದರಿಂದ ಈ ಕೆಲಸಗಳನ್ನು ಡಿಸ್ಟ್ರಿಕ್ಟು ಬೋರ್ಡಿನವರು ಬಿಟ್ಟುಬಿಡಬೇಕೆಂಬ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 239ನೆ ಸಬ್ಜಕ್ಟ ವಿಷಯದಲ್ಲಿ ಹಾಸನ ಡಿಸ್ಟ್ರಿಕ್ಟು ಬೋರ್ಡಿನವರು ಅಭಿಪ್ರಾಯನಿಸಿ ಜವಾಬು ಬರೆಸಬೇಕೆಂತ ಕೇಳಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 4—1—07ನೆ ಮರ್ಸ್ಕುಂ 6021-8—ಎಲ್. ಎಫ್. 200-06—1ನೆ ನಂಬರ ಡಾಕೆಟ್ ಓದಲಾಯಿತು.

ತೀರ್ಮಾನ :—ದಸರಾ ಮೆಂಬರು ಬಯಸಿರುವಂತೆ ಈ ಡಿಸ್ಟ್ರಿಕ್ಟಿನಲ್ಲಿನ ಎಸ್ಟೇಟುಗಳಿಗೆ ಮಾತ್ರವೆ ಹೋಗತಕ್ಕ ರಸ್ತೆಗಳು ಇಲ್ಲವಾದ ಪ್ರಯುಕ್ತ ಮೇಲಿನ ವಿಷಯ ಈ ಡಿಸ್ಟ್ರಿಕ್ಟಿಗೆ ಅನ್ವಯಿಸುವದಿಲ್ಲಾ. ಅಲ್ಲದೆ ಕೆಲವು ರಸ್ತೆಗಳು ಎಸ್ಟೇಟುಗಳಿಗಲ್ಲದೆ ಅಜುಬಾಜು ಗ್ರಾಮಗಳಿಗೂ ಸಹಾ ಹೋಗುವದರಿಂದ ಈ ರಸ್ತೆಗಳು ಪ್ರಯಾಣಿಕರಿಗೂ ಮತ್ತು ಮೇಲ್ಕಂಡ ಗ್ರಾಮಸ್ತರಿಗೂ ಬಹಳ ಅನುಕೂಲವಾಗಿ ಕಂಡುಬಂದಿವೆ ಎಂತ ತೀರ್ಮಾನಿಸಲಾಯಿತು.

X. 50 ಮನೆಗಳಿಗಿಂತ ಹೆಚ್ಚಾಗಿರುವ ಗ್ರಾಮಗಳಲ್ಲಿ ಪಾಕೀಜಾ ಸ್ಥಿತಿ ಅಭಿವೃದ್ಧಿಪಡಿಸುವದಕ್ಕೋಸ್ಕರ ಲೋಕಲ್ ಫಂಡ್ಸ್ ಪೈಕಿ ಕೆಲವು ಹಣವನ್ನು ವಿಂಗಡಿಸಿದಲ್ಲಿ ಪ್ರತಿ ವರ್ಷವು ಖರ್ಚು ಮಾಡುವದಕ್ಕೆ ಅನುಕೂಲಿಸುತ್ತೆಂದು ವಗ್ಯೆರೆ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿನ 218ನೆ ವಿಷಯವನ್ನು ಡಿಸ್ಟ್ರಿಕ್ಟು ಬೋರ್ಡಿನವರ ಪರ್ಯಾಲೋಚನೆ ಬಗ್ಯೆ ಕಳುಹಿಸಿರುತ್ತೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ 4—1—07ನೆ ಮರ್ಸ್ಕುಂ 6041-8—ಎಲ್. ಎಫ್. 185—06ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ :—ಈ ಡಿಸ್ಟ್ರಿಕ್ಟು ಫಂಡಿನಲ್ಲಿ ಸಾಧ್ಯವಾದ ಮಟ್ಟಿಗೆ ಗ್ರಾಮ ಪಾಕೀಜಾಕ್ಕೋಸ್ಕರ ಹಣ ಮದಗಿಸಿ ಪ್ರತಿ ಸಾಲ ಡಿಸ್ಟ್ರಿಕ್ಟು ಫಂಡ ಬಜ್ಜಟಿನಲ್ಲಿ ದಾಖಲ್ಮಾಡುತ್ತಾ ಇಧೆಯಂತ ತೀರ್ಮಾನಿಸಲಾಯಿತು.

XI. ಆಡುಗಳಿಗೆ ತೊಂಡು ಜುರ್ಮಾನೆ ಹೆಚ್ಚಿಸಬೇಕೆಂಬುವದು ಇನ್ನು ಜಾರಿಗೆ ಬಂದಿಲ್ಲವೆಂಬ ಅಂಶವನ್ನು 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿನ 230ನೆ ವಿಷಯವನ್ನು ಲೋಕಲ್ ಬೋರ್ಡಿನವರು ಪುನರಾಲೋಚಿಸಿದ ನಂತರ ತೀರ್ಮಾನಗಳಸಿ ರಿಪೋರ್ಟು ಮಾಡತಕ್ಕ ಬಗ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರಿಂದ ತಲಪಿದ 11—1—07ನೆ ಮರ್ಸ್ಕುಂ 6217—24—ಎಲ್. ಎಫ್. 196-06—1ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ :—ಮಲನಾಡಿನಲ್ಲಿ ಎರಡಾಣೆಯಂತೆಯೂ ಮೈದಾನಿನಲ್ಲಿ 1 ಆಣೆ ಮೇರಿಗೂ ಆಡುಗಳಿಗೆ ಹಾಲಿ ತೊಂಡು ಜುರ್ಮಾನೆ ವಸೂಲಾಗುತ್ತಾ ಇರುವದು ಸಾಕಾಗಿರುವದ್ದರಿಂದ ಇದನ್ನು ಹೆಚ್ಚಿಸುವದು ಅಪ್ರಕೃತವೆಂದು ತೀರ್ಮಾನಿಸಲಾಯಿತು.

XII. 50 ಮನೆಗಳಿಗಿಂತ ಜಾಸ್ತಿ ಇರುವ ಗ್ರಾಮಗಳಿಗೆ ಪಾಕೀಜಾ ರೂಲ್ಸ್ ಜಾರಿಗೆ ತರಬೇಕೆಂಬ ವಿಚಾರದಲ್ಲಿ 1906ನೆ ಇಸವಿ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿನ 223ನೆ ವಿಷಯವನ್ನು ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯನಿಸಿ ರಿಪೋರ್ಟು ಬಗ್ಯೆ ಕಳುಹಿಸಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯವರ 11—1—07ನೆ ಮರ್ಸ್ಕುಂ 6233-40—ಎಲ್. ಎಫ್. 190-06—1ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ :—ವಿಲೇಜ್ ಸ್ಯಾನಿಟೇಷನ್ ರೆಗ್ಯುಲೇಷನ್ ಮತ್ತು ರೂಲ್ಸ್ ಸಹಾ ಮೇಲ್ಕಂಡಂತೆ 50 ಮನೆಗಳುಳ್ಳ ಗ್ರಾಮಗಳಿಗೂ ಲಗಾವಾಗುವಂತೆ ಮಾಡುವದರಿಂದ ಅನುಕೂಲವೆಂತ ತೀರ್ಮಾನಿಸಲಾಯಿತು.

XIII. ಗ್ರಾಮಾಂತರಗಳಲ್ಲಿನ ದಾರಿಗಳನ್ನು ಸರಿಯಾದ ಸ್ಥಿತಿಯಲ್ಲಿಡುವದಕ್ಕೆ ಹಣ ವದಗಿಸುವದು ಅವಶ್ಯಕವೆಂತ 1906ನೆ ಸಾಲಿನ ದಸರಾ ಪ್ರಜಾ ಪ್ರತಿನಿಧಿ ಸಭೆ ಬಾಬತು 212ನೆ ವಿಷಯುವನ್ನು ಡಿಸ್ಟ್ರಿಕ್ಟು ಬೋರ್ಡಿನವರು ಆಲೋಚಿಸಿ ವ್ಯವಸ್ಥೆ ಮಾಡತಕ್ಕ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ ಯವರಿಂದ ತಲಪಿದ 11—1—07ನೆ ಮರ್ಕುಂ 6305-7—ಎಲ್. ಎಫ್. (179-06)—1ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ:—ಈ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರು ಹಣ ವದಗಿಸುತ್ತಾ ಇರುವದ್ದರಿಂದ ರಸ್ತೆಗೋಸ್ಕರ ಜನಗಳಿಗೆ ಅನಾನುಕೂಲಕ್ಕೆ ಅವಕಾಶವಿಲ್ಲವೆಂಬದಾಗಿ ತೀರ್ಮಾನಿಸಲಾಯಿತು.

XIV. ಅರಶೀಕೆರೆಯಿಂದ ಚಿಕ್ಕೂರು ಮಾರ್ಗವಾಗಿ ಜಾವಗಲ್ಲಿಗೆ ಒಂದು ರಸ್ತೆ ಮಾಡಬೇಕೆಂತ 1906ನೆ ಸಾಲಿನ ಪ್ರಜಾ ಪ್ರತಿನಿಧಿ ಸಭೆಯ ಬಾಬತು 406ನೆ ವಿಷಯುವನ್ನು ಡಿಸ್ಟ್ರಿಕ್ಟು ಬೋರ್ಡಿನವರು ಆಲೋಚಿಸಿ ಫೈಸಲ್ಮಾಡಬೇಕೆಂತ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ ಯವರಿಂದ ತಲಪಿದ 11—1—07ನೆ ಮರ್ಕುಂ 6320—ಎಲ್. ಎಫ್. (207-05)—1ನೆ ನಂಬರ ಡಾಕೆಟ ಓದಲ್ಪಾಯಿತು.

ತೀರ್ಮಾನ:—ಹಾರನಹಳ್ಳಿಯಿಂದ ಕಲ್ಯಾಡಿವರಿಗೆ ಹಾಲಿ ಇರುವ ಗಾಡಿ ಜಾಡನ್ನು ಜಾವಗಲ್ಲಿಗೆ ಸೇರ್ರುವಂತೆ ಮಾಡುವದು ದಸರಾ ಮೆಂಬರ್ ಕೇಳುವ ರಸ್ತೆಗಿಂತಲೂ ಕಮ್ಮಿ ಖರ್ಚು ತಗಲುವದಲ್ಲದೆ ಇನ್ನು ಹೆಚ್ಚಾದ ಅನುಕೂಲತೆಯೂ ಆಗುವದರಿಂದಲು ಇದನ್ನು ಮೇಲ್ಕಂಡ ದಸರಾ ಮೆಂಬರಾಗಿದ್ದು ಹಾಲಿ ಈ ಬೋರ್ಡು ಮೆಂಬರಾಗಿರುವ ಕೆಂಚರಾಯಶೆಟ್ಟರು ಅನುಮೋದಿಸುವದರಿಂದ ಆರೀತಿ ಮಾಡುವದೆಂತ ತೀರ್ಮಾನಿಸಿದರು. ಆದರೆ ಈಗ ಹಣವಿಲ್ಲದ ಪ್ರಯುಕ್ತ ಈ ಕೆಲಸ ಷುರು ಮಾಡಲು ಅವಕಾಶವಿಲ್ಲವೆಂತ ಸಹಾ ತೀರ್ಮಾನಿಸಲಾಯಿತು.

XV. ಅರಶೀಕೆರೆ-ಹುಳಿಯಾರ ರಸ್ತೆಯಲ್ಲಿ ಮೋಹರಿಗಳನ್ನು ಕಟ್ಟಿಸತಕ್ಕ ಬಗ್ಗೆ ಹಣವನ್ನು ಪ್ರಾವಿನ್ಷಿಯಲ್ ಫಂಡಿನಿಂದ ಕೊಡಬೇಕೆಂತ 1906ನೆ ದಸರಾ ಪ್ರಜಾ ಪ್ರತಿನಿಧಿ ಸಭೆಯ 407ನೆ ವಿಷಯುವನ್ನು ಹಾಸನ ಮತ್ತು ತುಮಕೂರು ಡಿಸ್ಟ್ರಿಕ್ಟು ಬೋರ್ಡುಗಳ ಪ್ರೆಸಿಡೆಂಟರವರು ಸದರಿ ಬೋರ್ಡಿನವರೊಂದಿಗೆ ಚರ್ಚಿಸಿ ಅವಶ್ಯಕವಾದ ಕ್ರಮ ಜರಿಗಿಸತಕ್ಕ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ ಯವರಿಂದ ತಲಪಿದ 2—2—07ನೆ ಮರ್ಕುಂ 6809-10—L. B. 208-06—3ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ರಸ್ತೆಯು ಅರಶೀಕೆರೆ ರೈಲ್ವೆ ಸ್ಟೇಷನ್ನಿಗೆ ಬರುವ ರಸ್ತೆಗಳ ಪೈಕಿ ಒಂದಾಗಿರುವದ್ದರಿಂದ ಈ ರಸ್ತೆಯಲ್ಲಿ ಹೆಚ್ಚಾದ ಆಮದುರೇಫ್ತು ಇರುತ್ತೆ. ಆದರೆ ಈ ರಸ್ತೆ ಸರಿಪಡಿಸಲು ಡಿಸ್ಟ್ರಿಕ್ಟು ಫಂಡಿನಲ್ಲಿ ಹಣವಿಲ್ಲವಾಗಿ ಲೋಕಲ್ ಫಂಡ್ ಜನರಲ್‌ನಿಂದ ಇದಕ್ಕೆ ಬೇಕಾದ ಮೊಬಲಗು ಕೊಡಿಸತಕ್ಕ ಬಗ್ಗೆ ಗವರ್ನಮೆಂಟಿಗೆ ಬರಸಬೇಕೆಂತ ತೀರ್ಮಾನಿಸಲಾಯಿತು.

XVI. ಹಾಸನ ತಾಲ್ಲೂಕು ಮೊಳಗೋಡು, ಬೆಕಿನಕೆರೆ, ಬೇಲೂರು ತಾಲ್ಲೂಕು ಪುನ್ನಾಥಪುರದ ಕೆರೆ ಈ ತಲಾವುಗಳ ಏರಿಗಳನ್ನು ಅಗಲಪಡಿಸುವದಕ್ಕೋಸ್ಕರ ತಗಲಿರುವ 860-0-0 ರೂಪಾಯಿಗಳನ್ನು ಬರುವ ಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ಟಿನಲ್ಲಿ ದಾಖಲ್ಮಾಡಬೇಕೆಂತ ಬರಸಿರುವ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 10—1—07ನೆ ಮತ್ತು 5—2—07ನೆ ಮರ್ಕುಂ 69-6 ಮತ್ತು 345-34ನೆ ನಂಬರ ಡಾಕೆಟಗಳನ್ನು ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ವಿಚಾರದಲ್ಲಿ 8—9—05 ಮತ್ತು 18—11—05ನೆ ಮರ್ಕುಂನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಗಳ XXI ಮತ್ತು VIIನೆ ತೀರ್ಮಾನಗಳನ್ನು ಎಗ್ಜಿಕ್ಯೂಟಿವ ಇಂಜನೀಯರ್ ಸಾಹೇಬರವರಿಗೆ ಬರಸಿರುವದಕ್ಕೆ ಗಮನ ತರಬೇಕೆಂತ ತೀರ್ಮಾನಿಸಲಾಯಿತು.

XVII. ಅರಶೀಕೆರೆ-ಹಾಸನ ರಸ್ತೆಗೆ ಆಗಬೇಕಾಗಿರುವ ಸ್ಪೆಷಲ್ ರಿಪೇರಿಗೋಸ್ಕರ 5,750 ರೂಪಾಯಿ ಆಗಲಿ ಇದು ಸಾಧ್ಯವಿಲ್ಲದ ಪಕ್ಷದಲ್ಲಿ 3,450 ರೂಪಾಯಿಗಳಾಗಲಿ ಬರುವ ಸಾಲಿಗೆ ಕೊಡಿಸಬೇಕೆಂತ ಬರಸಿದ ಎಗ್ಜಿಕ್ಯೂಟಿವ ಇಂಜನೀಯರ್ ಸಾಹೇಬರವರ 7—2—07ನೆ ಮರ್ಕುಂ 389-37ನೆ ನಂಬರ ಡಾಕೆಟ್ಟು ಓದಲಾಯಿತು.

ತೀರ್ಮಾನ:—ಹಾಸನ-ಅರಶೀಕೆರೆ ರಸ್ತೆ ಮೇಲೆ ಸ್ಥಾಪಿಸಿರುವ ಟೋಲ್‌ಗೇಟ ಉತ್ಪತ್ತಿಯು ಅಂದಾಜಕ್ಕಿಂತ ಬಹಳ ಕಮ್ಮಿಯಾಗಿ ವಸೂಲಾದ ಸಬಬು ಡಿಸ್ಟ್ರಿಕ್ಟು ಫಂಡಿನಲ್ಲಿ ಹಣವಿಲ್ಲದೆ ಇರುವದ್ದರಿಂದ ಈ ರಸ್ತೆ ಸ್ಪೆಷಲ್ ರಿಪೇರಿಗೋಸ್ಕರ ಹಾಲಿ ಕೊಟ್ಟಿರುವ ಮೈಲಿಗೆ 250 ರೂಪಾಯಿಗಳಿಗಿಂತ ಜಾಸ್ತಿ ಕೊಡಲು ಆಗುವದಿಲ್ಲ. ಟೋಲ್ ಗೇಟ ಉತ್ಪತ್ತಿಯು ಹೆಚ್ಚಿದ ನಂತರ ಹೆಚ್ಚಾಗಿ ಬೇಕೆಂಬ ಹಣದ ವಿಚಾರದಲ್ಲಿ ಆಲೋಚಿಸಬಹುದು. ಅಲ್ಲದೆ ಫೈನಾನ್ಸ ಕಮಿಟಿಯವರು ಬರುವ ಸಾಲ್ ಡಿಸ್ಟ್ರಿಕ್ಟು ಫಂಡ್ ಬಡ್ಜೆಟಿನಲ್ಲಿ ಪ್ರಸಕ್ತವಾದ ರಸ್ತೆಗೆ ಸ್ಪೆಷಲ್ ರಿಪೇರಿಗೋಸ್ಕರ ದಾಖಲ್ಮಾಡಿರುವ 1,000 ರೂಪಾಯಿಗಳನ್ನು ವಜಾ ಮಾಡಿ ಸದರಿ ಮೊಬಲಗನ್ನು ಹಾಸನ ತಾಲ್ಲೂಕ ಬೋರ್ಡಿನವರು ತೀರ್ಮಾನಿಸಿರುವ ಪ್ರಕಾರ ಹಾಸನ ಟವರ್ನಿನಲ್ಲಿ ಬರುವ ಸಾಲಿನಲ್ಲಿ ಕಟ್ಟಬೇಕೆಂಬ 1ನೆ ಕ್ಲಾಸ ಮುಸಾಫರಖಾನೆಗೋಸ್ಕರ ಬಡ್ಜೆಟಿನಲ್ಲಿ ದಾಖಲ್ಮಾಡಬೇಕೆಂತ ತೀರ್ಮಾನಿಸಲಾಯಿತು.

XVIII. ಇದರಲ್ಲಿ ಕಂಡವುಗಳನ್ನು ಡಿಸ್ಟ್ರಿಕ್ಟು ಬೋರ್ಡಿನವರ ತಿಳವಳಿಕೆ ಬಗ್ಗೆ ಓದಲಾಯಿತು.

(1) ಅರಶೀಕೆರೆ-ಹಾಸನದ ರಸ್ತೆ ಮೇಲೆ ಹೋಗಿ ಬರುವ 4 ಚಕ್ರದ ಮತ್ತು 2 ಚಕ್ರದ ಸ್ಪ್ರಿಂಗ್ ಗಾಡಿಗಳು ಭರ್ತಿಯಾಗಿದ್ದಾಗ 8 ಆಣೆ ಮತ್ತು 4 ಆಣೆಯನ್ನು ಖಾಲಿ ಇರುವಾಗ ಈ ದರಗಳಲ್ಲಿ ಅರ್ಧ ದರಗಳನ್ನು ವಸೂಲ್ ಮಾಡಬೇಕೆಂತ ಗವರ್ನಮೆಂಟಿನಿಂದ ತಲಪಿದ 11—12—06ನೆ ಮರ್ಕುಂ 4914-5—ಎಲ್. ಎಫ್. 137-06—2ನೆ ನಂಬರ ಪ್ರೊಸಿಡಿಂಗ್ಸ ಓದಲಾಯಿತು.

(2) ಅರಕಲಗೂಡು ತಾಲ್ಲೂಕ ಮಲ್ಲಿಪಟ್ನದಲ್ಲಿ ಕಟ್ಟಿರುವ ಮುಸಾಫರಖಾನೆಗೋಸ್ಕರ ಅವಶ್ಯಕವಾದ ಜಾಗಾವನ್ನು ಸರ್ಕಾರಕ್ಕೆ ತೆಗೆದುಕೊಂಡು ಕಂಪರ್ನಸೇಷನ ಪಾವತಿಗೋಸ್ಕರ ಬೇಕಾದ ಮೊಬಲಗು ರಿ-ಅಪ್ರೊಪ್ರಿಯೇಷನ ಮಂಜೂರ್ಮಾಡಿರುವ 20—12—06ನೆ ಮಾರ್ಕುಂ 5331-2—ಎಲ್. ಎಫ್. 66-06-3ನೆ ನಂಬರ ಪ್ರೊಸಿಡಿಂಗ್ಸ ಓದಲಾಯಿತು.

(3) ಹಾಸನ ಡಿಸ್ಟ್ರಿಕ್ಟ ಬೋರ್ಡ ಮೆಂಬರಾಗಿದ್ದು ಕಾಲವಾದ ಮೆ॥ ಸುಂಡೆಕೆರೆ ಶ್ರೀಕಂಠೈಯ್ಯನವರ ಐವಜಿಗೆ ಮೆ॥ ಬೆಳ್ಳೂರು ಮಂಡೆ ಪಟೇಲ್ ನಂಜೇಗೌಡ ಉರುಫ ಪುಟ್ಟೆಗೌಡರನ್ನು ನೇಮಿಸಿರುವ ನೋಟಿಫಿಕೇಷನ ಕಾಪಿಸಹಿ ಗೌರ್ನಮೆಂಟಿನಿಂದ ತಲಪಿರುವ 10—1—07ನೆ ಮಾರ್ಕುಂ 6179—ಎಲ್. ಎಫ್. 296-06-2ನೆ ನಂಬರ ಮಿಮೋ ಓದಲಾಯಿತು.

(4) ಯೂನಿಯನ್ ಅಲ್ಲದ ಇತರ ಗ್ರಾಮಗಳಲ್ಲಿ ವಸೂಲಾಗುವ ಮೊಹತರ್ಫಾ ಹಣವನ್ನು ಸದರಿ ಗ್ರಾಮಗಳ ಪಾಕೀಜಾಕ್ಕೆ ಕೊಡಲಾಗುವದಿಲ್ಲವೆಂಬ ದಸರಾ ಪ್ರಜಾ ಪ್ರತಿನಿಧಿ ಸಭೆಯ ಬಾಬತು ರಿಪ್ರೆಸೆಂಟೇಷನ ಮತ್ತು ಗೌರ್ನಮೆಂಟ ಜವಾಬು ಸಹಾ ಉಳ್ಳದ್ದನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ ಯವರಿಂದ ತಲಪಿದ 11—1—07ನೆ ಮಾರ್ಕುಂ 6289-96 ಎಲ್. ಎಫ್. 186-06-1ನೆ ನಂಬರ ಡಾಕೆಟ ಓದಲಾಯಿತು.

(5) ಅರಶೀಕೆರೆ-ಹಾಸನದ ರಸ್ತೆಮೇಲೆ ಹೋಗಿ ಬರುವ 4 ಚಕ್ರ ಮತ್ತು 2 ಚಕ್ರದ ಗಾಡಿಗಳ ಮೇಲೆ ಸುಂಕ ಕಮ್ಮಿ ಮಾಡಿದ್ದನ್ನು ತಿಳಿಸಿದ್ದಕ್ಕೋಸ್ಕರ ವಂದನಾಪೂರ್ವಕವಾಗಿ ಬರೆಸಿರುವ ದಕ್ಷಿಣ ಮೈಸೂರು ಪ್ಲಾಂಟರ್ಸ ಅಸೋಸಿಯೇಷನ ಆನರರಿ ಸೆಕ್ರಿಟೆರಿ ಯವರ 27—12—06ನೆ ಮಾರ್ಕುಂ ಲೆಟರ ಓದಲಾಯಿತು.

ತೀರ್ಮಾನ:—ಎಲ್ಲವನ್ನು ಕೇಳಿ ವಿಲೆ ಇಡಿಸಲಾಯಿತು.

XIX. ಅರಶೀಕೆರೆ ತಾಲ್ಲೂಕ ಗಂಡಸಿ ಛತ್ರಕ್ಕೆ ಬಹಳ ಅವಶ್ಯಕವಾಗಿ ಆಗಬೇಕಾದ ಕಾಮಗಾರಿಗಳಿಗೋಸ್ಕರ (ಬಡ್ಜೆಟಿನಲ್ಲಿ ದಾಖಲಾಗದ ಕೆಲಸ) 120 ರೂಪಾಯಿ ಬಾಬತು ಅಂದಾಜಾ ನಿಸಿ ಜನರಲ್ ಅಸಿಸ್ಟೆಂಟ ಕಮಿಷನರವರಿಂದ ತಲಪಿದ 22-12-06ನೆ ಮಾರ್ಕುಂ 120ನೆ ನಂಬರ ಡಾಕೆಟ ಓದಲಾಯಿತು.

ತೀರ್ಮಾನ:—ಹಾಲ್‌ಸಾಲ್ ಡಿಸ್ಟ್ರಿಕ್ಟ ಫಂಡ ಬಡ್ಜೆಟ್ಟಿನಲ್ಲಿ ನೀಂಕಲಾ ಕಾಮಗಾರಿಗಳಿಗೋಸ್ಕರ ದಾಖಲಾಗಿರುವ ಬಿ. II ರಿಫೆರ್ಸ ಹೆಡ್ಡಿನಲ್ಲಿರುವ 1,000 ರೂಪಾಯಿಗಳ ಪೈಕಿ ಮೇಲ್ಕಂಡ ಅಂದಾಜಾ ಬಾಬತು 120 ರೂಪಾಯಿಗಳನ್ನು ಬದಗಿಸಬಹುದಾಗಿ ಈ ಅಂದಾಜಾ ಗವರ್ನಮೆಂಟ ಮಂಜೂರಾತಿ ಬಗ್ಯೆ ಬರೆಸಬೇಕೆಂತ ತೀರ್ಮಾನಿಸಲಾಯಿತು.

XX. ಹಾಸನ ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫೀಸರವರು ಅರಕಲಗೂಡು ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಕಾಲರಾ ವ್ಯಾಪಿಸಿದ ಪ್ರದೇಶಗಳನ್ನು ಅಜಮಾಯಿಷಿ ಮಾಡಿದ ನಂತರ ಬರೆಸಿರುವ ರಿಪೋರ್ಟನಲ್ಲಿ ಕಾಲರಾ ಪ್ರಾಪ್ತವಾಗುವ ಸ್ಥಳಗಳಲ್ಲಿ ಉಪಯೋಗಿಸತಕ್ಕ ಬಗ್ಯೆ "ಅಬಿಸೀನಿಯನ ಟ್ಯೂಬ ಪಂಪ್ಸ" ಗಳನ್ನು ತರಿಸುವದು ಅವಶ್ಯಕವೆಂತ ವಗೈರೆ ರಿಪೋರ್ಟ ಓದಲಾಯಿತು.

ತೀರ್ಮಾನ:—ಹಾಲ್‌ಸಾಲ್ ಡಿಸ್ಟ್ರಿಕ್ಟ ಫಂಡ ಬಡ್ಜೆಟಿನಲ್ಲಿ "X ಮಿಸಲೇನಿಯಸ (4) ಕಾಲರಾ ಮತ್ತು ಪ್ಲೇಗ ಚಾರ್ಜ" ಹೆಡ್ಡಿನಲ್ಲಿ ದಾಖಲಾಗಿರುವ 200 ರೂಪಾಯಿಗಳ ಪೈಕಿ ಪ್ರಸಕ್ತವಾದ ಟ್ಯೂಬವೆಲ್ಲಿಗೋಸ್ಕರ ಬೇಕಾಗಬಹುದಾದ 150 ರೂಪಾಯಿಗಳನ್ನು ಉಪಯೋಗಿಸಿಕೊಂಡು ಅವಶ್ಯಕವಾದ ಮೇಲ್ಕಂಡ ಸಾಮಾನುಗಳನ್ನು ಕೊಂಡುಕೊಳ್ಳಲು ಗೌರ್ನಮೆಂಟ ಮಂಜೂರಾತಿ ಬಗ್ಯೆ ಬರೆಸಬೇಕೆಂತ ತೀರ್ಮಾನಿಸಲಾಯಿತು.

XXI. ದುದ್ದದ ಬಳಿ ಇರುವ ಟೋಲ್‌ಗೇಟ ಉಪಯೋಗಕ್ಕೆ ಅವಶ್ಯಕವಾದ ರಶೀದಿ ಫಾರಂಗಳು ಮುಗಿದುಹೋಗಿರುವದ್ದರಿಂದ 10,000 ಫಾರಂಗಳು ಅವಶ್ಯಕವೆಂತ ಹಾಸನ ತಾಲ್ಲೂಕ ಆಮಿಲರಿಂದ 28-12-06ನೆ ಮಾರ್ಕುಂ 372—1445ನೆ ನಂಬರ ರಿಪೋರ್ಟು ತಲಪಿದ್ದರ ಮೇಲೆ ಬೆಂಗಳೂರಲ್ಲಿರುವ ಮೆ॥ ವಿ. ಬಿ. ಸುಬ್ಬಯ್ಯ ಮತ್ತು ಸನ್ಸ ಯವರಿಂದ 10,000 ಫಾರಂಗಳನ್ನು ತರಿಸುವದಕ್ಕೋಸ್ಕರ ಮಣಿಆರಡರ ಕಮಿಷನ 0—7—0 ಆಣೆ ಪ್ರಿಂಟಿಂಗ ವಗೈರೆ ಚಾರ್ಜ 38 ರೂಪಾಯಿ ಜುಮ್ಲಾ 38—7—0 ಖರ್ಚಾಗಿರುವದನ್ನು ಹಾಲ್‌ಸಾಲ್ ಡಿಸ್ಟ್ರಿಕ್ಟ ಫಂಡ ಬಡ್ಜೆಟನಲ್ಲಿರುವ X ಮಿಸಲೇನಿಯಸ (6) ಆದರ ಐಟಂಸ (*b*) ಟೋಲ್ ಗೇಟ ಚಾರ್ಜಿನಲ್ಲಿ ದಾಖಲಾಗಿರುವ 1,000 ರೂಪಾಯಿನಿಂದ ಕೊಡಬಹುದೆಂಬ ಅಂಶವು ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಖರ್ಚನ್ನು ಮಂಜೂರ್ಮಾಡಿ ಇರುತ್ತೆಂತ ತೀರ್ಮಾನಿಸಲಾಯಿತು.

XXII. ಹಾಲ್‌ಸಾಲ್ ಡಿಸ್ಟ್ರಿಕ್ಟ ಫಂಡ ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಕೆಲಸಗಳ ಬಾಬತು ಈ ಕೆಳಗೆ ಕಾಣಿಸಿರುವ ಅಂದಾಜಾಗಳನ್ನು ಓದಲಾಯಿತು.

ತಾಲ್ಲೂಕ ಮತ್ತು ಕೆಲಸದ ಹೆಸರು.	ಅಂದಾಜಾ ಮೊಬಲಗು.	ಷರಾ.
ಬೇಲೂರು ತಾಲ್ಲೂಕ.		
ಹೊಡವಳಲು ಗ್ರಾಮದ ಭಾವಿ ಆಳಪಡಿಸುವದಕ್ಕೆ ...	150	ಮಂಜೂರ್ಮಾಡಿದೆ.
ಬಂಡಿ ಲಕ್ಕನಕೊಪ್ಪಲಲ್ಲಿ ಭಾವಿ ತೆಗಿಯುವದಕ್ಕೆ ...	250	ಡಿಟೋ.
ಆಲೂರು ಸಬ ತಾಲ್ಲೂಕ.		
ಮುರಡೂರಲ್ಲಿ ಭಾವಿ ತೆಗಿಯುವದಕ್ಕೆ ...	286	250 ರೂಪಾಯಿ ಮಾತ್ರ ಮಂಜೂರ್ಮಾಡಿ ಇದೆ.
ಕುಂದೂರಲ್ಲಿ ಡಿಟೋ	296	ಮಂಜೂರ್ಮಾಡಿ ಇದೆ.

211 333

XXIII. ಈ ಮಿಾಟಂಗಿಗೆ ಬರಲು ಅನಾನುಕೂಲವೆಂತ ಈ ಕೆಳಗೆ ನಮೂದಿಸಿರುವ ಮೆಂಬರುಗಳು ಬರಸಿರುವ ಖತ್ತಗಳನ್ನು ಓದಲಾಯಿತು.

ಮೆ॥ ಎಚ್. ಎ. ಸ್ಟೀಲ್ ಎಗ್ಸಿಕ್ಯೂಟವ್ ಇಂಜನಿಯರ್ ಸಾಹೇಬರವರು.
,, ಎಸ್. ಡಿ ವೆಂಕಟರಾಮೈಯನವರು.
,, ಕೆ. ರಾಮಶೆಟ್ಟರು.
,, ಬಾಸಪ್ಪನವರು.
,, ಗುರುಲಿಂಗೆಗೌಡರು.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

XXIV. ಬರುವ ಡಿಸ್ಟ್ರಿಕ್ಟ್ ಬೋರ್ಡು ಮಿಾಟಂಗ್ 1907ನೆ ಮೇ ಮಾಹೆ ತಾರೀಖು 13ನೆ ಸೋಮವಾರ ಮಧ್ಯಾಹ್ನಾತ್ಪರ 2 ಘಂಟೆಗೆಂತ ನಿಷ್ಕರ್ಷೆಯಿಂದ ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ಪೆದರಾಲ್, ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—1906ನೆ ಇಸವಿ ನಂಬರು 7ನೆ ರೆಗ್ಯುಲೇಷನ್ ಅನುಸರಿಸಿ ಈ ಕೆಳಗೆ ತಪಶೀಲು ಕಾಣುವ ಚಕ್ಕುಬಂದಿ ಒಳಗೊಂಡಿರುವ ಶಿವಮೊಗ್ಗಾ ಟವನನ್ನು ಒಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚಿಸಿ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ್ ಮೈಸೂರು ಗೆಜೆಟನಲ್ಲಿ ಪ್ರಾಸಿದ್ಧವಾದ ಎರಡು ತಿಂಗಳು ವಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಶ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷನ್ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳು ಬಂಗಲೆಯ ಕಾಂಪೌಂಡು ವಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಸಿಕ್ಯೂಟವ್ ಇಂಜನಿಯರ್ ಆಫೀಸನ್ನು ಸೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಉತ್ತರ ಹೊನ್ನಾಳಿ ರಸ್ತೆಗೆ ಸೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯು ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಳಿ ಇರುವ ಅಕ್ವಾಯಿ ಉಕ್ಕಡದವರಿಗೆ.

ದಕ್ಷಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಷಾವಣೆ ಜಾಗಾದಲ್ಲಿ ಇರುವ ಅಕ್ವಾಯಿ ಕಟ್ಟೆ ಸಮಿಾಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನು ವಳಗೊಂಡು ಹಳೇ ಫಾರೆಸ್ಟು ಲಾಡ್ಜ್ ಮತ್ತು ಬೆಂಗಳೂರು ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಿಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಸೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 13ನೆ ಜಮೀನ್ ಲಾಗಾಯಿತು ಶಿವಮೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನು ದಾಟಿ 26, 25, 24, 21ನೆ ಸರ್ವೆ ನಂಬರು ಜಮೀನುಗಳ ಮಾರ್ಗವಾಗಿ ಹಳೇ ಡಿಸ್ಟಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ಪಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಅಕ್ವಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕಾಲಂ)ನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನ್‌ಬಳಿ ಹೊನ್ನಾಳಿ ರಸ್ತೆ ಕೂಡುವ ಸ್ಥಳದಲ್ಲಿ ಇರುವ ಅಕ್ವಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೋದಿಗ್ಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಒಳಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲೇದಾರ ಲಾಯ ಮತ್ತು ಲೈನ್‌ಗಳು ಮತ್ತು ಮಿಳ್ಳಘಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮೀನ್‌ಗಳನ್ನು ಒಳಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಸ್ವಂತ ಪ್ರಕಟನೆ.

ಗುಡಿಬಂಡೆ ಸಬ್ ತಾಲ್ಲೂಕು ಕಸಬಾ ಗುಡಿಬಂಡೆ ಗ್ರಾಮದಲ್ಲಿರುವ ತೆನುಗುಬಣಜಿಗರ ಸುಬ್ಬಣ್ಣನ ಮಗ ಪೆನ್‌ಷನ್ ಪೊಲೀಸು ದಪೇದಾರ ವೆಂಕಟರಮಣನಾಯಿಡು ಆದ ನಾನು ಇದರಿಂದ ಪ್ರಸಿದ್ಧಪಡಿಸುವದೇನಂದರೆ—ನನಗೆ ಬಾಲ್ಯದಲ್ಲೆ ಮಾತಾಪಿತೃಗಳು ಮೃತಪಟ್ಟದ್ದರಿಂದ ಸೋದರಮಾವನ ಮನೆಯಲ್ಲಿ ಅವರ ಪೋಷಣೆಯಿಂದ ಪ್ರವರ್ಧಮಾನವಾಗಿ ಸರಕಾರದ ನೌಕರಿಯಿಂದ ಜೀವನ ಮಾಡುತ್ತಾ ಇದ್ದೇನೆ. ನನಗೆ ಪಿತ್ರಾರ್ಜಿತ ಸೊತ್ತುಗಳು ಇಲ್ಲ. ನನ್ನ ಮಗ ಆದೆಪ್ಪನು ವಿಭಕ್ತನಾಗಿ ಸರಕಾರದ ನೌಕರಿಯಿಂದ ಜೀವನ ಮಾಡುತ್ತಾ ಮೈನರು ತೀರಿದ ಲಾಗಾಯಿತು ಪ್ರತ್ಯೇಕ ವಾಸಮಾಡಿಕೊಂಡು ನಮ್ಮ ಸಂಬಂಧವಿಲ್ಲದೆ ಸ್ವತಂತ್ರನಾಗಿ ತನ್ನ ಇಚ್ಛಾನುಸಾರ ಇರುತ್ತಾನೆ. ಅವನಿಗು ನನಿಗು ಆಸ್ತಿ ಸಂಬಂಧವೇನು ಇರುವದಿಲ್ಲ. ನನ್ನ ಧನ ಋಣಗಳಿಗೆ ನಾನೇ ಬಾಧ್ಯನಾಗಿಯೂ ನನ್ನ ಮಗನ ಧನ ಋಣಗಳಿಗೆ ಅವನೆ ಬಾಧ್ಯನಾಗಿಯೂ ಇರುತ್ತೇವೆ. ನನ್ನ ಸ್ವಾಧೀನ ಅನುಭವದಲ್ಲಿರುವ ಸ್ವಯಾರ್ಜಿತದ ಸ್ಥಿರ ಚರ ಸೊತ್ತುಗಳು ನಾನು ನನ್ನ ಹೆಂಡತಿ ಸಹ ನಮ್ಮ ಜೀವಮಾನದವರಿಗು ಅನುಭವಿಸಿ ನಮ್ಮ ಇಷ್ಟ ಪ್ರಕಾರ ವಿನಿಯೋಗಪಡಿಸತಕ್ಕದ್ದಾಗಿರುತ್ತೆ. ಈ ಆಸ್ತಿಯಲ್ಲಿ ನನ್ನ ಮಗ ಆದೆಪ್ಪನಿಗು ಪೌತ್ರರಾದ ನಂಜುಂಡನಾಯಿಡು ಚಿನ್ನ ನಂಜುಂಡಡು ಇವರಿಗೆ ಯಾವ ಹಕು ಇರುವದಿಲ್ಲ. ಸದರಿಯವರ ಋಣಗಳಿಗೆ ನನ್ನ ಅನುಭವದಲ್ಲಿರುವ ಆಸ್ತಿ ಈಡಾಗಿರುವದಿಲ್ಲಾ. ಈ ಅಂಶವು ಸರ್ವರಿಗು ತಿಳಿಯತಕ್ಕದ್ದು.

ವೆಂಕಟರಮಣನಾಯಿಡು ರುಜು.

ಮೈಸೂರ ಗೆಜೆಟ್.

ನಂ. 42.] ಸರಕಾರದಿಂದ ಛಾಪಿಸಿದ್ದು. [ನಂ. 15.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 11, ಸನ್ 1907.

II ನೆ ಭಾಗ.

ಇಂಡ್ಯ ಗವರ್ನ್‌ಮೆಂಟ್; ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಪ್ರಕಟನೆ.

ಮೈಸೂರು ಡಿಸ್ಟ್ರಿಕ್ಟು ಕಲ್ಲಮ್ಮನ ಕುಮುರಿ ಫಾರೆಸ್ಟನ್ನು ಮುನ್ನಾ ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಅನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖು ಇಸ್ತಿಹಾರ 1907ನೆ ಇಸವಿ ಮಾರ್ಚಿ 28ನೆ ತಾರೀಖಿನ ಗೆಜೆಟ್ಟಿನ ಕನ್ನಡ IIನೆ ಭಾಗದಲ್ಲಿ 82—83ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತದೆ.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಾಕನ ಹೊಸೂರ್ ಜಂಗಲಿಯನ್ನು ಮುನ್ನಾ ಜಂಗಲಿ ಮಾಡುವ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖಿನ ಇಸ್ತಿಹಾರ 1907ನೆ ಇಸವಿ ಏಪ್ರೆಲ್ 4ನೆ ತಾರೀಖಿನ ಮೈಸೂರ ಗೆಜೆಟಿನ 2ನೆ ಭಾಗದ 93, 94, 95ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕಿನಲ್ಲಿರುವ ದಕ್ಷಿಣ ಭದ್ರಾ ಜಂಗಲಿಯನ್ನು ಮುನ್ನಾ ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 28ನೆ ತಾರೀಖಿನ ಇಸ್ತಿಹಾರ 1907ನೆ ಇಸವಿ ಏಪ್ರೆಲ್ 4ನೆ ತಾರೀಖಿನ ಮೈಸೂರ ಗೆಜೆಟಿನ ಕನ್ನಡ 2ನೆ ಭಾಗದ 96, 97, 98ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತೆ.

ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ವರ್ಣಮುಖಿ ಫಾರೆಸ್ಟನ್ನು ಮುನ್ನಾ ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖು ಇಸ್ತಿಹಾರ 1907ನೆ ಇಸವಿ ಮಾರ್ಚಿ 28ನೆ ತಾರೀಖಿನ ಗೆಜೆಟ್ಟಿನ ಕನ್ನಡ IIನೆ ಭಾಗದ 84—85ನೆ ಪೇಜಿನಲ್ಲಿ ತಪ್ಪಿಲಾಗಿ ವಿವರಿಸಲ್ಪಟ್ಟಿರುತ್ತದೆ.

ಎಂ. ಶಾಮರಾವ್,

ಮೈಸೂರು ಸೀಮೆಯ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ್.

1907ನೆ ಇಸವಿ ಮಾರ್ಚಿ 16ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ–ಮೈಸೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳದಲ್ಲಿ ಅದರ ಬಾಜೂದಲ್ಲಿ ಕಂಡ ತಾರೀಖುಗಳಲ್ಲಿ ಜಂಗಲ್ ಪಸಾರ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು	ಸ್ಥಳ.	ಹರಾಜು ತಾರೀಖು.	ಹರಾಜು ಮಾಡುವ ಆಫಿಸರವರ ಹೆಸರು.	ಪಸಾರ ಜಿನಸಿ ಮೊತ್ತ.	
				ಅವ್ವಲಿ ಅರಗು.	ಅಳಲೆಕಾಯಿ.
1	ಶ್ರೀರಂಗಪಟ್ಟಣದ ಕೋಠಿ	15—4—07	ಡಿಸ್ಟ್ರಿಕ್ಟು ಫಾರಸ್ಟು ಆಫೀಸರವರು	ಮಣ. ಪ. 90 0	ಮಣ. ಪ. 1,500 0

ಷರತ್ತು :—1887ನೆ ಇಸವಿ ಜೂನ್ 18ನೆ ಮುಕ್ಕಾಂ ಮೈಸೂರು ಗೆಜೆಟನ 287—288ನೆ ಪುಟಗಳಲ್ಲಿ ಇರುವ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ 87ನೆ ಇಸವಿ ಜೂನ್ 11ನೆ ಮುಕ್ಕಾಂ ನೋಟಫಿಕೇಷನನ್ನು ನೋಡಿ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 3ನೆ ಏಪ್ರಿಲ್ 1907.

ಶಿಕಾರಿಪುರ ಫಾರೆಸ್ಟು ರೇಂಜಿನ ಗಾರ್ಡು (ಮೃತಪಟ್ಟ) ಅಬ್ದುಲ್ ರಹಿಮಾನ್ ಎಂಬವನಿಗೆ 1906ನೆ ಮೇ ಮತ್ತು ಜೂನ್ ಮಾಹೇಗೆ ಸಲ್ಲತಕ್ಕ ಸಂಬಳದ ಮೊಬಲಗು ರೂಪಾಯಿ 3—14—11 ಶಿಕಾರಿಪುರ ಫಾರೆಸ್ಟು ರೇಂಜು ಆಫಿಸಿನಲ್ಲಿ ಪಾವತಿ ಮಾಡದೆ ನಿಂತಿರುತ್ತೆ.

ಸದರಿ ಮೃತಪಟ್ಟ ಗಾರ್ಡಿನ ವಾರಿಸ್‌ದಾರರು ಯಾರಾದರು ಇದ್ದಲ್ಲಿ ಸದರಿ ಹಣಕ್ಕಾಗಿ ತಕ್ಕ ಸಮಜಾಯಿಷಿಯೊಡನೆ ಈ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ನಮ್ಮ ಆಫಿಸಿಗೆ ಖುರದು ಕೊಳ್ಳಬೇಕು. ತಪ್ಪಿದಲ್ಲಿ ಸದರಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ.

ಜೆ. ಮಾಟ್ಯೆರೋ,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 3ನೆ ಏಪ್ರಿಲ್ 1907ನೆ ಇಸವಿ, ಚಿಕ್ಕಮಗಳೂರು.

ಸನ್ 1900ನೆ ಇಸವಿಯ ನಂಬರು 11ನೆ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ನಾಟಾ ಶಿಂಗಾಪುರದ ಹತ್ತರ ಭದ್ರಾನದಿಯಲ್ಲಿ ತೇಲಿಕೊಂಡು ಬಂದದ್ದು ಲಕ್ಕುವಳ್ಳಿ ರೇಂಜು ಆಫಿಸರವರ ಸುಪರ್ದಿನಲ್ಲಿರುತ್ತೆ. ಇದರ ಹಕ್ಕುದಾರರು ಯಾರಾದರೂ ಇದ್ದಲ್ಲಿ ಸದರಿ ಮರದ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟಮೆಂಟನ್ನು ಈ ಲಾಗಾಯಿತು, ಒಂದು ತಿಂಗಳ ವಳಗಾಗಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರ್ಮಾಡತಕ್ಕದ್ದು ತಪ್ಪಿದಲ್ಲಿ ಸದರಿ ಮರದ ಬಾಧ್ಯತೆಯು ಯಾವ ಅಟಂಕವೂ ಇಲ್ಲದಂತೆ ಸರಕಾರಕ್ಕೆ ಒಳಪಡಿಸಿಕೊಳ್ಳುವರು.

2. ಸದರಿ ನಾಟಾವನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕಂಥವರು ಸದರಿ ನಾಟಾ ಪತ್ತೆದಾರು ಮತ್ತು ಛೇದಪಡಿಸಿದ್ದಕ್ಕೆ ತಗಲಿದ ಲಾಗೋಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರತಕ್ಕದ್ದು :—

ಜಾತಿ.	ನಾಟಾ ವಿವರ.	ಲಾಂಬಿ.	ಸುತ್ತು.
ಕರೀಮತ್ತಿ ...	ದುಂಡು ಯಾವ ವಿಧವಾದ ಕಾಗ್ಗಾರಿಯು ಇಗಿಲ್ಲ	10'	10'

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕಡೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

1907ನೆ ಇಸವಿ ಫೆಬ್ರವರಿ 15ನೆ ತಾರೀಖಿನಲ್ಲಿ ನಡೆದ ಡಿಸ್ಟ್ರಿಕ್ಟು ಫಂಡು ಬೋರ್ಡು ಮಿಾಟಿಂಗು ಪ್ರೊಸೀಡಿಂಗ್ಸ್.

ಅಫಿಷಿಯಲ್ ಮೆಂಬರುಗಳು.

ಹಾಜರು.

ಡೆಪ್ಯುಟಿ ಕಮ್ಮಿಷನರವರು ಮತ್ತು ಪ್ರಸಿಡೆಂಟರು, ಮೆ॥ ಎಚ್. ಎಚ್. ಸ್ಪಾರ್ಕ್ಸ ಸಾಹೇಬರವರು.
ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿ ಆಫೀಸರವರು, ಮೆ॥ ಟಿ. ರಾಯಲ್ ಚೆಟ್ರಿವರು.
ಬೆಂಗಳೂರು ಡಿವೀಜನ್ ಅಸಿಸ್ಟೆಂಟ್ ಕಮಿಷನರು, ಮೆ॥ ಸಿ. ರಾಮರಾಯರವರು.
ದೊಡ್ಡಬಳ್ಳಾಪುರ ಡಿವೀಜನ್ ಅಸಿಸ್ಟೆಂಟ್ ಕಮಿಷನರು, ಮೆ॥ ಕೆ. ಆರ್. ಶ್ರೀನಿವಾಸ ಐಯ್ಯಂಗಾರು.
ಎಗ್ಜಿಕ್ಯೂಟಿವ್ ಇಂಜನೀಯರು, ಮೆ॥ ಬಿ. ಎಸ್. ವೆಂಕಟಾಚಾರ್ರವರು.

ಗೈರ ಹಾಜರು.

ಹೊಸಪೇಟೆ ಸಬ್ ಡಿವೀಜನ್ ಅಸಿಸ್ಟೆಂಟ್ ಕಮಿಷನರವರು, ಮೆ॥ ಸಿ. ದೇವರಾಜ ಅರಸಿನವರು.
ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟೆರಿ ಆಫೀಸರವರು, ಮೆ॥ ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು.
ಸ್ಕೂಲಗಳ ಡೆಪ್ಯುಟಿ ಇನ್ಸ್ಪೆಕ್ಟರು, ಮೆ॥ ಎ. ವೀರಭದ್ರಪ್ಪನವರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಮೆ॥ ವೇಲುಮೊದಲಿಯಾರು.
,, ಶ್ಯಾನುಭೋಗ ಕರಿಗಿರಿಯಪ್ಪನವರು.
,, ದಾಸಪ್ಪನವರು.
,, ಯಾಲಕ್ಕಿ ಗೌಡರು.
,, ಕರೇಭಾವಮಾ ನರಸಿಹ್ಮಶೆಟ್ಟರು.
,, ಕೆ. ಪುಟ್ಟಪ್ಪನವರು.
,, ಡಿ. ಶ್ರೀಕಂಠರಾಯರು.
,, ಕೆ. ಸುಬ್ರಂಣನವರು.
,, ಶೀನಪ್ಪನವರು.
,, ಬಾಳಾಜಿರಾಯರು.
,, ಜೋಡಿದಾರ್ ರಾಮಚಂದ್ರಪ್ಪನವರು.

ಗೈರ ಹಾಜರು.

ಮೆ॥ ನಂದಗುಡಿ ರಾಮಂಣನವರು, (ಫವತಿ).
,, ಕರ್ನಿಕ ಕೃಷ್ಣಮೂರ್ತಿರಾಯರು, (ಸಂಜಾಯಿಷಿ ಕೇಳಿದೆ).
,, ಸಾಹುಕಾರ್ ಮುಸ್ತಾಕಸಾಹೇಬರವರು, (ಅವರ ಅಳಿಯಂದರ ಖಾಯಿಲೆ ಸಬಬು).
,, ಪಿ. ಥಾರ್ಪು ಸಾಹೇಬರು.
,, ಪುಟ್ಟಮಾಸ್ತಿಗೌಡರು, (ಸಂಜಾಯಿಷಿ ಕೇಳಿದೆ).
,, ಗಾಸುಬರ್ನ ಸಾಹೇಬರು, (ಫವತಿ).

1. 1907—08ನೆ ಸಾಲಿನ ಬಜೆಟ್ ಓದಲಾಯಿತು.

ಆ ಸಾಲಿನ ಬಟ್ಟು ಹುಟ್ಟುವಳಿ ಮೊಬಲಗಿನಲ್ಲಿ ಗೌರ್ನಮೆಂಟನವರು $\frac{1}{8}$ ಭಾಗ ಶಿಲ್ಕು ಉಳಿಶಿಕೊಳ್ಳಬೇಕೆಂದು ವಿಧಾಯಿಸಿ ಇರುವುದು ವಜಾ ಹೋಗುತ ಬಾಕಿ 5,210 ರೂಪಾಯಿ ಮಾತ್ರ ಉಳಿಯುತ್ತೆ. ಈ ಮೊಬಲಗು ಪೈಕಿ ಮರಾಮತ್ ಡಿಪಾರ್ಟುಮೆಂಟಿಗೆ ಒರಿಜನಲ್ ಕಾಂಗಾರಿಗಳಿಗೆ ಅವರು ಕೇಳಿದ 20,000 ರೂಪಾಯಿಗೆ 1,018 ರೂಪಾಯಿ ಮಾತ್ರ ಕೊಡಬೇಕೆಂತಲೂ, ಈ ಸಾವಿರ ರೂಪಾಯಿ ನೆಲಮಂಗಲದಿಂದ ಸೊಂಡೇಕೊಪ್ಪಕ್ಕೆ ಹೋಗತಕ್ಕ ರೋಡ್ ಮಾಡುವುದಕ್ಕೆ ಆ ಡಿಪಾರ್ಟುಮೆಂಟಿನವರು ಉಪಯೋಗಿಸಬೇಕೆಂತಲೂ ಬಾಕಿ ಉಳಿಯುವ 4,192 ರೂ. ಮುಂದೆ ಜರೂರಾತಿ ಖರ್ಚಿಗೋಸ್ಕರ ಉಳಿಸಿಕೊಳ್ಳಬೇಕೆಂತಲೂ, ಬೆಂಗಳೂರು_ಮಾಗಡಿ ರಸ್ತೇಲಿರುವ ಮುರಿದುಹೋದ ಸೇತುವೆಯನ್ನು ಪುನಃ ಕಟ್ಟುವುದಕ್ಕೆ 3,000 ರೂಪಾಯಿಗಳನ್ನು ಲೋಕಲ್ ಫಂಡ್ ಜನರಲ್‌ನಿಂದ ಗ್ರ್ಯಾಂಟ್ ಕೊಡಿಸಲು ಗೌರ್ನಮೆಂಟನವರನ್ನು ಕೇಳಿಕೊಳ್ಳಬೇಕೆಂತಲೂ, ಮತ್ತು ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆ ಒಳ್ಳೇ ಸ್ಥಿತಿಗೆ ತರತಕ್ಕ ವಿಚಾರದಲ್ಲಿ ಈ ರಸ್ತೆ ದೇವಸ್ಥಾನಕ್ಕೆ ಮಾತ್ರ ಹೋಗಲು ಅನುಕೂಲವಾಗಿರುತ್ತೆಯಾಗಿ ತಗಲುವ 1,000 ರೂಪಾಯಿ ಮುಜರಾಯಿ ಫಂಡಿನಿಂದ ಕೊಡಿಸಲು ಗೌರ್ನಮೆಂಟಿಗೆ ಬರಸಬೇಕೆಂತಲೂ ತೀರ್ಮಾನವಾಯಿತು.

2. ಬೆಂಗಳೂರು_ಮಂಗಳೂರು ರಸ್ತೆಯಲ್ಲಿ 21ನೆ ಮೈಲಿಯಿಂದ ನೆಲಮಂಗಲ ತಾಲ್ಲೂಕು ಸೊಂಡೆಕೊಪ್ಪಕ್ಕೆ ಹೋಗಲು ಹೊಸದಾಗಿ ರಸ್ತೆ ಮಾಡಲು ತಗಲುವ 2,460 ರೂಪಾಯಿಗಳಿಗೆ ಅಂದಾಜನ್ನು ಕೌಂಟರು ಸಿಗ್ನೇಚರು ಬಗ್ಗೆ 27—29—11—3ನೆ ಮಾರ್ಚಿ ನಂ 253ನೆ ನಂಬರು ಡಾಕೆಟಿನೊಡನೆ ಕಳುಹಿಸಿದ್ದು ಓದಲಾಯಿತು.

ಮೇಲೆ ತೀರ್ಮಾನದಲ್ಲಿ ಈ ಕಾಂಗಾರಿಗೆ ಮಂಜೂರಾತಿ ಕೊಟ್ಟಿರುತ್ತೆ.

3. ದೊಡ್ಡಬಳ್ಳಾಪುರದ ತಾಲ್ಲೂಕು ಊವಲ್ಲಹಳ್ಳಿ ಗ್ರಾಮದಲ್ಲಿ ಹೊಸದಾಗಿ ಮನೆಗಳು ಕಟ್ಟತಕ್ಕ ಜಾಗಕ್ಕೆ ಸರ್ವೆ ನಂಬರ್ $4\frac{1}{2}$ನೆ ಹಿಡುವಳಿದಾರನಿಂದ ತೆಗೆದುಕೊಳ್ಳತಕ್ಕ ವಿಚಾರವನ್ನು ಬೋರ್ಡಿನಲ್ಲಿಟ್ಟು ಬೋರ್ಡಿನ ತೀರ್ಮಾನವನ್ನು ಮತ್ತು ಡಿಟೋ ಜಾಗದಲ್ಲಿ ಮನೆಗಳನ್ನು ಕಟ್ಟುವುದು ಕ್ಷೇಮಕರ ಹೌದೊ ಇಲ್ಲವೆಂಬುದಕ್ಕೆ ಸ್ಯಾನಿಟರಿ ಅಧಿಕಾರಿಗಳ ಅಭಿಪ್ರಾಯವನ್ನು ಕಳುಹಿಸಿಕೊಡಬೇಕೆಂತ ಜನರಲ್ ಮತ್ತು ರೆವಿನ್ಯೂ ಡಿಪಾರ್ಟುಮೆಂಟಿಗಳ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 14—12—06ನೆ ಮಾರ್ಕ್ಕಂ 5080—L. F. 235–06—2ನೆ ನಂಬರು ಡಾಕೆಟ್ಟು ಓದಲಾಯಿತು.

ಇಂಥಾ ಸಂದರ್ಭಗಳಲ್ಲಿ ಸ್ಥಳಾಧಿಕಾರಿಗಳೇ ಜಾಗ ಆಜಮಾಯಿಷಿಯಿಂದ ಸರಿಯಾದ ಜಾಗ ಗೊತ್ತುಮಾಡತಕ್ಕವರೆಂದು ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

(3) A. ಐವರ್ರಖಂಡಪುರಕ್ಕೂ ಬಾಣಾವಾರ್ ರೈಲ್ವೆ ಸ್ಟೇಷನಿಗೂ ಮಧ್ಯೆ ಇರತಕ್ಕ ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಹೆಚ್ಚಾಗಿ ರೂ. 220—9—8 ಕೊಡಲು ಬೋರ್ಡು ಮಂಜೂರಾತಿ ಪಡೆಯಬೇಕೆಂತ ಬರೆಸಿದ ಮಿಲಿಟರಿ ಅಸಿಸ್ಟೆಂಟರವರ 2—1—07ನೆ ಮಾರ್ಕ್ಕಂ 2575ನೆ ನಂಬರು ಲೆಟರು ಓದಲಾಯಿತು.

ಮೊಬಲಗು ಇಲ್ಲವಾಗಿ ಇದನ್ನು ಸ್ವೀಕರಿಸ ಮಾಡಲು ಯತ್ನವಿಲ್ಲವಾದ್ದಕ್ಕೆ ಬೋರ್ಡಿನವರು ಪಶ್ಚಾತ್ತಾಪಪಡುತ್ತಾರೆ.

4. ಗ್ರಾಮಗಳ ಪಾಕೀಜಾ ವಿಚಾರದಲ್ಲಿ ಅಭಿವೃದ್ಧಿಪಡಿಸಲು ಡಿಸ್ಟ್ರಿಕ್ಟ್ ಫಂಡು ಬಾಬತು ಕೊಂಚ ಮೊಬಲಗನ್ನು ಉಳಿಸಬೇಕೆಂದೂ, ಆ ಮೊಬಲಗನ್ನು 50 ಮನೆಗಳಿಗೆ ಮೇಲ್ಪಟ್ಟಿರುವ ಹಳ್ಳಿಗಳಿಗೋಸ್ಕರ ಪ್ರತಿ ವರ್ಷವೂ ಖರ್ಚು ಮಾಡಬೇಕೆಂತಲೂ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 218ನೆ ನಂಬರು ವಿಷಯವನ್ನು ಬೋರ್ಡಿನವರ ಆಲೋಚನೆ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಂದ 4—1—07ನೆ ಮಾರ್ಕ್ಕಂ 6041-8—L. F. 185–06—1ನೆ ನಂಬರು ಲೆಟರಿನೊಡನೆ ರವಾನಿಸಿದ್ದು ಓದಲಾಯಿತು.

ಈ ವಿಚಾರದಲ್ಲಿ ಖಂಡಿತವಾದ ನಿಬಂಧನೆ (Rules) ಮಾಡಲು ಸಾಧ್ಯವಿಲ್ಲವೆಂದೂ ಮತ್ತು ಅವಕಾಶವಾದಾಗೆಲ್ಲಾ ಇದಕ್ಕಾಗಿ ಮೊಬಲಗು ವಿನಿಯೋಗಿಸುವದಕ್ಕೆ ಯಾವಾಗ್ಯೂ ಇಷ್ಟವುಳ್ಳವರಾಗಿದ್ದೇವೆಂದು ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

5. ಜಹಗೀರುಗಳಿಗೆ ಹೋಗತಕ್ಕ ರಸ್ತೆಗಳನ್ನು ಕ್ರಮವಾಗಿಟ್ಟುಕೊಂಡಿರುವದಕ್ಕೆ ತಗಲುವ ಭಾಗವೊಡನ್ನು, ಅಂಥಾ ಜಹಗೀರುಗಳಿಂದ ಹುಟ್ಟುವ ಲೋಕಲ್ ಸೆಸ್ಸ್ ಮೊಬಲಗಿಗಿಂತಲೂ ಬಹಳ ಜಾಸ್ತಿ ಆಗುವ ಪ್ರಯುಕ್ತ, ಡಿಸ್ಟ್ರಿಕ್ಟ್ ಫಂಡಿನಿಂದ ಕೊಡುವದು ನಿಲ್ಲಿಸಿಬಿಡಬೇಕೆಂದು 1906ನೆ ಸಾಲಿನ ಮೈಸೂರ್ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದು 239ನೆ ನಂಬರು ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂತ 4—1—07ನೆ ಮಾರ್ಕ್ಕಂ 6021-8—L. F. 200–06—1ನೆ ನಂಬರ್ ಲೆಟರು ಓದಲಾಯಿತು.

ಅಂಥಾ ಜಹಗೀರುಗಳೇ ಈ ಡಿಸ್ಟ್ರಿಕ್ಟಿನಲ್ಲಿ ಇಲ್ಲ.

6. ಮ್ಯುನಿಸಿಪಾಲಿಟಿ ಅಲ್ಲದ ಗ್ರಾಮಗಳಲ್ಲಿ ಹುಟ್ಟುವ ಮನೇತೆರಿಗೇ ಮೊಬಲಗನ್ನು ಅಂಥಾ ಗ್ರಾಮಗಳ ಪಾಕೀಜಾ ಗೋಸ್ಕರ ಉಪಯೋಗಿಸಬೇಕೆಂತ ಮೈಸೂರ್ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 219ನೆ ನಂಬರು ವಿಷಯವನ್ನು ಬೋರ್ಡಿನವರು ತಿಳುವಳಿಕೆ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಂದ 11-16—1—07ನೆ ಮಾರ್ಕ್ಕಂ 6289–89—L. F. 86-06—1ನೆ ನಂಬರು ಲೆಟರು ನೋಡಿಸಿ ರವಾನಿಸಿದ್ದು ಓದಲಾಯಿತು.

ನೋಟು ಮಾಡಲಾಯಿತು.

7. 50 ಮನೆಗಳು ಇರತಕ್ಕ ಗ್ರಾಮಗಳಲ್ಲಿಯೂ ಗ್ರಾಮ ಪಾಕೀಜಾ ರೂಲ್ಸ್ ಜಾರೀಲಿ ತರಿಸಬೇಕೆಂತ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 223ನೆ ನಂಬರು ವಿಷಯದಲ್ಲಿ ಬೋರ್ಡಿನವರ ತೀರ್ಮಾನವನ್ನು ತಿಳಿಯಿಸಿಕೊಡಬೇಕೆಂತ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 11—1—07ನೆ ಮಾರ್ಕ್ಕಂ 6233-40—L. F. 190-06—1ನೆ ನಂಬರು ಲೆಟರು ಓದಲಾಯಿತು.

ಈ ರೂಲ್ಸ್ 100 ಮನೆಗಳಿಗೆ ಕಮ್ಮಿಯಿಲ್ಲದೆ ಇರುವ ಗ್ರಾಮಗಳಲ್ಲಿ ಮಾತ್ರ ಜಾರೀಲಿ ಇರಬೇಕೆಂತ ಅಭಿಪ್ರಾಯಪಟ್ಟಿರುತ್ತಾರೆ.

8. ರೂಲ್ಸಿಗೆ ಅನುಸಾರವಾಗಿ ಆಡುಗಳನ್ನು ದೊಡ್ಡಿಗೆ ಸೇರಿಸಿದರೆ ಮೊದಲಿಗಿಂತಲೂ ಜಾಸ್ತಿ ಜುಲ್ಮಾನೆ ವಸೂಲ್ಮಾಡತಕ್ಕ ವಿಚಾರದಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 230ನೆ ನಂಬರು ವಿಷಯದಲ್ಲಿ ಪ್ರೆಸಿಡೆಂಟರ ಅಭಿಪ್ರಾಯದೊಡನೆ, ಬೋರ್ಡಿನವರ ತೀರ್ಮಾನವನ್ನು ರಿಪೋರ್ಟು ಮಾಡಬೇಕೆಂತ 11—1—07ನೆ ಮಾರ್ಕ್ಕಂ 6217-24—L. F. 196-06—1ನೆ ನಂಬರು ಲೆಟರು ಓದಲಾಯಿತು.

ಆಡು 1ಕ್ಕೆ 1 ಆಣೆ ಯಂತೆ ವಸೂಲ್ಮಾಡುತ್ತಿರುವ ದರವೇ ಸಾಕೆಂತ ಬೋರ್ಡಿನವರು ಅಭಿಪ್ರಾಯಪಡುತ್ತಾರೆ.

9. ಕೆಲವು ಡಿಸ್ಟ್ರಿಕ್ಟ್ ಫಂಡು ರೋಡುಗಳಿಗೆ ಸಾಲುಬಾದಿ ಕಾಂಗಾಲಿಗೆ ತಗಲುವ ಖರ್ಚನ್ನು ಪ್ರಾವಿನ್ಷಿಯಲ್ ಫಂಡಿನಿಂದ ಕೊಡಿಸಿಕೊಡಬೇಕೆಂತ 1906ನೆ ಸಾಲಿನಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆ ನಡೆದ 211ನೆ ನಂಬರು ವಿಷಯವನ್ನು ಬೋರ್ಡಿನವರ ಆಲೋಚನೆ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಂದ 11—1—07ನೆ ಮಾರ್ಕ್ಕಂ 6241-8—L. F. 178-06—1ನೆ ನಂಬರು ಲೆಟರು ಓದಲಾಯಿತು.

ನೋಟು ಮಾಡಲಾಯಿತು.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 19ನೆ ಮಾರ್ಚಿ 1907.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಜೋಡಿ ಹೊನ್ನವಳ್ಳೀ ಗ್ರಾಮವು ಜೋಡಿದಾರು ರಾಘವೇಂದ್ರಾಚಾರ್ ವಗೈರೇರಿಂದ ಸರ್ಕಾರಕ್ಕೆ ಬರತಕ್ಕ ಜೋಡಿ ಬಾಕೀಗಾಗಿ 1907ನೆ ಇಸವಿ ಮೇ ಮಾಹೆ 20ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಪಾಳ್ಯದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜ ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪ್ಸೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮುರ್ಕಾಂ ಗೆಜೆಟ್ಟಿನ IIನೆ ಭಾಗದ 88—89ನೆ ಪುಟವನ್ನು ನೋಡತಕ್ಕದ್ದು.

ತಾರೀಖು 19ನೆ ಮಾರ್ಚಿ 1907.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಮಳಲಹಳ್ಳಿ ಗ್ರಾಮವು ಜೋಡಿದಾರು ವೆಂಕಟಾಚಾರು ವಗೈರೆ 6 ಜನಗಳಿಂದ ಸರ್ಕಾರಕ್ಕೆ ಬರತಕ್ಕ ಬಾಕಿಗಾಗಿ 1907ನೆ ಇಸವಿ ಮೇ ಮಾಹೆ 18ನೆ ತಾರೀಖು ಶನಿವಾರದ ದಿವಸ ದಿವಿ 11 ಘಂಟೆ ಲಾಗಾಯಿತು ಕುಂದೂರು ಮೊಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಪ್ಸೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮುರ್ಕಾಂ ಗೆಜೆಟ್ಟಿನ IIನೆ ಭಾಗದ 87—88ನೆ ಪುಟವನ್ನು ನೋಡತಕ್ಕದ್ದು.

ಟಿ. ಧರ್ಮರಾಜ ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1906ನೆ ಇಸವಿ ನಂಬರು 7ನೆ ರೆಗ್ಯುಲೇಷನ್ ಅನುಸರಿಸಿ ಈ ಕೆಳಗೆ ತಪಸೀಲು ಕಾಣುವ ಚಕ್ಕುಬಂದಿ ಒಳಗೊಂಡಿರುವ ಶಿವಮೊಗ್ಗಾ ಟವನನ್ನು ಒಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚಿಸಿ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ ಮೈಸೂರು ಗೆಜೆಟನಲ್ಲಿ ಪ್ರಚುರವಾದ ಎರಡು ತಿಂಗಳು ಒಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಶ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷನ್ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳು ಬಂಗಲೆಯ ಕಾಂಪೌಂಡು ಒಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಜಿಕ್ಯೂಟಿವ್ ಇಂಜನಿಯರ್ ಆಫೀಸನ್ನು ಸೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಹತ್ತಿರ ಹೊನ್ನಾಳಿ ರಸ್ತೆಗೆ ಸೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯು ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಳಿ ಇರುವ ಆಕ್ವಾಯಿ ಉಕ್ಕಡದವರಿಗೆ.

ದಕ್ಷಿಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಡಾವಣೆ ಜಾಗದಲ್ಲಿ ಇರುವ ಆಕ್ವಾಯಿ ಕಟ್ಟೆ ಸಮೀಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನು ಒಳಗೊಂಡು ಹಳೆ ಫಾರೆಸ್ಟು ಲಾಡ್ಜ ಮತ್ತು ಬೆಂಗಳೂರು—ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಿಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಸೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 13ನೆ ಜಮೀನ ಲಾಗಾಯಿತು ಶಿವಮೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನು ದಾಟಿ 26, 25, 24, 2[illegible]ನೆ ಸರ್ವೆ ನಂಬರು ಜಮೀನುಗಳ ಮಾರ್ಗವಾಗಿ ಹಳೇ ಡಿಸ್ಟಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ವಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕ್ಲಾಸಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನಬಳಿ) ಹೊನ್ನಾಳಿ ರಸ್ತೆ ಕೂಡುವ ಸ್ಥಳದಲ್ಲಿ ಇರುವ ಆಕ್ವಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೋದಿಗ್ಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಒಳಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲೇದಾರ ಲಾಯ ಮತ್ತು ಲೈನ್‌ಗಳು ಮತ್ತು ಮಿಳ್ಳಘಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮೀನುಗಳನ್ನು ಒಳಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ.

ತಾರೀಖು 3ನೆ ಏಪ್ರೆಲ್ 1907ನೆ ಇಸವಿ, ಚಿಕ್ಕಮಗಳೂರು.

ಸನ್ 1901ನೆ ಇಸವಿ ಡಿಸೆಂಬರು 11ನೆ ಮುರ್ರ್ರಂ ನಂಬರು 9,007—ಲೆ. (ಜೆ. 56ನೆ ಗವರ್ನ್ಮೆಂಟು ನೋಟಿಫಿಕೇಷನ್ 5ನೆ ಪ್ಯಾರಾ ಪ್ರಕಾರ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸನ್ 1907ನೆ ಸಾಲ ಏಪ್ರೆಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರು 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ಮೋಕೂಫ್ ಮಾಡಿ ಇದೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಸನ್ 1907ನೆ ಇಸವಿ ಜನವರಿ ತಾರೀಖು 31ರಲ್ಲು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಲ್ಲಿ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ನಡವಳಿಕೆಗಳು.

ಮೆ|| ಡಿ. ದೇವರಾಜೇ ಅರಸಿನವರು, ಪ್ರೆಸಿಡೆಂಟರವರು, ಸರಕ್ಕ್ಯಾಟನಲ್ಲಿರುತ್ತಾರೆ.

,, ಎಂ. ಲಕ್ಷ್ಮಣಶಾಸ್ತ್ರಿಗಳವರು, ವೈಸ್ ಪ್ರೆಸಿಡೆಂಟರು ಅಧ್ಯಕ್ಷರಾಗಿದ್ದರು.

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಗೈರ್ ಹಾಜರು.

3. ಮೆ|| ಕೆ. ಮೈಲಾರರಾಯರು, ಡಿವಿಜನಲ್ ಅಸಿಸ್ಟೆಂಟ್ ಕಮಿಷನರು.
4. ,, ಕೆ. ಎಂ. ಅಪ್ಪಯ್ಯನವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
5. ,, ಹೆಚ್. ಜೆ. ಮೊಲ್ಲಾಯಿ ಸಾಹೇಬರು, ಎಗ್ಸಿಕ್ಯೂಟಿವ ಇಂಜನಿಯರ್.
6. ,, ಹೆಚ್. ಎನ್. ವೆಂಕಟರಮಣಯ್ಯನವರು, ಸ್ಕೂಲ್‌ಗಳ ಡೆಪ್ಯುಟಿ ಇನ್ಸ್ಪೆಕ್ಟರು.

ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳು.

7. ಮೆ|| ಪಿ. ಶ್ರೀನಿವಾಸರಾಯರು.
8. ,, ಟಿ. ನರಸಿಂಹೈಯ್ಯಂಗಾರು.
9. ,, ಪಾಟರ್ಸ್ ಸಾಹೇಬರು.
10. ,, ಎಸ್. ಪರುವತಪ್ಪನವರು.
11. ,, ಬಿ. ರಂಗಣ್ಣನವರು.
12. ,, ಕೆ. ಗೋವಿಂದಪ್ಪನವರು.
13. ,, ಎಚ್. ಬಿಲ್ಲಿಂಗಟನ್ ಸಾಹೇಬರು.
14. ,, ದಾವುದ್ ಸಾಹೇಬರು.
15. ,, ಪಿ. ರಂಗಣ್ಣನವರು.
16. ,, ಅಬ್ದುಲ್ ಖಾದರ್ ಸಾಹೇಬರು.
17. ಮೆ|| ಎ. ಚಂದ್ರೇಗೌಡರು.
18. ,, ಟಿ. ಶ್ರೀನಿವಾಸರಾಯರು.
19. ,, ಜೆ. ಗಣೇಶರಾಯರು.
20. ,, ವೈ. ಶಾಂತಪ್ಪ ಶೆಟ್ಟರು.
21. ,, ಎಂ. ರಾಮಚಂದ್ರರಾಯರು.
22. ,, ಚನ್ನಕೇಶವರಾಯರು.
23. ,, ಎ. ರಾಮಣ್ಣನವರು.
24. ,, ಹಾಲ್‌ಗಾರ್ ವೆಂಕಟಸುಬ್ಬಯ್ಯನವರು.
25. ಸ್ಥಳ ಖಾಲೀ.

1. ಈ ಕೆಳಗೆ ನಮೂದಿಸಿರುವ ತಪಶೀಲುಳ್ಳ ಮೆ|| ಕಂಟ್ರೋಲರವರಿಂದ ತನಿಖೆಯಾಗಿ ಬಂದ 1906ನೆ ಜುಲೈ ಮತ್ತು ಆಗಸ್ಟು ಮಾಹೆಗಳ ಡಿಸ್ಟ್ರಿಕ್ಟ್ ಫಂಡ್ ಜಮಾಖರ್ಚು ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು.

		ರೂ.	ಅ.	ಪೈ.
1906ನೆ ಇಸವಿ ಜುಲೈ 1ರಲ್ಲು ಶಿಲ್ಕು ...	...	2,445	13	6
1906ನೆ ಆಗಸ್ಟು ಆಖೈರು ವರೆಗೆ ...	...	5,090	6	3
	ಜುಮ್ಲಾ	7,536	3	9
ಜುಲೈ ಮತ್ತು ಆಗಸ್ಟ ಮಾಹೆಗಳಲ್ಲಿ ಖರ್ಚು ...	...	7,446	10	3
	ಖಾತಾ ಬಾಕಿ	89	9	6

2. ಚಿಕ್ಕಮಗಳೂರು—ತರೀಕೆರೆ ಮತ್ತು ಬೀರೂರು ಈ ಮೂರು ವೈದ್ಯಶಾಲೆಗಳಲ್ಲಿ ಕಳೆದ 1906ನೆ ಇಸವಿ ಜುಲೈ 1ರ ಲಾಗಾಯಿತು ಡಿಸೆಂಬರು ಆಖೈರು ವರಿಗೆ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಗಳನ್ನು ತೋರಿಸತಕ್ಕ ಲೆಖ್ಖಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು. ಸದರಿ ವೈದ್ಯಶಾಲೆಗಳಿಗೆ ಚಿಕಿತ್ಸೆಗೋಸ್ಕರ ಬಂದವರ ಸಂಖ್ಯೆಯು ಪರಸ್ಪರ 6175, 8018 ಮತ್ತು 4268 ಆಗಿದ್ದಿತು. ಹಿಂದಿನವರ್ಷ ಇವೇ ಮಾಹೆಗಳಲ್ಲಿ ಸದರಿ ಆಸಪತ್ರೆಗೆ ಸೇರಿದ ರೋಗಿಗಳ ಸಂಖ್ಯೆಯು ಪರಸ್ಪರ 9804, 7313 ಮತ್ತು 1124 ಆಗಿದ್ದಿತು.

3. ಈ ಕೆಳಗೆ ನಮೂದಾಗುವ ಗೌರ್ನಮೆಂಟ್ ಆರ್ಡರುಗಳು ಮತ್ತು ಇತರ ಕಾಗದಗಳನ್ನು ಬೋರ್ಡಿನಲ್ಲಿ ಓದಿ ರಿಕಾರ್ಡು ಮಾಡಲಾಯಿತು.

(1) ಸೀನಿಯರ ಸರ್ಜನರವರು ಪ್ರತಿ ಸಾಲಿನಲ್ಲಿಯೂ ಬಡ್ಜೆಟ್ಟು ತಯಾರ್ಮಾಡಿ ಡಿಸ್ಟ್ರಿಕ್ಟು ಬೋರ್ಡಿನಲ್ಲಿಡುವದಕ್ಕೆ ತತ್ಪೂರ್ವ ಸದರಿ ಬಡ್ಜೆಟ್ಟಿನಲ್ಲಿ ಸೇರಿಸಲು ಅನುಕೂಲಿಸುವಂತೆ ಆಸಪತ್ರೆಗಳಿಗೆ ಶಿಬ್ಬಂದಿ ಖರ್ಚಿಗೂ ಸಾದಿಲ್ವಾರಿಗೂ ದೇಶೀಯ ಔಷಧಿಗಳು ಕೊಂಡುಕೊಳ್ಳುವದಕ್ಕೆ ಸಹಾ ಬೇಕಾಗುವ ಹಣಗಳನ್ನು ತೋರಿಸುವಂತೆ ಒಂದು ತಪಶೀಲು ಸ್ಟೇಟ್‌ಮೆಂಟ್ ತಯಾರು ಮಾ

ಟಿಸಿ ಬೋರ್ಡುಗಳ ಪ್ರೆಸಿಡೆಂಟರವರಿಗೆ ಕಳುಹಿಸಬೇಕೆಂತ್ತ ತಲುಪಿದ 3—11—06ನೆ ಮುರ್ಕುಂ 3534-43ನೆ—L. B. (299-04)—7 ನಂಬರು ಗೌರ್ನಮೆಂಟು ಆರ್ಡರು.

(2) ಹರಿಹರಪುರದ ಆಸಪತ್ರೆಯನ್ನು ಬಾಳೂರಿಗೆ ವರ್ಗಾಯಿಸತಕ್ಕ ಅಭಿಪ್ರಾಯವನ್ನು ಮಂಜೂರು ಮಾಡಿರುತ್ತೆಂತ ತಲ್ಪಿದ 9—11—06ನೆ ಮುರ್ಕುಂ 3798-9—L. B. (417-05)—06ನೆ ನಂಬರು ಗೌರ್ನಮೆಂಟ ಆರ್ಡರು.

(3) ಆಸಪತ್ರೆಗಳಲ್ಲಿ ರೋಗಿಗಳು ವಾಸವಾಗಿರುವ ಕೋಣೆಗಳನ್ನು ಆಸಪತ್ರೆ ಅಸಿಸ್ಟೆಂಟರ ವಾಸಸ್ಥಾನಕ್ಕೆ ಅನುಕೂಲಿಸುವಂತೆ ಬದಲಾಯಿಸಬೇಕೆಂಬ ಅಭಿಪ್ರಾಯವನ್ನು ಮಂಜೂರ್ಮಾಡಲು ಆಗುವದಿಲ್ಲವೆಂತ ಗೌರ್ನಮೆಂಟಿನಿಂದ ತಲ್ಪಿದ 3783-97—L. B. (357-92) 34ನೆ ನಂಬರ ಗೌರ್ನಮೆಂಟ ಆರ್ಡರು.

(4) ತರೀಕೆರೆಯಲ್ಲಿರುವ ಹಿಂದೂ ವೈದ್ಯಶಾಲೆಯು ಪಂಡಿತರು ತಾಲ್ಲೂಕು ಅಮಲ್ದಾರ್ರವರ ಅಧಿಕಾರಕ್ಕೆ ಒಳಪಟ್ಟಿರಬೇಕೆಂತಲೂ ಡಿಸ್ಟ್ರಿಕ್ಟು ಮೆಡಿಕಲ್ಲ ಮತ್ತು ಸ್ಯಾನಿಟರಿ ಆಫೀಸರವರು ಸಾಧಾರಣವಾದ ಮೇಲ್ವಿಚಾರಣೆ ತೆಗದುಕೊಳ್ಳಬೇಕೆಂತಲೂ ಡಿಸ್ಟ್ರಿಕ್ಟು ಹೆಡ್ಕ್ವಾರ್ಟರು ಅಲ್ಲದ ಇತರ ಸ್ಥಳಗಳಲ್ಲಿರತಕ್ಕ ವೈದ್ಯಶಾಲೆಗಳಲ್ಲಿಯೂ ಸಹಾ ಡಿಸ್ಟ್ರಿಕ್ಟು ಬೋರ್ಡ ಪ್ರೆಸಿಡೆಂಟರುಗಳು ಅದೇ ರೀತಿಯಾದ ಏರ್ಪಾಡು ಇಡಬೇಕೆಂತ ತಲ್ಪಿದ 9—11—06ನೆ ಮುರ್ಕುಂ 4100-8—L. F. (131-06)—2ನೆ ನಂಬರು ಗೌರ್ನಮೆಂಟು ಆರ್ಡರು.

(5) 100 ಮನೆಗಳಿರತಕ್ಕ ಗ್ರಾಮಗಳಲ್ಲಿ ರಸ್ತೆ ಮಾಡತಕ್ಕ ವಿಚಾರದಲ್ಲಿ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಹುಟ್ಟಿದ 213ನೆ ನಂಬರು ಪ್ರಸ್ತಾಪವನ್ನು ಮತ್ತು ಅದಕ್ಕೆ ಗೌರ್ನಮೆಂಟಿನವರ ಜವಾಬನ್ನು ಸಹಾ ಡಿಸ್ಟ್ರಿಕ್ಟ ಬೋರ್ಡಿನ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 11—1—07ನೆ ಮುರ್ಕುಂ ನಂಬರು 6281-8-L. F. (180—06)-1ನೆ ಗೌರ್ನಮೆಂಟ ಆರ್ಡರು.

ಗೌರ್ನಮೆಂಟನವರ ಜವಾಬು ನೋಟ ಮಾಡಿಕೊಂಡಿರುತ್ತೆ. ಹಣ ವದಗಿಸುವದು ಹೇಗೆ?

(6) ಮುನಸಿಪಲ ಟವರ್ಗಳಲ್ಲಿ ವಸೂಲಾಗುವ ತೆರಿಗೆಯನ್ನು ಆಯಾಯ ಟವರ್ಗಳ ಅಭಿವೃದ್ಧಿಗೋಸ್ಕರವೇ ಉಪಯೋಗಿಸುವ ರೀತಿಯಲ್ಲಿ ಗ್ರಾಮಾಂತರಗಳಲ್ಲಿ ವಸೂಲಾಗತಕ್ಕ ಮೊಹತರ್ಫಾ ತೆರಿಗೆಯನ್ನು ಸದರಿ ಗ್ರಾಮಗಳಲ್ಲಿ ಆರೋಗ್ಯಾಭಿವೃದ್ಧಿಯ ಏರ್ಪಾಡುಗಳಿಗೋಸ್ಕರವಾಗಿ ಉಪಯೋಗಿಸಬೇಕೆಂತಲೂ, ಆರೋಗ್ಯಾಭಿವೃದ್ಧಿಯಿಂದ ಗ್ರಾಮಾಂತರಗಳಲ್ಲಿ ಪ್ರವೇಶಿಸಿ ಅನೇಕ ಜನಗಳನ್ನು ನಾಶಪಡಿಸುವ ಸ್ವಾಂಕ್ರಾಮಿಕ ರೋಗಗಳನ್ನು ನಿವಾರಿಸುವದಕ್ಕೆ ಸಹಕಾರಿಯಾಗುತ್ತೆಂತಲೂ ಸಹಾ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಹುಟ್ಟಿದ 219ನೆ ಪ್ರಸ್ತಾಪಕ್ಕೆ ಸದರಿ ಆರೋಗ್ಯಾಭಿವೃದ್ಧಿಯು ಕಾರ್ಯವು ಡಿಸ್ಟ್ರಿಕ್ಟು ಬೋರ್ಡಿನವರ ಕರ್ತವ್ಯವೆಂತಲೂ, ಈ ಕೆಲಸಕ್ಕೋಸ್ಕರ ಮೊಹತರ್ಫಾ ತೆರಿಗೆಯನ್ನು ಕೊಡುವದಕ್ಕೆ ಆಗುವದಿಲ್ಲವೆಂತಲೂ ಗೌರ್ನಮೆಂಟನವರು ಕೊಟ್ಟಿರತಕ್ಕ ಜವಾಬನ್ನು ಸಹಾ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 11—1—07ನೆ ಮುರ್ಕುಂ 6289-96—L. F. (186—06)-1ನೆ ನಂಬರು ಗೌರ್ನಮೆಂಟ ಆರ್ಡರು.

(7) ಶಿಡುಬು ಹಾಕುವದನ್ನು ಕಲಿಸತಕ್ಕ ಆಲಯ ಮತ್ತು ಶಿಡುಬು ಹಾಕುವದು ಈ ವಿಚಾರದಲ್ಲಿ ನಡೆದದ್ದರ ವಿಷಯವಾದ 1905ನೆ ಇಸವಿಯ ರಿಪೋರ್ಟನ್ನು ಪರಿಶೀಲಿಸಿದ ಬಗ್ಯೆ ತಲ್ಪಿದ 16—1—07ನೆ ಮುರ್ಕುಂ 3998-4000—Md. (57—06)-9ನೆ ನಂಬರ ಗೌರ್ನಮೆಂಟ ಆರ್ಡರು.

4. ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಕಳಗೆ ನಮೂದಿಸಿರುವ ಪ್ರಸ್ತಾಪಗೆ ಗೌರ್ನಮೆಂಟನವರು ಕೊಟ್ಟ ಜವಾಬನ್ನು 6—9—06ನೆ ಮುರ್ಕುಂ 1953-4 A—L. B. (71—05)-3ನೆ ಗೌರ್ನಮೆಂಟ ಆರ್ಡರಿಗೆ ಪೂರ್ವಣೆಯಾಗಿ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂತ ತಲ್ಪಿದ 10—12—06ನೆ ಮುರ್ಕುಂ 4859—L. F. (210-06)—1ನೆ ಗೌರ್ನಮೆಂಟ ಆರ್ಡರು ಓದಲಾಗಿ ಬೋರ್ಡಿನವರು ಈ ಕೆಲಸಕ್ಕೆ ಹಣ ವದಗಿಸುವದಕ್ಕೆ ಸಾಧ್ಯವಿಲ್ಲವೆಂದು ತಿಳಿಸಲ್ಲು ವಿಷಾದಯುಕ್ತರಾಗಿರುತ್ತಾರೆಂತ ತೀರ್ಮಾನಿಸಲಾಯಿತು.

ಪ್ರಶಂಸೆಗೆ ಬಂದ ವಿಚಾರ ಹಿಂದೂ ಪ್ರಯಾಣೀಕರ ಉಪಯೋಗಕ್ಕೋಸ್ಕರ ದತ್ತಾತ್ರಿ ಪೀಠದ ಮೇಲೆ ಒಂದು ಮುಸಾಫರಖಾನೆ ಕಟ್ಟತಕ್ಕ ವಿಚಾರ—

ಗೌರ್ನಮೆಂಟನವರ ಜವಾಬು ಡಿಸ್ಟ್ರಿಕ್ಟ ಬೋರ್ಡಿಗೆ ಬರೆದುಕೊಳ್ಳತಕ್ಕದ್ದಿರುತ್ತೆ.

5. ಕರಡೀಕಾರ್ಲ ಎಸ್ಟೇಟ ಮಾರ್ಗವಾಗಿ ಸಂಗಮೇಶ್ವರ ಪೇಟೆಯಿಂದ ಬಿದರೆ ವರಿಗೆ ಮೆ॥ ಸಿ. ಎಸ್. ಕ್ರಾಫರ್ಡ ಸಾಹೇಬರು ಮಾಡಿರತಕ್ಕ ರಸ್ತೆಯು ಸದರಿ ಎಸ್ಟೇಟಿಗೆ ಮಾತ್ರ ಉಪಯೋಗಕರವಾಗಿರುತ್ತೆಂತಲೂ ರಸ್ತೆಯು ಪ್ರಯಾಣೀಕರ ಉಪಯೋಗದಲ್ಲಿಲ್ಲವೆಂತಲೂ ನಾಟಾ ಸಾಗಿಸತಕ್ಕ ಬಗ್ಯೆ ಈ ರಸ್ತೆಯನ್ನ ಉಪಯೋಗಿಸುತ್ತಲಿರುವ ಫಾರೆಸ್ಟು ಇಲಾಖೆಯವರು ಸದರಿ ರಸ್ತೆಯನ್ನು ಉತ್ತಮಸ್ಥಿತಿಲ್ಲಿಟ್ಟುಕೊಳ್ಳತಕ್ಕ ಬಗ್ಯೆ ಏನೂ ವಂತಿಗೆ ಕೊಡುವದಿಲ್ಲವೆಂತಲೂ ಈ ಕಾರಣದಿಂದ ಸದರಿ ರಸ್ತೆಯನ್ನು ಡಿಸ್ಟ್ರಿಕ್ಟ ಬೋರ್ಡಿನವರ ಆಡಳಿತಕ್ಕೆ ವಹಿಸುವದು ಅನಾವಶ್ಯಕವೆಂತಲೂ ಅಭಿಪ್ರಾಯಪಟ್ಟಿರುವ ಚಿಕ್ಕಮಗಳೂರು ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಮುಲಫೂಫಿಸಿ ಬಂದ ಚಿಕ್ಕಮಗಳೂರು ತಾಲ್ಲೂಕ ಅಮಲ್ದಾರ್ರವರ 10—12—06ನೆ ಮುರ್ಕುಂ 107ನೆ ನಂಬರು ರಿಪೋರ್ಟು ಓದಲಾಗಿ ಈ ರಸ್ತೆಯು ಸ್ವಲ್ಪವೂ ಜನಗಳ ಉಪಯೋಗದಲ್ಲಿಲ್ಲದೆ ಇರೋಣದರಿಂದ ಡಿಸ್ಟ್ರಿಕ್ಟು ಬೋರ್ಡಿನವರು ಸದರಿ ರಸ್ತೆಯನ್ನು ವಹಿಸಿಕೊಂಡು ಸಾಲಾಬಾದು ರಿಪೇರಿ ಮಾಡಲು ಸಿದ್ಧವಾಗಿಲ್ಲವೆಂತ ತೀರ್ಮಾನಿಸಲಾಯಿತು.

6. ಲೋಕಲ್ ಫಂಡ ಹಣದ ಪೈಕಿ ಕೆಲವು ಭಾಗವನ್ನು ಗ್ರಾಮಗಳಲ್ಲಿ ಆರೋಗ್ಯಾಭಿವೃದ್ಧಿಯ ಏರ್ಪಾಡುಗಳನ್ನು ಮಾಡುವ ಉದ್ದಿಶ್ಯ ಉಪಯೋಗಿಸಬೇಕೆಂತಲೂ ಮತ್ತು ಈ ಮೊಬಲಗು ಪ್ರತಿ ವರುಷದಲ್ಲಿಯೂ 50ಕ್ಕಿಂತ ಹೆಚ್ಚು ಮನೆಗಳಿರುವ ಗ್ರಾಮಗಳಿಗೆ ಮಾತ್ರ ಉಪಯೋಗಿಸಬೇಕೆಂತ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಸ್ತಾಪವನ್ನು ಡಿಸ್ಟ್ರಿಕ್ಟು ಬೋ-

ರ್ಡಿನವರ ಆಲೋಚನೆ ಬಗ್ಗೆ ಕಳುಹಿಸಿರುತ್ತೇವೆಂತ ತಳ್ಳಿದ 4—1—07ನೆ ನಂಬರ್ 6041-8—L. F. 185-06ನೆ ನಂಬರು ಸೆಕ್ರೆಟೆರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕೊಂಡು ರೆಕಾರ್ಡ್ ಮಾಡಲಾಯಿತು.

7. ಸ್ಯಾನಿಟೇಷನ್ ರೂಲ್ಸ್ 100 ಮನೆಗಳಿರತಕ್ಕ ಗ್ರಾಮಗಳಲ್ಲಿ ಮಾತ್ರ ಜಾರಿಯಲ್ಲಿರುತ್ತೇವೆಂತಲೂ 50 ಮನೆಗಳಿರತಕ್ಕ ಗ್ರಾಮಗಳಲ್ಲಿಯೂ ಸದರಿ ರೂಲ್ಸು ಜಾರಿಗೆ ಬಂದಲ್ಲಿ ಸದರಿ ಗ್ರಾಮಗಳು ಉತ್ತಮ ಸ್ಥಿತಿಗೆ ಬರುವದಕ್ಕೆ ಅನುಕೂಲಿಸುತ್ತೇವೆಂತ ಸಹಾ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ 22ನೆ ನಂಬರು ಪ್ರಸ್ತಾಪದ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದೊಡನೆ ರಿಪೋರ್ಟು ಮಾಡಬೇಕೆಂತ ತಳ್ಳಿದ 11—1—07ನೆ ನಂಬರ್ 6233-40—L. F. (190—06)-1ನೆ ನಂಬರ್ ಸೆಕ್ರೆಟೆರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕೊಂಡು ರೆಕಾರ್ಡ್ ಮಾಡಿಕೊಂಡಿರುತ್ತೇವೆಂತ ತೀರ್ಮಾನಿಸಲಾಯಿತು.

8. ಮಲನಾಡ್ ಗ್ರಾಮಗಳಲ್ಲಿನ ರಸ್ತೆಗಳನ್ನು ಮಾಡತಕ್ಕ ಬಗ್ಗೆ ಕೆಲವು ಹಣಗಳನ್ನು ಒದಗಿಸಬೇಕೆಂತ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಸ್ತಾಪದ ವಿಚಾರದಲ್ಲಿ ಅವಶ್ಯಕವಾದ ನಡವಳಿಕೆ ತೆಗದುಕೊಳ್ಳಬೇಕೆಂತಲೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ರಿಪೋರ್ಟು ಮಾಡಬೇಕೆಂತಲೂ ಸಹಾ ತಳ್ಳಿದ 11—1—07ನೆ ನಂಬರ್ 6305-7—L. F. (179—06)-1ನೆ ನಂಬರು ಸೆಕ್ರೆಟೆರಿಯವರ ಡಾಕೆಟ್ ಓದಲಾಗಿ ಇದನ್ನು ನೋಟ್ ಮಾಡಿಕೊಂಡಿರಬೇಕೆಂತಲೂ ಇವುಗಳ ಬಗ್ಗೆ ಪ್ರಪೋಜಲಗಳು ಬಂದಾಗ್ಯ ಅವುಗಳಿಗೆ ಅವಶ್ಯಕವಾದ ನಿಗಾ ಕೊಡಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

9. ಬಹಳ ಜರೂರಾಗಿರೋಣದರಿಂದ ಚಾಲ್ತಿ ಸಾಲಿನಲ್ಲಿಯೇ ನಡಿಯಬೇಕಾಗಿರುವ ಈ ಕೆಳಗೆ ನಮೂದಾಗುವ ಕಾಮಗಾರಿಗಳ ಬಾಬತು ಅಂದಾಜುಗಳ ಲಿಸ್ಟನ್ನು ಓದಲಾಯಿತು.

	ಮಂಜೂರ್ಮಾಡಿದೆ.
	ರೂ.
(1) ಸಖ್ರೆಪಟ್ಟಣದ ಮುಸಾಫರಖಾನೆಯಬಳಿ ಭಾವಿ ತೆಗಿಯುವದಕ್ಕೋಸ್ಕರ ಅಜಮಾಯಿಷಿ ತರೀಕ ಒಂದು ಗುಂಡಿ ತೆಗಿಯತಕ್ಕ ಬಗ್ಗೆ.	58
(2) ಕೆರೆ ಹೊಸಹಳ್ಳಿ ಭಾವಿಯನ್ನು ಆಳ ಮಾಡುವದಕ್ಕೋಸ್ಕರ ತಯಾರಾಗಿ ಬಂದ ಸಪ್ಲಿಮೆಂಟಲ್ ಅಂದಾಜು.	180
(3) ಕಡೂರು ತಾಲ್ಲೂಕು ಕುರುಬರಹಳ್ಳಿಯಲ್ಲಿ ಒಂದು ಭಾವಿ ತೆಗಿಯತಕ್ಕ ಬಗ್ಗೆ ತಯಾರಾಗಿ ಬಂದ ಸಪ್ಲಿಮೆಂಟಲ್ ಅಂದಾಜು.	79
(4) ಚಿಕ್ಕ ತಂಗಲಿಯಲ್ಲಿ ಒಂದು ಭಾವಿ ತೆಗಿಯತಕ್ಕ ಬಗ್ಗೆ ತಯಾರಾಗಿ ಬಂದ ಅಂದಾಜು	210
(5) ದಂಟ್ರಮಕ್ಕಿ-ಹಿರೇಮಗಳೂರು ರಸ್ತೆ ರಿಪೇರಿ ಮಾಡತಕ್ಕ ಬಗ್ಗೆ.	60
(6) ಸಖ್ರೆಪಟ್ಟಣದ ಹೋಬಳಿ ಅಗ್ರಹಾರದ ಭಾವಿಗೆ ಕಲ್ಲು ಕಾಮಗಾರಿ ಮಾಡತಕ್ಕ ಬಗ್ಗೆ ತಯಾರಾಗಿ ಬಂದ ಸಪ್ಲಿಮೆಂಟಲ್ ಅಂದಾಜು.	96

10. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು 28—2—07ನೆ ಗುರುವಾರ ನಡಿಯುತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 16ನೆ ಮಾರ್ಚಿ 1907.

1907ನೆ ಇಸವಿ ಫೆಬ್ರುವರಿ ತಾರೀಖು 14ನೆ ಗುರುವಾರ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್ನ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಮ॥ ರಾ॥ ಎಂ. ಚೆಂಗಯ್ಯಶೆಟ್ಟರವರು, ಪ್ರೆಸಿಡೆಂಟ್.

ಅಫಿಷಿಯಲ್ ಮೆಂಬರುಗಳು.

1. ಮ॥ ಡಬ್ಲಿಯು. ಶ್ರೀನಿವಾಸೈಯ್ಯಂಗಾರ್ರವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು.
2. ,, ಬಿ. ಭೀಮರಾಯರವರು, ವೈಸ್ ಪ್ರೆಸಿಡೆಂಟರು.
3. ,, ಬಿ. ಜೆ. ಕುಮಾರಸ್ವಾಮಿ ನಾಯಕರವರು, ಚಳ್ಳಕೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರು.
4. ,, ಚಿತ್ರದುರ್ಗದ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರು.
5. ,, ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.

ಗೈರ್ ಹಾಜರು.

1. ಮ॥ ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು.

ಹಾಜರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮ॥ ಖಾಜಿ ಸೈದ್ ಹಸೇನ್ ಸಾಹೇಬರವರು.
2. ,, ಕಾನುಭೋಗ ಹನುಮಂತಪ್ಪನವರು.
3. ,, ನೇರ್ಲಹಳ್ಳಿ ಸಂಣಪ್ಪನವರು.
4. ,, ಭಾರಿ ಸಂಣಪ್ಪನವರು.
5. ,, ಗೋಪಾಲಯ್ಯನವರು.
6. ,, ನಾಡಿಗ ಸಿದ್ದರಾಮಯ್ಯನವರು.
7. ,, ಖಾಸಿಂ ಸಾಹೇಬರು.
8. ,, ಲೋಕಿಕೆರೆ ಹನುಮಂತಪ್ಪನವರು.
9. ,, ಬಾಲಕೃಷ್ಣರಾಯರು.
10. ,, ತುಪ್ಪದ ವೀರಂಣನವರು.
11. ,, ಸಾಳೇದಹಳ್ಳಿ ನಾಗಪ್ಪನವರು.
12. ,, ಟಿ. ಸ್ವಾಮಿರಾಯಾಚಾರ್ರು.
14. ,, ಪಟೇಲ್ ಕೆಂಚವೀರಪ್ಪನವರು.
15. ,, ಸಿ. ಎಲ್. ಕೃಷ್ಣಪ್ಪನವರು.
16. ,, ಷಡಾಕ್ಷರಪ್ಪನವರು.
17. ,, ನಜೀ ಸಾಹೇಬರು.

ಗೈರ್ ಹಾಜರ್.

1. ಮ॥ ಚನ್ನಗೌರಯ್ಯನವರು.
2. ,, ಫಕೀರ್ ಸಾಹೇಬರು.

I. 1906ನೆ ಡಿಸೆಂಬರ್ 17ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು ಕಾಪಿಯನ್ನು ಓದಿ ದೃಢಪಡಿಸಲಾಯಿತು.

II. ಲೋಕಲ್ ಬೋರ್ಡು ರೆಗ್ಯುಲೇಷನ ಸೆಕ್ಷನ್ 28 ಪ್ಯಾರಾ (1) ನ್ನು ಅನುಸರಿಸಿ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರು ಮಂಜೂರ್ಮಾಡಿರತಕ್ಕ ಕಾಮಗಾರಿಗಳ ಲೀಸ್ಟನ್ನು ಓದಿ ಅಪ್ರೂವ್ ಮಾಡಲಾಯಿತು.

III. ಫೈನಾನ್ಸು ಕಮಿಟಿಯವರಿಂದ ಸಬ್‌ಮಿಟ್ ಆದ 1907—08ನೆ ಸಾಲಿನ ಜಮಾ ಖರ್ಚು ಬಡ್ಜೆಟ್ಟನ್ನು ಓದಲಾಯಿತು.

ರಜಲ್ಯೂಷನ್—ಬೋರ್ಡಿನವರು ರಿವೈಜು ಮಾಡಿರುವ ಪ್ರಕಾರ ಖರ್ಚುಬಾಬನ್ನು ಅಂಗೀಕರಿಸಿ ಬಡ್ಜೆಟ್ ಅಂದಾಜುಗಳನ್ನು ಮಂಜೂರಿ ಬಗ್ಯೆ ಗೌರ್ನಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

IV. ದಾವಣಗೆರೆ ತಾಲ್ಲೂಕು ಅನಗೋಡು ಗ್ರಾಮದಲ್ಲಿ ಮುಸಾಫರಖಾನೆ ಕಟ್ಟತಕ್ಕ ಬಗ್ಯೆ ತಯಾರಾದ 4,199 ರೂಪಾಯಿನ ಅಂದಾಜನಿಕೆ ಬಂದಿರತಕ್ಕ ದಾವಣಗೆರೆ ಸಬ್ ಡಿವಿಜನ್ ಆಫೀಸರವರ 9—1—07ನೆ ಮರ್ಸ್ಕಂ 604ನೆ ನಂಬರ್ ಯಾದಿಯನ್ನು ಓದಲಾಯಿತು.

ರಜಲ್ಯೂಷನ್—ಇದಕ್ಕಾಗಿ ಹಣ ಅನುಕೂಲವಾದ ಕಾಲದಲ್ಲಿ ಪುನಃ ಈ ಅಂಶ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

V. ಅದರಡಿ ಕಂಡ ದಸರಾ ರೆಪ್ರೆಸೆಂಟೇಟಿವ್ ಅಸೆಂಬ್ಲಿ ರೆಪ್ರೆಸೆಂಟೇಷನ್‌ಗಳನ್ನು ಓದಲಾಯಿತು.

(1) ಚಿಕ್ಕಜಾಜೂರಿನಿಂದ ಹಿರೆಗುಂಟನೂರಿಗೆ ರಸ್ತೆ ಹಾಕತಕ್ಕ ವಿಷಯ.
(2) ಹಿರಿಯೂರು ಧರ್ಮಪುರದ ರಸ್ತೆಯನ್ನು ಮುಗಿಸಿ ಅದರ ನಿಗಾವಣೆ ನೋಡತಕ್ಕ ವಿಷಯ.
(3) ಚಿತ್ರದುರ್ಗದಿಂದ ಗುಂಟನೂರಿಗೆ ರಸ್ತೆ ಹಾಕತಕ್ಕದ್ದು.
(4) ಬಾಗೂರು ವಿಲೇಜು ಯೂನಿಯನ್ನಿನಲ್ಲಿ ರಸ್ತೆಗಳಾಗತಕ್ಕ ವಿಷಯ.
(5) ಕೊಳಲ್ಕೆರೆ ಅನಗೋಡು ರಸ್ತೆಯನ್ನು ಮೇಟಲ್ ಮಾಡತಕ್ಕ ವಿಷಯ.

ರಜಲ್ಯೂಷನ್—(1) & (5) ಮತ್ತು ಚಿಕ್ಕಜಾಜೂರಿನಿಂದ ಹಿರೆಗುಂಟನೂರ ವರೆಗೆ ಹಾಲಿ ಇರತಕ್ಕ ಗಾಡಿಗಳು ಓಡ್ಯಾಡುವ ದಾರಿ ಮತ್ತು ಚಿತ್ರದುರ್ಗದಿಂದ ಗುಂಟನೂರವರೆಗೆ ಇರತಕ್ಕ ದಾರಿ ಸಹ ಆಗತಕ್ಕದ್ದು ಅವಶ್ಯಕವಾಗಿರುತ್ತಾಗಿ ತಿಳಿಯಬರುತ್ತಾದ್ದರಿಂದ ಅವುಗಳನ್ನು ಸರ್ವೆ ಲೆವಲ್ ಮಾಡತಕ್ಕ ಬಗ್ಯೆ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂತಲೂ ಮತ್ತು ಹಣ ಪಡೆಗಿದಾಗ ಬಾಗೂರು ಯೂನಿಯನ್ನಿನಲ್ಲಿ ರಸ್ತೆ ಹಾಕತಕ್ಕ ಅಂಶ ಯೋಚಿಸತಕ್ಕದ್ದೆಂತಲೂ ಮತ್ತು ಹಿರಿಯೂರು ಧರ್ಮಪುರದ ರಸ್ತೆ ಮೇಟಲ್ ಮಾಡತಕ್ಕದ್ದು ಸದ್ಯಕ್ಕೆ ನಿಲ್ಲಿಸಿರಬೇಕೆಂತಲೂ ಸಹ ತೀರ್ಮಾನಿಸಲಾಯಿತು.

VI. ಹೊಸದುರ್ಗದಿಂದ ಮತ್ತೋಡು ವರೆಗೆ ರಸ್ತೆ ಹಾಕತಕ್ಕ ವಿಚಾರದಲ್ಲಿ ಹೊಸದುರ್ಗದ ತಾಲ್ಲೂಕು ಬೋರ್ಡಿನಿಂದ ತಲ್ಪಿರತಕ್ಕ ರಜಲ್ಯೂಷನ್ ಓದಲಾಯಿತು.

ರಜಲ್ಯೂಷನ್—ತಾತ್ಕಾಲಿಕಕ್ಕೆ ಹಣವಿಲ್ಲ.

VII. ಹದಡಿಯಿಂದ ಸೂಳೆಕೆರೆ ವರಿಗೆ ರಸ್ತೆ ಹಾಕತಕ್ಕ ವಿಚಾರದಲ್ಲಿ ದಾವಣಗೆರೆ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 16—1—07ನೆ ಮಾರ್ಕ್ಕಂ 96ನೆ ನಂಬರ ರಿಪೋರ್ಟನ್ನು ಓದಲಾಯಿತು.

ರಜಲ್ಯೂಷನ್—ಹಾಲಿ ನಡಿಯುತ್ತಿರುವ ಹದಡಿಕೆರೆ ಏರಿ ಬಡಾವಣೆ ಕೆಲಸ ಪೂರೈಸಿದ ನಂತರ ಮೇಲ್ಕಂಡ ರಸ್ತೆ ಹಾಕತಕ್ಕ ಅಂಶ ಬೋರ್ಡಿನವರು ಆಲೋಚಿಸತಕ್ಕದ್ದಾಗಿರುತ್ತಾಗಿ ತೀರ್ಮಾನಿಸಲಾಯಿತು.

VIII. ಚಿಕ್ಕಕೆರೆ-ಹೊಸದುರ್ಗ ರೋಡು ಮತ್ತು ಭರಮಗಿರಿ-ಹೊಸದುರ್ಗ ರೋಡುಗಳನ್ನು ಮೇಂಟೇನು ಮಾಡತಕ್ಕ ಬಗ್ಗೆ ತಗಲುವ ಲಾಗವನ್ನು ಪ್ರೋವಿನ್ಷಿಯಲ್ ಫಂಡಿಗೆ ವರ್ಗಾಯಿಸತಕ್ಕ ವಿಷಯದಲ್ಲಿ ಹೊಸದುರ್ಗ ತಾಲ್ಲೂಕು ಬೋರ್ಡಿನ 28—12—06ನೆ ಮಾರ್ಕ್ಕಂನ ರಜಲ್ಯೂಷನ್ ಓದಲಾಯಿತು.

ರಜಲ್ಯೂಷನ್—ಬೋರ್ಡಿನವರು ಈ ವಿಷಯದಲ್ಲಿ 1903ನೆ ಇಸವಿಯಲ್ಲಿ ಗಾರ್ನಮೆಂಟಿಗೆ ರೆಪ್ರೆಸೆಂಟ್ ಮಾಡಲಾಗಿ ಭರಮಗಿರಿ-ಹೊಸದುರ್ಗ ರಸ್ತೆ ಸ್ಪೆಷಲ್ ರಿಪೇರಿಗೋಸ್ಕರ ಲೋಕಲ್ ಫಂಡ್ಸು ಜನರಲ್‌ನಿಂದ 5,088 ರೂಪಾಯಿಯನ್ನು ಮತ್ತು ಸದರಿ ರೋಡುಗಳನ್ನು ಮೇಂಟೇನು ಮಾಡಿಕೊಳ್ಳತಕ್ಕ ಬಗ್ಗೆ ವರುಷಕ್ಕೆ 1,310 ರೂಪಾಯಿನಂತೆ 2 ವರುಷದ ವರೆಗೆ ಮೇಲ್ಕಂಡ ಫಂಡಿನಿಂದಲೆ (Grant-in-aid) ಗ್ರಾಂಟ್-ಇನ್-ಏಡ್ ಮಂಜೂರ್ಮಾಡಿದ್ದರೆಂತಲೂ ತಿಳಿಯಬರುತ್ತೆ. ಈ ವಿಷಯದಲ್ಲಿ ತಾಲ್ಲೂಕು ಬೋರ್ಡಿನವರು ಮಾಡಿರತಕ್ಕ ರಜಲ್ಯೂಷನ್ ನ್ಯಾಯವಾಗಿರುತ್ತಾಗಿ ಅದನ್ನು ಗಾರ್ನಮೆಂಟನವರ ಸುಮ್ಮುಖಾವಲೋಕನೆ ಬಗ್ಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

IX. ಹದಡಿಕೆರೆ ಏರಿಯ ಬಡಾವಣೆಗೋಸ್ಕರ ಜಾಸ್ತಿ ತಗಲುವ 1,240 ರೂಪಾಯಿ ಲಾಗೋಡು ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯದ ಬಗ್ಗೆ ಬಂದಿರತಕ್ಕ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 2—12—06 ಮಾರ್ಕ್ಕಂ 981ನೆ ನಂಬರ ಡಾಕಟ್ ಓದಲಾಯಿತು.

ರಜಲ್ಯೂಷನ್—ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು ಪ್ರೊಪೋಜು ಮಾಡುವ ಮೇರೆಗೆ ಕೈಪಿಡಿಗೋಡೆ ಕಟ್ಟತಕ್ಕದ್ದು ಅವಶ್ಯಕವಾಗಿ ಕಂಡುಬರುತ್ತಾದ್ದರಿಂದ ಇದನ್ನು ಬಡ್ಜಟ್ಟನಲ್ಲಿ ಪ್ರೊವೈಡ್ ಮಾಡಬೇಕಾಗಿ ತೀರ್ಮಾನಿಸಲಾಯಿತು.

X. ಐಮಂಗಲದಿಂದ ಯರಬಳ್ಳಿ ವರೆಗೆ ರಸ್ತೆ ಹಾಕತಕ್ಕ ಬಗ್ಗೆ ತಯಾರಾದ 250 ರೂಪಾಯಿ ಅಂದಾಜನಿಂ ತಲ್ಪಿರತಕ್ಕ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 1—1—07ನೆ ಮಾರ್ಕ್ಕಂ 6ನೆ ನಂಬರ ಡಾಕಟನ್ನು ಓದಲಾಯಿತು.

ರಜಲ್ಯೂಷನ್—ಹಣ ಒದಗಿದಾಗ್ಯೆ ಈ ಕೆಲಸ ಮಾಡತಕ್ಕದ್ದೆಂತ ತೀರ್ಮಾನಿಸಲಾಯಿತು.

XI. ಹಿರಿಯೂರು ತಾಲ್ಲೂಕು ಆದಿವಾಳ ಗ್ರಾಮದಲ್ಲಿ ಹಂಗಾಮಿಯಾಗಿ ಎರಡು ವರುಷಗಳ ವರಿಗೆ ಸಂತೆ ಆಗತಕ್ಕದ್ದನ್ನು ಮಂಜೂರ್ಮಾಡಿರುವದಾಗಿ ಗಾರ್ನಮೆಂಟಿನಿಂದ ತಲ್ಪಿರತಕ್ಕ 4—1—07ನೆ ಮಾರ್ಕ್ಕಂ 6037-40—L. F. (291—06)-2ನೆ ನಂಬರ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

XII. ಮುಂದಿನ ಮೀಟಿಂಗು 1907ನೆ ಮೇ ಮಾಹೆ 29ನೆ ತಾರೀಖಿನ ದಿವಸ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಎಂ. ಚೆಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ 1906—07ನೆ ಇಸವಿ ಮಿಸ್ ಅರ್ಜಿ ನಂಬರು 577.

ಅರ್ಜಿದಾರ್ ಕೋಲಾರ ಗಣಿಯಲ್ಲಿ ಮಾರಿಕೊಪ್ಪಂ ಕ್ಯಾಂಪಿನಲ್ಲಿರುವ ಸಿ. ಅರುಣಾಚಲ ಮೊದಲಿಯಾರ್, ಮೈನರಾದ ದೊಡ್ಡಬಳ್ಳಾಪುರದ ಸ್ಥಳದ 1ನೆ ಚೆಲ್ವರಾಯಂ, 2ನೆ ಅಶೋಧಮ್ಮ ಮತ್ತು ಕಮಲಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚೆಲ್ವರಾಯಂ, ಅಶೋಧಮ್ಮ, ಕಮಲಮ್ಮನಿಗೆ ಚಿಕ್ಕಪ್ಪ ಆಗಬೇಕೆಂಬ ಹಕ್ಕಿನಮೇಲೆ ಕೋಲಾರ ಗಣಿ ಮಾರಿಕೊಪ್ಪಂ ಸ್ಥಳದ ಸಿ. ಅರುಣಾಚಲ ಮೊದಲಿಯಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ 1907ನೆ ಇಸವಿ ಮೇ ತಾರೀಖು 31ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ 1907ನೆ ಇಸವಿ ಏಪ್ರಲ್ ತಿಂಗಳು 3ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1906—1907ನೆ ಇಸವಿ ಮಿಸ್ ಅರ್ಜಿ ನಂಬರ 588.

ಅರ್ಜಿದಾರರು ಬೆಂಗಳೂರು ಜಂಬಾನಪೇಟೆಯಲ್ಲಿರುವ ಬುದ್ಧಿವಂತನಾದ ರಘುನಾಥಪ್ಪ, 2ನೆ ಈತನ ಸೊಸೆ ಲಕ್ಷ್ಮಮ್ಮ, ಮೈನರಾದ ಬೆಂಗಳೂರು ಜಂಬಾನಪೇಟೆ ಸ್ಥಳದ ದಶರಥರಾಮಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ದಶರಥರಾಮಯ್ಯನಿಗೆ 1ನೆ ಅರ್ಜಿದಾರ ತಾತ ಮತ್ತು 2ನೆ ಅರ್ಜಿದಾರಳು ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಜಂಬಾನಪೇಟೆ ಸ್ಥಳದ ರಘುನಾಥಪ್ಪ ಮತ್ತು ಲಕ್ಷ್ಮಮ್ಮನು ಸದರಿ ಮೈನರಿನ ಆಸ್ತಿ ಕಾಪಾಡುವದಕ್ಕೆ

ಸರ್ಟಿಫಿಕೇಟ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರಿ ಅರ್ಜಿ ಹಿಯರಿಂಗ ಬಗ್ಗೆ ಸರ್ 1907ನೆ ಇಸವಿ ಮೇ ತಾರೀಖು 31ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ ಕೊಡೋಣಾಗಿಧೆ.

ಸರ್ 1907ನೆ ಇಸವಿ ಏಪ್ರೆಲ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1906—07ನೆ ಇಸವಿ ಮಿಸ್ ಅರ್ಜೀ ನಂಬರ 597.

ಅರ್ಜಿದಾರ ಮಾಗಡಿ ತಾಲ್ಲೂಕು ಸಾತನೂರು ಹೋ॥ ಕೆಂಪಸಾಗರ ಗ್ರಾಮದಲ್ಲಿರುವ ಶಿವಾಚಾರ ಜಾತಿ ಮುದ್ವೀರಪ್ಪನ ಮಗ ಚಿಕ್ಕ ಈರಪ್ಪ, ಮೈನರಾದ ಮಾಗಡಿ ತಾಲ್ಲೂಕು ತಾವರೆಕೆರೆ ಹೋ॥ ಸೂಲವಾರ ಸ್ಥಳದ ರೇವಯ್ಯನ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ರೇವಯ್ಯನಿಗೆ ಸಮೀಪವಾದ ವಾರಸುದಾರ ಆಗಬೇಕೆಂಬ ಹಕ್ಕಿ ಮೇಲೆ ಮಾಗಡಿ ತಾ॥ ಸಾತನೂರು ಹೋ॥ ಕೆಂಪಸಾಗರ ಸ್ಥಳದ ಚಿಕ್ಕ ಈರಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವವಕ್ಕೆ ಸರ್ಟಿಫಿಕೇಟ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ ಬಗ್ಗೆ ಸರ್ 1907ನೆ ಇಸವಿ ಜೂನ ತಾರೀಖು 7ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ ಕೊಡೋಣಾಗಿಧೆ.

ಸರ್ 1907ನೆ ಇಸವಿ ಏಪ್ರೆಲ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಜಿ. ಹೆಚ್. ಭಾಭಾ,
ಸಬ್. ಜಡ್ಜ.

ಶಿವಮೊಗ್ಗ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1906—07ನೆ ಇಸವಿ ಮಿ॥ ಅರ್ಜೀ ನಂಬರ 100.

ಕಡೂರು ತಾಲ್ಲೂಕು ಬೀರೂರು ಸ್ಥಳದಲ್ಲಿ ಮೃತಪಟ್ಟ ಪತ್ರೆ ರುದ್ರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೆ ಪತ್ರೆ ವೀರಪ್ಪ, 2ನೆ ಚಣವೀರಪ್ಪ, 3ನೆ ಶಿವಪ್ಪ 2—3ನೆ ಯವರು ಮೈನರು, ಗಾರ್ಡಿಯನ 1ನೆ ಯವರು ಮೃತಪಟ್ಟ ಸದರೀ ಪತ್ರೆ ರುದ್ರಪ್ಪನವರಿಗೆ ತಮ್ಮ ಮತ್ತು ಅಣ್ಣನ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೀರೂರು ಸ್ಥಳದ ಪತ್ರೆ ವೀರಪ್ಪ, ಚನ್ನವೀರಪ್ಪ, ಶಿವಪ್ಪ ಇವರು ಬೀರೂರು ವಾಸಸ್ಥರಾಗಿ ಮೃತಪಟ್ಟ ಪತ್ರೆ ರುದ್ರಪ್ಪನವರ ಜೊತೆಗೆ ಬಗ್ಗಾಗಿ ಬರತಕ್ಕ 1,08,360—0—0 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಬಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪತ್ರೆ ವೀರಪ್ಪ, ಚನ್ನವೀರಪ್ಪ, ಶಿವಪ್ಪ ಇವರ ಅರ್ಜಿಯನ್ನು ಸರ್ 1907ನೆ ಇಸವಿ ಮೇ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ ಪಡಿಸುತಕ್ಕ ಬಾಧ್ಯತೆಯನ್ನು ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪತ್ರೆ ರುದ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1907ನೆ ಇಸವಿ ಏಪ್ರೆಲ್ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಟು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಆರ್. ಬಿ. ಪೈಂವಾರ್,
ಡಿಸ್ಟ್ರಿಕ್ಟ ಜಡ್ಜ.

ನೋಟಿಸ.

ಕೃಷ್ಣರಾಜಪೇಟೆ ಡಿವಿಜನ ಅಸಿಸ್ಟೆಂಟ ಕಮಿಷನರ ಸಾಹೇಬರವರ ಆಫೀಸಿನಿಂದ.

ಈ ಕೆಳಗೆ ನಮೂದಿಸಿರತಕ್ಕ ಕೃಷ್ಣರಾಜಪೇಟೆ ತಾಲ್ಲೂಕಿಗೆ ಸೇರಿದ ಇನಾಂದಾರರುಗಳಿಗೆ ತಿಳಿಯಪಡಿಸುವದೇನಂದರೆ :—

ಕೃಷ್ಣರಾಜಪೇಟೆ ತಾಲ್ಲೂಕಿಗೆ ಸೇರಿದ ಹೇಮಗಿರಿ ನಾಲಾವನ್ನು ಬಡಾಯಿಸಿಕೊಡಬೇಕೆಂದು ವಗೈರೆ, ವಿಟಲಾಪುರ, ಪರದೇಶಿ ಗೌಡನ ಕೊಪ್ಪಲ್, ಕೊಡ್ಲ ಕುಪ್ಪೆ, ದೊಡ್ಡನ ಕಟ್ಟೆ, ಕೆಂಪನಹಳ್ಳಿ ವಗೈರೆ ಗ್ರಾಮದ ರೈತರುಗಳು ಗೌರ್ನಮೆಂಟಿಗೆ ಅರ್ಜಿ ಕೊಟ್ಟಿರುವದ್ದರಿಂದ ಇವರುಗಳ ಕೋರಿಕೆಯಂತೆ ನಡಿಸಿಕೊಡತಕ್ಕ ಭಾಗದಲ್ಲೂ,

ಹಾಲಿ ಇರುವ ನಾಲೆ ಅಂಪ್ಲಾ ಮುಮೆಂಟಿನ ಹದ್ದುಬಸ್ತು ಮಾಡಿಸಿಕೊಡುವದಕ್ಕೆ ತಗಲುವ ಲಾಗೋಡನ್ನು ನೀವುಗಳು ವಹಿಸುವದಕ್ಕೂ,

ಮೇಲ್ಕಂಡ ಈ ಎರಡು ಅಂಶಗಳಿಗೆ ನಿಮ್ಮ ಅಭಿಪ್ರಾಯ ತಿಳಿದು ಅವುಗ್ಯೆ ಮುಚ್ಚಳಿಕೆ ಪಡೆದುಕೊಂಡು ಮುಂದಿನ ಕ್ರಮ ಜರುಗಿಸಬೇಕಾಗಿರುವ ಪ್ರಯುಕ್ತ ಈ ವಿಷಯದಲ್ಲಿ ನೀವುಗಳು ಮುಚ್ಚಳಿಕೆ ಕೊಡಲು 1907ನೆ ಇಸವಿ ಮೇ ಮಾಹೆ 20ನೆ ತಾರೀಖು ದಿವ 11 ಘಂಟೆಗೆ ಸರಿಯಾಗಿ ಕೃಷ್ಣರಾಜಪೇಟೆ ಮೊಕ್ಕಾಂನಲ್ಲಿ ನಮ್ಮ ಆಫೀಸು ರುಬರೂಬು ಹಾಜರಾಗತಕ್ಕದ್ದು. ಇದಕ್ಕೆ ತಪ್ಪಬಾರದೆಂದು ಈ ಮೂಲಕ ತಿಳಿಸಲ್ಪಟ್ಟಿದೆ, ತಿಳಿಯುವದು.

ಬಿ. ಕೃಷ್ಣರಾವ್,
ಕೃಷ್ಣರಾಜಪೇಟೆ ಡಿವಿಜನ ಆಫಿಸರ.

ಸ॥ ಲಕ್ಷ್ಮಿಪುರ ಗ್ರಾಮ.

ಮೈಸೂರು ಕೋಟೆ ವೆಂಕಟಪಟ್ಟಿ ಗಂಡಿ ಬೀದಿಯಲ್ಲಿರುವ ಕೃಷ್ಣಮೂರ್ತಾಚಾರ್ಯ.

ಶ್ರೀರಂಗಪಟ್ಟಣದಲ್ಲಿರುವ ಉತ್ತರಾದಿ ಮಠದ ಪಜಾಂಮ ಶ್ರೀನಿವಾಸಮೂರ್ತ್ಯಾಚಾರು.

(ಈ ಗ್ರಾಮದ ಭೋಗ್ಯದಾರಳು ಅಕ್ಕಿ ಹೆಬ್ಬಾಳು ಹೋಬಳಿ ಐಚನಹಳ್ಳಿ ಗ್ರಾಮದಲ್ಲಿರುವ ಚನ್ನಮ್ಮ.)

ಸ|| ಬೊಮ್ಮೇನಹಳ್ಳಿ ಗ್ರಾಮ.

ಯಳಂದೂರು ತಾಲ್ಲೂಕು ಗುಂಬಳ್ಳಿ ಗ್ರಾಮದಲ್ಲಿರುವ ಕೃಷ್ಣಮೂರ್ತಾಚಾರ್ರು.

ಸ|| ಕುರ್ಣೇನಹಳ್ಳಿ ಗ್ರಾಮ.

ಮೈಸೂರು ಹಳ್ಳದಕೇರಿಯಲ್ಲಿರುವ ನರಸುಂಹ್ಯಯ್ಯನವರು.

ಸ|| ತೆರಣೇನಹಳ್ಳಿ ಗ್ರಾಮ.

ಶ್ರೀರಂಗಪಟ್ನದಲ್ಲಿರುವ ಪ್ಲೀಡರು ಮೆ|| ಅತ್ತಿಕುಪ್ಪೆ ರಾಮಣ್ಣನವರು.

ಸ|| ದೊಡ್ಡ ಯಾಚೇನಹಳ್ಳಿ ಗ್ರಾಮ.

ಮೈಸೂರು ಹಳೆ ಅಗ್ರಹಾರದ ಗರಲ್ಸ್ ಸ್ಕೂಲ್ ಹಿಂದೆ ಇರುವ ವ್ಯಾಸರಾಯರು.

ಮೈಸೂರು ಮಂಡಿಪೇಟೆಲಿರುವ ಪೆರ್ಷ. ಅಮಲ್ದಾರ್ರು ಮೆ|| ಲಕ್ಷ್ಮಣರಾಯರು.

ಮೈಸೂರು ಕಿಲ್ಲೆಯಲ್ಲಿರುವ ಅಯಾಚಿತ ನಾರಾಯಣ ದೀಕ್ಷಿತರು.

ಶ್ರೀರಾಂಪೇಟೆಲಿರುವ ಕವನಿ ಶಾಸ್ತ್ರಿಗಳು.

ಮೈಸೂರು ಕತ್ತವಾಡಿಪುರದ ಅಗ್ರಹಾರದಲ್ಲಿರುವ ಕೃಷ್ಣ ಜೋಯಿಸರು.

ಮೈಸೂರು ಕಿಲ್ಲೆ ಮೋತಿಖಾನೆ ಬೀದಿಲಿರುವ ಶ್ರೀನಿವಾಸ್ಯಯ್ಯಂಗಾರ್ರು.

ಮೈಸೂರು ಚಾಮರಾಜ ಮೊಹಲ್ಲಾದಲ್ಲಿರುವ ಕಾಶಿಪತಿ ಶಾಸ್ತ್ರಿಗಳ ಮಕ್ಕಳು ರಾಮಶಾಸ್ತ್ರಿಗಳು ಮತ್ತು ಗಂಗಾಧರ ಶಾಸ್ತ್ರಿಗಳು.

ಹೊಳೆ ನರಸೀಪುರದಲ್ಲಿರುವ ಕುಂಭಕೋಣೆ ರಾಘವೇಂದ್ರಾಚಾರ್ರು.

ತಿಪಟೂರು ತಾಲ್ಲೂಕು ಜಡೆಮಾಯಿಸಂದ್ರದಲ್ಲಿರುವ ಶ್ರೀರಂಗಾಚಾರ್ರ ತಾಯಿ ರಾಮಮ್ಮನವರು.

ಚಿಕ್ಕಬಳ್ಳಾಪುರದಲ್ಲಿರುವ ರಾಮಾಪಂಡಿತರ ಮಕ್ಕಳು ಸುಬ್ರಾಯ ಪಂಡಿತರು.

ಶ್ರೀರಂಗಪಟ್ಟಣದಲ್ಲಿರುವ ಶ್ರೀನಿವಾಸ್ಯಯ್ಯಂಗಾರ್ರು.

ಸ|| ಮಳ್ಳಹಳ್ಳಿ ಗ್ರಾಮ.

ಅಕ್ಕಿಹೆಬ್ಬಾಳಲ್ಲಿರುವ ಚಿಕ್ಕಣ್ಣಯ್ಯ (ಅನುಭವದಾರ ಅಲಂಬಾಡಿ ಬೋಗೆಗೌಡನ ಮಗ ನಂಜೇಗೌಡ).

ಹೆಗ್ಗಡದೇವನಕೋಟೆ ತಾಲ್ಲೂಕು ಸ|| ಕಿತ್ತೂರು ಗ್ರಾಮದಲ್ಲಿರುವ ಶಾನಭೋಗ ಶೇಷೈಯ್ಯಂಗಾರ್ರು.

ಶಿರಾ ತಾಲ್ಲೂಕು ಕಸಬಾದಲ್ಲಿರುವ ಶಿರಾದ ಅಮಲ್ದಾರ್ರ ತಂದೆ ವೆಂಕಟ ನಾರಣಭಟ್ಟರು.

ಮೈಸೂರು ಹಳೆ ಅಗ್ರಹಾರದಲ್ಲಿರುವ ಛತ್ರದಬೀದಿ ಶಿಂಗಂಭಟ್ಟರ ಮಕ್ಕಳು ಸುಪಟಭಟ್ಟರು.

ಸ|| ಛಂಡಹೊಳೆ ಗ್ರಾಮ.

ಮೈಸೂರು ಕಿಲ್ಲೆ ವೀಣೆ ವೆಂಕಟಸುಬ್ಬಯ್ಯನವರ ಬೀದಿಯಲ್ಲಿರುವ ಭಾಗವತ ನಾರಣಸ್ವಾಮ್ಯಯ್ಯನವರ ಮಕ್ಕಳು ನರಶಿಂಗರಾವ್.

ಮೈಸೂರು ಕಿಲ್ಲೆ ಮೋತಿಖಾನೆ ಬೀದಿಯಲ್ಲಿರುವ ಅವಸರದ ಹೋಬಳಿ ಶಿರಸ್ತೆದಾರ್ರು ಗೋವಿಂದೈಯ್ಯನವರು.

ಮೈಸೂರು ಮೋತಿಖಾನೆ ಬೀದಿಯಲ್ಲಿರುವ ಗರಳಪುರಿ ಶಾಸ್ತ್ರಿಗಳ ಮಕ್ಕಳು ಶ್ರೀಕಂಠ ಶಾಸ್ತ್ರಿಗಳು.

ಮೈಸೂರು ವೀಣೆ ವೆಂಕಟಸುಬ್ಬಯ್ಯನವರ ಬೀದಿಯಲ್ಲಿರುವ ಸಾತುನೂರು ವೆಂಕಟರಮಣೈಯ್ಯ (ಭೋಗ್ಯದಾರ ಅಕ್ಕಿಹೆಬ್ಬಾಳು ಹೋಬಳಿ ದಡದಹಳ್ಳಿಲಿರುವ ನರಸುಹ್ಮಶೆಟ್ಟಿ).

ಬೆಂಗಳೂರು ಕಿಲ್ಲೆಯಲ್ಲಿರುವ ಕೋಟೆ ಸಾವಿತ್ರಮ್ಮನವರ ಮೊಮ್ಮಗ ನರಶಿಂಗರಾಯರು.

ಹೊಳೆ ನರಶಿಪುರದಲ್ಲಿರುವ ಕುಂಭಕೋಣೆ ರಾಘವೇಂದ್ರಾಚಾರ್ರು.

ಡಿಟೋ ಶೇಷಾಚಾರ್ರು.

ಅಕ್ಕಿಹೆಬ್ಬಾಳಿನಲ್ಲಿರುವ ಅಣ್ಣೈಯ್ಯನವರ ಕೃಷ್ಣಪ್ಪನವರು.

ಡಿಟೋ, ಗ್ರಾಮದಲ್ಲಿರುವ ವೆಂಕಟಸುಬ್ಬಯ್ಯ, ರಾಮಣ್ಣ (ಭೋಗ್ಯದಾರ ದಡದಹಳ್ಳಿಲಿರುವ ನರಸುಹ್ಮಶೆಟ್ಟಿ)

ಕುಪ್ಪಹಳ್ಳೀಲಿರುವ ಬೆಂಗಳೂರು ಸುಬ್ರಾವು.

ಡಿಟೋ ಉಡಪಿ ಸುಬ್ರಾವು (ಭೋಗ್ಯದಾರ ದಡದಹಳ್ಳಿ ನರಸುಹ್ಮಶೆಟ್ಟಿ)

ಸ|| ಮಡವನಕೋಡಿ ಗ್ರಾಮ.

ಮಡವನಕೋಡಿ ಗ್ರಾಮದಲ್ಲಿರುವ ನರಸುಹ್ಮಯ್ಯನವರು.

ನಾಗಮಂಗಲದಲ್ಲಿರುವ ಶ್ಯಾಮೈಯ್ಯಂಗಾರ್ರ ಮಗ ತಿರುಮಲಾಚಾರ್ರು.

ಯಡತೊರೆ ತಾಲ್ಲೂಕು ಸಾಲಿಗ್ರಾಮದಲ್ಲಿರುವ ಅಮಲ್ದಾರ್ ಸುಬ್ರಾಯರ ಮಕ್ಕಳು ಗೋಪಾಲರಾಯರು.

ಅರ್ಕಲಗೂಡು ಕಸಬಾದಲ್ಲಿರುವ ಶ್ರೀಕಂಠೇಶ್ವರ ದೇವರ ವೃತ್ತಿ ಏಜಂಟು ಡಾಕಟ್ಟರ ಮಕ್ಕಳು ವೆಂಕಟಪ್ಪಶೆಟ್ಟರು.

ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವ ಪ್ಲೀಡರು ಮೆ|| ಶೀತಾರಾಮೈಯ್ಯನವರು.

ಬೆಂಗಳೂರು ಚಿಕ್ಕಪ್ಯಾಟೆಯಲ್ಲಿರುವ ಅಡ್ವೋಕೇಟು ಮೆ|| ನರಸುಹ್ಮಯ್ಯಂಗಾರು.

ಬೆಂಗಳೂರು ಜಿಯೊಲಾಜಿಕಲ್ ಇಲ್ಲಾಖಾ ಎ|| ಮ|| H. ಕೃಷ್ಣಯ್ಯನವರು.
ಅಕ್ಕಿ ಹೆಬ್ಬಾಳು ಗ್ರಾಮದಲ್ಲಿರುವ ಏಜಂಟು ವೆಂಕಟರಾಮೈಯ್ಯನವರು.
ಮೈಸೂರು ಕತ್ತವಾಡಿಪುರದ ಅಗ್ರಹಾರದಲ್ಲಿರುವ ಪಿಳ್ಳೈಚಾರು.
ಮೈಸೂರು ಕಿಲ್ಲೆ ಮೋತಿಖಾನೆ ಬೀದಿಲಿರುವ ಅಕೌಂಟೆಂಟ್ ಆಫೀಸಿನ ಶಿರಸ್ತೆದಾರು ಗೋವಿಂದೈಯ್ಯನವರು.
ಮೈಸೂರು ಹಳೆ ಅಗ್ರಹಾರದಲ್ಲಿರುವ ಚಿದಂಬರಶಾಸ್ತ್ರಿಗಳು.
ಮೈಸೂರು ಹಳೆ ಅಗ್ರಹಾರದ ಛತ್ರದ ಬೀದಿಯಲ್ಲಿರುವ ನಂಜುಂಡ ಜೋಯಿಸರು.
ಮೈಸೂರು ಕಿಲ್ಲೆ ವೀಣೆ ವೆಂಕಟಸುಬ್ಬಯ್ಯನವರ ಬೀದಿಯಲ್ಲಿರುವ ತಿಪ್ಪೈಯ್ಯನವರು.

ಬೆಂಗಳೂರು ಡಿವೀಜನ್ ಸೆಂಟ್ರಲ್ ರಿಕಾರ್ಡು ಆಫೀಸು.

ರಿಕಾರ್ಡುಗಳನ್ನು ನಾಶಪಡಿಸುವಿಕೆ.

1907ನೆ ಇಸವಿ ಮಾರ್ಚಿ 11.

ಮೈಸೂರು ಚೀಫ್ ಕೋರ್ಟು 1905ನೆ ಇಸವಿ ಸೆಪ್ಟಂಬರ್ 26ನೆ ಮುರ್ಕಂ 122ನೆ ನಂಬರು ರೂಲ್ಸು ಆಫ್ ಪ್ರಾಕ್ಟಿಸ್ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—

ಈ ಡಿವೀಜನಿಗೆ ಸೇರಿದ ಸಿವಿಲ್ ಕೋರ್ಟುಗಳಲ್ಲಿ 1905ನೆ ಇಸವಿ ನವಂಬರು 1ನೆ ತಾರೀಖು ಲಾಗಾಯಿತು 1906ನೆ ಜೂನ್ 30ನೆ ತಾರೀಖು ವರಿಗೆ ದಾಖಲಾಗಿ ಫೈಸಲಾದ ಈ ಕೆಳಗೆ ವಿವರಿಸಿರುವ ಸಿವಿಲ್ ಮೊಕದ್ದಮೆಗಳಲ್ಲಿ ಕಕ್ಷಿಗಾರರು ಮತ್ತು ಸಾಕ್ಷಿಗಳಿಂದ ಹಾಜರ್ಮಾಡಲ್ಪಟ್ಟ ವಿಶಿಷ್ಟ ಕಾಗದ ಪತ್ರಗಳು ವಾಪಸು ತೆಗದುಕೊಳ್ಳದೆ ಇದ್ದಪಕ್ಷದಲ್ಲಿ ಮೇಲ್ಕಂಡ ರೂಲ್ಸ್ ಆಫ್ ಪ್ರಾಕ್ಟಿಸ್‌ನಲ್ಲಿ ಉದಹರಿಸಿರುವಂತೆ ನಾಶಪಡಿಸಲ್ಪಡುತ್ತೆ ತಿಳಿಯುವದು.

ಕೋರ್ಟುಗಳ ಹೆಸರು.	ಇಸವಿ.	ಮೊಕದ್ದಮೆಗಳ ಸ್ವಭಾವ.			ಷರಾಯಿಗಳು.
		ಸಿವಿಲ್ ಮೊಕದ್ದಮೆಗಳು.	ಅಮಲ್ಜಾರಿ.	ಮಿಸಲೇನಿಯಸ್.	
ಬೆಂಗಳೂರು ಡಿಸ್ಟ್ರಿಕ್ಟು ಕೋರ್ಟು.	1905—06	4ನೆ ನಂಬರ್ ಲಾಗಾಯಿತು 10ರ ವರಿಗೆ.	9ನೆ ನಂಬರ್ ಲಾಗಾಯಿತು 22ರ ವರಿಗೆ.	46ನೆ ನಂಬರ್ ಲಾಗಾಯಿತು 96ರ ವರಿಗೆ.	...
ಬೆಂಗಳೂರು ಸಬ್ ಜಡ್ಜಿ ಕೋರ್ಟು.	ಡಿಟೋ	302ನೆ ನಂ. ಲಾಗಾಯಿತು 825ರ ವರಿಗೆ.	428ನೆ ನಂ. ಲಾಗಾಯಿತು 1175ರ ವರಿಗೆ.	322ನೆ ನಂ. ಲಾಗಾಯಿತು 771ರ ವರಿಗೆ.	...
ಬೆಂಗಳೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟು.	ಡಿಟೋ	386ನೆ ನಂ. ಲಾಗಾಯಿತು 1184ರ ವರಿಗೆ.	638ನೆ ನಂ. ಲಾಗಾಯಿತು 2001ರ ವರಿಗೆ.	310ನೆ ನಂ. ಲಾಗಾಯಿತು 856ರ ವರಿಗೆ.	...
ಬೆಂಗಳೂರು ಅಡೀಷನಲ್ ಮುನ್ಸೀಫ್ ಕೋರ್ಟು.	ಡಿಟೋ	381ನೆ ನಂ. ಲಾಗಾಯಿತು 968ರ ವರಿಗೆ.	445ನೆ ನಂ. ಲಾಗಾಯಿತು 1297ರ ವರಿಗೆ.	201ನೆ ನಂ. ಲಾಗಾಯಿತು 637ರ ವರಿಗೆ.	...
ದೊಡ್ಡಬಳ್ಳಾಪುರದ ಮುನ್ಸೀಫ್ ಕೋರ್ಟು.	ಡಿಟೋ	335ನೆ ನಂ. ಲಾಗಾಯಿತು 827ರ ವರಿಗೆ.	447ನೆ ನಂ. ಲಾಗಾಯಿತು 1205ರ ವರಿಗೆ.	203ನೆ ನಂ. ಲಾಗಾಯಿತು 494ರ ವರಿಗೆ.	...
ಕೋಲಾರದ ಮುನ್ಸೀಫ್ ಕೋರ್ಟು.	ಡಿಟೋ	268ನೆ ನಂ. ಲಾಗಾಯಿತು 762ರ ವರಿಗೆ.	302ನೆ ನಂ. ಲಾಗಾಯಿತು 916ರ ವರಿಗೆ.	193ನೆ ನಂ. ಲಾಗಾಯಿತು 523ರ ವರಿಗೆ.	...
ಕೋಲಾರದ ಗಣಿ ಮುನ್ಸೀಫ್ ಕೋರ್ಟು.	ಡಿಟೋ	338ನೆ ನಂ. ಲಾಗಾಯಿತು 1141ರ ವರಿಗೆ.	396ನೆ ನಂ. ಲಾಗಾಯಿತು 1116ರ ವರಿಗೆ.	128ನೆ ನಂ. ಲಾಗಾಯಿತು 385ರ ವರಿಗೆ.	...
ತುಮಕೂರು ಮುನ್ಸೀಫ್ ಕೋರ್ಟು.	ಡಿಟೋ	648ನೆ ನಂ. ಲಾಗಾಯಿತು 1528ರ ವರಿಗೆ.	706ನೆ ನಂ. ಲಾಗಾಯಿತು 1711ರ ವರಿಗೆ.	260ನೆ ನಂ. ಲಾಗಾಯಿತು 742ರ ವರಿಗೆ.	...
ಮದ್ದಗಿರಿ ಮುನ್ಸೀಫ್ ಕೋರ್ಟು.	ಡಿಟೋ	254ನೆ ನಂ. ಲಾಗಾಯಿತು 641ರ ವರಿಗೆ.	229ನೆ ನಂ. ಲಾಗಾಯಿತು 618ರ ವರಿಗೆ.	104ನೆ ನಂ. ಲಾಗಾಯಿತು 303ರ ವರಿಗೆ.	...
ಚಿಕ್ಕಬಳ್ಳಾಪುರ ಮುನ್ಸೀಫ್ ಕೋರ್ಟು.	ಡಿಟೋ	227ನೆ ನಂ. ಲಾಗಾಯಿತು 620ರ ವರಿಗೆ.	487ನೆ ನಂ. ಲಾಗಾಯಿತು 1222ರ ವರಿಗೆ.	189ನೆ ನಂ. ಲಾಗಾಯಿತು 521ರ ವರಿಗೆ.	...

ಟಿ. ಪರಮಶಿವ ಐಯ್ಯರ್,
ಆಫಿಸರ್ ಇನ್‌ಛಾರ್ಜ್ ಆಫ್ ಸೆಂಟ್ರಲ್ ರಿಕಾರ್ಡ್ಸ್, ಬೆಂಗಳೂರು ಡಿವೀಜನ್.

ಹಾಸನ ಡಿವೀಜನ್.

ನೋಟಿಸ್.

ಈ ಕೆಳಗೆ ನಮೂದಿಸಿರುವ ಹೆಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿಯವರಿಗೆ ಪಾವತಿಯಾಗದೆ, ಈ ಆಫೀಸಿನ ಅಕೌಂಟ್ಸ್ ಡಿಪಾಜಿಟಿನಲ್ಲಿ ಬಾಕಿ ನಿಂತಿರುತ್ತೆ. ಈ ನೋಟಿಸ ಪ್ರಕಟವಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ

ಆಯಾಯ ಹಕ್ಕುದಾರರೇ ಆಗಲಿ ಅಥವಾ ಅವರು ಮೃತಪಟ್ಟಿದ್ದ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ :—

ನಂ.	ಹೆಸರು.	ಸಲ್ಲಬೇಕಾದ ಮೊಬಲಗ್ಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.		
			ರೂ.	ಅ.	ಪೈ.
1	ವೆಂಕಟಸ್ವಾಮಿನಾಯಕ ...	1904-05ನೆ ಬಾಣಾವಾರ್, ಬೇಲೂರು, ಮೂಡಿಗೆರೆ ರಸ್ತೆ ರಿಪೇರಿ.	8	11	7
2	ಮುನಿಸ್ವಾಮಿ ...	ಡಿಟ್ಟೋ ...	1	4	9
3	ಅಲಸಿಂಗ್ರಾಚಾರ್ ಮತ್ತು ನರಸಿಂಹಾಚಾರ್.	ಬುಡನೂರು ಕೆರೆ ರಿಪೇರಿ ಮಾಡಿದ್ದು ...	3	0	0
4	ಡಿ. ವೆಂಕಟನಾಯಕ	904—05ನೆ ಹಾಸನ, ಚಿಕ್ಕಮಗಳೂರು ರಸ್ತೆ ರಿಪೇರಿ	24	11	0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ.

ಇಸ್ತಿಹಾರ್.

ತಾರೀಖು 5ನೆ ಏಪ್ರೆಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮೈ ಕ್ರಂ 17691— L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಎಕ್ಸ್ಟೆನ್ಷನ್‌ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು 1907ನೆ ಇಸವಿ ಏಪ್ರೆಲ್ ತಾ|| 20ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹರಾಜಿನಲ್ಲಿ ಛಡ್ ಸವಾಲ್ ಮೂಲಕ ಪಡಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ $7\frac{1}{2}$ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ್ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡ್‌ಸವಾಲ್‌ನಲ್ಲಿ ಪಡಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಬಸವನಗುಡಿ ಎಕ್ಸ್ಟೆನ್ಷನ್.		ಅಳತೆ.	ಹರಾಜು ತಾರೀಖು.
1ನೆ ಬ್ಲಾಕ್ ...	232—233—234—235—236 237—238—239—240 241 & 242	110 × 30	20-4-07
3ನೆ (ಬಿ) ಬ್ಲಾಕ್ ...	130—131—132—133—134 135—136—137—138 139—140—141—142 144—145—146—147 148 & 149	120 × 30	20-4-07
	143	120 × 34	20-4-07

1. ಹರಾಜು ಖೈದಾದ ಕೂಡಲೆ ಛಡ್ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡ್‌ಸವಾಲ್ ಮೊಬಲಗ್ಗೆ ಇರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡ್‌ಸವಾಲ್‌ದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡ್‌ಸವಾಲ್‌ದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡಲೆ ಸೈಟನ್ನ ಛಡ್‌ಸವಾಲ್‌ದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಷುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಉದ್ದಕ್ಕೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಜೀನಾ ಪಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರತು ಇತರ ಮತ, ಪಣ ಯಾ ಜಾತಿಯವರು ವಾಸಾ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನು ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡದದ್ದಕ್ಕೋಸ್ಕರ ನಿವೇಶನವನ್ನು ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕೆ ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗುವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಂ. ಜಿ. ಕೃಷ್ಣಸಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತಿಹಾರ ತಾರೀಖು 29ನೇ ಮಾರ್ಚಿ 1907.

ಸ್ 1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1908ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತುಗಳಿಗೆ ವಳಪಡಿಸಿ ಪ್ರತಿ ಒಂದು ಟೋಲ್ ಗೇಟಿನಲ್ಲಿಯಾಗಲೀ ಅಥವಾ ವರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ಸಿಹಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಟನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆನೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡಲೆ ಡಿಪಾಜಿಟ ಬಗ್ಯೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ ದರಖಾಸ್ತುದಾರನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹವಾರಿ ಗಾಡಿ ಯಾ ಜಾನವಾರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪ್ಸೀಲು ತೋರಿಸುವ ಲೆಕ್ಕವನ್ನು ಪ್ರಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡುವದಕ್ಕೆ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲು ಲೆಕ್ಕವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಯೆ ಆಯಾಯ ಕಂಟ್ರಾಕ್ಟದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ವಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕ್ಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು:—

1. ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವಾರುಗಳು ಮತ್ತು ಗವರನ್ಮೆಂಟು ಯಾ ಮ್ಯುನಿಸಿಪಲ್ ಕೌನ್ಸಿಲಿಗೆ ಸೇರಿದ ಅಥವಾ ಸಾಮಾನು ವಗ್ಯೆರೆ ಸಾಗಿಸುವದಕ್ಕಾಗಿ ಮೊಕರರೂರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯು ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

2. ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗ್ಯೆರೆ ಸಾಗಿಸತಕ್ಕ ಬಗ್ಯೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ, ಮಿಲಿಟೆರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫಿಸರರು, ನೌಕರ ಮಾನೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು ಸಾಮಾನುಗಳು ಇರುವ ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತೂ ಅರಮನೆ ಇಲಾಖೆಗೆ ಸೇರಿದ ಗಾಡಿಗಳು ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹ :—

ಎ. ಷೆಡ್ಯೂಲ್.

ನಂಬರ್.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ರೈಲ್ವೆ ಸ್ಟೇಷನ್ ರಸ್ತೆ ...	ಬಳೆಗೊಳದ ರಸ್ತೆ ಮತ್ತು ಸಿರ್ಕ್ಯೂಲರ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳೆಗೊಳದ ರಸ್ತೆ ...	ಕೆಂಪನಕಟ್ಟೆ ಉಕ್ಕಡ.
3	ಶ್ರೀರಂಗಪಟ್ಟಣದ ರಸ್ತೆ ...	ಎರಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ...	ವೀರನಗೆರೆ ಡಿಟೋ
5.	ಸಿಮಿಟೆರಿ ರಸ್ತೆ ...	ಬಂಗ್ಲಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ..	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ...	ಇಟ್ಟಿಗೆ ಗೂಡು ಡಿಟೋ
8	ರೇಸ್‌ಕೋರ್ಸು ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ...	ನಂಜನಗೂಡು ಡಿಟೋ
10	ಡಿಟೋ ...	ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ
11	ಮಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ.
12	ವೈಸರಾಯಿ ರಸ್ತೆ ...	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ	ಡಿಟೋ
14	ಜೂಬಿಲಿ ರಸ್ತೆ ...	ಕುಕ್ಕರಹಳ್ಳಿ ಉಕ್ಕಡ.
15	ಇಲವಾಲದ ರಸ್ತೆ ...	ಶ್ರೀರಾಂಪೇಟೆ ಡಿಟೋ

ಬಿ. ಷೆಡ್ಯೂಲ್.

ನಂಬರ್.	ತಪ್ಸೀಲು.	ಧರ. ರೂ.	ಆ.	ಪೈ.
1	ಸ್ಪ್ರಿಂಗ್ ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ..	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಛರ್ತಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ ..	0	1	0
5	ಡಿಟೋ ಹೇರು ಹೇರಿಕ್ಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕ್ಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ ಮೀರಿದ್ದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ ...	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಜಿ. ಹನುಮಂತರಾವ್, ಛಾರ್ ಪ್ರೆಸಿಡೆಂಟ್.

ತಾರೀಖು 1ನೆ ಮಾರ್ಚಿ 1907.

ಎಲ್ಲಾ ಡೆಪ್ಯುಟಿ ಕಮಿಷನರಿಗೂ, ಅಮಲ್ದಾರರಿಗೂ, ಪಟೇಲರಿಗೂ ಸರ್ಕ್ಯುಲರ್.

ಕೂನೂರಿನಲ್ಲಿರುವ ಪ್ಯಾಸ್ಚರ್ ಇನ್ಸ್ಟಿಟ್ಯೂಟಿನ ಡೈರೆಕ್ಟರಿಗೆ ಪ್ರತಿ ತಿಂಗಳಲ್ಲಿಯೂ 150 ರ ವರೆಗೆ (rabbits) ಕುಂದಿಲಿಗಳು (ಕಾಡು ಮೊಲಗಳಲ್ಲ) ಜರೂರಾಗಿ ಬೇಕಾಗಿವೆ.

ಎಲ್ಲಾ ಸಿವಿಲ್ ಆಫಿಸರುಗಳು ಹೀಗೆ ಬೇಕಾಗಿರುವುದನ್ನು ಮೈಸೂರು ಸೀಮೆಯ ಗ್ರಾಮಗಳಲ್ಲಿ ಪ್ರಕಟಿಸಬೇಕೆಂದೂ ಬೆಂಗಳೂರು ಲಾಲ್‌ಬಾಗ್ ಸೂಪರ್‌ಇಂಟೆಂಡೆಂಟರು ಸದರಿ ಕುಂದಿಲಿಗಳನ್ನು ತೆಗೆದುಕೊಂಡು ಕೂನೂರಿಗೆ ರವಾನೆ ಮಾಡಲು ತಕ್ಕ ಏರ್ಪಾಡು ಮಾಡುತ್ತಾರೆಂದೂ ಲಾಲ್‌ಬಾಗಿನಲ್ಲಿ ಕುಂದಿಲಿಗಳನ್ನು ತಂದುಕೊಟ್ಟ ಕೂಡಲೆ ವ್ಯಾಪಾರಿಗಳಿಗೆ ಹಣ ಪಾವತಿಯಾಗುವುದೆಂದೂ ತಿಳಿಸಬೇಕೆಂದು ಕೋರಿ ಇದೆ.

ಜೆ. ಡಬ್ಲಿಯು., ಕಾರ್ನ್‌ವಾಲ್, ಕ್ಯಾಪ್ಟನ್, ಐ. ಎಂ. ಎಸ್.,
ದಕ್ಷಿಣ ಇಂಡಿಯಾ ಪ್ಯಾಸ್ಚರ್ ಇನ್ಸ್ಟಿಟ್ಯೂಟಿನ ಡೈರೆಕ್ಟರ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 18, ಸ್ 1907.

II.ನೆ ಭಾಗ

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ಪ್ರಕಟನೆ.

ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಾಕನಹೊಸೂರ್ ಜಂಗಲಿಯನ್ನು ಮನ್ನಾ ಜಂಗಲಿ ಮಾಡುವ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 20ನೆ ತಾರೀಖಿನ ಇಸ್ತಿಹಾರ್ 1907ನೆ ಇಸವಿ ಏಪ್ರಿಲ್ 4ನೆ ತಾರೀಖಿನ ಮೈಸೂರ ಗೆಜೆಟಿನ 2ನೆ ಭಾಗದ 93, 94, 95ನೆ ಪೇಜಿನಲ್ಲಿ ತಪ್ಪೇಲಾಗಿ ವಿವರಿಸಲ್ಪಟ್ಟಿರುತ್ತೆ.

ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕಿನಲ್ಲಿರುವ ದಕ್ಷಿಣ ಭದ್ರಾ ಜಂಗಲಿಯನ್ನು ಮನ್ನಾ ಜಂಗಲಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಮಾರ್ಚಿ 28ನೆ ತಾರೀಖಿನ ಇಸ್ತಿಹಾರ್ 1907ನೆ ಇಸವಿ ಏಪ್ರಿಲ್ 4ನೆ ತಾರೀಖಿನ ಮೈಸೂರ ಗೆಜೆಟನ ಕನ್ನಡ 2ನೆ ಭಾಗದ 96, 97, 98ನೆ ಪೇಜಿನಲ್ಲಿ ತಪ್ಪೇಲಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ರಾಮರಾವ್,

ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್.

ಇಸ್ತಿಹಾರ್ನಾಮಾ, ತಾರೀಖು 11ನೆ ಏಪ್ರೆಲ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟುಗಳ ವಿವರ.	ಸಲೆ ಅಡಿ.		ಷರಾ.
				ನಂಬರ.	ಅಡಿ.	
1	ಮೈಸೂರು ಉಡಿಯಾರ್ಡು	13—5—07	ಸಾಗ್ವಾನಿ ನಾಟು ..	550	16,000	[illegible]
			ಡಿಟೋ ತುಂಡು ...	600	6,000	
			ಹೊನ್ನೆನಾಟು ...	70	2,000	
			ಡಿಟೋ ತುಂಡುಗಳು ...	45	500	
			ಮತ್ತಿನಾಟು ...	90	2,000	
			ಡಿಟೋ ತುಂಡುಗಳು ...	[illegible]0	500	
2	ನಂಜನಗೂಡು ಡಿಪೋ.	14—5—07	ಸಾಗ್ವಾನಿನಾಟು ...	80	2,000	
			ಡಿಟೋ ತುಂಡುಗಳು ...	50	500	
			ಹೊನ್ನೆ ನಾಟು ...	60	2,000	
			ಡಿಟೋ ತುಂಡುಗಳು ...	60	500	
			ಮತ್ತಿ ನಾಟು ...	10	300	
			ಡಿಟೋ ತುಂಡುಗಳು ...	25	[illegible]00	

ಹರಾಜು ಷರತ್ತು :—1895ನೆ ಇಸವಿ ಏಪ್ರೆಲ್ ತಾರೀಖು 25ನೆ ಮರ್ಸ್ತಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಆಗಿರುವ 1895ನೆ ಇಸವಿ ಮಾರ್ಚಿ 15ನೆ ಮರ್ಸ್ತಂ ನಂಬರ 15229—R. F. 155—92ನೆ ನೋಟಿಫಿಕೇಷನ ನೋಡಬೇಕು.

ಎಂ. ಜಿ. ರಾಮರಾವ್,

ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೆ ಏಪ್ರೆಲ್ 1907.

1. ಕಂದಾಯದ ಬಾಕೀದಾರರಾದ ಜೋಡಿ ಹುಲ್ಲುಕೆರೆ ಗ್ರಾಮದ ಸೂರಪ್ಪನವರು, ಇಂದಘಟ್ಟದ ರಾಮಣ್ಣನವರಿಂದ ಬರಬೇಕಾದ ಜವಿರ್ಣ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಹುಲ್ಲುಕೆರೆ ಗ್ರಾಮದಲ್ಲಿ 28—5—07ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಡಿವಿಜನ್ ಆಫಿಸರವರು ಮಾಡುತ್ತಾರೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟದೆ.

ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರಿ ಸ್ವತ್ತಿಗಾಗಿ ಹರಾಜುದಾರನು 1906ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತ್ಪ್ಸಿಲ್ ಮೇರೆಗೆ 142—6—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದಾಗಿ ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕಾಗಿತಲ್ಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನು ಹಾಜರ್ಮಾಡಬೇಕೆಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಾಗಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು [illegible]ಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.	
ನಾಗಮಂಗಲ.	ಹೊಣಕೆರೆ.	ಜೋಡಿ ಹುಲ್ಲುಕೆರೆ.	ಹುಲ್ಲುಕೆರೆ ಸೂರಪ್ಪ, ಶಿಂಬಘಟ್ಟದ ರಾಮಣ್ಣ.				ಪರಂಪೋಕು	212	26	3	4	0	140	14	3	ಬಾಕಿ.
							ಖುಷ್ಕಿ ...	304	3	337	4	0	0	8	0	ನೋಟಿಸ ಫೀ
							ಬಾಗಾಯತು.	1	19	4	0	0	1	0	0	ಜಪ್ತಿ ಹರಾಜ್
				....	...	...	ಇನಾಮತಿ.	1	13	5	12	0				
													142	6	3	
							ಜುಮ್ಲಾ ..	519	21	350	4	0				
						ಹರಾಜು ತಾರೀಖು ವರಗೆ ಲೆಕ್ಕಾಚಾರದ ಮೇರಿಗೆ ಕೊಡಬೇಕಾದ ಬಡ್ಡಿ ಸಹ ಕೊಡಬೇಕು.										

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—1906ನೆ ಇಸವಿ ನಂಬರು 7ನೆ ರೆಗ್ಯುಲೇಷನ್ ಅನುಸರಿಸಿ ಈ ಕೆಳಗೆ ತಪಸೀಲು ಕಾಣುವ ಚಕ್ಕುಬಂದಿ ಒಳಗೊಂಡಿರುವ ಶಿವಮೊಗ್ಗಾ ಟವನನ್ನು ಒಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚಿಸಿ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ್ ಮೈಸೂರು ಗೆಜೆಟನಲ್ಲಿ ಛಾಯಿಷಾದ ಎರಡು ತಿಂಗಳು ಒಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಶ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷನ್ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳು ಬಂಗಲೆಯ ಕಾಂಪೌಂಡು ಒಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಜಿಕ್ಯೂಟಿವ ಇಂಜನಿಯರ್ ಆಫೀಸನ್ನು ಸೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಹತ್ತಿರ ಹೊನ್ನಾಳಿ ರಸ್ತೆಗೆ ಸೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯ ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಳಿ ಇರುವ ಆಕ್ಟ್ರಾಯಿ ಊಕ್ಕಡದವರಿಗೆ.

ದಕ್ಷಿಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಡಾವಣೆ ಜಾಗಾದಲ್ಲಿ ಇರುವ ಆಕ್ಟ್ರಾಯಿ ಕಟ್ಟೆ ಸಮೀಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನ ಒಳಗೊಂಡು ಹಳೆ ಫಾರೆಸ್ಟು ಲಾಡ್ಜ್ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಸೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಆಸಲಾಪುರ ಗ್ರಾಮದ ಸರ್ವೆ ನಂಬರು 18ನೆ ಜಮೀನ್ ಲಾಗಾಯಿತ್ತು ಶಿವಮೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನುದಾಟಿ 26, 25, 24, 21ನೆ ಸರ್ವೆ ನಂಬರು ಜಮೀನುಗಳ ಮಾರ್ಗವಾಗಿ ಹಳೇ ಡಿಸ್ಟಿಲೇರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ವಾಯಿಡ್ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕ್ಲಾಸಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನ್ ಬಳಿ) ಹೊನ್ನಾಳಿ ರಸ್ತೆ ಕೂಡುವ ಸ್ಥಳದಲ್ಲಿ ಇರುವ ಆಕ್ವಾಯಿಡ್ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತ್ತು ಹೋಬಿಗ್ಗೆರೆ ಮುರಿಗೇಂದ್ರಪ್ಪನ ಬಂಗಲೆಯನ್ನು ಒಳಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲೇದಾರ ಲಾಯ ಮತ್ತು ಲೈನ್‌ಗಳು ಮತ್ತು ಮಿಳಗಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮೀನ್‌ಗಳನ್ನು ಒಳಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 3ನೆ ಏಪ್ರೈಲ್ 1907ನೆ ಇಸವಿ, ಚಿಕ್ಕಮಗಳೂರು.

ಸನ್ 1901ನೆ ಇಸವಿ ಡಿಸೆಂಬರು 11ನೆ ಮಾರ್ಕಂ ನಂಬರು 9,007—ಲೆ. ಜಿ. 56ನೆ ಗವರ್ನಮೆಂಟು ನೋಟಿಫಿಕೇಷನ್ 5ನೆ ಪ್ಯಾರಾ ಮೇರಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸನ್ 1907ನೆ ಸಾಲ್ ಏಪ್ರೈಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರು 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ಮೋಖೂಫ್ ಮಾಡಿ ಇದೆ.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.

ಸನ್ 1907ನೆ ಇಸವಿ ಏಪ್ರೈಲ್ ತಾರೀಖು 6.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1907ನೆ ಇಸವಿ ಜುಲೈ ಗುರ್ರ ಲಾಗಾಯಿತು 1908ನೆ ಇಸವಿ ಜೂನ್ ಆಖೈರ ವರಿಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲಿಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ)	18ನೆ ಮೇ 1907 ...	ಎಡೇಹಳ್ಳಿ, ಸಬ್ ತಾಲ್ಲೂಕು ಕಚೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	20ನೆ ಡಿಟ್ಟೋ ...	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	23ನೆ ಡಿಟ್ಟೋ	ಬಾಳೆಹೊನ್ನೂರು ಮುಸಾಫರ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಖಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನಮೆಂಟ್ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಖಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಖಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನೇ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹ ಸದರಿ ಟೋಲ್ ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1907ನೆ ಆಗಸ್ಟು ತಾರೀಖು 10ರ ಲಾಗಾಯಿತು ಸಮನಾದ ಎಂಟು ಖಿಸ್ತುಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 9—10—11—12ನೆ ಖಿಸ್ತುಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ ಖಿಸ್ತು ಹಣಗಳನ್ನು ತಪ್ಪದೆ ಕೊಡುತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ

ತಿಳಿದ ತಾರೀಖು ಲಾಗಾಯಿತು ಹದಿನೈದು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೇ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಸದರಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದ್ದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನ್‌ದಾರರ ಜೊತೆಗೆ ಹರಾಜ್ ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಸೇಕಡ ಆರು ರೂಪಾಯಿ ಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನ್‌ದಾರರಿಂದ ಬಾಕಿ ಮೊಬಲಗು ಬಾರದೇ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯೂಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನಲ್ಲಿದೆಯೋ ಆಯಾ ತಾಲ್ಲೂಕು ಅಮಲ್ದಾರರು ಅಥವಾ ಸಬ್ ತಾಲ್ಲೂಕು ಅಮಲ್ದಾರರು ಡೆಪ್ಯೂಟಿ ಅಮಲ್ದಾರರು ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತರ್ಫೆ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು ಮಿಲಿಟರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೊಲೀಸು ಯಾ ಇತರ ಉದ್ಯೋಗಸ್ಥರ ಸರ್ಕಾರದ ಸಾಮಾನುಗಳು ಅಂದರೆ, ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಿಫಿಕೇಟಿನಿಂದ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್ ಗೇಟು ಬಳಿ ಚನ್ನಾಗಿ ಕಾಣುವ ಜಾಗದಲ್ಲಿ ತಗಲುಹಾಕಬೇಕು.

11. ಗವರ್ನ್ಮೆಂಟಿನಿಂದ ನೇಮಿಸಲ್ಪಟ್ಟ ಟೋಲ್ ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲ್ಮಾಡಕೂಡದು.

12. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು-ತಡಸ, ಹರಿಹರಪುರದ ಸೇತುವೆಗಳ ಮೇಲೆ ಇರುವ ಟೋಲ್ ಗೇಟುಗಳ ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ :—

ಕ್ರಮಸಂಖ್ಯೆ	ತಪಶೀಲು.	ಭರ್ತಿ ಆಗಿದ್ದರೆ.			ಖಾಲಿ ಇದ್ದರೆ.		
		ರೂ.	ಆ.	ಪೈ.	ರೂ.	ಆ.	ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ ...	0	8	0	0	8	0
2	ಎರಡು ಚಕ್ರದ ಪೆಟ್ಟಿಗೆ ಗಾಡಿ ಅಥವಾ ಬಂಡಿ 1ಕ್ಕೆ ...	0	4	0	0	4	0
3	ಎಮ್ಮೆಗಳು, ಎತ್ತುಗಳು ದಾರು 1ಕ್ಕೆ ...	0	0	6	0	0	3
4	ಆನೆ 1ಕ್ಕೆ ...	1	0	0	1	0	0
5	ಒಂಟೆ 1ಕ್ಕೆ ...	0	8	0	0	8	0
6	ಪ್ರತಿ ಕುದುರೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	0			
7	ಡಿಟ್ಟೋ ಹೊರೆ ಇಲ್ಲದು ಅಥವಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	..			0	1	0
8	ಪ್ರತಿ ಕತ್ತೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6	..		

ನೋಟು.—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ವಸೂಲು ಮಾಡತಕ್ಕದ್ದಿಲ್ಲ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡೆಪ್ಯೂಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟಿನಲ್ಲಿ.

ಸರ್ 1906—07ನೆ ಇಸವಿ ಮಿಸ್ ನಂಬರ್ 79.

ಅರ್ಜಿದಾರ ಬೆಂಗಳೂರು 2ನೆ ಲಾಲ್‌ಬಾಗು ರೋಡಿನಲ್ಲಿ ಲೇಟ್ ಅಮಲ್ದಾರು ಮೆ|| ವಿ. ಕಂಠೀರವಾಚಾರ್ರ ಮಕ್ಕಳು ವಿ. ದ್ವಾರಕಾನಾಥ ಯವರು, ಮೈನರಾದ ಬೆಂಗಳೂರು ಸ್ಥಳದ ಲೇಟ್ ಅಮಲ್ದಾರು ಕಂಠೀರವಾಚಾರ್ರ ಮಕ್ಕಳು 1ನೆ ಕವಿತರ್ಕ ಸಿಹ್ಮಂ, 2ನೆ ದತ್ತಾತ್ರೇಯ ಸಿಹ್ಮಂ ಯವರ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ 1ನೆ ಕವಿತರ್ಕ ಸಿಹ್ಮಂ, 2ನೆ ದತ್ತಾತ್ರೇಯ ಸಿಹ್ಮಂ ಯವರಿಗೆ ಮೆ|| ಕಂಠೀರವಾಚಾರ್ ಉಯಿಲ್ ಪ್ರಕಾರ ಗಾರ್ಡಿಯನ್ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಲಾಲ್‌ಬಾಗ್ ರೋಡ್ ಲೇಟ್ ಅಮಲ್ದಾರ್ ಮೆ|| ಕಂಠೀರವಾಚಾರ್ರ ಮಕ್ಕಳು ವಿ. ದ್ವಾರಕಾನಾಥ ಎಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1907ನೆ ಇಸವಿ ಮೇ ತಾರೀಖು 31ನೆ ದಿವಿ 11 ಘಂಟೆಗೆ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಈ ತಾರೀಖು 5ನೆ ಮಾಹೆ ಏಪ್ರೆಲ್ 1907ನೆ ಇಸವಿ ಕೋರ್ಟಿನ ಮೊಹರು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಡಿಸ್ಟ್ರಿಕ್ಟು ಜಡ್ಜಿ.

ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಫ್ರೆಂಚ್‌ರಾಕ್ಸ್ ಸಬ ತಾಲ್ಲೂಕು ಕೆನ್ನಾಳು ಗ್ರಾಮದಲ್ಲಿ ಇರುವ ಸೋಮೇಗೌಡನ ಹೆಂಡತಿ ಲಕ್ಷ್ಮಮ್ಮಯ ಅರ್ಜಿ ವಿಷಯದಲ್ಲಿ—

ಸರ್ 1906—07ನೆ ಇಸವಿ ದಿವಾಳಿ ಕೇಸ್ ನಂ. 189.

ಹುಕುಂ.

ಮೇಲ್ಕಂಡ ಅರ್ಜಿದಾರಳು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೊಬುರೂಬ್ ಅರ್ಜಿದಾರಳಾದ ಲಕ್ಷ್ಮಮ್ಮಯ ಪರವಾಗಿ ಪ್ಲೀಡರ್ ಮೆ|| ಮೈಲಾರಯ್ಯನವರನ್ನು ಮತ್ತು ಸದರಿಯವರ ಲೇಣೇದಾರರಾದ ಮೈಸೂರ ಗಾರ್ನಮೆಂಟ್ ತರಫ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರ್ ಸಾಹೇಬರವರು ಗೈರ್ ಹಾಜರು ಸಬಬು ದರ್ಯಾಪ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ ಮೂಲಕವಾಗಿಯಾಗಲಿ, ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರಿ ಅರ್ಜಿದಾರಳು ಲಕ್ಷ್ಮಮ್ಮಯು ಹೊಂದುವದಕ್ಕೆ ಹಕ್ಕುದಾರಳಾಗುವವರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರಿ ದಿವಾಳಿಯಾದವಳನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹಾ ಅವಳನ್ನು ನಿಖಾಲಸ ಮಾಡಲಾಗಿರುತ್ತೆ ಎಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸರ್ 1907ನೆ ಇಸವಿ ಏಪ್ರೆಲ್ 13ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್ ನಿಕಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇಣೇದಾರ ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಡಿಕ್ರಿ ಆಗಿರುವ ತಾರೀಖು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ಮೈಸೂರು ಗಾರ್ನಮೆಂಟ್ ತರಫ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರ್ ಸಾಹೇಬರವರು.	ರೂ. 88	...	ಈ ಕೋರ್ಟು ಸಿವಿಲ್ 1898—905-6ನೆ ನಂಬರು ಡಿಕ್ರಿ ಬಾಬತು.	

ಜಿ. ಸತ್ಯಾಜಿರಾವ್,
ಮುನ್ಸೀಫ್.

ಕೋಲಾರ ಡಿವೀರ್ಜ.

ಇಸ್ತಿಹಾರ್ನಾಮೆ.

ಕೋಲಾರ, 8ನೆ ಏಪ್ರಲ್ 1907.

ತಾರೀಖು 11ನೆ ಏಪ್ರಲ್ 1907 ಇಸವಿ 2ನೆ ಭಾಗದ ಇಂಗ್ಲೀಷ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರತಕ್ಕ ಕೋಲಾರ ಡಿಸ್ಟ್ರಿಕ್ಟು ಮಾಲೂರು ಕಸಬಾದಲ್ಲಿ ಹೊಸದಾಗಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಟ್ಟತಕ್ಕ ಬಗ್ಗೆ ಟೆಂಡರ ವಿಷಯಕವಾದ ಇಸ್ತಿಹಾರ್ನಾಮೆಗೆ ಸಮಸ್ತ ಜನಗಳೂ ಗಮನಕೊಡತಕ್ಕದ್ದು.

ಕೆ. ಕೃಷ್ಣಯ್ಯಂಗಾರ್,
ಎಗ್ಸಿಕ್ಯೂಟೀವ್ ಇಂಜನಿಯರ್.

ಹಾಸನ ಡಿವೀರ್ಜ.

ನೋಟಿಸ.

ಈ ಕೆಳಗೆ ನಮೂದಿಸಿರುವ ಹೆಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿ ಯವರಿಗೆ ಪಾವತಿಯಾಗದೆ, ಈ ಆಫೀಸಿನ ಅಕೌಂಟ್ಸ ಡಿಪಾಜಿಟಿನಲ್ಲಿ ಬಾಕಿ ನಿಂತಿರುತ್ತೆ. ಈ ನೋಟಿಸ ಪ್ರಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಆಯಾಯ ಹಕ್ಕುದಾರರೇ ಆಗಲಿ ಅಥವಾ ಅವರು ಮೃತಪಟ್ಟದ್ದೆ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ:—

ನಂ.	ಹೆಸರು.	ಸಲ್ಲಬೇಕಾದ ಮೊಬಲಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.
			ರೂ. ಆ. ಪೈ.
1	ವೆಂಕಟನಾಯಕ ...	1904–05ನೆ ಬಾಣಾವಾರ್, ಬೇಲೂರು, ಮೂಡಿಗೆರೆ ರಸ್ತೆ ರಿಪೇರಿ.	8 11 7
2	ಮುನಿಸ್ವಾಮಿ ...	ಡಿಟ್ಟೋ	1 4 9
3	ಅಲಸಿಂಗ್ರಾಚಾರ್ ಮತ್ತು ನರಸಿಂಹಾಚಾರ್.	ಬುಡನೂರು ಕೆರೆ ರಿಸ್ಟೋರ್ ಮಾಡಿದ್ದು ...	3 0 0
4	ಡಿ. ವೆಂಕಟನಾಯಕ	1904–05ನೆ ಹಾಸನ, ಚಿಕ್ಕಮಗಳೂರು ರಸ್ತೆ ರಿಪೇರಿ	24 11 0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರ್.

ಪೋಲೀಸ ಇಲಾಖಾ.

ನೋಟಿಸ.

ತಾರೀಖು 11ನೆ ಏಪ್ರಲ್ 1907.

ತಾರೀಖು 11—4—1907ರಲ್ಲಿ ಒಂದು ನೂರು ರೂಪಾಯಿನ ಮತ್ತು $\frac{\text{T. A}}{53}$ 00967 (ಮದರಾಸ ಸರ್ಕಲ್) ನಂಬರಿನ ನೋಟು ಒಂದನ್ನು ಚನ್ನಪಟ್ಣ ತಾಲ್ಲೂಕು ಶಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೇಮತಾನ ಆಫೀಸರಾಗಿರುವ ಮ|| ವೆಂಕಟೇಶಸ್ವಾಮಿರಾಯರು ಕಳದುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಕೇಂರುತ್ತೆ ಮತ್ತು ಅವರಲ್ಲಿ ಹ್ಯಾಗೆ ಬಂತೆಂಬ ಸಂಗತಿ ತಿಳಿಸತಕ್ಕವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿದುಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ ಸೂಪರಿಂಟೆಂಡೆಂಟರಲ್ಲಿಗೆ ತಿಳಿಯಪಡಿಸತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತಿಹಾರ್ ತಾರೀಖು 29ನೆ ಮಾರ್ಚಿ 1907.

ಸ್ 1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1908ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ಒಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ವರದಂತೆ ಸಿಟಿ ಮ್ಯುನಿಸಿಪಲ

ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತುಗಳಿಗೆ ವಳಪಡಿಸಿ ಪ್ರತಿ ಒಂದು ಟೋಲ್ ಗೇಟನಲ್ಲಿಯಾಗ ಲೀ ಅಥವಾ ವರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷ ಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡ ಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋ ಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾ ಜು ಖೈದಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟಿ ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಆವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದ ರೂ ಪದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ದರಖಾ ಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಿಗಾವಾರಿ ಗಾಡಿ ಯಾ ಜಾನವಾರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪ್ಸೀಲು ತೋರಿಸುವ ಲೆಕ್ಕವನ್ನು ಪ್ರೆಸಿ ಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರ ವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕು ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಸೀಲು ಲೆಕ್ಕವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟಿನಲ್ಲಿಯೂ ಪೆಟ್ಟಿಬ್ಬಿ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವು ಗಳನ್ನು ಉಪಯೋಗಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ವಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರೆದುಕೊ ಡಬೇಕು.

10. ಈ ಕೆಳಗೆ ನಮೂದಾಗುವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು :—

1. ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಪಡದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವಾರುಗಳು ಮು ತ್ತು ಗವರನ್ಮೆಂಟು ಯಾ ಮ್ಯುನಿಸಿಪಲ್ ಕೌನ್ಸಿಲಿಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸ ದಲ್ಲಿ 24 ಘಂಟೆ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

2. ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸ ತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ, ಮಿಲಿಟರಿ ಅಥವಾ ಗವರ್ನಮೆಂಟ್ ಸ್ಟೋ ರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೊಲೀಸು ಆಫೀಸರರು, ನೌಕರ ಮಂದೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು

ಸಾಮಾನುಗಳು ಇರುವ ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತೂ ಅರಮನೆ ಇಲಾಖೆಗೆ ಸೇರಿದ ಗಾಡಿಗಳು ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹ :—

ಎ. ಷೆಡ್ಯೂಲ್.

ನಂಬರ್.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ರೈಲ್ವೆ ಸ್ಟೇಷನ್ ರಸ್ತೆ ...	ಬಳಗೊಳದ ರಸ್ತೆ ಮತ್ತು ಸಿಕಲ್ಲ್ಯ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗೊಳದ ರಸ್ತೆ ...	ಕೆಂಪನಕಟ್ಟೆ ಉಕ್ಕಡ.
3	ಶ್ರೀರಂಗಪಟ್ಟಣದ ರಸ್ತೆ ...	ಎರೆಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ...	ವೀರನಗೆರೆ ಡಿಟೋ
5	ಸಿಮಿಟೆರಿ ರಸ್ತೆ ...	ಬಂಗಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ...	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ...	ಇಟ್ಟಿಗೆ ಗೂಡು ಡಿಟೋ
8	ರೇಸ್‌ಕೋರ್ಸ್ಸು ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ...	ನಂಜನಗೂಡು ಡಿಟೋ
10	ಡಿಟೋ ..	ಹಾಲಿ ಉಕ್ಕಡದ ಬಳಿ ವಿಧಾಯುಕ ಮಾಡಿರುವಂತೆ ನಾಚನಹಳ್ಳಿ
11	ಪೂನಂದವಾಡಿ ರಸ್ತೆ ..	ಚಟ್ಟನಹಳ್ಳಿ ಉಕ್ಕಡ.
12	ವೈಸರಾಯಿ ರಸ್ತೆ ..	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ	ಡಿಟೋ
14	ಜೂಬಿಲಿ ರಸ್ತೆ ...	ಕುಕ್ಕರಹಳ್ಳಿ ಉಕ್ಕಡ.
15	ಇಲವಾಲದ ರಸ್ತೆ ...	ಶ್ರೀರಾಂಪೇಟೆ ಡಿಟೋ

ಬಿ. ಷೆಡ್ಯೂಲ್.

ನಂಬರ್.	ತಪ್ಸೀಲು.	ದರ. ರೂ.	ಆ.	ಪೈ.
1	ಸ್ಪ್ರಿಂಗ್ ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ..	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಛತ್ರಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ ..	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ ಮೀರಿದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ ..	0	1	0

ಜಿ. ಹನುಮಂತರಾವ್, ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಯ ಘಾರ್ಯಿಷಕಿ ಅದ್ದು. [ಸಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 25, ಸ್ 1907.

II ನೆ ಭಾಗ

ಇಂಡ್ಯ ಗವರ್ನಮೆಂಟ, ರೆಸಿಡೆಂಟ್ರು, ಚೀಫ್ ಜಡ್ಜಿ ರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್‍ನಾಮಾ, ತಾರೀಖು 11ನೆ ಏಪ್ರಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನಾವನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ. ನಂಬರ್.	ಸಲೆ ಅಡಿ. ಅಡಿ.	ಷರಾ.
1	ಮೈಸೂರು ಉಡಿ ಯಾರ್ಡು	13—5—07	ಸಾಗ್ವಾನಿ ನಾಟಾ ...	550	16,000	[illegible]
			ಡಿಟ್ಟೋ ತುಂಡು ...	600	6,000	
			ಹೊನ್ನೆ ನಾಟಾ ...	70	2,000	
			ಡಿಟ್ಟೋ ತುಂಡುಗಳು ...	45	500	
			ಮತ್ತಿ ನಾಟಾ ...	90	2,500	
			ಡಿಟ್ಟೋ ತುಂಡುಗಳು ...	60	500	
2	ನಂಜನಗೂಡು ಡಿಪೋ.	14—5—07	ಸಾಗ್ವಾನಿ ನಾಟಾ ...	80	2,000	
			ಡಿಟ್ಟೋ ತುಂಡುಗಳು ...	50	500	
			ಹೊನ್ನೆ ನಾಟಾ ...	60	2,000	
			ಡಿಟ್ಟೋ ತುಂಡುಗಳು ...	60	500	
			ಮತ್ತಿ ನಾಟಾ ...	10	300	
			ಡಿಟ್ಟೋ ತುಂಡುಗಳು ...	25	500	

ಹರಾಜು ಷರತ್ತು :—1895ನೆ ಇಸವಿ ಏಪ್ರಲ್ ತಾರೀಖು 25ನೆ ಮರ್ಸ್ತಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಟ್ಟ ಯಿಷ ಆಗಿರುವ 1895ನೆ ಇಸವಿ ಮಾರ್ಚಿ 15ನೆ ಮರ್ಸ್ತಂ ನಂಬರ್. 15229—R. F. 155—92ನೆ ನೋಟಿಫಿಕೇಷನ್ ನೋಡಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸರ್ 1907ನೆ ಇಸವಿ ಮಾರ್ಚಿ ತಾರೀಖು 23ರಲ್ಲು ಕೋಲಾರದಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡ್ ಮಿಾಟಿಂಗಿನ ತೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ|| ಸಿ. ಶ್ರೀಕಂಠೇಶ್ವರ ಐಯ್ಯರವರು, ಬಿ. ಎ., ಬಿ. ಎಲ್., ಪ್ರೆಸಿಡೆಂಟರು.
2. ,, ಹಸರ್ ಅಲ್ಲಿ ಸಾಹೇಬರವರು, ವೈಸ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರವರು, ಕೋಲಾರ ಸಬ್ ಡಿವೀಜನ್ ಅಸಿಸ್ಟೆಂಟ ಕಮಿಾಷನರವರು.
4. ,, ಎನ್. ಆರ್. ಪೊನ್ನ ಸಾಮಿಪಿಳ್ಳೆಯವರು, ಡಿ|| ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
5. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ ಇಂಜನಿಯರ.
6. ,, ಏಸ್. ಗೋಪಾಲರಾಯರವರು, ಸ್ಕೂಲ್ ಡಿ|| ಇನ್ಸ್ಪೆಕ್ಟರ.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಡಿ)

1. ಮೆ|| ಮುನಿನಾರಾಯಣ ಶೆಟ್ಟಿಯವರು, ಕೋಲಾರ.
2. ,, ರಾಮರಾಜುರವರು, ಮಾಲೂರು.
3. ,, ದೊಂತಿ ಚಿಕ್ಕ ಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಣ್ಣೆಯ್ಯನವರು, ಬವರಿಂಗಪೇಟೆ.
6. ,, ಕಾಷ್ಟಿ ಹೈದರಸಾಹೇಬರವರು, ಮುಳಬಾಗಲು.
7. ,, ಮಹಮದ್‌ಹಸರ್‌ಸಾಹೇಬ್, ಶ್ರೀನಿವಾಸಪುರ.
8. ,, ಲಕ್ಷ್ಮಣರಾಯರವರು, ಗುಡಿಬಂಡೆ.
9. ,, ರಾಮಣ್ಣನವರು, ಗೋರಿಬಿದನೂರು.
10. ,, ಪಿ. ಶೀನಪ್ಪನವರು, ಬಾಗೇಪಲ್ಲಿ.

ಕ್ಲಾಸ್ (ಇ)

11. ಮೆ|| ಬಸವೆಗೌಡರವರು, ಬವರಿಂಗಪೇಟೆ.
12. ,, ವೆಂಕಟಸಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಶ್ರೀನಿವಾಸಾಚಾರ್ರು, ಶಿಡ್ಲಘಟ್ಟ.
15. ,, ಗೌಡಗೆರೆ ಕೃಷ್ಣಾಚಾರ್ರು, ಗೋರಿಬಿದನೂರು.
16. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.

ಗೈರ ಹಾಜರು.

ಎಕ್ಸ್ ಅಫಿಷಿಯೊ ಮೆಂಬರುಗಳು.

1. ಮೆ|| ಜಿ. ಆರಾವಮುದೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಚಿಕ್ಕಬಳ್ಳಾಪುರ ಸಬ್ ಡಿವೀಜನ್ ಆಫಿಸರವರು.
2. ,, ನರಸಿಂಗರಾವ್ ಪೂರ್ಣಯ್ಯನವರು, ಅಸಿಸ್ಟೆಂಟ ಕಮಿಾಷನರು ಮಾಲೂರು ಡಿವೀಜನ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಜು (ಡಿ)

1. ಮೆ|| ನಾರಾಯಣಸಾಮಿಶೆಟ್ಟಿಯವರು, ಚಿಕ್ಕಬಳ್ಳಾಪುರ.

---

1. 1906ನೆ ಇಸವಿ ಡಿಸೆಂಬರ 21ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡು ಮಿಾಟಿಂಗಿನ ಪ್ರೊಸೀಡಿಂಗ್ಸು ಓದಿ ನಿರ್ಧರಿಸಲ್ಪಟ್ಟಿತು.

2. ಕಂಟ್ರೋಲರ ಸಾಹೆಬರವರಿಂದ ಆಡಿಟ್ ಆಗಿ ಬಂದ 1906ನೆ ಜುಲೈ ಲಾಗಾಯಿತು ಅಕ್ಟೋಬರ ಆಖೈರ ವರಿಗಿನ ಜಮಾಖರ್ಚು ಲೆಕ್ಕಗಳು ಓದಿ ವ್ಯಾಸು ಮಾಡಲ್ಪಟ್ಟಿತು.

3. ಲೋಕಲ್ ಫಂಡು ಮೊಬಲಗು ಪೈಕಿ ಕೆಲವು ಭಾಗವನ್ನು 50 ಮನೆಗಳಿಗೆ ಜಾಸ್ತಿಯಾಗಿರತಕ್ಕ ಗ್ರಾಮಗಳ ಸ್ಯಾನಿಟೇಷನ್ ವಿಚಾರವಾದ ಕೆಲಸಗಳಿಗೆ ಕೊಡಬೇಕೆಂಬುವ ವಿಷಯದಲ್ಲಿ ದಸರಾ ರೆಪ್ರಜೆಂಟೇಟಿವ ಅಸ್ಸೆಂಬ್ಲಿಯ 218ನೆ ನಂ. ಸಂಗತಿಯನ್ನು ಬೋರ್ಡಿನವರ ಫೈಸಲ್ ಬಗ್ಗೆ ಕಳುಹಿಸಿರುತ್ತಂದು ಸೆಕ್ರೆಟರಿ ಸಾಹೇಬರವರ 4–1–07ನೆ ಮುಕಾಂ 6401-8—L. F. 185–06ನೆ ನಂ. ಡಾಕೆಟ ಓದಲಾಯಿತು.

ಸಾಲೀಯಾನಾ ಈ ಕೆಲಸಗಳಿಗಾಗಿ ಈಗ ಬೋರ್ಡಿನವರು, ಎದಗಿದಷ್ಟು ಹಣ ಕೊಡುತ್ತಾ ಇರುವದ್ದರಿಂದ ಇದನ್ನು ರಿಕಾರ್ಡು ಮಾಡಲ್ಪಟ್ಟಿತು.

4. ದಾರಿ ಖರ್ಚುಗಳು ಕೊಡುವ ವಿಷಯದಲ್ಲಿ ತಾಲ್ಲೂಕು ಬೋರ್ಡು ಮೆಂಬರುಗಳಿಗೂ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೂ ರೂಲ್ಸಿನಲ್ಲಿ ಏನೂ ವ್ಯತ್ಯಾಸವಿರುವದಿಲ್ಲ. ಕೆಲವು ಡಿಸ್ಟ್ರಿಕ್ಟುಗಳಲ್ಲಿ ರೇಟು ವಿಷಯದಲ್ಲಿ ವ್ಯತ್ಯಾಸಮಾಡಿರುತ್ತಾರೆ. ಈ ವಿಷಯ ಬೋರ್ಡಿನಲ್ಲಿ ಚರ್ಚಿಸಬೇಕೆಂದು ಗೌರ್ನಮೆಂಟಿನಿಂದ ತಲಪಿದ 6—3—07ನೆ ಮಾರ್ಕು 7600-9—L. F. 173-06ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

ಬೋರ್ಡಿನವರು ಗೌರ್ನಮೆಂಟಿನವರ ಅಭಿಪ್ರಾಯದಂತೆ ವ್ಯತ್ಯಾಸ ಮಾಡತಕ್ಕದ್ದು ಅನಾವಶ್ಯಕವೆಂದು ಒಪ್ಪಿಕೊಳ್ಳುತ್ತಾರೆ.

5. ಲೋಕಲ್ ಫಂಡು ಡಿಸ್ಪೆನ್ಸರಿಗಳಲ್ಲಿ ಹೆಂಗಸು ರೋಗಿಗಳಿಗೆ ಪ್ರತ್ಯೇಕ ಒಂದು ವೆಯಿಟಿಂಗು ರೂಂ ಅಂದರೆ ನಿಲ್ಲುವ ಸ್ಥಳ ಏರ್ಪಾಟು ಮಾಡುವ ವಿಷಯದಲ್ಲಿ ಎಲ್ಲಾ ಡಿಸ್ಟ್ರಿಕ್ಟು ಬೋರ್ಡುಗಳ ಅಭಿಪ್ರಾಯಗಳನ್ನು ರಿಕಾರ್ಡು ಮಾಡಿರುತ್ತೆಂಬದಾಗಿ ಗೌರ್ನಮೆಂಟಿನಿಂದ ತಲಪಿದ 18—3—07ನೆ ಮಾರ್ಕು 8469-79—Md. 243-05—1ನೆ ನಂಬರ ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲ್ಪಟ್ಟಿತು.

6. ಚಿಕ್ಕಬಳ್ಳಾಪುರದಲ್ಲಿ ಎರಡು ಇನ್‌ಪೇಷೆಂಟು ವಾರ್ಡುಗಳು ಕಟ್ಟತಕ್ಕ ವಿಷಯದಲ್ಲಿ ಸೀನಿಯರ್ ಸರ್ಜನ್ ಸಾಹೇಬರವರಿಂದ ತಲಪಿದ 20—12—06ನೆ ಮಾರ್ಕು 4029ನೆ ನಂಬರ್ ಡಾಕೇಟು ಓದಲಾಯಿತು.

ಈ ಚಿಕ್ಕಬಳ್ಳಾಪುರವು ಒಂದು ದೊಡ್ಡ ಸಬ್ ಡಿವಿಜನಿಗೆ ಮಧ್ಯ ಪ್ರದೇಶವಾದ್ದರಿಂದ ಇಲ್ಲಿ ಎರಡು ಇನ್‌ಪೇಷೆಂಟು ವಾರ್ಡುಗಳು ಕಟ್ಟತಕ್ಕದ್ದು ಅತ್ಯವಶ್ಯಕವಾಗಿರುತ್ತೆ, ಮೂರರಲ್ಲಿ ಒಂದು ಭಾಗ ಮೊಬಲಗು ಇದಕ್ಕಾಗಿ ಡಿಸ್ಟ್ರಿಕ್ಟು ಫಂಡಿನಿಂದ ಕೊಡಬೇಕಾಗಿರುವ 900 ರೂಪಾಯಿಗಳಿಗೆ ರಿವೈಜು ಬಡ್ಜೆಟ್ಟು ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

7. ಎಕ್ಸಿಕ್ಯೂಟಿವ್ ಇಂಜಿನಿಯರವರಿಂದ ತಲಪಿದ ಈ ಕೆಳಗೆ ನಮೂದಾಗುವ ಅಂದಾಜುಗಳು ಬೋರ್ಡಿನಲ್ಲಿ ಮಂಜೂರ್ ಮಾಡಲ್ಪಟ್ಟವು:—

		ರೂ.
1.	ಬಂಗಾರಪೇಟೆ ಮುಸಾಫರ್ ಬಂಗ್ಲೆ ರಿಪೇರಿ	580
2.	ನರಸಾಪುರ　ಡಿಟ್ಟೋ	218
3.	ವೇಮಗಲ್　ಡಿಟ್ಟೋ	357
4.	ಶಿಡ್ಲಘಟ್ಟ　ಡಿಟ್ಟೋ	46
5.	ಮುಳಬಾಗಲು　ಡಿಟ್ಟೋ	362
6.	ಚಿಂತಾಮಣಿ　ಡಿಟ್ಟೋ	116
7.	ತಳಗವಾರ　ಡಿಟ್ಟೋ	74
8.	ಚೇಳೂರು　ಡಿಟ್ಟೋ	72
9.	ಮುಳಬಾಗಲ್ ರೈಲ್ವೆ ಫೀಡರ್ ರಿಪೇರಿ	443
10.	ಮಾಲೂರು-ಮಾಸ್ತಿ ರೋಡಿನಲ್ಲಿ ಟನಲ್ ರಿಪೇರಿ	142
11.	ತೊಂಡೇಭಾವಿ-ಮದ್ದಗಿರಿ ರಸ್ತೆಯಲ್ಲಿ ರೋಡು ಡ್ಯಾಂ ಕಟ್ಟಲು	228
12.	ಬೋಡಿಕೋಟೆ ರೈಲ್ವೆ ಫೀಡರಿಗೆ ಅಡ್ಡವಾಗಿ ಒಂದು ಕಾಜವೆ ರಿಪೇರಿ	180
13.	ಎಲ್ಲಂಪಲ್ಲಿ-ಚೇಳೂರು ರಸ್ತೆ ರಿಪೇರಿ	91
	ಜುಮ್ಲಾ	2,909

8. ಎಕ್ಸಿಕ್ಯೂಟಿವ್ ಇಂಜನಿಯರವರಿಂದ ತಲಪಿದ ಈ ಕೆಳಗೆ ನಮೂದಾಗುವ ಅಂದಾಜುಗಳನ್ನು ಈಗ ಸದ್ಯಕ್ಕೆ ಅವಶ್ಯಕವಿಲ್ಲವೆಂದು ತೀರ್ಮಾನವಾಯಿತು:—

1.	ನರಸಾಪುರ ಬಂಗ್ಲೆ ಬಡಾವಣೆ	426
2.	ವೇಮಗಲ್　ಡಿಟ್ಟೋ	502
3.	ರಾಯಲ್‌ಪಾಡು　ಡಿಟ್ಟೋ	1,332
4.	ಶಿಡ್ಲಘಟ್ಟ　ಡಿಟ್ಟೋ	237
5.	ಬೇತಮಂಗಲ　ಡಿಟ್ಟೋ	341
6.	ಮುಳಬಾಗಲ್-ಗೋಲಬಿದನೂರು ರಸ್ತೆ ರಿಪೇರಿ	499
7.	ಕೋಲಾರ-ಸೋಂಪುರು ರಸ್ತೆ 1ನೆ ಮೈಲಿಯಿಂದ 14ನೆ ಮೈಲಿ ವರಿಗೆ ರಿಪೇರಿ	468
8.	ಕೋಲಾರ-ವೆಂಕಟಗಿರಿ ಕೋಟೆ ರಸ್ತೆ ಸ್ಪೆಷಲ್ ರಿಪೇರಿ	1,332
9.	ಚಿಂತಾಮಣಿ-ಚಿನ್ನಸಂದ್ರ ರಸ್ತೆ ರಿಪೇರಿ	806
	ಜುಮ್ಲಾ	5,945

9. ನಂದಿ ಬೆಟ್ಟದಮೇಲೆ ಅಮೃತಸರೋವರದ ಮುಂಭಾಗದಲ್ಲಿರುವ ಮಂಟಪವನ್ನು ರಿಪೇರಿ ಮಾಡಲು 53 ರೂಪಾಯಿಗೆ ಒಂದು ಅಂದಾಜ್ ಮಂಜೂರ್ಮಾಡಿರುವದಾಗಿ ಪ್ರೆಸಿಡೆಂಟರವರ 19—2—07ನೆ ಮಾರ್ಕ್‌ವಿನ ಮೆಮೋ ಓದಲಾಯಿತು.

ಪ್ರೆಸಿಡೆಂಟರವರ ನಡವಳಿಕೆಯನ್ನು ಒಪ್ಪಿಕೊಂಡು ಈ ಮೊಬಲಗು ಚಾಲ್ತಿ ಸಾಲ ಬಡ್ಜೆಟ್ಟಿನಲ್ಲಿ A.IIನೆ ಹೆಡ್ಡಿನಲ್ಲಿ ರಿಪೇರ್ಯಗೋಸ್ಕರ ದಾಖಲಾಗಿರುವ ಮೊಬಲಗು ಪೈಕಿ ಕೊಡತಕ್ಕದ್ದೆಂದು ತೀರ್ಮಾನ ಮಾಡಲ್ಪಟ್ಟಿತು.

10. 1904-05ನೆ ಸಾಲಿನಲ್ಲಿ ಗೋರಿಬಿದನೂರು ತಾಲ್ಲೂಕು ಬಂಡಾರ್ಲಹಳ್ಳಿಗೆ ಭಾವಿಗೋಸ್ಕರ ಮಂಜೂರ್ಮಾಡಿದ್ದ 300 ರೂಪಾಯಿ ಪೈಕಿ ಗೋರಿಬಿದನೂರು ಮುಸಾಫರಬಂಗ್ಲೆ ಕಾಂಪಾಂಡುನಲ್ಲ ಭಾವಿ ರಿಪೇರಿಗೋಸ್ಕರ 178 ರೂ. ಮಂಜೂರಾಗಬೇಕೆಂದು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫಿಸರವರ 12—3—07ನೆ ಮಾರ್ಕ್ಕಂ 1023ನೆ ನಂಬರ ಯಾದಿ ಓದಲಾಯಿತು.

ಬಂಡಾರ್ಲಹಳ್ಳಿ ಭಾವಿಗೆ 1904–05ನೆ ಸಾಲಿನಲ್ಲಿ ಮಂಜೂರಾಗಿದ್ದ ಮೊಬಲಗು ಆ ಸಾಲ ಆಖೈರನಲ್ಲೇ ಲ್ಯಾಪ್ಸು ಆಗಿ ಹೋಯಿತಾದ್ದರಿಂದ ಗೋರಿಬಿದನೂರು ಮುಸಾಫರ ಬಂಗ್ಲೆ ಕಾಂಪಾಂಡುನಲ್ಲಿರತಕ್ಕ ಭಾವಿಗೆ ಬೇಕಾಗಿರುವ ಮೊಬಲಗು ಗೋರಿಬಿದನೂರು ಸಕ್ರೆ ಕಾರ್ಖಾನೆಗೆ ಹೋಗುವ ರಸ್ತೆ ರಿಪೇರಿಗೆ ಚಾಲ್ತಿ ಸಾಲ ಬಡ್ಜೆಟಿನಲ್ಲಿ ಮಂಜೂರಾಗಿರುವ 200 ರೂಪಾಯಿಗಳ ಪೈಕಿ ಮಂಜೂರ್ಮಾಡಿರುವದಾಗಿ ತೀರ್ಮಾನವಾಯಿತು.

11. ಬಾಗೇಪಲ್ಲಿ ತಾಲ್ಲೂಕು ದೇವರಗುಡಿಪಲ್ಲಿ ಬಳಿ ಭಾವಿ 3—2—04ರಲ್ಲು 300 ರೂಪಾಯಿಗೆ ಮಂಜೂರಾಗಿ ಕಂಟ್ರಾಕ್ಟರ ನರಸಿಂಗರಾಯನಿಂದ 135 ರೂಪಾಯಿಗೆ ಕಾಂಗಾರಿ ನಡದು ಅದರೊಳಗೆ ಘಟ್ಟ ಬಂಡೆ ಬಿದ್ದಿದ್ದರಿಂದ 1904—05ನೆ ಸಾಲಿನಲ್ಲಿ ಕ್ಯಾನ್ಸಲ್ ಆಗಿರುತ್ತೆ. ಈ ಅಂದಾಜು ಕ್ಯಾನ್ಸಲ್ ಆಗುವದಕ್ಕೆ ಮುಂಚೆ ಕಂಟ್ರಾಕ್ಟರ ಮೀರಮೊಹದೀನಸಾಬಿ ಎಂಬುವನಿಗೆ ತಿರಿಗಿ ಕಂಟ್ರಾಕ್ಟು ಕೊಟ್ಟು ಕೆಲಸ ಮಾಡಿಸಿದ್ದರ ಬಾಬತು 65 ರೂಪಾಯಿ ಅವರಿಗೆ ಪಾವತಿ ಆಗಬೇಕೆಂದು ಕೊಡಿಸಿಕೊಡತಕ್ಕದ್ದು ಮುನಾಸಬ್ ಇರುತ್ತೆಂತ ಬಾಗೇಪಲ್ಲಿ ಅಮಲ್ದಾರ್ರ 94ನೆ ನಂಬರ ರಿಪೋರ್ಟ ಓದಲಾಯಿತು.

ಕಂಟ್ರಾಕ್ಟುದಾರನು ಮಾಡಿಸಿರತಕ್ಕ ಕಾಂಗಾರಿಗೆ ಮೊಬಲಗು ಕೊಡತಕ್ಕದ್ದು ಸಹಜವೆಂದುನ್ನೂ ಅದನ್ನು ಚಾಲ್ತಿ ಸಾಲ ಬಡ್ಜೆಟ್ಟಿನಲ್ಲಿ ಶ್ರೀನಿವಾಸಪುರ ಮುಸಾಫರಖಾನೆ ಬಡಾವಣೆಗೆ 200 ರೂಪಾಯಿ ಮಂಜೂರಾಗಿರುವದರ ಪೈಕಿ ಕೊಡಬೇಕೆಂದುನ್ನೂ ತೀರ್ಮಾನವಾಯಿತು.

12. ಕೋಲಾರ ತಾಲ್ಲೂಕು ಕಳ್ಳಿಪುರದಲ್ಲಿ ಭಾವಿ ತೆಗಿಸಲು ಮೊದಲು 306 ರೂಪಾಯಿ ಮಂಜೂರಾಗಿ ಕಾಂಗಾರಿ ನಡದಿರುತ್ತೆ. ಅದು ಪೂರೈಸಬೇಕಾದರೆ ಇನ್ನು 109 ರೂಪಾಯಿಗಳು ಆಗಬೇಕೆಂದು ಸಪ್ಲಿಮೆಂಟಲ್ ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವಿಜನ್ ಆಫಿಸರವರ 10—3—07ನೆ ಮಾರ್ಕ್ಕಂ 1067ನೆ ನಂಬರ ಯಾದಿ ಓದಲಾಯಿತು.

ಮೇಲ್ಕಂಡ 109 ರೂಪಾಯಿ 14—9—06ನೆ ಮಾರ್ಕ್ಕಂ 3207-9—Agri. 22-05—66ನೆ ನಂಬರ ಪ್ರೊಸೀಡಿಂಗ್ಸುನಲ್ಲಿ ಭಾವಿಗಳ ರಿಪೇರಿ ಬಗ್ಯೆ ಮಂಜೂರಾಗಿರುವ 3,000 ರೂಪಾಯಿ ಪೈಕಿ ಕೊಡಬೇಕೆಂದು ತೀರ್ಮಾನವಾಯಿತು.

13. ಚಿಂತಾಮಣಿ ಬಂಗ್ಲೆ ಕಾಂಪಾಂಡುನಲ್ಲಿರುವ ಭಾವಿ ರಿಪೇರಿ ಬಗ್ಯೆ 22—12—0 ರೂಪಾಯಿಗೆ ಒಂದು ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವಿಜನ್ ಆಫಿಸರವರ 3—2—07ನೆ ಮಾರ್ಕ್ಕಂ 753ನೆ ನಂಬರ ಯಾದಿ ಓದಲಾಯಿತು.

ಅಂದಾಜು ಮಂಜೂರ್ಮಾಡಿ ಈ ಮೊಬಲಗನ್ನು ಇದೇ ಭಾವಿ ಕಾಂಗಾರಿಗೆ ಎಗ್ಜಿಕ್ಯೂಟಿವ ಇಂಜನಿಯರವರ ಅಂದಾಜಿನಲ್ಲಿ ಸೇರಿಸಿಕೊಳ್ಳಬೇಕೆಂದೂ ತೀರ್ಮಾನವಾಯಿತು.

14. ವಕ್ಕಲೇರಿ ಹೊಲೇರ ಭಾವಿಗೆ ವಾಡೆಕಟ್ಟಿಸಿಕೊಡಲು 50 ರೂಪಾಯಿಗೆ ಅಂದಾಜು ಕಳುಹಿಸಿರುವದಾಗಿ ಕೋಲಾರ ಸಬ್ ಡಿವಿಜನ್ ಆಫಿಸರವರ 10—3—07ನೆ ಮಾರ್ಕ್ಕಂ 1069ನೆ ನಂಬರ ಯಾದಿ ಓದಲಾಯಿತು.

ಅಂದಾಜು ಮಂಜೂರ್ಮಾಡಿ ಮೊಬಲಗು 14—9—06ನೆ ಮಾರ್ಕ್ಕಂ 3207-9—Agri. 22-05—66ನೆ ನಂಬರ ಪ್ರೊಸೀಡಿಂಗ್ಸುನಲ್ಲಿ ಮಂಜೂರಾಗಿರುವ 3,000 ರೂಪಾಯಿ ಪೈಕಿ ಕೊಡಬೇಕೆಂದು ತೀರ್ಮಾನವಾಯಿತು.

15. ಚಾಲ್ತಿ ಸಾಲ ಬಡ್ಜೆಟ್ಟಿನಲ್ಲಿ ಪ್ರಾವಿಜನ್ ಇರುವ 500 ರೂಪಾಯಿಗಳಿಗೆ ಒಳಪಟ್ಟು ಈ ಕೆಳಗೆ ನಮೂದಿಗುವ ಅಂದಾಜುಗಳು ಬೋರ್ಡಿನವರು ಮಂಜೂರ್ಮಾಡಿರುತ್ತಾರೆ:—

			ರೂ.
1.	ಕೋಲಾರ	... ಪಟ್ಣ ಮುಸಾಫರಖಾನೆ ರಿಪೇರಿ	100
2.	ಬವರಿಂಗಪೇಟೆ	... ಕಾಮಸಂದ್ರ ಮುಸಾಫರಖಾನೆ ರಿಪೇರಿ	198
3.	ಚಿಂತಾಮಣಿ	... ಮುಂಗಿಲನಪಲ್ಲಿ ಮುರುಗಮಲ ರಸ್ತೆ ರಿಪೇರಿ	400
4.	ಮುಳಬಾಗಲ್	... ಮುಳಬಾಗಲ್ ಮುಸಾಫರಖಾನೆ ರಿಪೇರಿ	300
5.	ಶ್ರೀನಿವಾಸಪುರ	... ಲಕ್ಷ್ಮಿಸಾಗರದಿಂದ ಎಲ್ದೂರಿಗೆ ರಸ್ತೆ ರಿಪೇರಿ	100
6.	ಡಿಟೋ	... ದಳಸನೂರು ದೊಡ್ಡಿ ರಿಪೇರಿ	60
7.	ಡಿಟೋ	... ಮಣಿಗಾನಪಲ್ಲಿ ಭಾವಿ ಕಾಂಗಾರಿ	230
8.	ಡಿಟೋ	... ಭೀರಂಗಿಗಾನಿಪಲ್ಲಿ ರಸ್ತೆ ಕಾಂಗಾರಿ	371
9.	ಡಿಟೋ	... ಶ್ರೀನಿವಾಸಪುರ ಮುಸಾಫರಖಾನೇಲಿ ಕಕ್ಕಸು ಕಾಂಗಾರಿ	120

			ರೂ.
10.	ಶಿಡ್ಲಘಟ್ಟ ...	ದಿಬ್ಬೂರಹಳ್ಳಿ ರಸ್ತೆ ಬಿಡಾವಣಿ ..	499
11.	ಡಿಟ್ಟೋ ...	ಡಿಟ್ಟೋ ರಸ್ತೆ ರಿಪೇರಿ ...	200
12.	ಡಿಟ್ಟೋ ...	ಕುಂದಲಗುರ್ಕಿ ಕುಂಟೆ ಆಳಪಡಿಸುವದು ...	130
13.	ಬಾಗೇಪಲ್ಲಿ ...	ದೊರಣಪಲ್ಲಿ ಭಾವಿ ಕಾಂಗಾರಿ ...	250
14.	ಡಿಟ್ಟೋ ...	ಬಿಳ್ಳೂರು ದೊಡ್ಡಿ ಡಿಟ್ಟೋ ...	100
15.	ಗೋರಿಬಿದನೂರು ...	ಕುರುಡಿ ಭಾವಿ ಆಳಿಸುವದು ...	350
16.	ಡಿಟ್ಟೋ ...	ಹುದುಗೂರು ದೊಡ್ಡಿ ಕಾಂಗಾರಿ ...	100
17.	ಡಿಟ್ಟೋ ...	ಹೊಸೂರು ರಸ್ತೆ ರಿಪೇರಿ ...	150
18.	ಡಿಟ್ಟೋ ...	ವಾಟದ ಹೊಸಹಳ್ಳಿ ದೊಡ್ಡಿ ಕಾಂಗಾರಿ ...	100
19.	ಡಿಟ್ಟೋ ...	ಕುಡುಮಲಕುಂಟೆ ಭಾವಿ ಡಿಟ್ಟೋ ...	300
20.	ಡಿಟ್ಟೋ ...	ವಿದುರಾಶ್ವತ್ಥ ರಸ್ತೆ ರಿಪೇರಿ ...	150
21.	ಗುಡಿಬಂಡೆ ...	ಪಸರಲೋಡು ಭಾವಿ ರಿಪೇರಿ ..	50
22.	ಡಿಟ್ಟೋ ...	ಸೋಮೇಶ್ವರ ಮಿಟ್ಟೆಮರಿ ರಸ್ತೆ ರಿಪೇರಿ ...	50
23.	ಡಿಟ್ಟೋ ...	ನಾಲಿಗೊಂಬ ಭಾವಿ ಕಾಂಗಾರಿ ..	50
24.	ಡಿಟ್ಟೋ ...	ಗುಡಿಬಂಡೆ ಮುಸಾಫರಖಾನೆ ಬಳಿ ಭಾವಿ ರಿಪೇರಿ ...	100
25.	ಡಿಟ್ಟೋ ...	ಇಂಗ್ಲಿರಡಿ ಹಳ್ಳಿ ಭಾವಿ ಕಾಂಗಾರಿ ...	100
		ಜಮ್ಲಾ ..	4,558

16. ಕಾಮಸಂದ್ರದ ಮುಸಾಫರಖಾನೇಲಿ ಇಲಿ ಸತ್ತು ಬಿದ್ದದ್ದರಿಂದ ಅದರ ಛಾವಣಿ ಕಿತ್ತು ಹಾಕಿರುತ್ತೆ. ಇದರ ರಿಪೇರಿಗಾಗಿ 198 ರೂಪಾಯಿಗಳು ಬೇಕಾಗಿರುತ್ತೆ. ಮತ್ತು ಈ ಕಾಮಸಂದ್ರ ಗ್ರಾಮದಲ್ಲಿ ಚೆಪ್ಪಲುಕೇಂಡು ನಾಶಪಡಿಸತಕ್ಕದ್ದಕ್ಕಾಗಿ ಕೆಲವು ಹಣ ಬೇಕಾಗಿರುತ್ತೆಂದು ಬವರಿಂಗುಪೇಟೆ ಮೆಂಬರು ಮೆ|| ಬಸವೇಗೌಡರಿಂದ ಪ್ರೊಪೋಜು ಮಾಡಲ್ಪಟ್ಟಿತು.

ಕಾಮಸಂದ್ರ ಮುಸಾಫರಖಾನೆ ರಿಪೇರಿ ಬಗ್ಗೆ 198 ರೂಪಾಯಿ ಚಾಲ್ತಿ ಸಾಲ ಬಜೆಟ್ಟಿನಲ್ಲಿ ಕಾಮಸಂದ್ರ ಗ್ರಾಮದಿಂದ ರೈಲ್ವೆ ಸ್ಟೇಷನಿಗೆ ಹೋಗುವ ರಸ್ತೆಯಲ್ಲಿ ಒಂದು ಮೋರಿ ಕಟ್ಟಲು ಪ್ರೊವೈಡು ಆಗಿರುವ 250 ರೂಪಾಯಿ ಪೈಕಿ ಕೊಡಬೇಕೆಂದೂನ್ನೂ ಚೆಪ್ಪಲ್ ಕೇಂಡು ನಾಶಪಡಿಸಲು ಇದಕ್ಕಾಗಿ ಮಂಜೂರಾಗಿರುವ 800 ರೂಪಾಯಿ ಪೈಕಿ 100 ರೂಪಾಯಿ ಮಂಜೂರ್ಮಾಡಿರುತ್ತೆಂದುನ್ನೂ ತೀರ್ಮಾನವಾಯಿತು.

17. ಪ್ರತಿ ತಾಲ್ಲೂಕುಗಳಿಗೂ ಮತ್ತು ಡಿಸ್ಟ್ರಿಕ್ಟುಗಳಿಗೂ ಮಾಹೆಯಾನ 15 ರೂಪಾಯಿ ತಲಬುಳ್ಳ ಒಬ್ಬ ರೈಟರನ್ನು ಲೋಕಲ್ ಫಂಡು ಕೆಲಸಕ್ಕಾಗಿ ಜಾಸ್ತಿಯಾಗಿ ಮಂಜೂರ್ಮಾಡಿರುತ್ತೆಂದು ಗೌರ್ನಮೆಂಟಿನಿಂದ ತಲಪಿದ 16—3—07ನೆ ಮರ್ಸ್ಟಂ 8333-44—L. B. 422-05—12ನೆ ನಂಬರ್ ಪ್ರೊಸೀಡಿಂಗ್ಸು ಓದಲಾಯಿತು.

ಈ ಜಾಸ್ತಿ ಶಿಬ್ಬಂದಿ ಖರ್ಚಿಗಾಗಿ 2,160 ರೂಪಾಯಿಗೆ ರಿವೈಜ್ ಬಜೆಟ್ಟು ಕಳುಹಿಸಬೇಕೆಂದು ತೀರ್ಮಾನವಾಯಿತು.

18. ಈ ಕೆಳಗೆ ನಮೂದಾಗುವ ತಾಲ್ಲೂಕು ಬೋರ್ಡುಗಳ ಮೀಟಿಂಗು ಪ್ರೊಸೀಡಿಂಗ್ಸುಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು:—

1.	ಕೋಲಾರ	...	5— 1—07
2.	ಬವರಿಂಗಪೇಟೆ	...	28— 1—07
3.	ಶ್ರೀನಿವಾಸಪುರ	..	24—12—06
4.	ಮುಳಬಾಗಲ್	...	16— 1—07
5.	ಮಾಲೂರು	...	24— 1—07
6.	ಚಿಕ್ಕಬಳ್ಳಾಪುರ	..	20— 2—07
7.	ಗುಡಿಬಂಡೆ	...	29—12—06
8.	ಬಾಗೇಪಲ್ಲಿ	..	24— 1—07
9.	ಶಿಡ್ಲಘಟ್ಟ	...	25—12—06

19. ಬರುವ ಮೀಟಿಂಗು 1907ನೆ ಇಸವಿ ಜೂನ್ ಮಾಹೆ 8ನೆ ತಾರೀಖು ಶನಿವಾರ ಆಗಬೇಕೆಂದು ತೀರ್ಮಾನವಾಯಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 9ನೆ ಏಪ್ರಿಲ್ 1907.

ನಾಗಮಂಗಲ ತಾಲ್ಲೂಕು ಹೊಣಕೆರೆ ಹೋಬಳಿಗೆ ಸೇರಿದ ಜೋಡಿ ಹುಲ್ಲಿಕೆರೆ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರಿ ಜೋಡಿ ಹುಲ್ಲಿಕೆರೆ ಗ್ರಾಮದಲ್ಲಿ 1907ನೆ ಮೇ ಮಾಹೆ 28ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಏಪ್ರಿಲ್ 18ನೆ ಮರ್ರಂ 16ನೆ ನಂಬರ ಮೈಸೂರು ಗೆಜೆಟ್ಟಿನ 11ನೆ ಭಾಗದ 132—133ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 3ನೆ ಏಪ್ರಿಲ್ 1907ನೆ ಇಸವಿ, ಚಿಕ್ಕಮಗಳೂರು.

ಸನ್ 1901ನೆ ಇಸವಿ ಡಿಸೆಂಬರು 11ನೆ ಮರ್ರಂ ನಂಬರು 9,007—ಆ. ಜಿ. 56ನೆ ಗವರ್ನಮೆಂಟು ನೋಟಫಿಕೇಷನ್ 5ನೆ ಪ್ಯಾರಾ ಮೇರಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾ ನದಿಗಳಲ್ಲಿ ಚಾಲ್ತಿ ಸನ್ 1907ನೆ ಸಾಲ್ ಏಪ್ರಿಲ್ 1ನೆ ತಾರೀಖು ಲಾಗಾಯಿತು ಸೆಪ್ಟಂಬರ್ 30ನೆ ತಾರೀಖು ವರಿಗೆ ಮೀನುಗಳನ್ನು ಹಿಡಿಯುವುದನ್ನು ಮೋಖೂಫ್ ಮಾಡಿ ಇದೆ.

ಡಿ. ದೇವರಾಜ ಅರಸ್,
ಡೆಪ್ಯುಟಿ ಕಮಿಷನರ್.

ತಾರೀಖು 6ನೆ ಏಪ್ರಿಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನೆಂದರೆ, 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಇಸವಿ ಜೂನ್ ಆಖೈರ್ ವರಿಗೆ ಖೈದಾಗುವ ಒಂದು ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಸ್ಥಳಗಳಲ್ಲಿ ಅವುಗಳ ಬಾಜುವಲ್ಲಿ ಕಂಡ ತಾರೀಖುಗಳಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲು ಮಾಡುವ ಹಕ್ಕು ಡೆಪ್ಯುಟಿ ಕಮಿಷನರ್ ಯಾ ಈ ಕೆಲಸಕ್ಕೆ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿಗೆ ತಪಶೀಲುಗಳನ್ನು 1907ನೆ ಇಸವಿ ಏಪ್ರಿಲ್ 18ನೆ ತಾರೀಖು ಗೆಜೆಟ್ಟಿನ 2ನೆ ಭಾಗದ 134—135ನೆ ನಂಬರ್ ಪೇಜಿನಲ್ಲಿ ಪ್ರಾಯಿಷ್ಟಾಗಿರುವ 1907ನೆ ಇಸವಿ ಏಪ್ರಿಲ್ 6ನೆ ಮರ್ರಂನ ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳಬಹುದು.

ನಂಬರು	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ) ...	18ನೆ ಮೇ 1907. ...	ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	20ನೆ ಡಿಟೋ ...	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ) ...	23ನೆ ಡಿಟೋ ...	ಬಾಳೆಹೊನ್ನೂರು ಮುಸಾಫರ ಬಂಗಲೆಯಲ್ಲಿ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿವಿಜನ್.

ಇಸ್ತಿಹಾರ್ನಾಮೆ.

ಕೋಲಾರ, 8ನೆ ಏಪ್ರಿಲ್ 1907.

ತಾರೀಖು 11ನೆ ಏಪ್ರಿಲ್ 1907 ಇಸವಿ 2ನೆ ಭಾಗದ ಇಂಗ್ಲೀಷ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರತಕ್ಕ ಕೋಲಾರ ಡಿಸ್ಟ್ರಿಕ್ಟು ಮಾಲೂರು ಕಸಬಾದಲ್ಲಿ ಹೊಸದಾಗಿ ಅಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಟ್ಟತಕ್ಕ ಬಗ್ಗೆ ಟೆಂಡರ್ ವಿಷಯಕವಾದ ಇಸ್ತಿಹಾರ್ನಾಮೆಗೆ ಸಮಸ್ತ ಜನಗಳೂ ಗಮನಕೊಡತಕ್ಕದ್ದು.

ಕೆ. ಕೃಷ್ಣಯ್ಯಂಗಾರ್,
ಎಗ್ಜಿಕ್ಯೂಟೀವ್ ಇಂಜನಿಯರ್.

351

ಪೊಲೀಸ್ ಇಲಾಖಾ.

ನೋಟೀಸ್.

ತಾರೀಖು 11ನೆ ಏಪ್ರೈಲ್ 1907.

ತಾರೀಖು 11—4—1907ರಲ್ಲಿ ಒಂದು ನೂರು ರೂಪಾಯಿನ ಮತ್ತು $\frac{T.\ A}{153}$ 00967 (ಮದರಾಸ್ ಸರ್ಕಲ್) ನಂಬರಿನ ನೋಟು ಒಂದನ್ನು ಚನ್ನಪಟ್ಣ ತಾಲ್ಲೂಕು ಶಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೇಮ್‌ತಾನ್ ಆಫಿಸರಾಗಿರುವ ಮೊಟ್ಟಿಕಂಟಿ ವೇಂಕಟೇಶರಾಯರು ಕಳದುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಶೇರಿರುತ್ತೆ ಮತ್ತು ಅವರಲ್ಲಿ ಹ್ಯಾಗೆ ಬಂತೆಂಬ ಸಂಗತಿ ತಿಳಿಸತಕ್ಕವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿಯಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಲ್ಲಿಗೆ ತಿಳಿಯಪಡಿಸತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್.

ನೋಟಿಫಿಕೇಷನ್, ನಂ. 322—*C. S.*, ತಾರೀಖು 17-18ನೆ ಏಪ್ರೈಲ್ 1907.

ಈ ಕೆಳಗೆ ನಮೂದಿಸಿರುವ ಕೋ ಆಪರೇಟೀವ್ ಸೊಸೈಟಿಯು 1905ನೆ ಇಸವಿಯ ಮೈಸೂರು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ (2)ನೆ ಕ್ಲಾಜಿನ ಪ್ರಕರಣಾನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿರುತ್ತೆ: —

ಹೆಸರು.	ಸ್ಥಳ.	ರಿಜಿಸ್ಟರು ಆದ ತಾರೀಖು.
ಬೆಂಗಳೂರು ಸಿಟಿ ಕೋ ಆಪರೇಟೀವ್ ಬ್ಯಾಂಕ್, ಲಿಮಿಟೆಡ್, ಬೆಂಗಳೂರು.	ಬೆಂಗಳೂರು ಸಿಟಿ ...	6ನೆ ಏಪ್ರೈಲ್ 1907.

ಎಂ. ಶಾಮರಾವ್,
ರಿಜಿಸ್ಟ್ರಾರ್, ಕೋ ಆಪರೇಟಿವ್ ಸೊಸೈಟೀಸ್ ಇನ್ ಮೈಸೂರು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತಿಹಾರ್ ತಾರೀಖು 29ನೆ ಮಾರ್ಚಿ 1907.

ಸನ್ 1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1908ನೆ ಇಸವಿ ಜೂನ್ ಮಾಹೆ ತಾರೀಖು 30ರ ವರೆಗೆ ಈ ಕೆಳಗಿನ ಎ ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ಒಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ ಷೆಡ್ಯೂಲಿನಲ್ಲಿ ನಮೂದಾಗುವ ದರವರತೆ ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 78 ಮತ್ತು 79ನೆ ಸೆಕ್ಷನ್‌ಗಳಲ್ಲಿ ನಮೂದಿಸುವ ಷರತ್ತುಗಳಿಗೆ ಒಳಪಡಿಸಿ ಪ್ರತಿ ಒಂದು ಟೋಲ್ ಗೇಟಿನಲ್ಲಿಯಾಗಲೀ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ ಟೋಲು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ಒಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡಲೆ ಡಿಪಾಜಿಟ್ ಬಗ್ಯೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ಒಳಗೆ ಹಾಜರ್ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಾನಾವಾರಿ ಗಾಡಿಯಾ ಜಾನವಾರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪ್ಸೀಲು ತೋರಿಸುವ ಲೆಕ್ಕವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡುವದಕ್ಕು ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಖ್ತೀಲು ಲೆಕ್ಕವನ್ನು (ನ ಕಲಂನಲ್ಲಿ ನಮೂದಿಸಿರುವಂತೆ, ಅದತಕ್ಕ ಬಗ್ಗೆ ಆಗುವ ಕಂಟ್ರಾಕ್ಟರ್‌ರವರ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲು ಗೇಟನಲ್ಲಿಯೂ, ಒಟ್ಟೊಬ್ಬ ಮುತ್ಸದ್ದಿಯನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಫಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯುಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು :—

1. ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನುವಾರುಗಳು ಮತ್ತು ಗೌವರನ್‌ಮೆಂಟು ಯಾ ಮ್ಯುನಿಸಿಪಲ್ ಕೌನ್ಸಿಲಿಗೆ ಸೇರಿದ ಅಥವಾ ಸಾಮಾನು ವಗ್ಗೈರೆ ಸಾಗಿಸುವದಕ್ಕಾಗಿ ಮೊಕರೂರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆ ಕಾಲದೊಳಗಾಗಿ, ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

2. ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗ್ಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ, ಮಿಲಿಟರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫಿಸರರು, ಸಾಹುಕಾರ ಮಾನೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು ಸಾಮಾನುಗಳು ಇರುವ ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತೂ ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹ :—

ಎ. ಷೆಡ್ಯೂಲ್.

ನಂಬರ್.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ರೈಲ್ವೆ ಸ್ಟೇಷನ್ ರಸ್ತೆ ...	ಬಳಗೊಳದ ರಸ್ತೆ ಮತ್ತು ಸಿಕ್ಕಲ್ಯೆನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗೊಳದ ರಸ್ತೆ ...	ಕೇಂಪನಕಟ್ಟೆ ಉಕ್ಕಡ.
3	ಶ್ರೀರಂಗಪಟ್ಟಣದ ರಸ್ತೆ ...	ಏರಕಟ್ಟೆ ಡಿಟೋ
4	ಜಂಗಳೂರು ರಸ್ತೆ ...	ವೀರನಗೆರೆ ಡಿಟೋ
5	ಸಿಮಿಟರಿ ರಸ್ತೆ ...	ಬೆಂಗಿ ಸಂತೆ ಡಿಟೋ
6	ಮಹದೇವಪುರದ ರಸ್ತೆ ...	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ...	ಇಟ್ಟಿಗೆ ಗೂಡು ಡಿಟೋ
8	ರೇಸ್‌ಕೋರ್ಸು ರಸ್ತೆ ...	ರೋಣಸಂತೆ ಡಿಟೋ
9	ನಂಜನಗೂಡು ರಸ್ತೆ ...	ನಂಜನಗೂಡು ಡಿಟೋ
10	ಡಿಟೋ ...	ಹಾಲಿ ಉಕ್ಕಡದ ಬಳಿ ವಿಧಾಯುಕ ಮಾಡಿರುವಂತೆ ನಾಚನಹಳ್ಳಿ,
11	ಮಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ.
12	ಹೈಸರಾಯಿ ರಸ್ತೆ ...	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜಾಬಿಲಿ ರಸ್ತೆ ...	ಕುಕ್ಕನಹಳ್ಳಿ ಉಕ್ಕಡ.
15	ಇಲವಾಲದ ರಸ್ತೆ ...	ಶ್ರೀರಾಂಪೇಟೆ ಡಿಟೋ

ಬಿ. ಷೆಡ್ಯೂಲ್.

ನಂಬರ್.	ತಖ್ತೀಲು.	ದರ. ರೂ.	ಆ.	ಪೈ.
1	ಸ್ಪ್ರಿಂಗ್ ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ...	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ ...	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ ...	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ...	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತ ಲೂ ಮೀರಿದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ ...	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ ...	0	8	0
10	ಡಿಟೋ ಒಂಟೆ 1ಕ್ಕೆ ...	0	1	0

ಜಿ. ಹನುಮಂತರಾವ್, ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

[ನಂ. 42.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ॥ 16, ಸನ್ 1907.

II ನೆ ಭಾಗ

ಇಂಡ್ಯ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 19-20ನೆ ಏಪ್ರಲ್ 1907.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಟಿ. ನರಸೀಪುರದ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು (283) ಫೈನಲ್ ಟೈಟಲ್ ಡೀಡ್ ಯಾನೆ ಖಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

(2) ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನು ತೆಗೆದುಕೊಳ್ಳುವ ಬಗ್ಗೆ ಸದರಿ ಇನಾಂದಾರರು ಅರ್ಜಿ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

(3) ಸದರಿ ಚಿಲ್ಲರೆ ಇನಾಂಗಳ ಬಗ್ಗೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರ್ಯಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟ್ಲಮೆಂಟ್ಸ್ ಇನ್ ಮೈಸೂರು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮಾ, ತಾರೀಖು 11ನೆ ಏಪ್ರೈಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚಾಬೀನಾವನ್ನು ಸದರಿ ಡಿಪೋಗಳ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ಸಲೆ ಅಡಿ.		ಷರಾ.
				ನಂಬರ.	ಅಡಿ.	
1	ಮೈಸೂರು ಉಡಿ ಯಾರ್ಡು	13—5—07	ಸಾಗ್ವಾನಿ ನಾಟಾ ..	550	16,000	[illegible]
			ಡಿಟೋ ತುಂಡು ...	600	6,000	
			ಹೊನ್ನೆ ನಾಟಾ ...	70	2,000	
			ಡಿಟೋ ತುಂಡುಗಳು ..	45	500	
			ಮತ್ತಿ ನಾಟಾ ...	90	2,500	
			ಡಿಟೋ ತುಂಡುಗಳು ...	50	500	
2	ನಂಜನಗೂಡು ಡಿಪೋ.	14—5—07	ಸಾಗ್ವಾನಿನಾಟಾ ...	80	2,000	
			ಡಿಟೋ ತುಂಡುಗಳು ...	50	500	
			ಹೊನ್ನೆ ನಾಟಾ ...	60	2,000	
			ಡಿಟೋ ತುಂಡುಗಳು ...	60	500	
			ಮತ್ತಿ ನಾಟಾ ...	10	300	
			ಡಿಟೋ ತುಂಡುಗಳು ...	25	300	

ಹರಾಜು ಷರತ್ತುಗಳು.

1. ಚಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲು ಮಾಡಲಾಗುತ್ತೆ.

ನೋಟಿಸ.

ತಾರೀಖು 25ನೆ ಏಪ್ರೈಲ್ 1907.

ಈ ಕೆಳಗೆ ನಮೂದಿರತಕ್ಕ ತರಹೇದ ಮರವು ಮೈಸೂರು ಡಿಸ್ಟ್ರಿಕ್ಟು ಕಾಕನಕೋಟೆ ರೇಂಜು ಮೇಟಿಕುಪ್ಪೆ ಫಾರೆಸ್ಟು ಸುಂಕದಕಟ್ಟೆ ಬಳಿ ಬಿದ್ದಿರುತ್ತದೆ. ಇದಕ್ಕೆ ವಾರಸುದಾರ್‍ರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ವಾರ್‍ಸು ಹಾಜರು ಮಾಡಬೇಕು. ತಪ್ಪಿದಲ್ಲಿ ಈ ಮರವು ಸರ್ಕಾರೀದೆಂತ ಭಾವಿಸಿ ಹರಾಜು ಮಾಡಲಾಗುತ್ತೆ. ಅನಂತರ ಬರತಕ್ಕ ವಾರಸುಗಳಿಗೆ ಗಮನಕೊಡಲು ಆಗುವದಿಲ್ಲ.

ತರಹೆ.

ಸಾಗುವಾನಿ ತುಂಡುಗಳು.

ನಂ.		ಸಲೆ ಅಡಿ.
1	..	1—10—11
2	..	1—6—2
3	..	9—9—2
4	...	8—0—9
5	...	12—1—6
6	...	1—4—0
		34—8—6

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ತಂಗಡಿ ಮತ್ತು ಕಕ್ಕೆ ಚಕ್ಕೆ—ಇಸ್ತಿಹಾರು, ತಾರೀಖು 24ನೆ ಏಪ್ರಿಲ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಮತ್ತು ಸ್ಟೇಟ ಫಾರೆಸ್ಟುಗಳಲ್ಲಿನ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಮೇ ತಾರೀಖು 30ರ ವರಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರು.	ತಾಲ್ಲೂಕು ಅಥವಾ ಸ್ಟೇಟ ಫಾರೆಸ್ಟ.	ಜಮಾಯಿಸತಕ್ಕ ಕಾಲ.	ಷರಾ.
1	ಹಿರಿಯೂರು ತಾಲ್ಲೂಕು	1907ನೆ ಜುಲೈ ಗುರ್ರು ಲಾಗಾಯಿತು 1909ನೆ ಜೂನ ಆಖೈರು ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಧನಲು ಈ ಹರಾಜಿಗೆ ಸೇರುವದಿಲ್ಲ.
2	ಚಳ್ಳಕೆರೆ ತಾಲ್ಲೂಕು ...		ಆದರೆ ಅಮೃತಮಹಲ್ ಕಾವಲು ಮತ್ತು ಆಕಾರಕಂಡ ಸರ್ಕಾರಿ ಬಂಜರು ಆಕಾರ ಕಾಣದ ಸರ್ಕಾರಿ ಬಂಜರು ಗೋಮಾಳ ಈ ಜಮೀನುಗಳಲ್ಲಿರುವ ಚಕ್ಕೆಯು ಕಂಟ್ರಾಕ್ಟಿಗೆ ಒಳಪಟ್ಟು ಇರುತ್ತೆ.
3	ಹೊಳಲಕೆರೆ ತಾಲ್ಲೂಕು ಗರ್ಗ್ಗ ಕಾವಲು ಸಹಾ.		
4	ದಾವಣಗೆರೆ ತಾಲ್ಲೂಕು ...		
5	ಮೊಳಕಾಲ್ಮೂರು ತಾ|| ಮತ್ತು— (1) ಬಾಂಡರಾವಿ ... (2) ಕೃಷ್ಣರಾಜಪುರ ... (3) ಕಮರಾ ಕಾವಲು ... (4) ಹಿರೀ ಅಡವಿ ... ಸ್ಟೇಟ ಫಾರೆಸ್ಟುಗಳು ಸಹ ...		
6	ಹೊಸದುರ್ಗ ತಾಲ್ಲೂಕು ಕುದರೆಕಣಿವೆ ಸ್ಟೇಟ ಫಾರೆಸ್ಟ ಸಹ.		
7	ಜಗಲೂರು ತಾಲ್ಲೂಕು ರಂಗ್ಯನದುರ್ಗ—ಅಣಬೂರು ಸ್ಟೇಟ ಫಾರೆಸ್ಟುಗಳು ಸಹ.		
8	ಚಿತ್ರದುರ್ಗ ತಾಲ್ಲೂಕು.		
9	ಹರಿಹರ-ಮಲೆಬೆನ್ನೂರು ಸ್ಟೇಟ ಫಾರೆಸ್ಟು ಸಹ.		
10	ಜೋಗಿಮಟ್ಟಿ ಸ್ಟೇಟ ಫಾರೆಸ್ಟು		
11	ನಿರುಥಡಿ ಡಿಟೋ		
12	ಜಾನಕಲ್ಲು ಡಿಟೋ ...		
13	ದೇವರಗುಡ್ಡ ಡಿಟೋ ...		
14	ಮಾರಿಕಣಿವೆ ಡಿಟೋ ...		
15	ಲಕ್ಕಿಹಳ್ಳಿ ಡಿಟೋ ...		

(2) ತಾಲ್ಲೂಕು ಅಥವಾ ಫಾರೆಸ್ಟು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ ಪ್ರತಿ ತಾಲ್ಲೂಕು ಅಥವಾ ಫಾರೆಸ್ಟಿನ ಸವಾಲಿಗೋಸ್ಕರ (100) ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್ಷೂರ್ ಮಾಡಿ ಲಿಫಾಫೇ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಅಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇಲೆ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಚಿತ್ರದುರ್ಗ ಡಿಸ್ಟ್ರಿಕ್ಟ ಆಫೀಸಿನಲ್ಲಿ 1907ನೆ ಮೇ 30ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ ಕಮಿಷನರ ಸಾಹೇಬರವರು ಸೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ ಮಾಡಲ್ಪಡುವದು.

(6A) ಪ್ರತಿ ದರಖಾಸ್ತುದಾರನು ದರಖಾಸ್ತಿನಲ್ಲಿ ತನ್ನ ಸರಿಯಾದ ಮೇಲು ವಿಳಾಸವನ್ನು ಬರೆಯಬೇಕು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಕೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದು ಮಾಡಿ ಕೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ಮಂಜೂರಾದ ಇಜಾರೆ ಹಕ್ಕನ್ನು ತಾವೇ ಖುದ್ದಾಗಿ ರೂಢಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ಶೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆ ಮಂಜೂರಾದ 3 ದಿವಸಗಳಲ್ಲಿ ಇಜಾರೆದಾರನು ಇದರಲ್ಲಿ ನಮೂದಿರುವ ಷರತ್ತುಗಳಂತೆ ನಡೆಯಲು ಬದ್ಧನಾಗಿರುತ್ತೇನಂತ ಒಂದು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಮೊದಲೇ ಕೊಟ್ಟ ಹಣವನ್ನು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಲಾಗುತ್ತೆ.

(11) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಸಮವಾದ ಮೂರು ಕಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯನ್ನು ಕೊಡಬೇಕು. ಯಾವ ಕಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜವಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಕಿಸ್ತು	...	30ನೆ ಸೆಪ್ಟಂಬರ 1907.
2ನೆ ಕಿಸ್ತು	...	31ನೆ ಮಾರ್ಚಿ 1908.
3ನೆ ಕಿಸ್ತು	...	30ನೆ ಸೆಪ್ಟಂಬರ 1908.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜವಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾಮಗ್ರಿಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಲೆ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1909ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜವಾವಣಿ ಮಾಡಿ ದಾಸ್ತಾನು ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಿಸಿರುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರೆಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ ಸಾಹೇಬರು (1,000) ರೂಪಾಯಿ ವರಿವಿಗೂ ಜುಲ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಎಂ. ಚಂಗಯ್ಯ ಚೆಟ್ಟಿ,

ಡೆಪ್ಯುಟಿ ಕಮಿಷನರ, ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 10ನೇ ಮೇ 1907, ಹಾಸನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಂಡ ಡಿಪೋಗಳಲ್ಲಿ ಫಾರೆಸ್ಟು ಪಸಾರೆ ಬಾಬು ಗಳನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸ ರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ:—

ನಂಬರ್.	ಡಿಪೋ ಹೆಸರು.	ಹರಾಜು ತಾರೀಖು.	ಜಿನಸಿ ವಿವರ.	ವೊತ್ತ.	ಷರಾ.
				ಮಣ.	
1	ಅರಸೀಕೆರೆ ..	10—6—07	ಅಳಲೇಕಾಯಿ	2,000	ಹೆಚ್ಚು ಕಡಮೆ
2	ಹಾಸನ ..	12—6—07	ಡಿಟೋ ..	500	ಡಿಟೋ
			ಯಾಲಕ್ಕಿ	$2\frac{1}{4}$	ಡಿಟೋ
			ಮರದೆಸ್ಕ್ಣ	$\frac{1}{2}$	ಡಿಟೋ
3	ಅರ್ಕಲಗೂಡು ..	15—6—07	ಅಳಲೇಕಾಯಿ	180	ಡಿಟೋ
			ತಂಗಡಿಚಕ್ಕೆ	2	ಡಿಟೋ

ಹರಾಜು ಷರತ್ತುಗಳು.

1. ಖುದ ದರಖಾಸ್ತುದಾರನು ಹರಾಜು ಖೈದಾದ ವಡನೆ ಹರಾಜು ವೊಬಲಗು ಪೈಕಿ ಶೇಕಡ 25ರಂತೆ ಆಗುವ ವೊಬಲಗ ನ್ನು ಹತ್ತರವಿರುವ ಖಜಾನೆಗೆ ಕಟ್ಟಿ ಸದರೀ ಟ್ರೆಜರಿ ರಶೀತಿಯನ್ನು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಲ್ಲಿ ಹಾಜರ್ ಮಾಡಬೇಕು; ತಪ್ಪಿದಲ್ಲಿ ಮಾಲನ್ನು ದುಸರೇ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಪರಂತು ಫಾಯಿ ದೆ ಆದಲ್ಲಿ ಅದರಲ್ಲಿ ಅವನಿಗೆ ಹಕ್ಕು ವುಂಟಾಗಲಾರದು.

2. ಖರೀದಿ ವೊಬಲಗು ಪೈಕಿ ಉಳಿದ ವೊಬಲಗನ್ನು ಹರಾಜು ತಾರೀಖು ಲಾಗಾಯಿತು (15) ಹದಿನೈದು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಟ್ಟು ವೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿ ಕೊಳ್ಳಲ್ಪಡುತ್ತೆ. ಮತ್ತು ಬಾಬನ್ನು ಬಂದನೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರೆ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಬಾಬಿನ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಬಾಬನ್ನು ಸಾಗಿಸು ವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳ ಮೇಲ್ಪಟ್ಟು ಬಾಬುಗಳನ್ನು ಡಿಪೋದಿಂದ ಸಾಗಿಸ ದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಮಣ ಒಂದಕ್ಕೆ ತಿಂಗಳು ಒಂದಕ್ಕೆ ಆರು ಪೈ ಮೇರೆ ಡಿಪೋ ಬಾಡಿಗೆ ವಸೂಲ್ ಮಾ ಡಲ್ಪಡುತ್ತೆ. ಮಾಲ್ ಸಂರಕ್ಷಣೆಗೆ ಸರ್ಕಾರದವರು ನ್ಯಾಯವಾದ ಏರ್ಪಾಡನ್ನು ಮೇಲ್ಕಂಡ ವಾಯಿದೆ ಕಳದ ನಂತರವು ಮಾಡಿಯ್ಯು ಮಾಲು ವಹಿಸಿಕೊಳ್ಳುವಾಗ ಅದು ಯಾವ ಸ್ಥಿತೀಲಿ ಇರುತ್ತೋ ಆ ಸ್ಥಿತೀಲಿ ಅದನ್ನು ವಹಿಸಿಕೊಳ್ಳುವದು ಹರಾಜುದಾರನ ಕರ್ತ ವ್ಯವಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಹಾಸನ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 27ನೆ ಏಪ್ರಿಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹೆಗ್ಗನಹಳ್ಳಿ ಎಂಬ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 176ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರಿಲ್ 1907.

ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹೆಗ್ಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸ ಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 180ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಕೊಟ್ಟಿಗೆ ತಿಮ್ಮನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 181ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಯರ್ರಪ್ಪನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ಮರ್ಕುಂ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 177ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಮಾರಗೊಂಡಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 178ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಸೋಲೂರು ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 182ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಕಾಮೇನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಜೂನ್ ಮಾಹೆ 10 ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 180ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಚಾಜೇನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಚಾಜೇನಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 184ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಚಿಕ್ಕಗೊಲ್ಲಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಸದರೀ ಚಿಕ್ಕಗೊಲ್ಲಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್ಕುಂ 19ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 183ನೆ ನಂಬರ್ ಪೇಜು ನೋಡತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 10ನೆ ಮಾಹೆ ಮೇ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಹೆಚ್ಚುದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ, ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇ ಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೆ ಸೆಕ್ಷನ್ ಅನುಸಾರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಲ್ತವಿ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜ್ ಖಾಯಂ ಮಾಡಲ್ಪಟ್ಟ ಕೂಡಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲಿನಲ್ಲಿ ಆಗುವ ಆಖೈರು ಹುಕುಮಿಗೆ ಸದ್ದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.			[illegible]			[illegible]			ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ, ಅಂತಾ ಸರಕಾರದ ಕಂದಾಯದ ಬಾಕಿ.			ಹರಾಜು ತಾರೀಖು ಮತ್ತು ಸ್ಥಳ.
						ಎ.	ಗು.	ರೂ.	ಅ.		ರೂ.	ಅ.	ಪೈ.	ರೂ.	ಅ.	ಪೈ.	
ಕೋಲಾರ.	ಕೋಲಾರ	ಹೋಳೂರು	ಜೋಡಿ ಬ್ಯಾಲಹಳ್ಳಿ.	ತಿಂಕಟೆಲ್ ಡಾಗ್ರಿ ಹಗ್ಸ್	ಪರಂಪೋಕು	155	13	4	12		185	5	2	221	10	0	19ನೆ ಜೂನ್ 1907ನೆ ಇಸವಿ ಕೋಲಾರ ತಾಲ್ಲೂಕು ಕಚೇರಿ.
					ಖುಷ್ಕಿ ...	243	9	346	12								
					ತರಿ ...	20	38	76	6								
					ಬಾಗಾಯತು	1	12	5	0								
								432	14								
					ಗ್ರಾಮಕ್ಕೆ ಚಕ್ಕುಬಂದಿ. ಪೂರ್ವಕ್ಕೆ—ತಿಪ್ಪಸಂದ್ರ. ಪಶ್ಚಿಮಕ್ಕೆ—ಪಾರೆಹೊಸಹಳ್ಳಿ. ಉತ್ತರಕ್ಕೆ—ಮತ್ತಿಕುಂಟೆ. ದಕ್ಷಿಣಕ್ಕೆ—ಪಾರೆ ಹೊಸಹಳ್ಳಿ.												

ಸಿ. ಶ್ರೀಕಂಠೇಶ್ವರ ಐಯ್ಯರ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 18ನೆ ಏಪ್ರಲ 1907.

8—11—1906ನೆ ತಾರೀಖಿನ Fl: 3304-6—S. R. 146—05—7ನೆ ನಂಬರ ಗೌರ್ನಮೆಂಟ ಆರ್ಡರ ಅನುಸರಿಸಿ ಈ ಮೂಲಕ ತಿಳಿಯಪಡಿಸುವದೇನಂದರೆ—

ಡಿಸ್ಟ್ರಿಕ್ಟು ಮಜಕೂರು ಇನಾಂ ವಗೈರೆ ಗ್ರಾಮಗಳ ಕೇಂದಿ ಹುಟ್ಟುವಳಿ ಹಕೀಯತ್ತು ತಹಲವರಿಗೂ ಗೌರ್ನಮೆಂಟನಿಂದ ಸ್ಥಿರಪಡಿಸಲ್ಪಡದೇ ಇರುವ ಗ್ರಾಮಗಳಿಗೆ ಸಮ್ಮಂಧಪಟ್ಟವರ ಹಕ್ಕಿನ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟು ಎಕ್ಸೈಸ ಕಮಿಷನರವರು 10—6—1907ನೆ ತಾರೀಖಿನ ದಿವಸ ಮೈಸೂರಲ್ಲಿ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರ.

ಆಯಾಯ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಮೇಲ್ಕಂಡ ಆಫೀಸರ ಬಳಿ ಸದರಿ ತಾರೀಖಿನಲ್ಲಿ ಖುದ್ದಾಗಲೀ ಅಥವಾ ಕ್ರಮವಾಗಿ ಅಪ್ಪಣೆ ಪಡದ ಏಜಂಟರ ಮೂಲಕವಾಗಲೀ ತಮ್ಮಲ್ಲಿರತಕ್ಕ ಸನ್ನದು, ಇನಾಂ ಟೈಟಲಡೀಡು, ಮುಚ್ಚಳಿಕೆ ವಗೈರೆ ಸಮಸ್ತ ದಾಖಲೆಗಳನ್ನೂ ಹಾಜರ್ಪಡಿಸತಕ್ಕದ್ದು. ಹಾಗೆ ಮಾಡದೇ ತಪ್ಪಿದಲ್ಲಿ ರೂಲ್ಸ ಮೇರೆ ಕ್ರಮ ಜರಿಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲು ಆಗಲಾರದೆಂದು ಪ್ರಸಿದ್ಧಪಡಿಸಿದೆ.

ಇಸ್ತಿಹಾರನಾಮೆ.

ತಾರೀಖು 30ನೆ ಏಪ್ರಿಲ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಮಾಚವಳಲು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1907ನೆ ಜೂನ ಮಾಹೆ 25ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮರುಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 185ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ತೆರಕಣಾಂಬಿ ಮಾರ್ಕೆಟ್ಟಿನಲ್ಲಿ 1907ನೆ ಜುಲೈ 1ರ ಲಾಗಾಯಿತು 1908ನೆ ಜೂನ ಆಖೈರ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಗುಂಡ್ಲುಪೇಟೆ ತಾಲ್ಲೂಕು ಕಚೇರಿ ಬಳಿ ಅಸಿಸ್ಟೆಂಟ್ ಕಮಿಷನರವರಿಂದ 1907ನೆ ಜೂನ 4ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೆ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ವಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನ ವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀ ಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನೌಕರರೇ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	....	...	...	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.
ಎತ್ತಿನ ಗಾಡಿ	....	...	...	ಪ್ರತಿಯೊಂದಕ್ಕೆ 2 ಆಣೆ.
ಬಸ್ಕರ ಗಾಡಿ	...	...	...	,, 1 ,,
ಎತ್ತಿನ ಬೋಜಾ	...	...	...	,, 6 ಪೈ.
ತಲೆ ಬೋಜಾ	...	...	...	,, 3 ,,

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನ ಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ತಾರೀಖು ನೆ ಮೇ 1907.

1907ನೆ ಜುಲೈ ಮಾಹೆ ಗುರ್ರೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದ ಕೂಡಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜೆಟ್ಟು ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜೆಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜೆಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆಯೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜು ಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಶೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕಗಳ ಲೆಖ್ಖಗಳನ್ನು ಖರಾರ್ವಾಕಾವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗೌರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮರ್ಕುಂ 274ನೆ ನಂಬರು ನೋಟಿಫಿಕೇಷನ್ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್ A.

ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು-ಮಂಗಳೂರು ರಸ್ತೆ ಸಿದ್ಧಾಪುರದ ಬ್ರ್ಯಾಂಚು ರಸ್ತೆ.	ಪೆರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ.	}	}
2. ಹಾಸನ-ಪೆರ್ಯಾಪಟ್ಟಣ-ಕನ್ನಾನೂರು ರಸ್ತೆ	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ.	ಹುಣಸೂರು ತಾಲ್ಲೂಕು ಕಚೇರಿ.	1907ನೆ ಮೇ ತಾರೀಖು 3ರಲ್ಲು.
3. ಮದರಾಸು-ಕನ್ನಾನೂರು ರಸ್ತೆ	ಪಂಜವಳ್ಳಿ	}	}
4. ಮೈಸೂರು-ಮಾನಂದವಾಡಿ ರಸ್ತೆ	ಕೊಲ್ಲೇಗೌಡನಹಳ್ಳಿ	ಹೆಗ್ಗಡದೇವನ ಕೋಟೆ ತಾಲ್ಲೂಕ್ ಕಚೇರಿ.	ಡಿಟೋ ಜೂನ್ ತಾ॥ 1ರಲ್ಲು
5. ಗುಂಡ್ಲು ಪೇಟೆ-ಸುಲ್ತಾನ್ ಬತೇರಿ ರಸ್ತೆ	ಮೂಲೆಹೊಳೆ	} ಗುಂಡ್ಲು ಪೇಟೆ ತಾಲ್ಲೂಕ್ ಕಚೇರಿ.	ಡಿಟೋ 4ರಲ್ಲು
6. ಬೆಂಗಳೂರು-ನೀಲಗಿರಿ ರಸ್ತೆ.	ಬಂಡೀಪುರ	}	
7. ನಂಜನಗೂಡು-ಹಾಸನೂರು ಘಾಟ್ ರಸ್ತೆ	131ನೆ ಮೈಲಿ 1ನೆ ಫರ್ಲಾಂಗ್.	ಚಾಮರಾಜನಗರ ತಾಲ್ಲೂಕ್ ಕಚೇರಿ.	ಡಿಟೋ 6ರಲ್ಲು.

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.		
	ರೂ.	ಆ.	ಪೈ.
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0
ಡಿಟೋ ಇಲ್ಲದೆ ಇರುವ ಡಿಟೋ ...	0	6	0
ಡಿಟೋ ಇರುವ ಎರಡು ಡಿಟೋ ...	0	8	0
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡು ಚಕ್ರದ ಗಾಡಿ ...	0	4	0
ಗಾಡಿ ಬೋಜಾ ಸಹಿತವಾದ್ದು ...	0	4	0
ಡಿಟೋ ಇಲ್ಲದ್ದು ...	0	2	0
ಆನೆ ...	1	0	0
ಒಂಟೆ ...	0	4	0
ಕುದುರೆ ಸವಾರನುಳ್ಳದ್ದು ...	0	1	6
ಡಿಟೋ ಸವಾರನಿಲ್ಲದ್ದು ...	0	0	9
ಕುದುರೆ ಮರಿ, ಸವಾರನುಳ್ಳದ್ದು ...	0	0	9
ಡಿಟೋ ಸವಾರನಿಲ್ಲದ್ದು ...	0	0	6
ಎತ್ತು ಬೋಜಾ ವುಳ್ಳದ್ದು ...	0	1	0
ಡಿಟೋ ಇಲ್ಲದ್ದು ...	0	0	6
ಕತ್ತೆ ಬೋಜಾ ವುಳ್ಳದ್ದು ...	0	0	6
ಡಿಟೋ ಇಲ್ಲದ್ದು ...	0	0	3
ಪಲ್ಲಕ್ಕಿ ...	0	4	0
ಕುರಿ, ಆಡು ಯಾ ಹಂದಿ ...	0	0	1

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಶೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1907ನೆ ಜುಲೈ 1ರ ಲಾಗಾಯಿತು 1908ನೆ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೊಲೀಸ್ ಸ್ಟೇಷನ್ ಬಳಿ ಅಸಿಸ್ಟೆಂಟ್ ಕಮಿಷನರವರಿಂದ 1907ನೆ ಜೂನ್ 11ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್‌ದಾರ್‌ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೆ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನೂ ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಕ್ಕವನ್ನು ಇಟ್ಟಿರಬೇಕು. ಸದರೀ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್‌ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ
ಎತ್ತಿನ ಗಾಡಿ		2 ,,
ಜಟ್ಕಾರ ಗಾಡಿ		1 ,,
ಎತ್ತಿನ ಬೋಜಾ		6 ಪೈ.
ತಲೆ ಬೋಜಾ		3

ನೋಟ್ :—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿಸಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ತಾರೀಖು 7ನೆ ಮೇ, 1907.

1. 1907ನೆ ಜುಲೈ ಮಾಹೇ ಗುರ್ರೇ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಮಾಹೆ 30ರ ವರಿಗೆ ಎಡತೊರೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 28ರಲ್ಲು ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪಷ್ಟವಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ತ್ಯಾವ ದರವನ್ನೇ ಆಗಲಿ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರು ಆದಕೂಡಲೇ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಅಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತಿ ಮಾಡುವ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹ ಹರಾಜು ಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲು ಉತ್ಪತ್ತಿ ಆಗುವ ಮೊಬಲಗನ್ನು ತೋರಿಸುವಂತೆ ಖರಾರ್ಸ್ಸಾಕವಾಗಿ ಲೆಕ್ಕವನ್ನು ಕಂಟ್ರಾಕ್ಟುದಾರರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರು ಅಪೇಕ್ಷಿಸಿದ ಕಾಲದಲ್ಲಿ ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಕ್ಕಗಳನ್ನು ಖರಾರ್ಸ್ಸಾಕವಾಗಿ ಇಡಲು ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮುರ್ಕುಂ 247ನೆ ನಂಬರು ನೋಟಿಫಿಕೇಷನ್ ಜೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ ಆ ರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್.

ನಂ.	ತಪಶೀಲು.	ಬೋಜವುಳ್ಳದ್ದು.			ಬೋಜಯಿಲ್ಲದ್ದು.		
		ರೂ.	ಅ.	ಪೈ.	ರೂ.	ಅ.	ಪೈ.
1	ಪ್ರತಿ ನಾಲ್ಕು ಚಕ್ರದ ಗಾಡಿ	0	8	0	0	4	0
2	,, ಎರಡು ಡಿಟೋ	0	4	0	0	2	0
3	,, ಎಮ್ಮೆ ಅಥವಾ ಎತ್ತು	0	0	6	...		
4	,, ಆನೆ ...	1	0	0	1	0	0
5	,, ಒಂಟೆ	0	8	0	0	8	0
6	,, ಕುದುರೆ ಸವಾರ ಅಥವಾ ಬೋಜ ಉಳ್ಳದ್ದು	0	1	0	...		
7	,, ಡಿಟೋ ಡಿಟೋ ಇಲ್ಲದ್ದು	...			0	1	0
8	,, ಕತ್ತೆ ಸವಾರ ಅಥವಾ ಬೋಜ ಉಳ್ಳದ್ದು ...	0	0	6	...		

ಎಂ. ಕಾಂತರಾಜೆ ಅರಸ್, ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಸೂಳೆಬೈಲು ಇನಾಂ ಗ್ರಾಮದ ನರಸಿಂಹ ದೀಕ್ಷಿತ ವಗೈರೆ ವೃತ್ತಿವಂತರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ ಗ್ರಾಮದಲ್ಲಿ ತಾಲ್ಲೂಕು ಕಚೇರಿ ಬಳಿ 14—6—07ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಈ ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರ ರೂಬರೂ ಹರಾಜು ನಡಿಯಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 145—0—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಮಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಕಟ್ಟಡದ ಹೆಸರು	ಕಟ್ಟಡಗಳು. ಅಂದಾಜು ಕಿಮ್ಮತ್ತು	ಜಮೀನು. ಸರ್ವೆ ನಂಬರ್ ಅಥವಾ ಜಮೀನಿನ ಹೆಸರು	ಜಮೀನು. ಖುಷ್ಕಿ, ತರಿ ಬಾಗಾಯ್ತು ಮುಂತಾದ	ಜಮೀನು. ವಿಸ್ತೀರ್ಣ	ಜಮೀನು. ಕಂದಾಯ	ಅಂದಾಜು ಕಿಮ್ಮತ್ತು	ಸರ್ಕಾರಕ್ಕೆ ಪೂರ್ತಿಯಾಗಿ ಬರಬೇಕಾದ ಕಂದಾಯದ ಮೊಬಲಗು	ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗು
					ರೂ.			ಎ. ಗು.	ರೂ. ಆ. ಪೈ.	ರೂ.	ರೂ.	ರೂ. ಆ. ಪೈ.
ಶಿವಮೊಗ್ಗ	ಶಿವಮೊಗ್ಗ	ಸೂಳೆಬೈಲು ಇನಾಂ ಗ್ರಾಮ	ನರಸಿಂಹ ದೀಕ್ಷಿತ ವಗೈರೆ ವೃತ್ತಿವಂತರು	...	...	ಪೂರಾ ಗ್ರಾಮ.	ಖುಷ್ಕಿ ...	191 32	67 7 10	800	145	273 6 9
							ತರಿ ...	194 15	425 7 0			0 8 0
							ಪರಂಪೋಕು	266 33	16 10 10			ಚಾಲ್ತಿವರೆಗಿನ ಬಡ್ಡಿ ಬರಬೇಕು
								653 0	509 9 8			

ಚತುರ್ಗಡಿ

ಪೂರ್ವಕ್ಕೆ — ಊರಗಡೂರು ಗ್ರಾಮದ ಗಡಿ.
ಪಶ್ಚಿಮಕ್ಕೆ — ತುಂಗಾನದಿ.
ದಕ್ಷಿಣಕ್ಕೆ — ಮತ್ತೂರು ಗಡಿ.
ಉತ್ತರಕ್ಕೆ — ತುಂಗಾನದಿ.
ಈ ಮಧ್ಯೆ ಇರತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಯರಗೆನಹಾಳು ಗ್ರಾಮದ ಜೋಡಿದಾರು ರಂಗಾಭಟ್ಟ, ವಿಠಲೈಯ್ಯ ವಗೈರೇರಿಂದ ಬರಬೇಕಾದ ಜೋಡಿ ವಗೈರೆ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ ಗ್ರಾಮದಲ್ಲಿ ತಾಲ್ಲೂಕು ಕಚೇರಿಬಳಿ 1907ನೆ ಇಸವಿ ಜೂನ್ 14ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ. 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಶಿವಮೊಗ್ಗ ತಾಲ್ಲೂಕು ಅಮಲ್ದಾರು ರೂಬರೂ ಹರಾಜು ನಡಿಯಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 258 ರೂಪಾಯಿ ಆಗಿರುತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್‌ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತ್ತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್‌ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‌ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸ್ಟಾಂಪ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಿಂಮತ್ತು [illegible]	ಜಮೀನು. ನಂಬರ ಅಥವಾ ಹಿಸ್ಸಾನ ನಂಬರು.	ಜಮೀನಿನ ಅಥವಾ ಬೆಳೆ ರೀತಿ.	ವಿಸ್ತೀರ್ಣ.	ಅಕಾರ.	ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಲ್ಲತಕ್ಕ ಕಂದಾಯ ಮೊಬಲಗು.	ಸರಕಾರಕ್ಕೆ ಬರತಕ್ಕ ಬಾಕೀ ಮೊಬಲಗು.
								ಎ. ಗು.	ರೂ. ಆ. ಪೈ.			ರೂ. ಆ. ಪೈ.
ಶಿವಮೊಗ್ಗ	ಶಿವಮೊಗ್ಗ	ಯರಗನಹಾಳು ಇನಾಂ ಗ್ರಾಮ	ರಂಗಭಟ್ಟ, ವಿಠ್ಠಲಯ್ಯ ವಗೈರೆ ಜೋಡಿದಾರು	...	...	ಪೂರಾ ಗ್ರಾಮ	ಪರಂಪೋಕು	1042 37	65 2 10	ರೂ. 800	ರೂ. 258	ರೂ. 1,037 15 8 0
							ತರಿ ...	281 4	591 5 2			
							ಖುಷ್ಕಿ ...	238 23	97 10 4			
								1562 24	754 2 4			

ಈ ಗ್ರಾಮದ ಚತುರ್ಗಡಿ.
ಪೂರ್ವಕ್ಕೆ—ಲಕ್ಕಿಕೊಪ್ಪದ ಗಡಿ.
ಪಶ್ಚಿಮಕ್ಕೆ—ಕಡೋಕಲ್ಲು ಮತ್ತು ಕಾಸ್ಕೂರು ಗ್ರಾಮ ಗಡಿ.
ದಕ್ಷಿಣಕ್ಕೆ—ಹುಬ್ಬಳಿಹಳ್ಳಿ ಗಡಿ.
ಉತ್ತರಕ್ಕೆ—ಕಾಸ್ಕೂರು ಗ್ರಾಮದ ಗಡಿ.
ಈ ಮಧ್ಯೆ ಇರುವದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಅಗ್ರಹಾರ ಜನವಳ್ಳಿ ಜೋಡಿ ವೃತ್ತಿವಂತರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ 1907ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಛಡೆ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಶಿವಮೊಗ್ಗ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂ ಹರಾಜು ನಡೆಯಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಪ್ರಕಾರ 167 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿ ರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು.		ಜಮೀನು.				ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಒಟ್ಟು ಬಾಕಿ ಮೊಬಲಗು.
				ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು	ನಂಬರ್ ಅಥವಾ ಜಮೀನಿನ ಹೆಸರು	ನೀರಾವರಿ, ಖುಷ್ಕಿ ಅಥವಾ ಬಾಗಾಯತು	ವಿಸ್ತೀರ್ಣ.	ಬಿರಾಯ.			
								ಎ. ಗು.	ರೂ. ಆ. ಪೈ.			
ಶಿವಮೊಗ್ಗ	ಹೊಳಲೂರು	ಅಗ್ರಹಾರ ಹೊಳೆ ಜನವಳ್ಳಿ ಜೋಡಿ	ಶ್ರೀ ನಂಜರು ರಂಗನಾಥಪ್ಪ ವಗೈರೆ	...	...	ಪೂರಾ ಗ್ರಾಮ	ಸಾಗುವಳಿ ನಾಲಾಯಕ್.	735 11	45 15 3	ರೂ. 5,000	ರೂ. 167	ರೂ. ಆ. 408 13
							ಖುಷ್ಕಿ ...	815 26	299 15 1			
							ತರಿ	273 4	711 12 6			
							ಬಾಗಾಯಿತು ...	3 27	18 7 3			
								1,827 28	1,076 2 1			

ಈ ಗ್ರಾಮದ ಚತುರ್ಗಡಿ.

ಪೂರ್ವ—ಬೀರನಹಳ್ಳಿ ಗಡಿ ಮತ್ತು ಗೌಡನಾಯ್ಕನಹಳ್ಳಿ ಗಡಿ

ಪಶ್ಚಿಮ—ಪಿಳ್ಳಂಗೇರಿ ಗ್ರಾಮದ ಗಡಿ

ದಕ್ಷಿಣ—ಹಸೂಡಿ ಡಿಟೋ

ಉತ್ತರ—ಜಾವಳ್ಳಿ ಡಿಟೋ

ಈ ಮಧ್ಯೆ ಇರುವ ಗ್ರಾಮ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಬೆಳಗಲು ಇನಾಂ ಗ್ರಾಮದ ಶ್ಯಾಮದೀಕ್ಷಿತರು ವಗ್ಯೆರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಶಿವಮೊಗ್ಗ ಗ್ರಾಮದಲ್ಲಿ ತಾಲ್ಲೂಕು ಕಛೇರಿ ಬಳಿ 14—6—07ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರ ರೊಬರೂ ಹರಾಜು ನಡಿಯಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರೆಗೆ 97—0—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದಹೆಸರು	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನಹೆಸರು.	ಜಮೀನು. ಖುಷ್ಕಿ, ತರೀ, ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕೀ ಮೊಬಲಗು.
					ರೂ.			ಎ. ಗು.	ರೂ. ಆ. ಪೈ.	ರೂ.	ರೂ.	ರೂ. ಆ. ಪೈ.
ಶಿವಮೊಗ್ಗ	ಶಿವಮೊಗ್ಗ	ಬೆಳಗಲು ಇನಾಂ ಗ್ರಾಮ	ಶ್ಯಾಮದೀಕ್ಷಿತರು ವಗ್ಯೆರೇರು	....	...	ಪೂರಾಗ್ರಾಮ.	ಪರಂಪೋಕು.	218 37	13 10 11	300	97	335 5 9
							ತರಿ ...	90 32	150 12 0			0 8 0
							ಖುಷ್ಕಿ ...	61 6	13 3 4			ಚಾಲ್ತಿ ವರಿಗಿನ ಬಡ್ಡಿ ಬರಬೇಕು.
							ಬಗಾಯಿತು.	3 30	17 4 5			
								374 25	194 14 8			

ಚತುರ್ಗಡಿ.
ಪೂರ್ವಕ್ಕೆ—ಶಿದ್ದವ್ಮಾಜಿ ಹೊಸೂರು ಗಡಿ.
ಪಶ್ಚಿಮಕ್ಕೆ—ತುಂಗಾನದಿ ಮತ್ತು ತೀರ್ಥಹಳ್ಳಿ ತಾಲ್ಲೂಕು ಗಡಿ.
ದಕ್ಷಿಣಕ್ಕೆ—ಎಡೇಹಳ್ಳಿ ತಾಲ್ಲೂಕು ಗಡಿ.
ಉತ್ತರಕ್ಕೆ—ತುಂಗಾನದಿ ಮತ್ತು ನೇರಲಿ ಗಡಿ.
ಈ ಮಧ್ಯೆ ಇರತಕ್ಕದ್ದು.

ತಾರೀಖು ನೆ ಮೇ 1907.

ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪ-ಹಿರೇಕೆರೂರು ರೋಡಿನಲ್ಲಿ ವಡಗೆರೆ ಯೆಂಬಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟ ಟೋಲ್ ಗೇಟಿನಲ್ಲಿ 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಆಖೈರು ವರಿವಿಗೆ ಸುಂಕ ವಸೂಲು ಮಾಡುವ ಹಕ್ಕನ್ನು ಡೆಪ್ಯುಟಿ ಕಮಿಷನರವರಿಂದಲಾಗಲಿ ಅಥವಾ ಅವರಿಂದ ಈ ಬಗ್ಯೆ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರಿಂದಲಾಗಲಿ ಶಿಕಾರಿಪುರದ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜೂನ್ ತಿಂಗಳು ತಾರೀಖು ೨ನೆ ದಿನ ಬಹಿರಂಗವಾಗಿ ಹರಾಜು ಹಾಕಿಸಲ್ಪಡುವದು.

2. ಹರಾಜಿನಲ್ಲಿ ಕೊಂಡುಕೊಳ್ಳತಕ್ಕವರು ಈ ಕೆಳಗಿನ ಷೆಡ್ಯೂಲಿನಲ್ಲಿ ಕಾಣಿಸಿರುವ ದರಗಳ ಪ್ರಕಾರ ಮಾತ್ರ ಸುಂಕವನ್ನು ವಸೂಲು ಮಾಡತಕ್ಕದ್ದು. ಅದಕ್ಕಿಂತಲು ಹೆಚ್ಚಿನ ದರ ವಸೂಲು ಮಾಡಕೂಡದು. ಹರಾಜುದಾರರು 1876ನೆ ಇಸವಿ ನವೆಂಬರ್ ಮಾಹೆ 4ನೆ ತಾರೀಖಿನ ಲೇಟ್ ಚೀಫ್ ಕಮಿಷನರವರಿಂದ ಫಾಯಿಷ್ ಆದ ನೋಟಿಫಿಕೇಷನ್ನಲ್ಲಿ ಕಾಣುವ ಷರತ್ತುಗಳಿಗೆ ವಳಪಟ್ಟಿರತಕ್ಕದ್ದು. ಸರಕಾರಿ ಕೆಲಸದ ಮೇಲೆ ಪ್ರಯಾಣಮಾಡುವ ನೌಕರರು ಮತ್ತು ತತ್ಸಂಬಂಧವಾದ ಎಲ್ಲಾ ಸರಂಜಾಮುಗಳು ಸಹಾ ಸುಂಕದ ತೆರಿಗೆಯಿಂದ ವಿನಾಯಿಸಲ್ಪಟ್ಟು ಇರುತ್ತೆ.

೩. ಯಾವ ಹೆಚ್ಚಿನ ಸವಾಲ್ ಆಗಲಿ ಯಾ ಇತರ ಯಾವ ಸವಾಲ್ ಆಗಲಿ ತಿರಸ್ಕರಿಸುವ ಅಥವಾ ಅಂಗೀಕರಿಸುವ ಸ್ವತಂತ್ರವನ್ನು ಡೆಪ್ಯುಟಿ ಕಮಿಷನರವರು ಇಟ್ಟುಕೊಂಡಿರುತ್ತಾರೆ.

4. ಹರಾಜುದಾರರಿಂದ ಹರಾಜು ಮೊಬಲಗನ್ನು ಹನ್ನೆರಡು ಸಮಕಂತುಗಳಾಗಿ ವಸೂಲು ಮಾಡಲ್ಪಡುವದು. ಆ ಪೈಕಿ ಮೂರು ಕಂತುಗಳ ಹಣವನ್ನು ಹರಾಜು ಕೈದಾದ ಕೂಡಲೆ ಮುಂಗಡವಾಗಿ ವಸೂಲು ಕೊಡಬೇಕು. ಈ ಮೊಬಲಗು ಡಿಪಾಜಿಟ್ಟಿನಲ್ಲಿ ಇಡಲ್ಪಟ್ಟು ಆಖೈರು ಮೂರು ಕಂತುಗಳಿಗೋಸ್ಕರ ಉಪಯೋಗಿಸಲ್ಪಡುವದು. ಮಿಕ್ಕ ಒಂಭತ್ತು ಕಂತುಗಳನ್ನು 1907ನೆ ಜುಲೈ ತಿಂಗಳು ತಾರೀಖು 20ರ ಲಾಗಾಯಿತು ಒಂಭತ್ತು ತಿಂಗಳುಗಳಲ್ಲಿ ಪ್ರತಿ ತಿಂಗಳು ತಾರೀಖು 20ಕ್ಕೆ ಸರಿಯಾಗಿ ವಸೂಲು ಕೊಡತಕ್ಕದ್ದು. ಹರಾಜುದಾರನು ಪ್ರತಿ ತಿಂಗಳ ಕಂತಿನ ಹಣವನ್ನು ಕ್ರಮವಾಗಿ ವಸೂಲು ಕೊಡುವ ಬಗ್ಯೆ ಜಾಮೀನ್ ಕೊಡತಕ್ಕದ್ದು.

5. ಹರಾಜು ಕೈದಾದ ವಡನೆಯೇ ಡಿಪಾಜಿಟ್ಟು ಮೊಬಲಗು ಹಾಜರ್ಮಾಡದೆ ಮತ್ತು ಜಾಮೀನ್ ಕೊಡದೆ ತಪ್ಪಿದರೆ ಮೇಲ್ಕಂಡ ಹಕ್ಕು ಪುನಹ ಹರಾಜು ಮಾಡಿಸಲ್ಪಡುವದಲ್ಲದೆ ಕಂ ಭರ್ತಿ ಹಣವಿಗೆ ಮೊದಲು ಹರಾಜುದಾರನನ್ನು ಗುರಿಪಡಿಸುತ್ತೆ. ಕಂತಿನ ಹಣ ವಾಯಿದೆ ನಿಶಿ ವಸೂಲು ಕೊಡಲು ತಪ್ಪಿದರೆ ವಸೂಲು ತಾರೀಖು ವರಿವಿಗೆ ರೂಪಾಯಿ ಒಂದರ ಮಾಹೇಯಾನಾ ಒಂದು ಪೈ ಪ್ರಕಾರ ಬಡ್ಡಿ ವಸೂಲು ಮಾಡಲ್ಪಡುವದಲ್ಲದೆ ಮೇಲ್ಕಂಡ ಹಕ್ಕು ಡೆಪ್ಯುಟಿ ಕಮಿಷನರವರ ಮುನಾಸಬ್ ಪ್ರಕಾರ ಪುನಹ ಹರಾಜು ಮಾಡಿಸಲ್ಪಟ್ಟು ಕಂ ಭರ್ತಿ ಹಣವನ್ನು ಹರಾಜುದಾರನಿಂದಾಗಲಿ ಯಾ ಜಾಮೀನ್‌ದಾರನಿಂದಾಗಲಿ ವಸೂಲು ಮಾಡಲ್ಪಡುವದು.

6. ಹರಾಜುದಾರನು ಹರಾಜು ಮೊಬಲಗು ವಿನಹ ಟ್ರೆಜರಿಗೆ ಜಮಾ ಆಗುವ ಮೊಬಲಗಿನ ಮೇಲೆ ರೂಪಾಯಿ ಒಂದರ ಒಂದಾಣೆಯಂತೆ ಲೋಕಲ್ ಸೆಸ್ ಸಹ ವಸೂಲು ಕೊಡಲು ಬದ್ಧನಾಗಿರತಕ್ಕದ್ದು.

7. ಹರಾಜುದಾರನು ಪ್ರತಿ ದಿನವೂ ಕರಾರುಪ್ರಾಕಾ ವಸೂಲು ಮಾಡಿದ ಮೊಬಲಗನ್ನು ತೋರಿಸುವ ಬಗ್ಯೆ ಲೆಖ್ಖವನ್ನು ಇಡಲು ಸಹ ಬದ್ಧನಾಗಿರುತ್ತಾನೆ. ಈ ಲೆಖ್ಖವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫಿಸರರ ತನಿಖೆಗೆ ಒಳಪಟ್ಟಿರತಕ್ಕದ್ದು.

ನಂಬರು	ಸುಂಕ ತೆರಲು ಪಾತ್ರವಾಗಿರುವ ಗಾಡಿಗಳ ಮತ್ತು ಜಾನುವಾರಗಳ ತಪ್ಸೀಲ.	ದರ.		
		ರೂ.	ಅ.	ಪೈ.
1	ನಾಲ್ಕು ಗಾಲಿಯ ಪ್ರತಿ ಒಂದು ಗಾಡಿಯು ಬಗ್ಯೆ ...	0	8	0
2	ಒಂದು ಜಾನುವಾರದ 2 ಗಾಲಿಯು ಪ್ರತಿ ಒಂದು ಗಾಡಿಯು ಬಗ್ಯೆ ...	0	2	0
3	ಎರಡು ಜಾನುವಾರುಗಳ ಎರಡು ಗಾಡಿಯು ತುಂಬಿದ್ದರೆ ಪ್ರತಿ ಒಂದರ ಬಗ್ಯೆ ...	0	4	0
4	ಡಿಟೋ ತುಂಬಿದ್ದಲ್ಲದ ಪ್ರತಿ ಒಂದರ ಬಗ್ಯೆ ...	0	2	0
5	ನಾಲ್ಕು ಡಿಟೋ ತುಂಬಿದ್ದರೆ ...	0	6	0
6	ಡಿಟೋ ಡಿಟೋ ತುಂಬಿರದಿದ್ದರೆ ...	0	3	0
7	ಆರು ಜಾನುವಾರುಗಳ ಗಾಲಿಯ ಗಾಡಿಯು ತುಂಬಿದ್ದರೆ ಪ್ರತಿ ಒಂದು ಗಾಡಿಯು ಬಗ್ಯೆ ...	0	8	0
8	ಡಿಟೋ ತುಂಬಿರದಿದ್ದರೆ ...	0	4	0
9	ಎಂಟು ಅಥವಾ ಹೆಚ್ಚು ಡಿಟೋ ತುಂಬಿದ್ದರೆ ...	1	0	0
10	ಡಿಟೋ ತುಂಬಿರದಿದ್ದರೆ ...	0	8	0
11	ಪ್ರತಿ ಒಂದು ಆನೆಗೆ ...	1	0	0
12	ವಜ್ಜೆ ಹೇರಿದ ವಂಟಿ, ಕುದುರೆ, ತಟ್ಟು, ಹೇಸರಕತ್ತೆ, ಕೋಣ ಮತ್ತು ಎತ್ತಿನ ಬಗ್ಯೆ ...	0	0	6
13	ವಜ್ಜೆ ಹೇರದೆ ಇದ್ದ ಡಿಟೋ ಡಿಟೋ ...	0	0	6
14	ಡಿಟೋ ಅಥವಾ ಮನುಷ್ಯನು ಕೂತಿದ್ದ ಕತ್ತೆಯ ಬಗ್ಯೆ ...	0	0	3
15	ಡಿಟೋ ಡಿಟೋ ಕುಳಿತಿಲ್ಲದ ಡಿಟೋ ...	0	0	3
16	ಆಡು, ಕುರಿ, ಹಂದಿ, ಈ ಪ್ರತಿ ಒಂದರ ಬಗ್ಯೆ ...	0	0	1
17	ಡಿಟೋ ಗುಂಪು ಅಥವಾ ತಾಂಡೆ ಇವುಗಳ ಪ್ರತಿ ಒಂದು ಜೋಡಿಯು ಬಗ್ಯೆ ...	0	0	1
18	ನಾಲ್ಕು ಅಥವಾ ಹೆಚ್ಚು ಜನರು ಹೊತ್ತ ಪ್ರತಿ ಒಂದು ಪಲ್ಲಕ್ಕಿ, ಟಾಂಗಾ, ಡೋಲಿ, ತೊಟ್ಟಿಲು ಬಗ್ಯೆ.	0	4	0
19	ನಾಲ್ಕು ಜನರಿಗಿಂತಲು ಕಡಿಮೆ ಜನರು ಹೊತ್ತ ಪ್ರತಿ ಒಂದು ಪಲ್ಲಕ್ಕಿ, ಟಾಂಗ, ಡೋಲಿ, ಅಥವಾ ತೊಟ್ಟಿಲಿನ ಬಗ್ಯೆ.	0	2	0

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತಾರೀಖು . ಮೇ 1907.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ — ಸ್ಟ 1907—08ನೆ ಸಾಲಿನಲ್ಲಿ ಶಿವಮೊಗ್ಗಾ ಟವರ್ನ ಮ್ಯುನಿಸಿಪಾಲಿಟಿ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿಗಳ ಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1907ನೆ ಜೂನ್ 10ನೆ ತಾರೀಖಿನ ದಿವಸ ಮಧ್ಯಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರವರ ಕಚ್ಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹೆಚ್ಚಿಗೆ ತಪಸೀಲ್‌ಗಳನ್ನು 1907ನೆ ಇಸವಿ ಮೇ 2ನೆ ತಾರೀಖು ಮೈಸೂರ ಗೆಜೆಟ್ಟಿನ 2ನೆ ಭಾಗದ 153, 154ನೆ ನಂಬರ ಪುಟದಲ್ಲಿ ಛಾಯಿಷ ಆಗಿರುವ 1907ನೆ ಇಸವಿ ಏಪ್ರಿಲ್ 1ನೆ ಮಕರ್ರಂ ಇಸ್ತಿಹಾರನಾಮೆಯ ಮೂಲಕ ತಿಳಿದುಕೊಳ್ಳಬಹುದು.

ಎಂ. ನಾರಾಯಣರಾವ್,
ಪ್ರೆಸಿಡೆಂಟ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ಟ 1907ನೆ ಇಸವಿ ಮೇ 7ನೆ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಸ್ಟ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಜೂನ್ ಆಖೈರು ವರಿಗೆ ಹರಿಹರ ಸೇತುವೆ ಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು ಚಾಲ್ತಿ ಸಾಲ್ ಜೂನ್ 1ನೆ ತಾರೀಖಿನಲ್ಲಿ ಹರಿಹರದ ಡೆಪ್ಯುಟಿ ಅಮಲ್ದಾರ್ರ ಕಚೇರಿಯಲ್ಲಿ ಆ ದಿನ ಮಧ್ಯಾಹ್ನ ಮೂರು ಘಂಟೆಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ ಯವರು ಹರಾಜು ಮಾಡಿಸುತ್ತಾರೆ.

2. ಖಡ ಸವಾಲನ್ನು ಗವರ್ನಮೆಂಟ ಮಂಜೂರಿಗೆ ವಳಪಟ್ಟು ಡೆಪ್ಯುಟಿ ಕಮಿಷನರ ಯವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲಿ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯುಟಿ ಕಮಿಷನರ ಯವರ ಯಖ್ತ್ಯಾರಿಯಲ್ಲಿ ಇರುತ್ತೆ.

3. ಡೆಪ್ಯುಟಿ ಕಮಿಷನರ ಯವರು ಯಾರ ಸವಾಲುಗಳು ಅಂಗೀಕರಿಸುತ್ತಾರೋ ಅಂಥವರು ರೂಪಾಯಿಗೆ ಒಂದು ಆಣೆಯಂತೆ ಲೋಕಲ್ ಸೆಸ ಸಹಿತವಾಗಿ ಸವಾಲು ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಿಟ ಇಡಬೇಕು. ಗವರ್ನಮೆಂಟನಿಂದ ಮಂಜೂರಾದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ ಸಹಿತವಾಗಿ 9 ಸಮವಾದ ಕಿಸ್ತುಗಳಲ್ಲಿ ದಾವಣಗೆರೆ ತಾಲ್ಲೂಕು ಟ್ರೆಜರೀಗೆ ಪಾವತಿ ಮಾಡಬೇಕು. ಒಂಗನೇ ಕಿಸ್ತು ಮೊಬಲಗು 1908ನೆ ಆಗಸ್ಟ ತಾರೀಖು 10ಕ್ಕೆ ಶುರು ಆಗುತ್ತೆ. ಬಾಕಿ ಕಿಸ್ತುಗಳು ಆಯಾಯ ತಿಂಗಳ ಹತ್ತನೇ ತಾರೀಖಿನಲ್ಲಿ ಪಾವತಿಯಾಗತಕ್ಕದ್ದು. ಡಿಪಾಜಿಟ ಮೊಬಲಗು ಹತ್ತು ಹನ್ನೊಂದು ಹನ್ನೆರಡನೇ ಕಿಸ್ತುಗಳಿಗೆ ಉಪಯೋಗಿಸಿಕೊಳ್ಳಲ್ಪಡುವದು. ಹರಾಜುದಾರನು ಕಿಸ್ತು ಮೊಬಲಗು ಸಕಾಲಕ್ಕೆ ಪಾವತಿ ಮಾಡುವ ಬಗ್ಯೆ ಇಬ್ಬರು ಜಾಮೀನುದಾರರನ್ನು ಕೊಡಬೇಕು, ಮತ್ತು ಹರಾಜು ಮಂಜೂರಾದ್ದು ತಿಳಿಸಿದ ಲಾಗಾಯತು ಮೂರು ದಿವಸದಲ್ಲಿ ಸರಿಯಾದ ಸ್ಟ್ಯಾಂಪು ಕಾಗದದ ಮೇಲೆ ಒಂದು ಕರಾರು ಬರೆದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದ ಪಕ್ಷದಲ್ಲಿ ಡಿಪಾಜಿಟ ಮೊಬಲಗಿನ ಮೇಲಿನ ಹಕ್ಕು ಕಂಟ್ರಾಕ್ಟದಾರನಿಗೆ ತಪ್ಪಿಹೋಗುವದಲ್ಲದೆ ಕಂಟ್ರಾಕ್ಟು ದುಸರೆ ಹರಾಜು ಮಾಡಿಸಿ ಅದರಿಂದ ಗವರ್ನಮೆಂಟಿಗೆ ಉಂಟಾಗಬಹುದಾದ ಲುಕ್ಸಾನು ಕಂಟ್ರಾಕ್ಟದಾರನ ಅಥವಾ ಜಾಮೀನ್ದಾರ್ರ ಸ್ವತ್ತು ಜಫ್ತಿ ಹರಾಜು ಮೂಲಕ ವಸೂಲ್ ಮಾಡಲ್ಪಡುತ್ತೆ.

4. ವಾಯಿದೆ ತಾರೀಖಿನ ವಳಗೆ ಕಿಸ್ತು ಮೊಬಲಗು ಪಾವತಿ ಆಗದೆ ನಿಂತರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಪ್ರಕಾರ ಬಡ್ಡಿಯೂ ವಸೂಲ್ ಮಾಡಲ್ಪಡುತ್ತೆ.

5. ಹರಾಜುದಾರನು ತನ್ನ ಕಂಟ್ರಾಕ್ಟು ಹಣದ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆ ಪ್ರಕಾರ ಲೋಕಲ್ ಸೆಸ ಕೊಡಬೇಕು.

6. ಕಂಟ್ರಾಕ್ಟದಾರನಿಂದಲೇ ಆಗಲಿ ಅಥವಾ ಅವನ ಜಾಮೀನುದಾರರಿಂದಲೇ ಆಗಲಿ ಬರಬೇಕಾದ ಬಾಕಿಯನ್ನು ಜಮೀನು ಕಂದಾಯದ ಬಾಕಿ ವಸೂಲ್ ಮಾಡುವದಕ್ಕೆ ಇರತಕ್ಕ ರೂಲ್ಸು ಪ್ರಕಾರ ವಸೂಲ್ ಮಾಡಲ್ಪಡುವದು.

7. ಕಂಟ್ರಾಕ್ಟದಾರನು ಪ್ರತಿ ದಿನವೂ ವಸೂಲ್ ಮಾಡುವ ಮೊಬಲಗಿಗೆ ಒಂದು ಲೆಖ್ಖದ ಬುಕ್ಕು ಇಟ್ಟಿರಬೇಕು. ಇದು ಡೆಪ್ಯುಟಿ ಕಮಿಷನರ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡಲ್ಪಡುವದಕ್ಕೆ ಖುಲ್ಲಾ ಇರಬೇಕು.

8. ಕಂಟ್ರಾಕ್ಟದಾರನು ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ಟೋಲ್ ಶಿವಾಯಿ ಮತ್ತ್ಯಾವದನ್ನೂ ವಸೂಲ್ ಮಾಡಕೂಡದು. ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರೆ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಯಾಗುವದಲ್ಲದೆ ಕಂಟ್ರಾಕ್ಟು ಸಹ ರದ್ದು ಮಾಡಲ್ಪಡುವದು.

9. ಸೈನ್ಯ, ಮಿಲಿಟರಿ ಸಾಮಾನು, ಡ್ಯೂಟಿಮೇಲಿರುವ ಪೊಲೀಸ ಅಥವಾ ಇತರ ಸರ್ಕಾರದ ಆಫಿಸರು, ಮತ್ತು ಸರ್ಕಾರಿ ಸಾಮಾನೆಂದು ಆ ಇಲಾಖೆಯ ಮುಖ್ಯಾಧಿಕಾರಿಯಿಂದ ಪಡೆದ ಸರಟಿಫಿಕೇಟನೊಡನೆ ಇರುವ ಸರ್ಕಾರಿ ಸಾಮಾನು ಈ ಸೇತುವೆ ಮೇಲೆ ಹೋದರೆ ಕಂಟ್ರಾಕ್ಟದಾರನು ಟೋಲ್ ವಸೂಲ್ ಮಾಡಕೂಡದು.

10. ವಸೂಲ್ ಮಾಡಲು ಅಧಿಕಾರ ಕೊಟ್ಟಿರುವ ಟೋಲಿನ ಒಂದು ಪಟ್ಟಿಯನ್ನು ಇಂಗ್ಲೀಷು ಮತ್ತು ಕನ್ನಡ ಭಾಷೆಯ ಸ್ಫುಟವಾದ ಅಕ್ಷರಗಳಲ್ಲಿ ಬರೆದು ಟೋಲ್ ಗೇಟ ಹತ್ತರ ಎಲ್ಲರಿಗೂ ಕಾಣುವಂಥಾ ಸ್ಥಳದಲ್ಲಿ ಹಚ್ಚಬೇಕು.

11. ಕಂಟ್ರಾಕ್ಟುದಾರನು ಟೋಲ್ ಗೇಟ್ ಹತ್ತಿರ ಟೋಲ್ ವಸೂಲ್ ಮಾಡಬೇಕೇ ಹೊರ್ತು ಇತರ ಸ್ಥಳದಲ್ಲಿ ವಸೂಲ್ ಮಾಡಕೂಡದು.

12. ಇನ್ನೇನಾದರೂ ತಪಶೀಲ್ ಬೇಕಾದರೆ ಡೆಪ್ಯುಟಿ ಕಮಿಶನರವರಿಗೆ ಬರಕೊಂಡು ತಿಳಿದುಕೊಳ್ಳಬಹುದು.

ಹರಿಹರ ಸೇತುವೇ ಮೇಲೆ ವಸೂಲಾಗತಕ್ಕ ಟೋಲಿನ ಷೆಡ್ಯೂಲ್.

	ರೂ.	ಆ.	ಪೈ.
(1) ನಾಲ್ಕು ಚಕ್ರದ ಗಾಡಿ ಬಂದದ್ದಕ್ಕೆ ಭರ್ತಿ ಅಥವಾ ಖಾಲಿ ...	0	8	0
(2) ಆನೆ ಬಂದಕ್ಕೆ ಸಾಮಾನು ಹೇರಿದ್ದು ಅಥವಾ ಹೇರದೆ ಇರತಕ್ಕದ್ದು ...	1	0	0
(3) ಎರಡು ಚಕ್ರದ ಗಾಡಿ ಬಂದಕ್ಕೆ ಅಥವಾ ಎತ್ತಿನ ಗಾಡಿ ಸಾಮಾನು ಹಾಕಿದ್ದು ಅಥವಾ ಖಾಲಿ	0	4	0
(4) ಒಂಟೆ ಬಂದಕ್ಕೆ ಸಾಮಾನು ಹೇರಿದ್ದು, ಸವಾರಿ, ಸಾಮಾನು ಹೇರದೆ ಇದ್ದದ್ದು, ನಡಸಿಕೊಂಡು ಬಂದದ್ದು.	0	8	0
(5) ಕುದರೆ ಬಂದಕ್ಕೆ ಸಾಮಾನು ಹೇರಿದ್ದು, ಹೇರದೆ ಇದ್ದದ್ದು, ನಡಸಿಕೊಂಡು ಬಂದದ್ದು ...	0	1	0
(6) ಎತ್ತು ಅಥವಾ ಕೋಣ ಬಂದಕ್ಕೆ ಸಾಮಾನು ಹೇರಿದ್ದು ಅಥವಾ ಸವಾರಿ ಮಾಡಿದ್ದು ...	0	0	6
(7) ಎತ್ತು ಅಥವಾ ಕೋಣ ಬಂದಕ್ಕೆ ಸಾಮಾನು ಹೇರದೆ ಇದ್ದದ್ದು ಅಥವಾ ನಡಿಸಿದ್ದು ...	0	0	3
(8) ಕತ್ತೆ ಬಂದಕ್ಕೆ ಸಾಮಾನು ಹೇರಿದ್ದು ಅಥವಾ ಸವಾರಿ ಮಾಡಿದ್ದು ...	0	0	6
(9) ಹಸು ಮತ್ತು ಎಮ್ಮೆ ಬಂದಕ್ಕೆ	0	0	3
(10) ಕುರಿ ಮತ್ತು ಮೇಕೆ ಬಂದಕ್ಕೆ	0	0	1

ಪ್ರಕಟನೆ.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ದಾವಣಗೆರೆ ಊರನ್ನು 1906ನೆ ಇಸವಿಯ 7ನೆ ನಂಬರು ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

2. ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನರೂ ಆ ಆಕ್ಷೇಪಣೆಯನ್ನು ಅದಕ್ಕುಂಟಾದ ಕಾರಣಗಳ ಸಮೇತ ಬರವಣಿಗೆಯಲ್ಲಿ, ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ, ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಇದರಿಂದ ಕೋರಿ ಇದೆ.

I. ದಾವಣಗೆರೆ ಟವನಿನ ಎಲ್ಲೆಯು ಸದರಿ ಗ್ರಾಮದ ಸರ್ವೆ ನಂಬರು 130ನೆ ಜಮೀನಿನ ಪೂರ್ವಭಾಗದ ಮೂಲೆ ಕಟ್ಟೆನಲ್ಲಿರತಕ್ಕ ಆದೇ ಮೂರು ಕೆರೆಯ ಕೋಡಿಹಳ್ಳದ ಮೇಲ್ಭಾಗದಲ್ಲಿ ನೆಟ್ಟಿರುವ ಗಡಿ ಕಲ್ಲಿನಿಂದ ಪ್ರಾರಂಭವಾಗಿ, ಸರ್ವೆ ನಂಬರು 11ನೆ ಜಮೀನಿನ ಉತ್ತರ ದಿಕ್ಕಿನಲ್ಲಿರುವ ರಸ್ತೆಗೆ ಸೇರಿ, ಅಲ್ಲಿಂದ ಆ ರಸ್ತೆಯಲ್ಲಿಯೇ ಕೊಂಚದೂರ ಪೂರ್ವ ದಿಕ್ಕಿಗೆ ಹೋಗಿ, ನಂತರ ಸರ್ವೆ ನಂಬರು 9ನೆ ಜಮೀನಿನ ಪೂರ್ವ ಭಾಗದಲ್ಲಿ ಉತ್ತರಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂಬರು 9 ಮತ್ತು 3 ಈ ಜಮೀನುಗಳು ಕೂಡುವ ಸ್ಥಳದಿಂದ ಪೂರ್ವಕ್ಕೆ ತಿರುಗಿ, ಸರ್ವೆ ನಂಬರು 1ನೆ ಜಮೀನಿನ ದಕ್ಷಿಣ ಮಾರ್ಗವಾಗಿ ಹೋಗಿ, ನಂತರ ಡಿಟ್ಟೋ ನಂಬರಿನ ಪೂರ್ವಭಾಗದಲ್ಲೇ ಉತ್ತರಕ್ಕೆ ಬೂದಿಹಾಳು ರಸ್ತೆ ವರೆಗೂ ಹೋಗುತ್ತದೆ. ನಂತರ ಡಿಟ್ಟೋ 1ನೆ ನಂಬರಿನ ಪೂರ್ವ ದಿಕ್ಕಿನಲ್ಲಿರುವ 3 ಕಲ್ಲುಗಳಿಂದ ಹೊರಟು ಸರ್ವೆ ನಂಬರು 161ನೆ ಜಮೀನಿನ ದಕ್ಷಿಣ ಭಾಗದಲ್ಲಿ ಪೂರ್ವ ದಿಕ್ಕಿಗೆ ಹೋಗುತ್ತದೆ. ಪುನಃ ಸರ್ವೆ ನಂಬರು 160ನೆ ಜಮೀನಿನ ಪಶ್ಚಿಮದಲ್ಲಿ ದಕ್ಷಿಣಕ್ಕೆ ಹೊರಟು ಸರ್ವೆ ನಂಬರು 160, 159, 158 ಮತ್ತು 157ನೆ ಜಮೀನುಗಳ ದಕ್ಷಿಣ ಮಾರ್ಗವಾಗಿ ಪೂರ್ವಕ್ಕೆ ತಿರುಗುತ್ತದೆ. ಹೀಗೆಯೇ ಆನೆಕೊಂಡ ಗ್ರಾಮದ ಸರ್ವೆ ನಂಬರು 119ನೆ ಜಮೀನಿನ ದಕ್ಷಿಣಕ್ಕೆ ತಿರುಗಿ, ಡಿಟ್ಟೋ ಗ್ರಾಮದ ಸರ್ವೆ ನಂಬರು 119 ಮತ್ತು 112ನೆ ಜಮೀನುಗಳು ಸೇರುವ ಸ್ಥಳದಲ್ಲಿ ಹದ್ದಿರತಕ್ಕ ಮ್ಯುನಿಸಿಪಲ್ ಗಡಿ ಕಲ್ಲಿನ ವರೆಗೆ ಹೋಗಿ ನಂತರ ಆ ಕಲ್ಲಿನಿಂದ ಆಚೆ 150 ಗಜ ಫಾಸಲೆಯಲ್ಲಿ ಸರ್ವೆ ನಂಬರು 119ನೆ ಜಮೀನಿನ ದಕ್ಷಿಣ ಭಾಗದಲ್ಲಿ ಪೂರ್ವದಿಕ್ಕಿಗೆ ಹೋಗುತ್ತದೆ.

II. ತರುವಾಯ ಸರ್ವೆ ನಂಬರು 110, 111, 109, 108, 103, 102, 101, 100, 99, 98, 97, 96, 95, 94, 93, 92, 91, 90, 89, 88 ಮತ್ತು 87ನೆ ಜಮೀನುಗಳ ಪಶ್ಚಿಮಗಡಿಯಿಂದ ಪೂರ್ವಕ್ಕೆ 150 ಗಜಗಳ ಫಾಸಲೆಯಲ್ಲಿ ದಕ್ಷಿಣ ದಿಕ್ಕಿಗೆ ಒಂದೇ ಲೈನಿನಲ್ಲಿ ಹೊರಟು ಸರ್ವೆ ನಂಬರು 79 ಮತ್ತು 80ನೆ ಜಮೀನುಗಳು ಕೂಡಿರತಕ್ಕ ಸ್ಥಳದ ವರೆಗೆ ಸರ್ವೆ ನಂ. 79ನೆ ಜಮೀನಿನ ಉತ್ತರ ಭಾಗದಲ್ಲಿ ಪೂರ್ವಕ್ಕೆ ತಿರುಗಿ, ಸರ್ವೆ ನಂಬರು 80ನೆ ಜಮೀನಿನ ನೈರುತ್ಯ ದಿಕ್ಕಿನಲ್ಲಿರುವ 2 ಬಾಂದುಗಳ ವರೆಗೆ ದಕ್ಷಿಣ ದಿಕ್ಕಿಗೆ ಹೋಗಿ, ಸರ್ವೆ ನಂಬರು 78ನೆ ಜಮೀನಿನ ಪೂರ್ವದಿಕ್ಕಿನ ಮೂಲೆಯನ್ನು ಸೇರುತ್ತದೆ. ನಂತರ ಮೇಲ್ಕಂಡ 78ನೆ ಸರ್ವೆ ನಂಬರ್ ಮತ್ತು 64ನೆ ನಂಬರು ಜಮೀನುಗಳನ್ನು ಸೇರಿಸತಕ್ಕ ಬಾಂದಿನ ದಕ್ಷಿಣಕ್ಕೆ ತಿರುಗಿ, ಸರ್ವೆ ನಂಬರ 64ನೆ ಜಮೀನಿನ ಈಶಾನ್ಯ ದಿಕ್ಕಿನಲ್ಲಿ ಹೊರಟು ಸರ್ವೆ ನಂಬರ 64 ಮತ್ತು 62ನೆ ಜಮೀನುಗಳು ಕೂಡಿರುವ ಸ್ಥಳದವರಿಗೂ ದಕ್ಷಿಣ ದಿಕ್ಕಿಗೆ ಹೋಗುತ್ತದೆ. ತರುವಾಯ ಆನೆಕೊಂಡ ಗ್ರಾಮದ ಸರ್ವೆ ನಂಬರ 62 ಮತ್ತು ನಿಟ್ಟುವಳ್ಳಿ ಗ್ರಾಮದ ಸರ್ವೆ ನಂಬರ 119ನೆ ಜಮೀನುಗಳ ಎಲ್ಲೆಯ ಮಧ್ಯಭಾಗದಲ್ಲಿ ಹೋಗಿ, ನಿಟ್ಟುವಳ್ಳಿ ಗ್ರಾಮದ ಸರ್ವೆ ನಂಬರ 119 ಮತ್ತು 120ನೆ ಜಮೀನುಗಳ ಮಧ್ಯದಲ್ಲಿರತಕ್ಕ ಎಲ್ಲೆಯ ಮಾರ್ಗವಾಗಿ ದಕ್ಷಿಣಕ್ಕೆ ಹೋಗುತ್ತಾ ಬೆಂಗಳೂರು-ಧಾರವಾಡದ ರಸ್ತೆಯನ್ನು ಸೇರುತ್ತದೆ.

III. ಮೇಲ್ಕಂಡ ರಸ್ತೆಯಲ್ಲಿ ಸರ್ವೆ ನಂಬರ 122 ಮತ್ತು 118ನೆ ಜಮೀನುಗಳು ಸೇರುವ ಸ್ಥಳದಿಂದ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂಬರ 118 ಮತ್ತು 95ನೆ ಜಮೀನುಗಳು ಸೇರತಕ್ಕ ಸ್ಥಳದ ವಾಯುವ್ಯ ದಿಕ್ಕಿನಲ್ಲಿರುವ 3 ಬಾಂದುಗಳ ವರಿಗೂ ನೇರವಾಗಿ ಹೋಗುತ್ತದೆ. ಅಲ್ಲಿಂದ ಆನೆಕೊಂಡ ಗ್ರಾಮದ ಸರ್ವೆ ನಂಬರ 65, 68, 69 ಮತ್ತು 70ನೆ ಜಮೀನುಗಳ ದಕ್ಷಿಣದಲ್ಲಿ

ಹೊರಟು, ಹದಡಿ ರಸ್ತೆಗೆ ಸೇರಿ, ಸರ್ವೆ ನಂಬರು 47ನೆ ಜಮೀನಿನ ಎಲ್ಲೆಯ ಆಗ್ನೇಯ ದಿಕ್ಕಿನಲ್ಲಿರುವ ದಾವಣಗೆರೆ ಗ್ರಾಮದ ಸರ್ವೆ ನಂಬರ 45 ಮತ್ತು 46ನೆ ಜಮೀನುಗಳಲ್ಲಿ ಹೋಗುತ್ತದೆ. ನಂತರ ಪೂರ್ವದಿಕ್ಕಿಗೆ ತಿರುಗಿ, ಸರ್ವೆ ನಂ. 47, 48, 50 ಮತ್ತು 51ನೆ ಜಮೀನುಗಳ ದಕ್ಷಿಣದಿಕ್ಕಿನಲ್ಲಿ ಹೋಗಿ, ಸರ್ವೆ ನಂಬರ 51 ಮತ್ತು 53ನೆ ಜಮೀನುಗಳ ಎಲ್ಲೆಯ, ಮಧ್ಯ ಭಾಗದಲ್ಲಿ ಉತ್ತರಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂಬರ 51ನೆ ಜಮೀನು ಕೂಡತಕ್ಕ ಸರ್ವೆ ನಂಬರ 49ನೆ ಜಮೀನಿನ ನೈರುತ್ಯ ಮೂಲೆಯನ್ನು ಸೇರಿ ಸರ್ವೆ ನಂಬರ 53 ಮತ್ತು 57, 58 ಮತ್ತು 59, ಇವುಗಳಲ್ಲಿ ಪೂರ್ವಕ್ಕೆ ಹೊರಟು ದಾವಣಗೆರೆ ಗ್ರಾಮದ ಸರ್ವೆ ನಂಬರು 60 ಮತ್ತು 61ನೆ ಜಮೀನುಗಳು ಕೂಡತಕ್ಕ ಸರ್ವೆ ನಂಬರ 59ನೆ ಜಮೀನಿನಲ್ಲಿರುವ 3 ಬಾಂದುಗಳ ವರೆಗೂ ಹೋಗುತ್ತದೆ. ಇಲ್ಲಿಂದ ಸರ್ವೆ ನಂಬರ 60, 61, 79 ಮತ್ತು 63ನೆ ಜಮೀನುಗಳ ಎಲ್ಲೆಯ ಮಧ್ಯಭಾಗದಲ್ಲಿ ಪಶ್ಚಿಮಕ್ಕೆ ಹೋಗಿ, ನಂತರ ಸರ್ವೆ ನಂಬರ 79 ಮತ್ತು 80ನೆ ಜಮೀನುಗಳ ಪಶ್ಚಿಮ ಮಾರ್ಗವಾಗಿ ಉತ್ತರಕ್ಕೆ ಹೋಗಿ ಕೊನೆಗೆ ಬೆಂಗಳೂರು-ಧಾರ್ವಾಡದ ರಸ್ತೆಯನ್ನೂ ಸೇರುತ್ತದೆ.

IV. ಅಲ್ಲಿಂದ ದಾವಣಗೆರೆ ಕೆರೆಯ ಕೋಡಿಹಳ್ಳದ ಮೇಲ್‌ಭಾಗದಲ್ಲಿರುವ ಗಡಿ ಕಲ್ಲಿನ ವರೆಗೆ ಸರ್ವೆ ನಂಬರ 35ನೆ ಜಮೀನಿನಲ್ಲಿ ನೀಟಾಗಿ ಸರ್ವೆ ನಂಬರ 81 ಮತ್ತು 82ನೆ ಜಮೀನುಗಳ ಎಲ್ಲೆಯ ಮಧ್ಯ ಭಾಗದಲ್ಲಿ ಉತ್ತರಕ್ಕೆ ಹೋಗುತ್ತದೆ.

V. ಈ ಕಾರಣದಿಂದಲೂ ಮತ್ತು ಲಗತ್ತಿರುವ ನಕಾಶೆಯಿಂದಲೂ, ದಾವಣಗೆರೆ ಟವರ್ನ ಮ್ಯುನಿಸಿಪಾಲಿಟಿಗೆ ಆನೆಕೊಂಡ ಮತ್ತು ನಿಟ್ಟುವಳ್ಳಿ ಗ್ರಾಮಗಳ ಜಮೀನುಗಳು ಸಹ ಸೇರಿರುತ್ತೆಂಬುವದು ವ್ಯಕ್ತಪಡುತ್ತೆ.

ಇದರಡಿ ವಿವರಿಸಿರುವ ಎಲ್ಲೆಗಳುಳ್ಳ ಚಿತ್ರದುರ್ಗದ ಊರನ್ನು 1906ನೆ ಇಸವಿಯ 7ನೆ ನಂಬರ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ ಮೇರೆ ಒಂದು ಶಾಶ್ವತವಾದ ಮ್ಯುನಿಸಿಪಾಲಿಟಿಯಾಗಿ ಏರ್ಪಡಿಸಬೇಕೆಂದು ಉದ್ದೇಶಿಸಿದೆ ಎಂಬದಾಗಿ ಸದರಿ ರೆಗ್ಯುಲೇಷನಿನ 8ನೆ ಪ್ರಕರಣದ ಮೇರೆ ಇದರಿಂದ ಪ್ರಸಿದ್ಧಪಡಿಸಿದೆ.

2. ಮೇಲ್ಕಂಡ ಉದ್ದೇಶಕ್ಕೆ ಯಾವ ಆಕ್ಷೇಪಣೆಯನ್ನಾದರೂ ಉಂಟಾಗಿರುವ ಎಲ್ಲಾ ಜನರೂ ಆ ಆಕ್ಷೇಪಣೆಯನ್ನು ಅದಕ್ಕುಂಟಾದ ಕಾರಣಗಳ ಸಮೇತ, ಬರವಣಿಗೆಯಲ್ಲಿ ಈ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಒಪ್ಪಿಸಬೇಕೆಂದು ಕೋರಿ ಇದೆ.

ಪೂರ್ವಕ್ಕೆ—ಕೆಳಗೋಟೆ ರಿ. ಸರ್ವೆ ನಂಬರ 117ನೆ ಜಮೀನಿನ ಆಗ್ನೇಯ ಮೂಲೆಯಲ್ಲಿ ಚಳ್ಳಕೆರೆ ಫೀಡರ್ ರೋಡಿನಿಂದ ಬೆಂಗಳೂರು-ಧಾರ್ವಾಡ ರಸ್ತೆ ವರಿಗೆ ಅಲ್ಲಿಂದ ರಿ. ಸರ್ವೆ ನಂಬರುಗಳು 117, 122, 123ನೆ ಜಮೀನುಗಳ ಪೂರ್ವದಿಕ್ಕಿನ ಗಡಿ ಮೇಲೆ ಬ್ಯಾಡರಹಟ್ಟಿ ವರಿಗೆ, ಬ್ಯಾಡರಹಟ್ಟಿ ಗ್ರಾಮ ನಿವೇಶನವನ್ನು ಒಳಗೊಂಡು ಅಲ್ಲಿಂದ ಸ್ಟೇಷನ್ ರೋಡ್ ಮಾರ್ಗವಾಗಿ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದವರಿಗೆ.

ಉತ್ತರಕ್ಕೆ—ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ಮೊದಲ್ಗೊಂಡು ರಿ. ಸರ್ವೆ ನಂಬರ 52 ಮತ್ತು 43ರ ಪೂರ್ವದಿಕ್ಕಿನ ಮತ್ತು ರಿ. ಸರ್ವೆ ನಂಬರ 43, 14, 16 ಮತ್ತು 17ರ ದಕ್ಷಿಣದಿಕ್ಕಿನ ಗಡಿ ಮೂಲಕವಾಗಿ ಹೊರಪೇಟೆ ವರಿಗೆ, ಹೊರಪೇಟೆ ಗ್ರಾಮ ನಿವೇಶನವನ್ನು, ರಿ. ಸರ್ವೆ ನಂಬರ 19, 20, 21, 22, 23, 24, 25, 26ನೆ ಜಮೀನುಗಳನ್ನೂ ಒಳಗೊಂಡು ಅಲ್ಲಿಂದ ಮದೇಹಳ್ಳಿ ರಿ. ಸರ್ವೆ ನಂಬರ 38—54ನೆ ಜಮೀನುಗಳ ಉತ್ತರಗಡಿ ಮಾರ್ಗವಾಗಿ, ಹೊಸಕೆರೆ ಕೋಡಿ ಬಳಿ ಬೆಂಗಳೂರು-ಧಾರ್ವಾಡ ರಸ್ತೆಯನ್ನು ಸೇರಿ ಅಲ್ಲಿಂದ ಹೊಸಕೆರೆ ಏರಿಮೇಲೆ ಹೊಳಲ್ಕೆರೆ ರಸ್ತೆಯನ್ನು ಸೇರಿ ಅಲ್ಲಿಂದ ಬರಗೇರಮ್ಮನಗುಡಿ ಮತ್ತು ಕ್ವಾರ್ಟೇಷನ್ ವರಿಗೆ, ಅಲ್ಲಿವರಿಗೆ ಹೊಳಲ್ಕೆರೆ ರಸ್ತೆಯ ದಕ್ಷಿಣ ದಿಕ್ಕಿನಲ್ಲಿರುವ ಎಲ್ಲಾ ಜಮೀನುಗಳೂ ಮ್ಯುನಿಸಿಪಾಲಿಟಿಗೆ ಸೇರಿರುತ್ತವೆ.

ಪಶ್ಚಿಮಕ್ಕೆ—ನೇರಲಗುಂದಿ ಕ್ವಾರ್ಟೇಷನ್ ಪಕ್ಕದಲ್ಲಿ ಗುಡ್ಡದ ಸುತ್ತಲಿರುವ ಕೋಟೆ ಗೋಡೆ.

ದಕ್ಷಿಣಕ್ಕೆ—ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನ್ ಇರುವ ತಿಮ್ಮಣ್ಣನಾಯಕನಕೆರೆ ಪಶ್ಚಿಮದ ಕೊನೆಯಾದ ಕೋಡಿಯಿಂದ ಲಾಲ್‌ಕೋಟೆ ಬಾಗಲಿಗೆ ಹೋಗುವ ಕಾಲುಹಾದಿ ಮಾರ್ಗವಾಗಿ ಜೋಗಿಮಟ್ಟಿ ರಸ್ತೆಗೆ ಸೇರಿ, ಅಲ್ಲಿಂದ ರಿ. ಸರ್ವೆ 100ನೆ ನಂಬರಿನ ಪಶ್ಚಿಮಗಡಿ ಮಾರ್ಗವಾಗಿ ಮ್ಯುನಿಸಿಪಾಲಿಟಿಯ ಪೂರ್ವದಿಕ್ಕಿನ ಗಡಿಯಾದ ಚಳ್ಳಕೆರೆ ಫೀಡರ್ ರೋಡ್ ವರಿಗೆ.

ಎಂ. ಚಂಗೈಯ್ಯಶೆಟ್ಟಿ,
ಡೆಪ್ಯುಟಿ ಕಮೀಷನರ್.

ಇಸ್ತಿಹಾರ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ಮ್ಯುನಿಸಿಪಲ್ ಟೋಲ್ ಗೇಟ್‌ಗಳಲ್ಲಿ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಜೂನ್ ಆಖೈರು ವರಿಗೆ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಹಕ್ಕುದಾರಿಯು 1907ನೆ ಇಸವಿ ಜೂನ್ ತಾರೀಖು 2ರಲ್ಲು ದಾವಣಗೆರೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮೀಷನರ ಸಾಹೇಬರವರ ಆಫೀಸ್ ಬಳಿ ಸದರಿ ಆಫೀಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟದಾರನು ಲಗತ್ತು ಷೆಡ್ಯೂಲಿನಲ್ಲಿ ನಮೂದು ಮಾಡಿರುವ ರೇಟಿನಂತೆ ಟೋಲುಗೇಟುಗಳ ಮುಖಾಂತರ ಮ್ಯುನಿಸಿಪಲ್ ಸರಹದ್ದಿನೊಳಗೆ ಬರುವ ಭರ್ತಿ ಮತ್ತು ಖಾಲೀ ಗಾಡಿಗಳ ಮೇಲೆ ಸುಂಕ ವಸೂಲ್ಮಾಡಬೇಕೇ ವಿನಹಾ ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನು ಆಗಲೀ ಅಥವಾ ಮತ್ತ್ಯಾವ ದರವನ್ನೇ ಆಗಲಿ ಯಾವ ಕಾರಣವನ್ನು ನಮೂದಿಸದೇ ಅಂಗೀಕರಿಸತಕ್ಕ ಅಥವಾ ತಿರಸ್ಕರಿಸತಕ್ಕ ಅಧಿಕಾರವು ಪ್ರೆಸಿಡೆಂಟರವರಿಗೆ ಸೇರಿದ್ದಾಗಿರುತ್ತೆ.

4. ಕಂಟ್ರಾಕ್ಟ್ ಮೊಬಲಗನ್ನು ಹನ್ನೆರಡು ಮಾಹೆವಾರಿ ಕಂತುಗಳಾಗಿ ಪ್ರತಿ ತಿಂಗಳು ಹತ್ತನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಖೈದಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಮಾಹೇವಾರಿ ಕಂತು ಮೊಬಲಗನ್ನು ಕರಾರ್ರ್ವಾಕಾ ಪಾವತೀ ಮಾಡುತ್ತಾನೆಂಬ ಖಾತರಿಕ್ಕೆಬಗ್ಗೆ ಸರಿಯಾದ ಸೆಕ್ಯೂರಿಟಿಯಾನೆ ಜಾಮೀನು ಕೊಡಬೇಕು.

5. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ ಮೊಬಲಗು ಮತ್ತು ಸೆಕ್ಯೂರಿಟಿ ಸಹಾ ಹಾಜರ್ ಮಾಡದಿದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವೇಳೆಗೆ ಹಾಜರು ಮಾಡಲು ತಪ್ಪಿದರೆ ಪಾವತಿ ಮಾಡುವ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡುತ್ತೆ. ಅಲ್ಲದೆ ಪ್ರೆಸಿಡೆಂಟರು ಇಷ್ಟಪಟ್ಟಲ್ಲಿ ವುಳಿದ ಕಂಟ್ರಾಕ್ಟನ್ನು ಪುನಹಾ ಹರಾಜು ಮಾಡಿ ಲುಕಸಾನಾದಲ್ಲಿ ಸದರಿ ಮೊಬಲಗನ್ನು ಅವ್ವಲ್ ಕಂಟ್ರಾಕ್ಟುದಾರನಿಂದಲಾಗಲೀ ಅಥವಾ ಜಾಮೀನುದಾರನಿಂದಲಾಗಲೀ ವಸೂಲ್ಮಾಡುತ್ತೆ.

6. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನು ತೋರಿಸುವಂತೆ ಲೆಖ್ಖವನ್ನು ಕಂಟ್ರಾಕ್ಟುದಾರನು ಇಡಬೇಕು. ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಉದ್ಯೋಗಸ್ಥರು ಅಪೇಕ್ಷಿಸಿದ ಕಾಲದಲ್ಲಿ ಇನ್ಸ್ಪೆಕ್ಷನ್ ಬಗ್ಗೆ ಸದರಿ ಲೆಖ್ಖಗಳನ್ನು ಹಾಜರು ಮಾಡಬೇಕು.

7. ಮೇಲ್ಕಂಡ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮೂಲಕ ಹೋಗತಕ್ಕ ಟ್ರಾಫಿಕ್ ಲೆಖ್ಖವನ್ನು ಕರಾರುವಾಕಾ ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು.

8. ಕಂಟ್ರಾಕ್ಟುದಾರನು ಹಾಲಿ ಇರುವ ಟೋಲ್‌ಗೇಟುಗಳನ್ನು ಮತ್ತು ಮನೆಗಳನ್ನು ಉಪಯೋಗಿಸಿಕೊಳ್ಳಬಹುದು. ಆದರೆ ಅವುಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡಿರಬೇಕು.

9. ಲೇಟ್ ಚೀಫ್ ಕಮೀಷನರ್ ಸಾಹೇಬರವರ 4—11—1876ನೆ ಮರ್ಕುಂ 274ನೆ ನೋಟಿಫಿಕೇಷನ್ನೊಡನೆ ಸಾದರು ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

	ರೂ.	ಅ.	ಪೈ.
ಭರ್ತಿ ಗಾಡಿ	0	2	0
ಖಾಲೀ ಗಾಡಿ	0	1	0

ಎಂ. ಚಂಗೈಯ್ಯ ಶೆಟ್ಟಿ,
ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಿದ್ದು. [ನಂ. 21.

ಬೆಂಗಳೂರು, ಗುರುವಾರ, ಮೇ ತಾ|| 23, ಸನ್ 1907.

II ನೆ ಭಾಗ

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯವರಿಂದ, ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 16ನೆ ಮೇ 1907.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ್ ಫಾರೆಸ್ಟು (ಕಡಿತಾವಣೆ ಆದ ಕೂಪುಗಳು ವಿನಹ) ಮತ್ತು ಕಮಿಷರಿಯಟ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನುಗಳಲ್ಲಿಯೂ ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1907ನೆ ಜುಲೈ ಗುರ್ರ್ಯ ಲಾಗಾಯತು 1909ನೆ ಇಸವಿ ಜೂನ್ ಆಖೈರ್ ವರೆಗೆ ಜಮಾಯಿಸಿ ತೆಗೆದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1907ನೆ ಇಸವಿ ಜೂನ್ ತಾರೀಖು 24ರಲ್ಲಿ ಬೆಂಗಳೂರು ಮೊಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫೀಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ತಾಲ್ಲೂಕವಾರ್ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುತ್ತಾರೆ.

1—7—1907ರ ಲಾಗಾಯತು 30—6—09ರ ವರೆಗೆ.

(1) ಕಾನಕಾನಹಳ್ಳಿ	(3) ಆನೇಕಲ್.
(2) ಮಾಗಡಿ	(4) ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಜಾಸ್ತಿ ದರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿಷನರವರು ತಾವೇ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟ್ ಯಾ ಮುಖ್ತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ

ಮೊಬಲಗು ಹರಾಜು ಖೈದಾದೊಡನೆ ವಾಪಸ ಮಾಡಲ್ಪಡುವದು. ಆಖೈರ ಚಡ ದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1907ನೆ ಇಸವಿ ಜುಲೈ 1ನೆ ತಾರೀಖು, 2ನೆ ಖಿಸ್ತು 1907ನೆ ಇಸವಿ ಸೆಪ್ಟಂಬರ 1ನೆ ತಾರೀಖು, 3ನೆ ಖಿಸ್ತು 1907ನೆ ಇಸವಿ ಡಿಸೆಂಬರ 1ನೆ ತಾರೀಖು, 4ನೆ ಖಿಸ್ತು 1908ನೆ ಇಸವಿ ಮಾರ್ಚಿ 1ನೆ ತಾರೀಖು, 5ನೆ ಖಿಸ್ತು 1908ನೆ ಇಸವಿ ಜುಲೈ 1ನೆ ತಾರೀಖು 6ನೆ ಖಿಸ್ತು 1908ನೆ ಇಸವಿ ಸೆಪ್ಟಂಬರ 1ನೆ ತಾರೀಖು. 7ನೆ ಖಿಸ್ತು 1908ನೆ ಇಸವಿ ಡಿಸೆಂಬರ 1ನೆ ತಾರೀಖು, 8ನೆ ಖಿಸ್ತು 1909ನೆ ಮಾರ್ಚಿ 1ನೆ ತಾರೀಖು, ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗೆದನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟ್ ಅಥವಾ ಪ್ಲಾಂಟೇಷನ್ನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದ್ದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನ್‌ಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಪಡೆಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15-7-1909 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆವಿಗೂ ಜಮಾಯಿಸಿ ಇರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮ್ಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ನೋಟಿಫಿಕೇಷನ್, ತಾರೀಖು 16ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ನಮೂದಾಗಿರುವ ಬೆಂಗಳೂರು ಡಿಸ್ಟ್ರಿಕ್ಟು ಸ್ಟೇಟ ಮತ್ತು ರವಿನ್ಯೂ ಪ್ಲಾಂಟೇಷನ್‌ಗಳ ಹುಲ್ಲನ್ನು 1908ನೆ ಇಸವಿ ಜನವರಿ ಆಖೈರು ವರಿವಿಗೆ ಕಾಯಿದು ಸಾಗಿಸಿಕೊಳ್ಳುವ ಹಕ್ಕನ್ನು ಸದರೀ ಪ್ಲಾಂಟೇಷನ್‌ಗಳ ಬಾಜಾದಲ್ಲಿ ನಮೂದಾಗಿ ಇರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಿಂದಲಾಗಲೀ ಅಥವಾ ರೇಂಜ್ ಫಾರೆಸ್ಟ್ ಆಫೀಸರವರಿಂದಲಾಗಲೀ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.
ಬೆಂಗಳೂರು ...	ಬಟ್ಟಸು ಹೆಬ್ಬಾಳ ...	100	15-6-1907	ಬೆಂಗಳೂರು.
ಡಿಟೋ	ಬ್ರಹ್ಮಸಂದ್ರ ಪ್ಲಾಂಟೇಷನ್	48		
ಡಿಟೋ	ಗೇಟಿಗಾನಹಳ್ಳಿ ಡಿಟೋ ...	300		
ಡಿಟೋ	ಸೂಲಿಕೆರೆ ಡಿಟೋ	200		
ನೆಲಮಂಗಲ	ಬಳ್ಳಗೆರೆ ಡಿಟೋ	400	20—6—07	ನೆಲಮಂಗಲ.
ಡಿಟೋ	ಬೈರಶೆಟ್ಟಿಹಳ್ಳಿ "ಗೊಲ್ಲಹಳ್ಳಿ" ಡಿಟೋ	86		
ಡಿಟೋ	ಬೂವಮ್ಮನಹಳ್ಳಿ ಡಿಟೋ	174		
ಹೊಸಕೋಟೆ	ಅರಳೀಮಾಕನಹಳ್ಳಿ ಡಿಟೋ	184½	25—6—07	ಕಾಡುಗುಡಿ.
ಡಿಟೋ	ಗೊಲ್ಲಹಳ್ಳಿ. ಡಿಟೋ	287		
ಡಿಟೋ	ಕಾಡುಗೋಡಿ ಪ್ಲಾಂಟೇಷನ್ ಸಾದರಮಂಗಲದ ಸರಸರಿ ಪ್ಲಾಂಟೇಷನ್			
ದೇವನಹಳ್ಳಿ	ಸಾವಕನಹಳ್ಳಿ ಸೆಂದಲ್ ಪ್ಲಾಂಟೇಷನ್	65	28—6—07	ದೇವನಹಳ್ಳಿ.
ಡಿಟೋ	ತಾಲ್ಲೂಕು ಕಚೇರಿಮುಂದಿನ ಪ್ಲಾಂಟೇಷನ್ ...	5		
ಡಿಟೋ	ನವಾಬ್ ಬಂಗಲೆ ಡಿಟೋ ...	7 ಗುಂಟೆ.		
ಡಿಟೋ	ಸೊಣ್ಣಪ್ಪನಹಳ್ಳಿ ಡಿಟೋ	4 ಎಕರೆ.		
ಡಿಟೋ	ಬೂವನಹಳ್ಳಿ ಡಿಟೋ	47		
ಡಿಟೋ	ಯರತಿಗಾನಹಳ್ಳಿ ಡಿಟೋ	210		
ಡಿಟೋ	ಚಿಕ್ಕಕೋಟೆ ಡಿಟೋ	300		
ಡಿಟೋ	ರಾಯಸಂದ್ರ ಡಿಟೋ	250		
ಡಿಟೋ	ದಿಬ್ಬಗಿರಿಬೆಟ್ಟ ಡಿಟೋ	600		
ಡಿಟೋ	ಮಂಡಿಬೆಲೆ ಡಿಟೋ	200		
ಡಿಟೋ	ಅಕ್ಕುಂಪೆಟ್ಟೆ ಅಥವಾ ಖಾಸೀಬಾಗ್ ಪ್ಲಾಂಟೇಷನ್.	101		
ದೊಡ್ಡಬಳ್ಳಾಪುರ	ಪಾಲ್ಪಜೋಗಿಹಳ್ಳಿ ಡಿಟೋ ...	29	29—6—07	ದೊಡ್ಡಬಳ್ಳಾಪುರ.
ಡಿಟೋ	ಮದ್ದೇನಹಳ್ಳಿ ಡಿಟೋ ...	25		
ಡಿಟೋ	ಕೋಲೂರು ಡಿಟೋ ...	100		
ಹೊಸಕೋಟೆ	ಹಳೆಜಡಿಗೇನಹಳ್ಳಿ ...	455	25—6—07	ಹೊಸಕೋಟೆ.
ಡಿಟೋ	ನಲ್ಲೂಲ್ A ಮತ್ತು B	734		
ಡಿಟೋ	ಡಿಟೋ C	486		
ಡಿಟೋ	ಅಪ್ಪಸಂದ್ರ	547		
ನೆಲಮಂಗಲ	ಕೆಂಚನಪುರ	535	20—6—07	ನೆಲಮಂಗಲ.
ಡಿಟೋ	ಅರ್ಕಾವತಿ	154		
ಡಿಟೋ	ಮಾವಿನಕೊಮನಹಳ್ಳಿ	435		
ಡಿಟೋ	ಜಕ್ಕಸಂದ್ರ	330		
ಡಿಟೋ	ಕೃಷ್ಣರಾಜಪುರ	423		
ಡಿಟೋ	ಮಾಚೊಹಳ್ಳಿ	270		

ಷರಾ—2. ಹರಾಜು ಬೈದಾದ ಕೂಡಲೆ ಖರೀದಿದಾರನು ¼ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಉಳಿದ ಮುಕ್ಕಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವ ವಿಧದಲ್ಲು ಭಾಗಿಯಾಗುವದಿಲ್ಲ. ಪೂರ್ತ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕುಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕಿ ವಗೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲಿ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟು ತಕಶೀರು ನಡದಲ್ಲಿ ಫಾರೆಸ್ಟು ರೆಗ್ಯುಲೇಷನ್ ರೀತ್ಯಾ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್‌ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ಮಂಜೂರಾದ ಅಂದರೆ ಲೈಸೆನ್ಸು ಕೊಟ್ಟ ತಾರೀಖು ಲಾಗಾಯಿತು 1908ನೆ ಜನವರಿ 31ನೆ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ಹಾಸನ ಡಿಸ್ಟ್ರಿಕ್ಟ್ ಪಸಾರೆ ಬಾಬಿನ ಫಸಲನ್ನು ಅರಸೀಕೆರೆ, ಹಾಸನ ಮತ್ತು ಅರಕಲಗೂಡು ಈ ಡಿಪೋಗಳಲ್ಲಿ 1907ನೆ ಜೂನ್ ತಾರೀಖು 10, 12, 15ರಲ್ಲಿ ಹರಾಜು ಮಾಡುತ್ತೇವೆಂಬ ವಿಷಯ ತಪಶೀಲಾಗಿ 1907ನೆ ಮೇ 16ನೆ ತಾರೀಖು ಮೈಸೂರು ಗೆಜೆಟ್ 11ನೆ ಪಾರ್ಟ್ 201ನೆ ಪೇಜಿನಲ್ಲಿ 10—5—07ನೆ ಮರ್ಸುಂ ಇಸ್ತಿಹಾರ್ ಮೂಲಕ ಪ್ರಸಿದ್ಧಪಡಿಸಿ ಇದೆ. ಎಲ್ಲರಿಗೂ ತಿಳಿಯ ತಕ್ಕದ್ದು.

ಬಿ. ಐ. ಶ್ಯಾಮರಾವ್,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಎಕ್ಸೈಜ್ ಇಲಾಖೆ.

1907—1908ನೆ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ್ 4130, ತಾರೀಖು 10ನೆ ಮಾರ್ಚಿ 1907.

1. ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1907ನೆ ಇಸವಿ ಜುಲೈ ಗುರ್ರ್ತ ತಾರೀಖಿಗೆ ಪ್ರಾರಂಭವಾಗಿ 1908ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರಿ ಮಾಡತಕ್ಕ ಹಕ್ಕನ್ನು ಇದರಡಿಯಲ್ಲಿ ಕಂಡ ತಾಲ್ಲೂಕು ಹೆಡ್ ಕ್ವಾರ್ಟರ್ ಯಾ ಇತರ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್‌ಗಳು ಯಾ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಯಾ ಎಕ್ಸೈಸ್ ಇಲಾಖೆಯ ಡಿವಿಜನ್ ಆಫಿಸರರು ಯಾ ಡೆಪ್ಯುಟಿ ಕಮ್ಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಅಧಿಕಾರಿಗಳು ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಮುಂದೆ ನಮೂದು ಮಾಡಿರುವ ಷರತ್ತುಗಳನ್ನನುಸರಿಸಿ ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರಿ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. (ರಜಾ ದಿನಗಳು ಹೊರತಾಗಿ).

2. (a) ಕೋಲಾರದ ಚಿನ್ನದ ಗಣಿಗಳ ಅಂಗಡಿಗಳಿಗೆ 50 ರೂಪಾಯಿಗಳನ್ನು ಮೈಸೂರು, ಬೆಂಗಳೂರು ಷಹರುಗಳ ಅಂಗಡಿಗಳಿಗೆ 25 ರೂಪಾಯಿಗಳನ್ನು ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿಗಳನ್ನು ಅಥವಾ ಹರಾಜ್ ಮಾಡತಕ್ಕ ಆಫಿಸರರು ಗೊತ್ತುಮಾಡುವ ಇತರ ನ್ಯಾಯವಾದ ಮೊಬಲಗನ್ನು ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಠೇವಣಾತಿ ಇಡತಕ್ಕದ್ದು. ಹರಾಜು ತಾರೀಖಿಗೆ ಮುಂಚೆ 3 ದಿವಸಗಳೊಳಗಾಗಿ ಸದರೀ ಮೊಬಲಗನ್ನು ಸವಾಲ್ದಾರನು ಕೊಟ್ಟರ್ರು ತೆಗದುಕೊಳ್ಳಲ್ಪಡುತ್ತದೆ. ಆದರೆ ಸರ್ಕಾರದವರು ಅಂಥಾ ಆರಂಭದ ಠೇವಣಾತಿ ಮೊಬಲಗನ್ನು ಯಾವಾಗ ಬೇಕಾದರೂ ಅವಶ್ಯಕವಿಲ್ಲವೆಂದು ಬಿಟ್ಟುಬಿಡಬಹುದು. ನಾಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಹರಾಜ್ ಪೂರೈಸಿದ ಕೂಡಲೆ ವಾಪಸ್ ಮಾಡಲ್ಪಡುತ್ತವೆ. ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯಗಳಿಗೆ ಯಾರ ಚಡ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ಕಾರಣಗಳನ್ನು ಉದಹರಿಸದೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಅಂಥಾ ಕ್ರಮವಾದ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದಾಗಿಯೂ ಡೆಪ್ಯುಟಿ ಕಮ್ಮಿಷನರವರು ಖುದ್ದಾಗಿಯೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ಹರಾಜು ನಡಿಸಿದ್ದರೂ ಅವಶ್ಯಕವಾಗಿರುವದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಅವರ ತರಫ್ ಮುತಾಲೀಕರನ್ನು ಕಳುಹಿಸಬೇಕು. ಒಂದೊಂದು ಅಂಗಡಿಗೆ ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೇಹೋದಲ್ಲಿ ಹರಾಜು ನಡಿಸತಕ್ಕ ಆಫಿಸರರು ಎಕ್ಸೈಜ್ ಡಿವಿಜನ್ ಆಫಿಸರರು ಹಾಜರಿದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಒಂದಕ್ಕಿಂತಲೂ ಹೆಚ್ಚಾಗಿ ಅಂದರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ತಾಲ್ಲೂಕುಗಳಲ್ಲಿಯೂ ಕೋಲಾರದ ಚಿನ್ನದ ಗಣಿಯಲ್ಲಿಯೂ ಎರಡಕ್ಕಿಂತ ಹೆಚ್ಚಾಗದಂತೆಯೂ ಇತರ ಸ್ಥಳಗಳಲ್ಲಿ ಆರಕ್ಕಿಂತ ಹೆಚ್ಚಾಗದಂತೆಯೂ ಅಂಗಡಿಗಳನ್ನು ಸೇರಿಸಿ ಹರಾಜು ಮಾಡಿಸಬಹುದು. ಅಥವಾ ಅವಶ್ಯಕವಾಗಿದ್ದಲ್ಲಿ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಮುಂದೆ ವಿಲೇವಾರಿ ಮಾಡಲು ಅಮಾನತ್ತು ಇಡಬಹುದು. ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಹರಾಜು ನಡಿಸತಕ್ಕ ಆಫಿಸರರು ಯಾವದಾದರೂ ವಿಶೇಷ ಸಂದರ್ಭದಲ್ಲಿ ದರಖಾಸ್ತುಗಳ ಮೂಲಕವೇ ಆಗಲಿ ಖಾಸಗೀ ಏರ್ಪಾಟುಗಳ ಮೂಲಕವೇ ಆಗಲಿ ಅಂಗಡಿಗಳನ್ನು ಮಾಡಬಹುದು. ಸರ್ಕಾರದ ಸವಾಲನ್ನು ತಮ್ಮ ಇಷ್ಟಾನುಸಾರ ಕಮ್ಮಿ ಮಾಡಬಹುದು. ಲೈಸೆನ್ಸ್‌ದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗನುಸಾರವಾಗಿ ನಡೆಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರ ಮೇಲೂ ಯಾ ನಾದಾರೀ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜು ನಡಿಸತಕ್ಕ ಆಫಿಸರರು ಅವರಿಗೆ ಯುಕ್ತತೋರಿದ್ದಲ್ಲಿ ಯಾವ ಮನುಷ್ಯನ ಸವಾಲನ್ನಾದರೂ ಕಾರಣವನ್ನು ತಿಳಿಸದೇನೆ ತಿರಸ್ಕರಿಸಬಹುದು.

(b) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಹೊಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. (a) ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಸವಾಲ್ದಾರನು ಸದರೀ ಸ್ವಾತಂತ್ರ್ಯದ ಹಕ್ಕು ತನ್ನ ಹೆಸರಿಗೆ ನಿಂತ ನಂತರ ಹರಾಜು ನಡಿಸತಕ್ಕ ಆಫೀಸರರು ಕೇಳಿದಲ್ಲಿ ತಕ್ಷಣವೇ ಇಲ್ಲದಿದ್ದರೆ ಆ ದಿವಸದ ಹರಾಜು ಖೈದಾದ ನಂತರ ಸಂವತ್ಸರಕ್ಕೆ ತನ್ನ ಸವಾಲಿನ ಮೊಬಲಗಿನಲ್ಲಿ 24ರಲ್ಲಿ 1 ಭಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೇ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು ತಿಂಗಳ ಗುತ್ತಿಗೆ ಹಣಕ್ಕೆ ಸಮಯ ಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಇಡಬೇಕು. ಇದಕ್ಕೆ ತಪ್ಪಿದಲ್ಲಿ 2ನೆ (a) ಕಲಂ ಮೇರೆ ಆತನು ಇಟ್ಟಿರತಕ್ಕ ಠೇವಣಿ ಮೊಬಲಗು ಏನಾದರು ಇದ್ದಲ್ಲಿ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು ಮತ್ತು ಡೆಪ್ಯುಟಿ ಕಮಿಷನರವರು ಯಾ ಹರಾಜು ಮಾಡುವ ಆಫೀಸರರು ಗೊತ್ತುಮಾಡುವ ರೀತ್ಯಾ ಸದರೀ ಹಕ್ಕು ಮೇಲೆ ನಮೂದಿಸಿರುವ ಷರತ್ತುಗಳ ಪ್ರಕಾರ ಆತನನ್ನು ನಷ್ಟಕ್ಕೆ ಗುರಿಮಾಡಿ ಪುನಹಾ ಹರಾಜು ಮಾಡಲ್ಪಡುವದು ಅನ್ಯಥಾ ವಿಲೇವಾರಿ ಮಾಡಲ್ಪಡುವದು.

(b) ಹರಾಜಿನಲ್ಲಿ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಸವಾಲ್ ಅಂಗೀಕರಿಸಲ್ಪಟ್ಟಿದೆಯೋ ಮತ್ತು ಯಾರು ಮೇಲೆ ಹೇಳಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವ ಹಾಗೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟುಹೋಗತಕ್ಕದ್ದು. ಸದರೀ ನೋಟೀಸು ಆತನಿಗೆ ಆಗಲಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ್ ಪಾವತಿಯಾಗೇ ಆಗಲಿ ಅಥವಾ ವಾಸಸ್ಥಾನಕ್ಕೆ ಅಂಟಿಸಲ್ಪಡುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯಲ್ಲಿ ಮೊದಲು ಕೊಟ್ಟ ಠೇವಣಿ ಮೊಬಲಗು ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣಿ ಇಡಬೇಕು. ಮತ್ತು ಅಮಲ್ದಾರ್ರವರಲ್ಲಿ ಅವಶ್ಯಕವಾಗಿರುವ ಒಡಂಬಡಿಕೆಗಳನ್ನು ಬರದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಅವಶ್ಯಕವಾಗಿರುವ ಲೈಸೆನ್ಸುಗಳನ್ನು ತೆಗದುಕೊಳ್ಳತಕ್ಕದ್ದು.

4. (a) ಹಿಂದಿನ ಕಲಮನ್ನನುಸರಿಸಿ ಇಡತಕ್ಕ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಇಂಡಿಯಾ ಗೌರ್ನಮೆಂಟ್ ಸೆಕ್ಯೂರಿಟಿ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲ್ಕಂಡ 2 ತಿಂಗಳ ಗುತ್ತಿಗೇ ಹಣದ ಬದಲಾಗಿ) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಂತೆ ಮೇಲ್ಕಂಡ ಮೇರೆಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣಿ ನಿಸಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮವಾದ ಮೊಬಲಗಿಗೆ ಖಾತ್ರಿ ಜಾಮೀನನ್ನು ಕೊಡುವಂತೆ, ಬಿಕರೀದಾರನಿಗೆ ಅಪ್ಪಣೆ ಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗೆದುಕೊಳ್ಳಬೇಕೇ ಹೊರ್ತು ನಫರ್ ಜಾಮೀನನ್ನು ಅಂಗೀಕರಿಸಕೂಡದು. ಹರಾಜು ನಂತರ ವಿಚಾರಿಸಿದ್ದರಲ್ಲಿ ಆತನು ಮೈಸೂರು ಶೀಮೆಯಲ್ಲಿ ಜಿಂದಗಿಯನ್ನುಂಟಾಗದೆ ಇರುವ ಅನ್ಯದೇಶದವನಾಗಿಯೂ ಜೇವಾಳಸ್ಥನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದಲ್ಲಿ, ವಿಧಾಯಕವಾದ ಎರಡರಷ್ಟು, ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳಿಗನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವುದಕ್ಕಾಗಲೀ ಆತನಿಗೆ ಕೇಳಬಹುದು.

(b) ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು 3 (b) ನೆ ಯಾ 4 (a) ನೆ ಕಲಂ ಮೇರೆಗೆ ಠೇವಣಿ ಇಡಬೇಕಾಗಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಬಿಕರೀದಾರನಿಗೆ ವಾಪಸ್ ಕೊಡಲ್ಪಡುವದು.

5. ಬಿಕರೀದಾರನು ಈ ಕೆಳಗೆ ನಮೂದಿಸಿರುವ ಮತ್ತು ಆತನಿಗೆ ಕೊಡಲ್ಪಡುವ ಲೈಸೆನ್ಸಿನ ಷರತ್ತುಗಳಿಗೆ ಅನುಸರಿಸಿ ನಡೆಯುವುದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮಿಷನರವರ ಹುಕುಮಿನಿಂದ ವಿನಾಯಿಸಿದ ಹೊರ್ತು ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತ್ತನ್ನೂ ಬದ್ಧಿಸುವ ಒಂದು ಒಡಂಬಡಿಕೆಯನ್ನು ಕ್ರಮವಾದ ನಮೂನೆಯಲ್ಲಿ ಬರದು ಕೊಡತಕ್ಕದ್ದು. ಆತನ ಜಾಮೀನ್‌ದಾರನು ಯಾ ಜಾಮೀನ್‌ದಾರರು ಯಾರಾದರೂ ಅಂಗೀಕರಿಸಲ್ಪಟ್ಟಿದ್ದಲ್ಲಿ ಅವರೂ ಕೂಡ ವಿಧಾಯಕವಾಗಿರುವ ನಮೂನೆಯಲ್ಲಿ ತನ್ನನ್ನು ಯಾ ತಮ್ಮನ್ನು ಅಥವಾ ತಮ್ಮ ಚರ ಸ್ಥಿರ ಸ್ವತ್ತುಗಳ ಪೈಕಿ ಬಿಕರೀದಾರನು ಕರಾರಿನ ಷರತ್ತಿಗನುಸಾರವಾಗಿ ನಡೆಯುವದಕ್ಕೆ ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಟ್ಟಿರುವಷ್ಟು ಚರ ಯಾ ಸ್ಥಿರ ಸ್ವತ್ತನ್ನೂ ಬದ್ಧಿಸುವ ಒಂದು ಪತ್ರವನ್ನು ಬರದುಕೊಡತಕ್ಕದ್ದು. ಹಾಗೆ ಬರದು ಕೊಡಲ್ಪಟ್ಟ ಒಡಂಬಡಿಕೆ ವ ಪತ್ರವೂ ಬಿಕರೀದಾರನ ಖರ್ಚಿನಿಂದ ಸ್ಟಾಂಪು ಆಗಬೇಕು, ಮತ್ತು ಪತ್ರದಲ್ಲಿ ಕಂಡ ಮೊಬಲಗು 100 ಅಥವಾ 100ಕ್ಕೆ ಮೀರಿರುವಾಗ ಆತನ ಖರ್ಚಿನಿಂದಲೇನೆ ಅವು ರಿಜಿಸ್ಟರು ಮಾಡಿಸಲ್ಪಡಬೇಕು.

6. ಮೇಲೆ ಹೇಳಿರುವಂತೆ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ಇದ್ದಲ್ಲಿ ಜಾಮೀನ್ ತಮಸೂಕನ್ನು ಬರೆದುಕೊಡಲಿಕ್ಕೂ ಮತ್ತು ಲೈಸೆನ್ಸುಗಳನ್ನು ತೆಗದುಕೊಳ್ಳುವದಕ್ಕೂ ತಪ್ಪಿದರೆ ಡೆಪ್ಯುಟಿ ಕಮಿಷನರವರು ಕೂಡಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೂ ಗುರಿಯಾಗಿರತಕ್ಕದ್ದು. ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ

ಖಂವರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು, ಮತ್ತು ಆತನು ಆ ಅಂಗಡಿಗ್ಗಾಗಲಿ, ಯಾ, ಮತ್ತ್ಯಾವ ಅಂಗಡಿ ಅಂಗಡಿಗಳ ಸಮುದಾಯಕ್ಕಾಗಲಿ ಸವಾಲ್ಮಾಡದಂತೆ ನಿಷೇಧಿಸಿದೆ. ಇದರಿಂದ ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗದುಕೊಂಡ ಠೇವಣಿ ಮೊಬಲಗು ಅದರಿಂದ ಉತಾರು ಹಾಕಲ್ಪಡುವದು, ಮತ್ತು ಬಾಕಿ ಏನಾದರು ಇದ್ದಲ್ಲಿ ಜಮೀನ ಕಂದಾಯದ ಬಾಕಿಯಂತೆ ವಸೂಲಾಗತಕ್ಕದ್ದು. ಹರಾಜು ಮಂಜೂರಾದಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸ್‌ದಾರರು ಯಾ ಅವನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

7. ಮೇಲಿನ 6ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಯಾ ಹರಾಜುಗಳು ಅನ್ಯಥಾ ವಿಲೇವಾರಿಯು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡುವುದರಿಂದ ನಷ್ಟ ಸಂಭವಿಸುವಲ್ಲಿ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿಯಾದ್ದರಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗುವ ನಷ್ಟದ ಮೊಬಲಗಿನಲ್ಲಿ ದಂಡವಾಗಿ ತೆಗದುಕೊಂಡಿರುವ ಠೇವಣಿ ಮೊಬಲಗನ್ನು ವಜಾಯಿಸಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೆ ಹರಾಜಿನಿಂದ ಆಗತಕ್ಕ ನಷ್ಟಕ್ಕಿಂತಲೂ ಹೆಚ್ಚಾಗಿದ್ದಲ್ಲಿ ಆ ಠೇವಣಿ ಮೊಬಲಗು ಯಾವತ್ತನ್ನೂ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

8. ಹಿಂದಿನ ವರ್ಷಗಳ ಬಾಬತು ಅಂಗಡಿಯ ಗುತ್ತಿಗೆ ಮೊಬಲಗು, ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಪಟ್ಟಿಯು ಪ್ರತ್ಯೇಕವಾಗಿ ಪ್ರಕಟಿಸಲ್ಪಡುತ್ತೆ. ಇದನ್ನು ತಾಲ್ಲೂಕು ಅಮಲ್ದಾರರು, ಎಕ್ಸೈಜ್ ಡಿವೀಜನಲ್ ಆಫಿಸರವರು, ಎಕ್ಸೈಜ್ ಇನ್ಸ್‌ಪೆಕ್ಟರು ಮತ್ತು ಅಸಿಸ್ಟೆಂಟ್ ಇನ್ಸ್‌ಪೆಕ್ಟರು ಇವರುಗಳಲ್ಲಿ ಯಾರಿಂದಲಾಗಲೀ ಪಡಿಯಬಹುದು.

9. ಮೇಲಿನ 3 (b)ನೆ ಕಲಂನಲ್ಲಿ ಕಂಡ ಮೇರೆಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದ್ಧರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳ ಸ್ವತಂತ್ರ ಹಕ್ಕನ್ನು ಕೊಂಡುಕೊಂಡವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದೂ ತಪ್ಪಿಸಲಾರದು.

1. ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1907ನೆ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿಲ್ಲದೆ ಇದ್ದಲ್ಲಿ 3 ತ್ರೈಮಾಸಿಕದ ಖಿಸ್ತುಗಳಿಗಿಂತಲೂ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್ ಸೆಸ್ಸಿಗಾಗಿ ಏನೂ ಜಾಸ್ತೀ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಯಾ ತ್ರೈಮಾಸಿಕದ ಇಜಾರೆ ಮೊಬಲಗು ಸದರೀ ಮಾಹೆಯ 20ನೆ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅಥವಾ ಖಿಸ್ತು ಬಾಕೀ ನಿಲ್ಲುವ ತ್ರೈಮಾಸಿಕದ ಆಖೈರೊಳಗಾಗಲೀ, ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮಿಷನರ ಹುಕುಂಪಡೆದು ಸದರೀ ಇಜಾರೆಯನ್ನು ವಜಾಯಿಸಿ ಯಾ ಸದರೀ ಇಜಾರೆ ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡುಮಾಡಿ (ಮಾಹೆ ಯಾ ತ್ರೈಮಾಸಿಕದ ಆಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯಲ್ಲಿ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ಮರಳಿ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿಯು ಹೊಸ ಬಿಕರೀದಾರನಿಗೆ ಕೊಟ್ಟ ಲೈಸೆನ್ಸ್ ತಾರೀಖು ಯಾ ಅನ್ಯಥಾ ವಿಲೇವಾರಿ ಆದ ತಾರೀಖು ಲಾಗಾಯಿತು ಜಾರೀಗೆ ಬರತಕ್ಕದ್ದು. ಲೈಸೆನ್ಸನ್ನು ವಜಾಯಿಸಲು ಅಧಿಕಾರವಿರುವ ಆಫಿಸರರು ತಮಗೆ ಯುಕ್ತ ತೋರಿದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೆ ಅಂಗಡಿಯ ಲೈಸೆನ್ಸ್‌ದಾರನು ಜಾತ್ರೆ ಷುರು ಆಗುವದಕ್ಕೆ ಮೊದಲೇನೆ ಸದರೀ ಅಂಗಡಿಯ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

2. ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತದೆ. ದಂಡವಾಗಿ ತೆಗದುಕೊಳ್ಳಲ್ಪಡದೇ ಯಾ ಜಮಾ ಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಆಗದೆ ಇದ್ದಲ್ಲಿ ಇಜಾರೆ ವಾಯಿದೆಯ ಆಖೈರ್ 2 ತಿಂಗಳ ಖಿಸ್ತು ಮೊಬಲಗಿಗೋಸ್ಕರ ಜಮಾ ಮಾಡಿಕೊಳ್ಳಲ್ಪಡತಕ್ಕದ್ದು. ಪರಂತು ಅಂಗಡಿಯು ಯಾ ಅಂಗಡಿಗಳ ಸಮುದಾಯವು ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯ ಯಾ ಅಂಗಡಿಗಳ ಸಮುದಾಯವು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಗ್ಯೂ ಉಪಯೋಗಿಸಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸುದಾ ರೆವಿನ್ಯೂ ಕಂದಾಯದ ಬಾಕೀ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸ್‌ದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

3. ಬಾಕೀ ಬರಬೇಕಾದ ಪರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಹ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕಡಾ 6ರ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡತಕ್ಕದ್ದು.

4. ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯಿಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿ ಅಥವಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮಿಷನರ್ ನಿರ್ಣಯಿಸಿರುವ ಮೇರೆಗೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಅಂದರೆ ಬ್ರಾಂದಿ ವಿಸ್ಕಿ ಜಿನ್ ಮುಂತಾದ್ದನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಒಪ್ಪಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮಿಷನರವರ ಮಂಜೂರು ಹುಕುಂ ಪಡೆದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಟೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮಿಷನರ್ ಗೊತ್ತು ಮಾಡಿದ ಖರೀದಿ ದರದ ಮೇರೆಗೆ ಮತ್ತು ಸಾರಾಯಿ ಮಾರಾಟಕ್ಕೆ ಸಂಬಂಧಪಟ್ಟ ಷರತ್ತುಗಳಿಗೆ ಒಳಪಟ್ಟು ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು.

5. ಇಜಾರೆಯು ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ಮಾರಿಕೆಯಿಂದಲಾಗಲಿ ದಾನಮೂಲಕವಾಗಿ ಅಗಲೀ ಅಥವಾ ಇತರ ವಿಧವಾಗಿಯಾಗಲೀ ವರ್ಗವಾಗತಕ್ಕದ್ದಲ್ಲ ಯಾ ಒಳಗೇಣಿ ಆಗತಕ್ಕದ್ದಲ್ಲ ಯಾ ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದ್ದಲ್ಲಿ ಅವರ ಅನುಮತಿ ಶಿವಾಯಿ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನಿಗೂ ನೊಕರರಾಗಕೂಡದು. ಮುತಾಲೀಕನೊಡನೆ ಗೊತ್ತು ಮಾಡಿಕೊಂಡಿರುವ ಎಲ್ಲಾ ಒಡಂಬಡಿಕೆಗಳು ಕರಾರು ಮಾಡಿಕೊಂಡ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿ ಇಡಲ್ಪಡತಕ್ಕದ್ದು.

6. ತೆಗೆದುಕೊಳ್ಳಲ್ಪಟ್ಟದ್ದ ಅಂಗಡಿಗಳಿಗೆ ಬರುವ ರಾಜೀನಾಮೆಗಳ ದರಖಾಸ್ತುಗಳನ್ನು ಡೆಪ್ಯುಟಿ ಕಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

7. ಸಾರಾಯಿ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟಿ ಇಳಿಸಲ್ಪಟ್ಟ ಸ್ವದೇಶ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ತಯಾರ್ಮಾಡುವವರೂ ಷರಾಬ್ ಬಾಂಡೆಡ್ ಕೋಟಿ ಲೈಸೆನ್ಸದಾರರೂ ಮೇಲೆ ನಮೂದಿಸಿರುವ ಮದ್ಯಗಳ ಚಿಲ್ಲರೆ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು.

8. ಕುಷ್ಠರೋಗದಿಂದಾಗಲೀ ಅಥವಾ ಇತರ ಅಂಟುರೋಗದಿಂದಾಗಲೀ ಪೀಡಿತರಾದ ಜನಗಳಿಂದ ಸಾರಾಯಿಯನ್ನು ಒಯ್ಯುವದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ, ಮತ್ತು ಅಂಗಡಿಯಲ್ಲಿ ಅಂಥಾ ಜನಗಳನ್ನು ನೌಕರರನ್ನಾಗಿ ಇಟ್ಟುಕೊಳ್ಳುವದಕ್ಕಾಗಲೀ ಅಡ್ಡಿಪಡಿಸಲ್ಪಟ್ಟಿರುತ್ತದೆ.

9. ಲೈಸೆನ್ಸದಾರನು ತಾಟೀ ಬೆಲ್ಲದ ಮತ್ತು ಕಾಕುಂಬಿ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ರೂ. 0—10—11 ದರದ ಮೇರೆ ಬಿರಟೆ ಹಾಕಿ ಮೊಹರ್ಮಾಡಿದ ಶೀಶೆಗಳಲ್ಲಿ 20° ಡಿಗ್ರಿ ಜೋರುಳ್ಳ ಕಬ್ಬಿನ ಬೆಲ್ಲದಸಾರಾಯಿಯನ್ನು ಸಹಾ ಗ್ಯಾಲನ್ 1ಕ್ಕೆ ರೂ. 1-6-5 ಪ್ರಕಾರವೂ ಮತ್ತು ಮೇಲೆ ನಮೂದಿಸಿರುವ ವಿಶೇಷ ಮದ್ಯಗಳನ್ನು ಭಟ್ಟೀದಾರರು ಗೊತ್ತು ಮಾಡುವ ಖರೀದಿ ದರದಂತೆಯೂ ಏರ್ಪಾಡಾಗಿರುವ ಬಾಂಡೆಡ್ ಡಿಪೋಗಳಿಂದ ಕೊಂಡುಕೊಳ್ಳತಕ್ಕದ್ದು.

10. ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ತಾಟೀ ಬೆಲ್ಲದ ಮತ್ತು ಕಾಕುಂಬಿ ಸಾರಾಯಿಯನ್ನು ಗ್ಯಾಲನ್ 1ಕ್ಕೆ 1-6-0 ಯಂತೆಯೂ ಅಥವಾ ಗ್ಯಾಲನ್ನಿನ 1/51ನೆ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಕಬ್ಬಿನ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯುಟೆಡ್ ಕ್ವಾರ್ಟ್ ಶೀಶೆ 1ಕ್ಕೆ 1—3—10 ರಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

11. ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 80 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನು ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ ಫೀಯನ್ನು ಸಹ ಕೊಡಬೇಕು.

12. ಭಟ್ಟೀದಾರರಿಂದ ತಾಟೀ ಬೆಲ್ಲದ ಮತ್ತು ಕಾಕುಂಬಿ ಸಾರಾಯಿ, ಕಬ್ಬಿನ ಬೆಲ್ಲದ ಸಾರಾಯಿ, ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಿದ ಸ್ವದೇಶ ಷರಾಬು ಅಥವಾ ಇತರ ವಿಶೇಷ ಮದ್ಯಗಳು, ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಶಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋದಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ಲೋಕಲ್ ಸೆಸ್ ಸಹಿತ ವಿಧಾಯಕವಾಗಿರುವ $4\frac{3}{4}$ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 1ನೆ ಷರತ್ತು ಅನುಸರಿಸಿ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

13. ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನು ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗೆದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮಿಷನರ್ ಇದಕ್ಕಾಗಿ ನೊಕರರ್ಮಾಡಿರುವ ಇನ್ಯಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಮದ್ಯಕ್ಕೆ ಒಂದು

ದರಖಾಸ್ತನ್ನೂ ಹಾಜರ್‍ಮಾಡಿದರೆ ಬಾಂಡೆಡ್ ಡೆಪೋ ಜಿಮ್ಮೇದಾರನು ಟ್ರೆಜರಿ ಆಫೀಸರರ ರಸೀತಿಯಲ್ಲಿ ನಮೂದು ಮಾಡಿರುವ ಡ್ಯೂ
ಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು
ಮತ್ತು ಘಂಟೆಯನ್ನ ನಮೂದುಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ
ಡೆಪೋ ಜಿಮ್ಮೇದಾರನು ಬಾಂಡೆಡ್ ಡೆಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿ
ಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್
ಬಾಟ್ಲು ಯಾನೆ ಮಾದ್ರಿಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

14. ಲೈಸೆನ್ಸ್‌ದಾರನು 1907ನೆ ಇಸವಿ ಜುಲೈ 1ನೆ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್‌ದಾರನ
ಬಾಬತು ದಾಸ್ತಾನ್ ಮದ್ಯವನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹ
ಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

15. ಲೈಸೆನ್ಸ್‌ದಾರನು ಲೈಸೆನ್ಸ್ ಪಡೆದಿರುವ ಯಾವ ಆವರಣದಲ್ಲಾದರೂ ಎಕ್ಸೈಜ್ ಕಮಿಷನರವರಿಂದ ಆಗಿಂದಾಗ್ಯೆ
ವಿಧಿಸಲ್ಪಡಬಹುದಾದ ಪ್ರಮಾಣದ ಅಳತೇ ಸಾಧನಗಳನ್ನು ಇಟ್ಟುಕೊಂಡು ಉಪಯೋಗಿಸತಕ್ಕದ್ದು. ಲೈಸೆನ್ಸ್ ಪಡೆದ ಅಂಗಡಿ
ಗಳನ್ನು ತನಿಖೆ ಮಾಡಲು ಅಧಿಕಾರವುಳ್ಳ ನೌಕರರು ಆವರಣವನ್ನು ತನಿಖೆ ಮಾಡುವದಕ್ಕೂ ಉಪಯೋಗಿಸಲ್ಪಡುವ ಅಳತೇ
ಸಾಮಾನುಗಳನ್ನೂ ಮತ್ತು ಮದ್ಯವನ್ನು ಪರೀಕ್ಷೆ ಮಾಡುವದಕ್ಕೂ ಅಂಗಡಿಯಲ್ಲಿಟ್ಟಿರುವ ಲೆಖ್ಖವನ್ನು ಕೇಳಿ ತನಿಖೆ ಮಾಡು
ವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

16. ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಮತ್ತು ನಿಬಂಧನೆಗಳಿಗೂ ಮತ್ತು ಸರ್ಕಾರದಿಂದ ಆಗಿಂ
ದಾಗ್ಯೆ ಕಾನೂನುಗಳನ್ನನುಸರಿಸಿ ಸಾದರ್‍ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು, ಮತ್ತು
ಸರಿಪಡಿಸಲು ಯಾ ಹೊಸ ಲೈಸೆನ್ಸ್ ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

17. ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ಕಂಡಾಗ ಅಂಗಡಿಗಳನ್ನು ಮುಚ್ಚಿಸಬಹುದು. ಒಂದು ಸ್ಥಳದಿಂದ
ಮತ್ತೊಂದು ಸ್ಥಳಕ್ಕೆ 200 ಗಜಗಳ ಒಳಗಾಗಿ ವರ್ಗಾಯಿಸಬಹುದು. ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆಯನ್ನು
ಪಡೆದು ಹೊಸ ಅಂಗಡಿಗಳನ್ನು ಇಡಿಸಬಹುದು.

18. ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವವರು ಎಕ್ಸೈಜ್ ಕಮಿಷನರವರ ವಿಶೇಷ ಅಪ್ಪಣೆಯನ್ನು
ಪಡೆದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿ
ರುವ ಸರಕನ್ನು ತೆಗಿಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬ
ಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮಿಷನರ್ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

19. ಅಂಗಡಿಯ ಯಾ ಅಂಗಡಿ ಸಮುದಾಯದ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ಮಾಯಿದೆವಳಗೆ ಅಲ್ಲಿಂದ 5 ಮೈಲಿ
ಯೊಳಗೆ ಶೇಂದಿ ಅಥವಾ ಪರಾಯಿ ದೇಶದ ಮದ್ಯಯೂ ಸಾರಾಯಿ ಯಾ ಇವೆರಡೂ ಮಾರತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನ
ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು; ಅಥವಾ ಅದೇ ಎಲ್ಲೆಯೊಳಗೆ ಶೇಂದಿ ಅಥವಾ ಪರಾಯಿ
ದೇಶದ ಮದ್ಯಯೂ ಸಾರಾಯಿ ಯಾ ಇವೆರಡೂ ಬಿಕರೀ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನು
ಷ್ಯನನ್ನೂ ಒಳದೇಶದ ಮದ್ಯವನ್ನು ಮಾರುವ ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಸಾಲುದಾರನನ್ನಾಗಿ ಆಗಲಿ ಯಾ ಸಂ
ಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ಮಾಯಿದೆ ಅಂದರವಾರ್ ಎಕ್ಸೈಜ್ ಕಮಿಷನರ
ವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈ ಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ
ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲೀ, ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ನ
ಲ್ಲಾಗಲಿ ಲೈಸೆನ್ಸ್‌ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟು
ಕೊಂಡಿರಕೂಡದು.

20. ಕ್ರಮವಾಗಿ ನಂಬರು ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್‌ಸ್ಪೆಕ್ಷನ್ ನೋಟ್ ಪುಸ್ತಕವನ್ನು ತನಿಖೆ ಮಾಡತಕ್ಕ
ಆಫಿಸರುಗಳ ಮರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರೀ ಬುಕ್ಕನ್ನು ರೇಂಜ್ ಛಾರ್ಜಿನಲ್ಲಿರುವ ಇನ್‌ಸ್ಪೆಕ್ಟರೇ ಆಗಲಿ
ಯಾ ಅವರಿಂದ ಅಧಿಕಾರ ಪಡೆದಿರುವ ಇನ್ನ್ಯಾವ ಆಫಿಸರರೇ ಆಗಲಿ ರಸೀತಿ ಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

21. ಎಕ್ಸೈಜ್ ರೆಗ್ಯುಲೇಷನ್ ಯಾ ಒಪಿಯಂ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧ
ನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸ್‌ದಾರ್ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತುಯಾಗಿ ತಪ್ಪು ಸಾಬೀ
ತಾಗಿ ಡೆಪ್ಯುಟಿ ಕಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖು ಎಂದು ಕಂಡು ಬಂದಲ್ಲಿ ಆತನನ್ನು ನಷ್ಟಕ್ಕೆ
ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವುದಕ್ಕೆ ಯಾ ಹಕ್ಕನ್ನು ಮಾರುವುದಕ್ಕೂ
ಯಾ ಅನ್ಯಥಾ ವಿಲೇವಾರಿ ಮಾಡುವುದಕ್ಕೂ ಡೆಪ್ಯುಟಿ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

22. ಲೈಸೆನ್ಸ್‌ದಾರ್‍ರಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾ ಮಾಡಲ್ಪಡಬಹುದು. ಅಥವಾ
ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನ್ ಪ್ರಕಾರ ಯಾ ಆತನ ಜಾಮೀನ್‌ದಾರರ ಆ
ಸ್ತಿಯನ್ನು ಜಫ್ತಿ ಹರಾಜ್ ಮಾಡುವದರ ಮೂಲಕ ವಸೂಲ್ಮಾಡಲ್ಪಡಬಹುದು.

23. ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಬಿಕರೀದಾರರು ಯಾವ ತರಹಾದ ಸಾರಾಯಿಯನ್ನಾದರೂ ಲೈಸೆನ್ಸ್ ಪಡೆದ
ಯಾವ ಅಂಗಡಿ ಯಾ ಆವರಣದಿಂದ ಹೊರಗೆ ನ್ಯಾಯವಾದ ಪರ್ಮಿಟ್ ಇಲ್ಲದೆ ತೆಗೆದುಕೊಂಡು ಹೋಗುವದಕ್ಕೆ ಯಾರೊಬ್ಬರಿಗೂ
ಒಂದು ರೆಪ್ಯೂಟೆಡ್ ಕ್ವಾರ್ಟ್ ಸೀಸೆಗಿಂತ ಹೆಚ್ಚಾಗಿ ಕೊಡಲೂಕೂಡದು, ಮಾರಲೂಕೂಡದು.

24. ಅಂಗಡಿಕಾರರು ಯಾವ ಯೂರೋಪಿಯನ್ ನಾನ್ ಕಮಿಷನ್ಡ್ ಆಫಿಸರ್, ಪ್ರೈವೆಟ್ ಅಥವಾ ಸೋಲ್ಜರಿಗಾದರೂ
ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯೂರೋಪಿಯನ್ ಯಾ ಯೂರೇಷಿಯನ್‌ಗಾದರೂ ಅಥವಾ ಮೇಲೆ

ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫಿಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆ ಇಲ್ಲದೆ ಯಾವ ಸಾರಾಯಿಯನ್ನೂ ಮಾರಲೂಕೂಡದು, ಕೊಡಲೂಕೂಡದು. ಮತ್ತು ಅವರು ಯಾವ ಯೂರೋಪಿಯರ್ಸ್ ಯಾ ಯೂರೇಷಿಯರ್ಸ್ ನಾವಿಕನಿಗೂ ಮತ್ತು ಉದ್ಯೋಗದಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೊಲೀಸ ಅಥವಾ ಎಕ್ಸೈಜ್ ನೌಕರನಿಗೂ ರೇಲ್ವೆ ಕಂಪೆನಿಯ ನೌಕರನಿಗೂ ಮತ್ತು ಪೊಲೀಸ ಮೊಹಸಲಿಯಲ್ಲಿರುವ ಯಾವ ಯೂರೋಪಿಯರ್ಸ್ ಪೋಲೀ ಮನುಷ್ಯನಿಗೂ ಅಥವಾ ಯಾವ ಹುಚ್ಚು ಮನುಷ್ಯನಿಗೂ ಹದಿನಾಲ್ಕು ವರುಷಗಳ ವಯಸ್ಸಿನೊಳಗಾಗಿ ಇರುವ ಯಾವ ಮಗುವಿಗೂ ಅಂಗಡಿಯ ಆವರಣದಲ್ಲಿ ಉಪಯೋಗಿಸಲಿಕ್ಕೆ ಸಾರಾಯಿಯನ್ನು ಮಾರಕೂಡದು ಯಾ ಕೊಡಕೂಡದು; ಶಿವಾಯಿ ಸಾರಾಯಿಯನ್ನು ಸಾಲವಾಗಿ ಮಾರಕೂಡದು ಅಥವಾ ಸಾಲವಾಗಿ ಕೊಡಕೂಡದು.

25. ಲೈಸೆನ್ಸ್‌ದಾರ ಯಾ ಬಿಕರೀದಾರ ಅಥವಾ ಬಿಕರೀದಾರರು ಸಾರಾಯಿಯ ಖರೀದಿ ಹಣಕ್ಕೆ ಯಾವ ವಿಧವಾದ ಪದಾರ್ಥವನ್ನು ಬದಲಿಯಾಗಿಯಾದರೂ ಅಡಮಾನವಾಗಿ ಆದರೂ ತೆಗೆದುಕೊಳ್ಳಕೂಡದು. ಸಾರಾಯಿಗೆ ನಗದು ಹಣವೇ ತೆಗೆದುಕೊಳ್ಳತಕ್ಕದ್ದು. ಮತ್ತು ನಗದು ಹಣವಲ್ಲದೆ ಇನ್ಯಾವ ಪದಾರ್ಥವನ್ನಾದರೂ ಖರೀದಿ ಬದಲಾಗಿ ಬಂದಲ್ಲಿ ಸಮೀಪದಲ್ಲಿ ಇರುವ ಮೇಜಸ್ಟ್ರೇಟರಿಗೇ ಆಗಲಿ ಅಥವಾ ಪೊಲೀಸ ಆಫಿಸರಿಗೇ ಆಗಲಿ ವರ್ತಮಾನ ಕೊಡತಕ್ಕದ್ದು. ಅವರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಹಣ ಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

26. ಅಂಗಡಿಯಲ್ಲಿ ಮಾರಾಟಕ್ಕಾಗಿ ಇಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆರಿಸದೆ ಮತ್ತು ನೀರುಹಾಕದೆ ಇಟ್ಟಿರತಕ್ಕದ್ದು; ಮತ್ತು ಕೋಠಿಯಿಂದ ರವಾನಿಸಲ್ಪಟ್ಟ ತರಹದಲ್ಲಿಯೂ ಮತ್ತು ಜೋರಿನಲ್ಲಿಯೂ ಇರಬೇಕು. ಬಾಂಡೆಡ್ ಡಿಪೋಯಿಂದ ಅಂಗಡಿಗಳಿಗೆ ಬರತಕ್ಕ ಸರಕು ಜೊತೆಯಲ್ಲಿ ಎಕ್ಸೈಜ್ ಕಮ್ಮಿಷನರ್ ಸಾಹೇಬರವರಿಂದ ಹುಕುಂ ಮಾಡಲ್ಪಡುವ ವಿಧಾನದಂತೆ ಸ್ಯಾಂಪಲ್ ಬಾಟ್ಲುಗಳು ಯಾನೆ ಷರಾಬ್ ಮಾದ್ರಿ ಶೀಷೆಗಳನ್ನು ತೆಗೆದುಕೊಂಡು ಹೋಗತಕ್ಕದ್ದು.

27. ಬ್ರಿಟಿಷ್ ರಾಜ್ಯದ ದ್ವಾರಾ ಬಯ್ಯಲ್ಪಟ್ಟ ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ಸರಕು ಮೊಕಾಬಿಲೆ ಬಗ್ಗೆ ನೇಮಿಸಲ್ಪಟ್ಟಿರುವ ನೌಕರಮಾನೇರಿಂದ ಸದರಿ ಸರಕು ಮೊಕಾಬಿಲೆ ಮಾಡಲ್ಪಡುವ ವರೆಗೂ ಹೊಡೆಯಕೂಡದು.

28. ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್‌ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ವಿನಹ ಇತರ ಯಾವ ಮದ್ಯವಾಗಲಿ ನೀರೇ ಆಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು. ಅದರ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿ ಮಾಡುವುದಕ್ಕಾಗಲೀ ಅಥವಾ ಇನ್ಯಾವ ಕಾರಣಗಳಿಗಾಗಲೀ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನೂ ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಎಲ್ಲಾ ಆಫಿಸರರು ಕುಡಿಯುವುದಕ್ಕಾಗಲೀ ಉಪಯೋಗಿಸುವುದಕ್ಕಾಗಲೀ ನಾಲಾಯಖಾಗಿರತಕ್ಕ ಮದ್ಯವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮ್ಮಿಷನರುಗಳು ಎಕ್ಸೈಜ್ ಕಮ್ಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮ್ಮಿಷನರವರು ಎಕ್ಸೈಜ್ ಅಸಿಸ್ಟೆಂಟ್ ಕಮ್ಮಿಷನರುಗಳು ಅಂಥಾ ಮದ್ಯವನ್ನು ನಾಶಪಡಿಸುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

29. ಚೋರಿ ಮಾಡುವ ಜನರು, ಕಳ್ಳರು, ಪೋಲಿ ಜನಗಳು, ದೊಂಬಿ ಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು ಅಥವಾ ಫೌಜು ಬಿಟ್ಟವರೆಂದು ತಿಳಿದುಬಂದ ಅಥವಾ ಸಂಬಲ್ಪಡಬಹುದಾದ ಇತರ ಮನುಷ್ಯರು, ಇವರುಗಳಿಗೆ ಅಂಗಡಿಯಲ್ಲಿ ಸ್ಥಳ ಕೊಡಕೂಡದು. ಅದರಲ್ಲಿ ಜೂಜು ಮುಂತಾದ ದುರ್ನಡತೆಗಳನ್ನು ಅಡ್ಡೀ ಮಾಡತಕ್ಕದ್ದು. ಗುಮಾನಿ ಜನಗಳು ಅಲ್ಲಿಗೆ ಬರುವ ವರ್ತಮಾನವನ್ನು ಅತ್ಯಂತ ಸಮೀಪದಲ್ಲಿರುವ ಮೇಜಿಸ್ಟ್ರೇಟರಿಗೆ ಅಥವಾ ಪೊಲೀಸ ಆಫಿಸರರಿಗೆ ಕೊಡತಕ್ಕದ್ದು. ಯಾವ ಅಂಗಡಿಯಲ್ಲಿಯೂ ರಾತ್ರಿ ಹೊತ್ತಿನಲ್ಲಿ ಯಾರಿಗೂ ಸ್ಥಳ ಕೊಡಕೂಡದು.

30. ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆ ಮೇಲೆ ತನ್ನ ಹೆಸರು, ತನ್ನ ಅಂಗಡಿಯ ನಂಬರ್, ತಾನು ಯಾವ ಪದಾರ್ಥಗಳ ವ್ಯಾಪಾರ ಮಾಡುವುದಕ್ಕೆ ಲೈಸೆನ್ಸ್ ಪಡೆದಿರುತ್ತಾನೋ ಆ ಪದಾರ್ಥಗಳ ಹೆಸರು ಇವುಗಳನ್ನು ದೇಶಭಾಷೆಯಲ್ಲಿ ಸ್ಪಷ್ಟವಾಗಿ ಛಾಪಿಸಿ ತಗಲಹಾಕತಕ್ಕದ್ದು. ಅಂಗಡಿಯ ಒಳಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಲೈಸೆನ್ಸನ್ನು ತಗಲಹಾಕತಕ್ಕದ್ದು.

31. ಪ್ರತಿ ದಿವಸವೂ ಜಮಾ ಖರ್ಚು ಆಗುವ ಮದ್ಯದ ಸಾಚಾ ಲೆಖ್ಖಗಳನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರೆದು ಇಡಬೇಕು. ಈ ಲೆಖ್ಖಗಳು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳ ರೀತಿಯಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ನೌಕರರಿಂದ ಸದರೀ ಪುಸ್ತಕಗಳನ್ನು ಪಡೆಯಬಹುದು. ಕೊಂಡುಕೊಳ್ಳಲ್ಪಡುವ ಸಾರಾಯಿಗೆ ಪರ್ಮಿಟುಗಳನ್ನೂ ಮತ್ತು ಖರ್ಚಾದ್ದಕ್ಕೆ ಕೌಂಟರ್‌ಫಾಯಿಲ್ ಪರ್ಮಿಟುಗಳನ್ನು ಹುಷಾರಿನಿಂದ ಫೈಲು ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟುಗಳನ್ನು ಸೈನ್ ಮಾಡುವದನ್ನು ನಿಷೇಧಿಸಿದೆ. ಸದರೀ ಲೆಖ್ಖಗಳು ಪರ್ಮಿಟುಗಳ ಕೌಂಟರ್‌ಫಾಯಿಲ್‌ಗಳು ಭದ್ರವಾಗಿ ಇಡಲ್ಪಟ್ಟು ಇಜಾರೆ ಮುಗಿದ ತಕ್ಷಣ ಸ್ಥಳದ ಎಕ್ಸೈಜ್ ಆಫಿಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಡೆಪ್ಯುಟಿ ಕಮ್ಮಿಷನರವರು ಮೊಕರರ್‌ಮಾಡುವ ಇತರ ಆಫಿಸರುಗಳೇ ಆಗಲಿ, ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫಿಸರುಗಳೇ ಆಗಲಿ ಕೇಳಿದ್ದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರವರು ಅಥವಾ ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿಲ್ಲದ ಎಕ್ಸೈಜ್ ಆಫಿಸರರು ಆಗಿಂದಾಗ್ಯೆ ಅಪೇಕ್ಷಿಸುವಂಥಾ ಯಾವ ಲೆಖ್ಖಗಳನ್ನಾಗಲೀ ವರ್ತಮಾನಗಳನ್ನಾಗಲೀ ಕೊಡಲಿಕ್ಕೆ ಲೈಸೆನ್ಸ್‌ದಾರನು ಬದ್ಧನಾಗಿರತಕ್ಕದ್ದು.

32. ಮೇಲ್ಕಂಡ ಅಂಗಡಿಗಳಿಗಾಗಿ ಮೇಲಿನ 11 ಷರತ್ತು ಅನುಸರಿಸಿ ಬೆಂಗಳೂರು ಮತ್ತು ಮೈಸೂರು ಷಹರಿನಲ್ಲಿ ಕೊಡಬೇಕಾದ ಫೀ ವಗೈರೆ ಬಾಬಲಗು ಅದನ್ನು ತೆಗೆದುಕೊಳ್ಳುವದಕ್ಕೆ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಂದ ನೇಮಕ ಮಾಡಲ್ಪಟ್ಟ ಆಫಿಸರರಿಗೆ ಪಾವತೀ ಮಾಡತಕ್ಕದ್ದು.

33. ಈ ಕೆಳಗೆ ನಮೂದಿಸಿರುವ ದರಗಳಿಗೆ ಯಾ ಎಕ್ಸೈಜ್ ಡಿವಿಜನಲ್ ಆಫೀಸರರು ಸ್ಥಳದ ಸರಬರಾಯಿಗೆ ಅವಶ್ಯಕವಾಗಿರುವದೆಂದು ಅಭಿಪ್ರಾಯಪಡುವ ಮೊತ್ತಕ್ಕೆ ಕಮ್ಮಿ ಇಲ್ಲದಂತೆ ಯಾವಾಗಲೂ ಸರಕು ಹಾಜರು ಇರಬೇಕು :—

	ಅರಕ್ ಸಾರಾಯಿ.	ಷರಾ.
1. ಎಲ್ಲಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್‌ಗಳಲ್ಲು ...	2 ಗ್ಯಾಲನ್‌ಗಳು.	
2. ಎಲ್ಲಾ ತಾಲ್ಲೂಕು ಮತ್ತು ಕೋಠಿ ಕಸಬಾದಲ್ಲು ...	1 ಗ್ಯಾಲನ್.	
3. ಕೋಠಿಗೆ 5 ಮೈಲಿ ಫಾಸಲೆ ಒಳಗೆ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ.	½ ಗ್ಯಾಲನ್.	
4. ಕೋಠಿಗೆ 5 ಮೈಲಿಗೆ ಜಾಸ್ತಿ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ.	ಕೋಠಿಗೆ ಪ್ರತಿ 10 ಮೈಲಿ ಫಾಸಲೆಗೂ 1 ದಿವಸದ ಬಿಕರಿಗೆ ಆಗುವಷ್ಟು ವ 5 ಮೈಲಿಗಳೊಳಗಾಗಿರುವ ಅಂಗಡಿಗಳಿಗೆ ಗೊತ್ತಾಗಿರುವ ಸರಕಿಗಿಂತಲೂ ಕಮ್ಮಿ ಇಲ್ಲದಂತೆಯೂ ಇರಬೇಕು.	

ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರು ಅಂಗಡಿಯನ್ನು ಹಂಗಾಮಿಯಾಗಿ ಆಗಲೀ ಅಥವಾ ಖಾಯಂ ಆಗಿ ಆಗಲೀ ಮುಚ್ಚುವುದಕ್ಕೆ ಹುಕುಂ ಕೊಟ್ಟ ಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗೆದಿರಬೇಕು.

34. ಅಂಗಡಿಯನ್ನು ರಾತ್ರಿ * 9 ಘಂಟೆಗೆ ಮುಚ್ಚಬೇಕು. ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ವಿಶೇಷವಾದ ಅಪ್ಪಣೆ ಹೊರ್ತು ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿಬಾಗಿಲನ್ನು ತೆಗಿಯಕೂಡದು. ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಸಾರಾಯಿ ಬಿಕರಿ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯೂಟಿ ಕಮ್ಮಿಷನರವರು ಯಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು. ಸರ್ಕಾರದವರು ತಕ್ಕ ಕಾರಣಗಳಿಂದ 15 ದಿವಸದ ಮುಂಚಿತವಾಗಿಯೇ ನೋಟೀಸ್ ಕೊಟ್ಟು ಲೈಸೆನ್ಸ್‌ದಾರರಿಗೆ ನ್ಯಾಯವಾದ ಪರಿಹಾರದ್ರವ್ಯವನ್ನು ಕೊಡಿಸಿ ಗುತ್ತಿಗೆಯನ್ನು ಮೋಖೂಫ್ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತಾರೆ. ಮತ್ತು ಒಳದೇಶದ ಬೀರು ವಿಷಯದಲ್ಲಿ ಯಾ ಸಾರಾಯಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿಯೂ ಸರ್ಕಾರದವರು ಯಾವದಾದರೂ ಏರ್ಪಾಟು ಮಾಡಿದ ವಿಷಯದಲ್ಲಿ ಲೈಸೆನ್ಸ್‌ದಾರರಿಗೆ ಪರಿಹಾರದ್ರವ್ಯಕ್ಕೆ ಯಾ ರಿಮಿಷನ್ ಯಾನೆ ಸೋಡಿಗೆ ಹಕ್ಕು ಇರಲಾರದು.

35. ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರೂ ಪಕ್ಕಗಳಲ್ಲಾದರೂ ಕಿಟಕಿಯಾಗಲಿ ಇರಕೂಡದು. ಷರಾಬನ್ನು ಮಾರುವ ಜಗಲಿಯು ಅಂಗಡಿ ಒಳಗೆ ಇರುವ ಜನಗಳು, ಅಂಗಡಿಮುಂದೆ ಬೀದೀಲಿ ತಿರಗಾಡುವ ಜನರಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿಯು ಗಿರಾಕಿಗಳಿಗಾಗಿ ತೆಗೆದಿಯಿರಕೂಡದು.

36. ಸಮೀಪದಲ್ಲಿ ಕ್ರಮವಾಗಿ ಲೈಸೆನ್ಸ್ ಪಡೆದ ಅಂಗಡಿಗಳಿಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಮದ್ಯವನ್ನು ಬಿಕರೀ ಮಾಡಲು ಆಗಾಗ್ಯೆ ಕೊಡಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವು ಡೆಪ್ಯೂಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳು ಮಾಮೂಲಾಗಿ ಸದರೀ ಪ್ರದೇಶದಲ್ಲಿಲ್ಲಾ ಸರಬರಾಯಿ ಮಾಡುವ ದುಕಾನದಾರರಿಗೆ ಕೊಡಲ್ಪಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯೂಟಿ ಕಮ್ಮಿಷನರಿಗೆ ಯುಕ್ತವಾಗಿ ತೋರಿದಂತೆ ಗೊತ್ತುಮಾಡಲ್ಪಡಬಹುದು. ಡೆಪ್ಯೂಟಿ ಕಮ್ಮಿಷನರವರು ಅದನ್ನು ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡುವಂತೆ ತೀರ್ಮಾನಿಸಬಹುದು.

37. ಲೈಸೆನ್ಸ್‌ದಾರನು ಸಾರಾಯಿಯನ್ನು ಒಯ್ಯುವದಕ್ಕೆ ಯಾ ಬಿಕರೀ ಮಾಡುವುದಕ್ಕೆ ಅವರಿಂದ ನೌಕರರ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರದುಕೊಟ್ಟ ಕರಾರುಗಳಿಗೆ ವಿರೋಧವಾಗಿ ನಡೆದ ಸಂಗತಿಯು ಅವರ ತಿಳುವಳಿಕೆಗೆ ಬಂದಲ್ಲಿ ಆ ಸಂಗತಿಯನ್ನು ಡೆಪ್ಯೂಟಿ ಕಮ್ಮಿಷನರವರಿಗೆ ಇತ್ತಿಲ್ಲೆ ಮಾಡಿ, ಅಂಥಾ ಮನುಷ್ಯನನ್ನು ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯೂಟಿ ಕಮ್ಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರೀಲಿ ತರತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ.

38. ಡೆಪ್ಯೂಟಿ ಕಮ್ಮಿಷನರವರ ಅಪ್ಪಣೆ ಪಡೆದ ಶಿವಾಯಿ ಇಂಡಿಯನ್ ಪಿನಲ್ ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ತಪ್ಪಿತಕ್ಕೆ ಶಿಕ್ಷಿಸಲ್ಪಟ್ಟಿರುವ ಯಾವ ಮನುಷ್ಯನನ್ನಾದರೂ ಮದ್ಯವನ್ನು ಒಯ್ಯುದಕ್ಕಾಗಲೀ ಬಿಕರಿ ಮಾಡುವುದಕ್ಕಾಗಲೀ ನೇಮಿಸಿಕೊಳ್ಳಕೂಡದು.

39. ಲೈಸೆನ್ಸ್‌ದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವವರಲ್ಲಿಯೂ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ ಯಾ ಉದಾಸೀನಕ್ಕೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯೂಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರೀಮೇಲೆ ಆತನನ್ನು ನಷ್ಟಕ್ಕೆ ಗುರಿಮಾಡಿ ಮೇಲ್ಕಂಡ ಅಂಗಡಿಯನ್ನು ಪುನಹಾ ಹರಾಜು ಮಾಡಲಿಕ್ಕೂ ಅಥವಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯೂಟಿ ಕಮ್ಮಿಷನರವರು ಮೊಖ್ತ್ಯಾರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1907ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದುಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

* ಬೆಂಗಳೂರು ಸಿಟಿಯಲ್ಲಿ 9½ ಘಂಟೆಗೆ.

40. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಯಾ ಇತರ ಕಾನೂನುಗಳಿಗೆ ವಿರೋಧವಾಗಿ ನಡೆಸಿದ ತಕ್ಸೀರಿಗೆ ಲೈಸೆನ್ಸದಾರನನ್ನಾಗಲಿ ಯಾ ಆತನ ಮುತಾಲೀಕನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದಯೂರ್ಫ್ತು ಕ್ರಮ ನಡಿಸಲು ಅತಂಕಪಡಿಸುವದಿಲ್ಲ.

ಟಿಪ್ಪಣಿ.—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪಿತಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

ಹರಾಜು ತಾರೀಖು.

ಜಿಲ್ಲಾ	ತಾಲ್ಲೂಕು.	ತಾರೀಖು.
ಬೆಂಗಳೂರು		ಮೇ 1907
	ಬೆಂಗಳೂರು	20
	ದೇವನಹಳ್ಳಿ	23
	ದೊಡ್ಡಬಳ್ಳಾಪುರ	25
	ನೆಲಮಂಗಲ	27
	ಮಾಗಡಿ	29
	ಚನ್ನಪಟ್ಣ	31
		ಜೂನ್ 07
	ಕಾನಕಾನಹಳ್ಳಿ	4
	ಆನೆಕಲ್ಲು	7
	ಹೊಸಕೋಟೆ	10
ಕೋಲಾರ		ಮೇ 07
	ಚಿಕ್ಕಬಳ್ಳಾಪುರ	14
	ಶಿಡ್ಲಘಟ್ಟ	16
	ಚಿಂತಾಮಣಿ	18
	ಶ್ರೀನಿವಾಸಪುರ	21
	ಮುಳಬಾಗಲು	23
	ಕೋಲಾರ	25
	* ಕೋಲಾರ ಭಂಗಾರ ಗಣಿ ಮತ್ತು † ಬೌರಿಂಗ್‌ಪೇಟೆ	27
	ಮಾಲೂರು	31
		ಜೂನ್ 07
	ಗೋರಿಬಿದನೂರು	4
	ಬಾಗೇಪಲ್ಲಿ	7
ತುಮಕೂರು		ಮೇ 07
	ಕುಣಿಗಲು	17
	ತುಮಕೂರು	20
	ಗುಬ್ಬಿ	22
	ತಿಪಟೂರು	25
	ಚಿಕ್ಕನಾಯಕನಹಳ್ಳಿ	28
	ಶಿರಾ	31
		ಜೂನ್ 07
	ಮದ್ದಗಿರಿ	4
	ಪಾವಗಡ	8
ಮೈಸೂರು		ಮೇ 07
	ಮೈಸೂರು	13
	ಶ್ರೀರಂಗಪಟ್ಣ	16
	ಮಳವಳ್ಳಿ	18
	ಮಂಡ್ಯ	20
	ನಾಗಮಂಗಲ	22
	ಕೃಷ್ಣರಾಜಪೇಟೆ	25
	ಎಡತೊರೆ	28
	ಹುಣಸೂರು	30
		ಜೂನ್ 07
	ಹೆಗ್ಗಡದೇವನಕೋಟೆ	1

ಜಿಲ್ಲಾ	ತಾಲ್ಲೂಕು.	ತಾರೀಖು.
ಮೈಸೂರು	ಗುಂಡ್ಲುಪೇಟೆ	4
	ಚಾಮರಾಜನಗರ	6
	ಎಳಂದೂರು	8
	ಟಿ. ನರಸೀಪುರ	10
	ನಂಜನಗೂಡು	12
ಹಾಸನ		ಮೇ 07
	ಮಂಜರಾಬಾದು	25
	ಬೇಲೂರು	28
	ಹಾಸನ	31
		ಜೂನ್ 07
	ಅರ್ಕಲಗೂಡು	4
	ಹೊಳೆನರಸೀಪುರ	6
	ಚನ್ನರಾಯಪಟ್ಣ	8
	ಅರಸೀಕೆರೆ	10
ಕಡೂರು		ಮೇ 07
	ಮೂಡಿಗೆರೆ	30
		ಜೂನ್ 07
	ಚಿಕ್ಕಮಗಳೂರು	1
	ಕಡೂರು	4
	ತರೀಕೆರೆ	6
	† ಎಡೆಹಳ್ಳಿ	8
	ಕೊಪ್ಪ	10
ಶಿವಮೊಗ್ಗ		ಮೇ 07
	ಶಿವಮೊಗ್ಗ	15
	ತೀರ್ಥಹಳ್ಳಿ	18
	ನಗರ	22
	ಸಾಗರ	25
	ಸೊರಬ	28
	ಶಿಕಾರಿಪುರ	31
		ಜೂನ್ 07
	ಹೊನ್ನಾಳಿ	4
	ಚನ್ನಗಿರಿ	7
ಚಿತ್ರದುರ್ಗ		ಮೇ 07
	ಹೊಸದುರ್ಗ	20
	ಹೊಳಲಕೆರೆ	22
	ದಾವಣಗೆರೆ	25
	ಜಗಲೂರು	28
	ಮೊಳಕಾಲ್ಮುರು	31
		ಜೂನ್ 07
	ಚಳ್ಳಕೆರೆ	4
	ಹಿರಿಯೂರು	7
	ಚಿತ್ರದುರ್ಗ	10

* ಭಂಗಾರದ ಗಣಿ ಮ್ಯಾಜಿಸ್ಟ್ರೇಟರ ಕೋರ್ಟು. † ಡೆಪ್ಯುಟಿ ಅಮಲ್ದಾರರ ಆಫೀಸು.

ತಾರೀಖು 6ನೆ ಮೇ 1907.

ನಂಬರು A.

ಇಸ್ತಿಹಾರ್ನಾಮೆ.

1907ನೆ ಇಸವಿಯ ಜುಲೈ ಗುರ್ರೆ ಲಾಗಾಯಿತು ಮೂರು ವರ್ಷ ಕಾಲ ಪರ್ಯಂತ ಗಾಂಜಾ ಗಿಡವನ್ನು ಬೆಳೆದು ಗಾಂಜಾವನ್ನು ತಯಾರ್ಮಾಡಿ ಮೈಸೂರು ಸರ್ಕಾರಕ್ಕೆ ಸರಬರಾಯಿ ಮಾಡುವ ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ದರಖಾಸ್ತುಗಳನ್ನು ಈ ಮೂಲಕ ಕೋರಿದೆ.

2. ಈ ಸ್ವಾತಂತ್ರ್ಯವನ್ನು ಮುಂದೆ ವಿಧಿಸಿರುವ ಷರತ್ತುಗಳಿಗೂ, ಈಗ ಜಾರಿಯಲ್ಲಿರುವ ಮತ್ತು ಮುಂದೆ ಆಗಾಗ್ಯೆ ಏರ್ಪಡಿಸಲ್ಪಡಬಹುದಾದ ಅಬ್ಕಾರಿ ಕಾನೂನುಗಳಿಗೂ, ನಿಬಂಧನೆಗಳಿಗೂ ಒಳಪಟ್ಟು ಕೊಡಲಾಗುವುದು.

3. ಈಗ ಬೇಕಾಗಿರುವ ಗಾಂಜಾವಿನ ಕುಲ್ ಅದದ್ ವರ್ಷ ಒಂದಕ್ಕೆ ಸುಮಾರು 1,000, 1,200 ಮೈಸೂರು ಮಣಗಳೊಳಗೆಂದು (ಅಥವಾ ಸೇರಿಗೆ 80 ತೊಲಾ ತೂಕವುಳ್ಳ 12,000, 14,400 ಸೇರುಗಳೊಳಗೆಂದು) ಅಂದಾಜಾಗಿದೆ. ಪ್ರತಿ ದರಖಾಸ್ತು 200 ಮಣಗಳಿಗಿಂತ (2,400 ಸೇರುಗಳಿಗಿಂತ) ಹೆಚ್ಚಿಗಾಗಲಿ 100 ಮಣಗಳಿಗಿಂತ (1,200 ಸೇರುಗಳಿಗಿಂತ) ಕಡಮೆಗಾಗಲಿ ಆಗಿರಕೂಡದು; ಮತ್ತು 100 ಮಣಗಳಿಗಿಂತ ಎಂದರೆ ಸೇರಿಗೆ 80 ತೊಲಾ ತೂಕವುಳ್ಳ 1,200 ಸೇರುಗಳಿಗಿಂತ ಕಡಮೆಯಾಗಿ ಗಾಂಜಾ ಸರಬರಾಯಿ ಮಾಡುವುದಾಗಿ ಹೇಳುವ ಯಾವ ದರಖಾಸ್ತು ಪರ್ಯಾಲೋಚಿಸಲ್ಪಡುವುದಿಲ್ಲ; ಮತ್ತು ಬಂದ ಒಟ್ಟು ದರಖಾಸ್ತುಗಳ ಪೈಕಿ ಈಗ ಬೇಕಾಗಿರುವ ಪೂರಾ ಮೊತ್ತಕ್ಕೆ ಸರಿಯಾಗಿ ಎಷ್ಟು ಬೇಕೋ ಅಷ್ಟು ಮಾತ್ರವೇ ಅಂಗೀಕರಿಸಲ್ಪಡುವುದು.

4. ಸರಬರಾಯಿ ಮಾಡಲ್ಪಟ್ಟ ಗಾಂಜಾವು ಕೂಡಿದಷ್ಟು ಮಟ್ಟಿಗೆ ಕಡ್ಡಿಯೂ, ಬೀಜವೂ ಇಲ್ಲದೆ ಕರಗುಪಡಿಗೆ ಕೊಡತಕ್ಕ ಸ್ಥಿತಿಯಲ್ಲಿರಬೇಕು. ಎಕ್ಸೈಜ್ ಕಮಿಷನರಿಂದಾಗಲಿ ಅಥವಾ ಗಾಂಜಾವನ್ನು ತೆಗೆದುಕೊಳ್ಳಲು ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಕರಗುಪಡಿಗೆ ತಕ್ಕದ್ದೆಂದು ಅಂಗೀಕರಿಸಲ್ಪಡದೆ ಇರುವ ಗಾಂಜಾವನ್ನೆಲ್ಲಾ ನಾಶಪಡಿಸಲಾಗುವುದು. ತಯಾರಾದ ಗಾಂಜಾ ಪೈಕಿ ಎಕ್ಸೈಜ್ ಕಮಿಷನರಿಂದಾಗಲಿ ಮೇಲ್ಕಂಡಂತೆ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಅಂಗೀಕರಿಸಲ್ಪಡುವಷ್ಟರನ್ನು ಸರ್ಕಾರಕ್ಕೆ ತೆಗೆದುಕೊಂಡು, ಎಕ್ಸೈಜ್ ಕಮಿಷನರು ತರಹೇವಾರಿ ವಿಂಗಡನೆಯಿಂದ ಗೊತ್ತು ಮಾಡುವ ರೀತಿಯಲ್ಲಿ 12 ಸೇರುಗಳ (960 ತೊಲಾಗಳ) ಮಣ ಒಂದಕ್ಕೆ ಆಖೈರು ದರ್ಜಾ 9 ರೂಪಾಯಿ ಲಾಗಾಯಿತು ಅವಲ್ ದರ್ಜಾ 12 ರೂಪಾಯಿ ವರೆಗೆ ಮುನಾಸಬಬ್ ಖರೀದಿ ದೊರೆಕುವುದು. ಅಂಗೀಕಾರಕ್ಕೆ ಲಾಯಖು ಅಲ್ಲದ ಸ್ವಲ್ಪ ಮಾತ್ರ ನಿಕೃಷ್ಟವಾದ ಗಾಂಜಾವಿಗೆ ಉಪಯೋಗಕ್ಕೆ ಲಾಯಖಾಗಿ ಇದ್ದಲ್ಲಿ ಆಖೈರು ದರ್ಜಾ ಕಿಮ್ಮತ್ತಿಗಿಂತ ಕಮ್ಮಿಯಾಗಿ ಮುನಾಸಬಬ್ ಅರಿತು ಖರೀದಿ ಕೊಡಲ್ಪಡುವುದು, ಕಂಟ್ರಾಕ್ಟರು ಅಂಥಾ ಖರೀದಿಗೆ ಒಪ್ಪದೆ ಹೋದರೆ ತಿರಸ್ಕರಿಸಲ್ಪಟ್ಟ ಗಾಂಜಾವಿನಂತೆ ನಿಲೆ ಮಾಡಲ್ಪಡುವದು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಬೆಂಗಳೂರು ಮತ್ತು ನೆಲಮಂಗಲ ತಾಲ್ಲೂಕುಗಳು.
ತುಮಕೂರು ಡಿಸ್ಟ್ರಿಕ್ಟಿನಲ್ಲಿ ಕುಣಿಗಲು ಮತ್ತು ತುಮಕೂರು ತಾಲ್ಲೂಕುಗಳು.
ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮೈಸೂರು ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳು.
ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹೊಳಲ್ಕೆರೆ ಮತ್ತು ದಾವಣಗೆರೆ ತಾಲ್ಲೂಕುಗಳು.

ಗಾಂಜಾ ಸಾಗುವಳಿಯನ್ನು ಈ ರೇಖೆಯಲ್ಲಿ ಕಾಣಿಸಿರುವ ತಾಲ್ಲೂಕುಗಳಲ್ಲಿ ಮಾತ್ರವೇ ನಡೆಸಬೇಕೆಂಬು ವಿಧಿಸಿರುವುದರಿಂದ ದರಖಾಸ್ತುದಾರರು ಇವುಗಳ ಪೈಕಿ ಎಲ್ಲಿ ಗಾಂಜಾ ಸಾಗುವಳಿಯನ್ನು ನಡೆಸುವುದಾಗಿ ಹೇಳುತ್ತಾರೋ ಆ ತಾಲ್ಲೂಕುಗಳ ವಿವರವನ್ನು ಕಾಣಿಸಬೇಕು. ಅಂಗೀಕೃತರಾದ ದರಖಾಸ್ತುದಾರರು ಸಾಗುವಳಿ ನಡೆಸುವುದಾಗಿ ಉದ್ದೇಶಿಸಿರುವ ಸ್ಥಳಗಳನ್ನು ಎಂದರೆ ಗ್ರಾಮಗಳನ್ನೂ ಜಮೀನುಗಳ ಸರ್ವೆ ನಂಬರುಗಳನ್ನೂ ವಿವರಿಸಿ ಕೊಟ್ಟ ಅರ್ಜಿಯ ಮೇಲೆ ಕೊಡಲ್ಪಡುವ ನಿಬಂಧನೆಗಳ ಪ್ರಕಾರ ಸಾಗುವಳಿ ಬಗ್ಗೆ ಕ್ರಮವಾಗಿ ಲೈಸೆನ್ಸು ಪಡೆದ ತರುವಾಯ ಮಾತ್ರವೇ ಸಾಗುವಳಿಗೆ ಆರಂಭ ಮಾಡಬೇಕು. ಸಾಧ್ಯವಾದ ಮಟ್ಟಿಗೂ ಒಂದೇ ಪ್ರದೇಶವನ್ನ ಅಥವಾ ಒಂದಕ್ಕೊಂದಕ್ಕೆ ಹತ್ತಿರದಲ್ಲಿರುವ ತಾಕುಗಳನ್ನು ಚುನಾಯಿಸಬೇಕು. ಚುನಾಯಿಸಿದ ಒಟ್ಟು ವಿಸ್ತೀರ್ಣವು ಕಡೇಪಕ್ಷ 100 ಮಣಗಳ ಉತ್ಪತ್ತಿಗೆ ಸಾಕಾಗಿರಬೇಕು.

5. ಪ್ರತಿ ದರಖಾಸ್ತಿಗೂ ಜತೆಯಲ್ಲಿ ನಗದಾಗಿ ಅಥವಾ ಕರೆನ್ಸಿ ನೋಟುಗಳ ರೂಪದಲ್ಲಿ 50 ರೂಪಾಯಿ ಠೇವಣಿಯನ್ನು ಒಂದು ಮೊಹರು ಮಾಡಿದ ಲಿಫಾಫೆಯಲ್ಲಿ ಹಾಕಿ "ಗಾಂಜಾ ಗಿಡವನ್ನು ಸಾಗುವಳಿ ಮಾಡುವ ಮತ್ತು ಗಾಂಜಾ ತಯಾರ್ಮಾಡಿ ಸರಬರಾಯಿ ಮಾಡುವ ಸ್ವಾತಂತ್ರ್ಯಕ್ಕೆ ದರಖಾಸ್ತು" ಎಂದು ವಿಳಾಸ ಬರೆದು ಬೆಂಗಳೂರಿಗೆ ಎಕ್ಸೈಜ್ ಕಮಿಷನರಿಗೆ 1907ನೆ ಇಸವಿಯ ಜೂನ್ 12ನೆ ತಾರೀಖು ಬುಧವಾರ ಮಧ್ಯಾಹ್ನಕ್ಕೆ ಮುಂಚಿತವಾಗಿ ತಲುಪುವಂತೆ ಕಳುಹಿಸಬೇಕು. ಆ ತಾರೀಖಿನ ತರುವಾಯ ಯಾವ ದರಖಾಸ್ತೂ ಅಂಗೀಕರಿಸಲ್ಪಡುವುದಿಲ್ಲ. ದರಖಾಸ್ತುಗಳನ್ನು ಎಕ್ಸೈಜ್ ಕಮಿಷನರು ಬೆಂಗಳೂರಿನಲ್ಲಿರುವ ತಮ್ಮ ಕಚೇರಿಯಲ್ಲಿ ಆ ದಿವಸ ಮಧ್ಯಾಹ್ನ 12 ಘಂಟೆಗೆ ಅಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ಎದುರಿಗೆ ಒಡೆಯುವರು. ದರಖಾಸ್ತುಗಳನ್ನು ಆಖೈರಾಗಿ ವಿಲೆ ಮಾಡುವ ಅಧಿಕಾರವು ಎಕ್ಸೈಜ್ ಕಮಿಷನರಿಗೇ ಇರುವುದರಿಂದ ಅವರು ದರಖಾಸ್ತುಗಳ ಪೈಕಿ ಯಾವುದನ್ನಾಗಲಿ ಎಲ್ಲವನ್ನಾಗಲಿ ಕಾರಣ ಹೇಳದೇನೇ ತಿರಸ್ಕರಿಸುವ ಪೂರ್ಣಾಧಿಕಾರವನ್ನು ತಮಗೆ ಉಳಿಸಿಕೊಂಡಿರುತ್ತಾರೆ. ಯಾವ ದರಖಾಸ್ತುಗಳು ತಿರಸ್ಕರಿಸಲ್ಪಡುತ್ತವೆಯೋ ಅವರ ಠೇವಣಿ ಹಣಗಳು ಅವರ ಅರ್ಜಿಯ ಮೇಲೆ ಅವರಿಗೆ ವಾಪಸು ಮಾಡಲ್ಪಡುವುವು.

6. ಯಾರ ದರಖಾಸ್ತುಗಳು ಎಕ್ಸೈಜ್ ಕಮಿಷನರಿಂದ ಆಖೈರಾಗಿ ಅಂಗೀಕರಿಸಲ್ಪಡುತ್ತವೆಯೋ ಆ ಮನುಷ್ಯ ಅಥವಾ ಮನುಷ್ಯರು ಅವರ ದರಖಾಸ್ತು ಅಂಗೀಕರಿಸಲ್ಪಟ್ಟ ಸಂಗತಿ ಅವರಿಗೆ ತಿಳಿಸಲ್ಪಟ್ಟ 8 ದಿವಸಗಳೊಳಗಾಗಿ 200 ಮೈಸೂರು ಮಣಗಳ ಗಾಂಜಾ ಸರಬರಾಯಿ ಬಗ್ಗೆ ಹಿಂದೆ ಮಾಡಿದ್ದ ಠೇವಣಿಯೂ ಸೇರಿ ಒಟ್ಟು (ಐದುನೂರು) 500 ರೂಪಾಯಿಗಳಾಗುವಷ್ಟು ನಗದು ಹಣವನ್ನಾಗಲಿ "ಮೈಸೂರು ದಿವಾನರವರ" ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಸರ್ಕಾರಿ ಪತ್ರಗಳನ್ನಾಗಲಿ ಅಥವಾ 200 ಮಣಗಳಿಗಿಂತ ಕಡಿಮೆಯಾದ ಪರಿಮಾಣಗಳಿಗೆ ಅವುಗಳಿಗನುಗುಣವಾದ ಮೊಬಲಗುಗಳನ್ನು, ಬೆಂಗಳೂ

ರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಠೇವಣಿ ಇಟ್ಟು ಇದರಲ್ಲಿ ಮುಂದೆ ವಿವರಿಸಿರುವ ಷರತ್ತುಗಳನ್ನು ಅನುಸರಿಸಿ ನಡೆಯಲು ತಾವು ಬದ್ಧರೆಂದು ಸರಿಯಾದ ಛಾಪಾ ಕಾಗದದ ಮೇಲೆ ಕರಾರು ಬರೆದು ಕೊಡತಕ್ಕದ್ದು; ಸದರೀ ಕರಾರನ್ನು ಬರೆದುಕೊಟ್ಟು ರುಜು ಹಾಕಲು ಅವರು ತಪ್ಪಿದರೆ ಅಥವಾ ಅವಶ್ಯವಾದ ಠೇವಣಿ ಕೊಡಲು ನಿರಾಕರಿಸಿದರೆ ಆ ಮೊದಲೆ ಠೇವಣಿ ಕೊಟ್ಟಿರುವ ಹಣವು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವುದಲ್ಲದೆ, ಸದರೀ ಕಂಟ್ರಾಕ್ಟು ಅನ್ಯಥಾ ವಿಲೆ ಮಾಡಲ್ಪಡುವುದು.

7. ಯಾವ ಬಗ್ಗೆ ಈಗ ದರಖಾಸ್ತು ಕೋರಿದೆಯೋ ಆ ಕಂಟ್ರಾಕ್ಟು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಗಾಂಜಾ ಗಿಡದ ಸಾಗುವಳಿಯನ್ನು ಮತ್ತು ತಯಾರಿಯನ್ನು ಮೇಲ್ವಿಚಾರಣೆ ಮಾಡುವುದಕ್ಕೆ, ಅಥವಾ ಅದಕ್ಕೆ ಸಂಬಂಧಪಟ್ಟ ಮತ್ಯಾವುದಾದರೂ ಕೆಲಸಕ್ಕೆ, ಫಸಲು ಬೆಳೆಯುವ ಜಮೀನುಗಳಿಗಾಗಲಿ, ತಯಾರ್ಮಾಡುವ ಆವರಣಗಳಿಗಾಗಲಿ ಪ್ರವೇಶಿಸುವುದಕ್ಕೆ ಯಾವ ಎಕ್ಸೈಜ್ ಅಥವಾ ಪೋಲೀಸು ಆಫಿಸರು ಅಥವಾ ರೆವಿನ್ಯೂ ಆಫಿಸರನ್ನಾದರೂ ಕಂಟ್ರಾಕ್ಟರು ತಡೆಮಾಡಲಾಗದು.

(2) ಕಂಟ್ರಾಕ್ಟರು, ನಿಂತಿರುವ ಪೈರನ್ನಾಗಲಿ ಅದರಿಂದ ತಯಾರಾದ ಸರಕನ್ನಾಗಲಿ ಸರ್ಕಾರಕ್ಕಲ್ಲದೆ ಇತರ ಯಾವ ಮನುಷ್ಯನಿಗೂ ಬಿಕ್ರಿ ಮಾಡಲು ಅಥವಾ ವರ್ಗಮಾಡಲೂ ಕೂಡದು.

(3) ಕಂಟ್ರಾಕ್ಟರು, ತನ್ನ ಪೈರಿನ ಕೊಯ್ಯಲನ್ನು ಆರಂಭಿಸುವುದಕ್ಕೆ ಹದಿನಾಲ್ಕು ದಿನಗಳಿಗೆ ಕಡಮೆ ಇಲ್ಲದಷ್ಟು ಕಾಲ ಮುಂಚಿತವಾಗಿ, ಕಟಾವು ಮಾಡಲು ಅಪ್ಪಣೆಯ ಬಗ್ಗೆ, ಆಯಾ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರಿಗೆ ಅರ್ಜಿ ಮಾಡಿಕೊಳ್ಳಬೇಕು; ಮತ್ತು ಪೈರನ್ನು ಕೊಯ್ಯುವಾಗಲೂ, ಅದರಿಂದ ಗಾಂಜಾ ತಯಾರ್ಮಾಡುವಾಗಲೂ ಡಿಸ್ಟ್ರಿಕ್ಟು ಎಕ್ಸೈಜ್ ಆಫಿಸರ ಮತ್ತು ಅವರಿಂದ ಆ ಬಗ್ಗೆ ನೇಮಿಸಲ್ಪಡುವ ಅವರ ತಾಬೇದಾರಿ ಅಧಿಕಾರಿಗಳ ಸಾಮಾನ್ಯ ಮೇಲ್ವಿಚಾರಣೆಗೆ ಒಳಪಟ್ಟು ಅವರು ಕೊಡುವ ಅಪ್ಪಣೆಗಳಿಗೆ ಅನುಸಾರವಾಗಿ ನಡೆಯಬೇಕು.

(4) ಪೈರಿನ ಮೇಲ್ವಿಚಾರಣೆ ಮಾಡಲು ನೇಮಿಸಲ್ಪಟ್ಟಿರುವ ಮುಖ್ಯಸ್ಥರಾದ ಎಕ್ಸೈಜ್ ಆಫಿಸರಿಂದ ಖರಹ ಮೂಲಕವಾಗಿ ಅಂಗೀಕರಿಸಲ್ಪಡತಕ್ಕ ಸ್ಥಳಗಳಿಗೆ ಮಾತ್ರ ಕಂಟ್ರಾಕ್ಟರು ಪೈರನ್ನು ಸಾಗಿಸಬೇಕು; ಮತ್ತು ಆ ಸ್ಥಳಗಳಲ್ಲಿ ಮಾತ್ರ ಆ ಪೈರಿನಿಂದ ಗಾಂಜಾ ತಯಾರ್ಮಾಡಬೇಕು. ಪೈರನ್ನು ಸಾಗಿಸುವುದಕ್ಕೆ ಕಂಟ್ರಾಕ್ಟರ ಅರ್ಜಿಯ ಮೇರೆ ಅಂಥಾ ಆಫಿಸರು ಕೊಡುವ ಒಂದು ರಹದಾರಿಯನ್ನು ಪಡೆಯಬೇಕು. ಸಾಗುವಳಿ ಅಥವಾ ಕೊಯ್ಯಲು ನಡೆಯುವಾಗ ಕೀಳಲ್ಪಟ್ಟು ಗಾಂಜಾ ತಯಾರಿಗೆ ಉಪಯೋಗಿಸಲ್ಪಡದೆ ಇರುವ ಎಲ್ಲಾ ಗಿಡಗಳೂ, ಅಂಥಾ ತಯಾರಿಗೆ ತಕ್ಕವಲ್ಲವೆಂದು ಯೋಗ್ಯರಾದ ಆಫಿಸರುಗಳಿಂದ ತೀರ್ಮಾನಿಸಲ್ಪಡುವ ಗಿಡಗಳೂ ಸದರೀ ಆಫಿಸರರ ರೂಬರೂಬು ನಾಶಪಡಿಸಲ್ಪಡಬೇಕು.

(5) ಕೊಯ್ದಾದ ಕೂಡಲೇ ಪೈರನ್ನು ಆ ಬಗ್ಗೆ ನೇಮಿಸಲ್ಪಟ್ಟಿರುವ ಎಕ್ಸೈಜ್ ಆಫಿಸರ ಮೇಲ್ವಿಚಾರಣೆಯಲ್ಲಿ ಕೂಡಿದಷ್ಟು ಶೀಘ್ರವಾಗಿ ಹದ ಮಾಡಿ ಸದರೀ ಗಾಂಜಾವನ್ನು ಬೆಂಗಳೂರು ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿ ಕಟ್ಟಡಗಳಲ್ಲಿರುವ ಪ್ರಾವಿನ್ಷಲ್ ಕೋಠಿಗೆ ಅಥವಾ ಎಕ್ಸೈಜ್ ಕಮಿಷನರು ಅಪ್ಪಣೆ ಮಾಡಬಹುದಾದ ಇತರ ಸ್ಥಳಕ್ಕೆ, ಮೇಲ್ಕಂಡ ಮುಖ್ಯಸ್ಥರಾದ ಎಕ್ಸೈಜ್ ಆಫಿಸರಿಂದ ಕೊಡಲ್ಪಡುವ ರಹದಾರಿ ಪ್ರಕಾರ ಸಾಗಿಸಬೇಕು.

(6) ಮೇಲ್ಕಂಡ (5)ನೆ ಷರತ್ತಿನಲ್ಲಿ ಹೇಳಿರುವ ಸ್ಥಳಕ್ಕೆ ಗಾಂಜಾ ತಲಪಿದಾಗ, ಪುಡಿ, ಬೀಜ ಮತ್ತು ಕಡ್ಡಿ ಇವುಗಳನ್ನು ಕಳೆದು ರಫ್ತಿಗೆ ತಕ್ಕ ಸ್ಥಿತಿಯಲ್ಲಿರುವ ಹಾಗೆ ಜಾಗರೂಕತೆಯಿಂದ ಅದನ್ನು ಜಾಲಿಸಿ, ಆಯ್ದು ತರುವಾಯ ಸಂಬಂಧಪಟ್ಟ ಎಕ್ಸೈಜ್ ಆಫಿಸರಿಂದ ಅದು ಕ್ರಮವಾಗಿ ತೂಗಲ್ಪಟ್ಟು ಕ್ರಮಪ್ರಕಾರ ಅದರ ಬೆಲೆಯು ಪಾವತಿ ಬಗ್ಗೆ ಎಕ್ಸೈಜ್ ಕಮಿಷನರಿಗೆ ರಿಪೋರ್ಟು ಮಾಡಲ್ಪಡತಕ್ಕದ್ದು.

(7) ಕಂಟ್ರಾಕ್ಟರು, ಅಪ್ಪಣೆಯಿಲ್ಲದೆ ಗಾಂಜಾ ಗಿಡದ ಪೈರಿನ ಪೈಕಿ ಎಷ್ಟನ್ನಾಗಲಿ ಕೊಯ್ದರೆ, ಅಥವಾ ಒಯ್ಯುವ ರಹದಾರಿಯಲ್ಲಿ ಕಂಡ ಕಾಲದೊಳಗಾಗಿ ಪೈರನ್ನು ಜಮೀನಿನಿಂದ ತಯಾರ್ಮಾಡುವ ಸ್ಥಳಕ್ಕೆ ಸಾಗಿಸಲು ಅಥವಾ ಅದರಿಂದ ತಯಾರ್ಮಾಡಿದ ಗಾಂಜಾ ಎಲ್ಲವನ್ನೂ ಬೆಂಗಳೂರು ಸರ್ಕಾರಿ ಸೆಂಟ್ರಲ್ ಡಿಸ್ಟಿಲರಿಯಲ್ಲಾಗಲಿ, ಎಕ್ಸೈಜ್ ಕಮಿಷನರು ಅಪ್ಪಣೆ ಮಾಡಬಹುದಾದ ಇತರ ಸ್ಥಳದಲ್ಲಾಗಲಿ ಕೊಡಲು ತಪ್ಪಿದರೆ, ಅಥವಾ ಅವರ ಲೈಸೆನ್ಸಿನಲ್ಲಿ ಕಂಡ ಸ್ಥಳ ಹೊರತು ಬೇರೆ ಕಡೆ ಅದರಿಂದ ಯಾವುದಾದರೂ ನಿಷಾ ಪದಾರ್ಥಗಳನ್ನು ತಯಾರ್ಮಾಡಿದರೆ, ಅಥವಾ ಸದರಿ ರೆವಿನ್ಯೂ ಯಾ ಹುಟ್ಟುವಳಿಯನ್ನು ಭದ್ರಪಡಿಸುವ ಬಗ್ಗೆ ಎಕ್ಸೈಜ್ ಆಫಿಸರುಗಳಿಂದ ಕೊಡಲ್ಪಟ್ಟ ಅಪ್ಪಣೆಗಳನ್ನು ಅಸಡ್ಡೆ ಮಾಡಿದರೆ, ಕಂಟ್ರಾಕ್ಟರು ಮನಃಪೂರ್ವಕವಾಗಿ ಅಂಥಾ ಪ್ರತಿಕಾರ್ಯವನ್ನು ಮಾಡಿದ ಬಗ್ಗೆ ಅಥವಾ ಮಾಡಲು ತಪ್ಪಿದ ಬಗ್ಗೆ, ಎಕ್ಸೈಜ್ ಕಮಿಷನರಿಗೆ ಯುಕ್ತ ಕಂಡ ಮೇರೆ, ಐವತ್ತು ರೂಪಾಯಿಗಳಿಗೆ ಮೀರದ ಒಂದು ಮೊಬಲಗನ್ನು ಅವನ ಠೇವಣಿ ಹಣದಿಂದ ಸರ್ಕಾರಕ್ಕೆ ದಂಡವಾಗಿ ಕಳೆದುಕೊಳ್ಳಲು ಗುರಿಯಾಗತಕ್ಕದ್ದು. ಈ ಷರತ್ತು ಮೇರೆ ಅಂಥಾ ದಂಡ ಕಳೆದುಕೊಂಡುದರಿಂದ, ಕಂಟ್ರಾಕ್ಟರು ಅಂಥಾ ಕೃತ್ಯ ಅಥವಾ ಲೋಪದಿಂದ ಆಗಿಂದಾಗ್ಯೆ ತಿದ್ದುಪಾಟು ಮಾಡಲ್ಪಟ್ಟ 1901ನೆ ಇಸವಿಯ 5ನೆ ನಂಬರ್ ಎಕ್ಸೈಸ್ ರೆಗ್ಯುಲೇಷನಿನ ಅಥವಾ ಅದಕ್ಕೆ ಸಂಬಂಧಪಟ್ಟು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನುಗಳಿಗೆ ವಿರೋಧವಾಗಿ ನಡೆಸಿರಬಹುದಾದ ಯಾವುದಾದರೂ ತಪ್ಪಿತದ ಬಗ್ಗೆ, ಆತನ ಪ್ರಾಸಿಕ್ಯೂಷನಿಗೆ ಅಡ್ಡಿಯಾದುದಾಗಿ ಎಣಿಸಲ್ಪಡಕೂಡದು.

(8) ಮೇಲ್ಕಂಡ ಮೇರೆ ಗಾಂಜಾ ಸರಬರಾಯಿಯು ಪ್ರತಿ ವರ್ಷದ ಏಪ್ರೆಲ್ 15ರ ವೇಳೆಗೆ ಮುಗಿಸಲ್ಪಡಬೇಕು. ಮತ್ತು ಆ ತಾರೀಖಿನ ವೇಳೆಗೆ ಕಂಟ್ರಾಕ್ಟರು ಸರ್ಕಾರಕ್ಕೆ ತಾನು ಬೆಳೆದು ಕೊಡುವುದಾಗಿ ಒಪ್ಪಿಕೊಂಡಷ್ಟು ಗಾಂಜಾವನ್ನು ಸರಬರಾಯಿ ಮಾಡಲು ತಪ್ಪಿದರೆ, ಆತನು ಸರ್ಕಾರಕ್ಕೆ, ಬ್ರಿಟಿಷ್ ರಾಜ್ಯದಿಂದಾಗಲಿ ಇತರ ಕಡೆಯಿಂದಾಗಲಿ ಗಾಂಜಾ ಆಮದು ಬಗ್ಗೆ ಕೊಡಬೇಕಾಗಿರಬಹುದಾದ ಹಾಸಲನ್ನು ಮುಂಚಿತವಾಗಿಯೇ ಕೊಟ್ಟು ಗಾಂಜಾ ಆಮದು ಮಾಡಿಕೊಳ್ಳಲು ಮುಟ್ಟುವ ಖರ್ಚನ್ನು ಆತನು ಗಾಂಜಾ ಸರಬರಾಯಿ ಮಾಡಲು ತಪ್ಪಿದ ಪ್ರಯುಕ್ತ, ಮೈಸೂರು ಸರ್ಕಾರಕ್ಕೆ ಉಂಟಾಗಬಹುದಾದ ಯಾವುದಾದರೂ ಇತರ ನಷ್ಟವನ್ನೂ ಕೂಡ ಕಟ್ಟಿಕೊಡಲು ಬದ್ಧನಾಗಿರತಕ್ಕದ್ದು. ಅಂಥಾ ಖರ್ಚನ್ನೂ, ನಷ್ಟವನ್ನೂ ತಪ್ಪಿತಸ್ಥನಿಂದ ಅವನ ಠೇವಣಿ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದರ ಮತ್ತು ಜಮೀನ್ ಕಂದಾಯದ ವಸೂಲಿಗೆ ಸಂಬಂಧಪಟ್ಟ ನಿಬಂಧನೆಗಳ ಮೇರೆ ಅವನ ಇತರ ಸ್ವತ್ತನ್ನು ಜಪ್ತು ಮಾಡಿ ವಿಕ್ರಯಿಸುವುದರ ಮೂಲಕ ವಸೂಲ್ಮಾಡಲಾಗುವುದು.

ನೋಟಿಸ.

ತಾರೀಖು 23ನೆ ಮೇ 1907.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :— ಸರ್ 1907 – 08ನೆ ಸಾಲಿನಲ್ಲಿ ಮೈಸೂರು ಸಂಸ್ಥಾನದಲ್ಲಿ ಶೇಂದಿ ಉತ್ಪತ್ತಿಯಾಗುವ ಎಲ್ಲಾ ಮರಗಳಿಗೂ ಹಸರು ಬಣ್ಣದಿಂದ ಸಂಖ್ಯೆ ಹಾಕಲ್ಪಡುತ್ತೆ.

ಪಿ. ಎನ್. ಪೂರ್ಣಯ್ಯ,
ಎಕ್ಸೈಜ್ ಕಮಿಷನರ.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹಗ್ಗನಹಳ್ಳಿ ಎಂಬ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 176ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹೆಗ್ಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರ ಗೆಜೆಟ್ಟಿನ IIನೆ ಭಾಗದ 180ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಕೊಟ್ಟಿಗೆ ತಿಮ್ಮನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರ ಗೆಜೆಟ್ಟಿನ IIನೆ ಭಾಗದ 181ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಖಾಯಂಗುತ್ತಾ ಯರ್ರಪ್ಪನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ಮುರ್ಕ್ಕಂ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 177ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಮಾರಗೊಂಡಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರು ಗೆಜೆಟ್ಟಿನ IIನೆ ಭಾಗದ 178ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ನೋಲೂರು ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮುರ್ಕ್ಕಂ 19ನೆ ನಂಬರ ಮೈಸೂರ ಗೆಜೆಟ್ಟಿನ IIನೆ ಭಾಗದ 182ನೆ ನಂಬರ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರೆಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಕಾನೇನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಜೂನ್ ಮಾಹೆ 10 ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್‍ಕ್ಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 180ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಶೇರಿದ ಜೋಡಿ ಚಾಡೇನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಚಾಡೇನಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್‍ಕ್ಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 184ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 30ನೆ ಏಪ್ರೈಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಶೇರಿದ ಜೋಡಿ ಚಿಕ್ಕಗೊಲ್ಲಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಸದರೀ ಚಿಕ್ಕ ಗೊಲ್ಲಹಳ್ಳಿ ಗ್ರಾಮದಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರ್‍ಕ್ಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 183ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಕ್ಲೋಸ್‌ಪೇಟೆ ಕಸಬಾದಲ್ಲಿರುವ ವೈಶ್ಯರ ಕನ್ನಿಕಾಪರಮೇಶ್ವರೀ ದೇವಸ್ಥಾನಕ್ಕೆ ಶೇರಿದ ಪಾಳು ನಿವೇಶನದಲ್ಲಿ ಗಾಣಿಗರ ಅಪ್ಪಯ್ಯನ ಮಗ ವೆಂಕಟಗಿರಿ, ತಿಮ್ಮಯ್ಯನ ಮಗ ದೊಡ್ಡ ವೆಂಕಟ, ಇವರು ಆಟವಾಡುವ ಕಾಲದಲ್ಲಿ ನಿವೇಶನದ ಗೋಡೆಯಲ್ಲಿ ಹೆಂಟೆ ಕೆಳಗೆ ಬರಡು ಸಣ್ಣ ಕುಡಿಕೆಯಲ್ಲಿ 15—10—06ರಲ್ಲು 81 ಕಂಠೀರಾಯಿ ಹಣ ಶಿಕ್ಕಿದ್ದಾಗಿ ತಾಲ್ಲೂಕು ಪೋಲೀಸ 20-16—10—06ನೆ ನಂ|| ಮಾಲು ಫಾರಂ ಪಡೆನೆ ಹಾಜರಾಗಿರುತ್ತೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ನವಂಬರು ಮಾಹೆ ಆಖ್ಯೆರು ವಳಗಾಗಿ ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಟ್ಟು ಸದರಿ ಮಾಲು ಪಡಿಯಬಹುದು. ತಪ್ಪಿದಲ್ಲಿ ಸದರೀ ಮಾಲು ಶಿಕ್ಕಿದವರಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಸುವದಿಲ್ಲಾ.

ಹೆಚ್. ಹೆಚ್. ಸ್ಪೆಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಸರ್ಕಾರಕ್ಕೆ ಬರಬೇಕಾದ ಬಾಕೀಗಾಗಿ ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಜೋಡಿ ಬ್ಯಾಲಹಳ್ಳಿ ಗ್ರಾಮವು 1907ನೆ ಜೂನ್ 19ನೆ ತಾರೀಖಿನಲ್ಲಿ ಕೋಲಾರ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

ಷರಾ—ಹೆಚ್ಚು ತಪಶೀಲಿಗೆ 1907ನೆ ಇಸವಿ ಮೇ ಮಾಹೆ 16ನೆ ಮರ್‍ಕ್ಕಂನೆ ಮೈಸೂರು ಗೆಜೆಟ್ಟಿನ IIನೆ ಭಾಗದ 203ನೆ ಪುಟದಲ್ಲಿ ಫಾಯಿಷಾಗಿರುವ ಇಸ್ತಿಹಾರ್ನಾಮೆಯನ್ನು ನೋಡಬಹುದು.

ಸಿ. ಶ್ರೀಕಂಠೇಶ್ವರ ಅಯ್ಯರ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 30ನೆ ಏಪ್ರೈಲ್ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಶೇರಿದ ಸರ್ವಮಾನ್ಯ ಮಾಚವಳಲು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರರ ಕಚೇರಿಯಲ್ಲಿ 1907ನೆ ಜೂನ್ ಮಾಹೆ 25ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಮೇ ಮಾಹೆ 9ನೆ ಮರುಕಂ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 185ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ತಾರೀಖು 7ನೆ ಮೇ 1907ನೆ ಇಸವಿ.

1907ನೆ ಜುಲೈ ಮಾಹೆ ಗುರ್ರೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ವಿಚಾರದ ಇತರ ತಪಶೀಲುಗಳೆಲ್ಲಾ 1907ನೆ ಇಸವಿ ಮೇ ಮಾಹೆ 16ನೆ ಮರ್ಸ್ಕಂ 20ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 205—206ನೆ ನಂಬರ್ ಪೇಜನ್ನು ನೋಡುವುದು.

ತಾರೀಖು 7ನೆ ಮೇ 1907ನೆ ಇಸವಿ.

1907ನೆ ಜುಲೈ ಮಾಹೆ ಗುರ್ರೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಮಾಹೆ 30ರ ವರಿವಿಗೆ ಎಡತೊರೆ ಟೋಲ್ ಗೇಟನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 28ರಲ್ಲು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ವಿಚಾರದ ಇತರ ತಪಶೀಲುಗಳೆಲ್ಲಾ 1907ನೆ ಇಸವಿ ಮೇ 16ನೆ ಮರ್ಸ್ಕಂ 20ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 207ನೆ ನಂಬರ್ ಪೇಜನ್ನು ನೋಡತಕ್ಕದ್ದು.

ತಾರೀಖು 7ನೆ ಮೇ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟನಲ್ಲಿ 1907ನೆ ಜುಲೈ 18ರ ಲಾಗಾಯಿತು 1908ನೆ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕು ದಾರಿಯು ಸಂತೆಮರಹಳ್ಳಿ ಪೊಲೀಸ್ ಸ್ಟೇಷನ್ ಬಳಿ ಅಸಿಸ್ಟೆಂಟ್ ಕಮಿಷನರವರಿಂದ 1907ನೆ ಜೂನ್ 11ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ವಿಚಾರದ ಇತರ ತಪಶೀಲುಗಳೆಲ್ಲಾ 1907ನೆ ಇಸವಿ ಮೇ 16ನೆ ಮರ್ಸ್ಕಂ 20ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 206ನೆ ನಂಬರ್ ಪೇಜುವನ್ನು ನೋಡುವದು.

ತಾರೀಖು 7ನೆ ಮೇ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕಿಗೆ ಸೇರಿದ ತೆರಕಣಾಂಬಿ ಮಾರ್ಕೆಟ್ಟನಲ್ಲಿ 1907ನೆ ಜುಲೈ 1ರ ಲಾಗಾಯಿತು 1908ನೆ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕು ದಾರಿಯು ಗುಂಡ್ಲುಪೇಟೆ ತಾಲ್ಲೂಕು ಕಚೇರಿ ಬಳಿ ಅಸಿಸ್ಟೆಂಟ್ ಕಮಿಷನರಿಂದ 1907ನೆ ಜೂನ್ 4ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಈ ವಿಚಾರದ ಇತರ ತಪಶೀಲುಗಳೆಲ್ಲಾ 1907ನೆ ಇಸವಿ ಮೇ 16ನೆ ಮರ್ಸ್ಕಂ 20ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 204ನೆ ನಂಬರ್ ಪೇಜನ್ನು ನೋಡುವುದು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಬೋರ್ಡ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ:—ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪ, ಹಿರೇಕೆರೂರ, ರೋಡಿನಲ್ಲಿ ವಡಗೇರಿಯಂಬಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟ ಟೋಲ್‌ಗೇಟಿನಲ್ಲಿ 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಆಖೈರವರಿಗೆ ಸುಂಕದ ವಸೂಲು ಮಾಡುವ ಹಕ್ಕನ್ನು ಡೆಪ್ಯುಟಿ ಕಮಿಷನರವರಿಂದಲಾಗಲಿ, ಅಥವಾ ಈ ಬಗ್ಗೆ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರಿಂದ ಲಾಗಲಿ ಶಿಕಾರಿಪುರ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜೂನ್ ತಾರೀಖು 5ನೆ ದಿನ ಬಹಿರಂಗವಾಗಿ ಹರಾಜು ಹಾಕಿಸಲ್ಪಡುವದು.

ಹೆಚ್ಚಿಗೆ ತಪಶೀಲುಗಳನ್ನು 1907ನೆ ಇಸವಿ ಮೇ 16ನೆ ತಾರೀಖಿನ ಗೆಜೆಟ್ಟಿನ 2ನೆ ಭಾಗದ 212ನೆ ನಂಬರ್ ಪೇಜಿನಲ್ಲಿ ಥಾಯಿಷ್ ಆಗಿರುವ 1907ನೆ ಇಸವಿ ಮೇ 16ನೆ ಮರ್ಸ್ಕಂ ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳಬಹುದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 17ನೆ ಮೇ 1907.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಸರ್ 1907—08ನೆ ಸಾಲಿನಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟು ಹರಿಹರ ಸೇತುವೆ ಮೇಲೆ ಟೋಲ್ ವಸೂಲಾಡತಕ್ಕ ಹಕ್ಕನ್ನು 1907ನೆ ಜೂನ್ 1ನೆ ತಾರೀಖಿನ ದಿವಸ ಮಧ್ಯಾಹ್ನದಲ್ಲಿ ಹರಿಹರ ಸಬ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹೆಚ್ಚಿಗೆ ತಪಶೀಲನ್ನು 1907ನೆ ಇಸವಿ ಮೇ ತಿಂಗಳು 16ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 213ನೆ ಪುಟದಲ್ಲಿ ಥಾಯಿಷ್ ಆಗಿರುವ 1907ನೆ ಇಸವಿ ಮೇ 7ನೆ ತಾರೀಖಿನ ಇಸ್ತಿಹಾರನಾಮೆಯ ಮೂಲಕ ತಿಳಿದುಕೊಳ್ಳಬಹುದು.

ಎಂ. ಚಂಗೈಯ್ಯಶೆಟ್ಟಿ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ತಾರೀಖು 7ನೆ ಮೇ 1907.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನು ಇದರ ಕೊಡನೆ ಜಂಟಿಸಿ ಇರುವ ಪಟ್ಟೀ ಮೇರೆಗೆ 1907ನೆ ಇಸವಿ ಜುಲೈ ಗೆರ್ರೆ ಲಾಗಾಯಿತು 1908ನೆ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳುವ ಬಗ್ಯೆ ಪ್ರೋಪರ್ ಮಾಡಿದ ದರಖಾಸ್ತುಗಳನ್ನು ಇಷ್ಟಪಡುವವರು 1907ನೇ ಇಸವಿ ಮೇ 27ನೆ ತಾರೀಖು ಸೋಮವಾರ ಬವಿ 2 ಘಂಟೆ ಒಳಗಾಗಿ ಈ ಕೆಳಗೆ ಸೈನ್ ಮಾಡಿರುವವರಿಗೆ ಕೊಡಬಹುದು:—

2. ಪ್ರತಿ ಒಂದು ದರಖಾಸ್ತು ಸಂಗಡ ಕರೆನ್ಸಿ ನೋಟ್ ಆಗಲಿ ಅಥವಾ ನಗದಾಗಲಿ (50) ಐವತ್ತು ರೂಪಾಯಿ ಠೇವಣಿ ಮೊಬಲಗು ಹಾಜರ್ಮಾಡಬೇಕು.

3. ದರಖಾಸ್ತುದಾರರು ತಾವು ದರಖಾಸ್ತು ಮಾಡುವ ಪ್ರತಿ ಒಂದು ಬ್ಲಾಕಿಗೂ ತಮ್ಮ ದರಖಾಸ್ತು ಮೊಬಲಗನ್ನು ನಮೂದಿಸಬೇಕು.

ಷರತ್ತುಗಳು.

1. ಆಯಾಯ ಡಿವಿಜನ್‌ಗೆ ಸೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನು ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯಿತು 9 ಘಂಟೆ ವರಿಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ, ಪ್ರೆಸಿಡೆಂಟ್ ಸಾಹೇಬರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನು ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನು ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದುಹಾಕುವುದಕ್ಕೆ ತಗಲುವ ಲಾಗವು ಎಷ್ಟು ಆಗುತ್ತದೆಯೋ ಅದನ್ನು ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನು ಪ್ರತಿದಿನವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನು ಪ್ರತಿ ದಿವಸವೂ ಐಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಬು ಮಾಡಿದಷ್ಟಾಗೆ ಸಾಗಿಸಿಕೊಂಡು ಪಾಕ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೆ ಕಲಂನಲ್ಲಿ ಗೊತ್ತುಮಾಡಿರುವ ಮೇರೆಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಒಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿ ಪುಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತಿಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಹಾಗೆಯೂ, ದಾರಿಗಳಲ್ಲಿ ಚಲ್ಲದಂತೆಯೂ, ಮುಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮುಕ್ಕರಿಯು ಕಸದಮೇಲೆ ಚಾಪೆಯಿಂದ ಕಾಣದಂತೆ ಮುಚ್ಚಿ ಇರಬೇಕು.

4. ಭಂಡಿಗಳೂ ಮತ್ತು ಅವುಗಳ ಮೇಲೆ ಇರತಕ್ಕ ಭಂಡಿ ಮುಕ್ಕರಿಗಳೂ ಸಹ ದೊಡ್ಡದಾಗಿಯೂ ಮಜಬೂತಾಗಿಯೂ ಸಗಣಿಯಿಂದ ಸಾರಿಸಲ್ಪಟ್ಟಿವಂಥವಾಗಿಯೂ ಇರಬೇಕು. ಎತ್ತುಗಳು ಎಳೇ ಪ್ರಾಯದವಳ್ಳವಾಗಿ ದೃಢವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ನಾಲ್ಕು ಖಿಸ್ತಿನಲ್ಲಿ ಅಂದರೆ 1ನೆ ಖಿಸ್ತು 1907ನೆ ಇಸವಿ ಸೆಪ್ಟಂಬರ ಆಖೈರ್ ವರಿಗಿನದು 1907ನೆ ಜುಲೈ 1ನೆ ತಾರೀಖಿನಲ್ಲಿಯೂ, 2ನೆ ಖಿಸ್ತು 1907ನೆ ಇಸವಿ ಡಿಸೆಂಬರ ಆಖೈರ್ ವರಿಗಿನದು 1907ನೇ ಇಸವಿ ಅಕ್ಟೋಬರ 1ನೆ ತಾರೀಖಿನಲ್ಲಿಯೂ, 3ನೆ ಖಿಸ್ತು 1908ನೆ ಮಾರ್ಚಿ ಆಖೈರ್ ವರಿಗಿನದು 1908ನೆ ಇಸವಿ ಜನವರಿ 1ನೆ ತಾರೀಖಿನಲ್ಲಿಯೂ 4ನೆ ಖಿಸ್ತು 1908ನೆ ಜೂನ್ ಆಖೈರು ವರಿಗಿನದು 1908ನೆ ಏಪ್ರೆಲ್ 1ನೆ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳಬೇಕು. ಈ ರೀತಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನು ಒಂದೇ ಗಂಟಿನಲ್ಲಿ ಡಿಮಾರ್ಯಾಡ್ ಮಾಡಿದ ಒಡನೇ ಬೇ ತಕರಾರ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡಲೆ ಅವನ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಪ್ತಿ ಹರಾಜ್ ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೆ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲಿಟ್ಟು ಠೇವಣಿ ಭರ್ತಿ ಬಗ್ಗೇ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ಉಳಿದದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬೇ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪಾಸುಗಳು ದೊರೆಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

ನಂಬರ.	ಡಿವಿಜನ.	ಬ್ಲಾಕ್.	ರೋಡುಗಳ ತಪಶೀಲ್ ಮತ್ತು ಚಕ್ಕು ಬಂದಿ.
1	I		1ನೆ ಡಿವಿಜನ ನಾರದರನ ಎಕ್ಸ್‌ಟೆನ್ಷನ ಮಾಲೇನಹಳ್ಳಿ. ಪಿಂಡಾರ್ಜಿರಿ ಎಲ್ಲಾ ಸಬರ್ಬನ ರೋಡುಗಳು ಗುಟ್ಟಹಳ್ಳಿ, ಮುಸರಡ್ಡಿಪಾಳ್ಯ ವಗೈರೆ ಡಿವಿಜನಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ (ಹಾಲಿ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗ್ಲೆಗಳ ಪಾಯಿಖಾನೆ ವಿನಹ.
2	II	1	ಕಿಚ್ಚೆಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡ್‌ನಿಂದ ಬಳೇಪೇಟೆ ರೋಡಿನವರಿಗೆ, ಮತ್ತು ಉತ್ತರಕ್ಕೆ ಸುಬೇದಾರ ಛತ್ರ ರೋಡ್ ಆಟ್ಟೈರು ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
3	,,	2	ಅವಿನ್ಯೂ ರೋಡ್ ಅಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರದಾರ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	,,	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್, ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್, ಹಳೆ ಸವಾರ ಲೈನಿಗೆ ಸೇರಿದ ಪೊಲೀಸ್ ಸ್ಟೇಷನ ವಗೈರೆ, ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮೆಟಿಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್, ತರಗಿನಪೇಟೆ, ಮಾಮೂಲ್‌ಪೇಟೆ ರಸ್ತೆಗಳು, ಒಳಗಲ್ಲಿಗಳು.
6	,,	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೊಲೀಸ್ ರೋಡ್ ಅಕ್ಕಿ ಪೇಟೆ ರೋಡ್ ವರಿಗೂ, ಅಲ್ಲಿಂದ ಅಕ್ಕಿ ಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆ ಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮೆಟ್‌ಕಲ್ಲು ರೋಡ್ ಚವುಕದವರಿಗೂ ಈ ಮಧ್ಯೆ ಇರುವ ಜಂಗಾನಪೇಟೆ, ಸುಲ್ತಾನಪೇಟೆ, ಸಂತೂಸಾಪೇಟೆ, ಮನವಾರ್ತೆಪೇಟೆ ರೋಡ್‌ಗಳು, ಗಲ್ಲಿಗಳು.
7	,,	3	ಪೊಲೀಸ್ ರೋಡ್ ಅಕ್ಕಿ ಪೇಟೆ ಚವುಕದ ಲಾಗಾಯಿತು ತೋಟದಪ್ಪೇವರ ಮಠದ ವರಿಗೂ, ಅಲ್ಲಿಂದಾ ಉಲ್ಲನಮಿಲ್ ಟ್ಯಾಂಕಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕು ಕಚೇರಿ ರೋಡ್ ಅಕ್ಕಿ ಪೇಟೆ ಚವುಕದವರಿಗೆ. ಈ ಮಧ್ಯೆ ಇರುವ ಗಾರ್ಡನಪೇಟೆ, ಅರಳೇಪೇಟೆ, ಅಕ್ಕಿ ಪೇಟೆ ಗಲ್ಲಿಗಳು, ರಸ್ತೆಗಳು.
8	,,	4	ತರಕಾರಿ ಮಾರ್ಕೆಟ್‌ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬಾರ್‌ಲೈನವರಿಗೂ, ಅಲ್ಲಿಂದ ಕೆಂಗೇರಿ ಬಾಗಲ ಪೊಲೀಸ್ ಸ್ಟೇಷನವರಿಗೆ, ಸ್ಟೇಷನ್ನಿಂದ ರಾಣಾಸಿಂಗನಪೇಟೆ ಜೇಲಿ ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ ಬಾಜೂ ಇರುವ ಷೆಪರ್ಡ್ ಲೈನ, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೊಲೀಸ್ ಸ್ಟೇಷನ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರ ಪೇಟೆ ಅಣ್ಣೈಯ್ಯಪ್ಪ ಶೆಟ್ಟರ ಮನೆವರಿಗೂ ಅಲ್ಲಿಂದಾ ಉತ್ತರಕ್ಕೆ ಸೈಬಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿಪೇಟೆ ರೋಡ್ ಸೇರಿ ಕಬ್ಬನಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನ ಸಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	,,	2	ನಗರ್ತರಪೇಟೆ ಅಣ್ಣೈಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಸೇರಿ ಎಲಹಂಕದ ಬಾಗಲ ಪೊಲೀಸ್ ಸ್ಟೇಷನವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ ರೋಡ್ ಸೆನಟಾಫ್ ಕಬ್ಬನ ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ. ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳರ ಪೇಟೆ, ಮಕ್ಕಳು ಬಸವಣ್ಣನಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು.

ನಂಬರ್.	ಡಿವಿಜನ್.	ಬ್ಲಾಕ್.	ರೋಡ್‌ಗಳ ತಪಶೀಲ್ ಮತ್ತು ಚಕ್ಕುಬಂದಿ.
11	V	2	5ನೆ ಡಿವಿಜನ್ ಮಾಮೂಲ್ ಮೇರಿಗೆ.
12	VI	1	ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿಷನ್‌ರೋಡ್, ಲಾಲ್‌ಬಾಗ್ ರೋಡ್, ಬ್ಯಾಟಪ್ಪನ ತೋಪುನಿಂದ ಬಿಳಿಟ್ಟಿಭಾವಿ ಬಳಿ ಗಲ್ಲಿಯಿಂದ ಮಾವಳ್ಳಿ, ಕೆರೆಕಟ್ಟೆ, ಕಲಾಸಿರೋಡ್, ಹಳೇ ಪೊಲೀಸ್ ಸ್ಟೇಷನ್ ಚವುಕದ ವರಿಗೆ. ಈ ಮಧ್ಯೆ ಇರುವ ಅಮ್ಮಾಚವುದ್ರಿಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರಪಾಳ್ಯದ ರೋಡ್ ಕಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರಿಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕಮಾವಳ್ಳಿ, ದೊಡ್ಡ ಮಾವಳ್ಳಿ, ಕನಕನಪಾಳ್ಯ ಲಾಲ್‌ಬಾಗ್ ರೋಡ್ ಗೇಟಿನ ವರಿಗೂ. ಈಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
14	VII	,,	7ನೆ ಡಿವಿಜನ್ ಕೋಟೆ ಮಾಮೂಲ್ ಮೇರಿಗೆ.
15	,,	,,	ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿಜನ್‌ಗೆ ಸೇರಿದ ರೋಡ್ಡುಗಳು, ಗಲ್ಲಿಗಳು ಯಾವತ್ತು.
16	,,	,,	ಬಸವಣ್ಣನ ಗುಡಿ ಎಕ್ಸ್‌ಟೆನ್‌ಷನ್.
17	,,	,,	ಮಲ್ಲೇಶ್ವರ ಎಕ್ಸ್‌ಟೆನ್‌ಷನ್.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1907ನೆ ಇಸವಿ ಜುಲೈ ಗುರ್‍ರೇ ಲಾಗಾಯತು 1908ನೆ ಇಸವಿ ಜೂನ್ ಆಖೈರುವರಿವಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟಪಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೆ ಇಸವಿ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮುಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮುಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದದಲ್ಲಿ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವವರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಗೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನು ಕಡಿಸಿದಲ್ಲಿ ಆ ಬಗ್ಗೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಮ್ಯುನಿಸಿಪಲ್ ಗಾರ್ಡನ್ನಲ್ಲಿರುವ ತೆಂಗಿನ ಮರಗಳು ಇದಕ್ಕೆ ಶೇರಿರುವದಿಲ್ಲ.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಇದರಡಿ ನಮೂದಿಸಿ ಇರುವ ಹುಲ್ಲು ಗಾವಲುಗಳನ್ನು 1907—08ನೆ ಸಾಲಿಗೆ ಅಂದರೆ 1907ನೆ ಇಸವಿ ಜುಲೈ ಒಂದನೇ ತಾರೀಖು ಲಾಗಾಯಿತು 1908ನೆ ಇಸವಿ ಜೂನ್ ಆಖೈರ್ ವಿನಹ ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೆ ಇಸವಿ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾ ದರಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆ ಹುಲ್ಲುಗಾವಲನ್ನು ಪಡೆದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರು ಮನೆ ಕಟ್ಟುವವಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನು ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾಗುತ್ತದೆ.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರೆ ವಾರ್ ಹೇಳಿದ ಕೂಡಲೆ ಬಿನತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು, ಯಾವ ದರಖಾಸ್ತನ್ನು ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಸಿಲ್ಲಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿ ಕಟ್ಟೆ ಕಾಲ್ವೆ 2ಕ್ಕೆ ...	ದನಗಳನ್ನು ಮೇಯಿಸಿಕೊಳ್ಳುವದಕ್ಕೆ.
2	ಜಕ್ಕರಾಯನ ಕೆರೆ ಕಟ್ಟೆ ಕೆಳಗೆ.	ಡಿಟೋ
3	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು	ಡಿಟೋ
4	ಕೋಟೆ ರ್‍ಯಾಂಪರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆ ವರಿಗೆ ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
5	ಲಾಲ್‌ಬಾಗ್ ಮಾವಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ.
6	ದೊಡ್ಡ ಬೈಲ್‌ಕಾನೆ	ಡಿಟೋ

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
7	ಅರ್ಸಿಕುಂಟೆ ಪಕ್ಕದ ಮತ್ತು ಒಳಗಿನ ಹುಲ್ಲು ..	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ ವಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
8	ಕೆಂಗೇರಿಬಾಗಲ್ ಬಾರ್ಕೋಸ್ ಬಳಿ ಇರುವ ಕಾವಲ್ ಜಮೀನಿನಲ್ಲಿ ನಾಟೂಗಳು ಹಾಕತಕ್ಕ ಬಗ್ಗೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮರ್ಕಾ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನ್ನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.
9	ಮ್ಯುನಿಸಿಪಲ್ ಲಿಮಿಟಿಗೆ ಸೇರಿದ ವೆಸ್ಟ್ರ್ನ್ ಎಕ್ಸ್ಟೆನ್ಷನ್ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ವುಳಿದ ಬೋರ್ಡಿಗೆ ಸೇರಿದ ಜಮೀನ್ನಲ್ಲಿಯೂ, ಭೋಗೇನಹಳ್ಳಿ ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನ್ನಲ್ಲಿಯೂ ಸಹಾ.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
10	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ.
11	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು ..	ರೈಲ್ವೆ ಕಾಂಪಾಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
12	ಮಿಲ್ಲರ್ಸು ಕೆರೆ ಹುಲ್ಲು ...	ಕೊಯಿದುಕೊಳ್ಳುವದಕ್ಕೆ.
13	ಮಾಗಡಿ ರೋಡಿನಲ್ಲಿರುವ ಪ್ಲೇಗ್ ಕ್ಯಾಂಪು ಎಪಿಡೆಮಿಕ್ ಡಿಸೀಸ್ ಆಸ್ಪತ್ರೆ ಕಾಂಪಾಂಡಿನಲ್ಲಿರುವ ಹುಲ್ಲುಗಾವಲು ..	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ.
14	ಮ್ಯುನಿಸಿಪಲ್ ಲಿಮಿಟ್ಟಗೆ ಸೇರಿದ ಬಸವನಗುಡಿ ಮತ್ತು ಮಲ್ಲೇಶ್ವರದ ಎಕ್ಸ್ಟೆನ್ಷನ್ಗಳಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಮತ್ತು ಪಬ್ಲಿಕ್ ಸ್ಕ್ವೇರುಗಳು ಪಾರುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನ್ನಲ್ಲಿ ಬೀಳತಕ್ಕ ಹುಲ್ಲು.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.

ನೋಟಿಸ್.

ತಾರೀಖು 7ನೇ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ 1907ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1908ನೇ ಇಸವಿ ಜೂನ್ 30ನೇ ತಾರೀಖಿನ ವರೆವಿಗೆ ಮಂಜೂರಾಗಿರುವ ದರಗಳ ಮೇರೆಗೆ ರುಸುಂ ಮತ್ತು ಬಾಡಿಗೆಯನ್ನು ವಸೂಲ್ ಮಾಡುವದಕ್ಕೆ ಮೊಹರ್ ನಿಶಿ ದರಖಾಸ್ತುಗಳು ಇಷ್ಟಪಡುವವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೇ ಇಸವಿ ಮೇ 27ನೇ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ಟು ಸರಹದ್ದಿನೊಳಗೆ ಒಟ್ಟಾಗಿ ಆಗಲಿ ಅಥವಾ ಚಿಲ್ರೆಯಾಗಿ ಆಗಲಿ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಉರುಳಿಗಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ, ಮತ್ತು ಇತರ ಜಿನಸಿಗಳ ಗೂಡೆಗಳಿಗೂ ಗಾಡಿಗಳಿಗೂ ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಿಗೆ ತರುವ ಮೀನು, ಕೋಳಿ, ಕೋಳಿ ಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ಟು ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ:—

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಬೈಲ್ ಮಾರ್ಕೆಟ್ಟು.
ಉಪ್ಪಾರಪೇಟೆ ... ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ ಬೈಲ್ ಡಿಟೋ
ಕಲಾಸಿಪಾಳ್ಯ ... ಡಿಟೋ
ಅಕ್ಕಿಪೇಟೆಯಲ್ಲಿರುವ ... ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ಬಾಡಿಗೆ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್ಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ವಸೂಲ್ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡುವದಕ್ಕೆ ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ಮ್ಯುನಿಸಿಪಾಲಿಟಿಗೆ ತಿಂಗಳುಗಟ್ಟಲೆ ಬಾಡಿಗೆ ಕೊಡುವವರಿಂದ ಜಮೀನು ಬಾಡಿಗೆಯನ್ನು ಕಂಟ್ರಾಕ್ಟುದಾರನು ವಸೂಲ್ಮಾಡಕೂಡದು ಮತ್ತು ಹಗಲು ರಾತ್ರಿ ಸಹ ಸಾಮಾನುಗಳು ತೆಗೆಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ಸಹ ಜಮೀನ್ ಬಾಡಿಗೆಯನ್ನು ವಸೂಲ್ಮಾಡಕೂಡದು.

2. ದರಖಾಸ್ತುಗಳ ಮೇಲ್ ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ಮತ್ತು ಜಮೀನ್ ಬಾಡಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನು ಹಾಜರ್ಮಾಡಿದ ಹೊರತು ಯಾವ ದರಖಾಸ್ತನ್ನು ತೆಗೆದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನ ಅವನು ಪಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವಶ್ಯಕವಾದ ಇಜಾರ ಮುಚ್ಚಳಿಕೆಯನ್ನ ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ತೆರಿಗೆ ಅಥವಾ ಬಾಡಿಗೆ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಸಿದ್ದಿಕಟ್ಟೆಯಲ್ಲಿರುವ ಹೋಲ್‌ಸೇಲ್ ವೆಜಿಟೆಬಲ್ ಮಾರ್ಕೆಟ್ಟಿನಲ್ಲಿ. } ಇದರ ತಪ್ಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಸ್ವಂತ ಲಾಗವಡಿನಿಂದ ಒಂದು ಬೋರ್ಡ್ ಹಾಕಿರಬೇಕು.

		ಆ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	2
2.	ಹೆರಿವಸೊಪ್ಪುಗಳ ಮಂಕ್ರಿ 1ಕ್ಕೆ	0	1
3.	ಭಂಡಿ ತುರಬೋ ತರಕಾರಿ, ಹಣ್ಣುಗಳು ಒಟ್ಟು ಟಿಕೆಟಿಗೆ ಬಂದರೆ	2	0
4.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದೇಶ್ಯ ಬರುವ ತರಕಾರಿ ಭಂಡಿ 1ಕ್ಕೆ ...	1	0
5.	ಸೇಬು, ಅಂಜೂರ, ದಾಳಿಂಬೆ, ಚಕ್ಕೋತ್ರೆ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	3
6.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದೇಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರಳಗಡ್ಡೆ, ಈರುಳ್ಳಿ, ಕಡೆಕಾಯಿ ವಗೈರ ಮೂಟೆ 1ಕ್ಕೆ ...	0	3
7.	ರೈಲಿನಿಂದ ಬರುವ ಮೂಟೆ ಭಂಡಿ ಭರ್ತಿ ಕಡ್ಲೆಕಾಯಿ, ಉರಳಗಡ್ಡೆ, ಈರುಳ್ಳಿ, ಮಾವಿನಹಣ್ಣು ಬಾಳೆಹಣ್ಣು ವಗೈರೆ ಒಂದೇವಿಧವಾದ ಬಾಬಿಗೆ	1	0
8.	ಕೋಳಿ, ಕೋಳಿಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ ...	0	3
9.	5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ ...	0	3
10.	ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ ...	1	0
11.	ವೆಜಿಟೆಬಲ್ ಮಾರ್ಕೆಟ್ಟು ಒಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ ...	0	2
12.	ಮೀನಿನ ಸ್ಟಾಲ್ 1ಕ್ಕೆ	0	2

VII. ವೆಜಿಟೆಬಲ್ ಮಾರ್ಕೆಟ್ಟು ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹ ತೆಗೆಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೇಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

VIII. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ಒಳಗಾಗಿ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿ ಯೇ ಹಾಜರ್ಮಾಡಿ ರಶೀತಿ ಪಡೆದುಕೊಳ್ಳಬೇಕು.

IX. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೈಯಿನ್‌ಡ್ರೈನ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು. ವೆಜಿಟೆಬಲ್ ಮಾರ್ಕೆಟ್ಟು ಕಂಟ್ರಾಕ್ಟುದಾರ್ರೇ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ 2 ರೂಪಾಯಿಗಳಂತೆ ಡಿಟೋ ದೇವಸ್ಥಾನದ ಪಿಟಿಟಿಗಾಗಿ ಅವರಿಗೆ ಪಾವತಿ ಬಗ್ಯೆ ಕಂಟ್ರಾಕ್ಟು ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

X. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರೆಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾ ನಿಂತಿರುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಅವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

XI. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿಗೆ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜಿಂದಗಿ ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

XII. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

XIII. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ಪಿವೋನ್ಗಳು ಇಡತಕ್ಕದ್ದು.

XIV. ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳುವ ತೆರಿಗೆ ಅಥವಾ ರುಸುಂಗಳಿಗೆ ಪ್ರೆಸಿಡೆಂಟು ಸಾಹೇಬರು ವಿಧಾಯಕ ಮಾಡುವ ನಮೂನೆಯಲ್ಲಿ ರಶೀತಿಯನ್ನು ಕೊಡಬೇಕು.

ತಾರೀಖು 17ನೇ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: ನಾಲ್ಕನೇ ಡಿವಿಜನ್ ತಾರಾಮಂಡಲ್ ಪೇಟೆ ನಾಲ್ಕು ಭಾವಿ ಖಳಿಯಣ ಖಾಲಿ ಜಮೀನಿನಲ್ಲಿ ಛಂಡಿಗಳು ವಗ್ಯೆರೆ ನಿಲ್ಲುವವರ ಕಡೆಯಿಂದ ಜಮೀನ್ ಬಾಡಿಗೆಯನ್ನು 1907ನೇ ಇಸ್ವಿ ಜುಲೈ ಗುರ್ರು ಲಾಗಾಯತು 1908ನೇ ಇಸ್ವಿ ಜೂನ್ ಆಖೈರ ವರಿಗೆ ರ್ಯೋಜೇನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೇ ಮೇ 27ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

		ರೂ.	ಅ.	ಪೈ.
1.	ಕಟ್ಟಿಗೆ ಮತ್ತು ಹುಲ್ಲುಛಂಡಿ 1ಕ್ಕೆ	0	2	0
2.	ಕಟ್ಟಿಗೆ ಹೊರೆ 1ಕ್ಕೆ	0	0	1
3.	ಹುಲ್ಲು ಹೊರೆ 1ಕ್ಕೆ	0	0	2
4.	ತರಕಾರಿ ಅಂಗಡಿ ಜಾಗಾಕ್ಕೆ	0	0	2
5.	ಕುಂಬಾರ್ರ ಸಾಮಾನು ಮಂಕ್ರಿ 1ಕ್ಕೆ	0	0	2
6.	ವಿರ್ರಾ ವಗ್ಯೆರೆ ಅಂಗಡಿ 1ಕ್ಕೆ	0	0	2

3. ದರಖಾಸ್ತುಗಳ ಮೇಲ್‌ಭಾಗದಲ್ಲಿ "ತಾರಾಮಂಡಲ ಪೇಟೆ ನಾಲ್ಕು ಭಾವಿ ಖಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಛಂಡಿ ವಗ್ಯೆರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದಿರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬುಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೇ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದು ಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾ ನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನು ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗ್ಯೆರೆ ಛಂಡಿಗಳೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗ್ಯೆರೆ ಹೊರೆಗಳೆ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಛಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗ್ಯೆರೆಗಳಿಗೆ ಆಗಲಿ ರುಸುಂ ವಸೂಲ್ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರ್ರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

15. ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳುವ ತೆರಿಗೆ ಅಥವಾ ರುಸುಂಗಳಿಗೆ ಪ್ರೆಸಿಡೆಂಟರು ವಿಧಾಯುಕ ಮಾಡುವ ನಮೂನೆಯಲ್ಲಿ ರಶೀತಿಯನ್ನು ಕೊಡಬೇಕು.

ನೋಟಿಸ್.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸಿಟಿ ತರ್ಕಾರಿ ಮಾರ್ಕಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದಲ್ಲಿ ಜಮಾಯಿಸುವ ಹುಲ್ಲು ಹೊರೆಗಳು ಮಾರತಕ್ಕವರಿಂದ ಮತ್ತು ಕೊರಚರ ಅಂಗಡಿಗಳಿಂದ 1907ನೆ ಇಸವಿ ಜುಲೈ ಗುರ್ರ್ರೆ ಲಾಗಾಯಿತು 1908ನೆ ಜೂನ್ ಆಖೈರು ವರಿವಿಗೆ ಇದರಡಿ ನಮೂದಿಸಿರುವ ದರಗಳ ಮೇರಿಗೆ ರೋಜೀನಾ ರುಸುಂ ಮತ್ತು ಬಾಡಿಗೆಯುನ್ನು ವಸೂಲ್ಮಾಡಿಕೊಳ್ಳುವ ಹಕ್ಕು ಪಡಿಯಲು ಇಷ್ಟವಿರುವವರು ಈ ಕೆಳಗೆ ಸೈನ್ ಮಾಡಿ, ಇರುವವರಿಗೆ 1907ನೆ ಇಸವಿ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಮೊಹರ್ಸಿ ದರಖಾಸ್ತುಗಳನ್ನು ಕೊಡಬಹುದು.

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ಮತ್ತು ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್.

	ಆ.	ಪೈ.
ಹುಲ್ಲು ಭಂಡಿ 1ಕೆ	2	0
ಹುಲ್ಲು ಹೊರೆ 1ಕ್ಕೆ	0	2
ಕೊರಚರ ಅಂಗಡಿ 1ಕ್ಕೆ	0	2

3. ದರಖಾಸ್ತು ಮೇಲ್‌ಭಾಗದಲ್ಲಿ ಬೆಂಗಳೂರು ಸಿಟಿ ತರಕಾರಿ ಮಾರ್ಕಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದಲ್ಲಿ ಜಮಾಯಿಸುವ ಹುಲ್ಲು ಹೊರೆಗಳು ಮಾರತಕ್ಕವರಿಂದ ರುಸುಂ ಮತ್ತು ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ಒಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿ ಇರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು ಭಂಡಿಗಳೇ ಆಗಲಿ ಅಥವಾ ಹುಲ್ಲು ಹೊರೆಗಳೇ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು ಹೊರೆಗಳಿಗೇ ಆಗಲಿ ರುಸುಂ ವಸೂಲ್ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತು ಹರಾಜು ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

15. ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳುವ ಬಾಡಿಗೆ ಅಥವಾ ರುಸುಂಗಳಿಗೆ ಪ್ರೆಸಿಡೆಂಟರು ವಿಧಾಯಕ ಮಾಡುವ ನಮೂನೆಯಲ್ಲಿ ರಶೀತಿ ಕೊಡಬೇಕು.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ್ 1ಕ್ಕೆ 0—3—0 ಮೂರು ಆಣೆ ಮ್ಯಾರಿಗೆ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಇಸವಿ ಜೂನ್ ಆಖೈರ್ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಸನ್ 1907ನೆ ಇಸವಿ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರೆದುಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಉಂಟಾಗುವ ನಷ್ಟಕ್ಕೆ ಆತನು ಗುರಿಯಾಗುತ್ತಾನೆ.

6. ಸ್ಲಾಟರ್ ಹೌಸನ್ನು ಪಾಕ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್ಮೆಂಟ್ ಛಾರ್ಜಿಗಾಗಿ ಮಾಹೇಯಾನ 25 ರೂಪಾಯಿ ಮೇರಿಗೆ ಹರಯೇಕ ತಿಂಗಳು 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸಿನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರರಿಗೆ ಸೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷ್ಮೆಂಟ್ ಛಾರ್ಜನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡೆಯಬೇಕಾಗಿದೆ.

8. ಅಮಾನತಿನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಆಖೈರ್ ಆಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರಸಿಡೆಂಟ್ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಹಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸದರೀ ಸ್ಲಾಟರ್ ಹೌಸನ್ನು ಕಂಟ್ರಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ದೇ ಆದರೆ ಬಿಲಾ ತಕರಾರ್ ಅಲ್ಲಿಗೆ ಹೋಗಬೇಕು.

11. ಪ್ರಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿಲಾ ತಕರಾರು ತೆಗದುಕೊಳ್ಳಲು ಸಲೀಸ್ ವಿರ್ಹಾಡು ಇಡತಕ್ಕದ್ದು.

12. ಪಾರ್ಲಟಿಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಅದಕ್ಕೆ ಹಿಂದಿನ ದಿನ ಸ್ಲಾಟರ್ ಹೌಸಿನಲ್ಲಿವ ಪಾರ್ಟಿಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್ ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಪ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 7ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ರೋಡು ಹಳೆ ಟಿಂಬರುಯಾರ್ಡು ಬಳಿ ಇರುವ ಮ್ಯುನಿಸಿಪಲ್ ಖಾಲಿ ಜಮೀನಿನಲ್ಲಿ ಭಂಡಿಗಳು ವಗ್ಯೆರೆ ನಿಲ್ಲುವವರ ಕಡೆಯಿಂದ ಜಮಾನು ಬಾಡಿಗೆಯನ್ನು 1907ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1908ನೆ ಇಸವಿ ಜೂನ್ ಆಖೈರು ವರಿವಿಗೆ ರೋಜೀನಾ ಇದರಡೀ ನಮೂದಿಸಿರುವ ದರಗಳಂತೆ ವಸೂಲ್ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೆ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2 c

2. ಮೇಲ್ಕಂಡ ಜಾಗದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರೆಗಳ ತಪಶೀಲ್ :—

	ರೂ.	ಆ.	ಪೈ.
1. ಕಟ್ಟಿಗೆ ಮತ್ತು ಹುಲ್ಲು ಭಂಡಿ 1ಕ್ಕೆ	0	2	0
2. ಕಟ್ಟಿಗೆ ಹೊರೆ 1ಕ್ಕೆ	0	0	1
3. ಹುಲ್ಲು ಟಿ ಮೋ	0	0	2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುಜಕೂರು ಮೈಸೂರು ರೋಡು ಹಳೆ ಟಿಂಬರು ಯಾರ್ಡು ಬಳಿ ಇರುವ ಮ್ಯುನಿಸಿಪಲ್ ಖಾಲಿ ಜಮೀನಿನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತ್ತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್‌ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಪ್ರಕಾರ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳ ಆಗಲಿ ಅಥವಾ ಹುಲ್ಲು, ಕಟ್ಟಿಗೆ, ವಗೈರೆ ಹೊರೆಗಳ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದು ಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಪ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ, ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿ. ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 7ನೆ ಮೇ 1907.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸಿಟಿ ಮುಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದ ದಕ್ಷಿಣ ಭಾಗದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದು ಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1907ನೆ ಇಸವಿ ಜುಲೈ ಗುರ್ರೇ ಅಗಾಯಿತು 1908ನೆ ಇಸವಿ ಜೂನ್ ಆಖೈರು ವರಿವಿಗೆ ರೋಜೀನಾ ದರ ಭಂಡಿ 1ಕ್ಕೆ 0-0-6 ಪೈ ಮೇರೆಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1907ನೆ ಮೇ 27ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು. ಸದರೀ ಸ್ಥಳದ ಪ್ಲಾನ್ ಮುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನ ದಕ್ಷಿಣ ಭಾಗದಲ್ಲಿ ಕಲ್ಲುಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವವಿಲ್ಲವು; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಅಖೈರಾಗುವವರೆಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾ ನಡಿಸುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಬಂಡಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲ ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಸಿಕೊಂಡರೆ ತಕ್ಷಣ ಕಂಟ್ರಾಕ್ಟನ್ನು ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನು ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುತ್ತೆ.

ಹೆಚ್. ಹೆಚ್. ಸ್ಪಾರ್ಕ್ಸ್,
ಪ್ರೆಸಿಡೆಂಟ್.

ಇಸ್ತಿಹಾರ್.

ತಾರೀಖು. ನೇ ಮೇ 1907.

ಅದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ಸಾದರಾದ 29—6—1901ನೆ ಮುಶುರ್ಂ 17691— L. B. (P) 633ನೆ ನಂಬರ್ ಪ್ರೊಸೀಡಿಂಗ್ಸ್ ಅನುಸರಿಸಿ ಇದರ ಮಾರ್ಜಿನ್ನಲ್ಲಿ ತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಮತ್ತು ಮಲ್ಲೇಶ್ವರ ಎಕ್ಸ್ಟೆನ್ಷನ್ಗೆ ಸೇರಿದ ಕಟ್ಟಡ ಕಟ್ಟತಕ್ಕ ಸೈಟುಗಳನ್ನು 1907ನೆ ಇಸವಿ ಜೂನ್ ತಾ|| ರಲ್ಲು

	ಬಸವನಗುಡಿ ಎಕ್ಸ್ಟೆನ್ಷನ್.	ಅಳತೆ.	ಹರಾಜು ತಾರೀಖು.
2ನೆ ಬ್ಲಾಕ್	260—261—262—263 & 264	110 × 30	4—6—07
4ನೆ ಬ್ಲಾಕ್	27—28—84	100 × 30	4—6—07
5ನೆ ಬ್ಲಾಕ್	26—35	100 × 30	4—6—07
	ಮಲ್ಲೇಶ್ವರ ಎಕ್ಸ್ಟೆನ್ಷನ್.		
ಬಿಗಹಾಸ್ ಸೈಟ	25	157 × 215	5—6—07
	26	137 × 215	5—6—07
	35 & 36	153 × 215	5—6—07
6ನೆ ಕ್ರಾಸ್ ರೋಡ್	49—50	100 × 30	5—6—07
7ನೆ ಆಟೆಸೀ	506 & 507	70 × 30	5—6—07

ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸಿ ಇರುತ್ತಾಗಿ ಹಾಜರಿನಲ್ಲಿ ಭಡ ಸವಾಲ್ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ $7\frac{1}{2}$ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಭಡ ಸವಾಲ್ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ವಳಪಟ್ಟು ಭಡಸವಾಲಿನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮಾರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡಲೆ ಭಡ ಸವಾಲ್ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಭಡಸವಾಲ್ದಾರನ್ನು ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗ ಬಾಕಿ ನಿಲ್ಲುವ ಮೊಬಲಗಂದರೆ ಭಡಸವಾಲ್ ಮೊಬಲಗ್ಗೆ ಭರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನು ಭಡಸವಾಲ್ದಾರ ಹಾಜರಿಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನು ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಭಡಸವಾಲ್ದಾರನ್ನು ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡ್ಲೆ ಸೈಟನ್ನು ಭಿಡ್ಡನವಾಳಿದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ್ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವ ಕಟ್ಟಡವನ್ನೂ ಪ್ರಾರಂಭಿಸಕೂಡದು. ಹಾಳೆಗೆ ಮನೆಯನ್ನು ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹಂಚಿನದಾಗಿಯಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಡ್ ಜೀನಾ ಪಾಕೀಜಾ ಬಗ್ಗೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮಿಷನರವರು ಮಂಜೂರ್ಮಾಡಿದ ಹೊರ್ತು ಇತರ ಮತ, ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗೆಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಎತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟರಿ ಇಂಜನಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗದಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನು ಹಿಡುವಳೀದಾರನು ಮತ್ತಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನು ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕು ಯಾ ಸದರೀ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ತಾರೀಖು 6ನೆ ಮೇ 1907.

1906—07ನೆ ಇಸವಿ ಸಿವಿಲ್ ಸೂಟ್ ನಂಬರು 6.

1906—07ನೆ ಇಸವಿ ಮಿಸಲೇನಿಯಸ್ ನಂಬರು 347.

ವಾದೀರು.

ಮೈಸೂರು ದೇವರಾಜಮೊಹಲ್ಲಾದಲ್ಲಿರುವವರು.

1. ಉಪ್ಪಿನ ಮಂಡಿ ಸಾಹುಕಾರ ಇಬ್ರಾಹಿಂಸೇಟು
2. ಡಿಪೋ ವ್ಯಾಪಾರದ ಅಬ್ದುಲ್‌ಗನಿ ಸೇಟು
3. ಜಿನಸಿ ವ್ಯಾಪಾರದ ಸಾಹುಕಾರ ಅಬ್ದುಲ್ ರಹಿಮಾನ್‌ಸೇಟು
4. ಮುನಿಸಿಪಲ ಕಮಿಷನರ್ ಸಾಹುಕಾರ ರಹಿಮತ್ತುಲ್ಲಾ ಸೇಟು
5. ಪಾತ್ರೆ ಅಂಗಡಿ ಕಂಟ್ರ್ಯಾಕ್ಟರ ದ.ವುದಖಾನ್ ಸಾಹೇಬರು
6. ದಳ್ಳಾಳಿ ಮೀರ ಮಹಮುದ್‌ಸಾಬಿ
7. ಜಿನಸಿ ವ್ಯಾಪಾರಿ ಮಹಮ್ಮದಖಾಸೀಂಸಾಬ್
8. ಖಾಸಿಂಸಾಬರ ಮಗ ಕಂಟ್ರ್ಯಾಕ್ಟರ್ ಮಹಮ್ಮುದ್ ಸಾಹೇಬ್

ಪ್ರತಿವಾದಿ,

ಸದರಿ ದೇವರಾಜ ಮೊಹಲ್ಲಾ ಸಂತೇಪೇಟೆಯಲ್ಲಿರುವ ಅಬ್ದುಲ್ ರಜಾಕ್ ಅಲ್ಲೀಖಾನ್ ಮೆಕ್ರಿಯವರ ಮಗ ಮಹಮ್ಮದಲ್ಲೀಖಾನ್ ಮೆಕ್ರಿ.

ಮೈಸೂರಲ್ಲಿರುವ ಎಲ್ಲಾ ಮಹಮ್ಮದೀಯ ಜನಗಳಿಗೂ ತಿಳಿಯಪಡಿಸುವದೇನಂದರೆ;—ಮೈಸೂರು ಶ್ರೀರಾಂಪೇಟೆಯಲ್ಲಿರುವ ಮಹಮ್ಮದೀಯರ ಮಸೀತಿಗೆ ತಾನು ಮುತ್ತವಲ್ಲಿಯೆಂದು ಹೇಳಿಕೊಂಡು ಹಾಲಿ ಮುತ್ತವಲ್ಲಿ ಕೆಲಸ ನೋಡುತ್ತಾ ಇರುವ ಪ್ರತಿವಾದಿ ಮಹಮ್ಮದಲ್ಲಿಖಾನ್ ಮೆಕ್ರಿಯವರು ಮುತ್ತವಲ್ಲಿ ಕೆಲಸಕ್ಕೆ ಅರ್ಹರಲ್ಲವೆಂದುನ್ನೂ, ಈತ ಮುಂದೆ ಮುತ್ತವಲ್ಲಿ ಕೆಲಸ ನೋಡಕೂಡದೆಂದುನ್ನೂ, ಡಿಕ್ಲೇರ್ ಮಾಡಿ ಕಂಟ್ರ್ಯಾಕ್ಟರ್ ಮಹಮ್ಮದ ಇಬ್ರಾಹಿಂ ಸಾಹೇಬರನ್ನಾಗಲಿ, ಅಥವಾ ಲಾಯಖ್ಖಾದ ಬ್ಯಾರೆ ಇನ್ಯಾರಾದರು ಒಬ್ಬರನ್ನು, ಮುತ್ತವಲ್ಲಿ ಕೆಲಸಕ್ಕೆ ನೇಮಕ ಮಾಡಿ ಸದರಿ ಮಸೀತಿ ಕೆಲಸಗಳು ಮುಂದೆ ನಡಿಯುವದಕ್ಕೆ ಒಂದು ಕ್ರಮವಾದ ಏರ್ಪಾಡನ್ನ ಕೋರ್ಟಿನವರು ಮಾಡಿಕೊಡಬೇಕೆಂಬದಾಗಿ ವಗೈರೆ ಮೇಲ್ಕಂಡ ವಾದೀರು ತಮಗೋಸ್ಕರವಾಗಿಯೂ ಇತರ ಮಹಮ್ಮದೀಯ ಜನಗಳಿಗೋಸ್ಕರವಾಗಿಯು ಎಂದು ಸಿವಿಲ್ ಪ್ರೊಸೀಡ್ಯೂರ್‌ಕೋಡು 30ನೆ ಸೆಕ್ಷನ್ ಪ್ರಕಾರ ಅಪ್ಪಣೆ ಪಡದು ದಾಖಲ ಮಾಡಿದ ದಾವಾ 1907ನೆ ಇಸವಿ ಜೂನ್ ಮಾಹೆ 1ನೆ ತಾರೀಖಿಗೆ ಹಿಯರಿಂಗು ಇರುತ್ತೆ.

ಸದರಿ ಮಸೀತಿಗೆ ಅಭಿಮಾನಶಾಲಿಗಳಾದ ಮಹಮ್ಮದೀಯರ ಸಮೂಹಕ್ಕಾಗಿ ಮೇಲ್ಕಂಡ ವಾದೀರು ಮುಂದಿನ ಕ್ರಮ ನಡಿಸುವ ಭಾಗದಲ್ಲಿ ಅಭ್ಯಂತರವೇನಾದರೂ ಇದ್ದಲ್ಲಿ ಅಂಥಾವರು ಮೇಲೆ ಕಂಡ ಹಿಯರಿಂಗು ತಾರೀಖಿನ ದಿವಿ 11 ಘಂಟೆಗೆ ಖುದ್ದಾಗಿ ಆಗಲಿ, ಅಥವಾ ಅಧಿಕಾರ ಹೊಂದಿದ ಲಾಯರ ಮೂಲಕವಾಗಿ ಆಗಲಿ ಈ ಕೋರ್ಟಿನ ರೂಬರೂಬು ಹಾಜರಾಗಿ ಲಿಖಿತ ಮೂಲಕ ಕೋರ್ಟಿಗೆ ತಿಳಿಯಪಡಿಸಿಕೊಳ್ಳತಕ್ಕದ್ದಿದೆ.

ಎಸ್. ವೆಂಕಟವರದಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 16ನೆ ಮೇ 1907.

ಸ್ 1907ನೆ ಇಸವಿ ಜುಲೈ 1ರ ಲಾಗಾಯತು ಸ್ 1908ನೆ ಇಸವಿ ಜನವರಿ 31ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 7 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸ್ 1907ನೆ ಇಸವಿ ಜೂನ್ 15ನೆ ತಾರೀಖು ಶನಿವಾರ ಬೆಳಿಗ್ಗೆ 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗೆದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರದಿರಬೇಕಾದ ಮೇಲ್ವಿಳಾಸವೇನಂದರೆ :—
"ಕುರೀ ಮಾಂಸದ ಸರಬರಾಯಿ ದರಖಾಸ್ತು"

4. ಕುರಿ ಮಾಂಸದ ಸರಬರಾಯಿಗೆ 75 ರೂಪಾಯಿ, ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಮಾಂಸವನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಮಾಂಸವು ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

ಮೂಳೆ ಇಲ್ಲದ ಮಾಂಸ—20,000 ಪೌಂಡುಗಳು.

ಮೇಲೆ ಕಂಡ ಪರಿಮಾಣದ ಮೇಲೆ ಅಷ್ಟಿಷ್ಟೆ ಆಗಬೇಕೆಂದು ಖಾತರಿ ಯಾವುದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಉಳಿಸಿಕೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರನು ಹಾಜರ್ಮಾಡಿದ ಠೇವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಆತನ ದರಖಾಸ್ತು ಮಂಜೂರಾಗಿದೆ ಎಂದು ಆತನಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಆತನು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ 150 ರೂಪಾಯಿ, ನಗದಾಗಿಯಾಗಲಿ ಸರಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಶಿವಾಯಿ ಜಮೆಯಾಗಿ ತೆಗದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರನಿಗೆ ನಗದು ಹಣ ಮುಂಗಡವಾಗಿ ಪಾವತಿ ಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೆ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ವಳಗಾಗಿ ಜೈಲಿನಲ್ಲಿ ಸಿದ್ಧಪಡಿಸತಕ್ಕದ್ದು.

11. ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಮಾಂಸವನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರು ಸೆಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು ; ಪದೇಪದೇ ಕರಾರಿಗೆ ತಪ್ಪಿಹೋದರ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೆ ಅಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟು ಬಿಡಬೇಕು.

17. ಕಂಟ್ರಾಕ್ಟುದಾರು ಸರಬರಾಯಿ ಮಾಡಿದ ಜಿನಸಿ ಬಿಲ್ಲುಗಳನ್ನು ಹಣ ಪಾವತಿ ಬಗ್ಗೆ ಸೂಪರಿಂಟೆಂಡೆಂಟರವರು ಮೊಕರೂರು ಮಾಡಿದ ತಾರೀಖು ಅಥವಾ ಅದಕ್ಕೆ ತತ್ಪೂರ್ವವಾಗಲಿ ಹಾಜರು ಮಾಡಬೇಕು. ತಪ್ಪಿದರೆ ಸೂಪರಿಂಟೆಂಡೆಂಟರವರು ಸದರೀ ತಾರೀಖು ತರುವಾಯ ಹಾಜರು ಮಾಡಿದ ಬಿಲ್ಲುಗಳಿಗೆ ಹಣ ಪಾವತಿ ಮಾಡಲು ಇನ್ಕಾರು ಮಾಡುವರು. ಇಜಾರೆದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಫ್ರಾಂಯಿಸ ಆದ್ದು. [ನಂ. 24.

ಬೆಂಗಳೂರು, ಗುರುವಾರ, ಜೂನ್ ತಾ|| 13, ಸನ್ 1907.

II ನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜಿಯರು ಮೊದಲಾದವರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 31ನೆ ಮೇ 1907.

ಬಾಳೂರು ಫಾರೆಸ್ಟು, ಕಡೂರು ಡಿಸ್ಟ್ರಿಕ್ಟು.

ಸನ್ 1900ನೆ ಇಸವಿಯ XIನೆ ನಂಬರ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 8010—Ft. 138-06-3, 5—3—07; 14—3—07ನೆ ಇಸವಿಯ ಗೆಜೆಟಿನಲ್ಲಿ ಫಾಯಿಷ್ಯಾಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ಚಕ್ಕುಬಂದಿ.
ಕಡೂರು	ಮೂಡಗೆರೆ	33 ಚದರು ಮೈಲಿಗಳು 27 ಎಕರೆಗಳು, 20 ಗುಂಟೆಗಳು.	ಬಾಳೂರು	ಸ್ಥಳ—ಮೂಡಗೆರೆ ತಾಲ್ಲೂಕು ಬಳ್ಳಾಳರಾಯನ ದುರ್ಗದಿಂದ ಸೀಸೆಕಲ್ಲು ಬಿಟ್ಟವ ವರೆಗೆ ಉತ್ತರದಿಂದ ದಕ್ಷಿಣಕ್ಕೆ ವ್ಯಾಪಿಸಿ ಹಾಸನ ಡಿಸ್ಟ್ರಿಕ್ಟಿನ ಎಲ್ಲೆಯ ವರೆಗೆ ಬಂದಿರುವ ಪಶ್ಚಿಮಘಟ್ಟದ ಫಾರೆಸ್ಟಿನ ಸರಹದ್ದು. ಉತ್ತರಕ್ಕೆ—ದುರ್ಗದಹಳ್ಳಿ ಗ್ರಾಮದ ಸರ್ವೆ ನಂಬರು 69ರ ದಕ್ಷಿಣ ಸರಹದ್ದು ಮೂಲೆಯಿಂದ ಒಂದು ಫರ್ಲಾಂಗು ಕೆಳಗೆ ಇರುವ ಸರ್ವೆ ನಂ. 66ರ ವಾಯುವ್ಯ ಮೂಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದು ಸೇರುವ ಸ್ಥಳದಿಂದ ಎಲ್ಲೆಯ ರೇಖೆಯು ಬಳ್ಳಾಳರಾಯನ ದುರ್ಗದ ಹಳೇಕೋಟೆಯ ಉತ್ತರಭಾಗದ ಮೂಲೆಗೆ ದುರ್ಗದಹಳ್ಳಿ ಗ್ರಾಮದ ಸರ್ವೆ ನಂ. 66ರ ಒಳಗೆ ನಾಲ್ಕು ಫರ್ಲಾಂಗಿನಷ್ಟುದೂರ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಅಲ್ಲಿಂದ ಅದೇ ನಂಬರು ಒಳಗೆ ಮುಕ್ಕಾಲು ಫರ್ಲಾಂಗಿನಷ್ಟು ದೂರ ಪೂರ್ವಮುಖನಾಗಿಯೂ, ಅನಂತರ ಅದೇ ನಂಬರಿನೊಳಗೆ ಒಂದು ಫರ್ಲಾಂಗಿನಷ್ಟು ದೂರ ಆಗ್ನೇಯಮುಖನಾಗಿಯೂ ಅನಂತರ ಅದೇ ನಂಬರೊಳಗೆ ಒಂದೂವರೆ ಫರ್ಲಾಂಗಿನಷ್ಟು ದೂರ ಸರ್ವೆ ನಂಬರು 65ರ ಆಗ್ನೇಯ ಮೂಲೆಯನ್ನು ಸಂಧಿಸುವ ವರೆಗೆ

ಮೇಲ್ಕಂಡ 65ನೆ ನಂಬರೊಳಗೇನೆ ಎರಡು ಫರ್ಲಾಂಗಿನಷ್ಟು ದೂರ ಪೂರ್ವಮುಖನಾಗಿಯೂ ಅನಂತರ ಸರ್ವೆ ನಂ. 62ರ ನೈರ್‌ ದಕ್ಷಿಣ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 61ರ ಒಳಗೆ ಎರಡು ಫರ್ಲಾಂಗಿನಷ್ಟು ದೂರ ಆಗ್ನೇ

ಯ ಮುಖನಾಗಿಯೂ ಅನಂತರ ಸರ್ವೆ ನಂಬರು 62ರ ಆಗ್ನೇಯ ಮೂಲೆಯನ್ನು ಸಂಧಿಸುವ ವರೆಗೆ ಸರ್ವೆ ನಂಬರು 61ರ
ಒಳಗೆ ಸುಮಾರು ಮೂರು ಫರ್ಲಾಂಗು ದೂರ ಈಶಾನ್ಯಮುಖನಾಗಿಯೂ ಅನಂತರ ಹಲಿಗಡಕ ಕಾಫಿ ಎಸ್ಟೇಟಿ ಸರ್ವೆ ನಂ. 1ರ
ಪಶ್ಚಿಮ ಮೂಲೆಯನ್ನು ಸಂಧಿಸುವ ವರೆಗೂ ಒಂದು ಫರ್ಲಾಂಗಿನಷ್ಟು ದೂರ ಸರ್ವೆ ನಂ. 78ರ ಆಗ್ನೇಯ ಸರಹದ್ದಿನ ಮೇಲೂ
ಸರ್ವೆ ನಂ. 61ರ ಒಳಗೂ ಉತ್ತರಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಮುದಗುಂಡಿ ಗ್ರಾಮದ ಸರ್ವೆ ನಂ. 58ರ
ಆಖ್ಯೆರ ದಕ್ಷಿಣ ಮೂಲೆಯನ್ನು ಸಂಧಿಸುವವರೆಗೂ ಆರು ಫರ್ಲಾಂಗಿನಷ್ಟು ದೂರ ಹಲಿಗಡಕ ಕಾಫಿ ಎಸ್ಟೇಟ ನಂ. 1ರ ಒಳಗೆ
ಪೂರ್ವಮುಖನಾಗಿ ಹೋಗುತ್ತದೆ. ಅನಂತರ ಅದೇ ಮುದಗುಂಡಿ ಗ್ರಾಮದ ಸರ್ವೆ ನಂ. 19ರ ದಕ್ಷಿಣ ಮೂಲೆಯನ್ನು ಸೇರು
ವವರೆಗೂ ಸರ್ವೆ ನಂ. 17ರ ವಾಯುವ್ಯ ಸರಹದ್ದಿನ ಮೇಲೆ ಮತ್ತು ಆ ನಂಬರು ಒಳಗೆ ಸಹ ಏಳು ಫರ್ಲಾಂಗಿನಷ್ಟು ದೂರ
ಆಗ್ನೇಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 40ರ ಆಗ್ನೇಯ ಭಾಗದ ಮೂಲೆಯನ್ನು ಸೇರುವ
ವರೆಗೆ ಸುಮಾರು ಒಂದು ಫರಲಾಂಗಿನಷ್ಟು ದೂರ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂ. 43ರ ನೈರುತ್ಯ
ಮೂಲೆಯನ್ನು ಸೇರುವವರೆಗೆ ಸರ್ವೆ ನಂ. 44ರ ಒಳಗೆ ನಾಲ್ಕು ಫರ್ಲಾಂಗಿನಷ್ಟು ದೂರ ಈಶಾನ್ಯಮುಖನಾಗಿ ಹೋಗುತ್ತದೆ.
ಅನಂತರ ಸರ್ವೆ ನಂ. 43ರ ಆಗ್ನೇಯ ಸರಹದ್ದಿನ ಮೇಲೆ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಮೇಗೂರು ಗ್ರಾಮದ
ಸರ್ವೆ ನಂ. 45ರ ಪಶ್ಚಿಮ ಸರಹದ್ದನ್ನು ಸೇರುವ ವರೆಗೆ ಮುದಗುಂಡಿ ಗ್ರಾಮದ ಸರ್ವೆ ನಂ. 44ರ ಒಳಗೆ ಐದು ಫರ್ಲಾಂಗಿನ
ಷ್ಟು ದೂರ ಪೂರ್ವಮುಖನಾಗಿಯೂ ಅನಂತರ ಮೇಗೂರು ಗ್ರಾಮದ ಸರ್ವೆ ನಂ. 45ರ ಒಳಗೆ ಆರು ಫರ್ಲಾಂಗಿನಷ್ಟು ದೂರ
ಆಗ್ನೇಯ ಮುಖನಾಗಿಯೂ ಅನಂತರ ಮೇಗೂರು ಗ್ರಾಮದ ಸರ್ವೆ ನಂ. 36ರ ಆಖ್ಯೆರು ದಕ್ಷಿಣ ಮೂಲೆಯನ್ನು ಮುಟ್ಟಿ ಮೇ
ಗೂರು ಆಲಿಕಾಡು ಕಾಫಿ ಎಸ್ಟೇಟಿ ಸರ್ವೆ ನಂ. 2ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ಮೇಗೂರು ಗ್ರಾಮದ ಸರ್ವೆ ನಂ.
45ರ ಒಳಗೆ ಆರುವರೆ ಫರ್ಲಾಂಗಿನಷ್ಟು ದೂರ ಪೂರ್ವಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಅಲ್ಲಿಂದ ಮೇಲ್ಕಂಡ
ಕಾಫಿ ಎಸ್ಟೇಟಿ ಸರ್ವೆ ನಂ. 2ರ ದಕ್ಷಿಣ ಸರಹದ್ದಿನ ಮೇಲೆ ಪೂರ್ವಮುಖನಾಗಿಯೂ ಅನಂತರ ಬಾಳೂರು ಗ್ರಾಮದ ಸರ್ವೆ ನಂ.
220ರ ದಕ್ಷಿಣ ಸರಹದ್ದನ್ನು ಸಂಧಿಸುವ ವರೆಗೂ ಮೇಲ್ಕಂಡ ಎಸ್ಟೇಟಿನ ಸರ್ವೆ ನಂ. 2ರ ಆಗ್ನೇಯ ಸರಹದ್ದಿನ ಮೇಲೆ ಈ
ಶಾನ್ಯ ಮುಖನಾಗಿಯೂ ಅನಂತರ ಬಾಳೂರು ಗ್ರಾಮದ ಸರ್ವೆ ನಂ. 173ರ ದಕ್ಷಿಣ ಮೂಲೆಯನ್ನು ಸಂಧಿಸುವವರೆಗೂ ಸರ್ವೆ
ನಂ. 220ರ ಒಳಗೆ ಎರಡುವರೆ ಫರ್ಲಾಂಗಿನಷ್ಟು ದೂರ ಪೂರ್ವಮುಖನಾಗಿಯೂ ಅನಂತರ ಒಂದು ಸಣ್ಣ ನದಿಯು ಮೂಡಗೆ
ರೆ—ಮಂಗಳೂರು ಹೈರೋಡನ್ನು ದಾಟುವವರೆಗೆ ಮೇಲ್ಕಂಡ ಸರ್ವೆ ನಂ. 220ರ ಒಳಗೆ ಎರಡುವರೆ ಫರ್ಲಾಂಗಿನಷ್ಟು ದೂರ
ಈಶಾನ್ಯಮುಖನಾಗಿಯೂ ಅನಂತರ ಅಲ್ಲಿಂದ ಅತ್ತಿಗೇರಿ ಗ್ರಾಮದ ಸರ್ವೆ ನಂ. 138ರ ದಕ್ಷಿಣಕ್ಕೆ ಅರ್ಧ ಫರ್ಲಾಂಗಿನಲ್ಲಿರುವ ಮೇ
ಲ್ಕಂಡ ಹೈರೋಡ್ ಜಾಗಕ್ಕೆ ಸದರಿ ಹೈರೋಡಿನ ಬಲ ಭಾಗದಲ್ಲಿ ಆಗ್ನೇಯ ಮುಖನಾಗಿ ಹೋಗಿ ಸೇರುತ್ತದೆ.

ಪೂರ್ವಕ್ಕೆ.—ಮೇಲೆ ಕಂಡ ಜಾಗದಿಂದ ಸದರಿ ಲೈನ್ ಮೂಡಗೆರೆ—ಮಂಗಳೂರು ಹೈರೋಡನ್ನು ದಾಟ ತರವೆ ಗ್ರಾಮ
ದ ಸರ್ವೆ ನಂಬರು 47ರ ವಾಯುವ್ಯ ಮೂಲೆಯನ್ನು ಸಂಧಿಸುವ ವರೆಗೆ ಅತ್ತಿಗೇರಿ ಗ್ರಾಮದ ಸರ್ವೆ ನಂಬರು 139ರ ಒಳಗೆ ದಕ್ಷಿ
ಣ ಮುಖನಾಗಿ ಹೋಗುತ್ತದೆ. ಅನಂತರ ತರವೆ ಗ್ರಾಮದ ಸರ್ವೆ ನಂಬರು 50ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ
ಸರ್ವೆ ನಂಬರು 47ರ ಒಳಗೆ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 50ರ ವಾಯುವ್ಯ ಮೂಲೆಯನ್ನು
ಸೇರುವ ವರೆಗೆ ಸರ್ವೆ ನಂಬರು 47ರ ಒಳಗೆ ಆಗ್ನೇಯ ಮುಖನಾಗಿ ಹೋಗುತ್ತವೆ. ಅನಂತರ ಸರ್ವೆ ನಂಬರು 50ರ ಪಶ್ಚಿ
ಮ ಸರಹದ್ದಿನ ಮೇಲೆ ದಕ್ಷಿಣ ಮುಖನಾಗಿಯೂ ಅನಂತರ ಸದರಿ ನಂಬರು 50ರ ನೈರುತ್ಯ ಸರಹದ್ದಿನ ಮೇಲೆ ಆಗ್ನೇಯ ಮುಖ
ನಾಗಿಯೂ ಅನಂತರ ಕೋಗಿಲೆ ಗ್ರಾಮದ ಸರ್ವೆ ನಂಬರು 5ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ ಅನಂ
ತರ ಸರ್ವೆ ನಂಬರು 99ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಮೇಲ್ಕಂಡ ಸರ್ವೆ ನಂಬರು 5ರ ಪಶ್ಚಿಮ ಸರಹದ್ದಿನ
ಮೇಲೆ ಆಗ್ನೇಯ ಮುಖನಾಗಿಯೂ ಅನಂತರ ಸರ್ವೆ ನಂಬರು 99ರ ನೈರುತ್ಯ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ
ಅನಂತರ ಸರ್ವೆ ನಂಬರು 5ರ ನೈರುತ್ಯ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂ. 98ರ ಒಳಗೆ ಪೂರ್ವ ಮುಖನಾಗಿಯೂ
ಅನಂತರ ಸರ್ವೆ ನಂ. 104ರ ದಕ್ಷಿಣ ಸರಹದ್ದನ್ನು ಮುಟ್ಟಿ ಸರ್ವೆ ನಂ. 100ರ ಒಳಗೆ ಐದು ಫರ್ಲಾಂಗಿನಷ್ಟು ದೂರ ಆಗ್ನೇಯ
ಮುಖನಾಗಿಯೂ ಅನಂತರ ಮೇಲ್ಕಂಡ ಸರ್ವೆ ನಂ. 100ರ ಒಳಗೂ ಗುತ್ತಿ ಗ್ರಾಮದ ಸರ್ವೆ ನಂ. 8ರ ಒಳಗೂ ೬ ಫರ್ಲಾಂಗಿನ
ಷ್ಟು ದೂರ ನೈರುತ್ಯಮುಖನಾಗಿಯೂ ಅನಂತರ ಗುತ್ತಿ ಗ್ರಾಮದ ಸರ್ವೆ ನಂ. 236-200-199ರ ಒಳಗೆ ಹದಿನೈದು ಫರ್ಲಾಂ
ಗಿನಷ್ಟು ದೂರ ಅದೇ ಗ್ರಾಮದ ಸರ್ವೆ ನಂ. 195ರ ನೈರುತ್ಯ ಸರಹದ್ದನ್ನು ಸೇರುವವರೆಗೂ ದಕ್ಷಿಣಮುಖನಾಗಿ ಹೋಗುತ್ತದೆ.
ಅನಂತರ ಮೂದರಹಳ್ಳಿ ಗ್ರಾಮದ ಸರ್ವೆ ನಂ. 25ರ ಉತ್ತರ ಸರಹದ್ದನ್ನು ಮುಟ್ಟುವವರೆಗೆ ಗುತ್ತಿ ಗ್ರಾಮದ ಸರ್ವೆ ನಂ. 199ರ
ಒಳಗೆ ನಾಲ್ಕುವರೆ ಫರ್ಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ ಅನಂತರ ಮೂದರಹಳ್ಳಿ ಗ್ರಾಮದ ಸರ್ವೆ ನಂ. 25ರ
ಉತ್ತರ ಸರಹದ್ದಿನಮೇಲೆ ಎರಡು ಫರ್ಲಾಂಗಿನಷ್ಟು ದೂರ ನೈರುತ್ಯಮುಖನಾಗಿಯೂ ಅನಂತರ ಮೇಲ್ಕಂಡ ಸರ್ವೆ ನಂಬರು 25ರ
ಒಳಗೆ ಸರ್ವೆ ನಂ. 1 ಮತ್ತು 2ರ ಪಶ್ಚಿಮ ಸರಹದ್ದನ್ನು ಮುಟ್ಟಿ ಒಂದುವರೆ ಫರ್ಲಾಂಗಿನಷ್ಟು ದೂರ ದಕ್ಷಿಣಮುಖನಾಗಿಯೂ
ಅನಂತರ ಊರುಬಗೆ ಗ್ರಾಮದ ಸರ್ವೆ ನಂ 185ರ ಒಳಗೆ ಐದು ಫರ್ಲಾಂಗಿನಷ್ಟು ದೂರ ಆಗ್ನೇಯಮುಖನಾಗಿಯೂ ಊರು
ಬಗೆ ಗ್ರಾಮದ ಸರ್ವೆ ನಂ. 193ರ ವಾಯುವ್ಯ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂ. 185ರ ಒಳಗೆ ಮೂರು ಫರ್ಲಾಂ
ಗಿನಷ್ಟು ದೂರ ನೈರುತ್ಯಮುಖನಾಗಿಯೂ ಅನಂತರ ಸರ್ವೆ ನಂ. 360ರ ಪಶ್ಚಿಮ ಮೂಲೆಯನ್ನು ಸೇರುವವರೆಗೆ ಸರ್ವೆ 193ರ
ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯಮುಖನಾಗಿಯೂ ಅನಂತರ ಸರ್ವೆ ನಂ. 330ರ ವಾಯುವ್ಯ ಮೂಲೆಯನ್ನು ಸೇರುವವರೆಗೆ
ಸರ್ವೆ ನಂ. 191ರ ಒಳಗೆ ನೈರುತ್ಯಮುಖನಾಗಿಯೂ ಅನಂತರ ಸರ್ವೆ ನಂ. 330ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮು
ಖನಾಗಿಯೂ ಅನಂತರ ಸರ್ವೆ ನಂ. 228ರ ನೈರುತ್ಯ ಮೂಲೆಯನ್ನು ಮುಟ್ಟುವವರೆಗೂ ಅದೇ ನಂ. ಪಶ್ಚಿಮ ಸರಹದ್ದಿನ ಮೇ
ದಕ್ಷಿಣ ಮುಖನಾಗಿಯೂ ಅನಂತರ ಸರ್ವೆ ನಂ. 228 ಮತ್ತು 227ರ ದಕ್ಷಿಣ ಸರಹದ್ದುಗಳ ಮೇಲೆ, ನಾಲ್ಕು ಫರ್ಲಾಂಗಿನ

ದೂರ ಪೂರ್ವಮುಖನಾಗಿಯೂ ಅನಂತರ ಬೈರಾಪುರ ಗ್ರಾಮದ ಸರ್ವೆ ನಂ. 99ರ ವಾಯುವ್ಯ ಮೂಲೆಯನ್ನು ಮುಟ್ಟುವವರೆಗೂ ಅದೇ ಗ್ರಾಮದ ಸರ್ವೆ ನಂ. 41ರ ಒಳಗೆ ನೈರುತ್ಯಮುಖನಾಗಿಯೂ ಅನಂತರ ಸರ್ವೆ ನಂ. 99 ಮತ್ತು 100ರ ಪಶ್ಚಿಮ ಸರಹದ್ದಿನ ಮೇಲೆ ದಕ್ಷಿಣಮುಖನಾಗಿಯೂ ಅನಂತರ ಸರ್ವೆ ನಂ. 155ರ ವಾಯುವ್ಯ ಮೂಲೆಯನ್ನು ಸೇರುವವರೆಗೆ ಅದೇ ಮುಖನಾಗಿ ಸರ್ವೆ ನಂ. 99ರ ಒಳಗೂ ಅನಂತರ ಸರ್ವೆ ನಂ. 155ರ ಪಶ್ಚಿಮ ಸರಹದ್ದಿನ ಮೇಲೂ ಅನಂತರ ಸರ್ವೆ ನಂ. 91ರ ಒಳಗೆ ಒಂದೂವರೆ ಫರ್ಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ ಅನಂತರ ಸರ್ವೆ ನಂ. 96ರ ಒಳಗೆ ಎರಡು ಫರ್ಲಾಂಗಿನಷ್ಟು ದೂರ ಆಗ್ನೇಯಮುಖನಾಗಿಯೂ ಅನಂತರ ಸರ್ವೆ ನಂ. 84ರ ವಾಯುವ್ಯ ಮೂಲೆಯನ್ನು ಮುಟ್ಟುವವರೆಗೂ ಸರ್ವೆ ನಂ. 96ರ ಒಳಗೆ ನಾಲ್ಕೂವರೆ ಫರ್ಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ ಅನಂತರ ಸರ್ವೆ ನಂ. 144ರ ಪಶ್ಚಿಮ ಸರಹದ್ದಿನ ಮೇಲೆ ದಕ್ಷಿಣಮುಖನಾಗಿಯೂ ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವ ವರೆಗೆ ಸರ್ವೆ ನಂ. 87ರ ಒಳಗೆ ಆರುವರೆ ಫರ್ಲಾಂಗಿನಷ್ಟು ದೂರ ನೈಋತ್ಯಮುಖನಾಗಿಯೂ ಸಹ ಹೋಗುತ್ತದೆ.

ದಕ್ಷಿಣಕ್ಕೆ—ಮೇಲ್ಕಂಡ ಜಾಗದಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲಾ ಸರಹದ್ದಿನಲ್ಲಿ ಊರಬಗೆ ಮತ್ತು ಬೈರಾಪುರ ಗ್ರಾಮಗಳ ಎಲ್ಲೆಯು ಸೇರುವ ಜಾಗಾದ ವರೆಗೆ ಪಶ್ಚಿಮಮುಖನಾಗಿ ಹೋಗುತ್ತದೆ.

ಪಶ್ಚಿಮಕ್ಕೆ — ಅಲ್ಲಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನನುಸರಿಸಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಛಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಛಾಯಿಷ್ಮಾಡಿದಾಗ ಅಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಅಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ ಯಾವ ಪುದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತು ಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫೀಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 31ನೆ ಮೇ 1907.

ನರಸಿಂಹಪರ್ವತ ಫಾರೆಸ್ಟು, ಕಡೂರು ಡಿಸ್ಟ್ರಿಕ್ಟು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನೆಂದರೆ,—4ನೆ ಸೆಕ್ಷನ್ ಪ್ರಕಾರ ಇದರಡಿ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕು ಬಂದಿಯುಳ್ಳ ಪ್ರದೇಶವು ನಂಬರು R. 8059—Ft. 139-06-3, 6—4—07 9—3—07ನೆ ಇಸವಿಯ ಗೆಜೆಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು	ವಿಸ್ತೀರ್ಣ	ಫಾರೆಸ್ಟಿನ ಹೆಸರು	ಚಕ್ಕುಬಂದಿ.
ಕಡೂರು	ಕೊಪ್ಪ	117 34/160 ಚದರ ಮೈಲಿ	ನರಸಿಂಹಪರ್ವತ	ಸ್ಥಳ:—ಶೃಂಗೇರಿ ಜಹಗೀರ್ ಪಶ್ಚಿಮ ದಿಕ್ಕಿಗೆ ಕೊಪ್ಪ—ಆಗುಂಬಿ ಹೈರೋಡಿಗೂ ತುಂಗಾ ನದಿಗೂ ಮಧ್ಯೆ ಇರುವ ಪಶ್ಚಿಮ ಘಟ್ಟದ ಜಂಗ್ಲಿ ಪ್ರದೇಶ.

ಉತ್ತರಕ್ಕೆ:—ಆಸನಬಾಳು ಗ್ರಾಮದ ಸರ್ವೆ ನಂಬರು 89ರ ನೈರುತ್ಯ ಮೂಲೆಯಲ್ಲಿ ಎಲ್ಲೆಯ ರೇಖೆಯು ಶುರುವಾಗಿ ಅದೇ ಗ್ರಾಮದ ಸರ್ವೆ ನಂಬರು 84ರ ನೈರುತ್ಯ ಮೂಲೆಗೆ ಹೋಗುವ ವರೆಗೆ ಸದರಿ ಗ್ರಾಮದ ಸರ್ವೆ ನಂಬರು 89 ಮತ್ತು 83ರ ದಕ್ಷಿಣ ಭಾಗದ ಎಲ್ಲೆಯ ಮೇಲೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ನೈರುತ್ಯಕ್ಕೆ ತಿರಿಗಿ ಸದರಿ ಗ್ರಾಮದ ಸರ್ವೆ ನಂಬರು 72ರ ಪಶ್ಚಿಮ ಎಲ್ಲೆಯಲ್ಲಿ ಸುಮಾರು ಎರಡೂವರೆ ಫರಲಾಂಗುದೂರ ಹೋಗುತ್ತದೆ. ಅನಂತರ ಸರ್ವೆ ನಂಬರು 72ರಲ್ಲಿ ಮೂರುವರೆ ಫರ್ಲಾಂಗು ವರೆಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಅದೇ ನಂಬರಿನೊಳಗೆ ಎರಡೂಕಾಲು ಫರಲಾಂಗುದೂರ ಆಗ್ನೇಯ ದಿಕ್ಕಿನಲ್ಲಿ ಹೋಗುತ್ತದೆ. ಅನಂತರ ಸದರಿ ಗ್ರಾಮದ ಸರ್ವೆ ನಂಬರು 71ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ಅರ್ಧ ಫರಲಾಂಗಿನಷ್ಟುದೂರ ಸರ್ವೆ ನಂಬರು 72 ರೊಳಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 71ರ ದಕ್ಷಿಣ ಸರಹದ್ದಿನ ಮೇಲೆ ಉದ್ದಕ್ಕೂ ಹೋಗುತ್ತದೆ. ಆ ಮೇಲೆ ಮಸಗಿ ಗ್ರಾಮದ ಸರ್ವೆ ನಂಬರು 25ರ ದಕ್ಷಿಣ ಭಾಗದ ಮೂಲೆಯನ್ನು ಮುಟ್ಟುವ ವರೆಗೆ ಸುಮಾರು ಆರು ಫರಲಾಂಗಿನ ವರೆಗೆ ಆಸನಬಾಳು ಗ್ರಾಮದ ಸರ್ವೆ ನಂಬರು 72 ಮತ್ತು 11 ರೊಳಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ವಿಾಗ ಗ್ರಾಮದ ಸರ್ವೆ ನಂಬರು 81ರ ವಾಯುವ್ಯ ಸರಹದ್ದಿನ ಮೂಲೆಗೆ ಸೇರುವ ವರೆಗೂ ಸುಮಾರು ಎರಡೂಕಾಲು ಫರಲಾಂಗುದೂರ ಮಸಗಿ ಗ್ರಾಮದ 21ನೆ ಸರ್ವೆ ನಂಬರಿನೊಳಗೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ.

ಪೂರ್ವಕ್ಕೆ:—ಮೇಲೆ ಹೇಳಲ್ಪಟ್ಟ ಜಾಗಾದಿಂದ ಸದರಿ ಲೈನ್ ವಿಾಗದ ಗ್ರಾಮದ ಸರ್ವೆ ನಂಬರು 81 ಮತ್ತು 66ರ ಪಶ್ಚಿಮ ಸರಹದ್ದಿನ ಮೇಲೂ ಕೆಗ್ಗದ ಗ್ರಾಮದ ಸರ್ವೆ ನಂಬರು 111 ಮತ್ತು 7 ರೊಳಗೆ ನಾಲ್ಕುವರೆ ಫರಲಾಂಗುದೂರದ ವರೆಗೂ ಸದರಿ ಕೆಗ್ಗದ ಗ್ರಾಮದ ಸರ್ವೆ ನಂಬರು 45ರ ಉತ್ತರ ಸರಹದ್ದು ಸೇರುವ ವರೆಗೂ ದಕ್ಷಿಣ ಮುಖನಾಗಿ ಹೋಗುತ್ತದೆ. ಅನಂತರ ಕೆಗ್ಗದ ಗ್ರಾಮದ ಸರ್ವೆ ನಂಬರು 45 ರೊಳಗೆ ಆಗ್ನೇಯ ದಿಕ್ಕಿಗೆ ತಿರಿಗಿ ಒಂದು ಮೈಲಿ ವರೆಗೂ ಹೋಗುತ್ತದೆ; ಮತ್ತು ಅದೇ ಗ್ರಾಮದ ಸರ್ವೆ ನಂಬರು 38ರ ಪಶ್ಚಿಮ ಸರಹದ್ದಿನ ಮೇಲೆ ನೈರುತ್ಯ ಮುಖನಾಗಿ ಹೋಗುತ್ತದೆ: ಅನಂತರ ಯಡಹಳ್ಳಿ ಗ್ರಾಮದ ಸರ್ವೆ ನಂಬರು 120ರ ಪಶ್ಚಿಮ ಸರಹದ್ದಿನ ಮೇಲೆ ಒಂದು ಹಳ್ಳ ಸಿಕ್ಕುವ ವರೆಗೂ ದಕ್ಷಿಣ ಮುಖನಾಗಿಯೂ ಅನಂತರ ಯಡದಲ್ಲಿ ಗ್ರಾಮದ ಸರ್ವೆ ನಂಬರು 119 ರೊಳಗೆ ನಾಲ್ಕುವರೆ ಫರಲಾಂಗಿನಷ್ಟುದೂರ ನೈರುತ್ಯ ಮುಖನಾಗಿಯೂ ಅನಂತರ ಯಡದಲ್ಲಿ ಗ್ರಾಮದ ಸರ್ವೆ ನಂಬರು 197ರ ವಾಯುವ್ಯ ಮೂಲೆಯನ್ನು ಸಂಧಿಸುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 106 ರೊಳಗೆ ಎರಡೂ ಮುಕ್ಕಾಲು ಫರಲಾಂಗಿನಷ್ಟುದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 197ರ ಪಶ್ಚಿಮ ಸರಹದ್ದಿನ ಮೇಲೂ ಅನಂತರ ಸರ್ವೆ ನಂಬರು 106 ಮತ್ತು 136 ರೊಳಗೆ ಮೂರೂಕಾಲು ಫರಲಾಂಗಿನಷ್ಟುದೂರ ಈಶಾನ್ಯ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 136 ಮತ್ತು 85 ರೊಳಗೆ ಸುಮಾರು ಒಂದು ಮೈಲಿದೂರ ಆಗ್ನೇಯ ಮುಖನಾಗಿ ಹಾದು ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 85 ರೊಳಗೆ ಒಂದೂವರೆ ಫರಲಾಂಗಿನಷ್ಟುದೂರ ನೈರುತ್ಯ ಮಾರ್ಗವಾಗಿ ಹಾದು ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 108ರ ಉತ್ತರ ಸರಹದ್ದಿನ ಮೂಲೆಯನ್ನು ಮುಟ್ಟುವ ವರೆಗೂ ಸರ್ವೆ ನಂಬರು 88 ಮತ್ತು 106 ರೊಳಗೆ ಸುಮಾರು ಏಳು ಫರಲಾಂಗು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 96ರ ಪಶ್ಚಿಮ ಸರಹದ್ದನ್ನು ಸೇರುವ ವರೆಗೂ ಸರ್ವೆ ನಂಬರು 108, 109ರ ಪಶ್ಚಿಮ ಎಲ್ಲೆಯ ಮೇಲು, ಸರ್ವೆ ನಂಬರು 106 ಮತ್ತು 88 ರೊಳಗೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 88 ಮತ್ತು 99 ರೊಳಗೆ ಸುಮಾರು 7 ಫರಲಾಂಗಿನಷ್ಟುದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 99ರ ನೈರುತ್ಯ ಸರಹದ್ದಿನ ಮೇಲೆ ಪೂರ್ವ ಮಾರ್ಗವಾಗಿ ಹೋಗುತ್ತದೆ. ಅನಂತರ ಆಗ್ನೇಯ ದಿಕ್ಕಿಗೆ ತಿರಿಗಿ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 196ರ ವಾಯುವ್ಯ ಸರಹದ್ದಿನ ಮೂಲೆಯನ್ನು ಮುಟ್ಟುವ ವರೆಗೂ ಯಡದಲ್ಲಿ ಗ್ರಾಮದ ಸರ್ವೆ ನಂಬರು 42ರ ಪಶ್ಚಿಮ ಸರಹದ್ದಿನ ಮೇಲೆ ಹೋಗುತ್ತದೆ. ಅನಂತರ ತುಂಗಾ ನದಿಯ ಎಡಗಡೆ ದಡವನ್ನು ಮುಟ್ಟುವವರೆಗೂ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 19 ಮತ್ತು 30ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮಾರ್ಗವಾಗಿಹೋಗುತ್ತದೆ

ದಕ್ಷಿಣಕ್ಕೆ :—ಮೇಲೆ ಹೇಳಲ್ಪಟ್ಟ ಜಾಗದಿಂದ ಸದರಿ ಲೈನ್ ಬಲಕಡಿ ಗ್ರಾಮದ ಸರ್ವೆ ನಂಬರು 50ರ ಪೂರ್ವ ಕಡೆ ಸರಹದ್ದನ್ನು ಮುಟ್ಟುವ ವರೆಗೂ ತುಂಗಾ ನದಿಯ ಎಡಗಡೆ ದಡದ ಮೇಲೆ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಬಲಕಡಿ ಗ್ರಾಮದ ಸರ್ವೆ ನಂಬರು 50ರ ಪೂರ್ವ ಭಾಗದ ಸರಹದ್ದಿನ ಮೇಲೆ ಐದು ಫರಲಾಂಗಿನಷ್ಟು ದೂರವೂ ಅನಂತರ ಒಂದು ಹಳ್ಳದ ಪೂರ್ವ ಕಡೆಯೂ, ಅನಂತರ ಸರ್ವೆ ನಂಬರು 54ರ ಪೂರ್ವದ ಸರಹದ್ದಿನಲ್ಲೂ ಅನಂತರ ನಂಬರು 51ರ ವಳಗೆ ಪಶ್ಚಿಮ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಸರ್ವೆ ನಂಬರು 56 ರೊಳಗೆ ಒಂದು ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 12ರೊಳಗೆ ಒಂದು ಮೈಲಿಯಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಒಂದು ಹಳ್ಳವನ್ನು ದಾಟಿ ಸರ್ವೆ ನಂಬರು 12 ಮತ್ತು 21 ರೊಳಗೆ ಒಂದೂವರೆ ಫರಲಾಂಗಿನಷ್ಟು ದೂರ ದಕ್ಷಿಣ ಮಾರ್ಗವಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 21 ರೊಳಗೆ ಒಂದುಮುಕ್ಕಾಲು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ದಕ್ಷಿಣ ದಿಕ್ಕಿಗೆ ತಿರಿಗಿ ತುಂಗಾನದಿಯ ಎಡಗಡೆ ದಡವನ್ನು ಸೇರುವವರಿಗೂ ಬಲಕಡಿ ಗ್ರಾಮದ ಸರ್ವೆ ನಂಬರು 17ರ ಪಶ್ಚಿಮ ಎಲ್ಲೆಯ ಮೇಲೆ ಹೋಗುತ್ತದೆ. ಅನಂತರ ಗುಲಗಂಜಿ ಮನೆ ಸರ್ವೆ ನಂಬರು 61ರ ಉತ್ತರ ದಿಕ್ಕಿನಲ್ಲಿ ಕೆರೆ ಗ್ರಾಮದಿಂದ ಬರುವ ಒಂದು ದೊಡ್ಡ ಹಳ್ಳವು ತುಂಗಾ ನದಿಗೆ ಸಂಗಮವಾಗುವ ಜಾಗಕ್ಕೆ ಮೇಲ್ಕಂಡ ನದಿಯ ಎಡದ ದಡದಲ್ಲಿ ದಕ್ಷಿಣ ಮತ್ತು ಪಶ್ಚಿಮ ಮಾರ್ಗವಾಗಿ ಹೋಗುತ್ತದೆ. ಅನಂತರ ನದಿಯ ದಡದ ಮೇಲೆ ಒಂದು ಫರಲಾಂಗಿನಷ್ಟು ದೂರ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂಬರು 64ರ ಆಗ್ನೇಯ ಮೂಲೆಯನ್ನು ಸೇರುವ ವರೆಗೂ ಗುಲಗಂಜಿಮನೆ ಸರ್ವೆ ನಂಬರು 10 ರೊಳಗೆ ಹಾದು ಪಶ್ಚಿಮ ಮಾರ್ಗವಾಗಿ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂಬರು 64 ಮತ್ತು 46ರ ಪೂರ್ವ ಸರಹದ್ದುಗಳ ಮೇಲೆ ವಾಯುವ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂಬರು 46ರ ಉತ್ತರ ಸರಹದ್ದಿನ ಮೇಲೆ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 22ರ ಉತ್ತರ ದಿಕ್ಕಿನ ಸರಹದ್ದಿನ ಮೇಲೆ ಮೂರೂಕಾಲು ಫರಲಾಂಗು ದೂರದಷ್ಟು ವಾಯುವ್ಯ ದಿಕ್ಕಿನಲ್ಲಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 22 ರೊಳಗೆ ಸುಮಾರು ಏಳು ಫರಲಾಂಗಿನಷ್ಟು ದೂರ ನೈರುತ್ಯ ದಿಕ್ಕಿನಲ್ಲಿ ಹೋಗುತ್ತದೆ. ಅನಂತರ ಮುಡಬ ಗ್ರಾಮದ ಸರ್ವೆ ನಂಬರು 10ರ ವಾಯುವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 11 ರೊಳಗೆ ಒಂದೂವರೆ ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಒಂದು ಹಳ್ಳದ ಪಕ್ಕದಲ್ಲಿ ಪಶ್ಚಿಮ ಮತ್ತು ಉತ್ತರ ಮಾರ್ಗವಾಗಿಯೂ ಸರ್ವೆ ನಂಬರು 39ರ ಉತ್ತರ ಸರಹದ್ದಿನ ಮೇಲೆ ಮೂರು ಫರಲಾಂಗಿನಷ್ಟು ದೂರ ಪಶ್ಚಿಮ ಮಾರ್ಗವಾಗಿಯೂ ಮತ್ತು ಅದೇ ಗ್ರಾಮದ ಸರ್ವೆ ನಂಬರು 39ರ ಪಶ್ಚಿಮ ಸರಹದ್ದಿನ ಮೇಲೆ 5 ಫರಲಾಂಗಿನಷ್ಟು ದೂರ ದಕ್ಷಿಣ ಮಾರ್ಗವಾಗಿಯೂ; ಸರ್ವೆ ನಂಬರು 11ರ ದಕ್ಷಿಣ ಸರಹದ್ದಿನ ಮೇಲೆ ಪೂರ್ವ ಮಾರ್ಗವಾಗಿಯೂ ಮತ್ತು ಸರ್ವೆ ನಂಬರು 11ರ ಪಶ್ಚಿಮ ಸರಹದ್ದಿನ ಮೇಲೆ ಐದು ಫರಲಾಂಗಿನಷ್ಟು ದೂರ ದಕ್ಷಿಣ ಮಾರ್ಗವಾಗಿಯೂ ಹೋಗುತ್ತದೆ. ಅನಂತರ ಸರ್ವೆ ನಂಬರು 12 ರೊಳಗೆ ಹತ್ತು ಫರಲಾಂಗಿನಷ್ಟು ದೂರ ನೈರುತ್ಯ ಮತ್ತು ದಕ್ಷಿಣ ಮಾರ್ಗವಾಗಿ ಹೋಗುತ್ತದೆ. ಅನಂತರ ಮುಡಬ ಗ್ರಾಮದ ಸರ್ವೆ ನಂಬರು 12 ರೊಳಗೆ ಒಂದೂಕಾಲು ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವುದಕ್ಕೆ ಮುಡಬ ಗ್ರಾಮದ ಸರ್ವೆ ನಂಬರು 16 ರೊಳಗೆ ಐದು ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಮುಡಬ ಗ್ರಾಮದ ಸರ್ವೆ ನಂಬರು 46ರ ನೈರುತ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಪಶ್ಚಿಮ ಮುಖವಾಗಿ ಸದರಿ ಕನ್ನಡ ಜಿಲ್ಲಾ ಸರಹದ್ದನ್ನು ಅನುಸರಿಸಿ ಹೋಗುತ್ತದೆ.

ಪಶ್ಚಿಮಕ್ಕೆ :—ಮೇಲೆ ಕಂಡ ಸ್ಥಳದಿಂದ ಸದರೀ ಲೈನ್ ಶಿವಮೊಗ್ಗ ಡಿಸ್ಟ್ರಿಕ್ಟ ತೀರ್ಥಹಳ್ಳಿ ತಾಲ್ಲೂಕು ಬಾಳೆಹಳ್ಳಿ ಗ್ರಾಮದ ಆಗ್ನೇಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಕನ್ನಡ ಜಿಲ್ಲಾ ಸರಹದ್ದನ್ನು ಅನುಸರಿಸಿ ಉತ್ತರ ಮಾರ್ಗವಾಗಿ ಹೋಗುತ್ತದೆ. ಅನಂತರ ಬಾಳೆಹಳ್ಳಿ ಗ್ರಾಮದ ಪೂರ್ವ ಮತ್ತು ಆಗ್ನೇಯ ಸರಹದ್ದುಗಳನ್ನು ಅನುಸರಿಸಿ ಉತ್ತರ, ಪೂರ್ವ ಮತ್ತು ಈಶಾನ್ಯ ದಿಕ್ಕಿನಲ್ಲಿ ಹೋಗಿ ಶುರುವಾದ ಜಾಗವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು, ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು ಮತ್ತು ಅಂಥಾ ಅಪ್ಪಣೆ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ;

(a) ಅತಿಕ್ರಮ ಪ್ರವೇಶ, ದನ ಕರುಗಳನ್ನು ಮೇಯಿಸುವದು, ದನ ಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಯಾಗಿ ಕ್ರಮವಾಗಿ ಅಧಿಕಾರಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಬಳಪಡಿಸುವದು; ಅಥವಾ ಸಾಗಿಸುವದು

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲಿ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಛಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತೀಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ, ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ತಾರೀಖು 6ನೆ ಜೂ॥ 1907.

ತುಂಗಭದ್ರಾ ಫಾರೆಸ್ಟು, ಕಡೂರು ಡಿಸ್ಟ್ರಿಕ್ಟು.

ಸ॥ 1900ನೆ ಇಸವಿಯು XIನೆ ನಂಬರ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ :— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗವರ್ನ್ಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ನಂಬರು R. 9405—Ft. 149-0?-4, 19-4-07; 25-?-07ನೆ ಇಸವಿಯ ಗೆಜೆಟ್ಟಿನಲ್ಲಿ ಛಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು	[illegible]	[illegible] ವಿಸ್ತೀರ್ಣ	[illegible] ಹೆಸರು	ಸ್ಥಳ ಮತ್ತು ಚಕ್ಕುಬಂದಿ.
ಕಡೂರು	ಕೊಪ್ಪ ಮತ್ತು ಮೂಡಗೆರೆ ತಾಲ್ಲೋಕು	101 ಚದರಮೈಲಿ, 379 ಎಕರೆಗಳು, 25 ಗುಂಟೆಗಳು.	ತುಂಗಭದ್ರಾ	ಸ್ಥಳ :—ಪಶ್ಚಿಮಘಟ್ಟದಲ್ಲಿ ವಿಶಾಲವಾದ ಬೆಟ್ಟಗಳು ವರಾಹ ಪರ್ವತದ ಲಾಗಾಯಿತು ಪೂರ್ವಕ್ಕೆ ವ್ಯಾಪಿಸಿರುವ ಮೇರತಿಪರ್ವತದವರೆಗೆ ಉತ್ತರಾರ್ಧಭಾಗವು ಕೊಪ್ಪದ ತಾಲ್ಲೋಕಿನಲ್ಲಿ ಹರಿಯುವ ತುಂಗಾನದಿಯ ಅಚ್ಚುಗಟ್ಟಿಗೂ ದಕ್ಷಿಣಾರ್ಧಭಾಗವು ಮೂಡಗೆರೆ ತಾಲ್ಲೋಕಿನಲ್ಲಿ ಹರಿಯುವ ಭದ್ರಾನದಿಯ ಅಚ್ಚುಗಟ್ಟಿಗೂ ಸೇರಿರುವ ವಿಸ್ತಾರವಾದ ಜಂಗ್ಲಿ ಪ್ರದೇಶಗಳು :— ಉತ್ತರಕ್ಕೆ :—ಮುಡುಬಗ್ರಾಮದ ಸರ್ವೆ ನಂಬರು 46ರ ದಕ್ಷಿಣ ಸರಹದ್ದಿನಲ್ಲಿ ಮುಡುಬದಿಂದ ದಕ್ಷಿಣ ಕನ್ನಡಜಿಲ್ಲೆಗೆ ಹೋಗುವ ಕಾಲುದಾರಿ ದಾಟುವ ಸ್ಥಳದಿಂದ, ಎಲ್ಲೆಯು ರೇಖೆಯು ಅದೇ ಗ್ರಾಮದ ಸರ್ವೆ ನಂ. 40ರ ದಕ್ಷಿಣ ಮೂಲೆಯನ್ನು ಸೇರುವವರೆಗೆ ಸರ್ವೇ ನಂಬರು 46 ಮತ್ತು 12 ರೊಳಗೆ ನಾಲ್ಕು ಫರ್ಲಾಂಗಿನಷ್ಟುದೂರ ಈಶಾನ್ಯಮುಖವಾಗಿ ಹೋಗುತ್ತದೆ. ಅಲ್ಲಿಂದ ಸರ್ವೇ ನಂಬರು 40ರ

ದಕ್ಷಿಣ ಎಲ್ಲೆಯಮೇಲೆ ಒಂದೂಕಾಲು ಫರ್ಲಾಂಗಿನಷ್ಟುದೂರ ಈಶಾನ್ಯಮುಖವಾಗಿ ಹೋಗುತ್ತದೆ. ಅನಂತರ ಅಲ್ಲಿಂದ ಸರ್ವೆ ನಂಬರು 40ರ ಪೂರ್ವದಿಕ್ಕಿನ ಎಲ್ಲೆಯಮೇಲೆ ಸುಮಾರು ಎಂಟು ಫರ್ಲಾಂಗಿನಷ್ಟುದೂರ ವಾಯುವ್ಯಮುಖವಾಗಿಯೂ, ಅನಂತರ ಸರ್ವೇ

ನಂಬರು 15ರ ಆಗ್ನೇಯ ಮೂಲೆಯನ್ನು ಸೇರುವವರೆಗೂ ಸರ್ವೆ ನಂಬರು 12 ಮತ್ತು 11 ರೊಳಗೆ ನಾಲ್ಕು ಫರ್ಲಾಂಗಿನಷ್ಟು ದೂರ ಈಶಾನ್ಯಮುಖನಾಗಿಯೂ, ಅನಂತರ ಸರ್ವೆ ನಂಬರು 11 ರೊಳಗೆ ಅರ್ಧ ಫರ್ಲಾಂಗಿನಷ್ಟುದೂರ ಈಶಾನ್ಯಮುಖನಾಗಿಯೂ, ಅನಂತರ ಅದೇ ನಂಬರೊಳಗೆ ಎರಡು ಫರ್ಲಾಂಗಿನಷ್ಟುದೂರ ಪೂರ್ವ ಮುಖವಾಗಿಯೂ, ಅನಂತರ ಕೆರೆ ಗ್ರಾಮದ ಸರ್ವೆ ನಂಬರು 12ರ ನೈರುತ್ಯ ಮೂಲೆಯನ್ನು ಸೇರುವವರೆಗೆ ಮುಡಬಗ್ರಾಮದ ಸರ್ವೆ ನಂಬರು 11 ರೊಳಗೆ ಎರಡೂಕಾಲು ಫರ್ಲಾಂಗಿನಷ್ಟು ದೂರ ಈಶಾನ್ಯಮುಖನಾಗಿಯೂ, ಸಹ ಹೋಗುತ್ತದೆ. ತರುವಾಯ ಕೆರೆ ಗ್ರಾಮದ ಸರ್ವೆ ನಂಬರು 12 ಮತ್ತು 67ರ ಆಗ್ನೇಯ ಸರಹದ್ದುಗಳಮೇಲೆ ಈಶಾನ್ಯಮುಖವಾಗಿಯೂ, ಅನಂತರ ಸರ್ವೇ ನಂಬರು 11 ರೊಳಗೆ ಅರ್ಧ ಫರ್ಲಾಂಗಿನಷ್ಟುದೂರ ಈಶಾನ್ಯ ಮುಖವಾಗಿಯೂ, ಅನಂತರ ಅದೇ ಗ್ರಾಮದ ಸರ್ವೆ ನಂಬರು 1ರ ದಕ್ಷಿಣಮೂಲೆಯನ್ನು ಸೇರುವವರೆಗೆ ಸರ್ವೆ ನಂಬರು 11 ಮತ್ತು 6 ರೊಳಗೆ ಆಗ್ನೇಯಮುಖನಾಗಿಯೂ, ಅನಂತರ ಅದೇ ಗ್ರಾಮದ ಸರ್ವೆ ನಂಬರು 8ರ ಆಗ್ನೇಯಮೂಲೆಯನ್ನು ಸೇರುವವರೆಗೂ ಸರ್ವೆ ನಂಬರು 6 ರೊಳಗೆ ಈಶಾನ್ಯಮುಖನಾಗಿಯೂ, ಹಾದು ಹೋಗುತ್ತದೆ. ಅನಂತರ ತುಂಗಾನದಿಯ ಒಂದು ಉಪನದಿಯನ್ನು ಸೇರುವವರೆಗೆ ಸರ್ವೆ ನಂಬರು 8 ರೊಳಗೆ ಒಂದು ಫರ್ಲಾಂಗಿನಷ್ಟುದೂರ ಉತ್ತರಮುಖನಾಗಿಯೂ, ಅನಂತರ ಗುಲಗಂಜಿಮನೆ ಗ್ರಾಮದ ಸರ್ವೆ ನಂಬರು 10ರ ಪಶ್ಚಿಮ ಸರಹದ್ದನ್ನು ಸೇರುವವರೆಗೂ ಮೇಲೆ ಕಂಡ ಉಪನದಿಯ ಬಲಭಾಗವನ್ನು ಹಿಡಿದು ಹೋಗುತ್ತದೆ. ಅನಂತರ ತುಂಗಾನದಿಯ ದಡವನ್ನು ಸೇರುವವರೆಗೆ ಸರ್ವೆ ನಂಬರು 10 ರೊಳಗೆ ನಾಲ್ಕೂಕಾಲು ಫರ್ಲಾಂಗಿನಷ್ಟುದೂರ ಆಗ್ನೇಯಮುಖನಾಗಿ ಹಾದು ಹೋಗುತ್ತದೆ. ಅನಂತರ ತುಂಗಾನದಿಯನ್ನು ದಾಟಿ ಒಂದು ಹಳ್ಳವನ್ನು ಸೇರುವವರೆಗೆ ಅದೇ ಗುಲಗಂಜಿಮನೆ ಗ್ರಾಮದ ಸರ್ವೆ ನಂಬರು 10 ಮತ್ತು 11 ರೊಳಗೆ ಮೂರು ಫರ್ಲಾಂಗಿನಷ್ಟುದೂರ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ತುಂಗಾನದಿಯ ದಡವನ್ನು ಸೇರುವ ವರೆಗೆ ಮೇಲ್ಕಂಡ ಹಳ್ಳವನ್ನು ಅನುಸರಿಸಿ ಪಶ್ಚಿಮಮುಖವಾಗಿ ಹೋಗುತ್ತದೆ. ಅನಂತರ ಸದರಿ ಗುಲಗಂಜಿಮನೆ ಗ್ರಾಮದ ಸರ್ವೆ ನಂಬರು 33ರ ಆಗ್ನೇಯ ಮೂಲೆಯನ್ನು ಸೇರುವವರೆಗೆ ಸದರಿ 11ನೆ ನಂಬರೊಳಗೂ, ಅನಂತರ ತುಂಗಾನದಿ ಸೇರುವವರೆಗೆ ಸದರಿ ಗ್ರಾಮದ ಸರ್ವೆ ನಂಬರು 33 ಮತ್ತು 3ರ ಪೂರ್ವ ಸರಹದ್ದಿನಮೇಲೆ ಉತ್ತರಮುಖನಾಗಿ ಹೋಗುತ್ತದೆ. ಅನಂತರ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 33ರ ವಾಯವ್ಯ ಮೂಲೆಯನ್ನು ಸೇರುವವರೆಗೆ ತುಂಗಾನದಿಯ ಬಲಗಡೆ ದಡವನ್ನು ಹಿಡಿದು ಹೋಗುತ್ತದೆ. ಅನಂತರ ದಕ್ಷಿಣಕ್ಕೆ ತಿರುಗಿ ಅದೇ ಗ್ರಾಮದ ಸರ್ವೆ ನಂಬರು 33ರ ಪಶ್ಚಿಮ ಸರಹದ್ದಿನಮೇಲೆ ಹೋಗುತ್ತದೆ. ಅನಂತರ ಸರ್ವೆ ನಂಬರು 56 ರೊಳಗೆ ನಾಲ್ಕು ಫರ್ಲಾಂಗಿನಷ್ಟುದೂರ ದಕ್ಷಿಣಮುಖನಾಗಿ ಹಾದು ಹೋಗುತ್ತದೆ. ಅನಂತರ ಅದೇ ನಂಬರೊಳಗೆ ಸರ್ವೆ ನಂಬರು 12ರ ದಕ್ಷಿಣ ಸರಹದ್ದನ್ನು ಮುಟ್ಟುವವರೆಗೂ ಐದು ಫರ್ಲಾಂಗಿನಷ್ಟುದೂರ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಅದೇ ನಂಬರೊಳಗೆ ಒಂದು ಫರ್ಲಾಂಗಿನಷ್ಟುದೂರ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಅದೇ ನಂಬರೊಳಗೆ ಉತ್ತರಮುಖವಾಗಿ ತಿರುಗಿ ಅದೇ ಗ್ರಾಮದ ಸರ್ವೆ ನಂಬರು 51ರ ಪೂರ್ವಕಡೆ ಮೂಲೆಯನ್ನು ಮುಟ್ಟುವವರೆಗೂ ಸರ್ವೆ ನಂಬರು 56 ರೊಳಗೆ ಎರಡು ಫರ್ಲಾಂಗಿನಷ್ಟುದೂರ ಹೋಗುತ್ತದೆ. ಅನಂತರ, ನೆಮ್ಮಾರು ಕಾಫಿ ಎಸ್ಟೇಟಿನ ನೈರುತ್ಯ ಸರಹದ್ದನ್ನು ಸೇರುವವರೆಗೆ ಒಂದು ಫರ್ಲಾಂಗಿನಷ್ಟುದೂರ ಪುನಃ ಅದೇ ನಂಬರಿನಲ್ಲಿ ಉತ್ತರಮುಖನಾಗಿ ಹೋಗುತ್ತದೆ. ಅನಂತರ ತುಂಗಾನದಿಯನ್ನು ಸೇರುವವರೆಗೆ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 56ರ ಪೂರ್ವ ಸರಹದ್ದಿನಮೇಲೆ ವಾಯವ್ಯ ಮಾರ್ಗವಾಗಿ ಅಂದರೆ ಕಾಫಿ ಎಸ್ಟೇಟಿನ ಪಶ್ಚಿಮದಕಡೆ ಹೋಗುತ್ತದೆ. ಅನಂತರ ನೆಮ್ಮಾರು ಗ್ರಾಮದ ವಾಯುವ್ಯ ಮೂಲೆಯನ್ನು ಸೇರುವವರೆಗೆ ತುಂಗಾನದಿಯ ಬಲಕಡೆ ದಡದಮೇಲೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ನೆಮ್ಮಾರು ಗ್ರಾಮದ ಪಶ್ಚಿಮ ಸರಹದ್ದಿನಮೇಲೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ. ಅನಂತರ ನೆಮ್ಮಾರು ಎಸ್ಟೇಟು ಬಂಗ್ಲೆಗೆ ಸೇರುವವರೆಗೆ ಅದೇ ಎಸ್ಟೇಟಿನ ಸರ್ವೆ ನಂಬರು 1ರ ಒಳಗೆ ಆಗ್ನೇಯಮುಖನಾಗಿ ಮೂರೂವರೆ ಫರ್ಲಾಂಗಿನಷ್ಟುದೂರ ಹೋಗುತ್ತದೆ. ಅನಂತರ ಹರೂರುಗ್ರಾಮದ ಸರ್ವೆ ನಂಬರು 71ರ ಉತ್ತರ ಸರಹದ್ದನ್ನು ಸೇರುವವರೆಗೆ ನೆಮ್ಮಾರು ಎಸ್ಟೇಟು ಸರ್ವೆ ನಂಬರು 1 ರೊಳಗೆ ಎರಡು ಫರ್ಲಾಂಗಿನಷ್ಟುದೂರ ದಕ್ಷಿಣಮುಖನಾಗಿಯೂ, ಅನಂತರ ಸದರಿ ಹರೂರು ಗ್ರಾಮದ ದಕ್ಷಿಣ ಸರಹದ್ದಿನಲ್ಲಿ ಸೇರುವ ಒಂದು ಹಳ್ಳವನ್ನು ಸಂಧಿಸುವವರೆಗೆ ಅದೇ ಗ್ರಾಮದ ಸರ್ವೆ ನಂಬರ 71 ರೊಳಗೆ ಆರು ಫರ್ಲಾಂಗಿನಷ್ಟುದೂರ ಆಗ್ನೇಯಮುಖನಾಗಿಯು ಸಹ ಹೋಗುತ್ತದೆ. ಅನಂತರ ಮಲೆನಾಡು ಗ್ರಾಮದ ಸರ್ವೆ ನಂಬರು 73ರ ವಾಯವ್ಯಮೂಲೆಯನ್ನು ಸೇರುವವರೆಗೆ ಸದರಿ ಹಳ್ಳದ ಎಡಪಕ್ಕವನ್ನು ಅನುಸರಿಸಿ ದಕ್ಷಿಣಮಾರ್ಗವಾಗಿಯೂ, ಅನಂತರ ಅದೇ ಮಲನಾಡುಗ್ರಾಮದ ಸರ್ವೆ ನಂಬರು 73ರ ನೈರುತ್ಯ ಸರಹದ್ದಿನಮೇಲೆ ಆಗ್ನೇಯಮುಖವಾಗಿಯೂ, ಅನಂತರ ಅದೇ ಹಳ್ಳವನ್ನು ದಾಟಿ ಪೂರ್ವ ಮುಖನಾಗಿಯೂ, ಅನಂತರ ಅದೇ ಗ್ರಾಮದ ಸರ್ವೆ ನಂಬರ 71ರ ದಕ್ಷಿಣ ಸರಹದ್ದಿನಮೇಲೆ ಪೂರ್ವಮುಖನಾಗಿಯೂ, ಅನಂತರ ಸರ್ವೆ ನಂಬರು 70 ರೊಳಗೆ ಐದು ಫರ್ಲಾಂಗಿನಷ್ಟುದೂರ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 99ರ ನೈರುತ್ಯ ಸರಹದ್ದನ್ನು ಸೇರುವವರೆಗೆ ಅದೇ ನಂಬರು 70ರೊಳಗೆ ಎರಡು ಫರ್ಲಾಂಗಿನಷ್ಟುದೂರ ಪೂರ್ವಮುಖನಾಗಿಯೂ, ಅನಂತರ ಒಂದು ಹಳ್ಳವನ್ನು ದಾಟಿ ಅದರ ಬಲಕಡೆಯಲ್ಲಿ ಈಶಾನ್ಯಮುಖನಾಗಿ ಹೋಗಿ ನಾಲ್ಕೂವರೆ ಫರ್ಲಾಂಗಿನಷ್ಟು ದೂರದಲ್ಲಿರುವ ಮತ್ತೊಂದು ಹಳ್ಳವನ್ನು ಸೇರುತ್ತದೆ. ಅನಂತರ ಎರಡನೇ ಹಳ್ಳದ ಬಲಗಡೆಯಲ್ಲಿ ಪೂರ್ವಮುಖನಾಗಿಯೂ, ಅನಂತರ ಸದರಿ ಹಳ್ಳವನ್ನು ದಾಟಿ ಸರ್ವೆ ನಂಬರು 97ರ ನೈರುತ್ಯಮೂಲೆಯನ್ನು ಸೇರುವವರೆಗೂ ಸರ್ವೆ ನಂಬರು 70 ಮತ್ತು 57 ರೊಳಗೆ ಒಂದು ಫರ್ಲಾಂಗಿನಷ್ಟುದೂರ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 97ರ ದಕ್ಷಿಣ ಸರಹದ್ದಿನಮೇಲೆ ಈಶಾನ್ಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 97ರ ಆಗ್ನೇಯ ಸರಹದ್ದಿನಮೇಲೆ ಈಶಾನ್ಯಮುಖನಾಗಿಯೂ ಅನಂತರ ಮಲೆನಾಡುನಿಂದ ಹೇರಳನಿಗೆ ಹೋಗುವ ಕಾಲುದಾರಿಯನ್ನು ಸಂಧಿಸುವವರೆಗೆ ಮಲೆನಾಡು ಗ್ರಾಮದ ಸರ್ವೆ ನಂಬರು 57ರೊಳಗೆ ಐದು ಫರ್ಲಾಂಗಿನಷ್ಟುದೂರ ಪೂರ್ವಮುಖನಾಗಿಯೂ ಅನಂತರ ಹೇರಳಗ್ರಾಮದ ಸರ್ವೆ ನಂಬರು 52ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಮಲೆನಾಡುಗ್ರಾಮದ ಸರ್ವೆ ನಂಬರು 57ರೊಳಗೆ ಐದು ಫರ್ಲಾಂಗಿನಷ್ಟುದೂರ ಮೇಲೆಕಂಡ ಕಾಲುದಾರಿಮೇಲೆ ಆಗ್ನೇಯಮುಖನಾಗಿಯೂ ಸಹ ಹೋಗುತ್ತದೆ.

ಪೂರ್ವಕ್ಕೆ :—ಮೇಲೆಕಂಡ ಸ್ಥಳದಿಂದ ಸದರಿ ಲೈನ್ ಹೇರಳಾನೆ ಗ್ರಾಮದ ಸರ್ವೆ ನಂಬರು 52ರ ನೈರುತ್ಯ ಸರಹದ್ದಿನ ಮೇಲ್ಕು ನಂಬರು 51ರ ಪಶ್ಚಿಮ ಸರಹದ್ದಿನಮೇಲ್ಕು, ಆಗ್ನೇಯಮುಖನಾಗಿ ಹೋಗುತ್ತದೆ. ಅನಂತರ ಅದೇಗ್ರಾಮದ ಸರ್ವೆ ನಂಬರು 39ರ ವಾಯುವ್ಯಮೂಲೆಯನ್ನು ಸಂಧಿಸುವವರೆಗೂ, ಸರ್ವೆ ನಂಬರು 53ರೊಳಗೆ ಮೂರು ಫರ್ಲಾಂಗಿನಷ್ಟುದೂರ ದಕ್ಷಿಣಾಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 41ರ ಅತ್ಯಂತ ಪಶ್ಚಿಮಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 50ರೊಳಗೆ ದಕ್ಷಿಣಮುಖವಾಗಿಯೂ ಸರ್ವೆ ನಂಬರು 80ರ ಅತ್ಯಂತ ದಕ್ಷಿಣಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 42ರೊಳಗೆ ಆಗ್ನೇಯಮುಖವಾಗಿಯೂ ಅನಂತರ ಸರ್ವೆ ನಂಬರು 1—84—85 ಮತ್ತು 86ರ ದಕ್ಷಿಣ ಸರಹದ್ದುಗಳ ಮೇಲೆ ಪೂರ್ವಮುಖನಾಗಿಯೂ, ಮೇಗೂರುಗ್ರಾಮದ ಸರ್ವೆ ನಂಬರು 40 ಮತ್ತು 41ರ ದಕ್ಷಿಣ ಸರಹದ್ದುಗಳಮೇಲು, ಪುನಃ ಹೇರಳಾನುಗ್ರಾಮದ ಸರ್ವೆ ನಂಬರು 1ರ ದಕ್ಷಿಣ ಸರಹದ್ದಿನಮೇಲ್ಕು, ಮೇಗೂರುಗ್ರಾಮದ ಸರ್ವೆ ನಂಬರು 39ರ ನೈರುತ್ಯ ಮೂಲೆಯನ್ನು ಸೇರುವವರೆಗೆ ಹೋಗುತ್ತದೆ. ಅನಂತರ ಕಲ್ಲುಗುಂಡಿ ಗ್ರಾಮದ ಸರ್ವೆ ನಂಬರು 13ರ ವಾಯುವ್ಯಮೂಲೆಯನ್ನು ಸಂಧಿಸುವವರೆಗೂ ಮೇಗೂರುಗ್ರಾಮದ ಸರ್ವೆ ನಂಬರು 24ರ ನೈರುತ್ಯ ಸರಹದ್ದನ್ನು ಅನುಸರಿಸಿ ಆಗ್ನೇಯಮುಖನಾಗಿಯೂ ಅನಂತರ ಶೃಂಗೇರಿಯಿಂದ ಹೊರನಾಡಿಗೆ ಹೋಗುವ ಕಾಲುದಾರಿಯನ್ನು ಸಂಧಿಸುವವರೆಗೆ ಕಲ್ಲುಗುಂಡಿಗ್ರಾಮದ ಸರ್ವೆ ನಂಬರು 13 ಮತ್ತು 31 ರೊಳಗೆ ಆರು ಫರ್ಲಾಂಗಿನಷ್ಟುದೂರ ಆಗ್ನೇಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 31ರೊಳಗೆ ಸುಮಾರು ಆರು ಫರ್ಲಾಂಗಿನಷ್ಟುದೂರ ಮೇಲೆ ಕಂಡ ಕಾಲುದಾರಿ ಅನುಸರಿಸಿ ದಕ್ಷಿಣಮುಖನಾಗಿಯು, ಅನಂತರ ಕಲ್ಲುಗುಂಡಿ ಗ್ರಾಮದ ಸರ್ವೆ ನಂಬರು 63ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 31ರೊಳಗೆ ನಾಲ್ಕು ಫರ್ಲಾಂಗಿನಷ್ಟು ದೂರ ಆಗ್ನೇಯಮುಖನಾಗಿಯೂ, ಹೋಗುತ್ತದೆ. ಅನಂತರ ಸರ್ವೆ ನಂಬರು 65ರ ನೈರುತ್ಯ ಸರಹದ್ದನ್ನು ಸೇರುವವರೆಗೂ ಸರ್ವೆ ನಂಬರು 63 ಮತ್ತು 31ರ ದಕ್ಷಿಣ ಸರಹದ್ದುಗಳನ್ನನುಸರಿಸಿ ಪೂರ್ವಮುಖನಾಗಿಯೂ ಅನಂತರ ಸರ್ವೆ ನಂಬರು 68ರ ದಕ್ಷಿಣಭಾಗದ ಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 65ರೊಳಗೆ ಆಗ್ನೇಯಮುಖನಾಗಿ ನೇರವಾಗಿಯೂ, ಅನಂತರ ಅತ್ತಿಕೊಡಗಿಗ್ರಾಮದ ಸರ್ವೆ ನಂಬರು 17ರ ನೈರುತ್ಯ ಮೂಲೆಯನ್ನು ಸಂಧಿಸುವವರೆಗೂ ಕಲ್ಲುಗುಂಡಿಗ್ರಾಮದ ಸರ್ವೆ ನಂಬರು 76ರೊಳಗೆ ಆಗ್ನೇಯಮುಖನಾಗಿಯೂ ಹೋಗುತ್ತದೆ. ತರುವಾಯ ಅಲ್ಲಿಂದ ಹೊರನಾಡುಗ್ರಾಮದ ಸರ್ವೆ ನಂಬರು 46ರ ವಾಯುವ್ಯಮೂಲೆಯನ್ನು ಸಂಧಿಸುವವರೆಗೂ ಅದೇಗ್ರಾಮದ ಸರ್ವೆ ನಂಬರು 64 ಮತ್ತು 48ರುಗಳ ಉತ್ತರ ಸರಹದ್ದುಗಳಮೇಲೆ ಪಶ್ಚಿಮಮುಖನಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 48ರ ವಾಯುವ್ಯಸರಹದ್ದು ಅನುಸರಿಸಿ ಮೂರೂ ಕಾಲುಫರ್ಲಾಂಗಿನಷ್ಟುದೂರ ನೈರುತ್ಯಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 46ರ ಪಶ್ಚಿಮಸರಹದ್ದಿನಲ್ಲಿ ಎರಡು ಬಾಂದುಗಳವರೆಗೂ ಸೇರುವವರೆಗೆ ಐದೂವರೆ ಫರ್ಲಾಂಗಿನಷ್ಟುದೂರ ದಕ್ಷಿಣಮುಖನಾಗಿಯೂ ಅನಂತರ ಮಾವಿನಕೆರೆ ಮಜರೆ ಬಲಗಿಗ್ರಾಮದ ಸರ್ವೆ ನಂಬರು 791ರ ಉತ್ತರ ಸರಹದ್ದಿನ ಮೂಲೆಯನ್ನು ಸಂಧಿಸುವವರೆಗೂ ಅದೇ ಬಲಗಿಗ್ರಾಮದ ಸರ್ವೆ ನಂಬರು 792ರೊಳಗೆ ನಾಲ್ಕು ವರೆ ಫರ್ಲಾಂಗಿನಷ್ಟುದೂರ ನೈರುತ್ಯಮುಖನಾಗಿಯೂ, ಅನಂತರ ಅದೇ ಬಲಗಿಗ್ರಾಮದ 784ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 786–791 ಮತ್ತು 784ರ ಪಶ್ಚಿಮ ಸರಹದ್ದುಗಳಮೇಲೆ ಮೂರು ಫರ್ಲಾಂಗಿನಷ್ಟುದೂರ ಆಗ್ನೇಯಮುಖನಾಗಿಯೂ, ಅನಂತರ ಅದೇ ಗ್ರಾಮದ ಸರ್ವೆ ನಂಬರು 778ರ ನೈರುತ್ಯ ಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 774ರೊಳಗೆ ನಾಲ್ಕು ಫರ್ಲಾಂಗಿನಷ್ಟುದೂರ ದಕ್ಷಿಣಮುಖನಾಗಿಯೂ, ಅನಂತರ ಒಂದು ಹಳ್ಳವನ್ನು ದಾಟಿ ಹೊರನಾಡುಗ್ರಾಮದ ಸರ್ವೆ ನಂಬರು 48ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಬಲಗಿ ಗ್ರಾಮದ ಸರ್ವೆ ನಂಬರು 774ರೊಳಗೆ ಆರು ಫರ್ಲಾಂಗಿನಷ್ಟುದೂರ ಪೂರ್ವಮುಖನಾಗಿಯೂ, ಅನಂತರ ಹೊರನಾಡುಗ್ರಾಮದ ಸರ್ವೆ ನಂಬರು 50ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ, ಸರ್ವೆ ನಂಬರು 4-ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಬಲಗಿ ಗ್ರಾಮದ ಸರ್ವೆ ನಂಬರು 774ರೊಳಗೆ ಆರು ಫರ್ಲಾಂಗಿನಷ್ಟುದೂರ ಪೂರ್ವಮುಖನಾಗಿಯೂ, ಅನಂತರ ಹೊರನಾಡುಗ್ರಾಮದ ಸರ್ವೆ ನಂಬರು 0ರ ನೈರುತ್ಯಮೂಲೆಯನ್ನು ಸಂಧಿಸುವವರೆಗೂ ಸರ್ವೆ ನಂಬರು 48ರ ನೈರುತ್ಯ ಸರಹದ್ದಿನಮೇಲೆ ಆಗ್ನೇಯಮುಖನಾಗಿಯೂ, ಅನಂತರ ಸರ್ವೆ ನಂಬರು 49ರ ಪಶ್ಚಿಮಸರಹದ್ದನ್ನು ಸೇರುವವರೆಗೆ ಸರ್ವೆ ನಂಬರು 50ರ ನೈರುತ್ಯ ಸರಹದ್ದಿನ ಮೇಲೆ ಆಗ್ನೇಯಮುಖನಾಗಿಯೂ, ಅನಂತರ ಸರ್ವೆ ನಂಬರು 49ರ ಪಶ್ಚಿಮಸರಹದ್ದಿನಮೇಲೆ ಆಗ್ನೇಯಮುಖನಾಗಿಯೂ, ಅನಂತರ ಮಾವಿನಕೆರೆ ಗ್ರಾಮದ ಸರ್ವೆ ನಂಬರು 426ರ ಉತ್ತರ ಸರಹದ್ದಿನಲ್ಲಿ ಅತ್ಯಂತ ದಕ್ಷಿಣಮೂಲೆಯನ್ನು ಸಂಧಿಸುವವರೆಗೂ ಹೊರನಾಡುಗ್ರಾಮದ ಸರ್ವೆ ನಂಬರು 136ರ ಪಶ್ಚಿಮ ಸರಹದ್ದಿನಮೇಲೆ ಆಗ್ನೇಯ ಮುಖನಾಗಿಯೂ ಸಹ ಹೋಗಿ ಸೇರುತ್ತದೆ.

ದಕ್ಷಿಣಕ್ಕೆ :—ಮೇಲೆ ಕಂಡ ಸ್ಥಳದಿಂದ ಸದರಿ ಲೈನ್ ಮಾವಿನಕೆರೆ ಗ್ರಾಮದ ಸರ್ವೆ ನಂಬರು 426ರ ಪಶ್ಚಿಮಸರಹದ್ದನ್ನು ಸೇರುವ ವರೆಗೆ ಅದೇ ನಂಬರೊಳಗೆ ಎರಡು ಹಳ್ಳವನ್ನು ದಾಟಿಕೊಂಡು ಹತ್ತು ಫರ್ಲಾಂಗಿನಷ್ಟುದೂರ ನೈರುತ್ಯ ಮುಖನಾಗಿ ಹೋಗಿ ಸೇರುತ್ತದೆ. ಅನಂತರ ಕಳಕೋಡು ಗ್ರಾಮದ ಸರ್ವೆ ನಂಬರು 46ರ ಈಶಾನ್ಯ ಮೂಲೆಯನ್ನು ಸಂಧಿಸುವವರೆಗೆ ಸದರಿ ಗ್ರಾಮದ ಸರ್ವೆ ನಂಬರು 54 ರೊಳಗೆ ನಾಲ್ಕು ವರೆ ಫರ್ಲಾಂಗಿನಷ್ಟುದೂರ ನೈರುತ್ಯ ಮುಖನಾಗಿಯೂ ಅನಂತರ ಅದೇ ಗ್ರಾಮದ ಸರ್ವೆ ನಂಬರು 43ರ ಈಶಾನ್ಯ ಸರಹದ್ದಿನ ಮೂಲೆಯನ್ನು ಸೇರುವವರೆಗೆ ಸರ್ವೆ ನಂಬರು 42 ರೊಳಗೆ ಮೂರು ಫರ್ಲಾಂಗಿನಷ್ಟುದೂರ ವಾಯುವ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 43ರ ವಾಯುವ್ಯ ಸರಹದ್ದಿನ ಮೇಲೆ ನೈರುತ್ಯ ಮುಖನಾಯು ಹೋಗುತ್ತದೆ. ಅನಂತರ ಒಂದು ಹಳ್ಳವನ್ನು ದಾಟುತ್ತದೆ. ಅನಂತರ ಸರ್ವೆ ನಂಬರು 12ರ ಈಶಾನ್ಯ ಸರಹದ್ದಿನ ಮೇಲೆ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 32ರ ಈಶಾನ್ಯ ಸರಹದ್ದಿನ ಮೇಲೆ ಕಾಲು ಫರ್ಲಾಂಗಿನಷ್ಟುದೂರ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ವಾಯುವ್ಯ ಸರಹದ್ದಿನ ಮೇಲೆ ಅರ್ಧ ಫರ್ಲಾಂಗಿನಷ್ಟುದೂರ ನೈರುತ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 58 ಮತ್ತು 32ರ ಈಶಾನ್ಯ ಸರಹದ್ದುಗಳ ಮೇಲೆ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 59 ಮತ್ತು 32ರ ಈಶಾನ್ಯ ಸರಹದ್ದಿನ ಮೇಲೆ

ಸರ್ವೆ ನಂಬರು 32ರ ವಾಯುವ್ಯ ಸರಹದ್ದಿನ ಮೇಲೂ ನೈರುತ್ಯ ಮುಖನಾಗಿ ಹೋಗುತ್ತದೆ. ಅನಂತರ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 60, 30, 31, 30, 29, ಮತ್ತು 30 ರೊಳಗೆ ಎರಡು ಮೈಲಿಗಳಷ್ಟು ದೂರ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಸಂಸೆ ಗ್ರಾಮದ ಸರ್ವೆ ನಂಬರು 102ರ ಆಗ್ನೇಯ ಸರಹದ್ದನ್ನು ಸೇರುವ ವರೆಗೂ ಭದ್ರಾನದಿಯ ಎಡಗಡೆ ದಡದ ಮೇಲೆ ಪಶ್ಚಿಮ ಮುಖನಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 100ರ ಈಶಾನ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 98 ರೊಳಗೆ ಎರಡೂಕಾಲು ಫರ್ಲಾಂಗಿನಷ್ಟು ದೂರ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 99ರ ಉತ್ತರ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 98 ರೊಳಗೆ ವಾಯುವ್ಯ ಮುಖನಾಗಿಯೂ, ಅನಂತರ ಅದೇ ನಂಬರಿನ ವಾಯುವ್ಯ ಸರಹದ್ದಿನ ಮೇಲೆ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 97ರ ಉತ್ತರ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 98ರೊಳಗೆ ದಕ್ಷಿಣ ಮುಖನಾಗಿಯೂ, ಅನಂತರ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 97ರ ಪಶ್ಚಿಮ ಸರಹದ್ದಿನ ಮೇಲೆ ನೈರುತ್ಯ ಮುಖನಾಗಿಯು ಸಹ ಹೋಗುತ್ತದೆ. ಅಲ್ಲಿಂದ ಸರ್ವೆ ನಂಬರು 59ರ ಆಗ್ನೇಯ ಮೂಲೆಯನ್ನು ಸಂಧಿಸುವ ವರೆಗೂ ಸದರಿ ನದಿಯ ಎಡಗಡೆ ದಡದ ಮೇಲೆ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 60ರ ಈಶಾನ್ಯ ಮೂಲೆಯನ್ನು ಸಂಧಿಸುವ ವರೆಗೆ ಸರ್ವೆ ನಂಬರು 59 ರೊಳಗೆ ನಾಲ್ಕುವರೆ ಫರ್ಲಾಂಗಿನಷ್ಟುದೂರ ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 50ರ ಈಶಾನ್ಯ ಮೂಲೆಯಲ್ಲಿ ಒಂದು ಹಳ್ಳವನ್ನು ಸಂಧಿಸುವ ವರೆಗೂ ಸರ್ವೆ ನಂಬರು 59 ರೊಳಗೆ ಒಂದು ಮೈಲಿಯಷ್ಟು ದೂರ ವಾಯುವ್ಯ ಮತ್ತು ಉತ್ತರ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 47ರ ಪಶ್ಚಿಮ ದಕ್ಷಿಣ ಮೂಲೆಯನ್ನು ಸಂಧಿಸುವ ವರೆಗೆ ಮೇಲ್ಕಂಡ ಹಳ್ಳದ ದಕ್ಷಿಣದ ಕಡೆ ಎರಡು ಫರ್ಲಾಂಗಿನಷ್ಟುದೂರ ವಾಯುವ್ಯ ಮುಖನಾಗಿಯು, ಹೋಗುತ್ತದೆ. ಅನಂತರ ಸರ್ವೆ ನಂಬರು 74ರ ವಾಯುವ್ಯ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 47 ರೊಳಗೆ ಎರಡು ಫರ್ಲಾಂಗಿನಷ್ಟುದೂರ ನೈರುತ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 77ರ ಈಶಾನ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 74ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಕಳಸದಿಂದ ದಕ್ಷಿಣ ಕನ್ನಡಾಕ್ಕೆ ಹೋಗುವ ಕಾಲುದಾರಿಯನ್ನು ಒಂದು ಹಳ್ಳದ ಹತ್ತಿರ ಸಂಧಿಸುವ ವರೆಗೆ ಸರ್ವೆ ನಂಬರು 77 ರೊಳಗೆ ಒಂದು ಮೈಲಿಯಷ್ಟುದೂರ ನೈರುತ್ಯ ಮುಖನಾಗಿ ಹೋಗುತ್ತದೆ; ಅನಂತರ ಭದ್ರಾನದಿಯ ಎಡದಡದಲ್ಲಿ ಮತ್ತೊಂದು ಹಳ್ಳವನ್ನು ಸಂಧಿಸುವ ವರೆಗೂ ಮೇಲೆ ಕಂಡ ಕಾಲುದಾರಿ ಹಿಡಿದುಕೊಂಡು ಸುಮಾರು ಆರು ಫರ್ಲಾಂಗ್ ವರೆಗೆ ಪಶ್ಚಿಮ ಮುಖನಾಗಿ ಹೋಗುತ್ತದೆ. ಅನಂತರ ಅದೇ ನದಿಯ ಎಡಗಡೆದಡದ ಮೇಲು, ಸರ್ವೆ ನಂಬರು 33 ರೊಳಗೂ ಈ ನಂಬರಿನ ಉತ್ತರ ಸರಹದ್ದು ಸಿಕ್ಕುವವರೆಗೂ ಎಂದರೆ ಸರ್ವೆ ನಂಬರುಗಳು 37, 40, 33 ಸೇರುವ ಜಾಗಾಕ್ಕೆ ಪಶ್ಚಿಮ ಮುಖನಾಗಿ ಹೋಗುತ್ತದೆ. ಅನಂತರ ಕಳಸದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗುವ ಕಾಲುದಾರಿಯನ್ನು ಸಂಧಿಸುವವರೆಗೆ ಭದ್ರಾನದಿಯನ್ನು ಅನುಸರಿಸಿ ದಕ್ಷಿಣ ಮತ್ತು ವಾಯುವ್ಯ ಮುಖನಾಗಿ ಹೋಗುತ್ತದೆ. ಅನಂತರ ಆ ನದಿಯನ್ನು ದಾಟಿ ಸದರಿ ಲೈನ್ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವವರೆಗೆ ನೈರುತ್ಯ ಮುಖನಾಗಿ ಸದರಿ ಕಾಲುದಾರಿಯನ್ನು ಅನುಸರಿಸಿಕೊಂಡು ಹೋಗುತ್ತದೆ.

ಪಶ್ಚಿಮಕ್ಕೆ.—ಮೇಲೆ ಕಂಡ ಸ್ಥಳದಿಂದ ಸದರಿ ಲೈನ್ ದಕ್ಷಿಣ ಕನ್ನಡ ಜಿಲ್ಲ ಸರಹದ್ದನ್ನು ಅನುಸರಿಸಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟ್ ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮೆ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫೈಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮೆದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫೈಯಿಷ್ಮಾಡಿದಾಗ, ಇಂಥಾ ಹಕ್ಕುಗಳನ್ನು ಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳಿಗೋಸ್ಕರವಾಗಲೀ, ಇನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರಿಗೋಸ್ಕರ ಗಿಡಗಳ್ಯಾವದನ್ನೂ ಕಡಿಯಕೂಡದು, ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನು ಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟ್ ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನ ಕರುಗಳನ್ನು ಮೇಯಿಸುವದು, ದನಕರುಗಳನ್ನು ಸ್ಟೇಟ್ ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆಯದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತು ಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವುದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿಷೇಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ್ದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡಗಳನ್ನಾಗಲಿ ಕಡಿಯುವದು, (ಕತರಾಯಿಸುವದು) ಆದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ಒಳಪಡಿಸುವದು, ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

ಈ ಪ್ರಸಿದ್ಧಪತ್ರಿಕೆ ಪ್ರಕಟವಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನು ಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರ್.

ತಾರೀಖು 1ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ವಿಶಿಷ್ಟ ಸ್ಟೇಟ್ ಫಾರೆಸ್ಟು, ಪ್ಲಾಂಟೇಷನ್ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1908ನೆ ಇಸವಿ ಜೂನ್ 30ರ ವರಿಗೆ ಸುಮಾರು 9½ ತಿಂಗಳು ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಜುಲೈ 7ನೆ ತಾರೀಖಿನ ವರಿಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನೋಟು :—ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.

(2) ದರಖಾಸ್ತುಗಳಲ್ಲಿ ಕೋಲಾರ್ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿರುವ ತಂಗಡಿ ಮತ್ತು ಕಕ್ಕೆ ಚಕ್ಕೆಗೆ ತಾಲ್ಲೂಕುವಾರಿ ಮೊತ್ತವಾಗಿ ಮೊಬಲಗು ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್‌ಷ್ಯೂರ್ ಮಾಡಿ ಲಿಫಾಫೆ ಮೇಲೆ “ತಂಗಡಿ ಮತ್ತು ಕಕ್ಕೆ, ಚಕ್ಕೆಯ ದರಖಾಸ್ತು” ಎಂದು ಬರದು ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರ ವಿಳಾಸಕ್ಕೆ ರವಾನಿಸಬೇಕು.

(4) ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರ ಆಫೀಸಿನಲ್ಲಿ 1907ನೆ ಇಸವಿ ಜುಲೈ 8ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು. ದರಖಾಸ್ತುದಾರುಗಳೆಲ್ಲಾ ಹಾಜರಿರಬೇಕೆಂದು ಇದರಿಂದ ತಿಳಿಸಿರುತ್ತೆ.

(5) ಮೇಲ್ಕಂಡ ಆಫಿಸರು ಯಾವ ಅಥವಾ ಎಲ್ಲಾ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೆ ಮತ್ತು ಯಾವ ಕಾರಣವು ನಮೂದಿಸದೇನೆ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಟೆಂಡರುಗಳು ಡೆಪ್ಯುಟಿ ಕಮಿಷನರ್ ಸಾಹೇಬರ ಮಂಜೂರಾತಿಗೆ ಒಳಪಟ್ಟಿರುತ್ತೆ.

(6) ಮಂಜೂರ್ಮಾಡಲ್ಪಟ್ಟ ದರಖಾಸ್ತು ಬಾಬತು ಠೇವಣಿ ಮೊಬಲಗು ಉಳಿಸಿಕೊಳ್ಳಲ್ಪಡುತ್ತೆ. ಬಾಕಿ ದರಖಾಸ್ತುಗಳ ಬಾಬತು ಮೊಬಲಗು ಕೂಡ್ಲೆ ವಾಪಸು ಮಾಡಲ್ಪಡುತ್ತೆ.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ ಒಂದುವಾರದ ಒಳಗಾಗಿ ದರಖಾಸ್ತು ಮೊಬಲಗಿನ ಒಟ್ಟು ಮೊತ್ತದ ಪೈಕಿ ಅರ್ಧ ಭಾಗವನ್ನು ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಕೋಲಾರ್ ಡಿಸ್ಟ್ರಿಕ್ಟ್ ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಶಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬುದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗ ರಾಜೀನಾಮೆಯನ್ನು ಯಾವ ಕಾರಣವನ್ನು ನಮೂದಿಸದೇನೆ ತಿರಸ್ಕರಿಸಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಸ್ವತಂತ್ರ್ಯರಾಗಿರುತ್ತಾರೆ. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಂಜೂರ್ ಮಾಡದ ವರ್ಗದಾರ ಯಾ ಆಸ್ಯೈನಿಯಿಂದ ಜಮಾಯಿಸಲ್ಪಟ್ಟ ಚಕ್ಕೆಯು ಬಗೆರ್ ಹುಕ್ಕುಂ ಜಮಾಯಿಸಿದಂತೆ ಭಾವಿಸಲ್ಪಡುತ್ತೆ.

(10) ಇಜಾರೆದಾರನು ಒಟ್ಟು ಇಜಾರೆ ಮೊಬಲಗಿನಲ್ಲಿ 1ನೆ ಪ್ಯಾರಾದಲ್ಲಿ ಕಂಡಂತೆ ಸರ್ಕಾರಕ್ಕೆ ಪಾವತಿ ಮಾಡಿದ್ದು ಜಾಹಾ ಬಾಕಿ ಉಳಿಯುವ ಮೊಬಲಗನ್ನು ಎರಡು ಸಮ ಕಿಸ್ತುಗಳಲ್ಲಿ ಈ ಕೆಳಗೆ ನಮೂದಿಸಿರುವ 1907ನೆ ಸೆಪ್ಟಂಬರ್ ಮತ್ತು ನವಂಬರ್ 30ನೆ ತಾರೀಖಿನ ವಳಗಾಗಿ ಕೊಡಬೇಕು. ತಪ್ಪಿದರೆ ಅವನ ಇಜಾರೆ ಹಕ್ಕನ್ನು ಹಿಂದೆ ಕೊಟ್ಟಿರುವ ಮೊಬಲಗು ಸಹಾ ಕಳೆದುಕೊಳ್ಳುವದಲ್ಲದೆ ಇನ್ನು ಬಾಕಿ ಇರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಕೊಡಲು ಗುರಿಯಾಗುತ್ತಾನೆ. ಸದರಿ ಮೇರಿಗೆ ಬಾಕಿ ಆಗತಕ್ಕ ಮೊಬಲಗು ರೆವಿನ್ಯೂ ಬಾಕಿಯಂತೆ ಸದರಿಯವನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲೀ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ಕಕ್ಕೆ ಚಕ್ಕೆಯನ್ನು ಭೂಮಟ್ಟಕ್ಕೆ ಕತ್ತರಿಸಬೇಕು.

(IV) ಇಜಾರೇ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗ್ಯೆರೆ ತಪಶೀಲ್ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲೀ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲೀ ತನಿಖಿಗೆ ಬಂದಾಗೆ ಅವುಗಳನ್ನು ಹಾಜರ್ಮಾಡತಕ್ಕದ್ದು.

(V) ಚಕ್ಕೆ ತೆಗೆಯಲ್ಪಟ್ಟ ಕಟ್ಟಿಗೆ ಅಥವಾ ಅಂಥಾ ಕಟ್ಟಿಗೆಯಿಂದ ತಯಾರಾದ (ಇದ್ದಲು) ಸಾಗಿಸುವದರಲ್ಲಿ ಪ್ರತಿ ಗಾಡಿ ಚಕ್ಕೆ ಸಂಗಡವೂ ಒಂದು ಪ್ಯಾಸ್ ಇರತಕ್ಕದ್ದು. ಸದರಿ ಪ್ಯಾಸ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಸೈನ್ ಮೊಹರ್ ನಿಶಿ ಪಡದ ಅಚ್ಚು ಫಾರಂ ಬುಕ್ಕಿನಿಂದ ಕಂಟ್ರಾಕ್ಟರು ಯಾ ಅವರ ರಿಜಿಸ್ಟರ್ಡ್ ಏಜಂಟ್ ಕೊಡತಕ್ಕದ್ದಾಗಿರುತ್ತೆ. ಸದರಿ ಪ್ರತಿ ಒಂದು ಪ್ಯಾಸ್ ಬುಕ್ಕು ಪೂರ್‍ಯೈಸಿದ ಕೂಡ್ಲೆ ಕೌಂಟರ್ ಫಾಯಿಲ್‌ಗಳನ್ನು ಕಂಟ್ರಾಕ್ಟರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿಗೆ ಕಳುಹಿಸತಕ್ಕದ್ದು.

(VI) ಕಂಟ್ರಾಕ್ಟರ್ ಯಾ ಆತನ ಜನಗಳ ಅಜಾಗರೂಕತೆಯಿಂದ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆ ಉಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(VII) 1907ನೆ ಜುಲೈ ಮಾಹೆ 1ನೆ ತಾರೀಖು ವಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೇ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಮತ್ತು ಚಕ್ಕೆ ಇರುವ ಕಟ್ಟಿಗೆಯನ್ನು ಸದರಿ ಕಟ್ಟಿಗೆಯಿಂದ ತಯಾರ್ಮಾಡಲ್ಪಟ್ಟ ಇದ್ದಲನ್ನೂ ಕೋಲಾರ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(VIII) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುತ್ತೆ. ಮತ್ತು ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು (1,000) ರೂಪಾಯಿಗೆ ಜಾಸ್ತಿ ಇಲ್ಲದಂತೆ ಜರ್ಮಾನೆಯನ್ನು ಸಹಾ ವಿಧಿಸಬಹುದು.

(IX) ಚಕ್ಕೆ ಸಮೇತವಿರುವ ಕಟ್ಟಿಗೆಯು ಗುತ್ತಿಗೆದಾರನದಾಗಿರುತ್ತೆ.

ಇಸ್ತಿಹಾರನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬವರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರುವ ಕಾಮಸಂದ್ರ ಸ್ಟೇಟ್ ಫಾರೆಸ್ಟ ಪೈಕಿ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಮರಗಳನ್ನು 1907ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1908

ನೆ ಇಸವಿ ಜೂನ್ ಆಖ್ಯೆರವರೆಗೆ ಕಡಿದು ಸಾಗಿಸಿಕೊಂಡುಹೋಗತಕ್ಕ ಹಕ್ಕನ್ನು 1907ನೆ ಇಸವಿ ಜುಲೈ 11ನೆ ತಾರೀಖು ರುವಾರ ಮಧ್ಯಾಹ್ನ 2 ಘಂಟೆಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಬೌರಿಂಗಪ್ಯೇಟೆ ಟ್ರಾವೆಲರ್ಸಬಂಗ್ಲೆಯಲ್ಲಿ ಹರಾ ಮಾಡುವರು:—

ಸ್ಥಳ.		ಸುಮಾರು ವಿಸ್ತೀರ್ಣ ಎಕರೆ	ಕಡಿಯತಕ್ಕ ಮರಗಳ ಜಾತಿ.	ಷರಾ
ಬ್ಲಾಕು ನಂಬರ	ತಾಕು ನಂಬರ.			
I	8	376	ಟಿಗರಯಾನೆ ಚುಜ್ಜಲು, ನಲ್ಲಬಲಸು, ದೇವದಾರಿ, ಗೊರವಿ, ಈಚೆ ಮತ್ತು ಜಾಲಿನೆಗೆ ನಾಲಾಯಖ್ ಆಗಿರತಕ್ಕ ಇತರ ಸಾದೆ ಜಾತಿ ಮರಗಳು.	
IV	8	311	ಡಿಟ್ಟೋ	
ಎಲ್ಲಾ ಫಾರೆಸ್ಟು	...		ಸರಕಾರಕ್ಕೆ ಉಳಿಸಿಕೊಳ್ಳುವ ಮರಗಳ ವಿನಹಾ ಎಲ್ಲಾ ಜಾತಿಯ ಒಣ ಸಾದೆ.	ಕತರಾವಣಿ ನಡೆಯಲಿಟ್ಟ ತಾಕುಗಳು ಇದರಲ್ಲಿ ಸೇರಿರುವದಿಲ್ಲ.

2. ಮೇಲ್ಕಂಡ ತಾಕುಗಳು ಪ್ರತ್ಯೇಕವಾಗಿಯಾಗಲಿ ಎರಡು ಸೇರಿಸಿಯಾಗಲಿ ಅಥವಾ ಎಕರೆ ಒಂದಕ್ಕೆ ಇಷ್ಟು ಮೊಬಲಗೆಂದಾಗಲಿ ಹರಾಜು ಮಾಡುವಂಥ ಆಫಿಸರವರಿಗೆ ಸೂಕ್ತ ಕಂಡುಬರುವ ರೀತಿಯಲ್ಲಿ ಹರಾಜು ಮಾಡಲ್ಪಡುವದು. ಈ ಹರಾಜು ಕನ್ಸರ್ವೇಟರ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

3. ಹರಾಜು ಮಾಡತಕ್ಕ ಆಫಿಸರವರು ಯಾವಕಾರಣವನ್ನು ನಮೂದಿಸದೇನೆ ಯಾವ ಒಂದು ಅಥವಾ ಎಲ್ಲಾ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಸ್ವತಂತ್ರರಾಗಿರುತ್ತಾರೆ.

4. ಪ್ರತಿಒಬ್ಬ ಸವಾಲ್‌ದಾರನು ಹರಾಜಿನಲ್ಲಿ ಸವಾಲ್ ಮಾಡುವದಕ್ಕೆ ಮುಂಚೆ (100) (ಒಂದುನೂರು) ರೂಪಾಯಿಗಳನ್ನು ಠೇವಣಿ ಕಟ್ಟಬೇಕು. ಆ ಮೊಬಲಗು ಹರಾಜು ಖೈದಾದ ಕೂಡ್ಲೆ ಅಂಗೀಕರಿಸಲ್ಪಟ್ಟ ಸವಾಲ್‌ದಾರರ ಮೊಬಲಗು ವಿನಹಾ ಬಾಕಿ ಸವಾಲ್‌ದಾರರುಗಳ ಮೊಬಲಗು ವಾಪಸು ಮಾಡಲ್ಪಡುತ್ತೆ.

5. ಅಂಗೀಕರಿಸಲ್ಪಟ್ಟ ಸವಾಲ್‌ದಾರನು ಹರಾಜು ಮಂಜೂರಾದ ಸಂಗತಿಯ ನೋಟೀಸ್ ತಲ್ಪಿದ ತಾರೀಖು ಲಾಗಾಯಿತು ಒಂದುವಾರದೊಳಗಾಗಿ ಹರಾಜು ಮೊಬಲಗು ಪೈಕಿ ಅರ್ಧಹಿಸ್ಸೆ ಮೊಬಲಗನ್ನು ಬವರಿಂಗಪ್ಯೇಟೆ ತಾಲ್ಲೂಕು ಖಜಾನೆಗೆ ಇರಸಾಲು ಮಾಡಬೇಕು. ಮತ್ತು ಈ ನೋಟಿಫಿಕೇಷನಲ್ಲಿ ನಮೂದಿಸಿರುವ ಷರತ್ತುಗಳು ಅನುಸರಿಸಿ ಮುಚ್ಚಳಿಕೆಯು ಬರೆದುಕೊಡಬೇಕು. ಬಾಕಿ ಅರ್ಧಹಿಸ್ಸೆ ಮೊಬಲಗನ್ನು ಎರಡು ಸಮ ಖಿಸ್ತುಗಳಾಗಿ ಭಾಗಿಸಿ ಒಂದನೆಯ ಖಿಸ್ತು 1907ನೆಯ ಇಸವಿ ಅಕ್ಟೋಬ 5ನೆಯ ತಾರೀಖಿನೊಳಗಾಗಿಯು ಎರಡನೆಯ ಖಿಸ್ತು 1908ನೆಯ ಇಸವಿ ಜನವರಿ 5ನೆಯ ತಾರೀಖಿನೊಳಗಾಗಿಯು ಪಾರಖಾವಣೆ ಮಾಡಬೇಕು.

6. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸಿರುವ ಯಾವ ಒಂದು ವಾಯಿದೆಯಲ್ಲಾದರು ಮೊಬಲಗನ್ನ ಪಾವತಿ ಮಾಡುವದು ಇಜಾರೆದಾರರು ತಪ್ಪಿದರೆ ಅಥವಾ ನಮೂದಿಸಿರುವ ಕಾಲದಲ್ಲಿ ಮುಚ್ಚಳಿಕೆ ಬರದುಕೊಡಲು ತಪ್ಪುವ ಸಂದರ್ಭದಲ್ಲಿ ಅಂಥಾ ತಪ್ಪುವ ತಾರೀಖುವರಗೆ ಇಜಾರೆದಾರನು ಸಲ್ಲಿಸಿರುವ ಮೊಬಲಗನ್ನು ಮತ್ತು ಡಿಪಾಜಿಟ್ ಕಟ್ಟಿರುವ 100 ರೂಪಾಯಿಗಳನ್ನು ಸಹ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಕಂಟ್ರಾಕ್ಟಿನ ಹಕ್ಕನ್ನು ತಪ್ಪಿಸಿ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುತ್ತೆ. ಸದರಿ ಎರಡನೆಯ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಮೊದಲಿನ ಇಜಾರೆದಾರನು ಗುರಿಯಾಗುತ್ತಾನೆಯೆ ಶಿವಾಯಿ ಅದರಿಂದ ಉಂಟಾಗಬಹುದಾದ ಫಾಯಿದೆಗೆ ಈತನಿಗೆ ಹಕ್ಕು ಇರುವದಿಲ್ಲ. ನಷ್ಟದ ಮೊಬಲಗನ್ನು ರೆವೆನ್ಯೂ ರೂಲ್ಸ ಅನುಸರಿಸಿ ತಪ್ಪಿತಸ್ಥನಾದ ಇಜಾರೆದಾರನಿಂದ ವಸೂಲ್ಮಾಡಲ್ಪಡುತ್ತೆ.

7. ಕಂಟ್ರಾಕ್ಟುದಾರನು ಪೂರಾ ಮೊಬಲಗು ಸಲ್ಲಿಸಿದ್ದಾಗ್ಯೂ ಮತ್ತು ಹಾತ್ ಲಾಗವಡಿನಿಂದ ಸ್ಟೇಟ್ ಫಾರೆಸ್ಟಿನಲ್ಲಿ ಕಟ್ಟಿಗೆಯನ್ನು ಕಡಿಸಿ ಜಮಾಯಿಸಿದ್ದಾಗ್ಯೂ 1908ನೆ ಇಸವಿ ಜೂನ್ ಆಖ್ಯೆರ ಆದ ನಂತರ ಮೇಲೆ ನಮೂದಿಸಿರುವ ಕೂಪುಗಳಲ್ಲಿ ಉಳಿದುಹೋಗುವ ಮರಗಳಿಗು ಮತ್ತು ಸ್ಟೇಟ್ ಫಾರೆಸ್ಟ್ ಎಲ್ಲೆಯಿಂದ ಹೊರಪಡಿಸದೆ ಉಳಿದುಹೋಗುವ ಕಟ್ಟಿಗೆಗೂ ಸಹ ಇವರಿಗೆ ಹಕ್ಕು ಇರುವದಿಲ್ಲ.

8. ಉಳಿಸಲ್ಪಟ್ಟಿರುವ ಜಾತಿ ಮರಗಳನ್ನು, ಬೀಜಕ್ಕೋಸ್ಕರ ಗುರ್ತುಮಾಡಿ ನಂಬರು ಹಾಕಿರುವ ಮರಗಳನ್ನು ಒಂದು ಅಡಿ ಸುತ್ತಳತೆಗೆ ಕಮ್ಮಿ ಇರತಕ್ಕ ಸಸಿಗಳನ್ನು, ಫಲವೃಕ್ಷಗಳನ್ನು, ಫಸಾರೆ ಜಿನಸಿ ಆಗತಕ್ಕ ಮರಗಳನ್ನು ಕಡಿಯಕೂಡದು. ಮತ್ತು ಇತರ ಕೆಲಸ ಮಾಡುವವರಲ್ಲಿ ಅವುಗಳಿಗೆ ಇಜಾ ಸಹಾ ಮಾಡಕೂಡದು.

9. ಕಡಿಯಲ್ಪಟ್ಟ ಮರಗಳ ಮೋಟುಗಳನ್ನು 3 ಅಂಚಿಗಿಂತ ಹೆಚ್ಚು ಎತ್ತರವಾಗಿ ಬಿಡಕೂಡದು, ಮತ್ತು ಕಾಫಿ ...ಸ್ತುಂ ಅನುಸರಿಸಿ ಕೆತ್ತಿಸಬೇಕು.

10. ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಪ್ಯಾಸು ಕೊಡಲು ನಿಯಮಿಸಲ್ಪಟ್ಟ ಫಾರೆಸ್ಟು ನೌಕರರಿಂದ ಪ್ರತಿ ಒಂದು ...ಡಿಗು ಒಂದೊಂದು ರಹದಾರಿ ಪಡೆದ ಶಿವಾಯಿ ಸಾದೆ ಭರ್ತಿ ಗಾಡಿಗಳನ್ನು ಫಾರೆಸ್ಟಿನಿಂದ ರಫ್ತು ಮಾಡಕೂಡದು. ಈ ಸಾದೆ ಗಾ...ಗಳನ್ನು ಮತ್ತು ರಹದಾರಿಗಳನ್ನು ಸಹ ಮೂತನೂರು, ಬೂದಿಕೋಟೆ, ಕಾಮಸಂದ್ರ ಮತ್ತು ಡಿಸ್ಟ್ರಿಕ್ಟು ಫಾರೆಸ್ಟಾಫೀಸರವರು ...ತ್ತು ಮಾಡಲ್ಪಡುವ ಇತರ ಸ್ಥಳಗಳಲ್ಲಿ ತನಿಖೆ ಬಗ್ಗೆ ಹಾಜರ್ಮಾಡಬೇಕು.

11. ರಾತ್ರಿ ಕಾಲದಲ್ಲಿ ಅಂದರೆ ಸೂರ್ಯಾಸ್ತಮಾನವಾದನಂತರ ಮತ್ತು ಸೂರ್ಯೋದಯವಾಗುವದಕ್ಕೆ ಮುಂಚಿತವಾಗಿ ಸಾದೆ ...ನ್ನು ಸ್ಟೇಟ್ ಫಾರೆಸ್ಟಿನಿಂದಾಗಲಿ ಯಾ ಸ್ಟೇಟ್ ಫಾರೆಸ್ಟು ಮಾರ್ಗವಾಗಿಯಾಗಲಿ ಸಾಗಿಸಿಕೊಂಡು ಹೋಗಕೂಡದು.

12. ಸ್ಟೇಟ್ ಫಾರೆಸ್ಟಿಗೆ 500 ಗಜದೊಳಗಾಗಿ ಕಂಟ್ರಾಕ್ಟರು ಯಾ ಅವರಕಡೆ ಕೂಲಿ ಜನಗಳು ಬೆಂಕಿಯನ್ನು ತೆಗೆದು...ಂಡು ಹೋಗಕೂಡದು ಅಥವಾ ಉಂಟುಮಾಡಕೂಡದು.

13. ಇಜಾರೆದಾರನು ಮಾಡುವ ಅಹವಾಲ್ ವಿಷಯದಲ್ಲಿ ಕನ್ಸರ್ವೇಟರ್ ಸಾಹೇಬರವರ ಹುಕುಂ ಅಖೈರಾಗಿರುತ್ತೆ.

14. ಕಂಟ್ರಾಕ್ಟರು ಬರೆದುಕೊಡಬೇಕಾದ ಮುಚ್ಚಳಿಕೆಯ ನಕಲನ್ನು ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ವೈ. ಸೀತಾರಾಮೈಯ್ಯ,

ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್, ಕೋಲಾರ ಡಿಸ್ಟ್ರಿಕ್ಟು.

ತಂಗಡಿ ಚಕ್ಕೆ—ಇಸ್ತಿಹಾರು, ತಾರೀಖು 9ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂ...ಗಳಲ್ಲಿನ ತಂಗಡಿ ಚಕ್ಕೆಯನ್ನು ಈ ಕೆಳಗೆ ತಪಶೀಲ್ ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ...ಯಲು 1907ನೆ ಜುಲೈ ತಿಂಗಳು ತಾರೀಖು 7ರ ವರಗೆ ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫೀಸಿನಲ್ಲಿ ದರಖಾಸ್ತುಗಳು ತೆಗದು...ಳ್ಳಲ್ಪಡುವದು:—

...ಬರು.	ತಾಲ್ಲೂಕು.	ಜಮಾಯಿಸತಕ್ಕ ಕಾಲ	ಷರಾ
1	ಅರಸೀಕೆರೆ	1907ನೆ, ಜುಲೈ ತಾರೀಖು 1ನೇ ರ ಲಾಗಾಯಿತು 1909ನೆ ಜೂನ್ ತಾರೀಖು 30ರ ವರಿಗೆ	ಇನಾಂ ಜೋಡಿ ಕಾವಲುಗಳು ತ್ತು ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿ ಇರುವ ಇತರ ಜಮೀನುಗಳಲ್ಲಿನ ಫಸಲ್ ಈ ಹರಾಜಿಗೆ ಸೇರಿರುವದಿಲ್ಲ.
2	ಚನ್ನರಾಯಪಟ್ಟಣ		
3	ಹಾಸನ-ಆಲೂರ ಸಬ್ ತಾಲ್ಲೂಕು ಸೇರಿ		
4	ಬೇಲೂರು		
5	ಮಂಜರಾಬಾದ್		
6	ಅರ್ಕಲಗೂಡು		
7	ಹೊಳೇನರಸೀಪುರ		

2. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟಿ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ...ಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್ಶೂರ್ ಮಾಡಿ ಲಿಫಾಫೆಮೇಲೆ "ತಂಗಡಿ ಚಕ್ಕೆ ದರಖಾಸ್ತು" ಎಂದು ಬರದು ಹಾಸನ ಡಿಸ್ಟ್ರಿಕ್ಟು ಫಾರೆಸ್ಟಾಫೀಸರವರ ವಿಳಾಸಕ್ಕೆ ಬರದು ರವಾನಿಸಬೇಕು.

4. ಹಾಸನ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1907ನೆ ಇಸವಿ ಜುಲೈ ತಾರೀಖು 8ರಲ್ಲು ದಿವಿ 2 ಘಂಟೆಗೆ ಸರಿಯಾಗಿ ಡಿ...ಕ್ಟು ಫಾರೆಸ್ಟು ಆಫೀಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

5. ಮೇಲ್ಕಂಡ ಆಫೀಸರು ಯಾವ ಅಥವಾ ಎಲ್ಲಾ ದರಖಾಸ್ತುಗಳನ್ನು ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವ...ವುಳಿಸಿಕೊಂಡಿರುತ್ತಾರೆ. ದರಖಾಸ್ತು ಅಂಗೀಕರಿಸೋಣವು ಡೆಪ್ಯುಟಿ ಕನ್ಸರ್ವೇಟರವರ ಮಂಜೂರಾತಿಗೆ ಒಳಪಡುತ್ತೆ.

6. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತು...ರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

7. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳ ಒಳಗಾಗಿ ದರಖಾಸ್ತು ಮೊಬಲಗು ...ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ...ಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನಿಗೆ ಪಾರಖಾವಶೇ ಮಾಡಬೇಕು. ಮತ್ತು ಈ 3 ದಿನಗಳಲ್ಲಿ ಈ ಇಸ್ತಿಹಾ...ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ...ರದ್ದು ಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡ...ವದು.

8. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

9. ದರಖಾಸ್ತುದಾರರು ತಮಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟ ಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾಮೆಯನ್ನು ಅಂ ಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

10. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸಸ್ ಸಹ ಸಮನಾ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಮತ್ತು ಮೇಲ್ಕಂಡ ಹಣ ನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲಿ ಮೇಲ್ಕಂಡಂತೆ ಪಾ ತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣೇ ಮತ್ತು ರವಾನೆ ತಡೆಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು.

1ನೆ ಖಿಸ್ತು 1907ನೆ ಸಪ್ಟಂಬರ 1.
2ನೆ ಖಿಸ್ತು 1908ನೆ ಏಪ್ರೆಲ್ 1.
3ನೆ ಖಿಸ್ತು 1909ನೆ ಜನವರಿ 5.

ಇತರ ಷರತ್ತುಗಳು.

(i) ಇಜಾರೆದಾರನ ನೌಕರನೆ ಆಗಲಿ ಷಿಕ್ಮಿ ಕಂಟ್ರಾಕ್ಟರೆ ಆಗಲಿ ಎಳೆ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(ii) ಚಕ್ಕೆ ಜಮಾವಣೆ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದುನಿಂದ ಒಂದು ತಖ್ತೆಯನ್ನು ಕೊಡಬೇಕು.

(iii) ಚಕ್ಕೆ ಗಿಡಗಳನ್ನು ನೆಲಸಮನಾಗಿ ಕಡಿಯತಕ್ಕದ್ದು.

(iv) ಇಜಾರೆ ಮೇರೆ ರಫ್ತು ಮಾಡಲ್ಪಡುವ ತೊಗಟೆ ಅಥವಾ ತೊಗಟೆ ರಹಿತವಾದ ಮರದ ಪ್ರಮಾಣ ವಗ್ಯೆರೆ ಕಾ ವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರಾಗಲಿ ಅಥ ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರಾಗಲಿ ಅವರುಗಳಿಂದ ನೇಮಿಸಲ್ಪಟ್ಟ ಇತರ ಆಫಿಸರಾಗಲಿ ತನಿಖೆಗೆ ಬಂದ ಅವುಗಳನ್ನು ಹಾಜರ್ಪಡಿಸತಕ್ಕದ್ದು.

(v) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ತೊಗಟೆಗೂ ಕಂಟ್ರಾಕ್ಟರು ಯಾ ಏಜಂಟದಾರನಿ ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರ ಮೊಹರಸಿಕ್ಕ ಪಡೆದ ಪ್ರಿಂಟ ಫಾರಂ ಬುಕ್ಕಿನಲ್ಲಿ ಪ್ಯಾಸ್ ಕೊಡಲ್ಪಡತಕ್ಕದ ಅಂಥಾ ಬುಕ್ಕು ಮುಗಿದುಹೋದನಂತರ ಸದರಿ ಆಫಿಸರಿಗೆ ವಾಪಸು ಮಾಡಬೇಕು.

(vi) ಕಂಟ್ರಾಕ್ಟರು ಅಥವಾ ಆತನ ಕಡೆ ಜನಗಳ ಅಶ್ರದ್ಧೆಯಿಂದ ಸ್ಟೇಟಿ ಫಾರೆಸ್ಟು ಮತ್ತು ಪ್ಲಾಂಟೇಷನಗ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು. ಮತ್ತು ಅದರಿಂದ ಉಂ ಗುವ ನಷ್ಟಕ್ಕೆ ಜವಾಬ್ದಾರನಾಗತಕ್ಕದ್ದು.

(vii) 1909ನೆ ಇಸವಿ ಜುಲೈ ತಾರೀಖು 1 ರೊಳಗಾಗಿ ಇಜಾರೆ ಮೇರೆ ವಾಯಿದೇಲಿ ಕಡೆದು ಜಮಾವಣೆ ಮಾಡಿ ಸ್ಟಾಕ್ ಮಾಡಿರುವ ಎಲ್ಲಾ ಚಕ್ಕೆಯನ್ನು ಹಾಸನ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊ ತಕದ್ದು.

(viii) ಮೇಲೆ ನಮೂದಾಗುವ ಎಲ್ಲಾ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ಇಜಾರೆ ಹಕ್ಕು ರದ್ದು ಮಾಡುವದಲ್ಲದೆ ಅದುವರಿಗೆ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನು ಸರ್ಕಾ ದಂಡವಾಗಿ ತೆಗದುಕೊಂಡು ಡೆಪ್ಯುಟಿ ಕಮಿಷನರವರು ವಿಧಿಸಬಹುದಾದ 1,000 ರೂಪಾಯಿ ವರಿಗಿನ ರ್ಮಾನೆಗೆ ಇಜಾರೆದಾರ ಗುರಿಯಾಗಬೇಕು.

(ix) ತೊಗಟೆ ತೆಗೆದ ನಾವೆ ಇಜಾರೆದಾರನದಾಗಿರುತ್ತೆ.

ಬಿ. ಏ. ಶ್ಯಾಮರಾವ್,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಹಾಸನ ಡಿಸ್ಟ್ರಿಕ್ಟ

ಚಿಕ್ಕಮಗಳೂರು, ತಾರೀಖು 4ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಡೂರು ಡಿಸ್ಟ್ರಿಕ್ಟ್ಟು ಈ ಕೆಳಗಿನ ತಖ್ತೆಯಲ್ಲಿ ಕಂಡ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ನಾಟಾಗಳನ್ನು ಬಹಿರಂಗವಾಗಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ ಆಫಿಸರವರಿಂದ ಹರಾಜು ಮಾಡಿಸಲ್ಪಡುತ್ತೆ.

ನಂಬರ	ನಾಟಾಗಳ ಜಾತಿ.	ಶಿಂಕೆರೆ ಡಿಪೋ 18ನೆ ಜೂನ್ 1907.		ಸಾಗನಹಳ್ಳಿ ಜಂಗಲು ಡಿಪೋ 20ನೆ ಜೂನ್ 1907.		ಕರಡಿಕಲ್ಲು ಜಂಗಲ್ ಡಿಪೋ 21ನೆ ಜೂನ್ 1907.		ಕಾಳಿಕ ಜಂಗಲ್ ಡಿಪೋ 22ನೆ ಜೂನ್ 1907.		ಷರಾ.
		ಅದದು	ಅಡಿ	ಅದದು	ಅಡಿ	ಅಗದು	ಅಡಿ	ಅದದು	ಅಡಿ	
1	ಸಾಗುವಾನಿ ನಾಟಾ ...	70	1,750	...	...	...	...	...	...	ಸ್ಥೂಲ ಅಂದಾಜು
2	ಡಿಟ್ಟೋ ತುಂಡುಗಳು ...	50	500	...	...	...	...	...	...	
3	ಡಿಟ್ಟೋ ತೀರುಗಳು ...	4,000	3,500	...	...	...	...	...	...	
4	ಮತ್ತಿ ನಾಟಾ ...	20	400	20	600	60	1,500	30	900	
5	ಹೊನ್ನೆ ನಾಟಾ ...	20	400	...	...	...	...	10	250	
6	ನಂದಿ ನಾಟಾ ...	30	600	20	500	20	600	30	1,000	
7	ಯತ್ತ್ಯಾಗ ನಾಟಾ ...	30	600	20	400	30	700	10	300	
8	ಜಾಲಾರಿ ನಾಟಾ ...	...	...	...	...	...	...	10	230	
9	ಜಂಬೆ ನಾಟಾ ...	...	...	...	...	30	500	30	800	
10	ತಡಸಲು ನಾಟಾ ...	10	200	...	...	30	360	30	60	
11	ಸಾಗಡೆ ಅಥವಾ ಕೆಂದಾಳ ...	30	500	...	...	20	500	...	...	
12	ದಿಂಡಗ ...	...	...	30	400	30	400	10	200	
13	ಹುನ್ನಾಲು ನಾಟಾ ...	...	...	30	800	50	1,300	50	1,300	

ಹರಾಜು ಷರತ್ತು:—(1) ಹರಾಜುದಾರನು ತೆಗದುಕೊಂಡ ಪ್ರತಿ ಒಂದು ಲಾಟಿನ $\frac{1}{4}$ ಹಿಸ್ಸೆ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಹತ್ತಿರ ಇರತಕ್ಕ ಖಜಾನೆಗೆ ಹಣ ಜಮಾ ಮಾಡಿಸತಕ್ಕದ್ದು. ಹಾಗೆ ಹಣ ಜಮಾ ಮಾಡಿಸದೆ ತಪ್ಪಿದಲ್ಲಿ ಅಂಥಾ ಲಾಟನ್ನು ದುಸರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನಿಗೆ ಷುರು ಹರಾಜುದಾರನನ್ನ ಗುರಿಪಡಿಸುತ್ತೆ. ಅದರಲ್ಲಿ ಉಂಟಾಗುವ ಲಾಭಕ್ಕೆ ಮೊದಲು ಹರಾಜುದಾರನಿಗೆ ಏನೂ ಹಕ್ಕು ಇರುವದಿಲ್ಲ.

(2) ಪ್ರತಿ ಒಂದು ಲಾಟಿಗೂ ಬಾಕಿ ಆಗುವ $\frac{3}{4}$ ಹಿಸ್ಸೆ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು ಒಂದು ವಾರದಲ್ಲಿ ಜಮಾ ಮಾಡಿಸಬೇಕು. ತಪ್ಪಿದರೆ ಮೊದಲು ಕೊಟ್ಟ $\frac{1}{4}$ ಹಿಸ್ಸೆ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಮೇಲ್ಕಂಡ ಒಂದನೆ ಷರತ್ತು ಪ್ರಕಾರ ಮೊದಲು ಹರಾಜುದಾರನನ್ನು ಗುರಿಪಡಿಸುತ್ತೆ.

(3) ಪ್ರತಿ ಒಂದು ಲಾಟಿನ ಹಣವನ್ನು ಪೂರ್ತಿಯಾಗಿ ಕೊಡದೇಲೂ, ಲೈಸೆನ್ಸು ಪಡಿಯದೇಲೂ ನಾಟಾಗಳನ್ನು ಸಾಗಿಸಿಕೊಳ್ಳಕೂಡದು.

(4) ಹರಾಜುದಾರನು ಪಡದುಕೊಂಡ ನಾಟಾಗಳನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳಲ್ಲಿ ಡಿಪೋದಿಂದ ಸಾಗಿಸಿಕೊಳ್ಳದೆ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಶೇಕಡಾ ಸಾಲಿಯಾನ 12 ರೂಪಾಯಿನಂತೆ ಒಟ್ಟು ಹಣವಿಗಾಗಿ ಡಿಪೋ ಬಾಡಿಗೆ ಕೊಡತಕ್ಕದ್ದು.

ಬಿ. ಹೀರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ ಆಫಿಸರ್, ಕಡೂರು ಡಿಸ್ಟ್ರಿಕ್ಟ್ಟು.

ತುಮಕೂರು ಡಿಸ್ಟ್ರಿಕ್ಟ್.

ಪ್ರಸಿದ್ಧಪತ್ರಿಕೆ.

1906ನೆ ಇಸವಿ VIIನೆ ನಂಬರು ಮೈಸೂರು ಸೀಮೆಯ ಮುನಿಸಿಪಲ್ ರೆಗ್ಯುಲೇಷನ್ನಿನ 8ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ:—

——ಮೇಲ್ಕಂಡ ರೆಗ್ಯುಲೇಷನ್ನಿನ 7ನೆ ಸೆಕ್ಷನ್‌ಗೆ ಅನುಸಾರವಾಗಿ ಗುಬ್ಬಿ ಟವರ್ನ ಮತ್ತು ಅದರ ಮುನಿಸಿಪಾಲಿಟಿಯು ಸರಹದ್ದಿನೊಳಗೆ ಹಾಲಿ ಇರತಕ್ಕ ಹೊಸಪಾಳ್ಯ ಮತ್ತು ಎಕ್ಸ್‌ಟೆನ್ಷನ್ ಮತ್ತು ಈ ಕೆಳಗೆ ನಮೂದಿಸಿರುವ ಪಾಳ್ಯಗಳು ಮತ್ತು ಗ್ರಾಮಗಳು ಸೇರಿಸಿ "ಕಾಯಂ ಮುನಿಸಿಪಾಲಿಟಿ" ಯನ್ನಾಗಿ ಮಾಡಲ್ಪಡುತ್ತೆ.

ಇದಕ್ಕೇನಾದರೂ ಆಕ್ಷೇಪಣೆಗಳು ಇದ್ದಲ್ಲಿ ಅಂಥಾ ಆಕ್ಷೇಪಣೆಗಳನ್ನು ಸಾಕಾದ ಕಾರಣಗಳ ನಿಶಿ ಈ ಪ್ರಸಿದ್ಧಪತ್ರಿಕೆಯು ಗೆಜೆಟ್ಟನಲ್ಲಿ ಛಾಯಿಸಪಾದ ತಾರೀಖು ಲಾಗಾಯಿತು ಎರಡು ತಿಂಗಳಪಳಗಾಗಿ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಲಿಖಿತ ಮೂಲಕವಾಗಿ ಕಳುಹಿಸತಕ್ಕದ್ದಿರುತ್ತೆ.

ಗುಬ್ಬಿ ಟವನು ಅದರ ಎಕ್ಸ್‌ಟೆನ್ಷನ್ ಮತ್ತು ಹೊಸಪಾಳ್ಯ ಮತ್ತು ಈ ಕೆಳಗೆ ಕಂಡ ಹೆಸರುಳ್ಳ ಪಾಳ್ಯಗಳು:—

(1) ಹೊಲೇರಹಟ್ಟಿ.
(2) ಮಿಷನೆರಿ ಬಂಗ್ಲೆಗೆ ಲಗತ್ತಾಗಿರುವ ಪಾಳ್ಯ.
(3) ಕಣಿ ತಿಮ್ಮನ ಪಾಳ್ಯ.
(4) ಬಿಲ್ಲೆ ಪಾಳ್ಯ.
(5) ರಾಯವಾರ ಗ್ರಾಮಕ್ಕೆ ಸೇರಿದ ಪಾಳ್ಯ.
(6) ಚಿಕ್ಕೋನಹಳ್ಳಿ.
(7) ನಡುವಲ ಪಾಳ್ಯ.
(8) ಕಡೇಪಾಳ್ಯ.
(9) ಹೇರೂರು.

ಎಂ. ಶ್ರೀನಿವಾಸಮೂರ್ತಿ,
ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 22ನೆ ಮೇ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿ ಮದ್ದಿಕೆ ಯಾಚಮಾನಹಳ್ಳಿ ಗ್ರಾಮದ ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಹೇಮಗಿರಿ ಅಣೆಕಟ್ಟು ಮತ್ತು ನಾಲಾ ರಿಪೇರಿ ಬಗ್ಗೆ ತಗಲಿದ ಖರ್ಚಿನ ಕಂಟ್ರಿಬ್ಯೂಷನ್ ವಗೈರೆ ಹಣವನ್ನು ಈ ಇನಾಂದಾರ್ರಿಗೆ ಸರಕಾರದಿಂದ ಸಾಲ ಕೊಟ್ಟಂತೆ ಭಾವಿಸಬೇಕೆಂತಲೂ ಅದು ತೀರುವ ವರಿವಿಗೂ ಮದ್ದಿಕೆ ಯಾಚಮಾನ ಹಳ್ಳಿ ಗ್ರಾಮವನ್ನು ಸರಕಾರದ ಮ್ಯಾನೇಜಮೆಂಟಿಗೆ ತೆಗದುಕೊಂಡು ಅದರ ವಸೂಲಿಯನ್ನು ಸಾಲಕ್ಕೆ ಜಮಾ ಕಟ್ಟಿಕೊಳ್ಳಬೇಕೆಂದು, ವಗೈರೆ ಗೌರ್ನಮೆಂಟಿನಿಂದ 22—12—04ನೆ ಮುಕ್ಕಾಂ 5436-6 ಮಿಸ್ 39—00—46ನೆ ನಂಬರ್ ಪ್ರೊಸೀಡಿಂಗ್ಸ್ ಆಗಿರುವದು ಸರಿಯಷ್ಟೆ. ಸದರಿ ಮದ್ದಿಕೆ ಯಾಚಮಾನಹಳ್ಳಿ ಗ್ರಾಮವು ಈ ವರಿಗೂ ಇದ್ದಂತೆ ಮುಂದೆಯೂ ಸರ್ಕಾರಿ ಮ್ಯಾನೇಜ್‌ಮೆಂಟಿನಲ್ಲಿರುವದಕ್ಕೂ ಮತ್ತು ಸದರಿ ಗ್ರಾಮದ ವಸೂಲಿ ಪೈಕಿ ಕೆಲವು ಮೊಬಲಗನ್ನ ಹೇಮಗಿರಿ ಅಣೆಕಟ್ಟು ಮತ್ತು ನಾಲಾ ರಿಪೇರಿ ಬಗ್ಗೆ ಉಪಯೋಗಿಸಿಕೊಳ್ಳುವದಕ್ಕೂ ಮತ್ತು ಬಾಕಿ ಮೊಬಲಗನ್ನ ಮೇಲ್ಕಂಡ ಸಾಲಕ್ಕೂ ಸಹ ಜಮಾ ಹಾಕಿಕೊಳ್ಳಬಹುದೆಂದು ಇನಾಂದಾರ್ರುಗಳು ಈ ಷರತ್ತುಗಳನ್ನು ನಮೂದಿಸಿ ಸರ್ಕಾರಕ್ಕೆ ಇನಾಂದಾರ್ರುಗಳು ದಸ್ತೈವಜನ್ನು ಬರೆದುಕೊಡತಕ್ಕದ್ದು ಅವಶ್ಯಕವಾದ್ದರಿಂದ ಈ ನೋಟೀಸ್ ಮೈಸೂರ ಗೆಜೆಟ್ಟನಲ್ಲಿ ಛಾಯಿಷ್ ಆದ್ದ ಲಾಗಾಯಿತು ಒಂದು ತಿಂಗಳೊಳಗಾಗಿ ಕೃಷ್ಣರಾಜಪೇಟೆ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ ಹಾಜರಾಗಿ ದಸ್ತೈವಜನ್ನ ಬರೆದುಕೊಡತಕ್ಕದ್ದು. ಹಾಗೆಮಾಡದೆ ತಪ್ಪಿದಲ್ಲಿ ಇನಾಂದಾರ್ರುಗಳು ಮೇಲಿನ ಷರತ್ತುಗಳಿಗೆ ಅಂಗೀಕಾರಪಟ್ಟಂತೆ ಭಾವಿಸಿ ಕಾನೂನು ಮೇರಿಗೆ ಜಾರಿಯಲ್ಲಿತರುತ್ತೆ.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ಬೇಲೂರು ಸೇತುವೆಮೇಲೆ ಸುಂಕ ವಸೂಲ್ಮಾಡುವ ಹಕ್ಕು ಹರಾಜ್ಜು ಇಸ್ತಿಹಾರ್.

ಹಾಸನ ಡಿಸ್ಟ್ರಿಕ್ಟ ಬೇಲೂರು ತಾಲ್ಲೂಕು ಬೇಲೂರು ಸೇತುವೆಯಮೇಲೆ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಜೂನ್ ಆಖೈರುವರೆಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ ತಾರೀಖು 10ನೆ ಸೋಮವಾರ ದಿವಿ 12 ಘಂಟೆಗೆ ಸಕ್ಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರವರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ.

ಷರಾ:—ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ತಾರೀಖು 22ನೆ ನಂ. ಮೈಸೂರ್ ಗೆಜೆಟ್ಟಿನ ಎರಡನೆ ಭಾಗದಲ್ಲಿ 256ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

1907ನೆ ಇಸವಿ ಮೇ 25ನೆ ತಾರೀಖು ಇಸ್ತಿಹಾರಿನ ಅಬ್‍ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಸನ್ 1907ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1908ನೆ ಜೂನ್ ಆಖೈರುವರಿಗಾಗುವ 12 ಮಾಹೆಗಳಲ್ಲಿ ಹೊಳೇನರಶೀಪುರದ ಸೇತುವೆ ಬಳಿ ಇಟ್ಟಿರುವ ಟೋಲಗೇಟ ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1907ನೆ ಇಸವಿ ಜೂನ್ ಮಾಹೆ 20ನೆ ತಾರೀಖು ಗುರುವಾರ ಹೊಳೇನರಶೀಪುರದ ತಾಲ್ಲೂಕ ಕಚೇರಿಯಲ್ಲಿ ಜನರಲ್ ಅಸಿಸ್ಟೆಂಟ ಕಮಿಷನರವರ ರೂಬರೂಬ್ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ:— ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ವ॥ 22ನೆ ನಂ. ಮೈಸೂರ್ ಗೆಜೆಟ್ಟಿನ ಎರಡನೆ ಭಾಗದಲ್ಲಿ 255ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

1907ನೆ ಇಸವಿ ಮೇ 25ನೆ ತಾರೀಖು ಇಸ್ತಿಹಾರಿನ ಅಬ್‍ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕಿನಲ್ಲಿರುವ ಮಾರ್ನಹಳ್ಳಿ ಟೋಲಗೇಟಿನಲ್ಲಿ ಸನ್ 1907ನೆ ಇಸವಿ ಜುಲೈ ಮಾಹೆ 1ನೆ ತಾರೀಖು ಲಾಗಾಯಿತು ಸನ್ 1908ನೆ ಜೂನ್ 30ರ ವರೆಗಿನ 12 ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು 1907ನೆ ಇಸವಿ ಜೂನ್ ಮಾಹೆ ತಾರೀಖು 12ನೆ ಬುಧವಾರ ಹಗಲು 12 ಘಂಟೆಗೆ ಮಂಜರಾಬಾದು ತಾಲ್ಲೂಕು ಕಚೇರಿಬಳಿ ಸಕ್ಲೇಶಪುರದ ಸೀನಿಯರ್ ಅಸಿಸ್ಟೆಂಟ ಕಮಿಷನರ ಸಾಹೇಬರವರ ರೂಬರೂಬ್ ಬಹಿರಂಗವಾಗಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ಷರಾ:— ಹರಾಜ್ ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ವ॥ 22ನೆ ನಂ. ಮೈಸೂರು ಗೆಜೆಟ್ಟಿನ ಎರಡನೆ ಭಾಗದಲ್ಲಿ 253ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

1907ನೆ ಇಸವಿ ಮೇ 14ನೆ ತಾರೀಖು ಇಸ್ತಿಹಾರಿನ ಅಬ್‍ಸ್ಟ್ರಾಕ್ಟು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಸನ್ 1907ನೆ ಜುಲೈ ಗುರ್ರೆ ಲಾಗಾಯಿತು 1908ನೆ ಜೂನ್ ಆಖೈರುವರಿಗಾಗುವ 12 ತಿಂಗಳುಗಳಲ್ಲಿ ಹಾಸನ-ಅರಸಿಕೆರೆ ರಸ್ತೆ ಮೇಲೆ ದುದ್ದದ ಬಳಿ ಇಟ್ಟಿರುವ ಟೋಲಗೇಟು ಬಳಿ ಸುಂಕ ವಸೂಲ್ಮಾಡುವ ಹಕ್ಕನ್ನು 1907ನೆ ಇಸವಿ ಜೂನ್ 8ನೆ ತಾರೀಖು ಶನಿವಾರ ಮಧ್ಯಾನ್ಹ 12 ಘಂಟೆಗೆ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ:— ಹರಾಜು ಷರತ್ತು ವಗೈರೆಯನ್ನು 1907ನೆ ಇಸವಿ ಮೇ 30ನೆ ವ॥ 22ನೆ ನಂ. ಮೈಸೂರು ಗೆಜೆಟ್ಟಿನ ಎರಡನೆ ಭಾಗದಲ್ಲಿ 252ನೆ ಪುಟದಲ್ಲಿ ಪ್ರಿಂಟಾಗಿರುವದನ್ನು ನೋಡಿಕೊಳ್ಳತಕ್ಕದ್ದು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 17ನೆ ಮೇ 1907.

ಚಿಕ್ಕಮಗಳೂರು, ತರೀಕೆರೆ, ಎಡೇಹಳ್ಳಿ ಮತ್ತು ಕೊಪ್ಪ ಮ್ಯುನಿಸಿಪಾಲಿಟಿಗಳಲ್ಲಿಯೂ ಮತ್ತು ಸಕ್ರೆಪಟ್ಣ ಯೂನಿಯನ್ನಲ್ಲಿಯೂ ನಡೆಯುವ ಸಂತೆಗಳಲ್ಲಿನ ಸನ್ 1907ನೆ ಇಸವಿ ಜುಲೈ 1ರ ಲಾಗಾಯಿತು ಸನ್ 1908ನೆ ಇಸವಿ ಜೂನ್ 30ರ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ಪರಸ್ಪರ ಚಿಕ್ಕಮಗಳೂರು ವೈಸ ಪ್ರೆಸಿಡೆಂಟರವರು ಎಡೇಹಳ್ಳಿ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರವರು ಮತ್ತು ಕಡೂರು ತಾಲ್ಲೂಕು ಅಮಲ್ದಾರ್ರವರು ತಮ್ಮ ತಮ್ಮ ಆಫೀಸುಗಳಲ್ಲಿ ಈ ಕೆಳಗೆ ಪ್ರತಿ ಒಂದು ಸ್ಥಳದ ಬಾಜೂದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಿಸುತ್ತಾರೆ.

ಜಾಸ್ತಿ ತಪಶೀಲ ಅವಶ್ಯವಿದ್ದಲ್ಲಿ 1907ನೆ ಮೇ ಮಾಹೆ 30ನೆ ಮರ್ಕ್ಯುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 258-259ನೆ ಪೇಜುಗಳಲ್ಲಿ ಪಬ್ಲಿಷ್ ಆಗಿರುವ ನೋಟಿಫಿಕೇಷನ್ ನೋಡಿಕೊಳ್ಳತಕ್ಕದ್ದು.

ಎಂ. ಲಕ್ಷ್ಮಣ ಶಾಸ್ತ್ರಿ, ಛಾರ್ ಪ್ರೆಸಿಡೆಂಟ್.

ಇಸ್ತಿಹಾರ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಸನ್ 1906—07ನೆ ಇಸವಿ ಸ್ಮಾಲಕಾಸ ನಂಬರು 627—06-07.

ವಾದಿ.		ಪ್ರತಿವಾದಿ.
ಬೆಂಗಳೂರು ತಾಲ್ಲೂಕು ಹೆಸರುಘಟ್ಟದ ಹೋಬಳಿ ಜೋಡಿ ಐವರಖಂಡಪುರದ ವೃತ್ತಿದಾರರು— 1ನೆ ಪುಲಿಮೊದಲ ಶಿವಪ್ಪ, 2ನೆ ವಾಡಾಲ ತಿಮ್ಮಪ್ಪ ಶಾಸ್ತ್ರಿ, 3ನೆ ರಾಮಕೃಷ್ಣಯ್ಯ, 4ನೆ ಶ್ರೀನಿವಾಸೈಯ್ಯ.	Versus	ಬೆಂಗಳೂರು ತಾಲ್ಲೂಕು ಹೆಸರುಘಟ್ಟದ ಹೋಬಳಿ ಐವರಖಂಡಪುರದಲ್ಲಿರುವ ಸಂಪಿಗೆ ವೆಂಕಟರಾಮೈಯ್ಯನ ಮಗ ರಮಣೈಯ್ಯ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:— ಮೇಲ್ಕಂಡ ವಾದಿಗಳು ಪ್ರತಿವಾದಿಯ ಮೇಲೆ 140 ರೂಪಾಯಿಗಾಗಿ ಈ ಕೋರ್ಟಿನಲ್ಲಿ ವ್ಯಾಜ್ಯ ತಂದಿರುತ್ತಾರೆ. ಸದರಿ ಮೊಕದ್ದಮೆಯು ಪ್ರತಿವಾದಿಯ ಹಾಜರಿಗಾಗಿ 1907ನೆ ಇಸವಿ ಜೂನ್

ಮಾಹೆ 27ನೆ ತಾರೀಖಿನ ದಿನ ಹಿಯರಿಂಗಿಗಾಗಿಟ್ಟಿರುತ್ತೆ. ಆದ್ದರಿಂದ ಈ ಮೊಖದ್ದಮೆಯಲ್ಲಿ ವಾದಿ ಸ್ಥಾನಕ್ಕೆ ಶೇರಬೇಕೆಂಬ ವೃತ್ತಿದಾರರು ಎಲ್ಲಾ ಆ ದಿನ ಈ ಕೋರ್ಟು ರೂಬುರೂಬು ದಿವಿ 11 ಘಂಟೆಗೆ ಹಾಜರಾಗಬೇಕೆಂದು ಇದರ ಧೆಶೆಯಿಂದ ಇಸ್ತಿಹಾರ ಕೊಡೋಣಾಗಿಧೆ.

ಸನ್ 1907ನೆ ಇಸವಿ ಜೂನ್ ತಾರೀಖು 11ನೆ ಮರ್ಸ್ಯಾಂ ನಮ್ಮ ದಸ್ತಖತ್ ನಿಶಿ ಕೊಡಲ್ಪಟ್ಟಿತು.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ಇಸ್ತಿಹಾರ್.

ತಾರೀಖು ನೇ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಗೌರ್ನಮೆಂಟಿನಿಂದ ನಾದಂಾದ 29—6—1901ನೆ ಮ ಕುರಂ 17691—L. B. (P) 633ನೆ ನಂಬರ ಪ್ರೊಸೀಡಿಂಗ್ಸ ಅನುಸರಿಸಿ ಇದರ ಮೂಲ್ದಿನ್ನಲ್ಲಿತೋರಿಸಿರುವ ಬೆಂಗಳೂರು ಸಿಟಿ ಬಸವನಗುಡಿ ಎಕ್ಸ್‌ಟೆನ್‌ಷನ್‌ಗೆ ಸೇರಿದ

	ಬಸವನಗುಡಿ ಎಕ್ಸ್‌ಟೆನ್‌ಷನ್.	ಅಳತೆ.
2ನೆ ಬ್ಲಾಕ	.... 234—235—236—237—238—239— 240—241—242—243—244—245— 246—247	120 × 30
5ನೆ ಬ್ಲಾಕ	... 19 ...	100 × 30

ಕಟ್ಟಡ ಕಟ್ಟತಕ್ಕ ಸೈಟುಗಳನ್ನ 1907ನೆ ಇಸವಿ ಜೂನ್ ತಾ॥ 17 ರಲ್ಲು ಹರಾಜು ಮೂಲಕ ವಿಕ್ರಯಿಸತಕ್ಕದ್ದೆಂತ ನಿಶ್ಚಯಿಸ್ಸಿರುತ್ತಾಗಿ ಹರಾಜಿನಲ್ಲಿ ಛಡ ಸವಾಲ ಮೂಲಕ ಪಡದುಕೊಳ್ಳಲು ಇಷ್ಟವುಳ್ಳವರು ಅದೇ ತಾರೀಖು ಪ್ರಾತಃಕಾಲ $7\frac{1}{2}$ ಘಂಟೆ ಲಾಗಾಯಿತು ಆಯಾಯ ಸೈಟುಗಳ ಬಳಿ ಹಾಜರಿದ್ದು ಛಡ ಸವಾಲ ಮೂಲಕ ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟು ಛಡ ಸವಾಲನಲ್ಲಿ ಪಡದುಕೊಳ್ಳಬಹುದಾಗಿರುತ್ತೆ. ಆ ದಿವಸ ಹರಾಜು ಪೂರೈಸದೆ ನಿಲ್ಲುವ ಸೈಟುಗಳನ್ನು ಮೂರು ದಿವಸಗಳಲ್ಲಿ ಅದೇ ಟೈಂನಲ್ಲಿ ಹರಾಜು ಮಾಡಿಸಲ್ಪಡುತ್ತೆ.

1. ಹರಾಜು ಖೈದಾದ ಕೂಡಲೆ ಛಡ ಸವಾಲ ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಠೇವಣಿ ಇಡಬೇಕು. ಹಾಗಿಡದೆ ತಪ್ಪಿದರೆ ಕೂಡಲೆ ದುಸರಾ ಹರಾಜು ಮಾಡಿಸಿ ಬರುವ ಲುಕ್ಸಾನಿಗೆ ಮೊದಲು ಛಡಸವಾಲದಾರನ್ನ ಗುರಿಮಾಡಲ್ಪಡುತ್ತೆ.

2. ಹರಾಜು ತಾರೀಖು ಲಾಗಾಯಿತು 15 ದಿವಸದೊಳಗಾಗಿ ಬಾಕಿ ನಿಲ್ಲುವ ಮೊಬಲಗೆಂದರೆ ಛಡಸವಾಲ ಮೊಬಲಗ್ಗೆ ಸರ್ತಿಯಾಗಿ ಕೊಡತಕ್ಕ ಶೇಕಡಾ 75 ರೂಪಾಯಿನಂತೆ ಆಗುವ ಮೊಬಲಗನ್ನ ಛಡಸವಾಲದಾರ ಹಾಜರಪಡಿಸಿ ರಸೀತಿ ಪಡಿಯಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಪುನಹ ಅಂಥಾ ಸೈಟನ್ನ ದುಸರಾ ಹರಾಜಿಗೆ ಈಡುಮಾಡಿ ಬರುವ ನಷ್ಟಕ್ಕೆ ಮೊದಲು ಛಡಸವಾಲದಾರನ್ನ ಗುರಿಮಾಡಲ್ಪಡುತ್ತೆ.

3. ಹರಾಜು ಮಂಜೂರಾದ ಕೂಡಲೆ ಸೈಟನ್ನ ಛಡಸವಾಲದಾರನು ಸ್ವಾಧೀನಪಡಿಸಿಕೊಳ್ಳಬೇಕು.

4. ಕೊಟ್ಟ ತಾರೀಖಿನಾರಭ್ಯ 30 ದಿವಸದೊಳಗಾಗಿ ಕಟ್ಟಡದ ಕೆಲಸವನ್ನ ಶುರೂ ಮಾಡತಕ್ಕದ್ದು; ಮತ್ತು 6 ತಿಂಗಳೊಳಗಾಗಿ ಕಟ್ಟಡವನ್ನು ಪೂರೈಸತಕ್ಕದ್ದು.

5. 50 ಅಡಿ ಲಾಂಬಿಗೆ ಕಡಿಮೆ ಇಲ್ಲದಷ್ಟು ಜಾಗವನ್ನು ಮೇಲ ಚಾವಣಿ ಇಲ್ಲದೆ ಅಂಗಳಕ್ಕಾಗಿ ಅಥವಾ ಗಾಳಿ ಬರತಕ್ಕದ್ದಕ್ಕಾಗಿ ಯಾವಾಗಲೂ ಬಿಟ್ಟಿರಬೇಕು. ಸದರೀ ಸ್ಥಳದಲ್ಲಿ ಹಂಗಾಮಿ, ಯಾ ಖಾಯಂ ಕಟ್ಟಡ ಯಾವದನ್ನೂ ಕಟ್ಟಕೂಡದು.

6. ಕಟ್ಟಡದ ಪ್ಲಾನ್ ವಗೈರೆ ಸ್ಯಾನಿಟರಿ ಇಂಜನಿಯರವರಿಂದ ಮಂಜೂರಾಗುವ ವರಿಗೂ ಯಾವಕಟ್ಟಡವನ್ನೂ ಪ್ರಾರಂಭಿಸಕೂಡದು. ಮಾಳಿಗೆ ಮನೆಯನ್ನ ಕಟ್ಟಲೇಕೂಡದು. ಕಟ್ಟಡಗಳೆಲ್ಲಾ ಹೆಂಚಿನದಾಗಲಿ ಅಥವಾ ತಾರಸೀದಾಗಲಿ ಇರತಕ್ಕದ್ದು.

7. ನೆಲ ಮತ್ತು ಹಿತ್ತಲು ಮಟ್ಟವು ರೋಡಿನಾ ವಾಕೀಜಾ ಬಗ್ಯೆ ಕಕ್ಕಸ ಕಟ್ಟತಕ್ಕ ಸ್ಥಳವು ಮತ್ತು ಮನೆ ಬಚ್ಚಲು ನೀರು ಹೋಗುವದಕ್ಕೆ ಕಟ್ಟತಕ್ಕ ಮೋಹರಿ ತರಹೆ ಮತ್ತು ಜಾಗ ಸಹ ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಮಾಡಲು ರೀತಿಯಲ್ಲಿರತಕ್ಕದ್ದು.

8. ಒಂದು ಮತ, ಪಣ ಅಥವಾ ಜಾತಿಯವರಿಗೆ ಏರ್ಪಡಿಸಿರುವ ಬೀದಿಯಲ್ಲಿನ ಮನೆಯಲ್ಲಿ ಸದರೀ ಬೀದಿಯ ಸಮಸ್ತ ಜನಗಳ ಬರಹ ಮೂಲಕವಾದ ಒಪ್ಪಿತದ ಮೇಲೆ ಡೆಪ್ಯುಟಿ ಕಮೀಷನರವರು ಮಂಜೂರ್ಮಾಡಿದ ಹೊರತು ಇತರೆ ಮತ, ಪಣ ಯಾ ಜಾತಿಯವರು ವಾಸ ಮಾಡಕೂಡದು.

9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗೆಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾ ನೆಲ ಮಟ್ಟವನ್ನು ಯತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟರಿ ಇಂಜನಿಯರವರು ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನ ಹಿಡುವಳೀದಾರನು ಮತ್ಯಾವ ವಿಚಾರಣೆಯೂ ಇಲ್ಲದೆ ಹೋಗಲಾಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಸೇರಿಸಿಕೊಂಡ ಬಳಿಕ ಹಿಡುವಳೀದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹಾರ ದ್ರವ್ಯಕ್ಕೆ ಯಾ ಸದರಿ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರ್ರಾಗುವದಿಲ್ಲ.

ಎಂ. ಜಿ. ಕೃಷ್ಣಸಾಮಿರಾವ್,
ವೈಸ್ ಪ್ರೆಸಿಡೆಂಟ್.

ಮೈಸೂರು ಜ್ಯೈಲ್.

ನೋಟಿಸ್.

ಸನ್ 1907—08ನೇ ಇಸವಿಯಲ್ಲಿ ಮೈಸೂರು ಜೈಲಿನಲ್ಲಿ ನಿರ್ಬಂಧದಲ್ಲಿರುವ ಖೈದಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಜಿನಸಿಗಳ ಸರಬರಾಯಿಗಾಗಿ 1907ನೆ ಇಸವಿ ಜೂನ್ 14ನೆ ತಾರೀಖು ಪ್ರಾತಃಕಾಲ 9 ಘಂಟೆ ವರಿಗೂ ಸದರಿ ಜೈಲು ಸೂಪರಿಂಟೆಂಡೆಂಟರವರು ಮೊಹರು ಮಾಡಿದ ದರಖಾಸ್ತುಗಳನ್ನು ತೆಗೆದುಕೊಳ್ಳುತ್ತಾರೆ. ಇದರ ತಪಶೀಲು ಮೈಸೂರು ಗೆಜೆಟ್ IIನೆ ಭಾಗದ 262—263ನೆ ಪುಟದಲ್ಲಿ ವಿಶದವಾಗಿ ಘಾಯಿಷ್ ಮಾಡಿರುತ್ತೆ.

ಎಸ್. ವಿ. ರಾಮಸ್ವಾಮೈಯ್ಯಂಗಾರ್,
ಫಾರ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್.

ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್.

ನೋಟಿಸ್.

ತಾರೀಖು 28ನೇ ಮೇ 1907.

ಬೆಂಗಳೂರಲ್ಲಿರುವ ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಂಟೆಂಡೆಂಟರವರು, ಖಾಯಂ ತಲಬಿನ ಮೇಲೆ ಯಾ ಪೀಸ್ ವರ್ಕಿನ ಮೇಲೆ, ಪ್ರೂಫ್ ರೀಡರಗಳಾಗಿಯೂ, ಕಂಪಾಜಿಟರಗಳಾಗಿಯೂ ನೌಕರಿಗೋಸ್ಕರ, ಬೆಂಗಳೂರು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಕೆಲಸವನ್ನು ಕಲಿಯುವುದಕ್ಕೆ, ಮೈಸೂರು ದೇಶೀಯ ಜನಗಳಿಂದ ಅಪ್ಲಿಕೇಷನ್ ಯಾನೆ ದರಖಾಸ್ತುಗಳನ್ನು 1907ನೇ ಜೂನ್ 30ನೇ ತಾರೀಖಿನವರಿಗೆ, ತೆಗೆದುಕೊಳ್ಳುತ್ತಾರೆ.

ದರಖಾಸ್ತುದಾರರು ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಮತ್ತು ಗೆಜೆಟೆಡ್ ಆಫೀಸರರಿಂದಾಗಲಿ ಯಾ ಮಾತುಪರರಾದ ಇತರ ದೊಡ್ಡ ಮನುಷ್ಯರಿಂದಾಗಲಿ ಪಡೆದ ಯೋಗ್ಯತಾ ಪತ್ರಿಕೆಯೊಡನೆ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

ದರಖಾಸ್ತುದಾರರಲ್ಲಿ ಕ್ಲುಪ್ತವಾಗಿ ಕೆಲವರು ಚುನಾಯಿಸಲ್ಪಡುವರು. ಇವರು ಪ್ರಥಮತಃ ಆರು ತಿಂಗಳುವರಿಗೆ ಪ್ರೂಫ್ ಬ್ರಾಂಚಿನಲ್ಲಿ ಕಾಪೀ ಹೋಲ್ಡರಗಳಾಗಿ ಯಾ ರೀಡರಗಳಾಗಿ ನೇಮಿಸಲ್ಪಡುವರು. ತರುವಾಯ, ಎರಡೂವರೆ ವರುಷಗಳ ಪಾವಿಗೆ, ಯಾವ ಕೆಲಸಕ್ಕೆ ಅರ್ಹರಾಗುವರೊ ಆ ಇಲಾಖೆಗೆ ದಾಖಲ್ಮಾಡಲ್ಪಡುವರು. ಪ್ರೂಫ್ ಬ್ರಾಂಚಿಗೆ ತಕ್ಕವರಾಗಿಯೂ ಅಲ್ಲಿ ಕೆಲಸಮಾಡಲಪೇಕ್ಷೆಯುಳ್ಳವರಾಗಿಯೂ ಇರುವ ದರಖಾಸ್ತುದಾರರು ರೀಡಿಂಗ್ ಕೆಲಸಕ್ಕೆ ತಕ್ಕವರೆಂದು ಎಣಿಸಲಿಕ್ಕೆ ಕನಿಷ್ಠಪಕ್ಷ ಒಂದು ವರುಷವಾದರೂ ಕಂಪಾಜಿಟರ್ರಾಗಿ ಕೆಲಸ ಮಾಡತಕ್ಕದ್ದು.

ಈ ಎರಡೂವರೆ ವರ್ಷಗಳಲ್ಲಿ ಯೋಗ್ಯರಾದ ರೀಡರಗಳು ಇದರಡೀ ನಮೂದಿಸುವಂತೆ ತಲಬನ್ನು ಪಡೆಯುವರು.

ಮೊದಲು ಆರು ತಿಂಗಳುಗಳಲ್ಲಿ ಮಾಹೆಯಾನಾ 3 ರೂಪಾಯಿಗಳು, ಎರಡನೇ ಆರು ತಿಂಗಳುಗಳಲ್ಲಿ 4 ರೂಪಾಯಿಗಳು ಮೂರನೇ ಆರು ತಿಂಗಳುಗಳಲ್ಲಿ ರೂಪಾಯಿಗಳು ಆಖೈರ್ ಹನ್ನೆರಡು ತಿಂಗಳಲ್ಲಿ 6 ರೂಪಾಯಿಗಳು. ಕಂಪಾಜಿಟರಗಳು ಮೇಲ್ಕಂಡ ಕಾಲದಲ್ಲಿ ಕ್ರಮವಾಗಿ 2—4—0, 3—0—0 3—12—0 ಮತ್ತು 4—10—0 ಮೇರೆಗೆ ತಲಬನ್ನು ಪಡೆಯುವರು. ಮೇಲೆ ಹೇಳಲ್ಪಟ್ಟ ಕಾಲದಲ್ಲಿ ಎಲಿಮೆಂಟರಿ ಆಫೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ತೃಪ್ತಿಕರವಾದ ನಡತೆಯುಳ್ಳವರು ಮಾತ್ರ ಕಾಲಕಾಲಕ್ಕೆ ಬಡ್ತಿಗಳನ್ನು ಹೊಂದುವರು. ಎರಡಾವೃತ್ತಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಕೆಲಸದಿಂದ ನಿವೃತ್ತಿ ಮಾಡಲ್ಪಡುವರು.

ಮೂರು ವರುಷಗಳ ನೌಕರಿಯು ಪೂರ್ತಿಯಾದಮೇಲೆ ಯಾವ ಕೆಲಸದಲ್ಲಿ ಯೋಗ್ಯತೆಯನ್ನು ಪಡೆದಿರುವರೋ, ಅಂಥಾ ಕೆಲಸವುಳ್ಳ ಬ್ರಾಂಚಿನಲ್ಲಿ ನಿಯಮಿಸಲ್ಪಡುವರು, ಅನಂತರ ಅವರ ನೌಕರಿಯು ಗವರ್ನಮೆಂಟ್ ರೆಗ್ಯುಲೇಷನಿಗನುಸಾರವಾಗಿ ಪೆನ್ಷನಿಗೆ ತಕ್ಕದ್ದೆಂದು ಎಣಿಸಲ್ಪಡುವುದು. ಮತ್ತು, ಪೀಸ್ ವರ್ಕ್ ಕಂಪಾಜಿಟರಗಳ ವಿಷಯದಲ್ಲಿ ಅವರ ಶಕ್ತ್ಯಾನುಗುಣವಾಗಿ ಇತರ ವಿಷಯದಲ್ಲಿ ಆಗುವ ಕಾಲಾನುಸಾರವಾದ ರೂಲ್ಸ್‌ಗಳ ಪ್ರಕಾರ ಸಂಬಳವು ಆಗುವುದು.

ಪ್ರೊಬೇಷನ್ ಕಾಲವು ಪೂರೈಸಿದ ನಂತರ ಸೂಪರಿಂಟೆಂಡೆಂಟರವರ ಮಂಜೂರಾತಿಗೊಳಪಟ್ಟು, ಗವರ್ನಮೆಂಟ್ ಪ್ರೆಸ್ಸಿನಲ್ಲಿ ಮೂರು ವರುಷಗಳ ಕಾಲ ನೌಕರಿ ಮಾಡುತ್ತೇವೆಂಬದಾಗಿ, ಕರಾರ್‌ಬರೆದು ಸೈನ್ ಮಾಡಿ ಕೊಡತಕ್ಕದ್ದು; ಅಥವಾ ಪ್ರೊಬೇಷನ್ ಕಾಲದಲ್ಲಿ ಪಡೆದ ಹಣವನ್ನು ವಾಪಸ್ ಕೊಡಬೇಕು.

ದರಖಾಸ್ತುದಾರರು ತಮಗೆ ಕೆಲಸದಲ್ಲಿ ತಕ್ಕಮಟ್ಟಿಗೆ ಅನುಭವವುಂಟಾದಕೂಡಲೆ, ಬೆಂಗಳೂರು ಸೆಂಟರನಲ್ಲಿ ಪ್ರತಿವರುಷ ನವಂಬರ್ ತಿಂಗಳಲ್ಲಿ ನಡೆಯುವ ಮದ್ರಾಸ್ ಗವರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಗೆ ಹೋಗುವ ಉದ್ದಿಶ್ಯ, ಪ್ರಾತಃಕಾಲ ಸಾಯಂಕಾಲದ ಕ್ಲಾಸಿಗೆ ಫೀ ಇಲ್ಲದೇನೆ ಹಾಜರಾಗಬಹುದು. ಈ ಪರೀಕ್ಷೆಯಲ್ಲಿ ಯೋಗ್ಯತಾಪತ್ರಿಕೆಯನ್ನು ಪಡೆದವರಿಗೆ ಪ್ರೆಸ್ಸಿನಲ್ಲಿ ಖಾಲಿಯಾಗುವ ದೊಡ್ಡ ನೌಕರಿಯು ಸೂಪರಿಂಟೆಂಡೆಂಟರವರ ಅನುಮತಿಯಿಂದ ಕೊಡಲ್ಪಡುವುದು.

ಸಿ. ಎಚ್. ಪಟ್ಸ್.
ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್.

ಮೈಸೂರು ಗವರ್ನಮೆಂಟ ಕೊ.ಅಪರೇಟಿವ ಸೊಸೈಟಿಗಳ ರಿಜಿಸ್ಟ್ರಾರ ಮತ್ತು ಅಗ್ರಿಕಲ್‌ಚರಲ್ ಬ್ಯಾಂಕುಗಳ ಇನ್ಸ್‌ಪೆಕ್ಟರ್ರವರ ಆಫೀಸಿನಿಂದ.

ಎಲ್ಲ ಅಗ್ರಿಕಲ್‌ಚರಲ್ ಬ್ಯಾಂಕುಗಳ ಪ್ರೆಸಿಡೆಂಟ ಮತ್ತು ಏಜಂಟರಿಗೆ—

ರೆವಿನ್ಯೂ ಕಮಿಷನರ ಸಾಹೇಬರವರ 1907ನೆ ಇಸವಿ ಏಪ್ರಿಲು 25ನೆ ತಾರೀಖು 11117ನೆ ನಂಬರು ಸರ್ಕ್ಯೂಲರ ಅನುಸರಿಸಿ ಕೊಡಲ್ಪಟ್ಟ ಸರ್ಕ್ಯೂಲರ ಹುಕ್ಕುಂ.

ನಂಬರು.................................1907ನೆ ಇಸವಿ.

ಲವಾಜಮ ಮತ್ತು ಸಾದಿಲ್‌ವಾರ ವಗೈರೆ ಖರ್ಚುಗಳು, ಬರತಕ್ಕ ನಫೆಯಲ್ಲಿ ಕೊಡತಕ್ಕದ್ದೆಂದು ಸಾಧಾರಣವಾಗಿ ಎಲ್ಲರಿಗೂ ತಿಳದ ವಿಷಯವಾಗಿದೆ. ಆದರೆ, ಅನೇಕ ಅಗ್ರಿಕಲ್‌ಚರಲ್ ಬ್ಯಾಂಕುಗಳಲ್ಲಿ ಈ ಬಾಬಿನ ಖರ್ಚನ್ನು ಉತ್ಪತ್ತಿಗೆ ತಾಳಿಕೆಯಾಗಿರುವಂತೆ ಇಟ್ಟುಕೊಳ್ಳದೆ, ದುಬಾರಿಯಾಗಿ ಮಾಡುವಂತೆ ಕಂಡುಬಂದಿದೆ. ಬ್ಯಾಂಕಿನ ಸಾಲಿಯಾನ ಆದಾಯವು 500 ರೂಪಾಯಿಯೊಳಗಿದ್ದರೆ ಮಾಹೆಯಾನ 25 ರುಪಾಯಿನ ಗುಮಾಸ್ತೆಯನ್ನು ನೌಕರೂರ ಮಾಡುವದು ಬ್ಯಾಂಕಿಗೆ ಲುಕ್ಸಾನುಂಟುಮಾಡುವದರಲ್ಲಿ ಸಂಶಯವಿಲ್ಲ. ಆದರೂ ಈ ಪ್ರಕಾರ ಅನೇಕ ಬ್ಯಾಂಕುಗಳಲ್ಲಿ ಜಾರಿಯಲ್ಲಿರುವಂತೆ ಕಂಡುಬಂದಿದೆ. ಅದ್ದರಿಂದ ಇನ್ನು ಮೇಲೆ ಮಾಹೆಯಾನ ನಮಗೆ ಕಳುಹಿಸುವ ಜಮಾ ಖರ್ಚಿನ ಗೋಷ್ವಾರೆಯಲ್ಲಿ ನೌಕರರ ತಲಬು ಯಾವ ನಫೆ ಬಾಬಿನಿಂದ ಕೊಡಲ್ಪಟ್ಟಿತೆಂಬುವದಕ್ಕೆ ಷರಾ ಕಾಲಂನಲ್ಲಿ ತಪ್ಸೀಲು ತೋರಿಸಬೇಕು. ಶಿವಾಯಿ ಅನೇಕ ಬ್ಯಾಂಕುಗಳು ಹೀನಸ್ಥಿತಿಗೆ ಬಂದು ಕೆಲಸಕಾರ್ಯಗಳು ವಿಶೇಷವಾಗಿ ನಿಂತುಹೋಗಿರುವದರಿಂದ ಲವಾಜಮ ಖಂಡಿತವಾಗಿ ಕಮ್ಮಿ ಮಾಡಬಹುದಾಗಿರುತ್ತೆ. ಆದ ರಿಂದ ಅಗ್ರಿಕಲ್‌ಚರಲ್ ಬ್ಯಾಂಕುಗಳ ಏಜಂಟರು ಮತ್ತು ಪ್ರೆಸಿಡೆಂಟರುಗಳು, ಅವರವರ ಬ್ಯಾಂಕುಗಳಲ್ಲಿ, ಲವಾಜಮ ಮತ್ತು ಸಾದಿಲ್‌ವಾರ ಖರ್ಚು ಎಷ್ಟುಮಟ್ಟಿಗೆ ಕಮ್ಮಿ ಮಾಡಬಹುದೆಂಬ ವಿಷಯದಲ್ಲಿ ಯೋಚನೆಮಾಡಿ ನಮಗೆ ರಿಪೋರ್ಟು ಮಾಡಬೇಕು.

2. ಹಾಲಿ ಪ್ರತಿ ಛಷ್ಮಾಹೆಯಲ್ಲೂ ತಯಾರ್ಮಾಡಲ್ಪಡುತ್ತಲಿರುವ ಬ್ಯಾಲೆನ್ಸ ಷೀಟಿನಿಂದ ಅಗ್ರಿಕಲ್‌ಚರಲ್ ಬ್ಯಾಂಕಿನ ಆ ಛಷ್ಮಾಹೆಯ ಜಮ ಖರ್ಚು ಪ್ರತ್ಯೇಕವಾಗಿ ಗೊತ್ತಾಗುವದಿಲ್ಲ. ಬ್ಯಾಂಕು ಷುರುವಾದ ಲಾಗಾಯಿತುನಿಂದ ಏಂದ ಒಟ್ಟು ಆದಾಯವೆಷ್ಟ ಗೊತ್ತಾಗುತ್ತೆ. ಬರುವ ಅಂದರೆ 1907ನೆ ಇಸವಿ ಜೂನ್ ಮಾಹೆ ಆಖ್ಯೈರವರಿಗೆ ತಯಾರಾಗುವ ಬ್ಯಾಲೆನ್ಸ ಷೀಟನ್ನು ಮತ್ತು ಇನ್ನುಮುಂದೆ ತಯಾರಾಗುವ ಪ್ರತಿ ಛಷ್ಮಾಹೆ ಬ್ಯಾಲೆನ್ಸ ಷೀಟನ್ನು ಕೆಳಗೆ ನಮೂದಿಸುವ ಮೇರಿಗೆ ತಯಾರ್ಮಾಡಿ ಕಳುಹಿಸುತ್ತಾ ಬರಬೇಕು.

ಬ್ಯಾಂಕಿಗೆ ಇರುವ ವರಮಾನ (Assets)			ಬ್ಯಾಂಕಿಗೆ ಇರುವ ಜವಾಬ್ದಾರಿ (Liabilities)		
ವಿವರ	ಛಷ್ಮಾಹೆ ಷುರುವಿನಲ್ಲಿ	ಛಷ್ಮಾಹೆ ಆಖ್ಯೈರಿನಲ್ಲಿ	ವಿವರ	ಛಷ್ಮಾಹೆ ಷುರುವಿನಲ್ಲಿ	ಛಷ್ಮಾಹೆ ಆಖ್ಯೈರಿನಲ್ಲಿ
	ರೂ. ಅ. ಪೈ.	ರೂ. ಅ. ಪೈ.		ರೂ. ಅ. ಪೈ.	ರೂ. ಅ. ಪೈ.
(1) ಮೆಂಬರುಗಳಿಂದ ಬರಬೇಕಾದ ಸಾಲದ ಅಸಲ್ ಬಾಕಿ.			(1) ಸರ್ಕಾರದ ಹಣ ಬಾಕಿ ನಿಂತಿರುವದು.		
(2) ಡಿಟೋ ಬಡ್ಡಿ ಬಾಕಿ.			(2) ಸರ್ಕಾರಕ್ಕೆ ಕೊಡಬೇಕಾದ ಬಡ್ಡಿ ಬಾಕಿ.		
(3) ಪೆನಲ್ಟಿ (ಸುಸ್ತಿ ಬಡ್ಡಿ) ವಗೈರೆ ಬಾಬತು.			(3) ಮೆಂಬರುಗಳಿಂದಲೂ ಮತ್ತು ಇತರರಿಂದಲೂ ತೆಗದುಕೊಂಡಿರುವ ಸಾಲ ಮತ್ತು ಡಿಪಾಜಟ್ಟು ಮೊಬಲಗು ವಾಪಸು ಕೊಡದೆ ನಿಂತಿರುವದು.		
(4) ಖಜಾನೆಯಲ್ಲಿ ಮತ್ತು ಸೇವಿಂಗ್ಸ ಬ್ಯಾಂಕಿನಲ್ಲಿಟ್ಟಿರುವ ಡಿಪಾಜಟ್ಟು ಮೊಬಲಗು.			(4) ಡಿಟೋ ಮೊಬಲಗುಗಳಿಗೆ ಕೊಡಬೇಕಾದ ಬಡ್ಡಿ.		
(5) ಹಾಲಿ ಏಜಂಟ ಅಥವಾ ಪ್ರೆಸಿಡೆಂಟರ ಕೈಯಲ್ಲಿರುವ ಕ್ಯಾಷ ಮೊಬಲಗು.			(5) ಜಖೀರಿ ಫಂಡು		
(6) ಸಾಮಾನು (ಮೇಜ, ಕುರ್ಚಿ ವಗೈರೆ) ಮತ್ತು ಇತರ ಆಸ್ತಿಯ ಚಾಲ್ತಿ ಬೆಲೆ.			(6) ಇತರ ಬಾಬುಗಳು (ತಪ್ಸೀಲು ನಮೂದಿಸಬೇಕು.)		
(7) ಮೇಲೆ ನಮೂದಾಗದೆ ಇರುವ ಇತರ ಬಾಬುಗಳು.					
ಜುಮ್ಲಾ			ಜುಮ್ಲಾ ...		

3. ಐಯಿಂದ ಬ್ಯಾಲೆನ್ಸ ಷೀಟುಗಳನ್ನು ಮತ್ತು ಮಾಹೇವಾರ ಕಳುಹಿಸುವ ಜಮ ಖರ್ಚಿನ ಲೆಕ್ಕಗಳನ್ನು ಸಹ ಎರಡು ಪ್ರತಿಗಳನ್ನು ತಯಾರ್ಮಾಡಿ ಒಂದು ಪ್ರತಿಯನ್ನು ಅಮಲ್ದಾರರಿಗೂ ಮತ್ತೊಂದು ಪ್ರತಿಯನ್ನು ಈ ಆಫೀಸಿಗೂ ರವಾನಿಸುತ್ತಾ ಬರಬೇಕು. ಇದಲ್ಲದೆ ಹೊಸದಾಗಿ ಮೆಂಬರುಗಳನ್ನು ಸೇರಿಸುವದಕ್ಕೂ, ವಜ ಮಾಡುವದಕ್ಕೂ, ರಾಜಿನಾಮೆ ಅಂಗೀಕರಿಸುವದಕ್ಕೂ, ತಾಲ್ಲೂಕು ಅಮಲ್ದಾರರ ಅನುಮತಿಯನ್ನು ಪಡಿಯಬೇಕು. ಆಗಾಗ್ಗೆ ನಡಿಯುವ ಜನರಲ್ ಅಸಂಬ್ಲಿ ಮತ್ತು ಡೈರಕ್ಟರುಗಳ ಮೀಟಿಂಗಿನ ನಡವಳಿಕೆಗಳನ್ನು ಒಂದು ಪ್ರತಿ ನಮ್ಮ ಆಫೀಸಿಗು ಮತ್ತೊಂದು ಪ್ರತಿ ಅಮಲ್ದಾರರಿಗೂ ಕಳುಹಿಸುತ್ತಾ ಬರಬೇಕು.

ಎಂ. ಶಾಮರಾವ್,
ರಿಜಿಸ್ಟ್ರಾರ ಕೋ ಆಪರೇಟಿವ ಸೊಸೈಟಿಸ ಅಂಡ ಇನ್ಸ್‌ಪೆಕ್ಟರ
ಆಫ ಅಗ್ರಿಕಲ್‌ಚರಲ್ ಬ್ಯಾಂಕ್ಸ ಇನ್ ಮೈಸೂರು.

314

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಛಾಪಿಸಿದ್ದು. [ನಂ. 25.

ಬೆಂಗಳೂರು, ಗುರುವಾರ, ಜೂನ್ ತಾ॥ 20, ಸನ್ 1907.

II ನೆ ಭಾಗ

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಬಾಳೂರು ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 274—275—276ನೆ ಪೇಜಿನಲ್ಲಿ ತಪ್ಪೇಲಾಗಿ ವಿವರಿಸಲ್ಪಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ನರಸಿಂಹ ಪರ್ವತವೆಂಬ ರಿಸರ್ವಿನಲ್ಲಿ ಅಡಗಿರುವ ಪ್ರದೇಶವನ್ನು ಮನ್ನಾ ಜಂಗಲಿಯಾಗಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರ್, 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ ಕನ್ನಡ ಗೆಜೆಟ್ಟಿನ 277-278—279ನೆ ಪೇಜಿನಲ್ಲಿ ತಪ್ಪೇಲಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಎಲ್ಲರೂ ಗಮನ ಕೊಡಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ತುಂಗಭದ್ರಾ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟು ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಜೂನ್ ...ನೆ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖು ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 279-280-281—282—283ನೆ ಪೇಜಿನಲ್ಲಿ ತಪ್ಪೇಲಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ಶಾಮರಾವ್,
ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರ್.

ಇಸ್ತಿಹಾರ್.

ಕೋಲಾರ್ ಡಿಸ್ಟ್ರಿಕ್ಟಿನ ತಂಗೇಡಿ ಮತ್ತು ಕಕ್ಕೆ ಚಕ್ಕೆಯನ್ನು 1907—08ನೆ ಸಾಲಿನಲ್ಲಿ ರೂಢಿಸಿಕೊಳ್ಳತಕ್ಕ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ಕ್ಕುಮಿನ 4ನೆ ನಂಬರ್ ಮೈಸೂರು ಗೆಜೆಟ್ IIನೆ ಭಾಗದ 283—284ನೆ ಪುಟದಲ್ಲಿ ಛಾಯಿಸ್ ಆಗಿರುವ 1907ನೆ ಜೂನ್ 1ನೆ ತಾರೀಖಿನ ಇಸ್ತಿಹಾರ್ ನೋಡತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಬವರಿಂಗ್‌ಪೇಟೆ ತಾಲ್ಲೂಕು ಕಾಮಸಂದ್ರದ ಸ್ಟೇಟ್ ಫಾರೆಸ್ಟಿನ ಸಾದೆ ಬಿಕರಿ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ಕ್ಕುಮಿನ 24ನೆ ನಂಬರ್ ಮೈಸೂರ್ ಗೆಜೆಟ್ IIನೆ ಭಾಗದ 284—285—286ನೆ ಪುಟದಲ್ಲಿ ಛಾಯಿಷ್ ಆಗಿರುವ 1907ನೆ ಇಸವಿ ಜೂನ್ 1ನೆ ತಾರೀಖಿನ ನೋಟಿಫಿಕೇಷನ್ ನೋಡತಕ್ಕದ್ದು.

ವೈ. ಸೀತಾರಾಮೈಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ನೋಟೀಸ್.

ಹಾಸನ ಡಿಸ್ಟ್ರಿಕ್ಟು ತಂಗಡಿ ಚಕ್ಕೆ ಜಮಾವಣೆ ವಿಚಾರದಲ್ಲಿ ಟೆಂಡರ್ ಕಳುಹಿಸತಕ್ಕ ಬಗ್ಗೆ 1907ನೆ ಜೂನ್ 13ನೆ ತಾರೀಖು ಮೈಸೂರು ಗೆಜೆಟ್ IIನೆ ಭಾಗದ 286—287ನೆ ಪೇಜಿನಲ್ಲಿ ಪ್ರಾಯಿಷು ಮಾಡಿರುವ 1907ನೆ ಇಸವಿ ಜೂನ್ 9ನೆ ತಾರೀಖಿನ ಇಸ್ತಿಹಾರನ್ನು ಎಲ್ಲಾ ಜನಗಳು ನೋಡಬೇಕಾದ್ದು.

ಬಿ. ಐ. ಶಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ತಾರೀಖು 10ನೆ ಜೂನ್ 1907.

ಸಮಸ್ತ ಜನಗಳಿಗೂ ತಿಳಿಸುವದೇನಂದರೆ—ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳ ವಿನಹ) ಹಿಡುವಳಿಯಲ್ಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1907ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1908ನೆ ಇಸವಿ ಜೂನ್ 31ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಾಗುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್ರಿಂದ ರೇಂಜರುಗಳೊಡನೆ ಹರಾಜು ಮಾಡಿಸುತ್ತೆ :—

ನಂಬರ್.	ತಾಲ್ಲೂಕ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1	ಚಿಕ್ಕಮಗಳೂರು ...	15—7—07	ತಾಲ್ಲೂಕು ಕಛೇರೀಲಿ.
2	ಕಡೂರು ...	17—7—07	ಡಿಟೋ
3	ತರೀಕೆರೆ ...	19—7—07	ಡಿಟೋ

ನೋಟ್—ಹರಾಜು ಅವಶ್ಯಕ ಕಂಡುಬಂದರೆ ಸಂಮತ್ತುವಾರ್ ಹರಾಜು ಮಾಡಿಸಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್‌ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ ರೂಪಾಯಿಗೆ ಒಂದಾಣೆ ಮೇರಿಗೆ ಸೇರಿಸಿ ಒಟ್ಟು ಹಣದಲ್ಲಿ ನಾಲ್ಕನೆ ಒಂದು ಭಾಗ ಮೊಬಲಗನ್ನು ಡಿಪಾಜಿಟ್ ಹಾಜರ್ಮಾಡಬೇಕು, ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಹ ಹರಾಜು ಮಾಡಿಸುತ್ತೆ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಹಕ್ಕೇನು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ, ಎರಡನೆ ಹರಾಜಿನಲ್ಲಿ ಬಂದ ಮೊಬಲಗಿಗೂ ಇರುವ ಕಮ್ಮಿ ಮೊಬಲಗು ಅವ್ವಲ್ ಹರಾಜುದಾರನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

7. ಛಡ ಸವಾಲ್‌ದಾರನು ಬಾಕಿ ¾ ಹಿಸ್ಸೆ ಹರಾಜು ಮೊಬಲಗನ್ನು ಮತ್ತು ಅದರ ಲೋಕಲ್ ಸೆಸ್ ಸಹಾ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳಲ್ಲಿ ಪಾವತೀ ಮಾಡದೆ ತಪ್ಪಿದರೆ ಮೊದಲು ಇಟ್ಟ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಲ್ಪಡುತ್ತೆ. ಅದಲ್ಲದೇ ಮುಂದೇ ಜಮಾಯಿಸಿಕೊಳ್ಳುವದಕ್ಕೆ ಇಜಾರೆ ಹಕ್ಕು ಸಹಾ ತಪ್ಪಿಹೋಗುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ (3) ದಿವಸಗಳ ವಳಗಾಗಿ ಸರಿಯಾದ ಛಾಪಾ ಕಾಗದದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತ್‌ಗಳ ಮೇರೆ ನಡದುಕೊಳ್ಳಲು ಬದ್ಧನಾಗಿ ಇರುವದಕ್ಕೆ ಮುಚ್ಚಳಿಕೆ ಬರೆದು ರುಜು ಮಾಡಿಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರೆ ಹರಾಜುದಾರನು ನಡದುಕೊಳ್ಳಬೇಕು.

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಯುಕೊಡದು.

(2) ತೊಬಟೆ ತೆಗೆದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಖ ಇಡಬೇಕು. ತಾಲ್ಲೂಕ್ ಅಮಲ್ದಾರ್ರು ಅಥವಾ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫೀಸರು ಲೆಖ್ಖ ತನಿಖೀ ಮಾಡಲು ಬಂದಾಗ ಲೆಕ್ಕ ತೋರಿಸಬೇಕು.

(4) ಡೆಪ್ಯುಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಗೆ ಪ್ಯಾಸ್ ಪಡಿಯಬೇಕು.

(5) 1908ನೆ ಇಸವಿ ಜೂನ್ ಆಖೈರು ವಳಗಾಗಿ ಕಡದು ಜಮಾಯಿಸಿಕೊಂಡಿರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೇ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಶೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾದೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯುಕೂಡದು.

ಬಿ. ಹಿರಾಸಿಂಗ್,
ಫಾರ್ ಡೆಪ್ಯುಟಿ ಕಮ್ಮಿಷನರ್ ಕಡೂರು ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವೆ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ನರಗನಹಳ್ಳಿ ಗ್ರಾಮದ ಜೋಡಿದಾರ್ ಭೀಮರಾವ್ ವಗ್ಯೆರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜುಲೈ 12ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 64—5—2 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದ್ದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರೆ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳೊಳಗೆ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ತರಹೆ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಗ್ರಾಮದ ಹೆಸರು ಸರ್ವೆ ನಂಬರು.	ಜಮೀನಿನ ವರ್ಗ ಪ್ರತಿ ಎಕರೆಗೆ ಕಂದಾಯ.	ವಿಸ್ತೀರ್ಣ.		ಕಂದಾಯ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕಿ ಮೊಬಲಗು.			
					ರೂ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ದೇವನಹಳ್ಳಿ	ಕುಂದಾಣ	ಜೋಡಿ ನರಗನಹಳ್ಳಿ	ಜೋಡಿದಾರ್ ಭೀಮರಾವ್ ವಗ್ಯೆರೆ	...	..	ಪೂರಾ ಗ್ರಾಮ	ಪರಂಪೋಕು	26	0	0	8	0	63	5	2	ಬಾಕಿ
							ಖುಷ್ಕಿ	428	29	303	14	0	1	0	0	ನೋಟಿಸ್, ಹರಾಜ್ ಫೀ
							ತರಿ ...	24	3	45	4	0				
							ಬಾಗಾಯತು	4	11	21	0	0				
								483	3	370	10	0	64	5	2	

	ರೂ.	ಆ.	ಪೈ.
ಇದಕ್ಕೆ ಸಾಲಿಯಾನ ತೆರಾಣಿ ಜೋಡಿ.	97	0	0
ಸೆಸ್ಸು	23	2	8
ಮೈನರ್ ಇನಾಂ ಜೋಡಿ	0	5	1
	120	7	9

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಶ್ಯಾನಪ್ಪನಹಳ್ಳಿ ಗ್ರಾಮದ ಜೋಡಿದಾರ್ ಗುರುರಾವು ವಗೈರೆರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜುಲೈ 8ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರ್ರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ ರೂಪಾಯಿ 21—7—7 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪ್ರತಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಫ್ಸೀಲ್.						ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.				
				ಕಟ್ಟಡದ ಹೆಸರು ಮತ್ತೆ	ಅಂದಾಜು ಕ್ರಯ	ಸರ್ವೆ ನಂಬರ್ ಅಥವಾ ಜಮೀನಿನ ಹೆಸರು	ಜಮೀನಿನ ಕಿಸ್ಮು ಅಥವಾ ಬಾಬತು	ವಿಸ್ತೀರ್ಣ	ಕಂದಾಯ	
					ರೂ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ದೇವನಹಳ್ಳಿ	ಕುಂದಾಣ	ಜೋಡಿ ಶ್ಯಾನಪ್ಪನಹಳ್ಳಿ	ಜೋಡಿದಾರ್ ಗುರುರಾವ್ ವಗೈರೆ	...	...	ಪೂರಾ ಗ್ರಾಮ	ಪರಂಪೋಕು.	15 21	0 4 0	20 7 7 ಬಾಕಿ
							ಖುಷ್ಕಿ ...	174 25	142 3 0	1 0 0 ನೋಟಿಸ್ ಫೀ ವಗೈರೆ ಖರ್ಚು
							ತರಿ ...	5 1	30 0 0	
							ಬಾಗಾಯಿತು	2 7	11 0 0	
								197 14	183 7 0	21 7 7

ಈ ಗ್ರಾಮಕ್ಕೆ ಸಾಲೀಯಾನಾ ತೆರಾಖೆ.

	ರೂ.	ಆ.	ಪೈ.
ಜೋಡಿ ...	39	0	0
ಸೇಸ್ಸು ...	11	7	5
ಮೈನರ್ ಇನಾಂ ಜೋಡಿ.	0	2	7
	50	10	0

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿ ಹಾರ್.

ತಾರೀಖು 10ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಚನ್ನಪಟ್ಟದ ತಾಲ್ಲೂಕು ಮಳೂರು ಹೋಬಳಿ ಮಳೂರು ಪಟ್ಣದ ದಾಖಲೆ ಭೈರಾಪಟ್ನದಲ್ಲಿರುವ ಕುಂಟಲಿಂಗೇಗೌಡನೆಂಬವನು ಆ ಗ್ರಾಮದ ತನ್ನ ಹಿಡುವಳಿ ಸರ್ವೆ 602ನೆ ನಂಬರ್ ಜಮೀನಿನಲ್ಲಿ ಅಗಿಯುವ ವ್ಯಾಳೆ ಈ ಕೆಳಗೆ ಕಂಡ ಸ್ವತ್ತುಗಳು ಶಿಕ್ಕಿರುವದಾಗಿ ಹಿಡುವಳಿದಾರ ತಾಲ್ಲೂಕಿಗೆ ಹಾಜರ್ಮಾಡಿರುತ್ತಾನೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ಡಿಸೆಂಬರ್ ಮಾಹೆ ಆಖೈರು ವಳಗಾಗಿ ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಟ್ಟು ಸದರೀ ಮಾಲು ಪಡಿಯಬಹುದು. ತಪ್ಪಿದಲ್ಲಿ ಸದರಿ ಸ್ವತ್ತನ್ನು ಮೇಲ್ಕಂಡ ಕುಂಟಲಿಂಗೇಗೌಡನಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಸಲ್ಪಡುವದಿಲ್ಲಾ.

ಸ್ವತ್ತುಗಳ ತಪಸೀಲ್.

		ಅಂದಾಜ. ರೂ.	ಆ.	ಪೈ.
1.	ಲಕ್ಷ್ಮಿದೇವಿ ತಾಳಿ ಆರು ಕಾಳಿನ ಅಗಲ್ವಾ ಮುತ್ತು ಸುತ್ತಿಕೊಂಡು ಇರತಕ್ಕದ್ದು	0	4	0
2.	ಸಾಧಾರಣ ಗುಂಡು ತಾಳಿ ಮೇಲೆ ಗುಂಡು ಇರತಕ್ಕದ್ದು 1 ...	0	4	0
3.	ಭಂಗಾರದ ಹಣಗಳು 8 ...	2	5	4
4.	ಕಿವಿಗೆ ಹಾಕಿಕೊಳ್ಳುವ ಎರಡು ಬೆಳ್ಳಿ ಕೊಂಡಿಗಳು ...	0	1	0
5.	ಚಿನ್ನದ ಸಂಣ ಗುಂಡು ತೊಗರಿಕಾಳು ಮಾತ್ರ ಇರತಕ್ಕದ್ದು 1 ...	0	1	0
6.	ಬಣ್ಣ ಕೆಟ್ಟುಹೋದ ಹವಳ 1 ...	0	0	1
7.	ಬಿಳಿ ಕಲ್ಲು ಮಣಿ 1 ...	0	0	1
	ಜಾಮ್ಲಾ ...	2	15	6

ಟಿ. ರಾಯಲುಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

1907ನೆ ಇಸವಿ ಮೇ ಮಾಹೆ 18ನೆ ತಾರೀಖು ಶನಿವಾರ ನಡದ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರಿದ್ದವರು.

1. ಪ್ರೆಸಿಡೆಂಟರು, ಮೆ|| ಎಂ. ಕಾಂತರಾಜೆ ಅರಸಿನವರು.
2. ಹುಣಸೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ಸುಬ್ರಹ್ಮಣ್ಯ ಐಯ್ಯರು.
3. ಕೃಷ್ಣರಾಜಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ಕೃಷ್ಣರಾಯರು.
4. ಮೈಸೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ|| ಟಿ. ಕೆ. ಸುಂದರರಾಜೈಯ್ಯಂಗಾರು.
5. ಮೈಸೂರು ಡಿಸ್ಟ್ರಿಕ್ಟು ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರು ಮೆ|| ಎಂ. ರಾಮಸ್ವಾಮಯ್ಯನವರು.
6. ನಂಜನಗೂಡು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ|| ಎಸ್. ವೈದ್ಯನಾಥೈಯ್ಯರವರು.
7. ಮೈಸೂರು ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್ ಮೆ|| ಟಿ. ಎಸ್. ನಂಜಪ್ಪನವರು.

"ಡಿ" ಕ್ಲಾಜಿನ ಮೇರೆ ಪ್ರಜಾ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.
ಮೆ|| ಅಂಬ್ಲೆ ಅಣ್ಣಯ್ಯ ಪಂಡಿತರು ...	ಮೈಸೂರು.
,, ಅಂತಪಳ್ಳಿ ಮುದ್ದೇಗೌಡರು ...	ಹುಣಸೂರು.
,, ಪಡುವಕೋಟೆ ಸುಬ್ಬರಾಯರು ...	ಹೆಗ್ಗಡದೇವನಕೋಟೆ.
,, ಭೀಮರಾಯರು ...	ನಂಜನಗೂಡು.
,, ನಾಡಿಗ ಕೃಷ್ಣಪ್ಪನವರು ...	ಕೃಷ್ಣರಾಜಪೇಟೆ.
,, ಚಂದ್ರಶೇಖರೈಯ್ಯನವರು ...	ನಾಗಮಂಗಲ.
,, ವಾಸುದೇವಯ್ಯನವರು ...	ಚಾಮರಾಜನಗರ.
,, ಟಿ. ಕೃಷ್ಣರಾಯರು ...	ಟಿ. ನರಸೀಪುರ.

"ಇ" ಕ್ಲಾಜ್ ಮೇರೆ ಪ್ರಜಾ ಪ್ರತಿನಿಧಿಗಳು.

ಮೆ॥ ಎ. ರಾಮಣ್ಣನವರು, ಅಡ್ವೊಕೇಟ್.
,, ತಾಯೂರು ಕೃಷ್ಣರಾಯರು, ಪೆನ್ಷನ್ ಅಮಲ್ದಾರು.
,, ದಾಸಶೆಟ್ಟರು, ಜಮೀನ್ದಾರು ಮತ್ತು ವರ್ತಕರು.
,, ಉಂಡವಾಡಿ ನರಸಿಂಗರಾಯರು, ಶ್ಯಾನುಭೋಗರು ಮತ್ತು ಜಮೀನ್ದಾರು.
,, ಗುಂಡಪ್ಪನವರು, ಶ್ಯಾನುಭೋಗರು ಮತ್ತು ಜಮೀನ್ದಾರು.

ಗೈರ್ ಹಾಜರಾದವರು.

1. ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಮೆ॥ ಬಿ. ವೆಂಕೋಬರಾಯರು.
2. ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರ್, ಮೆ॥ ಕೆ. ಪೊನ್ನಪ್ಪನವರು.

"ಡಿ" ಕ್ಲಾಜ್ ಮೇರೆ ಪ್ರತಿನಿಧಿಗಳು.

ಮೆ॥ ವೈ. ರಾಮಣ್ಣನವರು	... ...	ಮಂಡ್ಯ.
,, ಎ. ನರಸಿಹ್ಮಯ್ಯನವರು	... ...	ಮಳವಳ್ಳಿ.
,, ಸಿದ್ದಲಿಂಗಪ್ಪನವರು	... ...	ಗುಂಡ್ಲುಪೇಟೆ.
ಖಾಲಿ	... ...	ಎಡತೊರೆ.
ಮೆ॥ ಶ್ರೀಕಂಠ ಶೆಟ್ಟರು	... ...	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
ಖಾಲಿ	... ...	ಶ್ರೀರಂಗಪಟ್ಣ.

"ಇ" ಕ್ಲಾಜ್ ಮೇರೆ ಪ್ರತಿನಿಧಿಗಳು.

ಮೆ॥ ಮಾದಪ್ಪನವರು, ಇನಾಂದಾರು.
,, ಅಸ್ಗರ್ ಅಲ್ಲಿಬೇಗರು, ಪೆನ್ಷನ್ ಅಮಲ್ದಾರು.

(ನೋಟ್.—ಎಡತೊರೆ, ಚಾಮರಾಜನಗರ ಮತ್ತು ಮಳವಳ್ಳಿ, ಈ ತಾಲ್ಲೂಕುಗಳ ವಿನಹ ಮಿಕ್ಕ ಅಮಲ್ದಾರು ಹಾಜರಿದ್ದರು).

1. ಟಿ. ನರಸೀಪುರದಲ್ಲಿ ವೇದಪಾಠ ಹೇಳುವ ನಾಗಾವಧಾನಿಗಳಿಗೆ ಅಲೋವೆನ್ಸು ಕೊಡತಕ್ಕ ಏರ್ಪಾಟಿನ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರು ಈ ಖರ್ಚನ್ನ ವಹಿಸಲು ಆಗುವದಿಲ್ಲವೆಂದು ಅಭಿಪ್ರಾಯಪಟ್ಟಿರುವದ್ದರಿಂದ ಮಂಜೂರ್ಮಾಡಲು ಆಗುವದಿಲ್ಲವೆಂದು ಸಾದರಾದ 20—2—07ನೆ ಮರ್ಸ್ಕಂ 7200-1—L. B. (444-05)—9ನೆ ನಂಬರ್ ಆರ್ಡರನ್ನ ಓದಲಾಯಿತು.

ಎಜುಕೇಷನ್ ಬಡಜಟ್ಟಿನಲ್ಲಿ ಈ ಖರ್ಚನ್ನ ಚಾರ್ಜು ಮಾಡಲು ಆಗುವದಿಲ್ಲವೆಂದು ಗವರ್ನ್ಮೆಂಟಿನವರು ತೀರ್ಮಾನ ಮಾಡಿರುವದನ್ನ ರಿಕಾರ್ಡು ಮಾಡಲ್ಪಟ್ಟಿತು. ಲೋಕಲ್ ಮ್ಯುನಿಸಿಪಾಲಿಟಿಯವರು ಕೊಡುವುದಕ್ಕೆ ಒಪ್ಪಿರುವ ಮೊಬಲಗಿನ ಜೊತೆಗೆ ಡಿಸ್ಟ್ರಿಕ್ಟು ಫಂಡಿನಿಂದ ಮಾಹೆಯಾನಾ 3 ರೂಪಾಯಿ ಕೊಡಲು ಮಂಜೂರಾಗಬೇಕೆಂದು ಪುನರಾಲೋಚಿಸಿ ತೀರ್ಮಾನ ಮಾಡಲ್ಪಟ್ಟಿತು. ಮತ್ತು ಅನ್ನದೇಶ್ವರಸ್ವಾಮಿಯವರ ದೇವಸ್ಥಾನದ ಫಂಡಿನಿಂದ ಮಾಹೆಯಾನಾ 2 ರೂಪಾಯಿ ಕೊಡಲು ಮುಜರಾಯಿ ಇಲಾಖೆ ಸೆಕ್ರೆಟರಿಯವರಿಗೆ ಬರಿಸಬೇಕೆಂದು ಸಹ ತೀರ್ಮಾನವಾಯಿತು.

2. ತಾಲ್ಲೂಕು ಬೋರ್ಡು ಮೆಂಬರುಗಳಿಗೂ ಮತ್ತು ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೂ ಸಹ ಕೊಡತಕ್ಕ ಟ್ರಾವೆಲಿಂಗ್ ಅಲೋವೆನ್ಸು ರೇಟಿನ ವಿಚಾರದಲ್ಲಿ ಸಾದರಾಗಿರುವ 6—3—07ನೆ ಮರ್ಸ್ಕಂ 7600-9—L. B. (173-06)—3ನೆ ನಂಬರ್ ಆರ್ಡರನ್ನ ಓದಲಾಯಿತು.

1903ನೆ ಇಸವಿ ಸೆಪ್ಟಂಬರು ಮಾಹೆಯ ಲೋಕಲ್ ಬೋರ್ಡ್ಸ್ ರೂಲ್ಸುಗಳ 22ನೆ ಪ್ಯಾರಾ ನಿಬಂಧನೆಯಂತೆ ಟ್ರಾವಲಿಂಗ್ ಅಲೋವೆನ್ಸು ರೇಟುಗಳನ್ನ ಆಚರಿಸತಕ್ಕದ್ದೆಂದೂ ಮತ್ತು ಈ ವಿಷಯದಲ್ಲಿ ಡಿಸ್ಟ್ರಿಕ್ಟಿಗೂ ಮತ್ತು ತಾಲ್ಲೂಕು ಬೋರ್ಡು ಮೆಂಬರುಗಳಿಗೆ ಯಾವದೊಂದು ಪರಸ್ಪರ ವ್ಯತ್ಯಾಸವಿರಕೂಡದೆಂದು ಸಹ ತೀರ್ಮಾನವಾಯಿತು.

3. ತಮ್ಮ ಚಾರ್ಜಿನಲ್ಲಿರುವ ಗ್ರಾಮಗಳನ್ನ ತೃಪ್ತಿಕರವಾಗುವಷ್ಟು ಆರೋಗ್ಯ ಸ್ಥಿತಿಯಲ್ಲಿಡುವ ಪಟೇಲರುಗಳಿಗೆ ಬಹುಮಾನ ಕೊಡುವ ಏರ್ಪಾಟು ಅನುಮಾಯಿಷಿ ತಾರೀಖು ಮಂಜೂರ್ಮಾಡಿರುತ್ತೆಂದು ಗವರ್ನ್ಮೆಂಟಿನಿಂದ ಸಾದರಾದ 6—3—07ನೆ ಮರ್ಸ್ಕಂ 7626-36—L. B. (275-05)—13ನೆ ನಂಬರ್ ಆರ್ಡರನ್ನ ಓದಿ ರಿಕಾರ್ಡು ಮಾಡಲ್ಪಟ್ಟಿತು.

4. ಆಸ್ಪತ್ರೆ ಕಟ್ಟಡಗಳ ಸುತ್ತಲೂ ಕಾಂಪೌಂಡು ಗೋಡೆಗಳನ್ನ ಹಾಕುವ ವಿಚಾರದಲ್ಲಿ ಸಾದರಾದ 6—3—07ನೆ ಮರ್ಸ್ಕಂ 7791-800—L. B. (170-06)—1ನೆ ನಂಬರ್ ಆರ್ಡರನ್ನ ಓದಲಾಯಿತು. ಮತ್ತು ರಿಕಾರ್ಡು ಮಾಡಲ್ಪಟ್ಟಿತು.

5. ಡಿಸ್ಟ್ರಿಕ್ಟು ಬೋರ್ಡುಗಳ ಮೀಟಿಂಗ್ ಕಾಲದಲ್ಲಿ ಅಮಲ್ದಾರರುಗಳನ್ನ ಮತ್ತು ಡೆಪ್ಯುಟಿ ಅಮಲ್ದಾರುಗಳನ್ನ ಕೂಡ ಹಾಜರ್ಮಾಡಿಕೊಳ್ಳಬಹುದೆಂದು ಗವರ್ನ್ಮೆಂಟಿನಿಂದ ತಲಪಿದ 6—3—07ನೆ ಮರ್ಸ್ಕಂ 7791-800—L. B. (170-06)—1ನೆ ನಂಬರ್ ಆರ್ಡರನ್ನ ಓದಿ ರಿಕಾರ್ಡು ಮಾಡಲ್ಪಟ್ಟಿತು.

6. ದೊಡ್ಡಬಳ್ಳಾಪುರದ ತಾಲ್ಲೂಕು ಘಾಟಿ ಸುಬ್ರಹ್ಮಣ್ಯಸ್ವಾಮಿಯವರ ದೇವಸ್ಥಾನದಲ್ಲಿ ದನಗಳ ಪ್ರದರ್ಶನವನ್ನ ಕುರಿತು ಸಾದರಾಗಿರುವ 12—3—07ನೆ ಮರ್ಸ್ಕಂ 8064-7—L. B. (280-06—4)ನೆ ಗವರ್ನ್ಮೆಂಟ್ ಆರ್ಡರನ್ನ ಓದಲಾಯಿತು. ಮತ್ತು ಕಳೆದ ಜನವರಿ ತಿಂಗಳಿನಲ್ಲಿ ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ದನಗಳ ಪ್ರದರ್ಶನವನ್ನ ಕುರಿತು ರಿಪೋರ್ಟ್‌ನಿಸಿ ಹುಣಸೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರಿಂದ ತಲಪಿದ 18—5—07ನೆ ಮರ್ಸ್ಕಂ 252ನೆ ನಂಬರ್ ಯಾದಾಸ್ತನ್ನ ಓದಲಾಯಿತು.

ಗವರ್ನ್ಮೆಂಟು ಆರ್ಡರನ್ನ ರಿಕಾರ್ಡು ಮಾಡಬೇಕೆಂದು ಮತ್ತು ಮುಂದೆ ನಡೆಯುವ ಜಾತ್ರೆ ಕಾಲದಲ್ಲಿ ಬೋರ್ಡಿನವರು ಒಪ್ಪುವಂಥಾ ಅಸಿಸ್ಟೆಂಟ್ ಕಮಿಷನರ ಮತ್ತು ಅಮಲ್ದಾರ ರಿಪೋರ್ಟುಗಳನ್ನ ಮಂಜೂರಾತಿ ಬಗ್ಯೆ ಗವರ್ನ್ಮೆಂಟಿಗೆ ಬರಿಸುತ್ತಿರತಕ್ಕದ್ದೆಂದು ಸಹ ತೀರ್ಮಾನವಾಯಿತು.

7. 1904—05ನೆ ಸಾಲಿನ ಬೆಂಗಳೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳ ಮೆಂಬರು ಭತ್ಯದ ಬಿಲ್ಲುಗಳಲ್ಲಿ ಕೆಲವು ಬದಲಾವಣೆಯಿಂದ ಮಂಜೂರ್ಮಾಡಿದೆ ಎಂದು ಗವರ್ನ್ಮೆಂಟಿನಿಂದ ತಲಪಿದ 12-3-07ನೆ ಮುರ್ಕಂ 8068-76—L. B. 258-06—2ನೆ ನಂಬರ್ ಆರ್ಡರನ್ನು ಓದಿ ರಿಕಾರ್ಡು ಮಾಡಲ್ಪಟ್ಟಿತು.

8. ಗ್ರಾಮಗಳನ್ನು ಅಭಿವೃದ್ಧಿ ಮಾಡುವದಕ್ಕಾಗಿ ನಿವೇಶನಗಳನ್ನಾಗಲಿ ಅಥವಾ ಕಟ್ಟಡಗಳನ್ನಾಗಲಿ ತೆಗೆದುಕೊಳ್ಳತಕ್ಕ ಬಗ್ಯೆ ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ ಸಂಗಡ ಅಮಲ್ದಾರು ಯಾ ಡೆಪ್ಯುಟಿ ಅಮಲ್ದಾರಾಗಲಿ ಆಲೋಚಿಸಬೇಕಾಗಿರುವದಲ್ಲದೆ ಲೋಕಲ್ ಬೋರ್ಡು ಆಕ್ಟೈರ ಒಪ್ಪಂದದ ಬಗ್ಯೆ ಕಳುಹಿಸತಕ್ಕದ್ದೆಂದು ಸಾದರಾದ 12-3-07ನೆ ಮುರ್ಕಂ 8144-52—L. B. 124-06—4ನೆ ನಂಬರ ಗವರ್ನ್ಮೆಂಟು ಆರ್ಡರನ್ನು ಓದಿ ರಿಕಾರ್ಡು ಮಾಡಲಾಯಿತು.

9. 300 ಮನೆ ಯಾ 1000 ಪ್ರಜೆಗಳುಳ್ಳ ಗ್ರಾಮಗಳಲ್ಲಿ ಯೂನಿಯನ್ ಏರ್ಪಾಟು ಮಾಡಬೇಕೆಂದು ಗವರ್ನ್ಮೆಂಟಿನಿಂದ ತಲಪಿದ 16—3—07ನೆ ಮುರ್ಕಂ 8308-15—L. B. 298-06—22ನೆ ನಂಬರ್ ಆರ್ಡರನ್ನು ಓದಲಾಯಿತು.

ಅನೇಕ ಸಂದರ್ಭಗಳಲ್ಲಿ ಸಣ್ಣ ಸಣ್ಣ ಗ್ರಾಮಗಳನ್ನು ಯೂನಿಯನ್‌ಗಳಾಗಿ ಮಾಡುವದಕ್ಕೆ ಬದಲಾಗಿ ಹತ್ತರ ಫಾಸಲೆಯಲ್ಲಿರುವ ಗ್ರಾಮಗಳನ್ನು ಸೇರಿಸಿ ಒಂದೇ ಯೂನಿಯನ್ ಆಗಿ ಮಾಡುವದು ಯುಕ್ತವಾಗಿ ಕಾಣಬರುವದೆಂದು ತೀರ್ಮಾನವಾಯಿತು.

10. ಲೋಕಲ್ ಫಂಡು ಕೆಲಸಕ್ಕೋಸ್ಕರ ಪ್ರತಿ ಡಿಸ್ಟ್ರಿಕ್ಟಿಗೂ ಮತ್ತು ತಾಲ್ಲೂಕಿಗೂ ಸಹ ಮಾಹೆಯಾನಾ 15 ರೂಪಾಯಿನ ತಲಬಿನ ಮೇಲೆ ಒಬ್ಬ ಕ್ಲಾರನ್ನು ಏರ್ಪಾಟು ಮಾಡಿಕೊಳ್ಳಲು ಮಂಜೂರ್ಮಾಡಿರುತ್ತೆಂತ ಗವರ್ನ್ಮೆಂಟಿನಿಂದ ತಲಪಿದ 16—3—07ನೆ ಮುರ್ಕಂ 8333-44—L. B. (425-05)—12ನೆ ನಂಬರ್ ಆರ್ಡರ್ ಮತ್ತು ಇದೇ ವಿಚಾರದಲ್ಲಿ ತಲಪಿರುವ 2—5—07ನೆ ಮುರ್ಕಂ 10092-100—L. B. 350-06—3ನೆ ನಂಬರ್ ಆರ್ಡರನ್ನು ಸಹ ಓದಿ ರಿಕಾರ್ಡು ಮಾಡಲ್ಪಟ್ಟಿತು.

11. 1905—06ನೆ ಸಾಲಿನ ಡಿಸ್ಟ್ರಿಕ್ಟು ಫಂಡು ಫೈನಲ್ ಲೆಕ್ಕದ ವಿಚಾರದಲ್ಲಿ ಗವರ್ನ್ಮೆಂಟಿನಿಂದ ಸಾದರಾದ 18—3—07ನೆ ಮುರ್ಕಂ 8433-45—L. B. (18-06)—29ನೆ ನಂಬರ್ ಆರ್ಡರನ್ನು ಓದಲಾಯಿತು.

1906ನೆ ಜುಲೈ 1ನೆ ತಾರೀಖಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಬೋರ್ಡಿನಲ್ಲಿದ್ದ 1,12,852 ರೂಪಾಯಿಗಳು ಬಾಕಿ ವಸೂಲಾಗುವದನ್ನು ರಿಕಾರ್ಡು ಮಾಡಲಾಯಿತು.

12. ಪ್ರಾವಿನ್ಸಿನಲ್ಲಿರುವ ಹರಿಗೋಲುಗಳಲ್ಲಿ ಷೆಡ್ಡುಗಳನ್ನು ಕಟ್ಟುವದಕ್ಕೆ, ಟೋಲ್ ಯಾ ಕಂದಾಯವನ್ನು ಹಾಕುವ ವಗೈರೆ ವಿಷಯದಲ್ಲಿ ಸಾದರಾದ 15—4—07ನೆ ಮುರ್ಕಂ 9483-90—L. B. 440-05—10ನೆ ನಂಬರ್ ಆರ್ಡರನ್ನು ಓದಿ ರಿಕಾರ್ಡು ಮಾಡಲ್ಪಟ್ಟಿತು.

13. ಕೃಷ್ಣರಾಜಪೇಟೆಯಲ್ಲಿರುವ ಟ್ರಾವಲರ್ಸ್ ಬಂಗ್ಲಾವನ್ನು 3ನೆ ಕ್ಲಾಸಿಗೆ ಸೇರಿಸಿದ್ದಾದರೆ ಇದರ ಖರ್ಚನ್ನು ಡಿಸ್ಟ್ರಿಕ್ಟು ಬೋರ್ಡಿನವರು ವಹಿಸಿಕೊಳ್ಳುವ ವಿಷಯವನ್ನು ತಿಳಿಸಬೇಕೆಂದು ಗವರ್ನ್ಮೆಂಟಿನಿಂದ ಸಾದರಾದ 23—3—07ನೆ ಮುರ್ಕಂ 5847—G. M. 23-06—43ನೆ ನಂಬರ್ ಡಾಕೆಟನ್ನು ಓದಲಾಯಿತು.

ನಂಜನಗೂಡಿನಲ್ಲಿರುವ 3ನೆ ಕ್ಲಾಸ್ ಬಂಗ್ಲಾ ಮೇಟಿಯ ಸಂಬಳವನ್ನು ಸೇವಿಂಗ್ಸ್ ಮಾಡಿ ಇದಕ್ಕೆ ಬದಲಾಗಿ ರೆಸಿಡೆಂಸಿ ಬಂಗ್ಲೆ ಒಂದು ಭಾಗದಲ್ಲಿ 1ನೆ ತರಗತಿಯ ಬಂಗ್ಲಾವನ್ನು ಪ್ರಪೋಜ್ ಮಾಡಿರುವರೀತಿ ಕಟ್ಟುವದಾದರೆ ಇದರ ಖರ್ಚನ್ನು ವಹಿಸಿಕೊಳ್ಳುವದಾಗಿ ಬೋರ್ಡಿನವರು ತೀರ್ಮಾನಿಸಿದರು.

14. ಹಾಸನ ಡಿಸ್ಟ್ರಿಕ್ಟು ಕೇರಳಾಪುರ ಗ್ರಾಮದ ಬಳಿ ಕಟ್ಟುವ ಒಂದು ಸೇತುವೆಗೆ ತಗಲುವ ಖರ್ಚಿನಲ್ಲಿ ⅓ ಭಾಗದ ಖರ್ಚನ್ನು ವಹಿಸಿಕೊಳ್ಳುವ ವಿಚಾರದಲ್ಲಿ ಡಿಸ್ಟ್ರಿಕ್ಟು ಬೋರ್ಡಿನ ಅಭಿಪ್ರಾಯವನ್ನು ತಿಳಿಸಬೇಕೆಂದು ಗವರ್ನ್ಮೆಂಟಿನಿಂದ ತಲಪಿದ 24—4—07ನೆ ಮುರ್ಕಂ 9779—L. B. (54-05)—10ನೆ ನಂಬರ್ ಡಾಕೆಟ್ಟನ್ನು ಓದಲಾಯಿತು.

ಇದಕ್ಕಾಗಿ ಹಿಂದೆ ಬೋರ್ಡಿನವರು ಒಪ್ಪಿರುವದೇ ಸಾಕಾಗಿರುವದ್ದರಿಂದ ಹೆಚ್ಚು ಹಣ ಕೊಡಲು ಅವಕಾಶವಿಲ್ಲವೆಂದು ತೀರ್ಮಾನವಾಯಿತು.

15. ದನಗಳ ಪ್ರದರ್ಶನದಲ್ಲಿ ಬಹುಮಾನವನ್ನು ಹೊಂದತಕ್ಕವರಿಗೆ ಕೊಡುವದಕ್ಕೋಸ್ಕರ ಪ್ರಿಂಟ್ ಸರಟಿಫಿಕೇಟಿನ ತಿಳುವಳಿಕೆ ಬಗ್ಯೆ ಕಳುಹಿಸಿರುತ್ತೆಂದು ಗವರ್ನ್ಮೆಂಟಿನಿಂದ ತಲಪಿದ 24—4—07ನೆ ಮುರ್ಕಂ 9781-7—L. B. 360-06-7ನೆ ನಂಬರ್ ಡಾಕೆಟನ್ನು ಓದಲಾಯಿತು.

ಚುಂಚನಕಟ್ಟೆ ಪ್ರದರ್ಶನದಲ್ಲಿ ಬಹುಮಾನವನ್ನು ಹೊಂದಿರುವವರಿಗೆ ಕೊಡಲ್ಪಟ್ಟ ಮತ್ತು ಮೇಲ್ಕಂಡ ಫಾರಮನ್ನು ಅನುಸರಿಸುವದು ಸಹ ಉತ್ತಮವಾಗಿದೆ ಎಂದು ರಿಕಾರ್ಡು ಮಾಡಲ್ಪಟ್ಟಿತು.

16. ಆಸ್ಪಿಟಲ್ ಅಸಿಸ್ಟೆಂಟರಿಂದ ಆಗಾಗ್ಯೆ ಭೇಟಿ ಮಾಡಲ್ಪಡುವ ಲೋಕಲ್ ಫಂಡು ಆಸ್ಪತ್ರೆಗಳು ಇಲ್ಲದಿರುವ ಸ್ಥಳಕ್ಕೆ ನೇಟಿವ್ ಪಂಡಿತರನ್ನು ಮತ್ತು ಹಕೀಮರನ್ನು ನೌಕರರೂರು ಮಾಡುವ ವಿಚಾರದಲ್ಲಿ ಸಾದರಾದ 13—5—07ನೆ ಮುರ್ಕಂ 10590-602—Med. 297-06—1ನೆ ನಂಬರ್ ಗವರ್ನ್ಮೆಂಟು ಆರ್ಡರನ್ನು ಓದಲಾಯಿತು.

ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ ರಿಪೋರ್ಟಿನ ಮೇಲೆ ಗವರ್ನ್ಮೆಂಟಿನಿಂದ ಹುಕುಂ ಬರುವ ವರಿವಿಗೂ ರಿಕಾರ್ಡು ಮಾಡಲ್ಪಡಬೇಕೆಂದು ತೀರ್ಮಾನವಾಯಿತು.

17. ನರಸೀಪುರ-ಚಾಮರಾಜನಗರದ ರಸ್ತೆಯಲ್ಲಿ ಒಂದು ಮೋಹರಿ ಕಟ್ಟುವದಕ್ಕಾಗಿ ತಯಾರ್ಮಾಡಲ್ಪಟ್ಟ 9,069 ರೂಪಾಯಿ ಅಂದಾಜವನ್ನು ಮಂಜೂರ್ಮಾಡಿರುತ್ತೆಂದು D. P. W. ಸೆಕ್ರಿಟೆರಿಯವರಿಂದ ತಲಪಿದ 19—4—07ನೆ ಮುರ್ಕಂ 376—2860ನೆ ನಂಬರ್ ಮಿಮೋವನ್ನು ಓದಿ ರಿಕಾರ್ಡು ಮಾಡಲ್ಪಟ್ಟಿತು.

18. ದಕ್ಷಿಣ ಇಂಡಿಯಾ (ಕೂನ್ನೂರು) ಪ್ಯಾಸ್ಟರ್ ಇನ್ಸ್ಟಿಟ್ಯೂಟಿಗೆ ಕೆಲವು ಕಾಂಟ್ರಿಬ್ಯೂಷನ್ ಮೊಬಲಗು ಬೇಕೆಂದು ಅಪೇಕ್ಷಿಸಿ ಸದರಿ ಡೈರೆಕ್ಟರುಯವರಿಂದ ಕೊಡಲ್ಪಟ್ಟ 24—12—06ನೆ ಮಾರ್ಕು ಮಿನ ಸರ್ಕ್ಯುಲರನ್ನು ಓದಲಾಯಿತು.

300 ರೂಪಾಯಿ ಡೊನೇಷನ್ ಮಂಜೂರ್ಮಾಡಿರುವದಾಗಿ ತೀರ್ಮಾನ ಮಾಡಲ್ಪಟ್ಟಿತು.

19. ತಲ್ಕಾಡಿನಲ್ಲಿ ಒಂದು ಸಂತೆ ಕಟ್ಟುವ ಏರ್ಪಾಡು ಮಾಡಬೇಕೆಂದು ಟಿ. ನರಸೀಪುರ ತಾಲ್ಲೂಕು ಆಮಿಲರಿಂದ ತಲಪಿದ 27—2—07ನೆ ಮರ್ಕುಂ 464ನೆ ನಂಬರ್ ರಿಪೋರ್ಟನ್ನು ಓದಲಾಯಿತು.

ಬೋರ್ಡಿನವರು ಅಪ್ರೂವ್ ಮಾಡಿ ಮಂಜೂರಾತಿ ಬಗ್ಯೆ ಗವರ್ನ್ಮೆಂಟಿಗೆ ಬರೆಸಿತೆಂದು ತೀರ್ಮಾನ ಮಾಡಲ್ಪಟ್ಟಿತು.

20. ಅಳಗಂಚಿಯಲ್ಲಿ ಒಂದು ಸಂತೆ ಕಟ್ಟುವ ಏರ್ಪಾಟು ಮಾಡಬೇಕೆಂದು ನಂಜನಗೂಡು ತಾಲ್ಲೂಕು ಆಮಿಲರಿಂದ ತಲಪಿದ 19—4—07ನೆ ಮರ್ಕುಂ 448ನೆ ನಂಬರ್ ರಿಪೋರ್ಟನ್ನು ಓದಲಾಯಿತು.

ಗೌರ್ನಮೆಂಟ್ ಮಂಜೂರಾತಿ ಬಗ್ಯೆ ಶಿಫಾರ್ಸು ಮಾಡಿ ಬರಿಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

21. ಮಂಡ್ಯ ತಾಲ್ಲೂಕು ಸುಂಡಹಳ್ಳಿ ಕೆರೆಯ ಕೋಡಿ ಹಳ್ಳಕ್ಕೆ ಅಡ್ಡಲಾಗಿ ಒಂದು ಮೋಹರಿ ಕಟ್ಟುವದಕ್ಕೋಸ್ಕರ 747 ರೂಪಾಯಿಗಳ ಅಂದಾಜು ನಿಸಿ ಬಂದಿರುವ ಮತ್ತು ಈ ಕಾಂಗಾರಿಗೋಸ್ಕರ ತಗಲುವ ಖರ್ಚಿನಲ್ಲಿ 1/4 ನೆ ಭಾಗವನ್ನು ಗ್ರಾಮಸ್ಥರು ಕೊಡುವದಾಗಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರಿಂದ ತಲಪಿದ 4-4-07ನೆ ಮರ್ಕುಂ 36ನೆ ನಂಬರ್ ಯಾದಾಸ್ತನ್ನು ಓದಲಾಯಿತು.

ಉಳಿದ 3/4 ನೆ ಭಾಗದ ಅಂದಾಜು ಮೊಬಲಗನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಲು ಸಮ್ಮತಿಸಿರುವದಾಗಿ ತೀರ್ಮಾನವಾಯಿತು.

22. ಹೆಗ್ಗಡದೇವನಕೋಟೆಯಲ್ಲಿರುವ ಉಪ್ಪಲಗೆರೆ ಕೆರೆಯ ಕಶ್ಮಲವಾಗಿರುವ ನೀರನ್ನು ಹೋಗಲಾಡಿಸುವದಕ್ಕಾಗಿ ತಯಾರ್ಮಾಡಲ್ಪಟ್ಟ ಅಂದಾಜು ನಿಸಿ ತಲಪಿರುವ ಹುಣಸೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರ 19—3—07ನೆ ಮರ್ಕುಂ 157ನೆ ನಂಬರ್ ಯಾದಿಯನ್ನು ಓದಲಾಯಿತು.

ಮಂಜೂರ್ಮಾಡಿಧೆ ಯೆಂದು ಬೋರ್ಡಿನವರು ತೀರ್ಮಾನಿಸಿದರು.

23. ಗುಂಡ್ಲುಪೇಟೆ ತಾಲ್ಲೂಕು ಭೀಮನಬೀಡು ಗ್ರಾಮದಲ್ಲಿರುವ ಶ್ಯಾನುಭೋಗ ವೆಂಕಟದೇವಯ್ಯನ ಭಾವಿಯನ್ನು (ಹಾಲಿ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿಧೆ) ರಿಪೇರಿ ಮಾಡುವದಕ್ಕೋಸ್ಕರ 260 ರೂಪಾಯಿ ಅಂದಾಜು ನಿಸಿ ತಲಪಿದ 23—3—07ನೆ ಮರ್ಕುಂ 160ನೆ ನಂಬರ್ ಗುಂಡ್ಲುಪೇಟೆ ಅಮಲ್ದಾರ್ರ ರಿಪೋರ್ಟನ್ನು ಓದಲಾಯಿತು.

ಅಂದಾಜು ಮಂಜೂರ್ಮಾಡಿರುತ್ತೆಂದು ಬೋರ್ಡಿನವರು ತೀರ್ಮಾನಿಸಿದರು.

24. ಈ ಕೆಳಗೆ ಪ್ರಪೋಜು ಮಾಡಿ ಕಳುಹಿಸಿರುವ ನಾಗಮಂಗಲ ತಾಲ್ಲೂಕು ಅಮಲ್ದಾರ್ರ 3—3—07ನೆ ಮರ್ಕುಂ 260ನೆ ನಂಬರ್ ರಿಪೋರ್ಟನ್ನು ಓದಲಾಯಿತು:—

(1) ಬೆಳ್ಳೂರಿನಲ್ಲಿ ಒಂದು ಮುಸಾಫರ್‌ಖಾನೆ ಕಟ್ಟಬೇಕೆಂದು.

(2) ನೆಲ್ಲಿಗೆರೆಯಲ್ಲಿರುವ ಟ್ರಾವಲರ್ಸ್ ಬಂಗ್ಲಾ ಬಳಿ ಒಂದು ಸೇದೋಭಾವಿ ತೋಡಿಸಬೇಕೆಂದು.

ಮೊದಲನೆ ಪ್ರಪೋಜಲ್ ವಿಚಾರದಲ್ಲಿ ಮುಂದಿನ ವರ್ಷದ ಬಡಜಟ್ ಮೀಟಿಂಗಿನ ವೇಳೆಯಲ್ಲಿ ಆಲೋಚನೆ ಬಗ್ಯೆ ತೆಗೆದುಕೊಳ್ಳಬೇಕೆಂದು ಮತ್ತು 2ನೆ ಕೆಲಸಕ್ಕೋಸ್ಕರ ಅಂದಾಜು ತಲಪಿದ ಮೇರೆ ಮಂಜೂರ್ಮಾಡುತ್ತೆಂದು ಸಹ ಬೋರ್ಡಿನವರು ತೀರ್ಮಾನಿಸಿದರು.

25. ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ನರಹಳ್ಳಿ ಗ್ರಾಮಕ್ಕೆ ಒಂದು ಟ್ಯೂಬ್ ವೆಲ್ (Tube well)ನ್ನು ಸರಫರಾಜು ಮಾಡಿಸಿಕೊಡಬೇಕೆಂದು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರಿಂದ ತಲಪಿದ 13—5—07ನೆ ಮರ್ಕುಂ 643ನೆ ನಂಬರ್ ಡಾಕೆಟನ್ನು ಓದಲಾಯಿತು.

ಹಾಲಿ ಫ್ರೆಂಚ್‌ರಾಕ್ಸ್‌ಗೆ ಸರಫರಾಜು ಮಾಡಿರುವ ಟ್ಯೂಬ್‌ವೆಲ್ ಉಪಯೋಗದ ಫಲಿತಾಂಶಕ್ಕೆ ರಿಪೋರ್ಟು ಬರಮಾಡಿಕೊಳ್ಳುವ ಪರ್ಯಂತರ ಈ ವಿಷಯವನ್ನು ಮುಂದೆ ಚರ್ಚೆಗೆ ಬರುವವರಿವಿಗೂ ರಿಜರ್ವಿನಲ್ಲಿ ಇಡತಕ್ಕದ್ದೆಂದು ತೀರ್ಮಾನವಾಯಿತು.

26. ಈ ಕೆಳಗೆ ಪ್ರಪೋಜು ಮಾಡಿರುವ ಗುಂಡ್ಲುಪೇಟೆ ತಾಲ್ಲೂಕು ಅಮಲ್ದಾರ್ರಿಂದ ತಲಪಿದ 16—5—07ನೆ ಮರ್ಕುಂ 202ನೆ ನಂಬರ್ ರಿಪೋರ್ಟನ್ನು ಓದಲಾಯಿತು.

(1) ಬೇಗೂರಿನಲ್ಲಿ ಒಂದು ಸಂತೆ ಕಟ್ಟುವ ಏರ್ಪಾಟು ಮಾಡಬೇಕೆಂದು.

(2) ಗುಂಡ್ಲುಪೇಟೆಯಲ್ಲಿರುವ ಅಂಣಾಜಯ್ಯಂಗಾರ್ ಛತ್ರದ ರಿಪೇರಿ ಬಗ್ಯೆ 313 ರೂಪಾಯಿಗಳ ಅಂದಾಜು ಮಂಜೂರಾಗಬೇಕೆಂದು.

ಮೊದಲನೆ ಪ್ರಪೋಜಲನ್ನು ಗೌರ್ನಮೆಂಟಿನ ಸ್ಯಾಂಕ್ಷನ್ ಬಗ್ಯೆ ಶಿಫಾರ್ಸು ಮಾಡಿರುತ್ತೆಂದು ಮತ್ತು ಎರಡನೆ ಪ್ರಪೋಜಲನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಮಂಜೂರ್ಮಾಡಿರುತ್ತೆಂದು ಬೋರ್ಡಿನವರು ತೀರ್ಮಾನ ಮಾಡಿದರು.

27. 18—2—07ರ ಲಾಗಾಯಿತು 18—5—07ರ ವರಿವಿಗೆ ಮಂಜೂರ್ಮಾಡಲ್ಪಟ್ಟ ಕಾಂಗಾರಿಗಳ ಪಟ್ಟಿಯನ್ನು ಓದಲಾಯಿತು.

ಮತ್ತು ಅಪ್ರೂವ ಮಾಡಿರುವದಾಗಿ ಬೋರ್ಡಿನಿಂದ ತೀರ್ಮಾನ ಮಾಡಲ್ಪಟ್ಟಿತು.

28. 1907ನೆ ಆಗಸ್ಟು 17ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ಮುಂದಿನ ಮೀಟಿಂಗು ನಡೆಯುವಂತೆ ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1906—07ನೆ ಇಸವಿ ಮಿ|| ಅರ್ಜಿ ನಂಬ್ರು 680.

ಬೆಂಗಳೂರಲ್ಲಿದ್ದ ಮದ್ರಾಸ್ ರೈಲ್ವೆ ಚೀಫ್ ಗೂಡ್ಸ್ ಕ್ಲಾರ್ಕ್ ಮೃತಪಟ್ಟ ಎಂ. ಎ. ಶಿಂಗಪೆರುಮಾಳ್ಳಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬ್ಯಾಂಕು ಹೆಡ್ ಸರಾಫ್ ಎಂ. ಎ. ಶ್ರೀನಿವಾಸೈಯ್ಯಂಗಾರ್ರು, ಮೃತಪಟ್ಟ ಸದರೀ ಶಿಂಗಪೆರುಮಾಳ್ಳಯ್ಯಂಗಾರ್ರಿಗೆ ಖಾಸಾ ತಮ್ಮನಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ಬೆಂಗಳೂರು ಬ್ಯಾಂಕು ಹೆಡ್ ಸರಾಫ್ ಎಂ. ಎ. ಶ್ರೀನಿವಾಸೈಯ್ಯಂಗಾರ್ರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶಿಂಗ ಪೆರುಮಾಳ್ಳಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 3,900 ರೂಪಾಯಿ ಸಾಲವನ್ನು ವಸೂಲಿಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎಂ. ಎ. ಶ್ರೀನಿವಾಸೈಯ್ಯಂಗಾರ್ರ ಅರ್ಜಿಯನ್ನು ಸನ್ 1907ನೆ ಇಸವಿ ಜುಲೈ ತಿಂಗಳು 12ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿಂಗಪೆರುಮಾಳ್ಳೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1907ನೆ ಇಸವಿ ಜೂನ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್.

ನೋಟಿಸ್.

ತಾರೀಖು 28ನೇ ಮೇ 1907.

ಬೆಂಗಳೂರಲ್ಲಿರುವ ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಂಟೆಂಡೆಂಟರವರು, ಖಾಯಂ ತಲಬಿನ ಮೇಲೆ ಯಾ ಪೀಸ್ ವರ್ಕಿನ ಮೇಲೆ, ಪ್ರೂಫ್ ರೀಡರ್‌ಗಳಾಗಿಯೂ, ಕಂಪಾಜಿಟರ್‌ಗಳಾಗಿಯೂ ನೌಕರಿಗೋಸ್ಕರ, ಬೆಂಗಳೂರು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಕೆಲಸವನ್ನು ಕಲಿಯುವುದಕ್ಕೆ, ಮೈಸೂರು ದೇಶೀಯ ಜನಗಳಿಂದ ಅಪ್ಲಿಕೇಷನ್ ಯಾನೆ ದರಖಾಸ್ತುಗಳನ್ನು 1907ನೇ ಜೂನ್ 30ನೇ ತಾರೀಖಿನವರಿಗೆ, ತೆಗೆದುಕೊಳ್ಳುತ್ತಾರೆ.

ದರಖಾಸ್ತುದಾರರು ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಮತ್ತು ಗೆಜೆಟೆಡ್ ಆಫೀಸರರಿಂದಾಗಲಿ ಯಾ ಮಾತುಪರರಾದ ಇತರ ದೊಡ್ಡ ಮನುಷ್ಯರಿಂದಾಗಲಿ ಪಡೆದ ಯೋಗ್ಯತಾ ಪತ್ರಿಕೆಯೊಡನೆ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

ದರಖಾಸ್ತುದಾರರಲ್ಲಿ ಕ್ಲುಪ್ತ ಪ್ರಮಾಣ ಕೆಲವರು ಚುನಾಯಿಸಲ್ಪಡುವರು. ಇವರು ಪ್ರಥಮತಃ ಆರು ತಿಂಗಳುವರಿಗೆ ಪ್ರೂಫ್ ಬ್ರಾಂಚಿನಲ್ಲಿ ಕಾಪೀ ಹೋಲ್ಡರ್‌ಗಳಾಗಿ ಯಾ ರೀಡರ್‌ಗಳಾಗಿ ನೇಮಿಸಲ್ಪಡುವರು. ತರುವಾಯ, ಎರಡೂವರೆ ವರುಷಗಳ ಮಿಯಾದಿಗೆ, ಯಾವ ಕೆಲಸಕ್ಕೆ ಅರ್ಹರಾಗುವರೋ ಆ ಇಲಾಖೆಗೆ ದಾಖಲ್ಮಾಡಲ್ಪಡುವರು. ಪ್ರೂಫ್ ಬ್ರಾಂಚಿಗೆ ತಕ್ಕವರಾಗಿಯೂ ಅಲ್ಲಿ ಕೆಲಸಮಾಡಲಪೇಕ್ಷೆಯುಳ್ಳವರಾಗಿಯೂ ಇರುವ ದರಖಾಸ್ತುದಾರರು ರೀಡಿಂಗ್ ಕೆಲಸಕ್ಕೆ ತಕ್ಕವರೆಂದು ಎಣಿಸಲಿಕ್ಕೆ ಕನಿಷ್ಠಪಕ್ಷ ಒಂದು ವರುಷವಾದರೂ ಕಂಪಾಜಿಟರ್ರಾಗಿ ಕೆಲಸ ಮಾಡತಕ್ಕದ್ದು.

ಈ ಎರಡೂವರೆ ವರ್ಷಗಳಲ್ಲಿ ಯೋಗ್ಯರಾದ ರೀಡರ್‌ಗಳು ಇದರಡೀ ನಮೂದಿಸುವಂತೆ ತಲಬನ್ನು ಪಡೆಯುವರು.

ಮೊದಲು ಆರು ತಿಂಗಳುಗಳಲ್ಲಿ ಮಾಹೆಯಾನಾ 3 ರೂಪಾಯಿಗಳು, ಎರಡನೇ ಆರು ತಿಂಗಳುಗಳಲ್ಲಿ 4 ರೂಪಾಯಿಗಳು ಮೂರನೇ ಆರು ತಿಂಗಳುಗಳಲ್ಲಿ 5ರೂಪಾಯಿಗಳು ಆಖೈರ್ ಹನ್ನೆರಡು ತಿಂಗಳಲ್ಲಿ 6 ರೂಪಾಯಿಗಳು. ಕಂಪಾಜಿಟರ್‌ಗಳು ಮೇಲ್ಕಂಡ ಕಾಲದಲ್ಲಿ ಕ್ರಮವಾಗಿ 2—4—0, 3—0—0 3—12—0 ಮತ್ತು 4—10—0 ಮೇರೆಗೆ ತಲಬನ್ನು ಪಡೆಯುವರು. ಮೇಲೆ ಹೇಳಲ್ಪಟ್ಟ ಕಾಲದಲ್ಲಿ ಎಲಿಮೆಂಟರಿ ಆಫೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ತೃಪ್ತಿಕರವಾದ ನಡತೆಯುಳ್ಳವರು ಮಾತ್ರ ಕಾಲಕಾಲಕ್ಕೆ ಬಡ್ತಿಗಳನ್ನು ಹೊಂದುವರು. ಎರಡಾವೃತ್ತಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಕೆಲಸದಿಂದ ನಿವೃತ್ತಿ ಮಾಡಲ್ಪಡುವರು.

ಮೂರು ವರುಷಗಳ ನೌಕರಿಯು ಪೂರ್ತಿಯಾದಮೇಲೆ ಯಾವ ಕೆಲಸದಲ್ಲಿ ಯೋಗ್ಯತೆಯನ್ನು ಪಡೆದಿರುವರೋ, ಅಂಥಾ ಕೆಲಸವುಳ್ಳ ಬ್ರಾಂಚಿನಲ್ಲಿ ನಿಯಮಿಸಲ್ಪಡುವರು, ಅನಂತರ ಅವರ ನೌಕರಿಯು ಗವರ್ನಮೆಂಟ್ ರೆಗ್ಯುಲೇಷನಿಗನುಸಾರವಾಗಿ ಪೆನ್ಷನ್‌ಗೆ ತಕ್ಕದ್ದೆಂದು ಎಣಿಸಲ್ಪಡುವುದು. ಮತ್ತು ಪೀಸ್ ವರ್ಕ್ ಕಂಪಾಜಿಟರ್‌ಗಳ ವಿಷಯದಲ್ಲಿ ಅವರ ಶಕ್ತ್ಯಾನುಗುಣವಾಗಿ ಇತರ ವಿಷಯದಲ್ಲಿ ಆಗುವ ಕಾಲಾನುಸಾರವಾದ ರೂಲ್ಸ್‌ಗಳ ಪ್ರಕಾರ ಸಂಬಳವು ಆಗುವುದು.

ಪ್ರೊಬೇಷನ್ ಕಾಲವು ಪೂರೈಸಿದ ನಂತರ ಸೂಪರಿಂಟೆಂಡೆಂಟರವರ ಮಂಜೂರಾತಿಗೊಳಪಟ್ಟು, ಗವರ್ನಮೆಂಟ್ ಪ್ರೆಸ್ಸಿನಲ್ಲಿ ಮೂರು ವರುಷಗಳ ಕಾಲ ನೌಕರಿ ಮಾಡುತ್ತೇವೆಂಬದಾಗಿ ಕರಾರುಬರೆದು ಸೈನ್ ಮಾಡಿ ಕೊಡತಕ್ಕದ್ದು; ಅಥವಾ ಪ್ರೊಬೇಷನ್ ಕಾಲದಲ್ಲಿ ಪಡೆದ ಹಣವನ್ನು ವಾಪಸ್ ಕೊಡಬೇಕು.

ದರಖಾಸ್ತುದಾರರು ತಮಗೆ ಕೆಲಸದಲ್ಲಿ ತಕ್ಕಮಟ್ಟಿಗೆ ಅನುಭವವುಂಟಾದಕೂಡಲೆ, ಬೆಂಗಳೂರು ಸೆಂಟರ್‌ನಲ್ಲಿ ಪ್ರತಿವರುಷ ನವಂಬರ್ ತಿಂಗಳಲ್ಲಿ ನಡೆಯುವ ಮದ್ರಾಸ್ ಗವರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಗೆ ಹೋಗುವ ಉದ್ದಿಶ್ಯ, ಪ್ರಾತಃಕಾಲ ಸಾಯಂಕಾಲದ ಕ್ಲಾಸಿಗೆ ಫೀ ಇಲ್ಲದೇನೆ ಹಾಜರಾಗಬಹುದು. ಈ ಪರೀಕ್ಷೆಯಲ್ಲಿ ಯೋಗ್ಯತಾಪತ್ರಿಕೆಯನ್ನು ಪಡೆದವರಿಗೆ ಪ್ರೆಸ್ಸಿನಲ್ಲಿ ಖಾಲಿಯಾಗುವ ದೊಡ್ಡ ನೌಕರಿಯು ಸೂಪರಿಂಟೆಂಡೆಂಟರವರ ಅನುಮತಿಯಿಂದ ಕೊಡಲ್ಪಡುವುದು.

ಸಿ. ಎಚ್. ಪಿಟ್ಸ್,
ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್.

ಮೈಸೂರು ಗವರ್ನಮೆಂಟ ಕೊ ಆಪರೇಟಿವ ಸೊಸೈಟಿಗಳ ರಿಜಿಸ್ಟ್ರಾರ ಮತ್ತು ಅಗ್ರಿಕಲ್‌ಚರಲ್ ಬ್ಯಾಂಕುಗಳ ಇನ್ಸ್‌ಪೆಕ್ಟರ್‌ರವರ ಆಫೀಸಿನಿಂದ.

ಎಲ್ಲ ಅಗ್ರಿಕಲ್‌ಚರಲ್ ಬ್ಯಾಂಕುಗಳ ಪ್ರೆಸಿಡೆಂಟ ಮತ್ತು ಏಜಂಟರಿಗೆ —

ರೆವಿನ್ಯೂ ಕಮಿಷನರ ಸಾಹೇಬರವರ 1907ನೆ ಇಸವಿ ಏಪ್ರಿಲು 25ನೆ ತಾರೀಖು 11117ನೆ ನಂಬರು ಸರ್‌ಕ್ಯುಲರ ಅನುಸರಿಸಿ ಕೊಡಲ್ಪಟ್ಟ ಸರ್‌ಕ್ಯುಲರ ಹುಕ್ಕುಂ.

ನಂಬರು ....1907ನೆ ಇಸವಿ.

ಲವಾಜಮು ಮತ್ತು ಸಾದಿಲ್‌ವಾರ ವಗೈರೆ ಖರ್ಚುಗಳು, ಬರತಕ್ಕ ನಫೆಯಲ್ಲಿ ಕೊಡತಕ್ಕದ್ದೆಂದು ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ, ಅನೇಕ ಅಗ್ರಿಕಲ್‌ಚರಲ್ ಬ್ಯಾಂಕುಗಳಲ್ಲಿ ಈ ಬಾಬಿನ ಖರ್ಚನ್ನು ಉತ್ಪತ್ತಿಗೆ ತಾಳಿಕೆಯಾಗಿರುವಂತೆ ಇಟ್ಟುಕೊಳ್ಳದೆ, ದುಬಾರಿಯಾಗಿ ಮಾಡುವಂತೆ ಕಂಡುಬಂದಿದೆ. ಬ್ಯಾಂಕಿನ ಸಾಲಿಯಾನ ಆದಾಯವು 500 ರೂಪಾಯಿಯೊಳಗಿದ್ದರೆ ಮಾಹೆಯಾನ 2 ರುಪಾಯಿನ ಗುಮಾಸ್ತೆಯನ್ನು ನೌಕರೂರ ಮಾಡುವದು ಬ್ಯಾಂಕಿಗೆ ಲುಕ್ಸಾನುಂಟುಮಾಡುವದರಲ್ಲಿ ಸಂಶಯವಿಲ್ಲ. ಆದರೂ ಈ ಪ್ರಕಾರ ಅನೇಕ ಬ್ಯಾಂಕುಗಳಲ್ಲಿ ಜಾರಿಯಲ್ಲಿರುವಂತೆ ಕಂಡುಬಂದಿದೆ. ಆದ್ದರಿಂದ ಇನ್ನು ಮೇಲೆ ಮಾಹೆಯಾನ ನಮಗೆ ಕಳುಹಿಸುವ ಜಮಾ ಖರ್ಚಿನ ಗೋಷ್ವಾರೆಯಲ್ಲಿ ನೌಕರರ ತಲಬು ಯಾವ ನಫೆ ಬಾಬಿನಿಂದ ಕೊಡಲ್ಪಟ್ಟಿತೆಂಬುವದಕ್ಕೆ ಷರಾ ಕಾಲಂನಲ್ಲಿ ತಪ್ಸೀಲು ತೋರಿಸಬೇಕು. ಶಿವಾಯಿ ಅನೇಕ ಬ್ಯಾಂಕುಗಳು ಹೀನಸ್ಥಿತಿಗೆ ಬಂದು ಕೆಲಸಕಾರ್ಯಗಳು ವಿಶೇಷವಾಗಿ ನಿಂತುಹೋಗಿರುವದರಿಂದ ಲವಾಜಮು ಖಂಡಿತವಾಗಿ ಕಮ್ಮಿ ಮಾಡಬಹುದಾಗಿರುತ್ತೆ. ಆದ್ದರಿಂದ ಅಗ್ರಿಕಲ್‌ಚರಲ್ ಬ್ಯಾಂಕುಗಳ ಏಜಂಟರು ಮತ್ತು ಪ್ರೆಸಿಡೆಂಟರುಗಳು, ಅವರವರ ಬ್ಯಾಂಕುಗಳಲ್ಲಿ, ಲವಾಜಮು ಮತ್ತು ಸಾದಿಲ್‌ವಾರ ಖರ್ಚು ಎಷ್ಟುಮಟ್ಟಿಗೆ ಕಮ್ಮಿ ಮಾಡಬಹುದೆಂಬ ವಿಷಯದಲ್ಲಿ ಯೋಚನೆಮಾಡಿ ನಮಗೆ ರಿಪೋರ್ಟು ಮಾಡಬೇಕು.

2. ಹಾಲಿ ಪ್ರತಿ ಛಷ್ಮಾಹೆಯಲ್ಲೂ ತಯಾರ್ಮಾಡಲ್ಪಡುತ್ತಲಿರುವ ಬ್ಯಾಲೆನ್ಸ್ ಷೀಟಿನಿಂದ ಅಗ್ರಿಕಲ್‌ಚರಲ್ ಬ್ಯಾಂಕಿನ ಆ ಛಷ್ಮಾಹೆಯ ಜಮ ಖರ್ಚು ಪ್ರತ್ಯೇಕವಾಗಿ ಗೊತ್ತಾಗುವದಿಲ್ಲ. ಬ್ಯಾಂಕು ಷುರುವಾದ ಲಾಗಾಯಿತುನಿಂದ ಬಂದ ಒಟ್ಟು ಆದಾಯವೆಷ್ಟು ಗೊತ್ತಾಗುತ್ತೆ. ಬರುವ ಅಂದರೆ 1907ನೆ ಇಸವಿ ಜೂನ್ ಮಾಹೆ ಆಖೈರುವರಿಗೆ ತಯಾರಾಗುವ ಬ್ಯಾಲೆನ್ಸ್ ಷೀಟನ್ನು ಮತ್ತು ಇನ್ನು ಮುಂದೆ ತಯಾರಾಗುವ ಪ್ರತಿ ಛಷ್ಮಾಹೆ ಬ್ಯಾಲೆನ್ಸ್ ಷೀಟನ್ನು ಕೆಳಗೆ ನಮೂದಿಸುವ ಮೇರಿಗೆ ತಯಾರ್ಮಾಡಿ ಕಳುಹಿಸುತ್ತಾ ಬರಬೇಕು.

ಬ್ಯಾಂಕಿಗೆ ಇರುವ ವರಮಾನ (Assets)			ಬ್ಯಾಂಕಿಗೆ ಇರುವ ಜವಾಬ್ದಾರಿ (Liabilities)		
ವಿವರ	ಛಷ್ಮಾಹೆ ಷುರುವಿನಲ್ಲಿ	ಛಷ್ಮಾಹೆ ಆಖೈರಿನಲ್ಲಿ	ವಿವರ	ಛಷ್ಮಾಹೆ ಷುರುವಿನಲ್ಲಿ	ಛಷ್ಮಾಹೆ ಆಖೈರಿನಲ್ಲಿ
	ರೂ. ಆ. ಪೈ.	ರೂ. ಆ. ಪೈ.		ರೂ. ಆ. ಪೈ.	ರೂ. ಆ. ಪೈ.
(1) ಮೆಂಬರುಗಳಿಂದ ಬರಬೇಕಾದ ಸಾಲದ ಅಸಲ್ ಬಾಕಿ.			(1) ಸರ್ಕಾರದ ಹಣ ಬಾಕಿ ನಿಂತಿರುವದು.		
(2) ಡಿಟ್ಟೋ ಬಡ್ಡಿ ಬಾಕಿ.			(2) ಸರ್ಕಾರಕ್ಕೆ ಕೊಡಬೇಕಾದ ಬಡ್ಡಿ ಬಾಕಿ.		
(3) ಜೆನಲ್ಟಿ (ಸುಸ್ತಿ ಬಡ್ಡಿ) ವಗೈರೆ ಬಾಬತು.			(3) ಮೆಂಬರುಗಳಿಂದಲೂ ಮತ್ತು ಇತರರಿಂದಲೂ ತೆಗೆದುಕೊಂಡಿರುವ ಸಾಲ ಮತ್ತು ಡಿಪಾಜಟ್ಟು ಮೊಬಲಗು ವಾಪಸು ಕೊಡದೆ ನಿಂತಿರುವದು.		
(4) ಖಜಾನೆಯಲ್ಲಿ ಮತ್ತು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಡಿಪಾಜಟ್ಟು ಮೊಬಲಗು.			(4) ಡಿಟ್ಟೋ ಮೊಬಲಗುಗಳಿಗೆ, ಕೊಡಬೇಕಾದ ಬಡ್ಡಿ.		
(5) ಹಾಲಿ ಏಜಂಟ ಅಥವಾ ಪ್ರೆಸಿಡೆಂಟರ ಕೈಯಲ್ಲಿರುವ ಕ್ಯಾಷ ಮೊಬಲಗು.			(5) ಜಖೀರಿ ಫಂಡು		
(6) ಸಾಮಾನು (ಮೇಜ, ಕುರ್ಚಿ ವಗೈರೆ) ಮತ್ತು ಇತರ ಆಸ್ತಿಯ ಚಾಲ್ತಿ ಬೆಲೆ.			(6) ಇತರ ಬಾಬುಗಳು (ತಪ್ಸೀಲು ನಮೂದಿಸಬೇಕು.)		
(7) ಮೇಲೆ ನಮೂದಾಗದೆ ಇರುವ ಇತರ ಬಾಬುಗಳು.					
ಜುಮ್ಲಾ			ಜುಮ್ಲಾ		

3. ಐಯಿಂದ ಬ್ಯಾಲೆನ್ಸ್ ಷೀಟುಗಳನ್ನು ಮತ್ತು ಮಾಹೇವಾರ ಕಳುಹಿಸುವ ಜಮ ಖರ್ಚಿನ ಲೆಕ್ಕಗಳನ್ನು ಸಹ ಎರಡು ಪ್ರತಿಗಳನ್ನು ತಯಾರ್ಮಾಡಿ ಒಂದು ಪ್ರತಿಯನ್ನು ಅಮಲ್ದಾರ್‌ರಿಗೂ ಮತ್ತೊಂದು ಪ್ರತಿಯನ್ನು ಈ ಆಫೀಸಿಗೂ ರವಾನಿಸುತ್ತಾ ಬರಬೇಕು. ಇದಲ್ಲದೆ ಹೊಸದಾಗಿ ಮೆಂಬರುಗಳನ್ನು ಸೇರಿಸುವದಕ್ಕೂ, ವಜ ಮಾಡುವದಕ್ಕೂ, ರಾಜಿನಾಮೆ ಅಂಗೀಕರಿಸುವದಕ್ಕೂ, ತಾಲ್ಲೂಕು ಅಮಲ್ದಾರ್‌ರ ಅನುಮತಿಯನ್ನು ಪಡಿಯಬೇಕು. ಆಗಾಗ್ಯೆ ನಡಿಯುವ ಜನರಲ್ ಅಸೆಂಬ್ಲಿ ಮತ್ತು ಡೈರೆಕ್ಟರುಗಳ ಮೀಟಿಂಗಿನ ನಡವಳಿಕೆಗಳನ್ನು ಒಂದು ಪ್ರತಿ ನಮ್ಮ ಆಫೀಸಿಗು ಮತ್ತೊಂದು ಪ್ರತಿ ಅಮಲ್ದಾರ್‌ರಿಗೂ ಕಳುಹಿಸುತ್ತಾ ಬರಬೇಕು.

ಎಂ. ಶಾಮರಾವ್,
ರಿಜಿಸ್ಟ್ರಾರ ಕೋ ಆಪರೇಟಿವ ಸೊಸೈಟಿಸ ಅಂಡ ಇನ್ಸ್‌ಪೆಕ್ಟರ
ಆಫ್ ಅಗ್ರಿಕಲ್‌ಚರಲ್ ಬ್ಯಾಂಕ್ಸ್ ಇನ್ ಮೈಸೂರು.

324

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 26.

ಬೆಂಗಳೂರು, ಗುರುವಾರ, ಜೂನ್ ತಾ॥ 27, ಸನ್ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಬಾಳೂರು ಜಂಗಲಿಯನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 274—275—276ನೆ ಪೇಜಿನಲ್ಲಿ ತಪ್ಪೀಲಾಗಿ ವಿವರಿಸಲ್ಪಟ್ಟಿದೆ.

ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ನರಸಿಂಹ ಪರ್ವತವೆಂಬ ರಿಸರ್ವಿನಲ್ಲಿ ಅಡಗಿರುವ ಪ್ರದೇಶವನ್ನು ಮನ್ನಾ ಜಂಗಲಿಯಾಗಿ ಮಾಡತಕ್ಕ ವಿಷಯದಲ್ಲಿ; ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ 31ನೆ ಮೇ ತಾರೀಖಿನ ಇಸ್ತಿಹಾರ್, 1907ನೆ ಇಸವಿ ಜೂನ್ 13ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ ಕನ್ನಡ ಗೆಜೆಟ್ಟಿನ 277-278—279ನೆ ಪೇಜಿನಲ್ಲಿ ತಪ್ಪೀಲಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಎಲ್ಲರೂ ಗಮನ ಕೊಡಬೇಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ತುಂಗಭದ್ರಾ ಫಾರೆಸ್ಟನ್ನು ಮನ್ನಾ ಜಂಗಲಿ ಮಾಡತಕ್ಕ ವಿಷಯದಲ್ಲಿ ಈ ಆಫೀಸಿನಿಂದ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನನುಸರಿಸಿ ಕೊಡಲ್ಪಟ್ಟ ಜೂನ್ 6ನೆ ತಾರೀಖಿನ ಇಸ್ತಿಹಾರು 1907ನೆ ಇಸವಿ ಜೂನ್ 13ನೆ ತಾರೀಖು ಮೈಸೂರು ಗೆಜೆಟ್ಟಿನ ಕನ್ನಡ 2ನೆ ಭಾಗದ 279-280-281—282—283ನೆ ಪೇಜಿನಲ್ಲಿ ತಪ್ಪೀಲಾಗಿ ವಿವರಿಸಲ್ಪಟ್ಟಿರುತ್ತೆ.

ಎಂ. ರಾಮರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

ಇಸ್ತಿಹಾರಿ.

ಕೋಲಾರ್ ಡಿಸ್ಟ್ರಿಕ್ಟಿನ ತಂಗೇಡಿ ಮತ್ತು ಕಕ್ಕೆ ಚಕ್ಕೆಯನ್ನು 1907—08ನೆ ಸಾಲಿನಲ್ಲಿ ರೂಢಿಸಿಕೊಳ್ಳತಕ್ಕ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ಕುಮಿನ 4ನೆ ನಂಬರ್ ಮೈಸೂರು ಗೆಜೆಟ II ನೆ ಭಾಗದ 283—284ನೆ ಪುಟದಲ್ಲಿ ಫಾಯಿಷ್ ಆಗಿರುವ 1907ನೆ ಜೂನ್ 1ನೆ ತಾರೀಖಿನ ಇಸ್ತಿಹಾರ್ ನೋಡತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಬವರಿಂಗ್‌ಪೇಟೆ ತಾಲ್ಲೂಕು ಕಾಮಸಂದ್ರದ ಸ್ಟೇಟ್ ಫಾರೆಸ್ಟಿನ ಸೌದೆ ಬಿಕರಿ ವಿಚಾರದಲ್ಲಿ 1907ನೆ ಜೂನ್ ಮಾಹೆ 13ನೆ ಮರ್ಕುಮಿನ 24ನೆ ನಂಬರ್ ಮೈಸೂರ್ ಗೆಜೆಟ್ II ನೆ ಭಾಗದ 284—285—286ನೆ ಪುಟದಲ್ಲಿ ಫಾಯಿಷ್ ಆಗಿರುವ 1907ನೆ ಇಸವಿ ಜೂನ್ 1ನೆ ತಾರೀಖಿನ ನೋಟಿಫಿಕೇಷನ್ ನೋಡತಕ್ಕದ್ದು.

ವೈ. ಸೀತಾರಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 17ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ಇರತಕ್ಕ ತಂಗಡಿ, ಕಕ್ಕೆ ಚಕ್ಕೆಯನ್ನು 1907ನೆ ಜುಲೈ ತಾರೀಖು 1ರ ಲಾಗಾಯತು 1908ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕುವಾರ್ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಿಂದ 1907ನೆ ಇಸವಿ ಜುಲೈ ತಾರೀಖು 15ರಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್ಗಳು ಇದಕ್ಕೆ ಸೇರಿಇರುತ್ತೆ.

ತಾಲ್ಲೂಕುಗಳ ಹೆಸರು.

(1) ಮೈಸೂರು
(2) ಕೃಷ್ಣರಾಜಪೇಟೆ
(3) ಹೆಗ್ಗಡದೇವನಕೋಟೆ
(4) ಮಳವಳ್ಳಿ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದೇ ಇದ್ದಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಚಡ ದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿಧೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿಧಾರೆ.

4. ಚಡ ದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಿಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್ದಾರರ ಮೊಬಲಗನ್ನ ಹರಾಜ್ ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಚಡ ದರಖಾಸ್ತುದಾರನು ಅವನ ದರಖಾಸ್ತು ಮಂಜೂರಾತಿಯನ್ನು ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಅವನು ಮೊದಲು ಇಟ್ಟು ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫೀಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡ ದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದಕೂಡಲೇ ಕೊಡದೆ ಇದ್ದರೆ ಅದು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಮೇಲೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1907ನೆ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಖಿಸ್ತು ಮೇರೆ ಅಂದರೆ, 1907ನೆ ಅಕ್ಟೋಬರ್ 1ನೆ ತಾರೀಖಿನಲ್ಲಿ ಒಂದನೆ ಖಿಸ್ತು, 1908ನೆ ಇಸವಿ ಜನವರಿ 1ನೆ ತಾರೀಖಿನಲ್ಲಿ ಎರಡನೆ ಖಿಸ್ತು ಮತ್ತು 1908ನೆ ಇಸವಿ ಮೇ 1ನೆ ತಾರೀಖಿನಲ್ಲಿ ಮೂರನೆ ಖಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವಮೇರೆ ಖಿಸ್ತಿನ ಹಣ ಪಾವತಿ ಮಾಡಲ್ಪಡದೆ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.

2. ಇಜಾರೆದಾರನೇ ಆಗಲಿ ಇಜಾರೆದಾರನ ನೌಕರರೇ ಆಗಲಿ ಅಥವಾ ಶಿಕಮಿ ಕಂಟ್ರಾಕ್ಟ್ದಾರನೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೇದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಶಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.

4. ತೊಗಟೆ ತೆಗೆಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿಧೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣಿ ಮೊತ್ತ ತೋರಿಸುವ ತಪಶೀಲು ಲೆಖ್ಖವನ್ನು ಇಜಾರೆದಾರನು ಇಡಬೇಕು ಮತ್ತು ಅಂಥಾ ಲೆಖ್ಖವನ್ನು ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ ಅಮಲ್ದಾರ್ರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಅಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡುಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಮೊಕರರ್ಮಾಡುವ ರೀತಿಯಲ್ಲಿ ಪ್ಯಾಸ್ ಪಡಿಯತಕ್ಕದ್ದು.

7. ದಾಸ್ತಾನ್ ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1908ನೆ ಇಸವಿ ಜೂನ್ ಆಖ್ಯೆರು ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹುಕುಂ ಆದಹಾಗೆ ಅವನಿಂದ ಜಾಮೀನಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತದೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ.

ನೋಟಿಸ್.

ಹಾಸನ ಡಿಸ್ಟ್ರಿಕ್ಟ ತಂಗಡಿ ಚಕ್ಕೆ ಜಮಾವಣಿ ವಿಚಾರದಲ್ಲಿ ಟೆಂಡರ್ ಕಳುಹಿಸತಕ್ಕ ಬಗ್ಯೆ 1907ನೆ ಜೂನ್ 13ನೆ ತಾರೀಖು ಮೈಸೂರು ಗೆಜೆಟ್ IIನೆ ಭಾಗದ 286—287ನೆ ಪೇಜನಲ್ಲಿ ಛಾಯಿಷ ಮಾಡಿರುವ 1907ನೆ ಇಸವಿ ಜೂನ್ 9ನೆ ತಾರೀಖಿನ ಇಸ್ತಿಹಾರನ್ನು ಎಲ್ಲಾ ಜನಗಳು ನೋಡಬೇಕಾದ್ದು.

ಬಿ. ಐ. ಶಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ.

ಬೆಂಗಳೂರು ಡಿಸ್ಟ್ರಿಕ್ಟ.

ಅಬ್ಸ್ಟ್ರಾಕ್ಟ.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಶೇರಿದ ಜೋಡಿ ಶ್ಯಾನಪ್ಪನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ 8ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟದೆ.

ಹೆಚ್ಚು ತಪಶೀಲ್ ಬಗ್ಯೆ 1907ನೆ ಇಸವಿ ಜೂನ್ ಮಾಹೆ 20ನೆ ಮುರ್ರಾಂ 25ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 297ನೆ ನಂಬರು ಪೇಜು ನೋಡತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಶೇರಿದ ಜೋಡಿ ನರಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿಧೆ.

ಹೆಚ್ಚು ತಪಶೀಲ ಬಗ್ಯೆ 1907ನೆ ಇಸವಿ ಜೂನ್ ಮಾಹೆ 20ನೆ ಮುರ್ರಾಂ 25ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 296ನೆ ನಂಬರು ಪೇಜು ನೋಡತಕ್ಕದ್ದು.

ಹೆಚ್. ಹೆಚ್. ಸ್ಪಾರಕ್ಸ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 10ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚನ್ನಪಟ್ಟದ ತಾಲ್ಲೂಕು ಮಳೂರು ಹೋಬಳಿ ಮಳೂರು ಪಟ್ಟದ ದಾಖಲೆ ಭೈರಾಪಟ್ಟದಲ್ಲಿರುವ ಕುಂಟಲಿಂಗೇಗೌಡನೆಂಬವನು ಆ ಗ್ರಾಮದ ತನ್ನ ಹಿಡುವಳಿ ಸರ್ವೆ 602ನೆ ನಂಬರ್ ಜಮೀನನಲ್ಲಿ ಅಗಿಯುವ ವ್ಯಾಳೆ ಈ ಕೆಳಗೆ ಕಂಡ ಸ್ವತ್ತುಗಳು ಶಿಕ್ಕಿರುವದಾಗಿ ಹಿಡುವಳಿದಾರ ತಾಲ್ಲೂಕಿಗೆ ಹಾಜರ್ಮಾಡಿರುತ್ತಾನೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ಡಿಸೆಂಬರ್ ಮಾಹೆ ಆಖ್ಯೆರು ವಳಗಾಗಿ ಬೆಂಗಳೂರು ಡಿಸ್ಟ್ರಿಕ್ಟು ಕೋಸಪೇಟೆ ಸಬ

ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಟ್ಟು ಸದರೀ ಮಾಲು ಪಡಿಯಬಹುದು. ತಪ್ಪಿದಲ್ಲಿ ಸದರಿ ಸ್ವತ್ತನ್ನು ಮೇಲ್ಕಂಡ ಕುಂಟಲಿಂಗೇ ಗೌಡನಿಗೆ ಪಾವತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಲ್ಪಡುವದಿಲ್ಲಾ.

ಸ್ವತ್ತುಗಳ ತಪಶೀಲ್.

		ಅಂದಾಜ. ರೂ.	ಆ.	ಪೈ.
1.	ಲಕ್ಷ್ಮಿದೇವಿ ತಾಳಿ ಆರು ಕಾಶಿನ ಅಗಲಾ, ಮುತ್ತು ಸುತ್ತಿಕೊಂಡು ಇರತಕ್ಕದ್ದು ...	0	4	0
2.	ಸಾಧಾರಣ ಗುಂಡು ತಾಳಿ ಮೇಲೆ ಗುಂಡು ಇರತಕ್ಕದ್ದು 1 ...	0	4	0
3.	ಬಂಗಾರದ ಹಣಗಳು 8	2	5	4
4.	ಕಿವಿಗೆ ಹಾಕಿಕೊಳ್ಳುವ ಎರಡು ಬೆಳ್ಳಿ ಕೊಂಡಿಗಳು ...	0	1	0
5.	ಚಿನ್ನದ ಸಣ್ಣ ಗುಂಡು ತೊಗರಿಕಾಳು ಘಾತ್ರ ಇರತಕ್ಕದ್ದು 1	0	1	0
6.	ಬಣ್ಣ ಕೆಟ್ಟುಹೋದ ಹವಳ 1 ...	0	0	1
7.	ಬಿಳಿ ಕಲ್ಲು ಮಣಿ 1 ...	0	0	1
	ಜುಮ್ಲಾ ...	2	15	6

ಟಿ. ರಾಯಲುಚೆಟ್ಟಿ,
ಫರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಸನ್ 1907ನೆ ಇಸವಿ ಮೇ ತಾ॥ 13ನೆ ಸೋಮವಾರ ಹಾಸನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು ನಡಿಸಿದ ಮೀಟಿಂಗ್ ಪ್ರೊಸೀಡಿಂಗ್ಸ್.

ಹಾಜರು.

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಎಸ್ಕ್ವೈರ್, ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಸೈಯದ್ ಅಮೀರ್‌ಹಸನ್ ಸಾಹೇಬರವರು, ಸಕಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು.
,, ಎಂ. ಎ. ನಾರಣೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಜನರಲ್ ಅಸಿಸ್ಟೆಂಟ್ ಕಮಿಷನರವರು.
,, ಎಫ್. ಎ. ಸ್ಟೀಲ್ ಸಾಹೇಬರವರು, ಎಗ್ಜಿಕ್ಯೂಟಿವ್ ಇಂಜನೀಯರವರು.
,, ಸಿ. ರಾಜಾರಾಮರಾಯರವರು, ಎಲ್. ಎಂ. ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
,, ಎಂ. ಕೆ. ತಿರುಮಲಾಚಾರ್ಯರವರು, ಬಿ. ಎ., ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಲಕ್ಷ್ಮೀನರಸಿಹ್ಮಾಚಾರ್ಯರವರು
,, ಕೇಣಿ ಮಹದೇವಪ್ಪನವರು.
,, ಐಗೂರು ಮಲ್ಲೆಗೌಡರು.
,, ಬಿ. ನಂಜೇಗೌಡರು ಪುರುಷ ಪುಟ್ಟೇಗೌಡರು.
,, ಕೆ. ತಮ್ಮಯ್ಯನವರು.
,, ಹಬಿಮುಲ್ಲಾಸಾಬರು.
,, ಕೆಂಚರಾಯ ಶೆಟ್ಟರು.
,, ದಾಸಪ್ಪನವರು.
ಮೆ॥ ಜಿ. ತಿರುನಾರಣೈಯ್ಯಂಗಾರು.
,, ಧರಣೈಯ್ಯಶೆಟ್ಟರು.
,, ನಂಜಣ್ಣನವರು.
,, ಕೋನೇರಿ ರಾಮಶೆಟ್ಟರು.
,, ಸೂರ್ಯನಾರಾಯಣಶೆಟ್ಟರು.
,, ಅಬ್ದುಲ್ಲಾಸಾಬರು.
,, ಗುರುಲಿಂಗೇಗೌಡರು.

ಗೈರ ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

ಮೆ॥ ಟಿ. ಧರ್ಮರಾಜ ಶೆಟ್ಟಿಯವರು, ಹುಜರಿ ಅಸಿಸ್ಟೆಂಟ್ ಕಮಿಷನರ ಸಾಹೇಬರವರು ಮತ್ತು ಡಿಸ್ಟ್ರಿಕ್ಟು ಬೋರ್ಡು ವೈಸ್ ಪ್ರೆಸಿಡೆಂಟರು.

ನಾನ್ ಅಫಿಷಿಯಲ್ ಮೆಂಬರುಗಳು.

ಮೆ॥ ಡಬ್ಲ್ಯೂ. ಎಲ್. ಕ್ರಾಫರ್ಡ್ ಸಾಹೇಬರವರು.
,, ಎಮ್. ಡಿ. ವೆಂಕಟರಾಮಯ್ಯನವರು.
ಮೆ॥ ಮಹಲಿಂಗಗೌಡರು.

I. ಕೊಡಗು ಡಿಸ್ಟ್ರಿಕ್ಟು ಬೋರ್ಡಿನವರು ಅರಲಗೂಡು-ಕೊಡ್ಲಿಪೇಟೆ-ಮಂಜರಾಬಾದು ರಸ್ತೆ ಮೇಲೆ ಕ್ಯಾತೇಹೊಳೆ ಸಮೀಪದಲ್ಲಿಟ್ಟಿರುವ ಅವರ ಟೋಲ್ ಗೇಟ್ ವಜಾ ಮಾಡತಕ್ಕ ಬಗ್ಗೆ ಕೊಡಗು ಚೀಫ್ ಕಮಿಷನರ್ ಸಾಹೇಬರವರು ತಿಳುವಳಿಕೆ ಕೊಡಲು ನಿಷ್ಕರಿಸಿರುವದರಿಂದ ಹಾಸನ ಡಿಸ್ಟ್ರಿಕ್ಟು ಬೋರ್ಡಿನವರು ಪ್ರಸಕ್ತವಾದ ರಸ್ತೆ ಮೇಲೆ ಒಂದು ಟೋಲ್ ಗೇಟನ್ನು ವೈ

ನೂರು ಸೀಮೆಯ ಸರಹದ್ದಿನಲ್ಲಿರುವ ಅಂಶವನ್ನು ಹಾಸನ ಡಿಸ್ಟ್ರಿಕ್ಟು ಬೋರ್ಡಿನಲ್ಲಿ ಚರ್ಚಿಸಿ ತೀರ್ಮಾನನಿಶಿ ಗೌವರ್ನಮೆಂಟ್ ಆರ್ಡರು ಬಗ್ಯೆ ಕಳುಹಿಸಬೇಕೆಂತಲೂ ಸದರಿ ರಸ್ತೆ ಮೇಲೆ ಹಾಲಿ ಇರುವ ಕುಂಪಣಿ ಟೋಲ್ ಗೇಟುಗಳಿಟ್ಟಿರುವ ಸ್ಥಳಗಳನ್ನು ಮತ್ತು ಹಾಸನ ಡಿಸ್ಟ್ರಿಕ್ಟು ಬೋರ್ಡಿನವರು ಹೊಸದಾಗಿ ಸ್ಥಾಪಿಸಬೇಕೆಂಬ ಸ್ಥಳವನ್ನು ಸಷ್ಟ ನಿರ್ದೇಶಿಸುವಂತೆ ಒಂದು ಸ್ಕೆಚ್ ಸಹ ತಯಾರ್ಮಾಡಿಸಿ ಕಳುಹಿಸಬೇಕೆಂಬ ಬಗ್ಯೆ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿಯುವರಿಂದ ತಲ್ಪಿದ 19—2 1907ರ ಮುರ್ಸ್ಸಲಾ 7168—ಎಲ್. ಬಿ. 321-06—3ನೆ ನಂಬರ ಡಾಕೇಟ್ ಓದಲಾಯಿತು

ತೀರ್ಮಾನ:—ಕೊಡಗು ಚೀಫ್ ಕಮಿಷ್ನರವರ ಅಭಿಪ್ರಾಯದಂತೆ ಮೈಸೂರು ಸೀಮೆಯುಲ್ಲಿರುವ ಅರ್ಕಲಗೂಡು-ಕೊಡ್ಲಿಪೇಟೆ-ಮಂಜರಾಬಾದು ರಸ್ತೆಯೂ, ಬನವಾಸಿ-ಯಸಳೂರು ಪೇಟೆ ರಸ್ತೆಯೂ ಸೇರಿರುವ ಬಳಿಯಲ್ಲಿ ಒಂದು ಟೋಲ್ ಗೇಟನ್ನು ಸ್ಥಾಪಿಸಬಹುದೆಂತಲೂ 24 ಘಂಟೆ ವಳಗೆ ಸದರಿ ರಸ್ತೆಗಳ ಮೇಲೆ ಹೋಗುವ ಗಾಡಿ ವಗ್ಯೆರೆಗಳ ಮೇಲೆ ಒಂದೇ ಟೋಲ್‌ಯಾನೆ ಸುಂಕವನ್ನು ಮೈಸೂರು ಸೀಮೆಯ ಟೋಲ್ ಗೇಟಿನಲ್ಲಾಗಲಿ ಅಥವಾ ಕೊಡಗು ಟೋಲ್ ಗೇಟಿನಲ್ಲಾಗಲಿ ವಸೂಲ್ಮಾಡಬಹುದೆಂತಲೂ ತೀರ್ಮಾನಿಸಲಾಯಿತು.

II. ಕೊಡಗು ಸೀಮೆಯಲ್ಲಿ ಹಾಕುವ ಕಾಲುದಾರಿಗಳಿಗನುಸಾರವಾಗಿ ಸೋಮವಾರಪೇಟೆಯಿಂದ ಅರ್ಕಲಗೂಡು ಕೊಣನೂರು ಮತ್ತು ಸಕ್ಲೇಶಪುರ-ಬಿಸಲೆ ಘಾಟಿ ರಸ್ತೆಗಳಿಗೆ ಶೇರುವಂತೆ ಸದರಿ ಕಾಲುದಾರಿಗಳನ್ನು ಮೈಸೂರು ಸೀಮೆಯಲ್ಲಿಯೂ ಹಾಕತಕ್ಕ ಬಗ್ಯೆ ತಗಲುವ ವಿಶಿಷ್ಟ ಖರ್ಚನ್ನು ಲೋಕಲ್ ಫಂಡ್ಸ್ ಜನರಲ್‌ನಿಂದ ಕೊಡಲು ಇಷ್ಟವುಳ್ಳವರಾಗುತ್ತಾರೆಯೆ ಎಂಬ ಅಂಶದಲ್ಲಿ ಬೋರ್ಡಿನವರ ತೀರ್ಮಾನನಿಶಿ ರಿಪೋರ್ಟು ಬಗ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯುವರಿಂದ ತಲ್ಪಿದ 6—3—07ನೆ ಮುರ್ಸ್ಸಲಾ 7647—ಎಲ್. ಬಿ. 162-06—4ನೆ ನಂಬರ ಡಾಕೆಟ್ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ದಾರಿಗಳಿಗೋಸ್ಕರ ಬೇಕಾಗುವ ಮೊಬಲಗು ಪೈಕಿ ಅರ್ಧವನ್ನು ಕೊಡಲು ಶಕ್ತಿ ಸಾಲದೆಂಬದಾಗಿ ಅಭಿಪ್ರಾಯಪಡಲಾಯಿತು.

III. ತಿಪಟೂರು-ಹುಳಿಯಾರು ರಸ್ತೆಗೆ ಶೇರುವಂತೆ ಹೊಸದುರ್ಗದಿಂದ ಹೊನ್ನವಳ್ಳಿಗೆ ಒಂದು ರಸ್ತೆ ಹಾಕಬೇಕೆಂಬ 1906ನೆ ಇಸವಿಯ ದಸರಾ ಪ್ರಜಾಪ್ರತಿನಿಧಿ ಸಭೆಯ 407ನೆ ವಿಷಯವನ್ನು ಡಿಸ್ಟ್ರಿಕ್ಟು ಬೋರ್ಡಿನವರ ತೀರ್ಮಾನನಿಶಿ ರಿಪೋರ್ಟು ಮಾಡತಕ್ಕ ಬಗ್ಯೆ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯುವರಿಂದ ತಲ್ಪಿದ 2—4—07ರ ಮುರ್ಸ್ಸಲಾ 9081—ಎಲ್. ಬಿ. 224—06—3ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ರಸ್ತೆಯಿಂದ ಈ ಡಿಸ್ಟ್ರಿಕ್ಟಿಗೆ ಉಂಟಾಗಬಹುದಾದ ಪ್ರಯೋಜನಾಂಶವನ್ನು ಕುರಿತು ಬೋರ್ಡಿನವರು ಆಲೋಚಿಸಿದ್ದರಲ್ಲಿ ಹೊನ್ನವಳ್ಳಿಯಿಂದ ಹೊಸದುರ್ಗಕ್ಕೆ ಹಾಕಬೇಕೆಂಬ ರಸ್ತೆಯು ಸದ್ಯಕ್ಕೆ ಅನಾವಶ್ಯಕವೆಂತ ತೀರ್ಮಾನಿಸಲಾಯಿತು.

IV. ಸಂತೆಗಳಲ್ಲಿ ಸುಂಕ ವಸೂಲ್ಮಾಡುವದಕ್ಕೋಸ್ಕರ ಸಂತೆಗಳಲ್ಲಿನ ಅಂಗಡಿಗಳನ್ನು ದರ್ಜಾವಾರಾಗಿ ವಿಂಗಡಿಸುವದು ತೊಂದರೆಗೆ ಅವಕಾಶಕೊಡುತ್ತೆಂತಲೂ ಇತರ ಕಡೆ ಸಂತೆಗಳಲ್ಲಿ ಹಾಲಿ ವಸೂಲ್ಮಾಡುವ ಸುಂಕದ ದರಗಳ ಪೈಕಿ ಅಜಮಾಯಿಷಿ ತರ್ಕಾಗಿ ಯಾವ ದರದಲ್ಲಿ ಸುಂಕ ವಸೂಲ್ಮಾಡುವದು ಬೋರ್ಡಿನವರಿಗೆ ಸಮರ್ಪಕವಾಗಿ ತೋರುತ್ತೆಂಬ ಬಗ್ಯೂ ಮತ್ತು ಈ ಸುಂಕ ವಸೂಲ್ಮಾಡುವದರಿಂದ ಸಂತೆಗೆ ಬರತಕ್ಕ ಜನಗಳಿಗೆ ಏನು ಅನುಕೂಲ ಮಾಡಲು ಉದ್ದೇಶಿಸಿರುತ್ತೆಂಬ ಬಗ್ಯೂ ಬೋರ್ಡಿನವರ ಅಭಿಪ್ರಾಯನಿಶಿ ರಿಪೋರ್ಟು ಮಾಡಬೇಕೆಂತ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯುವರಿಂದ ತಲ್ಪಿದ 9—4—07ನೆ ಮುರ್ಸ್ಸಲಾ 9321—ಎಲ್. ಬಿ. 402-05—8ನೆ ನಂಬರು ಡಾಕೆಟ್ಟು ಓದಲಾಯಿತು.

ತೀರ್ಮಾನ:—ಸಂತೆಗಳಲ್ಲಿನ ಅಂಗಡಿಗಳ ಮೇಲೆ ತೆರಿಗೆ ವಸೂಲ್ಮಾಡಬೇಕೆಂಬ ವಿಚಾರವನ್ನು ಬೋರ್ಡಿನವರು ಪುನರಾಲೋಚಿಸುವದರಲ್ಲಿ ಪ್ರಸಕ್ತವಾದ ತೆರಿಗೆ ವಸೂಲ್ಮಾಡುವ ಅಂಶವನ್ನು ಸದ್ಯಕ್ಕೆ ಮುಲ್ತವಿ ಮಾಡಬೇಕೆಂತ ಅಭಿಪ್ರಾಯ ಪಟ್ಟಿರುತ್ತಾರೆ.

V. ಕೆಲ್ಲಾಪುರದ ಸಮೀಪದಲ್ಲಿ ಕಾವೇರಿ ನದಿಗೆ ಬೀಳುವ ಹಳ್ಳಕ್ಕೆ ಸೇತುವೆ ಕಟ್ಟುವದಕ್ಕೋಸ್ಕರ ತಗಲುವ ಖರ್ಚು ಪೈಕಿ ಮೂರರಲ್ಲಿ ಒಂದು ಭಾಗವನ್ನಾದರೂ ಹಾಸನ ಡಿಸ್ಟ್ರಿಕ್ಟು ಬೋರ್ಡಿನವರು ಕೊಡಲು ಒಪ್ಪದೆ ಇದ್ದಲ್ಲಿ ಪ್ರಸಕ್ತವಾದ ಕೆಲಸ ನಡೆಸಲು ಅವಕಾಶವಿಲ್ಲವೆಂಬ ಬಗ್ಯೆ ಗೌರ್ನಮೆಂಟಿನಿಂದ ತಲ್ಪಿದ 24—4—1907ನೆ ಮುರ್ಸ್ಸಲಾ 9779—ಎಲ್. ಬಿ. (54-05) 10ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ:—ಸದರಿ ಹಳ್ಳದ ಮೇಲೆ ಹೋಗಬೇಕೆಂಬ ದಾರಿ ತಪ್ಪಿಸಿ ಬೂದನೂರು ಕೆರೆ ಏರಿ ಮೇಲೆ ದಾರಿ ತಿರಿಗಿಸಿದಲ್ಲಿ ಹಳ್ಳವನ್ನು ಬಿಟ್ಟುಬಿಡಬಹುದೆಂತ ಎಗ್ಜಿಕ್ಯೂಟಿವ ಇಂಜನಿಯರ್ ಸಾಹೇಬರವರು ತಿಳಿಸಿದ್ದರ ಮೇಲೆ ಈ ವಿಚಾರವನ್ನು ಕ್ರಮವಾಗಿ ಅಜಮಾಯಿಷಿಯಿಂದ ಅಭಿಪ್ರಾಯನಿಶಿ ತಿಳಿಸಲು ಎಗ್ಜಿಕ್ಯೂಟಿವ ಇಂಜನಿಯರ್ ಸಾಹೇಬರವರಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

VI. ಕೆಳಗೆ ನಮೂದಿರುವವುಗಳನ್ನು ಬೋರ್ಡಿನವರ ತಿಳುವಳಿಕೆಗೋಸ್ಕರ ಓದಲಾಯಿತು.

(1) ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್‌ವೇಳೆ ಅಮಲ್ದಾರುಗಳನ್ನು ಮತ್ತು ಡೆಪ್ಯುಟಿ ಅಮಲ್ದಾರರನ್ನು ಕರಿಸಿಕೊಳ್ಳಬಹುದೆಂಬ ಬಗ್ಯೆ ಗೌರ್ನಮೆಂಟಿನಿಂದ ತಲ್ಪಿದ 6—3—07ನೆ ಮುರ್ಸ್ಸಲಾ 7791-800—ಎಲ್. ಬಿ. 170-06—1ನೆ ನಂಬರು ಪ್ರೊಸೀಡಿಂಗ್ಸು.

(2) ಗ್ರಾಮ ಪಾಕೀಜಾ ಸ್ಥಿತಿಯನ್ನು ಬಹಳ ಒಳ್ಳೇಸ್ಥಿತಿಯಲ್ಲಿಟ್ಟುಕೊಂಡು ಇರುವ ಗ್ರಾಮಗಳ ಬಾಬತು ಪಟೇಲರುಗಳಿಗೆ ಅಜಮಾಯಿಷಿ ತರೀಖು ಬಹುಮಾನ ಕೊಡಬೇಕೆಂಬ ವಿಚಾರದಲ್ಲಿ ಗೌವರ್ನಮೆಂಟಿನಿಂದ ತಲ್ಪಿದ 6—3—07ರ ಮುರ್ಸ್ಸಲಾ 7626-36—ಎಲ್. ಬಿ. 275-05—13ನೆ ನಂಬರು ಪ್ರೊಸೀಡಿಂಗ್ಸು.

(3) ಅರಸೀಕೆರೆ ತಾಲ್ಲೂಕು ತಿರುಪತಿಯಲ್ಲಿ ಭಾವಿ ತೆಗೆಯಬೇಕಾದ ಬಗ್ಯೆ 600 ರೂಪಾಯಿ ಬಾಬತು ಅಂದಾಜ ಮಂಜೂರ್ಮಾಡಿ ಜಾತ್ರೆವೇಳೆ ಇಡುವ ಅಂಗಡಿಗಳ ಮೇಲೆ ಸುಂಕ ವಸೂಲ್ಮಾಡುವ ವಿಚಾರದಲ್ಲಿ ಕೆಲವು ತಪಶೀಲ್ ಕೇಳಿ ತಲ್ಪಿರುವ 6—3—1903ರ ಮುರ್ಸ್ಸಂ 7648-50—ಎಲ್. ಬಿ. 309-06—2ನೆ ನಂಬರು ಪ್ರೊಸೀಡಿಂಗ್ಸ್.

(4) ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಮತ್ತು ರೂಲ್ಸು ಸಹ ಜಾರಿಗೆಬಂದೀಚೆಗೆ ಕೆಲಸವು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಕಛೇರಿಗಳಲ್ಲಿ ಹೆಚ್ಚಿರುವದು ಗಾರ್ವನ್ನಮೆಂಟಿನವರಿಗೆ ಕಂಡುಬಂದದ್ದರ ಮೇಲೆ ಪ್ರಸಕ್ತವಾದ ಕೆಲಸವನ್ನು ಮಾಡುವ ದಕ್ಕೋಸ್ಕರ 15 ರೂಪಾಯಿ ಮಾಹೆಯಾನ ತಲಬಿನ ಮೇಲೆ ಒಬ್ಬ ಗುಮಾಸ್ತನನ್ನು ಪ್ರತಿ ತಾಲ್ಲೂಕಿಗೂ ಮತ್ತು ಡಿಸ್ಟ್ರಿಕ್ಟಿಗೂ ಸಹ ಬರುವ ಜುಲೈ ಗುರ್ರೆ ಲಾಗಾಯಿತು ಸೇರಿಸಿಕೊಳ್ಳಬಹುದೆಂತ ಗಾರ್ವನ್ನಮೆಂಟಿನಿಂದ ತಲ್ಪಿದ 16—3—07ರ ಮುರ್ಸ್ಸಂ 8333-44—ಎಲ್. ಬಿ. 422-05—12ನೆ ನಂಬರು ಪ್ರೊಸೀಡಿಂಗ್ಸ್.

(5) ಮೂರುನೂರು ಮನೆಗಳಿಗಿಂತಲೂ ಯಾ ಸಾವಿರ ಪ್ರಜೆಗಳಿಗಿಂತ ಹೆಚ್ಚಾಗುಳ್ಳ ಗ್ರಾಮಗಳನ್ನು ಯೂನಿಯನ್ ಆಗಿ ಮಾಡಬಹುದೆಂಬ ಬಗ್ಯೆ ಗಾರ್ವನ್ನಮೆಂಟಿನಿಂದ ತಲ್ಪಿದ 16—3—1907ರ ಮುರ್ಸ್ಸಂ 8308-15—ಎಲ್. ಬಿ. 298-06—22ನೆ ನಂಬರು ಪ್ರೊಸೀಡಿಂಗ್ಸ್.

(6) ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿಗೆ ಬರುವ ಖಾಯಿಲೆ ಹೆಂಗಸರು ನಿಲ್ಲುವದಕ್ಕೆ ಅನುಕೂಲಿಸುವಂತೆ ಬಂದು ಬೇರೆ ಕೊಠಡಿ ಕಟ್ಟಬೇಕೆಂಬ ವಿಚಾರದಲ್ಲಿ ಎಲ್ಲಾ ಪ್ರೆಸಿಡೆಂಟರವರಿಂದ ತಲ್ಪಿದ ಜವಾಬನ್ನು ನೋಡಿ ವಿಲೆ ಇಡಿಸಿರುತ್ತೆಂಬ ಬಗ್ಯೆ ತಲ್ಪಿರುವ 18—3—07ನೆ ಮುರ್ಸ್ಸಂ 8469-79—ಮ. 243-05—1ನೆ ನಂಬರು ಪ್ರೊಸೀಡಿಂಗ್ಸ್.

(7) ಹಾಲ್‌ಸಾಲ್, ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನಲ್ಲಿ ದಾಖಲಾಗಿರುವ X ಮಿಸಲೇನಿಯಸ್ ಹೆಡ್ಡಿನಲ್ಲಿ ಕಲರಾ ಮತ್ತು ಪ್ಲೇಗ್ ಖರ್ಚು ಎಂಬದಕ್ಕೋಸ್ಕರ ಇಟ್ಟಿರುವ ಮೊಬಲಗು ಪೈಕಿ ಟ್ಯೂಬ್ ವೆಲ್ಸ್‌ಗೋಸ್ಕರ 150 ರೂಪಾಯಿಗಳನ್ನು ಮಂಜೂರ್ಮಾಡಿರುವ ಬಗ್ಯೆ ಗವರ್ನ್ನಮೆಂಟಿನಿಂದ ತಲಪಿದ 15—4—1907ನೆ ಮುರ್ಸ್ಸಂ 9481-2—ಎಲ್. ಬಿ. 395-06—2ನೆ ನಂಬರು ಪ್ರೊಸೀಡಿಂಗ್ಸ್.

(8) ಡಿಸ್ಟ್ರಿಕ್ಟು ಬೋರ್ಡಿನವರ ಸ್ವಾಧೀನಕ್ಕೆ ವರ್ಗಾಯಿಸಿದ ಅರಸೀಕೆರೆ ತಾಲ್ಲೂಕು ಗಂಡಸಿ ಛತ್ರವನ್ನು ರಿಪೇರಿ ಮಾಡುವದಕ್ಕೋಸ್ಕರ 120 ರೂಪಾಯಿ ಬಾಬತು ಅಂದಾಜವನ್ನು ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯದಂತೆ ಮಂಜೂರ್ಮಾಡಿರುತ್ತೆಂಬ ಬಗ್ಯೆ ಗವರ್ನ್ನಮೆಂಟಿನವರ 1—5—1907ರ ಮುರ್ಸ್ಸಂ 10001-3—L. B. (377-06)—3ನೆ ನಂಬರು ಪ್ರೊಸೀಡಿಂಗ್ಸ್.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

VII. ಬೇಲೂರು ತಾಲ್ಲೂಕು ರಾಜನಸಿರಿಯೂರಲ್ಲಿ ಭಾವಿ ತೆಗದುದಕ್ಕೋಸ್ಕರ ತಗಲಿದ 216 ರೂಪಾಯಿಗಳನ್ನು ನೀಂಕಲಾ ಕಾಂಗಾರಿಗಳಿಗೋಸ್ಕರ ದಾಖಲಾಗಿರುವ ಮೊಬಲಗು ಪೈಕಿ ಕೊಟ್ಟಿರುವದನ್ನು ಮಂಜೂರ್ಮಾಡಿರುವದಾಗಿಯೂ ಪ್ರಸಕ್ತವಾದ ಗ್ರಾಮದಲ್ಲಿ ನೀರು ಸರಬರಾಯಿಗೋಸ್ಕರ ಅವಶ್ಯಕವಾದ ಏರ್ಪಾಡು ಮಾಡುವದು ಡಿಸ್ಟ್ರಿಕ್ಟು ಬೋರ್ಡಿನವರ ಕರ್ತವ್ಯವಾಗಿರುವದರಿಂದ ಹಾಲ್ ಸಾಲ್ ಮತ್ತು ಬರುವ ಸಾಲಿ ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಯಾವ ಕೆಲಸಗಳನ್ನು ಬಿಟ್ಟು ಈ ಕೆಲಸ ಮಾಡಿಸಬೇಕೆಂಬ ಬಗ್ಯೆ ರಿಪೋರ್ಟು ಮಾಡಬೇಕೆಂತಲೂ ಹೊಸ ಭಾವಿ ತೆಗಿಸುವದಕ್ಕೆ ಮುಂಚೆ ಅಜಮಾಯಿಷಿ ತರೀಖಾಗಿ ಭಾವಿ ತೆಗಿಸಬೇಕೆಂದು ವಗೈರೆ ಗವರ್ನ್ನಮೆಂಟಿನಿಂದ ತಲಪಿದ 1—5—1907ರ ಮುರ್ಸ್ಸಂ 10015-16—ಎಲ್. ಬಿ. (306-06)—2ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

VIII. ಹಾಸನ ಡಿಸ್ಟ್ರಿಕ್ಟು ಬೋರ್ಡ್ ಬಾಬತು 1907—08ನೆ ಸಾಲಿನ ಬಡ್ಜೆಟ್ ಎಸ್ಟಿಮೇಟ್ಸ್ ಮಂಜೂರ್ಮಾಡಿರುತ್ತೆಂಬ ಬಗ್ಯೆ ಗವರ್ನ್ನಮೆಂಟಿನಿಂದ ತಲಪಿದ 27—4—1907ರ ಮುರ್ಸ್ಸಂ 9896-906—ಎಲ್. ಬಿ. (351-06)—2ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ:—ಕೇಳಿ ವಿಲೆ ಇಡಿಸಲಾಯಿತು.

IX. ಹಾರನಹಳ್ಳಿ ಮತ್ತು ಗ್ರಾಮ ಯೂನಿಯನ್‌ಗಳಲ್ಲಿ ಅಜಮಾಯಿಷಿ ತರೀಖು 2 ವರುಷಗಳವರೆಗೆ ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂಬ ಬಗ್ಯೆ ಹಿಂದೆ ಗವರ್ನ್ನಮೆಂಟಿನಿಂದ ತಲಪಿದ 16—2—05ರ ಮುರ್ಸ್ಸಂ 7101-3—ಎಲ್. ಬಿ. (344-96)ನೆ ನಂಬರು ಪ್ರೊಸೀಡಿಂಗ್ಸ್ ಪುನಹ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಎರಡು ವೈದ್ಯಶಾಲೆಗಳು ಜನಗಳಿಗೆ ಬಹಳ ಪ್ರಯೋಜನಕರವಾಗಿಯೂ ಅತ್ಯಂತ ಸಹಾಯಕಾರಿಯಾಗಿರುವದರಿಂದ ಇವುಗಳನ್ನು ಖಾಯಂ ಮಾಡತಕ್ಕ ಬಗ್ಯೆ ಗವರ್ನ್ನಮೆಂಟಿಗೆ ಬರೆಸಬೇಕೆಂತ ತೀರ್ಮಾನಿಸಲಾಯಿತು.

X. ಅರಸೀಕೆರೆ ತಾಲ್ಲೂಕು ನಾಗತಿಹಳ್ಳಿ ತೆಗೆದಿರುವ ಭಾವಿಗೋಸ್ಕರ 696 ರೂಪಾಯಿಗಳ ಬಾಬತು ರಿವೈಜ್ಡ್ ಅಂದಾಜವನ್ನು ಮಂಜೂರ್ಮಾಡಬೇಕೆಂತ ತಾಲ್ಲೂಕು ಬೋರ್ಡು ತೀರ್ಮಾನಿಸಿ ತಲಪಿದ ಅಮಲ್ದಾರರ 15—2—1907ರ ಮುರ್ಸ್ಸಂ 236—1899ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ:—ಗವರ್ನ್ನಮೆಂಟು ಮಂಜೂರಿ ಬಗ್ಯೆ ಅಂದಾಜ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

XI. ಹಾಸನ-ಅರಸೀಕೆರೆ ರಸ್ತೆ ಮೇಲೆ ದುದ್ದದ ಬಳಿ ಇಟ್ಟಿರುವ ಟೋಲ್ ಗೇಟಿನಲ್ಲಿ 1907—08ನೆ ಸಾಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜು ಮಾಡಬೇಕೆಂಬ ಡಿಸ್ಟ್ರಿಕ್ಟು ಬೋರ್ಡಿನವರ ಅಭಿಪ್ರಾಯವನ್ನು ಅಂಗೀಕರಿಸಿ ಪ್ರಸಕ್ತವಾದ

ಟೋಲ್ ಗೇಟುಗಳಲ್ಲಿ ಸನ್ 1906ನೆ ಮೇ ಮಾಹೆಯಿಂದ ಇದುವರಿಗೆ ಆದ ವಸೂಲಿ, ಖರ್ಚು ಮತ್ತು ಹರಾಜಿನಲ್ಲಿ ಬಂದ ಛಡದರ ಖಾಸ್ತು ಮೊಬಲಗು ಸಹ ನಮೂದಿನಿಂದ ರಿಪೋರ್ಟು ಮಾಡಬೇಕೆಂಬ ಗವರ್ನಮೆಂಟನವರ 8—4—07ರ ಮರ್ಕ್ಯುಂ 9267-8—ಎಲ್. ಬಿ. 368-06—2ನೆ ನಂಬರು ಪ್ರೊಸೀಡಿಂಗ್ಸ ಓದಲಾಯಿತು. ಪ್ರಸಕ್ತವಾದ ಟೋಲ್ ಗೇಟ್ ಹರಾಜು ಬಾಬತು ಇಸ್ತಿಹಾರ್ನಾಮೆಯನ್ನು ಸಹ ಓದಲಾಯಿತು.

ತೀರ್ಮಾನ:—ಬೋರ್ಡಿನವರು ಕೇಳಿ ಅನುಮೋದಿಸಿದ ಹರಾಜು ಇಸ್ತಿಹಾರ್ನಾಮೆಯನ್ನು ಗೆಜೆಟ್ಟಿನಲ್ಲಿ ಛಾಯಿಷ್ ಬಗ್ಯೆ ಕಳುಹಿಸಿ ಕಂಟ್ರಾಕ್ಟನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕೆಂಬ ಬಗ್ಯೆ ತೀರ್ಮಾನಿಸಲಾಯಿತು.

XII. ಶ್ರವಣಬೆಳಗೊಳದಲ್ಲಿ ಕಟ್ಟಬೇಕೆಂಬ ಬಾಕ್ಸ ಚಿರಂಡಿಗೋಸ್ಕರ ಎಗ್ಸಿಕ್ಯೂಟಿವ ಇಂಜನಿಯರ ಸಾಹೇಬರವರಿಂದ ತಲಪಿದ ದುಸರೆ ಅಂದಾಜ ಮತ್ತು ಡಿಸೈನ ಸಹ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಅಂದಾಜ ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XIII. ಹಾಲಸಾಲ್ ಡಿಸ್ಟ್ರಿಕ್ಟ ಫಂಡ್ ಬಜೆಟ್ಟಿನಲ್ಲಿ ದಾಖಲಾಗಿರುವ ಇದರಡಿ ನಮೂದಿಸಿರುವ ಕಾಂಗಾರಿಗಳ ಬಾಬತು ಅಂದಾಜಾ ಓದಲಾಯಿತು:—

ತಾಲ್ಲೂಕು ಮತ್ತು ಕೆಲಸದ ಹೆಸರು.	ಅಂದಾಜಾ ಮೊಬಲಗು.		
	ರೂ.	ಅ.	ಪೈ.
ಹಾಸನ ತಾಲ್ಲೂಕು.			
1. ಹೊನ್ನಾವಾರದಲ್ಲಿ ಕಟ್ಟಬೇಕೆಂಬ ದೊಡ್ಡಿ ...	360	0	0
2. ಚಿಕ್ಕಮಲ್ಲೇನಹಳ್ಳಿ ಭಾವಿ ಆಳಪಡಿಸತಕ್ಕ ಬಗ್ಯೆ ...	100	0	0
3. ಚಿಕ್ಕಡೂರು ಭಾವಿ ತೆಗೆಯುವದಕ್ಕೆ ...	400	0	0
4. ಗ್ರಾಮದಲ್ಲಿ ಚಿರಂಡಿ ರಿಪೇರಿ ...	50	0	0
5. ಗ್ರಾಮದಲ್ಲಿ ರಸ್ತೆ ರಿಪೇರಿ ...	75	0	0
6. ಪುರದ ಭಾವಿ ಆಳಪಡಿಸುವದಕ್ಕೋಸ್ಕರ ...	60	0	0
ಮಂಜರಾಬಾದು ತಾಲ್ಲೂಕು.			
1. ಸಕಲೇಶಪುರದ ಮುಸಾಫರಖಾನಾಕ್ಕೆ ಮರ್ಸೂ ತಟ್ಟಿ ...	32	0	0
2. ಹೊಸಕೋಟೆ ದೊಡ್ಡಿ ಡಿಟ್ಟೋ ...	8	0	0
3. ಡಿಟ್ಟೋ ಮುಸಾಫರಖಾನೆಗೆ ಡಿಟ್ಟೋ ...	18	0	0
4. ಹಾನಬಾಳು ದೊಡ್ಡಿ ಡಿಟ್ಟೋ ...	7	0	0
5. ಡಿಟ್ಟೋ ಮುಸಾಫರಖಾನೆಗೆ ಡಿಟ್ಟೋ ...	15	0	0
6. ಮಾರನಹಳ್ಳಿ ಮುಸಾಫರಖಾನೆ ಡಿಟ್ಟೋ ...	14	0	0
7. ಶುಕ್ರವಾರ ಸಂತೆ ಛತ್ರಕ್ಕೆ ಡಿಟ್ಟೋ ...	9	0	0
8. ಡಿಟ್ಟೋ ದೊಡ್ಡಿಗೆ ಡಿಟ್ಟೋ ...	9	0	0
9. ಹೆತ್ತೂರು ಮುಸಾಫರಖಾನೆ ಡಿಟ್ಟೋ ...	44	0	0
10. ಯಸಳೂರುಪೇಟೆ ದೊಡ್ಡಿ ಡಿಟ್ಟೋ ...	6	0	0
11. ಬೆಳಗೋಡು ದೊಡ್ಡಿ ಡಿಟ್ಟೋ ...	10	0	0

ತೀರ್ಮಾನ:—ಪ್ರಸಕ್ತವಾದ ಅಂದಾಜಗಳನ್ನು ಮಂಜೂರ್ಮಾಡಬಹುದೆಂತ ತೀರ್ಮಾನಿಸಲಾಯಿತು.

XIV. ಮಂಜರಾಬಾದು ತಾಲ್ಲೂಕು ಕುಡದಲೆಯಲ್ಲಿರುವ ದೊಡ್ಡಿಯನ್ನು ವಜಾಮಾಡಿ ಸುತ್ತಮುತ್ತಲಿರುವ ಕಾಫಿ ತೋಟಗಳಿಗೆ ಮಧ್ಯರಾಷ್ಟ್ರವಾಗಿರುವ ಮುತ್ತಿಗೆ ಗ್ರಾಮದಲ್ಲಿ ಸ್ಥಾಪಿಸಬೇಕೆಂಬ ಮಂಜರಾಬಾದು ತಾಲ್ಲೂಕು ಬೋರ್ಡಿನವರ ತೀರ್ಮಾನಸಹಿ ಸೀನಿಯರ ಅಸಿಸ್ಟೆಂಟ ಕಮಿಷನರ ಸಾಹೇಬರವರಿಂದ ತಲಪಿದ 10—5—07ನೆ ಮರ್ಕ್ಯು 747ನೆ ನಂಬರು ಯಾದಿ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ವರ್ಗಾವರ್ಗಿಯನ್ನು ಮಂಜೂರ್ಮಾಡಿರುವದಾಗಿ ತೀರ್ಮಾನಿಸಲಾಯಿತು.

XV. ಬೇಲೂರು ತಾಲ್ಲೂಕು ತೊಳಲು ಪೇಟೆಯಲ್ಲಿ ಒಂದು ಸಂತೆ ನಡೆಸಬೇಕೆಂಬ ಬಗ್ಯೆ ತಾಲ್ಲೂಕು ಬೋರ್ಡಿನವರ ತೀರ್ಮಾನಸಹಿ ರೆವಿನ್ಯೂ ಸಬ್ ಡಿವಿಜನ ಆಫಿಸರವರಿಂದ ತಲ್ಪಿದ 10—5—07ನೆ ಮರ್ಕ್ಯುಂ 740ನೆ ನಂಬರ ಯಾದಿ ಓದಲಾಯಿತು.

ತೀರ್ಮಾನ:—ಹಂಗಾಮಿಯಾಗಿ ಒಂದು ವರುಷದವರೆಗೆ ತೊಳಲುಪೇಟೆಯಲ್ಲಿ ಸಂತೆ ನಡೆಸಬಹುದೆಂತ ತೀರ್ಮಾನಿಸಲಾಯಿತು.

XVI. ಹಾಲಸಾಲ್ ಡಿಸ್ಟ್ರಿಕ್ಟ ಫಂಡ್ ಬಜೆಟ್ಟಿನಲ್ಲಿ ಸಕ್ಲೇಶಪುರ-ಆರೇಹಳ್ಳಿ-ಚೀಕನಹಳ್ಳಿ ರಸ್ತೆ ಕಾಂಗಾರಿಗೋಸ್ಕರ ದಾಖಲಾಗಿರುವ 2,000 ರೂಪಾಯಿ ಪೈಕಿ ಶಿಲ್ಕು ನಿಂತಿರುವ ಹಣದಲ್ಲಿ ಸದರಿ ರಸ್ತೆ ಮೇಲೆ ಕಟ್ಟಬೇಕೆಂಬ ಮೋಹರಿಗಳಿಗೋಸ್ಕರ 970 ರೂಪಾಯಿ ಬಾಬತು ಅಂದಾಜವನ್ನು ಎಗ್ಸಿಕ್ಯೂಟಿವ ಇಂಜನಿಯರ ಸಾಹೇಬರವರಿಂದ ತಲ್ಪಿದ 7—5—07ರ ಮರ್ಕ್ಯುಂ 1333—214ನೆ ನಂಬರು ಡಾಕೆಟ್ಟು ಓದಲಾಯಿತು.

ತೀರ್ಮಾನ.—ಪ್ರಸಕ್ತವಾದ ಅಂದಾಜ ಮಂಜೂರಾಗಬಹುದಾಗಿ ತೀರ್ಮಾನಿಸಲಾಯಿತು.

XVII. ಬರುವ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗನ್ನು 1907ನೆ ಇಸವಿ ಆಗಸ್ಟು 24ಕ್ಕೆ ನಡೆಸಬೇಕೆಂತ ತೀರ್ಮಾನಿಸಲಾಯಿತು.

ಟಿ. ಧರ್ಮರಾಜಚೆಟ್ಟಿ,

ಮೈಸೂರು ಗವರ್ರ್ನಮೆಂಟ್ ಸೆಂಟ್ರಲ್‌ಪ್ರೆಸ್.

ನೋಟೀಸ್.

ತಾರೀಖು 28ನೇ ಮೇ 1907.

ಬೆಂಗಳೂರಲ್ಲಿರುವ ಮೈಸೂರು ಗವರ್ರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರ್ರಿಂಟೆಂಡೆಂಟರವರು ಬಾಯಂ ತಲಬಿನ ಮೇಲೆ ಯಾ ಪೀಸ್ ವರ್‌ಕ್ಕಿನ ಮೇಲೆ, ಪ್ರೂಫ್ ರೀಡರ್‌ಗಳಾಗಿಯೂ, ಕಂಪಾಜಿಟರ್‌ಗಳಾಗಿಯೂ ನೌಕರಿಗೋಸ್ಕರ, ಬೆಂಗಳೂರು ಗವರ್ರ್ನಮೆಂಟ್ ಪ್ರೆಸ್ಸಿನಲ್ಲಿ ಕೆಲಸವನ್ನು ಕಲಿಯುವುದಕ್ಕೆ, ಮೈಸೂರು ದೇಶೀಯ ಜನಗಳಿಂದ ಅಪ್ಲಿಕೇಷನ್, ಯಾನೆ ದರಖಾಸ್ತುಗಳನ್ನು 1907ನೇ ಜೂನ್ 30ನೇ ತಾರೀಖಿನವರೆಗೆ, ತೆಗೆದುಕೊಳ್ಳುತ್ತಾರೆ.

ದರಖಾಸ್ತುದಾರರು ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಮತ್ತು ಗೆಜೆಟೆಡ್ ಆಫೀಸರರಿಂದಾಗಲಿ ಯಾ ಮಾತುಪರರಾದ ಇತರ ದೊಡ್ಡ ಮನುಷ್ಯರಿಂದಾಗಲಿ ಪಡೆದ ಯೋಗ್ಯತಾ ಪತ್ರಿಕೆಯೊಡನೆ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

ದರಖಾಸ್ತುದಾರರಲ್ಲಿ ಕಲ್ಪಿತವಾಗಿ ಕೆಲವರು ಚುನಾಯಿಸಲ್ಪಡುವರು. ಇವರು ಪ್ರಥಮತಃ ಆರು ತಿಂಗಳುವರಿಗೆ ಪ್ರೂಫ್ ಬ್ರಾಂಚಿನಲ್ಲಿ ಕಾಪೀ ಹೋಲ್ಡರ್‌ಗಳಾಗಿ ಯಾ ರೀಡರ್‌ಗಳಾಗಿ ನೇಮಿಸಲ್ಪಡುವರು. ತರುವಾಯ, ಎರಡೂವರೆ ವರುಷಗಳ ವರಿವಿಗೆ, ಯಾವ ಕೆಲಸಕ್ಕೆ ಅರ್ಹರಾಗುವರೋ ಆ ಇಲಾಖೆಗೆ ದಾಖಲ್ಮಾಡಲ್ಪಡುವರು. ಪ್ರೂಫ್ ಬ್ರಾಂಚಿಗೆ ತಕ್ಕವರಾಗಿಯೂ ಅಲ್ಲಿ ಕೆಲಸಮಾಡಲಪೇಕ್ಷೆಯುಳ್ಳವರಾಗಿಯೂ ಇರುವ ದರಖಾಸ್ತುದಾರರು ರೀಡಿಂಗ್ ಕೆಲಸಕ್ಕೆ ತಕ್ಕವರೆಂದು ಎಣಿಸಲಿಕ್ಕೆ ಕನಿಷ್ಠಪಕ್ಷ ಒಂದು ವರುಷವಾದರೂ ಕಂಪಾಜಿಟರ್ರಾಗಿ ಕೆಲಸ ಮಾಡತಕ್ಕದ್ದು.

ಈ ಎರಡೂವರೆ ವರ್ಷಗಳಲ್ಲಿ ಯೋಗ್ಯರಾದ ರೀಡರ್‌ಗಳು ಇದರಡೀ ನಮೂದಿಸುವಂತೆ ತಲಬನ್ನು ಪಡೆಯುವರು.

ಮೊದಲು ಆರು ತಿಂಗಳುಗಳಲ್ಲಿ ಮಾಹೇಯಾನಾ 3 ರೂಪಾಯಿಗಳು. ಎರಡನೇ ಆರು ತಿಂಗಳುಗಳಲ್ಲಿ 4 ರೂಪಾಯಿಗಳು ಮೂರನೇ ಆರು ತಿಂಗಳುಗಳಲ್ಲಿ 5 ರೂಪಾಯಿಗಳು ಆಖೈರ್ ಹನ್ನೆರಡು ತಿಂಗಳಲ್ಲಿ 6 ರೂಪಾಯಿಗಳು. ಕಂಪಾಜಿಟರ್‌ಗಳು ಮೇಲ್ಕಂಡ ಕಾಲದಲ್ಲಿ ಕ್ರಮವಾಗಿ 2—4—0, 3—0—0 3—12—0 ಮತ್ತು 4—10—0 ಮೇರೆಗೆ ತಲಬನ್ನು ಪಡೆಯುವರು. ಮೇಲೆ ಹೇಳಲ್ಪಟ್ಟ ಕಾಲದಲ್ಲಿ ಎಲಿಮೆಂಟರಿ ಆಫೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ತೃಪ್ತಿಕರವಾದ ನಡತೆಯುಳ್ಳವರು ಮಾತ್ರ ಕಾಲಕಾಲಕ್ಕೆ ಬಡ್ತಿಗಳನ್ನು ಹೊಂದುವರು. ಎರಡಾವೃತ್ತಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಕೆಲಸದಿಂದ ನಿವೃತ್ತಿ ಮಾಡಲ್ಪಡುವರು.

ಮೂರು ವರುಷಗಳ ನೌಕರಿಯು ಪೂರ್ತಿಯಾದಮೇಲೆ ಯಾವ ಕೆಲಸದಲ್ಲಿ ಯೋಗ್ಯತೆಯನ್ನು ಪಡೆದಿರುವರೋ, ಅಂಥಾ ಕೆಲಸವುಳ್ಳ ಬ್ರಾಂಚಿನಲ್ಲಿ ನಿಯಮಿಸಲ್ಪಡುವರು, ಅನಂತರ ಅವರ ನೌಕರಿಯು ಗವರ್ರ್ನಮೆಂಟ್ ರೆಗ್ಯುಲೇಷನಿಗನುಸಾರವಾಗಿ ಪೆನ್ಷನಿಗೆ ತಕ್ಕದ್ದೆಂದು ಎಣಿಸಲ್ಪಡುವುದು. ಮತ್ತು ಪೀಸ್ ವರ್ಕ್ ಕಂಪಾಜಿಟರ್‌ಗಳ ವಿಷಯದಲ್ಲಿ ಅವರ ಶಕ್ತ್ಯಾನುಗುಣವಾಗಿ ಇತರ ವಿಷಯದಲ್ಲಿ ಆಗುವ ಕಾಲಾನುಸಾರವಾದ ರೂಲ್ಸ್‌ಗಳ ಪ್ರಕಾರ ಸಂಬಳವು ಆಗುವುದು.

ಪ್ರೊಬೇಷನ್ ಕಾಲವು ಪೂರೈಸಿದ ನಂತರ ಸೂಪರ್ರಿಂಟೆಂಡೆಂಟರವರ ಮಂಜೂರಾತಿಗೊಳಪಟ್ಟು, ಗವರ್ರ್ನಮೆಂಟ್ ಪ್ರೆಸ್ಸಿನಲ್ಲಿ ಮೂರು ವರುಷಗಳ ಕಾಲ ನೌಕರಿ ಮಾಡುತ್ತೇವೆಂಬದಾಗಿ ಕರಾರ್‌ಬರೆದು ಸೈನ್ ಮಾಡಿ ಕೊಡತಕ್ಕದ್ದು; ಅಥವಾ ಪ್ರೊಬೇಷನ್ ಕಾಲದಲ್ಲಿ ಪಡೆದ ಹಣವನ್ನು ವಾಪಸ್ ಕೊಡಬೇಕು.

ದರಖಾಸ್ತುದಾರರು ತಮಗೆ ಕೆಲಸದಲ್ಲಿ ತಕ್ಕಮಟ್ಟಿಗೆ ಅನುಭವವುಂಟಾದಕೂಡಲೆ, ಬೆಂಗಳೂರು ಸೆಂಟರ್‌ನಲ್ಲಿ ಪ್ರತಿವರುಷ ನವೆಂಬರ್ ತಿಂಗಳಲ್ಲಿ ನಡೆಯುವ ಮದ್ರಾಸ್ ಗವರ್ರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಗೆ ಹೋಗುವ ಉದ್ದಿಶ್ಯ, ಪ್ರಾತಃಕಾಲ ಸಾಯಂಕಾಲದ ಕ್ಲಾಸಿಗೆ ಫೀ ಇಲ್ಲದೇನೆ ಹಾಜರಾಗಬಹುದು. ಈ ಪರೀಕ್ಷೆಯಲ್ಲಿ ಯೋಗ್ಯತಾಪತ್ರಿಕೆಯನ್ನು ಪಡೆದವರಿಗೆ ಪ್ರೆಸ್ಸಿನಲ್ಲಿ ಖಾಲಿಯಾಗುವ ದೊಡ್ಡ ನೌಕರಿಯು ಸೂಪರ್ರಿಂಟೆಂಡೆಂಟರವರ ಅನುಮತಿಯಿಂದ ಕೊಡಲ್ಪಡುವುದು.

ಸಿ. ಎಚ್. ಪಿಟ್ಸ್,
ಗವರ್ರ್ನಮೆಂಟ್ ಪ್ರೆಸ್ ಸೂಪರ್ರಿಂಟೆಂಡೆಂಟ್.

ನೋಟೀಸ್.

ಬೆಂಗಳೂರು ಡಿ॥ ಕರ್ಕಕರ್ಕಹಳ್ಳಿ ತಾಲ್ಲೂಕು ಕಸಬಾ ಪೇಟೆಯಲ್ಲಿರುವ ಹೊಸಮನೆ ಸಾಹುಕಾರ್ ಬೈಲ್‌ಬಸಪ್ಪ ಉರುಫ್ ಅಪ್ಪಣ್ಣ ಶೆಟ್ಟರ ಹೆಂಡತಿ ಬಸಮ್ಮನಾದ ನಾನು ಇದರಿಂದ ಕರ್ಕಕರ್ಕಹಳ್ಳಿ ತಾಲ್ಲೂಕು ಕಸಬಾ ಪೇಟೆಯಲ್ಲಿ ಇರುವ ಶೆಟ್ಟಿ ಕರಿಸಣ್ಣನವರ ಮಗ ಚನ್ನಬಸಪ್ಪನಿಗೂ ಮತ್ತು ಇತರ ಸರ್ವೆಸಮಸ್ತರಿಗೂ ತಿಳಿಯಪಡಿಸುವದೇನಂದರೆ:—

ನನ್ನ ಗಂಡ ಬೈಲ್‌ಬಸಪ್ಪ ಉರುಫ್ ಅಪ್ಪಣ್ಣ ಶೆಟ್ಟರು ಈಗ್ಯೆ ಸುಮಾರು ಹತ್ತು ತಿಂಗಳ ಕೆಳಗೆ ಮೃತರಾದರು. ಇವರ ಬಾಬತು ಸ್ಥಿರ ಚರ ಲೇವಾದೇವಿ ವಗೈರೆಯಾದ ಭಾರಿ ಆಸ್ತಿಗೆ ನನ್ನ ಶಿವಾಯಿ ಬ್ಯಾರೆ ವಾರಸ್ಸುದಾರರು ಯಾರೂ ಇರುವದಿಲ್ಲಾ. ವಿಲ್ಕಂಡ ಭಾರಿ ಅಡಳಿತವನ್ನು ನನ್ನ ತರಫು ಮ್ಯಾನೇಜ್ ಮಾಡುವದಕ್ಕಾಗಿ ಚನ್ನಪ್ಪನೆಂಬಾತನನ್ನು ನಾನು ನೇಮಿಸಿದ ತರುವಾಯ ನನ್ನ ಕಡೆಯಿಂದ ಒಂದು ಕರಾರನ್ನು ಅನೇಕವಿಧ ಬೋಧನೆಹೇಳಿ ಬರ್ಸಿಕೊಂಡವನು ನನ್ನ ಆಸ್ತಿಯನ್ನೆಲ್ಲಾ ಆಕ್ರಮಿಸಿಕೊಳ್ಳುವ ದುರಾಲೋಚನೆಯಿಂದ ಸ್ವೇಚ್ಛೆಯಾಗಿ ಅಡಳಿತನಡಿಸಿ ನಂಬಿಕೆದ್ರೋಹಾದಿ ಕೃತ್ಯಗಳನ್ನು ನನಿಗೆ ವಿರೋಧವಾಗಿ ನಡಿಸುತ್ತಾ ಬಂದಿರುವ ಪ್ರಯುಕ್ತ ಡಿಟೋಯವನ ಮೇಲೆ ಕ್ರಮ ಜರಿಗಿಸಲು ಅವಕಾಶವುಂಟಾಗಿರುತ್ತೆ. ಆದಕಾರಣ ಈ ಚೆನ್ನಪ್ಪನಿಗೆ ಇದುವರಿಗೆ ನಾನು ಒಪ್ಪಿ ನನ್ನ ಆಸ್ತಿಮೇಲೆ ಕೊಟ್ಟಿದ್ದ ಮ್ಯಾನೇಜ್‌ಮೆಂಟ್ ಅಧಿಕಾರವನ್ನು ತಾರೀಖು 17—6—1907ನೆ ರಿಜಿಸ್ಟ್ರು ಪತ್ರ ಮೂಲಕ ರದ್ದುಪಡಿಸಿದ್ದೇನೆಯಾಗಿ, ಇನ್ನು ಮುಂದೆ ನನ್ನ ಗಂಡ ಫವುತಿ ಅಪ್ಪಣ್ಣ ಶೆಟ್ಟರಿಗೆ ಕೊಡಬೇಕಾದ ಬಾಕಿದಾರುಗಳ್ಯಾರೂ ನನಿಗೆ ವಿನಹಾ ತಂತಮ್ಮ ಬಾಕಿಗಳನ್ನು ಸದರಿ ಚನ್ನಪ್ಪನಿಗೆ ಕೊಡಕೂಡದು. ಹಾಗೆ ಕೊಟ್ಟಲ್ಲಿ ಅದು ಮುಂಜೂರಾಗತಕ್ಕದ್ದಲ್ಲ ಮತ್ತು ಇನ್ಯಾವ ವಿಧವಾಗಿ ಸಮಾಧಾನ ಮಾಡಿಕೊಂಡಾಗ್ಯೂ ಊರ್ಜಿತವಾಗಲಾರದು. ಅಲ್ಲದೆ ನನ್ನ ಆಸ್ತೀ ಯಾವ ಭಾಗವನ್ನಾಗಲಿ ಡಿಟೋಯವನಿಂದ ಪಡೆಯಕೂಡದು. ಹಾಗೆ ಪಡೆದಪಕ್ಷದಲ್ಲಿ ನನ್ನ ಹಕ್ಕಿಗೆ ಯಾವನ್ಯೂನತೆಯೂ ಸಂಭವಿಸಲಾರದು ಎಂಬ ಸಂಗತಿ ಖಚಿತವಾಗಿ ಈ ನೋಟೀಸ್ ಮೂಲಕ ಸೂಚಿಸಿದೆ.

ತಾರೀಖು 19—6—1907. } ೦ ಈ ಬಳಿ ಗುರ್ತಿನ ರುಜು ಬಸಮ್ಮ ಹಾಕಿದ್ದಕ್ಕೆ ಕರ್ಕಕರ್ಕಹಳ್ಳಿ ಮಹಂತಿನ ಮಠದ ನಂಜುಂಡಶಾಸ್ತ್ರಿ ಬರಹ.

332

ಮೈಸೂರ ಗೆಜೆಟ್.

ೋ. 42 ಸರ್ಕಾರದಿಂದ ಪ್ರಸಿದ್ಧ ಆದ್ದು. ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ॥ 4, ಸನ್ 1907.

II ನೆ ಭಾಗ.

ಇಂಡಿಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 17ನೆ ಜೂನ್ 1907.

ಇದ[illegible] ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗೆ ಸರಕಾ[illegible]ಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ಇರತಕ್ಕ ತಂಗಡಿ, ಕಕ್ಕೆ ಚಕ್ಕೆಯನ್ನು 1907ನೆ [illegible] ತಾರೀಖು 1ರ ಲಾಗಾಯತು 1908ನೆ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕು [illegible]ರ್ ಮೈ[illegible]ರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ 1907ನೆ ಇಸವಿ ಜುಲೈ ತಾರೀಖು 15 [illegible]ಲ್ಲಿ ಬಹಿ[illegible]ವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ[illegible]ರುತ್ತೆ.

ತಾಲ್ಲೂಕುಗಳ ಹೆಸರು.

(1) ಮೈಸೂರು	(3) ಹೆಗ್ಗಡದೇವನಕೋಟೆ
(2) ಕೃಷ್ಣರಾಜಪೇಟೆ	(4) ಮಳವಳ್ಳಿ

[illegible]ರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇದಿವಸದಲ್ಲಿ ಹರಾಜು ಪೂರೈ[illegible] ಸದೇ [illegible]ವಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. [illegible]ಮೇಲೆ ನಮೂದಿಸಿರುವ ಹಕ್ಕು ಚಡ ದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮಿಷನ[illegible] [illegible]ರು ಮಂಜೂರಾ[illegible]ಗೆ ಒಳಪಟ್ಟದ್ದಾಗಿದೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂ[illegible] ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿದ್ದಾರೆ.

4. [illegible]ಕಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡೆದ ಏಜಂಟರ [illegible]ಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡು[illegible]ವದಕ್ಕೆ ಮ[illegible]ಂತವಾಗಿ ತನಿಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್[illegible]ನಲ್ಲದ ಇತರ ಡಿಪಾಜಿಟದಾರರ ಮೊಬಲಗನ್ನು ಹರಾಜ್ ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಚಡ ದರಖಾ[illegible]ಸ್ತುದಾರನು [illegible]ನ ದರಖಾಸ್ತು ಮಂಜೂರಾತಿಯನ್ನು ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಅ[illegible]ವನು ಮೊದ[illegible]ಇಟ್ಟು ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ[illegible]ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡ[illegible] ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫೀಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡ ಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗ್ಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದಕೂಡಲೆ ಕೊಡದೆ ಇದ್ದರೆ ಅದು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇಲೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖಿನಿಂದ ಲಾಗಾಯತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ ಡಿಪಾಜಿಟ್ ಹಣವನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1907ನೆ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಕಿಸ್ತು ಮೇರೆ ಅಂದರೆ, 1907ನೆ ಅಕ್ಟೋಬರ್ 1ನೆ ತಾರೀಖಿನಲ್ಲಿ ಒಂದನೆ ಕಿಸ್ತು, 190 ನೆ ಇಸವಿ ಜನವರಿ 1ನೆ ತಾರೀಖಿನಲ್ಲಿ ಎರಡನೆ ಕಿಸ್ತು ಮತ್ತು 1908ನೆ ಇಸವಿ ಮೇ 1ನೆ ತಾರೀಖಿನಲ್ಲಿ ಮೂರನೆ ಕಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವ ಮೇರೆ ಕಿಸ್ತಿನ ಹಣ ಪಾವತಿ ಮಾಡಲ್ಪಡದೆ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕೊಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.
2. ಇಜಾರೆದಾರನೇ ಆಗಲಿ ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕಮಿ ಕಂಟ್ರಾಕ್ಟದಾರನೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.
4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿದೆ.
5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣೆ ಮೊತ್ತತೋರಿಸುವ ತಪಶೀಲು ಲೆಖ್ಖವನ್ನು ಇಜಾರೆದಾರನು ಇಡಬೇಕು ಮತ್ತು ಅಂಥಾ ಲೆಖ್ಖನನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ ಅಮಲ್ದಾರ್ರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರೇ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.
6. ಸಾಗಿಸಿಕೊಂಡುಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಮಂಜೂರಾಮಾಡುವ ರೀತಿಯಲ್ಲಿ ಪ್ಯಾಸ್ ಪಡಿಯತಕ್ಕದ್ದು.
7. ದಾಸ್ತಾನ್ ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1908ನೆ ಇಸವಿ ಜೂನ್ ಆಖೈರ್ ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರವರಿಂದ ಹುಕುಂ ಆದಹಾಗೆ ಅದುವರೆಗೆ ಪಾವತಿಯಾದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ.

ಎಂ. ಜಿ. ರಾಮರಾವ್
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 30ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟು ಡಿಸ್ಟ್ರಿಕ್ಟ್ ಜಂಗಲಗಳು ಮತ್ತು ಎಲ್ಲಾ ಸರ್ಕಾರಿ ಬಂಜರು ಜಮೀನುಗಳಲ್ಲಿ ದೊರೆಯುವ ಫಾರೆಸ್ಟು ಪಸಾರೆ ಜೆನಸಿಗಳನ್ನು 1907—08ನೆ ಸಾಲಿಗೆ ಜಮಾಯಿಸಿ ತಗದುಕೊಂಡು ಹೋಗುವ ಹಕ್ಕನ್ನು ಮಂಜೂರಾತಿಗೆ ಒಳಪಟ್ಟು ಬಹಿರಂಗವಾಗಿ ತಾಲ್ಲೂಕುವಾರಾಗಿ

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಅಥವಾ ರೇಂಜಾಫಿಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್ರವರೊಂದಿಗೆ ಈ ಕೆಳಗೆ ವಿವರಿಸಿ ಇರುವ ಮೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಹರಾಜು ಮಾಡಿಸಲಾಗುತ್ತೆ :—

ನಂಬರು.	ತಾಲ್ಲೂಕು.	ಹರಾಜು ತಾರೀಖು.
1	ಮಂಜರಾಬಾದ	23—7—07
2	ಬೇಲೂರು	25—7—07
3	ಅರಸೀಕರೆ	27—7—07
4	ಚನ್ನರಾಯಪಟ್ಣ ...	29—7—07
5	ಹೊಳೇನರಸೀಪುರ	31—7—07
6	ಅರಕಲಗೂಡ	2—8—07
7	ಹಾಸನ ಆಲೂರು ಸಬ್ ತಾಲ್ಲೂಕು ಸೇರಿ	5—8—07

2. ಖಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆಯೇ ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಠೇವಣಿಯಾಗಿ ಹಾಜರ್ಮಾಡಬೇಕು. ಅಲ್ಲದೇ ಬಾಕಿ ಉಳಿಯುವ ಮೊಬಲಗನ್ನು ಹರಾಜು ತಾರೀಖು ಲಾಗಾಯತು 15 ದಿವಸದಲ್ಲಿ ಕೊಡಬೇಕು. ಹಾಗೆ ಕೊಡಲು ತಪ್ಪಿದಲ್ಲಿ ಬಾಬು ಪುನಹ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡಿಸುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಅವಲ್ ಖಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರೇ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಖಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ.

3. ಹರಾಜು ಮೊಬಲಗಿಗೆ ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ಸಹಾ ವಿಧಾಯುಕವಾದ ಕಾಲದಲ್ಲಿ ಕೊಡಬೇಕು.

4. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಕೊಡುವದರಲ್ಲಿ ತಪ್ಪಿದಾಗ್ಯೂ ಅಥವಾ ಸಾವಕಾಶವಾದಾಗ್ಯೂ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದರಲ್ಲಿ ಬರುತ್ತಯುಲ್ಲದೆ ಮೇಲ್ಕಂಡ 2ನೆ ಪ್ಯಾರಾ 3, 4, 5, 6ನೆ ಪಙ್ತಿಗಳಲ್ಲಿ ಕಂಡಂತೆ ಕ್ರಮ ಜರಿಗಿಸಲ್ಪಡುವದು.

5. ಕಂಟ್ರಾಕ್ಟುದಾರನು ಇನಾಂದಾರಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದಕ ಉಂಟುಮಾಡಕೂಡದು.

6 (a) 1ನೆ ಪ್ಯಾರಾದಲ್ಲಿ ಕಂಡ ಇಜಾರೆಯು ಜಂಗಲ್‌ವಾರ್ ಅಥವಾ ಹೋಬಳಿವಾರ್ ಗುತ್ತಿಗೆ ಕೊಡುವದಕ್ಕೆ ಸಾಕಾದಷ್ಟು ಮುಖ್ಯ ಕಾರಣವಿದ್ದು ಹೆಚ್ಚು ದರಖಾಸ್ತುದಾರ್ರು ಅಪೇಕ್ಷಿಸಿದ ವಿನಹ ತಾಲ್ಲೂಕವಾರಾಗಿಯೇ ಗುತ್ತಿಗ್ಯೆ ಕೊಡಲಾಗುತ್ತೆ. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ ಅಪ್ಪಣೆ ವಿನಹ ಷಿಕಮಿ ಇಜಾರೆ ಮಾಡಕೂಡದು.

(b) ಜಮಾವಣೇ ಕೆಲಸದಲ್ಲಿ ಏಜಂಟರು ಅಥವಾ ನೌಕರರು ನಡೆಸುವ ಕೃತ್ಯಗಳಿಗೆ ಇಜಾರೆದಾರ್ರಾಗಲಿ ಅಥವಾ ಸಬ್ ಇಜಾರೆದಾರ್ರಾಗಲಿ ಖುದ್ದು ಜವಾಬ್ದಾರರಾಗಿರುತ್ತಾರೆ.

7. ಹರಾಜು ರೂಲ್ಸು ಮೇರೆ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದಲಾಗಲಿ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದಲಾಗಲಿ ಅಥವಾ ಕನ್ಸರ್ವೇಟರ್ ಸಾಹೇಬರಿಂದಲಾಗಲಿ ಮಂಜೂರ್ಮಾಡಲ್ಪಡುತ್ತೆ.

ಹರಾಜು ಆಗುವ ಪಸಾರೆ ಜಿನಸಿಗಳ ಹರಾಜು ಪಟ್ಟಿ ಲಗತ್ತಿದೆ.

ಸಂಖ್ಯೆ.	ಜಿನಸಿ ಹೆಸರು.	ಸಂಖ್ಯೆ.	ಜಿನಸಿ ಹೆಸರು.
1	ಜೇನುಮೇಣ	15	ಬೇಲದ ಹಣ್ಣು
2	ಸೀಗೇಕಾಯಿ	16	ನಾಟೆ ಹುಳಿ
3	ಗೇರುಬೀಜ	17	ದಾಲಚಿನ್ನಿ
4	ಗೋಂದು	18	ಚಂಡೇನಾರು
5	ಹೊಂಗೇಬೀಜ	19	ಕಾಡಹಿಪ್ಪೇಬೀಜ
6	ಕಾಡಜಗತೆಬೀಜ	20	ಬೂರಗದಹತ್ತಿ
7	ಅಂಟವಾಳದಕಾಯಿ	21	ತಾರೇಕಾಯಿ
8	ಕಕ್ಕೇಕಾಯಿ	22	ಕಪಿಲಾರಂಗು
9	ಹುಣಸೇಹಣ್ಣು	23	ಬೆಂಡು
10	ಕಾಡುಹರಳು	24	ಬಳಪದ ಕಲ್ಲು
11	ನಮ್ರಾಣೆ ಮೊಗ್ಗು	25	ರಾಮಪತ್ರೆ ರಾಮಗೋಟು
12	ಹಾಲುಮಡ್ಡಿ	26	ಪಪ್ಪಳೀಚಕ್ಕೆ
13	ಕಾಲರಬೊಬ್ಬಡೆ	27	ಸೋಮೆಚಕ್ಕೆ
14	ಹುರುಗಲಬೀಜ		

ಬಿ. ಐ. ಶಾಮರಾವ್,
ಫಾರ್ ಡೆಪ್ಯುಟಿ ಕಮಿಷನರ್, ಹಾಸನ ಡಿಸ್ಟ್ರಿಕ್ಟು

ಬೆಂಗಳೂರು ಡಿಸ್ಟ್ರಿಕ್ಟು.

ಅಬ್ಸ್ಟ್ರಾಕ್ಟು.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಶ್ಯಾನಪ್ಪನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಜೂನ್ ಮಾಹೆ 20ನೆ ಮರ್ಕ್ಯುಂ 25ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 297ನೆ ನಂಬರು ಪೇಜು ನೋಡತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ನಾಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಜುಲೈ ಮಾಹೆ 12ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಜೂನ್ ಮಾಹೆ ನೆ ಮರ್ಕ್ಯುಂ 25ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 296ನೆ ನಂಬರು ಪೇಜು ನೋಡತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 10ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಚನ್ನಪಟ್ಟಣದ ತಾಲ್ಲೂಕು ಮಳೂರು ಹೋಬಳಿ ಮಳೂರು ಪಟ್ಟಣದ ದಾಖಲೆ ಭೈರಾಪಟ್ಟಣದಲ್ಲಿರುವ ಕುಂಟಲಿಂಗೇಗೌಡನೆಂಬುವನು ಆ ಗ್ರಾಮದ ತನ್ನ ಹಿಡುವಳಿ ಸರ್ವೆ 602ನೆ ನಂಬರ್ ಜಮೀನಿನಲ್ಲಿ ಅಗಿಯುವ ವ್ಯಾಳೆ ಈ ಕೆಳಗೆ ಕಂಡ ಸ್ವತ್ತುಗಳು ಸಿಕ್ಕಿರುವದಾಗಿ ಹಿಡುವಳಿದಾರ ತಾಲ್ಲೂಕಿಗೆ ಹಾಜರ್ಮಾಡಿರುತ್ತಾನೆ. ಇದರ ಹಕ್ಕು ಬಾಧ್ಯತೆ ಉಳ್ಳವರು 1907ನೆ ಡಿಸೆಂಬರ್ ಮಾಹೆ ಆಖೈರು ವಳಗಾಗಿ ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಲ್ಲಿ ಹಾಜರಾಗಿ ತಮ್ಮ ಹಕ್ಕು ಸ್ಥಿರಪಡಿಸಿಕೊಟ್ಟು ಸದರೀ ಮಾಲು ಪಡೆಯಬಹುದು. ತಪ್ಪಿದಲ್ಲಿ ಸದರಿ ಸ್ವತ್ತನ್ನು ಮೇಲ್ಕಂಡ ಕುಂಟಲಿಂಗೇಗೌಡನಿಗೆ ವಾಪತಿ ಮಾಡಲ್ಪಡುತ್ತೆ. ನಂತರ ಬರುವ ತಕರಾರುಗಳು ಅಂಗೀಕರಿಸಲ್ಪಡುವದಿಲ್ಲಾ.

ಸ್ವತ್ತುಗಳ ತಪಶೀಲ್.

		ಅಂದಾಜ. ರೂ.	ಆ.	ಪೈ.
1.	ಲಕ್ಷ್ಮಿದೇವಿ ತಾಳಿ ಆರು ಕಾಶಿನ ಅಗಲಾ, ಮುತ್ತು ಸುತ್ತಿಕೊಂಡು ಇರತಕ್ಕದ್ದು	0	4	0
2.	ಸಾಧಾರಣ ಗುಂಡು ತಾಳಿ ಮೇಲೆ ಗುಂಡು ಇರತಕ್ಕದ್ದು 1 ...	0	4	0
3.	ಭಂಗಾರದ ಹಣಗಳು 8	2	5	4
4.	ಕಿವಿಗೆ ಹಾಕಿಕೊಳ್ಳುವ ಎರಡು ಬೆಳ್ಳಿ ಕೊಂಡಿಗಳು	0	1	0
5	ಚಿನ್ನದ ಸಂಣ ಗುಂಡು ತೊಗರಿಕಾಳು ಘಾತ್ರ ಇರತಕ್ಕದ್ದು 1 ...	0	1	0
6.	ಬಂಣ ಕೆಟ್ಟುಹೋದ ಹವಳ 1.	0	0	1
7.	ಬಿಳಿ ಕಲ್ಲು ಮಣಿ 1.	0	0	1
	ಜುಮ್ಲಾ ...	2	15	6

ಟಿ. ರಾಮುಲುಚೆಟ್ಟಿ,
ಘಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಸರ್ 1907ನೆ ಇಸವಿ ಏಪ್ರೆಲ್ ತಾರೀಖು 30ನೆ ವಂಗಳವಾರ ನಡೆದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ ನಡವಳಿಕೆಗಳು.

ಮ|| ಡಿ. ದೇವರಾಜ ಅರಸಿನವರು, (ಪ್ರೆಸಿಡೆಂಟರು) ಸರಕ್ಯೂಟಿನಲ್ಲಿರುತ್ತಾರೆ.

ಉದ್ಯೋಗ ಪ್ರಯುಕ್ತ ಮೆಂಬರುಗಳು.

ಹಾಜರು.

2. ಮ|| ಎಂ. ಲಕ್ಷ್ಮೀನರಸಿಂಹಯ್ಯಂಗಳು, ಟ್ರೆಜರಿ ಅಸಿಸ್ಟೆಂಟ್ ಕಮಿಷನರು ಮತ್ತು ವೈಸ್‌ಪ್ರೆಸಿಡೆಂಟರು (ಅಗ್ರಾಸನವನ್ನು ವಹಿಸಿದ್ದರು).
3. „ ಹೆಚ್. ಜೆ. ಮೊಲ್ಲಾಯಿ ಸಾಹೇಬರು, ಎಗ್ಜಿಕ್ಯೂಟಿವ್ ಇಂಜನಿಯರು.
4. „ ಹೆಚ್. ಎನ್. ವೆಂಕಟರಮಣಯ್ಯನವರು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.

ಗೈರ ಹಾಜರು.

5. ಮೆ|| ಕೆ. ಎಂ. ಅಪ್ಪಯ್ಯನವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರು.

6. ,, ಕೆ. ಮೈಲಾರಿ ರಾಯರು, ಡಿವಿಜನಲ್ ಆಸಿಸ್ಟೆಂಟ್ ಕಮೀಷನರವರು.

ಉದ್ಯೋಗ ಪ್ರಯುಕ್ತವಲ್ಲದ ಮೆಂಬರುಗಳು.

7. ಮೆ|| ಬಿ. ರಂಗಣ್ಣನವರು.
8. ,, ಪಿ. ರಂಗಣ್ಣನವರು.
9. ,, ದಾವೂದ್ ಸಾಹೇಬರು.
10. ,, ಅತ್ತಿಗನಾಳು ಶಾಮಣ್ಣನವರು.
11. ,, ಸಿ. ಶ್ರೀನಿವಾಸರಾಯರು.
12. ,, ಟಿ. ನರಸಿಂಹೈಯ್ಯಂಗಾರು.
13. ,, ಎಸ್. ಪರ್ವತಪ್ಪನವರು.
14. ,, ಕೆ. ಗೋವಿಂದಪ್ಪನವರು.
15. ,, ಎಚ್. ಬಿಲ್ಲಿಂಗರ್ಟ ಸಾಹೇಬರು.
16. ,, ಎ. ಅಬ್ದುಲ್ ಖಾದರ ಸಾಹೇಬರು.
17. ,, ಎ. ಚಂದ್ರೇಗೌಡರು.
18. ,, ಟಿ. ಶ್ರೀನಿವಾಸರಾಯರು.
19. ,, ಜಿ. ಗಣೇಶರಾಯರು.
20. ,, ವೈ. ಶಾಂತಪ್ಪ ಶೆಟ್ಟರು.
21. ,, ಎಂ. ರಾಮಚಂದ್ರರಾಯರು.
22. ,, ಹಾಲಗಾರ ವೆಂಕಟಸುಬ್ಬಯ್ಯನವರು.
23. ,, ಚನ್ನಕೇಶವರಾಯರು.
24. ಸ್ಥಳ ಖಾಲೀ.
25. ಸ್ಥಳ ಖಾಲೀ.

1. ಕಂಟ್ರೋಲರವರಿಂದ ತನಿಖೆಯಾಗಿ ಬಂದ ಡಿಸೆಂಬರು ಆಖೈರು ವರಿಗಿನ ಡಿಸ್ಟ್ರಿಕ್ಟು ಫಂಡು ಜಮಾಖರ್ಚಿನ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು.

	ರೂ. ಆ. ಪೈ.
ಸನ್ 1906ನೆ ಜುಲೈ 1ರಲ್ಲು ಶಿಲ್ಕು	2,458—10—6
ಸನ್ 1906ನೆ ಡಿಸೆಂಬರ ಆಖೈರ ವರಿಗೆ ಜಮಾ	6,216— 3— 0
	8,674—13— 6
ಡಿಟೋ ಡಿಟೋ ಖರ್ಚು ...	24,079— 4—10
ಬಾಕಿ ...	—15,404— 7— 4

2. ಚಿಕ್ಕಮಗಳೂರು, ತರೀಕೆರೆ ಮತ್ತು ಬೀರೂರು ವೈದ್ಯಶಾಲೆಗಳಲ್ಲಿ ಸನ್ 1906ನೆ ಇಸವಿ ಜುಲೈ 1ರಿ ಲಾಗಾಯಿತು ಫೆಬ್ರವರಿ ಆಖೈರು ವರೆಗೆ ಚಿಕಿತ್ಸೆ ಹೊಂದಿದ ರೋಗಿಗಳ ಸಂಖ್ಯೆಯನ್ನು ತೋರಿಸುವ ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು. ಚಿಕಿತ್ಸೆ ಹೊಂದಿದವರ ಸಂಖ್ಯೆಗಳು ಪರಸ್ಪರ 9,081, 10,711 ಮತ್ತು 6,645, ಗತ ಸಾಲಿನ ಅದೇ ಮಾಹೆಗಳಲ್ಲಿ ಗುಣ ಹೊಂದಿದವರ ಸಂಖ್ಯೆಗಳು 11,633, 9,357, 3,305 ಆಗಿದ್ದವು.

3. ಈ ಕೆಳಗೆ ನಮೂದಾಗುವ ಗೌರ್ನಮೆಂಟ ಆರ್ಡರುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1). ಮಧುಗಿರಿ ಮತ್ತು ಸಿರಾ ತಾಲ್ಲೂಕುಗಳಲ್ಲಿ ಕೆಲವು ಜಮೀನುಗಳನ್ನು ಗ್ರಾಮಠಾಣೆಗೋಸ್ಕರ ತೆಗೆದುಕೊಂಡಿರುವದನ್ನು ಮಂಜೂರು ಮಾಡಿರುತ್ತೆಂತಲೂ, ಗ್ರಾಮ ನಿವೇಶನದ ಬಡಾವಣೆಗೆ ಅವಶ್ಯಕವಿರುವ ಜಮೀನುಗಳನ್ನು ಡೆಪ್ಯುಟಿ ಅಮಲ್ದಾರು ಅಥವಾ ಅಮಲ್ದಾರರುಗಳು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರ ಅಭಿಪ್ರಾಯಾನುಸಾರವಾಗ ಚುನಾಯಿಸಬೇಕೆಂತಲೂ ಈ ರೀತಿ ಇವರು ಚುನಾಯಿಸಿದ್ದನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಒಪ್ಪಬೇಕೆಂತಲೂ ಸಹತಲ್ಪಿದ 12—3—07ನೆ ಮರ್ಕಂ 8144-52—L. B. (124—0)-4ನೆ ನಂಬರು ಗೌರ್ನಮೆಂಟ ಆರ್ಡರು.

(2). ಸನ್ 1905-06ನೆ ಸಾಲಿನ ಡಿಸ್ಟ್ರಿಕ್ಟು ಫಂಡ ಜಮಾಬಂದಿ ವಸೂಲು ಬಾಕಿ ತಖ್ತೆಯನ್ನು ಪರಿಶೀಲಿಸಿದ ಬಗ್ಗೆ ಮತ್ತು ಡಿಸ್ಟ್ರಿಕ್ಟು ಫಂಡು ಪ್ರತಿ ಒಂದು ಐಟಮಿನಲ್ಲೂ ಹುಟ್ಟುವಳಿ ಆಗತಕ್ಕ ಮೊಬಲಗನ್ನು ಸದರಿ ಲೆಕ್ಕದಲ್ಲಿ ತೋರಿಸಬೇಕೆಂತಲೂ ಸಹತಲ್ಪಿದ 6—3-07ನೆ ಮರ್ಕಂ 7637-45—L. B. (151-03)-32ನೆ ನಂಬರ ಗೌರ್ನಮೆಂಟ ಆರ್ಡರು.

(3). ಪ್ರತ್ಯೇಕವಾಗಿ ನಿವೇಶಾಯಿಸಿರತಕ್ಕ ಸ್ಥಳಗಳಲ್ಲಿಯೇ ಗೊಬ್ಬರ ಜಮಾವಣೆ ಆಗುವಂತೆ ಸ್ಥಳೀಯ ಅಧಿಕಾರಿಗಳು ನಿಗಾ ಇಡಿಸಬೇಕೆಂತ ತಲ್ಪಿದ 2—3—07ನೆ ಮಾರ್ಚಿ 7391-9—L. B. (84-06)-6ನೆ ನಂಬರು ಗಾರ್ನಮೆಂಟ ಆರ್ಡರು.

(4). ಪಬ್ಲಿಕವರ್ಕ್ಸ ಇಲಾಖೆಯ ಆಫಿಸರುಗಳಿಗೆ ಮ್ಯುನಿಸಿಪಲ್ ಮತ್ತು ತಾಲ್ಲೂಕ್ ಬೋರ್ಡ್ ಮೆಂಬರುಗಳಿಗೆ ಯಾವದಾದರೂ ಮೀಟಿಂಗಿನಲ್ಲಿ ಅವರ ಹಾಜರಾತಿಯು ಅವಶ್ಯಕವಾಗಿದ್ದು ಅಥವಾ ಅವರಿಂದ ನಡಿಯಬೇಕಾದ ಕೆಲಸವೇನಾದರೂ ಮುಖ್ಯವಾಗಿದ್ದಲ್ಲಿ ಅವರುಗಳಿಗೆ ಮೀಟಿಂಗ ನಡಿಯತಕ್ಕ ತಾರೀಖನ್ನು ಕುರಿತು 2 ವಾರ ಮುಂಚೆ ನೋಟೀಸುಗಳನ್ನು ಸದರಿ ಬೋರ್ಡುಗಳ ವೈಸ್ ಪ್ರೆಸಿಡೆಂಟರುಗಳು ಅವರುಗಳಿಗೆ ಕೊಡಬೇಕೆಂತ ಡೆಪ್ಯುಟಿ ಕಮಿಷನರೂ ಸಂಬಂಧಪಟ್ಟ ವೈಸ್ ಪ್ರೆಸಿಡೆಂಟರುಗಳಿಗೆ ತಿಳುವಳಿಕೆ ಕೊಡಬೇಕೆಂತ ತಲಿಪಿದ 6—3—07ನೆ ಮಾರ್ಚಿ 7675-83—M. L. (211-06)-2ನೆ ನಂಬರು ಗಾರ್ನಮೆಂಟ ಆರ್ಡರು.

(5). ಕಾಮಗಾರಿಗಳನ್ನು ಚುನಾಯಿಸಿ ಬಡ್ಜೆಟ್ಟಿನಲ್ಲಿ ಅವುಗಳ ಹೆಸರುಗಳನ್ನು ದಾಖಲ್ಮಾಡುವದಕ್ಕೆ ತತ್ಪೂರ್ವ ಅಂದಾಜುಗಳನ್ನು ತಯಾರ್ಮಾಡಿಸಿಟ್ಟಿರಬೇಕೆಂತ ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರವರಿಗೆ ತಿಳಿಸಬೇಕೆಂತ ತಲ್ಪಿದ 12—3-07ನೆ ಮಾರ್ಚಿ 8030-7—L. B. 289-06-2ನೆ ನಂಬರು ಗಾರ್ನಮೆಂಟ ಆರ್ಡರು.

(6). ಯೂನಿಯನ್‌ಗಳಲ್ಲಿ ಆಗಂತುಕ ವ್ಯಾಪಾರಿಗಳಿಗೆ ತೆರಿಗೆ ಹಾಕುವದನ್ನ ತಪ್ಪಿಸಬೇಕೆಂತ ತಲ್ಪಿದ 9-3-07ನೆ ಮಾರ್ಚಿ 7890-8—L. B. (100—05)-1ನೆ ನಂಬರು ಗಾರ್ನಮೆಂಟ ಆರ್ಡರು.

(7). ಬೆಂಗಳೂರು ಮತ್ತು ಶಿವಮೊಗ್ಗಾ ಲೋಕಲ್ ಬೋರ್ಡುಗಳ ಮೆಂಬರುಗಳ ಕೆಲವು ಟ್ರಾವಲಿಂಗ ಅಲೋಯನ್ಸ ಬಿಲ್ಲುಗಳನ್ನು 2 ವರ್ಷಗಳ ಸುಸ್ತಿಯಿಂದ ಕಳುಹಿಸಿದ್ದನ್ನು ಮಂಜೂರು ಮಾಡಿರುತ್ತೇಂತ ತಲ್ಪಿದ 12-3-07ನೆ ಮಾರ್ಚಿ 8068-76—L. B. (253-06)-2ನೆ ನಂಬರು ಗಾರ್ನಮೆಂಟ ಆರ್ಡರು.

(8). ಕೆಲವು ಯೂನಿಯನ್‌ಗಳನ್ನು ಸ್ಥಾಪಿಸುವದನ್ನು ಮಂಜೂರು ಮಾಡಿರುತ್ತೇಂತಲೂ 300 ಮನೆಗಳು ಅಥವಾ 1,000 ಪ್ರಜಾ ಸಂಖೆ ಇರತಕ್ಕ ಪ್ರತಿ ಒಂದು.

(9). ತಮ್ಮ ಗ್ರಾಮಗಳ ಆರೋಗ್ಯಾಭಿವೃದ್ಧಿ ಉಂಟಾಗುವಂತೆ ಗ್ರಾಮವನ್ನು ಶುಚಿಯಾಗಿಟ್ಟುಕೊಂಡಿರತಕ್ಕ ಪಟೇಲರುಗಳಿಗೆ ಬಹುಮಾನಗಳನ್ನು ಕೊಡುವದನ್ನು ಮಂಜೂರು ಮಾಡಿರುತ್ತೇಂತ ತಲ್ಪಿದ 6—3—07ನೆ ಮಾರ್ಚಿ 7626-36—L. B. (275—03)-13ನೆ ನಂಬರು ಗಾರ್ನಮೆಂಟ ಆರ್ಡರು.

(10). ಗಾರ್ನಮೆಂಟಿಗೆ ಕಳುಹಿಸತಕ್ಕ ಕಾಮಗಾರಿಗಳ ಪ್ರೊಗ್ರೆಸ ತೋರಿಸತಕ್ಕ ಸ್ಟೇಟಮೆಂಟುಗಳಲ್ಲಿ ಗತ ಸಾಲಿನಲ್ಲಿ ಪೂರೈಸದೆ ಬಾಕಿ ನಿಂತ ಕಾಮಗಾರಿಗಳಿಗೂ ಚಾಲ್ತಿ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೂ ಯೇನೂ ವ್ಯತ್ಯಾಸ ಮಾಡಕೂಡದೆಂತ ತಲ್ಪಿದ 6—3—07ನೆ ಮಾರ್ಚಿ 7611-21—L. B. (93—06)-7ನೆ ನಂಬರ ಗಾರ್ನಮೆಂಟ ಆರ್ಡರು.

(11). ಪ್ರತಿ ಡಿಸ್ಟ್ರಿಕ್ಟ ಮತ್ತು ತಾಲ್ಲೂಕು ಕಚೇರಿಗಳಲ್ಲಿಯೂ ಸಹಾ ಲೋಕಲ್ ಫಂಡ್ ಬಾಬಿನ ಕೆಲಸಕ್ಕೋಸ್ಕರ 15 ರೂಪಾಯಿ ತಲಬಿನ ಒಬ್ಬ ಗುಮಾಸ್ತೆಯನ್ನು ಮಂಜೂರು ಮಾಡಿರುತ್ತೇಂತ ತಲಪಿದ 16—3—07ನೆ ಮಾರ್ಚಿ 8333-44—L. B. (422-05)—12ನೆ ನಂಬರ ಗಾರ್ನಮೆಂಟ ಆರ್ಡರು.

4. ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಗಳಲ್ಲಿ ಪ್ರೆಸಿಡೆಂಟರವರು ಅಮಲ್ದಾರರುಗಳು ಮತ್ತು ಡೆಪ್ಯುಟಿ ಅಮಲ್ದಾರರುಗಳ ಹಾಜರಿಯನ್ನು ಉಂಟುಮಾಡಿಕೊಳ್ಳಲು ಅಧಿಕಾರವುಳ್ಳವರಾಗಿದ್ದಾರೆಂತ ತಲ್ಪಿದ 6—3—07ನೆ ಮಾರ್ಚಿ 7791-800—L. B. (170-06)-1ನೆ ನಂಬರ ಗಾರ್ನಮೆಂಟ ಆರ್ಡರನ್ನು ಬೋರ್ಡಿನಲ್ಲಿ ಓದಲಾಗಿ ಹಾಜರಿದ್ದ ಮೆಂಬರುಗಳು ಅಮಲ್ದಾರರುಗಳು ಬೋರ್ಡು ಮೀಟಿಂಗುಗಳಿಗೆ ಮೆಂಬರುಗಳಾಗತಕ್ಕದ್ದು ಒಳ್ಳೆಯದೆಂತಲೂ ಮುಂದಿನ ಮೀಟಿಂಗಿನಲ್ಲಿ ಈ ವಿಷಯವನ್ನು ಚರ್ಚಿಸಲು ಜಾಸ್ತಿ ಮೆಂಬರುಗಳು ಹಾಜರಾಗಬಹುದಾದ ಪ್ರಯುಕ್ತ ಈ ಅಂಶವನ್ನು ಮುಂದಿನ ಮೀಟಿಂಗಿನಲ್ಲಿ ಇಡಬೇಕೆಂತ ತೀರ್ಮಾನಿಸಲಾಯಿತು.

5. ಲೋಕಲ್ ಫಂಡು ಆಸ್ಪತ್ರೆಗಳಲ್ಲಿ ಉತ್ತಮ ವರ್ಣದ ಸ್ತ್ರೀಯರುಗಳು ಔಷಧಗಳನ್ನು ತೆಗದುಕೊಳ್ಳುವವರಿಗೂ ಕಾದುಕೊಂಡು ಇರುವದಕ್ಕೋಸ್ಕರ ಒಂದು ಕೊಠಡಿಯನ್ನು ಕಟ್ಟಿಸಬೇಕೆಂತ ಬಂಧ ಸನ್ 1905ನೆ ಇಸವಿಯ 211ನೆ ಪ್ರಸ್ತಾಪವನ್ನು ರಿಕಾರ್ಡು ಮಾಡಿರುತ್ತೇಂತ ತಲಪಿದ 18—3—07ನೆ ಮಾರ್ಚಿ 8469-79—Med. (243-05)-11ನೆ ಗವರ್ನಮೆಂಟ ಆರ್ಡರು ಓದಲಾಗಿ ಪ್ರತಿ ಒಂದು ಆಸ್ಪತ್ರೆಯಲ್ಲಿಯೂ ಒಂದೊಂದು ಕೊಠಡಿ ಕಟ್ಟಿಸಬೇಕಾದ್ದು ಅವಶ್ಯಕವೆಂತಲೂ ಹಣ ಒದಗಿದಹಾಗೆ ಈ ಕೆಲಸ ಮಾಡಿಸಬೇಕೆಂತಲೂ ಸಹ ಬೋರ್ಡಿನವರು ಐಕಮತ್ಯದಿಂದ ಅಭಿಪ್ರಾಯಪಟ್ಟಿರುತ್ತಾರೆ.

6. ಸನ್ 11—1—07ನೆ ಮಾರ್ಚಿ 1265-72—L. B. (173-06)-1ನೆ ಗವರ್ನಮೆಂಟ ಆರ್ಡರಿನ ವಿಚಾರವಾಗಿ ತಾಲ್ಲೂಕು ಬೋರ್ಡು ಮೆಂಬರುಗಳು ಮೀಟಿಂಗಗಳಿಗೆ ಹಾಜರಾದ ಬಗ್ಗೆ ಮೈಲಿ ಒಂದರ 2 ಆಣೆಯಂತೆಯೂ ಮತ್ತು ರೈಲಿನಲ್ಲಿ ಪ್ರಯಾಣ ಮಾಡಿದರೆ ಮೂರನೇ ತರಗತಿಯ ಛಾರ್ಜನ್ನು, ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳು ಪ್ರಯಾಣ ಮಾಡಿದ ಪ್ರತಿ ಒಂದು ಮೈಲಿಗೂ ನಾಲ್ಕಾಣೆಯಂತೆಯೂ ರೈಲಿನಲ್ಲಿ ಪ್ರಯಾಣ ಮಾಡಿದ ಬಗ್ಗೆ ಎರಡನೆ ತರಗತಿಗೆ ಆಗತಕ್ಕ ದುಗ್ಗಣಿ ಛಾರ್ಜನ್ನು ಕೊಡುತ್ತಲಿರುವದನ್ನು 17—6—05ರಲ್ಲು ನಡದ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗಿನಲ್ಲಿ ಒಪ್ಪಿರುತ್ತೇಂತಲೂ ಅದೇ ರೀತಿಯಲ್ಲಿ ಕಂಟ್ರೋಲರವರು ಬಿಲ್ಲು ತನಿಖೆ ಮಾಡಿ ಒಪ್ಪಿಕೊಂಡಿರುವಂತೆಯೂ ಬೆಂಗಳೂರು ಡಿಸ್ಟ್ರಿಕ್ಟ ಬೋರ್ಡು ಪ್ರೆಸಿಡೆಂಟರವರು ರಿಪೋರ್ಟು ಮಾಡಿರುವದನ್ನು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಆಲೋಚಿಸತಕ್ಕ ಬಗ್ಗೆ ಮುಲಪೂಫಿಸಿ ಬಂದ 6—3—07ನೆ ಮಾರ್ಚಿ 7600-9—L. B. (173-06)-3ನೆ ಗವರ್ನಮೆಂಟು ಆರ್ಡರು ಓದಲಾಗಿ ಮುಂದಿನ ಮೀಟಿಂಗಿನಲ್ಲಿ ಹೆಚ್ಚು ಸಂಖ್ಯೆ ಮೆಂಬರುಗಳು ಹಾಜರಾಗಬಹುದಾದ್ದರಿಂದ ಈ ವಿಚಾರವನ್ನು ಮುಂದಿನ ಮೀಟಿಂಗಿನಲ್ಲಿ ಇಡಬೇಕೆಂತ ತೀರ್ಮಾನಿಸಲಾಯಿತು.

7. ಬೀರೂರು ಅಜ್ಜಂಪುರದ ರಸ್ತೆಯನ್ನು ಉತ್ತಮ ಸ್ಥಿತಿಗೆ ತರತಕ್ಕ ಬಗ್ಗೆ ರೂ. 472 ಕ್ಕೆ ತಯಾರಾಗಿ ಪ್ರಸಿಡೆಂಟರವರ ಅಡ್ಡ ರುಜುವಿಗೋಸ್ಕರ ಮುಲಫೂಫಿಸಿ ಬಂದ ಕಡೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಸಾಹೇಬರವರ 13—3—07ನೆ ಮುರ್ಸ್ಸಂ 68ನೆ ಡಾಕೆಟ್ ಓದಲಾಗಿ ಈ ರಸ್ತೆಯು ಅತಿ ಜರೂರಾಗಿ ರಿಪೇರಿ ಆಗತಕ್ಕದ್ದೆಂತ ತಿಳಿಯಬರೋಣದರಿಂದಲೂ ಇತರ ರಸ್ತೆ ಕೆಲಸಗಳಿಗೋಸ್ಕರ ಮಂಜೂರಾಗಿರುವ ಹಣಗಳ ಪೈಕಿ ಬಾಬು ಹೊರಳ ಮೂಲಕ ಕೆಲಸ ನಡಿಸಲು ಅನುಕೂಲವಿಲ್ಲವೆಂತ ಎಗ್ಸಿಕ್ಯೂಟಿವ್ ಇಂಜನಿಯರು ಹೇಳುವದ್ದರಿಂದಲೂ ಈ ಕಾಮಗಾರಿಗೆ ಅವಶ್ಯಕವಿರುವ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ಸನಲ್ಲಿ ಉಳಿಯತಕ್ಕ ಅಖೈರು ಶಿಲ್ಕಿನ ಪೈಕಿ ಮಂಜೂರು ಮಾಡತಕ್ಕ ಬಗ್ಗೆ ಗವರ್ನ್ಮೆಂಟಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

8. ಬಾಬಾಬುಡನ್‌ಗಿರಿಯ ರಸ್ತೆಯ ಸ್ಪೆಷಲ್ ರಿಪೇರಿಗಾಗಿ ತಯಾರಾದ 2,932 ರೂಪಾಯಿಗಳ ಅಂದಾಜಾವನ್ನು ಪ್ರೆಸಿಡೆಂಟರವರ ಅಡ್ಡ ರುಜುವಿಗಾಗಿ ಮುಲಫೂಫಿಸಿ ಸದರಿ ಕಾಮಗಾರಿಗೆ ಅವಶ್ಯಕವಿರುವ ಹಣ ಸಹ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸಬೇಕೆಂತ ಸಹ ಕಡೂರು ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರವರ 11—3—07ನೆ ಮುರ್ಸ್ಸಂ 62ನೆ ನಂಬರು ಡಾಕೆಟ್ ಓದಲಾಗಿ ಇತರೆ ರಸ್ತೆ ಕಾಮಗಾರಿಗಳಿಗೆ ವದಗಿಸಿರುವ ಹಣಗಳ ಪೈಕಿ ಬಾಬು ಹೊರಳ ಮಾಡಿಕೊಂಡು ಈ ಕೆಲಸ ನಡಿಸುವದಕ್ಕೆ ಅನುಕೂಲವಿಲ್ಲದ್ದರಿಂದ ಈ ಕೆಲಸವನ್ನು ಮುಂದಿನ ಸಾಲಿನವರಿಗೆ ನಿಲ್ಲಿಸಬೇಕಾಗಿ ತೀರ್ಮಾನಿಸಲಾಯಿತು.

9. ತರೀಕೆರೆಯಿಂದ ದೊಡ್ಡಕೆರೆ ಮಾರ್ಗವಾಗಿ ಹಾದೀಕೆರೆಗೆ ಒಂದು ರಸ್ತೆ ಮಾಡಿಸಿಕೊಡಬೇಕೆಂತ ಬೇದ ದಸರಾ ಪ್ರಜಾಪ್ರತಿನಿಧಿ ಸಭೆಯ 430ನೆ ಪ್ರಸ್ತಾಪವನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಲೋಚನೆ ಬಗ್ಗೆ ಮುಲಫೂಫಿಸಿ ಬಂದ 11—1—07ನೆ ಮುರ್ಸ್ಸಂ 6326—L. F. (211-06)-1ನೆ ನಂಬರು ಸಕ್ರೆಟೆರಿಯವರ ಡಾಕೆಟ್ ಮತ್ತು ಇದೇ ವಿಚಾರವಾಗಿ 9—3—07ನೆ ಮುರ್ಸ್ಸಂ ತರೀಕೆರೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಸಹ ಓದಲಾಗಿ ಹಣವಿಲ್ಲದ್ದರ ದೆಸೆಯಿಂದ ಇದಕ್ಕಿಂತಲೂ ಜರೂರಾತಿಯಾಗಿಯೂ ಮುಖ್ಯವಾಗಿಯೂ ಇರತಕ್ಕ ಕೆಲಸಗಳನ್ನೆಲ್ಲಾ ನಿಲ್ಲಿಸಿರೋಣದರಿಂದ ಹಣ ವದಗಿದಾಗ್ಯೆ ಈ ವಿಚಾರವನ್ನು ಯೋಚಿಸಬಹುದೆಂತ ತೀರ್ಮಾನಿಸಲಾಯಿತು.

10. ಸಂತವೇರಿ ಬಂಗಲೆಯನ್ನು 2ನೆ ಕ್ಲಾಸ್ ಬಂಗ್ಲೆಯನ್ನಾಗಿ ಮಾಡಬೇಕೆಂತಲೂ ಅದಕ್ಕೆ ತಕ್ಕ ಸಾಮಾನುಗಳೆಲ್ಲವನ್ನು ವದಗಿಸಬೇಕೆಂತಲೂ ಸಹಾ ಚೀಫ್ ಇಂಜನಿಯರು ಸದರಿ ಬಂಗಲೆಯನ್ನು ಇನ್ಸ್ಪೆಕ್ಷನ್ ಮಾಡಿದ ವೇಳೆ ಬರದ ಇನ್ಸ್ಪೆಕ್ಷನ್ ನೋಟ್ಸ್ ಎಕ್ಸ್ಟ್ರಾಕ್ಟ್ ಮುಲಫೂಫಿಸಿ ಬಂದ 25—3—07ನೆ ಮುರ್ಸ್ಸಂ 78ನೆ ನಂಬರು ತರೀಕೆರೆ ತಾಲ್ಲೂಕು ಅಮಲ್ದಾರರವರ ರಿಪೋರ್ಟು ಓದಲಾಗಿ ಆ ರೀತಿ ಮಾಡಬಹುದೆಂತ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

11. ಅಜ್ಜಂಪುರದಿಂದ ಬುಕ್ಕಾಂಬುಧಿಗೆ ರಸ್ತೆ ಮಾಡತಕ್ಕ ಬಗ್ಗೆ ಮೊದಲು ರಸ್ತೆ ಗುರ್ತಿಸತಕ್ಕ ಬಗ್ಗೆ ಸರ್ವೆ ಮಾಡತಕ್ಕ ಬಗ್ಗೆ 60 ರೂಪಾಯಿಗಳಿಗೆ ತಯಾರಾದ ಅಂದಾಜಾ ಮುಲಫೂಫಿಸಿ ಬಂದ 15—4—07ನೆ ಮುರ್ಸ್ಸಂ 99ನೆ ಡಾಕೆಟ್ ಓದಲಾಗಿ ಈ ಅಂದಾಜಾವನ್ನು ಮಂಜೂರು ಮಾಡಬಹುದಾಗಿ ತೀರ್ಮಾನಿಸಲಾಯಿತು.

12. ಡಿಸ್ಟ್ರಿಕ್ಟ್ ಬೋರ್ಡು ಮೆಂಬರು ಮೆ|| ವಾಟರ್ಸ್ ಸಾಹೇಬರ ರಾಜೀನಾಮೆಯನ್ನು ಓದಲಾಗಿ ಸದರಿ ರಾಜೀನಾಮೆಯನ್ನು ಅಂಗೀಕರಿಸಬಹುದೆಂತಲೂ ಮೆ|| ವಾಟರ್ಸಯವರಿಗೆ ಬದಲಾಗಿ ಮೆ|| ಆಲೂರಿಸ್ ಸಾಹೇಬರನ್ನು ಮೆಂಬರನ್ನಾಗಿ ಚುನಾಯಿಸಬಹುದೆಂತ ತೀರ್ಮಾನಿಸಲಾಯಿತು.

13. ಭಾವೀಕೆರೆ ಭಾವಿಗೆ ಹೆಚ್ಚು ಕೆಲಸ ನಡದ ಬಗ್ಗೆ ತಯಾರಾಗಿ ಬಂದ 3½ ರೂಪಾಯಿ ಅಂದಾಜಾವನ್ನು ಓದಲಾಗಿ ಅಂದಾಜಾವನ್ನು ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

14. ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು 1907ನೆ ಇಸವಿ ಜುಲೈ 30ನೆ ಮಂಗಳವಾರ ನಡಿಯಬೇಕೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿಕ್ಕಮಗಳೂರು ಸಬ್ ಜಡ್ಜಿರವರ ಕೋರ್ಟಿನಲ್ಲಿ.

ಸನ್ 1906—07ನೆ ಇಸವಿ ಮಿ|| ಅರ್ಜೀ ನಂಬರ 459.

ಚಿಕ್ಕಮಗಳೂರ ತಾಲ್ಲೂಕು ಮಳಲೂರು ಗ್ರಾಮದ ಕಾಡ್ಯಯ್ಯನವರ ಮಗ ವರ್ನಾಕ್ಯುಲರ್ ಸ್ಕೂಲ್ ಮಾಸ್ಟರ್ ಆಗಿ ಮೃತಪಟ್ಟ ವೆಂಕಪ್ಪಯ್ಯ ಎಂಬವರ ಚಿಕ್ಕಮಗಳೂರ ಪೋಸ್ಟಾಫೀಸು ಸೇವಿಂಗ್ಸು ಬ್ಯಾಂಕು ಬಾಬತು 200 ರೂಪಾಯಿಗಳು ಅದರ ಬಡ್ಡಿ ವಿಷಯವಲ್ಲಿ—

ಅರ್ಜೀದಾರರು ವೆಂಕಟರಮಣೈಯ್ಯನು ಮೃತಪಟ್ಟ ಸದರೀ ವೆಂಕಪ್ಪಯ್ಯ ಎಂಬವರಿಗೆ ಚಿಕ್ಕಪ್ಪನ ಮಗನು ಆಗಬೇಕೆಂಬ ಹಕ್ಕುದಾರಿಮೇಲೆ ಮಳಲೂರು ಸ್ಥಳದ ವೆಂಕಟರಮಣೈಯ್ಯ ಎಂಬುವರು ಮಳಲೂರು ವಾಸಸ್ಥರಾಗಿ ಮೃತಪಟ್ಟ ಸದರಿ ವೆಂಕಪ್ಪಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್‌ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣೈಯ್ಯನ ಅರ್ಜಿಯನ್ನು ಸನ್ 1907ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯಾತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಪ್ಪಯ್ಯನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1907ನೆ ಇಸವಿ ಜೂನ್ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟ್ ಮೊಹರಿನಿಸಿ ನಮ್ಮ ದಸ್ತಖತ್ತಿನ ಕೊಡೋಣಾಗಿದೆ.

ಡಿ. ಎಂ. ನರಸಿಂಗರಾವ್,

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ.

ದರ್ಜಾಗಾ ಬೆಂಗಳೂರು, ತಾರೀಖು 26ನೆ ಜೂನ್ 1907.

ಇದರಡಿ ಕಂಡ ಪುಸ್ತಕಗಳು ಬೆಂಗಳೂರು ಗೌರ್ನಮೆಂಟು ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಬಿಕ್ರಿ ಬಗ್ಯೆ ಹಾಜರಿರುತ್ತವೆ.

	ಆ.	ಪೈ.
1908ನೆ ಇಸವಿ ಕನ್ನಡ ಗದ್ಯಭಾಗ ...	2	6
,, ಸಂಸ್ಕೃತ ಗದ್ಯಭಾಗ ...	2	6
ಪಾಕಶಾಸ್ತ್ರ (ಹೊಸಮುದ್ರಣ) ...	6	0
ಆಳ್ವಾರೈಯ್ಯಂಗಾರ್ರ IIIನೆ ಸ್ಟ್ಯಾಂಡರ್ಡ ಗಣಿತ ...	5	0
ಡಿಟೋ Vನೆ ಡಿಟೋ ...	8	0
ಕನ್ನಡ IIIನೆ ರೀಡರು (ಬೊಂಬಾಯಿ) ...	6	0
ಕಥಾಸಪ್ತತಿ (ಹೊಸಮುದ್ರಣ) ...	2	6
ಶಬ್ದಾದರ್ಶ ಡಿಟೋ ...	3	0

ಪೋಸ್ಟೇಜ್ ಅಲಾಹಿದಾ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ಮೈಸೂರ್ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಕಟಿಸಿದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ|| 11, ಸರ್ 1907.

II ನೆ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣ್ಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 5ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸರ್ 1907ನೆ ಇಸವಿ ಹರಾಜು ತಾರೀಖು ಲಾಗಾಯಿತು ಸರ್ 1908ನೆ ಇಸವಿ ಜೂನ್ 30ನೆ ತಾರೀಖುವರೆಗೆ ಸ್ಟೇಟು ಫಾರೆಸ್ಟುಗಳಲ್ಲಿಯೂ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಖಂಡ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಸ್ಪಾದೆಗೋಸ್ಕರ ರಿಜರ್ವು ಮಾಡಿರುವ ಸ್ಥಳಗಳಲ್ಲಿಯೂ ಮತ್ತು ಅಮೃತ ಮಹಲ್ ಕಾವಲುಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನು ಬಾಬುವಾರು ತುಮಕೂರು ಡಿಸ್ಟ್ರಿಕ್ಟು ಎಲ್ಲಾ ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿ ಜಮಾಯಿಸಿಕೊಳ್ಳುವ ಹಕ್ಕುದಾರಿಯನ್ನು ಆಯಾಯ ತಾಲ್ಲೂಕು ಅಮಲ್ದಾರ್ರ ರೂಬರೂಬು ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು ಅಥವಾ ಆಯಾ ರೇಂಜು ಆಫೀಸರುಗಳ ಸಹಾಯದೊಂದಿಗೆ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಕುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾಹ್ನ 12 ಘಂಟೆಗೆ ಷುರೂ ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.
1	ಕೊರಟಗೆರೆ ಸಬ್ ತಾಲ್ಲೂಕು	2—8—07	ಕೊರಟಗೆರೆ
2	ಮಧ್ಗಗಿರಿ	1—8—07	ಮಧ್ಗಗಿರಿ
3	ಶಿರಾ	5—8—07	ಶಿರಾ
4	ಪಾವಗಡ	28—7—07	ಪಾವಗಡ
5	ತುರ್ವೇಕೆರೆ ಸಬ್ ತಾಲ್ಲೂಕು	10—8—07	ತುರ್ವೇಕೆರೆ
6	ತಿಪ್ಟೂರು	27—7—07	ತಿಪ್ಟೂರು
7	ಗುಬ್ಬಿ	26—7—07	ಗುಬ್ಬಿ
8	ಚಿಕ್ಕನಾಯಕನಹಳ್ಳಿ	8—8—07	ಚಿಕ್ಕನಾಯಕನಹಳ್ಳಿ
9	ತುಮಕೂರು	25—7—07	ತುಮಕೂರು
10	ಕುಣಿಗಲು	30—7—07	ಕುಣಿಗಲು

ಪಸಾರೆ ಜಿನಸಿಗಳ ಹೆಸರುಗಳ ತಪಸೀಲ್.

2. (1) ಆಳಲೆಕಾಯಿ. (2) ತಾರೆಕಾಯಿ. (3) ಹೊಂಗೆಕಾಯಿ. (4) ಶೀಗೆಕಾಯಿ. (5) ಹುಣಸೆಹಂಣು. (6) ಬ್ಯಾಲದಹಂಣು. (7) ಶಿತಾಫಲದಹಂಣು. (8) ಗೇರುಬೀಜ. (9) ಪಟ್ಟೆ ಚಕ್ಕೆ. (10) ಸಾವೆಚಕ್ಕೆ. (11) ಮಡ್ಡಿಚಕ್ಕೆ. (12) ದೊಡ್ಡ ಅಗಸೆ. (13) ದಿಂಡಗದ ಗೋಂದು. (14) ಕಾಡು ಅರಸಿನ. (15) ಮರಡಿಪಪ್ಪು. (16) ಕಪಿಲಾರಂಗು. (17) ಕಲ್ಲುಹುವ್ವು. (18) ಜೇನುತುಪ್ಪ. (19) ಮೇಣ. (20) ತಗರಸಿಬೀಜ.

3. ಛಡ ದರಖಾಸ್ತು ದಾರನು ಹರಾಜು ಕೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್‌ದಾರ್ರಿಂದ ಛಡ ಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ಸು ವಸೂಲ್ ಮಾಡಲ್ಪಡುವದು. ಮೇಲೆ ನಮೂದು ಮಾಡಿರುವಂತೆ ಛಡ ದರಖಾಸ್ತುದಾರನು ಡಿಪಾಜಿಟ್ಟು ಮೊಬಲಗು ಹಾಜರು ಮಾಡದಿದ್ದರೆ ಹಕ್ಕನ್ನು ಆ ಕೂಡಲೆ ದುಸರಾ ಹರಾಜು ಮಾಡಿಸಿ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನನ್ನು ಗುರಿಮಾಡಲ್ಪಡುವದು.

4. ಕ್ಲಿಪ್ತ ಕಾಲದ ವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರ್ರು ಠೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವ್ವಲ್ ಸವಾಲುದಾರನ ಲುಕ್ಸಾನಿಗೆ ವಳಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಆದರೆ ದುಸರೆ ಹರಾಜಿನಲ್ಲಿ ಉಂಟಾಗುವ ಫಾಯಿದೆಗೆ ಅವ್ವಲ್ ಛಡ ದರಖಾಸ್ತುದಾರನು ಅರ್ಹನಾಗುವದಿಲ್ಲ.

5. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿಯೂ ಮತ್ತು ಗುಂಡು ತೋಪುಗಳಲ್ಲಿಯೂ ಇರುವ ಮರಗಳ ಅಮರಾಯಿ ಫಸಲನ್ನು ರೂಢಿಸಕೂಡದು.

6. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಫಸಾರೆ ಜಿನಸಿಗಳಲ್ಲಿ ಸೇರಿ ಇರುವದಿಲ್ಲ.

7. ಹರಾಜು ಮಂಜೂರಾದ ಸಂಗತಿ ತಿಳಿಸಿದ ಇಪ್ಪತ್ತು ದಿನಗಳೊಳಗಾಗಿ ಛಡ ದರಖಾಸ್ತುದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಹೇಳುವ ಷರತ್ತುಗಳನ್ನನುಸರಿಸಿ ಬಾಬು ರೂಢಿಸುವದಾಗಿ ಅವರಲ್ಲಿ ಹಾಜರಾಗಿ ಮುಚ್ಚಳಿಕೆ ಬರದು ಕೊಡಬೇಕು.

ಎ. ಪೊನ್ನುಸ್ವಾಮಿ,
ಫಾರ್ ಡೆಪ್ಯುಟಿ ಕಮಿಷನರ್, ತುಮಕೂರು ಡಿಸ್ಟ್ರಿಕ್ಟು.

ತಾರೀಖು 17ನೆ ಜೂನ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಸರಕಾರಿ ಬಂಜರ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲುಗಳಲ್ಲಿಯೂ ಇರತಕ್ಕ ತಂಗಡಿ, ಕಕ್ಕೆ ಚಕ್ಕೆಯನ್ನು 1907ನೆ ಜುಲೈ ತಾರೀಖು 1ರ ಲಾಗಾಯತು 1908ನೆ ಇಸವಿ ಜೂನ್ 30ರ ವರಿಗೆ ಜವಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕು ವಾರ್ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1907ನೆ ಇಸವಿ ಜುಲೈ ತಾರೀಖು 15ರಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ ಇರುತ್ತೆ.

ತಾಲ್ಲೂಕುಗಳ ಹೆಸರು.

(1) ಮೈಸೂರು.	(3) ಹೆಗ್ಗಡದೇವನಕೋಟೆ
(2) ಕೃಷ್ಣರಾಜಪೇಟೆ.	(4) ಮಳವಳ್ಳಿ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದೇ ಇದ್ದಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಛಡ ದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜ್ ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿದ್ದಾರೆ.

4. ಛಡ ದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳ ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಿಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಛಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಛಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜ್ ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಛಡ ದರಖಾಸ್ತುದಾರನು ಅವನ ದರಖಾಸ್ತ್ ಮಂಜೂರಾತಿಯನ್ನ ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಅವನು ಮೊದಲು ಇಟ್ಟ ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಹಡ ದರಖಾಸ್ತುದಾರನ ರಿಸ್ಕಿಗೆ ಬಿಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದ್ದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದಕೂಡಲೆ ಕೊಡದೆ ಇದ್ದರೆ ಅದು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಮೇಲೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖು ಲಾಗಾಯತ್ತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1907ನೇ ಜುಲೈ ಆಖ್ಯೆರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಖಿಸ್ತು ಮೇಲೆ ಅಂದರೆ, 1907ನೇ ಅಕ್ಟೋಬರ್ 1ನೇ ತಾರೀಖಿನಲ್ಲಿ ಒಂದನೇ ಖಿಸ್ತು, 1908ನೇ ಇಸವಿ ಜನವರಿ 1ನೇ ತಾರೀಖಿನಲ್ಲಿ ಎರಡನೇ ಖಿಸ್ತು ಮತ್ತು 1908ನೇ ಇಸವಿ ಮೇ 1ನೇ ತಾರೀಖಿನಲ್ಲಿ ಮೂರನೇ ಖಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವಮೇರೆ ಖಿಸ್ತಿನ ಹಣ ಪಾವತಿ ಮಾಡಲ್ಪಡದೆ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.

2. ಇಜಾರೆದಾರನೇ ಆಗಲಿ ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕಮಿ ಕಂಟ್ರಾಕ್ಟುದಾರನೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್‌ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.

4. ತೊಗಟೆ ತೆಗೆಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿಧೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣೆ ಮೊತ್ತ ತೋರಿಸುವ ತಪಶೀಲು ಲೆಖ್ಖವನ್ನು ಇಜಾರೆದಾರನು ಇಡಬೇಕು ಮತ್ತು ಅಂಥಾ ಲೆಖ್ಖವನ್ನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ ಅಮಲ್ದಾರ್‍ರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡುಹೋಗುವ ಪ್ರತಿ ಒಂದು ಗಾಡಿ ಜೋಡಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರ್ಮಾಡುವ ರೀತಿಯಲ್ಲಿ ಪ್ಯಾಸ್ ಪಡಿಯತಕ್ಕದ್ದು.

7. ದಾಸ್ತಾನ್ ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1908ನೇ ಇಸವಿ ಜೂನ್ ಆಖ್ಯೆರು ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದ್ದುವರೆಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮ್ಮಿಷನರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ಹಾಸನ ಡಿಸ್ಟ್ರಿಕ್ಟು 1907—08ನೇ ಸಾಲ್ ಬಾಬತ್ತು ಪಸಾರೆ ಬಾಬಿನ ಜಮಾವಣೆ ಹಕ್ಕು ಹರಾಜ್ ವಿಚಾರದ ಇಸ್ತಿಹಾರನ್ನು 1907ನೇ ಜುಲೈ 4ನೇ ಮರ್ಕ್ಯಂ 26ನೇ ನಂಬರ್ ಮೈಸೂರು ಗೆಜೆಟ್ 2ನೇ ಪಾರ್ಟ್ 313—314ನೇ ಪೇಜಿನಲ್ಲಿ ಛಾಯಿಷ್ ಮಾಡಿರುತ್ತೆ ತಿಳಿಯುವದು.

5. ಬೆಂಗಳೂರು ತಾಲ್ಲೂಕು ಪುಟ್ಟೇನಹಳ್ಳಿ ಗ್ರಾಮ ವಿಸ್ತರಣೆ ಮಾಡಲು ಸದರಿ ಗ್ರಾಮದ ಸರ್ವೆ ನಂಬರು 1ರಲ್ಲಿ 4ನೆ ಪೋಟ್ ನಂಬರು ಜಮೀನನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 6—2—07ನೆ ಮರ್ಸ್ಕಂ 7599—L. B. 332-06—2ನೆ ನಂಬರು ಡಾಕೆಟ್ಟು ಓದಲಾಯಿತು.

ಆ ಊರು ರೈತರು ಆ ಜಮೀನು ತೆಗೆದುಕೊಳ್ಳಲು ಮೊಬಲಗು ಕೊಡಲು ಸಿದ್ಧವಾಗಿರೋಣದರಿಂದ ಆ ಜಮೀನುದಾರನು ಆ ಜಮೀನು ಕೊಡಲು ಇಷ್ಟಪಡದ ಸಬಬು ಗವರ್ನಮೆಂಟಿಗೆ ಲ್ಯಾಂಡು ಅಕ್ವಿಜೇಷನ್ ಆಕ್ಟು ಪ್ರಕಾರ ತಗದುಕೊಳ್ಳಲು ಬರಿಸಬೇಕೆಂದು ತೀರ್ಮಾನವಾಯಿತು.

6. ವರ್ತೂರಲ್ಲಿರುವ ಆಸ್ಪತ್ರೆಯನ್ನು ವೈಟುಫೀಲ್ಡಿಗೆ ಖಾಯಂ ಆಗಿ ವರ್ಗ ಮಾಡಿಸಿಕೊಡಬೇಕೆಂದು ವೈಟುಫೀಲ್ಡ್ ಆಂಗ್ಲೋ ಇಂಡಿಯನ್ ಅಸೋಸಿಯೇಷನ್ ಹಾನರರಿ ಸೆಕ್ರೆಟರಿಯವರು ಬರದುಕೊಂಡಿದ್ದ ಲೇಖನದ ನಕಲನ್ನು ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರು 9—3—07ನೆ ಮರ್ಸ್ಕಂ 7899—L. B. 165-06—7ನೆ ನಂಬರು ಡಾಕೆಟ್ಟು ನೊಡನೆ ಫೈಸಲಾತಿ ಬಗ್ಯೆ ರವಾನಿಸಿದ್ದದ್ದು ಓದಲಾಯಿತು.

1905ನೆ ಇಸವಿ ಏಪ್ರಿಲ್ 28ನೆ ತಾರೀಖಿನಲ್ಲಿ ಇದೇ ವಿಚಾರದಲ್ಲಿ ಬೋರ್ಡಿನವರು ಮಾಡಿರುವ ತೀರ್ಮಾನವನ್ನು ಖಾಯಂ ಇಡಿಸಬೇಕು. ಅಂದರೆ ವೈಟುಫೀಲ್ಡಿಗೆ ಸಮೀಪದಲ್ಲಿಯೂ, ವರ್ತೂರು ಕೆರೆಗೆ ಉತ್ತರವಾಗಿಯೂ ಇರುವ ರಾಮಗೊಂಡಹಳ್ಳಿಯಲ್ಲಿ ಆಸ್ಪತ್ರೆ ಇಡಿಸಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ.

7. ಬೆಂಗಳೂರು ತಾಲ್ಲೂಕು ಚಿಕ್ಕಬೆಟ್ಟಹಳ್ಳಿ ಮತ್ತು ದೊಡ್ಡ ಬೆಟ್ಟಹಳ್ಳಿ ಗ್ರಾಮಸ್ಥರಿಂದ ಮುಸಲ್ಮಾನರು ವಗೈರೇರು ಬೆಂಗಳೂರಿಂದ ಅವರ ಊರಿಗೆ ಸಮೀಪದಲ್ಲಿರುವ ಬಂಡಿ ಬಳಿಗೆ ರಸ್ತೆ ಹಾಕಿಸಿ ಕೊಡಬೇಕೆಂದು ಗವರ್ನಮೆಂಟಿಗೆ ಬರದುಕೊಂಡ ಅರ್ಜಿ ಫೈಸಲ್ ಬಗ್ಗೆ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರ 30—3—07ನೆ ಮರ್ಸ್ಕಂ 9023—L. B. 372-06—2ನೆ ನಂಬರು ಮೆಮೋರಾಂಡಂನಿಂ ಬಂದದ್ದು ಓದಲಾಯಿತು.

ಬೋರ್ಡಿನವರು ಈ ರಸ್ತೆ ಹಾಕಲು ಆಗಲಾರದೆಂದು ತೀರ್ಮಾನ ಮಾಡಲಾಯಿತು.

8. ಜಾನುವಾರು ಪ್ರದರ್ಶನ (Show) ದಲ್ಲಿ ಇನಾಂ ಪಡೆದವರಿಗೆ ಕೊಡತಕ್ಕ ಬಗ್ಗೆ ಅಚ್ಚಿನ ಸರ್ಟಿಫಿಕೇಟು ನಕಲು ಬಂದದ್ದನ್ನು ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರ 24—4—07ನೆ ಮರ್ಸ್ಕಂ 9781-7—L. B. 320-06—7ನೆ ನಂಬರು ಡಾಕೆಟ್ಟುನೊಡನೆ ತಿಳುವಳಿಕೆ ಬಗ್ಗೆ ಬಂದದ್ದು ಓದಲಾಯಿತು.

ಆ ಸರ್ಟಿಫಿಕೇಟಿನ ಮೇಲ್ಭಾಗದಲ್ಲಿ "ಬೆಂಗಳೂರು ಡಿಸ್ಟ್ರಿಕ್ಟು ಫಂಡು" ಎಂದು ಬರಿಯಬೇಕೆಂತಲೂ ಪ್ರತಿ ಒಂದು ಸರ್ಟಿಫಿಕೇಟಿನಲ್ಲಿಯೂ ಡಿಸ್ಟ್ರಿಕ್ಟು ಬೋರ್ಡಿನ ಸೀಲ್ ಇರಬೇಕೆಂತಲೂ ಮತ್ತು ಈ ಸರ್ಟಿಫಿಕೇಟುಗಳು ಬುಕ್ಕು ಫಾರಂನಲ್ಲಿ ( ) ಕೌಂಟರು ಫಾಯಿಲ್ ಮತ್ತು ನಂಬರುವಾರು ಇರಬೇಕೆಂದು ರಿಮಾರ್ಕಿನೊಡನೆ ರಿಕಾರ್ಡು ಮಾಡಲಾಯಿತು.

9. ಈ ಡಿಸ್ಟ್ರಿಕ್ಟಿನಲ್ಲಿ ಕಾಲರಾ ಪ್ರಾಪ್ತವಾದ ಕಾಲದಲ್ಲಿ ಉಪಯೋಗಕ್ಕೆ ಅಬ್ಸಿನಿಯನ್ ಟ್ಯೂಬವೆಲ್ಸು ಖರೀದಿಗೆ ತೆಗದುಕೊಳ್ಳತಕ್ಕ ವಿಚಾರದಲ್ಲಿಯೂ ಮತ್ತು ಆ ಮೊಬಲಗನ್ನು ಯಾವದರಿಂದ ವಹಿಸಬಹುದೆಂಬ ವಿಚಾರದಲ್ಲಿಯೂ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಲ್ಪಿದ 25—4—07ನೆ ಮರ್ಸ್ಕಂ 9842 L. B. (413-06)-2ನೆ ನಂಬರು ಡಾಕೆಟ್ಟು ಓದಲಾಯಿತು.

ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿಯೂ ಕಾಲರಾ ಪ್ರಾಪ್ತವಾದ ಕಾಲಗಳಲ್ಲಿ ಜರೂರಾತಿಯಾಗಿ ಉಪಯೋಗಿಸಲು 2 ಟ್ಯೂಬವೆಲ್ಸುಗಳು ಇರಬೇಕೆಂತಲೂ ಇದರ ಖರ್ಚು ಡಿಸ್ಟ್ರಿಕ್ಟು ಫಂಡಿನಿಂದ ವಹಿಸಬೇಕೆಂತಲೂ ಮತ್ತು ಈ ಟ್ಯೂಬವೆಲ್ಸು ಇಡೋಣದರಿಂದ ಅನುಕೂಲವು ಕಂಡುಬಂದಿರುವದರಿಂದ ಅನುಕೂಲವಾಗುವ ಸ್ಥಳಗಳಲ್ಲಿ ಭಾವಿಗಳನ್ನು ತೆಗಿಸುವದಕ್ಕೆ ಬದಲಾಗಿ ಇವುಗಳನ್ನೇ ಉಪಯೋಗಿಸಬಹುದೆಂತಲೂ ತೀರ್ಮಾನ ಮಾಡಲಾಯಿತು.

10. ಚನ್ನಪಟ್ಟಣ ತಾಲ್ಲೂಕು ತಗಚಗೆರೆಯಲ್ಲಿ ಮಹದೇಶ್ವರ ಜಾತ್ರೆ ಕಾಲದಲ್ಲಿ ಜಾನುವಾರು ಪ್ರದರ್ಶನ (Fair) ಮಾಡಲು ಅಪ್ಪಣೆ ಕೊಡಿಸಬೇಕೆಂತ ಕ್ಲೋಸಿಪೇಟೆ ಸಬ್ ಡಿವಿಜನ್ ಆಫೀಸರವರು 30—4—07ನೆ ಮರ್ಸ್ಕಂ 842ನೆ ನಂಬರು ಡಾಕೆಟ್ಟಿನಲ್ಲಿ ಶಿಫಾರಸು ಮಾಡಿದ್ದು ಓದಲಾಯಿತು.

ಇಂಥಾ ಜಾನುವಾರು ಪ್ರದರ್ಶನಕ್ಕೆ ಪ್ರೋತ್ಸಾಹ ಪಡಿಸಬೇಕೆಂತಲೂ ಪ್ರಸಕ್ತದಲ್ಲಿ ಪ್ರದರ್ಶನಕ್ಕೆ ಅಪ್ಪಣೆ ಕೊಡಬಹುದೆಂತಲೂ ಅಲ್ಲದೆ ಜಾತ್ರೆಯಲ್ಲಿ ತರತಕ್ಕ ದನಗಳಿಗೆ ಪ್ರತಿ ಒಂದು ರಾಸಿಗೂ ಅಲ್ಪ ರುಸುಂ ವಸೂಲ್ಮಾಡಿ ಆ ಮೊಬಲಗನ್ನು ಬಹುಮಾನ ಕೊಡುವದಕ್ಕೆ ಉಪಯೋಗಿಸಿಕೊಳ್ಳಬೇಕೆಂತಲೂ ತೀರ್ಮಾನವಾಯಿತು.

11. ಅಮ್ರಿತಮಹಲ್ ಗೂಳಿಗಳನ್ನು ಅರ್ಧ ಖರೀದಿಗೆ ಕುಷಬಾಷ್ ಜನಗಳಿಗೆ ಕೊಡತಕ್ಕ ವಿಚಾರದಲ್ಲಿ ಮಿಲಿಟರಿ ಅಸಿಸ್ಟೆಂಟರಿಂದ ತಲ್ಪಿದ 19—4—07ನೆ ಮರ್ಸ್ಕಂ 3854ನೆ ನಂಬರು ಲೆಟರು ಓದಲಾಯಿತು.

ಈ ಹೋರಿಯನ್ನು ಬ್ರೀಡಿಂಗಿಗೆ ಅಂದರೆ ಬೀಜದಹೋರಿಯಾಗಿ ಮಾತ್ರ ಉಪಯೋಗಿಸಿಕೊಳ್ಳಬೇಕೆಂದು ಅರ್ಜಿದಾರಿ ನರಹರಿ ಅಯ್ಯನಿಗೆ ತಿಳಿಸಿ ಮಿಲಿಟರಿ ಅಸಿಸ್ಟೆಂಟರವರು ನಮೂದಿಸಿರುವ ಖರೀದಿಗೆ ತೆಗದುಕೊಳ್ಳಬೇಕೆಂದು ತೀರ್ಮಾನವಾಯಿತು.

12. ಬೆಂಗಳೂರು ತಾಲ್ಲೂಕು ದೇವರಜೀವನಹಳ್ಳಿ ತೋಲುಷಾಪು ಇಂಪ್ರೂವ್ ಮಾಡತಕ್ಕ ವಿಚಾರದಲ್ಲಿ ಬೆಂಗಳೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ 29—3—07ನೆ ಮರ್ಸ್ಕಂ 842ನೆ ಲೆಟರು ಓದಲಾಯಿತು.

ಈ ವಿಚಾರದಲ್ಲಿ ಸ್ಯಾನಿಟರಿ ಇಂಜನೀಯರ ಅಭಿಪ್ರಾಯ ಕೇಳಬೇಕೆಂದೂ ಅದಕ್ಕೆ ಆಗಬೇಕೆಂಬುವ ಕಾಮಗಾರಿಗಳಿಗೆ ಅಂದಾಜು ತಯಾರ್ಮಾಡಿಸಬೇಕೆಂತಲೂ ಮತ್ತು ಆ ಖರ್ಚು ಮೊಬಲಗು ತೋಲುಷಾಪು ಸ್ವಂತಕರ್ತರಿಂದ ಕೊಡುವ ಹಾಗೆ ಮಾಡುವದಾಗಿಯೂ ತೀರ್ಮಾನ ಮಾಡಲಾಯಿತು.

ಗೈರ್ ಹಾಜರು.

ಎಗ್ಸಿಕ್ಯೂಟಿವ ಇಂಜನೀಯರು, ಮ|| ಬಿ. ಎಸ್. ವೆಂಕಟಾಚಾರು (ಡಿಸ್ಟ್ರಿಕ್ಟಿನೊಳಗೆ ಸರ್ಕ್ಯೂಟ ಹೋಗಿದ್ದದರಿಂದ).

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

ಬೆಂಗಳೂರು ತಾಲ್ಲೂಕು ಮೆ|| ವೇಲುಮೊದಲಿಯಾರು.
ದೊಡ್ಡಬಳ್ಳಾಪುರ ತಾಲ್ಲೂಕು ಮೆ|| ಕರಿಗಿರಿಯಪ್ಪನವರು.
ನೆಲಮಂಗಲ ತಾಲ್ಲೂಕು ಮೆ|| ಸೋಂಡೇಕೊಪ್ಪದ ದಾಸಪ್ಪನವರು.
ಕಾರ್ಕಾಹಳ್ಳಿ ತಾಲ್ಲೂಕು ಮೆ|| ಯಾಲಕ್ಕಿಗೌಡರು.
ಮಾಗಡಿ ತಾಲ್ಲೂಕು ಮೆ|| ಕೆ. ಕೃಷ್ಣಮೂರ್ತಿರಾಯರು.
ಕ್ಲೋಸೆಪೇಟೆ ಸಬ್ ತಾಲ್ಲೂಕು ಮೆ|| ಕರೇಭಾವನಾ ನರಸಿಂಹಯ್ಯಶೆಟ್ಟರು.
ಚೆನ್ನಪಟ್ಣ ತಾಲ್ಲೂಕು ಮೆ|| ಸಾಹುಕಾರ್ ಮುಸ್ತಾಫಸಾಹೇಬರವರು.
ಆನೆಕಲ್ ತಾಲ್ಲೂಕು ಮೆ|| ಕೆ. ಪುಟ್ಟಪ್ಪನವರು.
ಬೆಂಗಳೂರು ಮತ್ತು ನೆಲಮಂಗಲ ತಾಲ್ಲೂಕು ಮೆ|| ಕೆ. ಸುಬ್ಬಣ್ಣನವರು.
ಹೊಸಕೋಟೆ ಮತ್ತು ಆನೆಕಲ್ ತಾಲ್ಲೂಕು ಮೆ|| ಶೀನಪ್ಪನವರು.
ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು ಮೆ|| ರಾಮಚಂದ್ರಪ್ಪನವರು.

ಗೈರ್ ಹಾಜರು.

ದೇವನಹಳ್ಳಿ ತಾಲ್ಲೂಕು ಮೆ|| ಶ್ರೀಕಂಠರಾಯರು (ರಜಾಯಿಷಿ ಕೇಳಿಧೆ).
ಚೆನ್ನಪಟ್ಣ ಮತ್ತು ಕಾರ್ಕಾಹಳ್ಳಿ ತಾಲ್ಲೂಕು ಮೆ|| ಪುಟ್ಟಮಾಸ್ತಿಗೌಡರು (ಅವರ ಕುಟುಂಬ ಖಾಯಿಲೆ ಸಬಬು)
ಮಾಗಡಿ ಮತ್ತು ಕ್ಲೋಸೆಪೇಟೆ ಸಬ್ ತಾಲ್ಲೂಕು ಮೆ|| ಬಾಳಾಜಿರಾಯರು (ರಜಾಯಿಷಿ ಕೇಳಿಧ).
ಮೆ|| ನ ದಗುಡಿ ರಾಮಣ್ಣನವರು (ಫವತಿ)
,, ಗೋಪಾಲ್ ಖಾನ್, (ಫವತಿ).
,, ಥಾರ್ವ್ ರಾಜೀನಾಮೆ ಸಬಬು

ನೆಲಮಂಗಲ ಮತ್ತು ಚೆನ್ನಪಟ್ಣ ತಾಲ್ಲೂಕುಗಳ ಅಮಲ್ದಾರುಗಳ ವಿನಹ ಬಾಕಿ ತಾಲ್ಲೂಕು ಅಮಲ್ದಾರು ಹಾಜರು. ಚೆನ್ನಪಟ್ಣ ತಾಲ್ಲೂಕು ಅಮಲ್ದಾರು ತಮಗೆ ಮೈಯಲ್ಲಿ ಲಘುವಿಲ್ಲದ ಸಬಬು ಬರಲಿಲ್ಲವೆಂದು ರಿಪೋರ್ಟು ಬರೆದಿದ್ದಾರೆ.

1. ಕಾರ್ಕಾಹಳ್ಳಿ ತಾಲ್ಲೂಕು ಮೂಡೇನಹಳ್ಳಿ ಹಾಸ್ಪೇಟೆ ಬಿಯು ತಾನು ಪುಳುತು ವಗೈರ ರೋಗಗಳನ್ನು ವಾಸಿ ಮಾಡಿರುವದಾಗಿಯೂ ಅದಕ್ಕಾಗಿ ಗೌರ್ನಮೆಂಟಿನಿಂದ ಕೊಂಚ ಮೊಬಲಗು ಕೊಡಿಸಬೇಕೆಂದು ಗವರ್ನಮೆಂಟಿಗೆ ಬರೆದುಕೊಂಡ ಅರ್ಜಿಯನ್ನು ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರು 21—12—06ನೆ ಮರ್ಕುಂ 5391—L. F. 262-06—2ನೆ ನಂಬರು ಹಾಕೆಟ್ಟಿನೊಡನೆ ರಿಪೋರ್ಟು ಬಗ್ಗೆ ಕಳುಹಿಸಿದ್ದು ಓದಲಾಯಿತು.

ಬೋರ್ಡಿನವರು ಈ ಖರ್ಚನ್ನು ವಹಿಸಲು ಆಗಲಾರದೆಂದು ತೀರ್ಮಾನ ಮಾಡಲಾಯಿತು.

2. ತಾಲ್ಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳ ಟ್ರಾವಲಿಂಗು ಅಲೋಯನ್ಸಿನ ಭೇದದ ವಿಚಾರವಾಗಿ ತಲ್ಪಿದ 6—3—07ನೆ ಮರ್ಕುಂ 7600-9—L. B. 173-06—3ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೆ ಒಂದೇ ವಿಧವಾಗಿ ಟ್ರಾವಲಿಂಗು ಅಲೋಯನ್ಸು ಕೊಡಬೇಕೆಂದು ಬೋರ್ಡಿನವರು ಅಭಿಪ್ರಾಯ ಪಟ್ಟಿರುತ್ತಾರೆ.

3. 1906—07ನೆ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನಲ್ಲಿ ಮಾಡಿದ್ದ ಕೆಲವು ಪ್ರಾವಿಷನ್‌ಗಳನ್ನು ಇನ್ನೂ ಹೆಚ್ಚು ಸಂಗತಿ ತಿಳಿಯಬೇಕೆಂದು ಗೌರ್ನಮೆಂಟನವರು ಮಂಜೂರು ಮಾಡದೆ ಇಟ್ಟಿದ್ದದ್ದನ್ನು ಮಂಜೂರು ಮಾಡಿ ರವಾನಿಸಿದ ಗೌರ್ನಮೆಂಟು ಪ್ರೊಸೀಡಿಂಗ್ಸು ನಂಬರು 75-96-8—L. B 88-06—4ನೆ ಹಾಕೆಟ್ಟು ನಂಬರು 6—2—07 ಓದಲಾಯಿತು.

ರಿಕಾರ್ಡು ಮಾಡಲಾಯಿತು.

4. ಈ ಡಿಸ್ಟ್ರಿಕ್ಟಿನಲ್ಲಿ ಆಸ್ಪತ್ರೆಗಳಿಗೆ ಕಾಂಪೌಂಡು ಗೋಡೆ ಕಟ್ಟಲು ಪ್ರಾವಿಷನ್ ಮಾಡತಕ್ಕ ವಿಚಾರದಲ್ಲಿ ತಲ್ಪಿದ 6—3—07ನೆ ಮರ್ಕುಂ 7731-40—Med. 35-06—4ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ಈ ಕೆಳಗೆ ವಿವರಿಸಿರುವ ಆಸ್ಪತ್ರೆಗೆ ಕಾಂಪೌಂಡು ಗೋಡೆ ಇಲ್ಲವೆಂತಲೂ, ಚೀಫು ಇಂಜನೀರಿಂದ ಜವಾಬು ಬಂದ ನಂತರ ಅಂದಾಜುಗಳು ತಯಾರು ಮಾಡಲ್ಪಡಬೇಕೆಂತ ತೀರ್ಮಾನವಾಯಿತು.

ದೊಡ್ಡಬಳ್ಳಾಪುರದ ಆಸ್ಪತ್ರೆಗೆ ತಂತಿ ಬೇಲಿ ಇತ್ತು.
ನೆಲಮಂಗಲ ಡಿಟ್ಟೋ ಡಿಟ್ಟೋ
ತ್ಯಾಮಗೊಂಡ್ಲು ಡಿಟ್ಟೋ ಬೇಲಿಯೂ ಇಲ್ಲ.
ಕ್ಲೋಸೆಪೇಟೆ ಡಿಟ್ಟೋ ಮಣ್ಣಿನ ಗೋಡೆ ಇದೆ.
ಕಾರ್ಕಾಹಳ್ಳಿ ಡಿಟ್ಟೋ ಗೋಡೆ ಇಲ್ಲ.
ಮಾಗಡಿ ಡಿಟ್ಟೋ ಡಿಟ್ಟೋ

23. ಬಿಡದಿಯಲ್ಲಿರುವ ಟ್ರಾವಲರ್ಸು ಬಂಗ್ಲೆಗೆ ಸೇರಿದ ಮುಸಾಫರುಖಾನೆಗೆ ಸೇರಿ ವಿಚಾರದಲ್ಲಿ ಎಕ್ಸಿಕ್ಯೂಟಿವ್ ಇಂಜನೀಯರ್ ಬರೆಸಿದ 1—5—07ನೆ ಮಾರ್ಕ್ಕಂ 1973–560ನೆ ನಂಬರು ಡಾಕೇಟು ಓದಲಾಯಿತು.

ಈ ಕಟ್ಟಡ ಮುಸಾಫರುಖಾನೆ ಎಂದು ಹೇಳಲು ಏನು ಆಧಾರ ಇಲ್ಲವಾಗಿಯೂ ಆದರ ಷೋಲ್ಡರ್ ಗುಡಿಸಲೆಂಬದಾಗಿ ತಿಳಿಯ ಬರುತ್ತೆಯಾಗಿ ಈ ಕಟ್ಟಡವನ್ನು ಕೆಡೆದುಹಾಕಿ ಸಾಮಾನುಗಳನ್ನು ಹರಾಜು ಹಾಕಿ ಆ ಮೊಬಲಗು ಕೆಡವು ಹಾಕಿದ್ದಕ್ಕೆ ತಗಲುವ ಖರ್ಚಿಗೆ ಉಪಯೋಗಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

24. ದೊಡ್ಡಬಳ್ಳಾಪುರದ ತಾಲ್ಲೂಕು ಚಿಕ್ಕನಹಳ್ಳಿಯ ಬಾವಿ ತೆಗೆಸತಕ್ಕ ಭಾಗದಲ್ಲಿ ದೊಡ್ಡಬಳ್ಳಾಪುರದ ಸಬ್ ಡಿವೀಜನ್ ಆಫೀಸರು ಬರೆಸಿದ 1—5-07ನೆ ಮಾರ್ಕ್ಕಂ 1207ನೆ ಯಾದಿ ಓದಲಾಯಿತು.

ಈ ಕಾಮಗಾರಿಯು ಸಾಲಿನಲ್ಲಿ ಪೂರೈಸಲು ಕಾಲವಿಲ್ಲವಾಗ ಸಧ್ಯಕ್ಕೆ ಈ ಕೆಲಸ ಹಾಗೇ ಇರಬೇಕೆಂದು ತೀರ್ಮಾನ ಮಾಡಲಾಯಿತು.

25. ಹೊಸಕೋಟೆ ತಾಲ್ಲೂಕು ಹಿಂಡಿಗನಾಳು ಸಂತೆಲಿ ತಿರುಗುವ ವ್ಯಾಪಾರಸ್ಥರಿಂದ ಅಂಗಡಿ ತೆರಿಗೆ ವಸೂಲ್ಮಾಡಲು ಗುತ್ತಿಗೆ ಕೊಡಿಸಬೇಕೆಂದು ಚಿಕ್ಕಬಳ್ಳಾಪುರದ ತಾಲ್ಲೂಕು ಅಂದ್ರಹಳ್ಳಿ ಮಹಮ್ಮದು ಇಸೂಫ್ ಬರೆದುಕೊಂಡ ಅರ್ಜಿ ವಿಚಾರದಲ್ಲಿ ಬೆಂಗಳೂರು ಸಬ್ ಡಿವಿಜನ್ ಆಫೀಸರವರಿಂದ ತಲ್ಪಿದ 22 4—07ನೆ ಮಾರ್ಕ್ಕಂ 943ನೆ ನಂಬರು ಯಾದಿ ಓದಲಾಯಿತು.

ಹಿಂಡಿಗನಾಳು ಮುನಿಸಿಪಾಲಿಟಿಯು ಅಲ್ಲಿಯೂನಿಯನ್ ಅಲ್ಲ ಆದ್ದರಿಂದ ಈ ತೆರಿಗೆ ವಸೂಲ್ಮಾಡಲು ಕೂಡದಂತಲೂ ಈತನ ಅರ್ಜಿ ತಿರಸ್ಕರಿಸಿರುವದಾಗಿಯೂ ತೀರ್ಮಾನವಾಯಿತು.

ಮುಂದಿನ ಮೀಟಿಂಗು ಆಗಸ್ಟು 15ಕ್ಕೆ ಯೆಂತ ತೀರ್ಮಾನವಾಯಿತು.

ಹೆಚ್. ಹೆಚ್. ಸ್ಪಾರ್ಕ್ಸ್.
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1906–07ನೆ ಇಸವಿ ದಿವಾಳಿ ಕೇಸ್ ನಂಬರ್ 93.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿ ನಮೂದಾಗುವ ವಿಷಯದಲ್ಲಿಯೂ ಮತ್ತು ತರೀಕೆರೆಯ ವಾಸಸ್ಥರಾದ ಹಾಲಿ ತರೀಕೆರೆಯಲ್ಲಿ ಇರುವ ಜಿಗಣೆಖಾನ್ ಹಯಾತಖಾನ್ ಸಾಹೇಬರ ಅರ್ಜಿಯ ವಿಷಯದಲ್ಲಿಯೂ ಸಹ ಮೇಲ್ಕಂಡ ಅರ್ಜಿದಾರರು ಸನ್ 1907ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಈ ಕೋರ್ಟಿಗೆ ಅರ್ಜಿ ಕೊಟ್ಟು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದಲ್ಲಿ ನಮೂದಾಗುವ ಉದಹರಣೆಗಳ ಪ್ರಯೋಜನವನ್ನು ಹೊಂದುವದರ ಮೂಲಕ ಸದರಿ ಕೋಡ್ 351ನೆ ಸೆಕ್ಷನ್ ಪ್ರಕಾರ ದಿವಾಳಿಯಾದವರೆಂಬದಾಗಿ ಅಪ್ಪಣೆ ಆಗಬೇಕೆಂದು ಕೋರಿಕೊಂಡಿರುವದರಿಂದ ಸನ್ 1907ನೆ ಇಸವಿ ಆಗಸ್ಟು ತಾರೀಖು 16 ಹದಿನಾರನೆ ಶುಕ್ರವಾರ ದಿವಿ 11 ಘಂಟೆಗೆ ಸದರಿ ಹಯಾತಖಾನ್ ಸಾಹೇಬರ ಅರ್ಜಿ ವಿಷಯ ದರ್ಯಾಪ್ತು ಮಾಡಲ್ಪಡುವದರಿಂದ ಆ ಕಾಲದಲ್ಲಿ ಅರ್ಜಿದಾರರು ಕೋರ್ಟು ರೂಬರೂ ಖುದ್ದು ಹಾಜರಾಗಿ ಕೋರ್ಟಿನವರು ಅವರ ವಿಷಯವಾಗಿ ಹುಕುಂ ಮಾಡುವ ಮೇರಿಗೆ ಅವರ ವಹನೆ ನಡದುಕೊಳ್ಳತಕ್ಕದ್ದೆಂತಲೂ ಮತ್ತು ಏಜನ್ ಈ ಕೆಳಗೆ ನಮೂದಿಸುವ ಲೇಣೇದಾರರು ಹಾಜರಾಗಿ ಅವರ ಕೋರಿಕೆಯನ್ನು ಆಕ್ಷೇಪಿಸುವುದಕ್ಕೆ ಸ್ವತಂತ್ರರಾಗಿರುತ್ತಾರೆಂದು ಈ ಮೂಲಕ ನೋಟೀಸ್ ಕೊಡಲ್ಪಟ್ಟು ಇರುತ್ತದೆ.

ಸನ್ 1907ನೆ ಇಸವಿ ಜೂನ್ 29ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟು ಇದೆ.

ಲೇಣೇದಾರು.

1. ಶಿದ್ರಾಮಣ್ಣನ ಶಿದ್ದಣ್ಣ.
2. ಮಂಗ್ಳೂರು ಮಾರ್ಗಂ ಅಂಡರ್ಸನ್.
3. ತರೀಕೆರೆ ತಾಲ್ಲೂಕು ನಂದಿಬಟ್ಲು ಕುಳ್ಳಿ ಗೌಡರು.
4. ತರೀಕೆರೆಯಲ್ಲಿರುವ ಜವಳಿಅಂಗಡಿ ಶೀರ್ಯದ ಹುಸೇನ್ ಸಾಹೇಬರು.
5. ಡಿಟೋ ಸ್ಥಳದ ದಾವಣಗೆರೆ ಮುರಿಗೆಪ್ಪನ ರುದ್ರಪ್ಪನ ಹೆಂಡತಿ ಪರವ್ವ.
6. ಡಿಟೋ ಸ್ಥಳದ ಶಿಕಲಗಾರ ಅಬ್ದುಲ್ ರಜಾಕ್ ಸಾಹೇಬರ ಮಕ್ಕಳು ಅಬ್ದುಲ್‌ಖಾದರ್, ಖಾದರ್‌ಮೊಹದೀನ್, ದಸ್ತಗಿರಿ ಸಾಹೆಬರು.
7. ಡಿಟೋ ಸ್ಥಳದ ಅರ್ಜಿದಾರನ ಹೆಂಡತಿ ಮಹಬೂಬ್‌ಬಿ ಯವರು.
8. ಕೊಪ್ಪದಲ್ಲಿರುವ ಮಾರಿಸ್ ಲೆಂಬೊ.
9. ಶಿವಮೊಗ್ಗಾ ತಾಲ್ಲೂಕು ಆಯನೂರಲ್ಲಿರುವ ಸಾಹುಕಾರ್ ಪುಸ್ಮಾನ್ ಸಾಹೇಬರ ಮಕ್ಕಳು ಅಬ್ದುಲ್‌ಕರಿಂ ಸಾಬರು.
10. ತರೀಕೆರೆ ತಾಲ್ಲೂಕು ನಂದಿಬಟ್ಲನಲ್ಲಿರುವ ಕಾಫಿಪ್ಲಾಂಟರ್ ಬೈರಶೆಟ್ಟಿ ಕರಿಯಣ್ಣನವರು.
11. ದಾವಣಗೆರೆಯಲ್ಲಿರುವ ರುದ್ರಪ್ಪನ ಹೆಂಡತಿ ರುದ್ರವ್ವನವರು.
12. ದಾವಣಗೆರೆಯಲ್ಲಿರುವ ಹುಡಿಕೊಂಡಿ ಮುರಿಗೆಪ್ಪನವರ ಮಗ ಗಡ್ಲಪ್ಪನವರು.
13. ಸೇಲಂ ಜಿಲ್ಲಾ ತಿರುಪತ್ತೂರಿನಲ್ಲಿರುವ ಹುಸೇನ್ ಮೊಹರ್ದಿನ್ ಸಾಹೇಬರು.

ಆರ್. ಬಿ. ಪ್ಯಂವಾರ್,
ಡಿಸ್ಟ್ರಿಕ್ಟು ಜಡ್ಜ್.

ಗವರ್ನಮೆಂಟ ಸೆಂಟ್ರಲ್ ಬುಕ ಡಿಪೋ.

ನೋಟಿಸ.

ದರ್ಬಾಗಾ ಬೆಂಗಳೂರು, ತಾರೀಖು 2ನೆ ಜೂನ 1907.

ಇದರಡಿ ಕಂಡ ಪುಸ್ತಕಗಳು ಬೆಂಗಳೂರು ಗವರ್ನಮೆಂಟು ಸೆಂಟ್ರಲ್ ಬುಕ ಡಿಪೋವಿನಲ್ಲಿ ವಿಕ್ರಿ ಬಗ್ಗೆ ಹಾಜರಿರುತ್ತವೆ.

		ಆ.	ಪೈ.
1908ನೆ ಇಸವಿ ಕನ್ನಡ ಗದ್ಯಭಾಗ	.. ....	2	6
,, ಸಂಸ್ಕೃತ ಗದ್ಯಭಾಗ	.. ....	2	6
ಪಾಠಶಾಸ್ತ್ರ (ಹೊಸಮುದ್ರಣ)	... ...	6	0
ಆಳ್ವಾರೈಯ್ಯಂಗಾರ್ರ III ನೆ ಸ್ಟ್ಯಾಂಡರ್ಡ ಗಣಿತ	.. ...	5	0
ಡಿಟೋ V ನೆ ಡಿಟೋ	...	8	0
ಕನ್ನಡ III ನೆ ರೀಡರು (ಬೊಂಬಾಯಿ)	.. ...	6	0
ಕಥಾಸಪ್ತತಿ (ಹೊಸಮುದ್ರಣ)	.. ..	2	6
ಶಬ್ದಾದರ್ಶ ಡಿಟೋ	.. ...	3	0

ಪೋಸ್ಟೇಜ ಅಲಾಹಿದಾ.

ಎಸ. ಅಬ್ದುಲ್ ಹೈ,
ಕ್ಯೂರೇಟರ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 29.

ಬೆಂಗಳೂರು, ಗುರುವಾರ, ಜುಲೈ ತಾ॥ 18, ಸನ್ 1907.

II ನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯವರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 12ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟ ಶ್ರೀನಿವಾಸಪುರ ಮತ್ತು ಬಾರಿಂಗಪೇಟೆ ತಾಲ್ಲೂಕುಗಳಿಗೆ ಸೇರಿದ ವಿಶಿಷ್ಟ ಸ್ಟೇಟ್ ಫಾರೆಸ್ಟು, ಪ್ಲಾಂಟೇಷನ್ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1908ನೆ ಇಸವಿ ಜೂನ್ 30ರ ವರಿಗೆ ಸುಮಾರು 11 ತಿಂಗಳು ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡೆಯಲು 1907ನೆ ಆಗಸ್ಟ 7ನೆ ತಾರೀಖಿನ ವರಿಗೆ ಕೋಲಾರ ಡಿಸ್ಟ್ರಿಕ್ಟ ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ನೋಟು :—ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರಿರುವದಿಲ್ಲ.

(2) ದರಖಾಸ್ತುಗಳಲ್ಲಿ ಕೋಲಾರ್ ಡಿಸ್ಟ್ರಿಕ್ಟಿನ 1ನೆ ಪ್ಯಾರಾದಲ್ಲಿ ಕಂಡ ತಾಲ್ಲೂಕುಗಳಲ್ಲಿರುವ ತಂಗಡಿ ಮತ್ತು ಕಕ್ಕೆ ಚಕ್ಕೆಗೆ ತಾಲ್ಲೂಕುವಾರ್ ಮೊತ್ತವಾಗಿ ಮೊಬಲಗು ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೆ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರೆದು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್‌ರವರ ವಿಳಾಸಕ್ಕೆ ರವಾನಿಸಬೇಕು.

(4) ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ್‌ರವರ ಆಫೀಸಿನಲ್ಲಿ 1907ನೆ ಇಸವಿ ಆಗಸ್ಟ 8ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್‌ರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡೆಯುವರು, ದರಖಾಸ್ತುದಾರರುಗಳೆಲ್ಲಾ ಹಾಜರಿರಬೇಕೆಂದು ಇದರಿಂದ ತಿಳಿಸಿರುತ್ತೆ.

(5) ಮೇಲ್ಕಂಡ ಆಫಿಸರು ಯಾವ ಅಥವಾ ಎಲ್ಲಾ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೆ ಮತ್ತು ಯಾವ ಕಾರಣವು ನಮೂದಿಸದೇನೆ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಟೆಂಡರುಗಳು ಡೆಪ್ಯುಟಿ ಕಮಿಷನರ್ ಸಾಹೇಬರ ಮಂಜೂರಾತಿಗೆ ಒಳಪಟ್ಟಿರುತ್ತೆ.

(6) ಮಂಜೂರ್ಮಾಡಲ್ಪಟ್ಟ ದರಖಾಸ್ತು ಬಾಬತು ಠೇವಣಿ ಮೊಬಲಗು ಉಳಿಸಿಕೊಳ್ಳಲ್ಪಡುತ್ತೆ. ಬಾಕಿ ದರಖಾಸ್ತುಗಳ ಬಾಬತು ಮೊಬಲಗು ಕೂಡ್ಲೆ ವಾಪಸು ಮಾಡಲ್ಪಡುತ್ತೆ.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ ಒಂದುವಾರದ ಒಳಗಾಗಿ ದರಖಾಸ್ತು ಮೊಬಲಗಿನ ಒಟ್ಟು ಮೊತ್ತದ ಪೈಕಿ ಅರ್ಧ ಭಾಗವನ್ನು ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಕೋಲಾರ ಡಿಸ್ಟ್ರಿಕ್ಟ ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡೆದುಕೊಳ್ಳುತ್ತೇವೆಂಬ ಬಗ್ಯೆ

ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ನುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಯಾವ ಕಾರಣವನ್ನ ನಮೂದಿಸದೇನೆ ತಿರಸ್ಕರಿಸಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಸ್ವತಂತ್ರರಾಗಿರುತ್ತಾರೆ. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಂಜೂರ್ ಮಾಡದ ವರ್ಗದಾರ ಯಾ ಆಸ್ಸೈನಿಯಿಂದ ಜಮಾಯಿಸಲ್ಪಟ್ಟ ಚಕ್ಕೆಯು ಬಗರ್ ಹುಕ್ಕುಂ ಜಮಾಯಿಸಿದಂತೆ ಭಾವಿಸಲ್ಪಡುತ್ತೆ.

(10) ಇಜಾರೆದಾರನು ಒಟ್ಟು ಇಜಾರೆ ಮೊಬಲಗಿನಲ್ಲಿ ನೆ ಪ್ಯಾರಾದಲ್ಲಿ ಕಂಡಂತೆ ಸರ್ಕಾರಕ್ಕೆ ಪಾವತಿ ಮಾಡಿದ್ದು ಜಾತಾ ಬಾಕಿ ಉಳಿಯುವ ಮೊಬಲಗನ್ನು ಎರಡು ಸಮ ಕಿಸ್ತುಗಳಲ್ಲಿ ಕ್ರ ಕೆಳಗೆ ನಮೂದಿಸಿರುವ 1907ನೆ ಸೆಪ್ಟಂಬರ್ ಮತ್ತು ನವಂಬರ್ 30ನೆ ತಾರೀಖಿನ ವಳಗಾಗಿ ಕೊಡಬೇಕು. ತಪ್ಪಿದರೆ ಅವನ ಇಜಾರೆ ಹಕ್ಕನ್ನು ಹಿಂದೆ ಕೊಟ್ಟಿರುವ ಮೊಬಲಗು ಸಹಾ ಕಳೆದುಕೊಳ್ಳುವದಲ್ಲದೆ ಇನ್ನು ಬಾಕಿ ಇರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಕೊಡಲು ಗುರಿಯಾಗುತ್ತಾನೆ. ಸದರಿ ಮೇರಿಗೆ ಬಾಕಿ ಆಗತಕ್ಕ ಮೊಬಲಗು ರೆವಿನ್ಯೂ ಬಾಕಿಯಂತೆ ಸದರಿಯವನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟರೇ ಆಗಲೀ ಎಳೇ ಗಿಡಗಳನ್ನ ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ಕಕ್ಕೆ ಚಕ್ಕೆಯನ್ನು ಭೂಮಟ್ಟಕ್ಕೆ ಕತ್ತರಿಸಬೇಕು.

(IV) ಇಜಾರೇ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲ್ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲೀ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲೀ ತನಿಖಿಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(V) ಚಕ್ಕೆ ತೆಗೆಯಲ್ಪಟ್ಟ ಕಟ್ಟಿಗೆ ಅಥವಾ ಅಂಥಾ ಕಟ್ಟಿಗೆಯಿಂದ ತಯಾರಾದ ಇದ್ದಲು ಸಾಗಿಸುವದರಲ್ಲಿ ಪ್ರತಿ ಗಾಡಿ ಚಕ್ಕೆ ಸಂಗಡವೂ ಒಂದು ಪ್ಯಾಸ್ ಇರತಕ್ಕದ್ದು. ಸದರಿ ಪ್ಯಾಸ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಸೈಸ್ ಮೊಹರ್ ನಿಶಿ ಪಡದ ಅಚ್ಚು ಫಾರಂ ಬುಕ್ಕಿನಿಂದ ಕಂಟ್ರಾಕ್ಟರು ಯಾ ಅವರ ರಿಜಿಸ್ಟರ್ಡ್ ಏಜಂಟ್ ಕೊಡತಕ್ಕದ್ದಾಗಿರುತ್ತೆ. ಸದರಿ ಪ್ರತಿ ಒಂದು ಪ್ಯಾಸ್ ಬುಕ್ಕು ಪೂರೈಸಿದ ಕೂಡ್ಲೆ ಕೌಂಟರ್ ಫಾಯಿಲಗಳನ್ನು ಕಂಟ್ರಾಕ್ಟರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿಗೆ ಕಳುಹಿಸತಕ್ಕದ್ದು.

(VI) ಕಂಟ್ರಾಕ್ಟರ್ ಯಾ ಆತನ ಜನಗಳ ಅಜಾಗರೂಕತೆಯಿಂದ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆ ಉಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(VII) 1908ನೆ ಜುಲೈ ಮಾಹೆ 15ನೆ ತಾರೀಖು ವಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜಮಾವಣೆ ಮಾಡಿ ದಾಸ್ತಾನು ಮಾಡಿರುವ ಎಲ್ಲಾ ಚಕ್ಕೆಯನ್ನು ಕೋಲಾರ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(VIII) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುತ್ತೆ. ಮತ್ತು ಆದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯುನ್ನೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು (1,000) ರೂಪಾಯಿಗೆ ಜಾಸ್ತಿ ಇಲ್ಲದಂತೆ ಜುರ್ಮಾನೆಯನ್ನು ಸಹಾ ವಿಧಿಸಬಹುದು.

(IX) ಚಕ್ಕೆ ಸಮೇತವಿರುವ ಕಟ್ಟಿಗೆಯು ಗುತ್ತಿಗೆದಾರನದಾಗಿರುತ್ತೆ.

ವೈ. ಶೀತಾರಾಮೈಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ನೋಟಿಸ್.

ಹಾಸನ ಡಿಸ್ಟ್ರಿಕ್ಟು 1907—08ನೆ ಸಾಲ್ ಬಾಬ್ತು ಪಸಾರೆ ಬಾಬಿನ ಜಮಾವಣೆ ಹಕ್ಕು ಹರಾಜ್ ವಿಚಾರದ ಇಸ್ತಿಹಾರನ್ನು 1907ನೆ ಜುಲೈ 4ನೆ ಮುರ್ಸಂ 26ನೆ ನಂಬರ್ ಮೈಸೂರು ಗೆಜೆಟ್ 2ನೆ ಪಾರ್ಟ 313—314ನೆ ಪೇಜಿನಲ್ಲಿ ಫಾಯಿಷ್ ಮಾಡಿರುತ್ತೆ ತಿಳಿಯುವದು.

ಹಾಸನ ಡಿಸ್ಟ್ರಿಕ್ಟಿನಲ್ಲಿ ಅರಗಿನ ಫಸಲ್ ಇಟ್ಟು ರೂಢಿಸಿಕೊಳ್ಳುವ ಹಕ್ಕು ಹರಾಜು ಇಸ್ತಿಹಾರನ್ನು 19 7ನೆ ಜುಲೈ 11ನೆ ಮುರ್ಸಂ ಮೈಸೂರು ಗೆಜೆಟ್ 2ನೆ ಭಾಗದ 323ನೆ ಪೇಜ್‌ನಲ್ಲಿ ಫಾಯಿಷ್ ಮಾಡಿರುತ್ತೆ ಎಲ್ಲರಿಗೂ ತಿಳಿಯತಕ್ಕದ್ದು.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ನ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ನರಗನಹಳ್ಳಿ ಗ್ರಾಮದ ಜೋಡಿದಾರ್ ಸಭಾಪತಿರಾವ್ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸ್ವಿ ಆಗಸ್ಟು 12ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906–07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 192—2—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟರು ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಇಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್ — ಕಟ್ಟಡಗಳು. ಕಟ್ಟಡದಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.	ಅಂದಾಜು.	ಸರ್ಕಾರಕ್ಕೆ ಕೊಡತಕ್ಕ ಜೋಡಿ.	ಸರ್ಕಾರಕ್ಕೆ ಬರತಕ್ಕ ಬಾಕಿ.
								ಎ. ಗು.	ರೂ. ಆ. ಪೈ.	ರೂ.	ರೂ. ಆ.	ರೂ. ಆ. ಪೈ.
ಹೊಸಕೋಟೆ	ನಂದಗುಡಿ	ಖಾಯಂಗುತ್ತಾ ಲಿಂಗಾಪುರ	ಸಭಾಪತಿರಾವ್	...	...	...	ಖರಾಬು	162 19	5 0 0	500	88 3	192 2 6
							ಖುಷ್ಕಿ ...	149 21	104 0 0			
							ತರಿ ...	21 21	70 2 0			
							ಬಾಗಾಯಿತು ...	0 13	2 0 0			
								333 34	181 0 0			

ಗ್ರಾಮ ಚಕ್ಕು ಬಂದಿ.
ಪೂರ್ವಕ್ಕೆ—ಅಗಸರಹಳ್ಳಿ.
ಪಶ್ಚಿಮಕ್ಕೆ—ಬೀರಹಳ್ಳಿ.
ಉತ್ತರಕ್ಕೆ—ಹೆಟ್ಟಕ್ಕಿ.
ದಕ್ಷಿಣಕ್ಕೆ—ತಾವರೆಕೆರೆ.

ಷರಾ—ಕಾಯಂಗುತ್ತಾದಾರರಿಂದಲಾಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟುಮಾಡಲ್ಪಟ್ಟ ತವಾಂ ಹಿಡುವಳಿಗಾಗಲಿ, ದೇಣಿಗೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ಒಳಪಟ್ಟಿರುವದಿಲ್ಲ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಕ್ಯಾನಪ್ಪನಹಳ್ಳಿ ಗ್ರಾಮದ ಜೋಡಿದಾರ್ ಸಭಾಪತಿರಾವ್ ಯಿಂದ ಬರಬೇಕಾದ ಜಮಿನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಆಗಸ್ಟ 13ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಛಡೆ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906-07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ್ದು ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರಿಗೆ ರೂಪಾಯಿ 524—2—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಸ್ವತ್ತಿನ ಹೆಸರು	ಕಟ್ಟಡಗಳು. ಅಂದಾಜು ಕಿಮ್ಮತ್ತು	ಜಮೀನು. ನಂಬರ್ ಅಥವಾ ಬ್ಲಾಕಿನ ಹೆಸರು	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯಿತು	ಜಮೀನು. ವಿಸ್ತೀರ್ಣ	ಜಮೀನು. ಕಂದಾಯ	ಅಂದಾಜು.	[illegible]	[illegible]
									ಎ. ಗು.	ರೂ. ಆ. ಪೈ.			
ಬೆಂಗಳೂರು	ಹೊಸಕೋಟೆ	ನಂದಗುಡಿ	ಕ್ಯಾನಪ್ಪನಹಳ್ಳಿ	ಸಭಾಪತಿರಾವ್	...	[illegible]	...	ಖರಾಬು ...	275 34	8 8 0	ರೂ. 1,500	ರೂ. 314 ಆ. 7	ರೂ. 524 ಆ. 2 ಪೈ 4
								ಖುಷ್ಕಿ ...	212 11	128 14 0			
								ತರಿ	39 16	47 12 0			
								ಬಾಗಾಯಿತು	10 36	29 5 0			
									538 17	214 7 0			

ಗ್ರಾಮಕ್ಕೆ ಚಕ್ಕುಬಂದಿ.

ಪೂರ್ವಕ್ಕೆ—ಗೇರಹಳ್ಳಿ ಮತ್ತು ಯಲಚೆಹಳ್ಳಿ.
ಪಶ್ಚಿಮಕ್ಕೆ—ಬಿಸನಹಳ್ಳಿ.
ಉತ್ತರಕ್ಕೆ—ಕಾಯಂಗುತ್ತ ಶಿವನಪುರ.
ದಕ್ಷಿಣಕ್ಕೆ—ಬಿಸನಹಳ್ಳಿ ಮತ್ತು ಯಲಚೆಹಳ್ಳಿ.

ಷರಾ—ಜೋಡೀದಾರರಿಂದಲಾಗಲಿ ಕಾಯಂಗುತ್ತಾದಾರರಿಂದಲಾಗಲಿ ಬಾಧ್ಯತೆ ಮೂಲಕ ಇತರರುಗಳಿಗೆ ಹಿಂದೆ ಇದ್ದವರಿಂದಲಾಗಲಿ ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗಾಗಲಿ ಬೇಹೆಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮುಶ್ರಾವ ಸಂಬಂಧಗಳಿಗಾಗಲಿ ಸದರಿ ಹರಾಜು ಒಳಪಟ್ಟಿರುವದಿಲ್ಲ.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ನರಗನಹಳ್ಳಿ ಗ್ರಾಮದ ಜೋಡಿದಾರ ಸಂಪಂಗಿರಾವ್ ವಗ್ಯೆರೇಂದ ಬರಜೇಕಾದ ಜಪ್ತಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಆಗಸ್ಟ್ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಅದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತು ದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906-07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರಿಗೆ ರೂಪಾಯಿ 899-14-8 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್‌ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್‌ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‌ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೆಯೋ ಯಾ ಏಜಂಟೆಯಾ ಮುಖ್ತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕಂತಲೂ, ಇತರರಿಗೋಸ್ಕರ ಮುಖ್ತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‌ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್‌ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ, ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟ ಕಮಿಷನವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರಿ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರು ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಅಂದಾಜು.	ಸಾಲೀಯಾನಾ ಸರ್ಕಾರಕ್ಕೆ ಬರತಕ್ಕ ಜೋಡಿ ಯಾ ಖಾಯಂ ಗುತ್ತಾ.	ಸರ್ಕಾರಕ್ಕೆ ಬರತಕ್ಕ ಬಾಕಿ.
ಹೊಸಕೋಟೆ	ನಂದಗುಡಿ	ಕಾಯಂಗುತ್ತಾ ಶಿವನಾಪುರ	ಸಂಪಂಗಿರಾವ್ ವಗ್ಯೆರೆ	...	...	...	ಖರಾಬು ...	279	11	8	12	ರೂ. 1,000	ರೂ. ಆ. ಪೈ. 773 13 5	ರೂ. ಆ. ಪೈ. 899 11 8
							ಖುಷ್ಕಿ ...	243	7	349	2			
							ತರಿ ...	35	8	124	2			
							ಬಾಗಾಯತು.	55	14	211	4			
								613	0	693	4			

ಗ್ರಾಮ ಚಕ್ಕುಬಂದಿ.

ಪೂರ್ವಕ್ಕೆ—ಬೀರಹಳ್ಳಿ.
ಪಶ್ಚಿಮಕ್ಕೆ—ಬಿಸನಹಳ್ಳಿ ಮತ್ತು ಕರವನಹಳ್ಳಿ.
ಉತ್ತರಕ್ಕೆ—ಗುಳ್ಳೇನಹಳ್ಳಿ ಮತ್ತು ಮೊತ್ತಕದಹಳ್ಳಿ.
ದಕ್ಷಿಣಕ್ಕೆ—ಕಾಯಂಗುತ್ತಾ ಭೀಮಾಪುರ.

ಷರಾ—ಜೋಡಿದಾರರುಗಳಿಂದಾಗಲಿ ಯಾ ಕಾಯಂ ಗುತ್ತಾದಾರರಿಂದಾಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಇದ್ದವರುಗಳಿಂದಾಗಲೀ ಉಂಟು ಮಾಡಲ್ಪಟ್ಟ ತವಾಂ ಹಿಡುವಳಿಗಾಗಲಿ, ದಾನಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ತ್ಯಾವ ಸ್ವತ್ತುಗಳಿಗಾಗಲಿ ಸದರಿ ಹರಾಜು ಮಳ್ಳಟ್ಟಿರುವದಿಲ್ಲ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಕ್ಯಾನಪ್ಪನಹಳ್ಳಿ ಗ್ರಾಮದ ಜೋಡಿದಾರ್ ಮೀನಾಬಾಯಿ ಉರುಫ್ ಅರಳೀಬಾಯಿ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಆಗಸ್ಟು 19ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜ್ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಬಿದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906–07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 67—8—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಇತರರಿಗೋಸ್ಕರ ಮುತಾಲೀಕ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಬಾಕೀದಾರರ ಹೆಸರು	ಸ್ವತ್ತಿನ ತಪಸೀಲ್. ಕಟ್ಟಡಗಳು. ಕಟ್ಟಡದ ಹೆಸರು ಮತ್ತು [illegible]	ಕಟ್ಟಡಗಳು. ಅಂದಾಜು ಕಿಮ್ಮತ್ತು	ಜಮೀನು. ಸರ್ವೆ ನಂಬರು [illegible]	ಜಮೀನು. ಖುಷ್ಕಿ, ತರಿ, ಬಾಗಾಯಿತು	ಜಮೀನು. ವಿಸ್ತೀರ್ಣ	ಜಮೀನು. ಕಂದಾಯ	ಅಂದಾಜು	ಸರ್ಕಾರಕ್ಕೆ ಬರತಕ್ಕ [illegible]	ಸರ್ಕಾರಕ್ಕೆ ಬರತಕ್ಕ ಬಾಕಿ
									ಎ. ಗು.	ರೂ. ಆ. ಪೈ.	ರೂ. ಆ.	ರೂ. ಆ.	ರೂ. ಆ.
ಬೆಂಗಳೂರು	ಬೆಂಗಳೂರು	ಬೇಗೂರು	ಕ್ಯಾನಪ್ಪನ ಅಗ್ರಹಾರ	ಮೀನಾಬಾಯಿ ಉರುಫ್ ಅರಳೀಬಾಯಿ	...	...	...	ಖುಷ್ಕಿ ...	149 21	247 8 0	1,000	67	67
								ತರಿ ...	26 36	120 4 0			
								ಬಾಗಾಯಿತು.	12 38	66 12 0			
									189 15	434 8 0			

ಈ ಗ್ರಾಮದ ಚತುರ್ಸೀಮೆ.
ಪೂರ್ವಕ್ಕೆ—ಹುಲಿಮಾವು ಗ್ರಾಮ ಎಲ್ಲೆ.
ಪಶ್ಚಿಮಕ್ಕೆ—ಕೊತ್ತನೂರು ಎಲ್ಲೆ.
ಉತ್ತರಕ್ಕೆ—ಹುಳಿಮಾವು ಮತ್ತು ಕೊತ್ತನೂರು.
ದಕ್ಷಿಣಕ್ಕೆ—ಗೊಟ್ಟಿಗೆರೆ.

ಷರಾ—ಬಾಕೀದಾರರಿಂದಲಾಗಲಿ ಯಾ ಕಾಯಂ ಗುತ್ತಾದಾರರಿಂದಲಾಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಇದ್ದವರಿಂದಲಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ ದೇಣಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರಿ ಹರಾಜು ಒಳಪಟ್ಟಿರುವದಿಲ್ಲ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

ತಾರೀಖು 11ನೆ ಜುಲೈ 1907.

ಮದ್ದಗಿರಿ ತಾಲ್ಲೂಕು ಮಿಡಿಗೇಸಿ ಹೋಬಳಿ ಐಯ್ಯನಹಳ್ಳಿ ಗ್ರಾಮವನ್ನ 1907ನೆ ಇಸವಿ 28ನೆ ಆಗಸ್ಟು ತಾರೀಖಿನಲ್ಲಿ ಸದರಿ ಐಯ್ಯನಹಳ್ಳಿ ಗ್ರಾಮದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ, ಮದ್ದಗಿರಿ ಡಿವಿಜನ ಅಸಿಸ್ಟೆಂಟ ಕಮಿಷನರವರು ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಆಗಲಿ ಅಥವಾ ವೃತ್ತಿಗಳನ್ನು ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ವೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ವೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೇ ಯಾ ಹರಾಜು ಬಾಬತು ಬಾಕಿ ವೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರಿ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೇ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲಾ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ವೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರ್ರು ಸದರಿ ಸ್ವತ್ತಿನ ಸ್ವಾಧೀನವನ್ನ ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ ಮೊಹರ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಗಳಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯ (ಲೋಪ) ಗಳಿಗೆ ಗವರ್ನಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದಿಯಲ್ಲಿ ಗವರ್ನಮೆಂಟಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿ ಇರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸರ್ವೆ ನಂಬರು.	ಭೂಮಿಯ ಸ್ವಭಾವ. ಖುಷ್ಕಿ.	ಭೂಮಿಯ ಸ್ವಭಾವ. ತರಿ.	ಭೂಮಿಯ ಸ್ವಭಾವ. ಬಾಗಾಯಿತು.	ಆಕಾರ.	ಸರಕಾರಕ್ಕೆ ಬರಬೇಕಾದ ಬಾಕೀ ವೊಬಲಗು.	ಹರಾಜು ಆಗುವ ತಾರೀಖು.	ಹರಾಜು ಆಗುವ ಸ್ಥಳ.
ಮದ್ದಗಿರಿ	ಮಿಡಿಗೇಸಿ	ಐಯ್ಯನಹಳ್ಳಿ ಗ್ರಾಮ	ಕ್ರಿಷ್ಣಮಾಚಾರ್ರು ಮತ್ತು ನರಸಿಹ್ಮಾಚಾರ್	ಪೂರ್ತಿ ಗ್ರಾಮ	ಖಂಡಿ 6 ಕೊಳಗ 5 ಪಡಿ 13	ಖಂಡಿ 6 ಕೊಳಗ 13 ಪಡಿ 0	ಖಂಡಿ 0 ಕೊಳಗ 11 ಪಡಿ 13	ರೂ. 100 ಅ. 0 ಪೈ. 0	1906—07ನೆ ಸಾಲಿಗೆ ಜೋಡಿ ವೊಬಲಗು ರೂ. 39 ಅ. 4; ನೋಟಿಸ ಫೀ ವಗೈರೆ 1 0; 40 4	28—8—07	ಐಯ್ಯನಹಳ್ಳಿ.

ಪರಂಪೋಕು. ಖಂಡಿ 5 ಕೊಳಗ 17 ಪಡಿ 15.

ಚೆಕ್ಕು ಬಂದಿ.
ಪೂರ್ವಕ್ಕೆ—ಗಂಗಲವಾಯಿಪಾಳ್ಯ.
ಪಶ್ಚಿಮಕ್ಕೆ—ಕುರಡಿಹಳ್ಳಿ ಹೊಲಬು.
ಉತ್ತರಕ್ಕೆ— ಡಿಟೋ
ದಕ್ಷಿಣಕ್ಕೆ—ಸತ್ತಿಗನಹಳ್ಳಿ, ಬೆನಕನಹಳ್ಳಿ.

ಎಂ. ಶ್ರೀನಿವಾಸಮೂರ್ತಿ,
ಫಾರ ಡೆಪ್ಯುಟಿ ಕಮಿಷನರ.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಊರಗಡೂರು ಗ್ರಾಮದ ವಿಶ್ವೇಶ್ವರಾರಾಧ್ಯ ವಗೈರೆ ವೃತ್ತಿವಂತರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗಿರುವ ಸ್ಥಿರಸ್ವತ್ತು ಶಿವಮೊಗ್ಗಾ ತಾಲ್ಲೂಕು ಕ್ಛೇರಿಬಳಿ ಶಿವಮೊಗ್ಗಾ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ ಸಾಹೇಬರವರ ರೂಬರೂ 15—8—07ನೆ (ಗುರುವಾರ) ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಈ ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸು ದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರೆಗೆ ರೂಪಾಯಿ 2,0 8—10—9 ಆಗಿರುತ್ತೆ.

(II) ಚಕ್ಕೆ ಜಮಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಕ್ಕಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ದೋಣಿ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರ್ಯಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರ್ಯಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಳೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1908ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡಿದು ಜಮಾವಣೆ ಮಾಡಿ ದಾಸ್ತಾನು ಮಾಡಿರುವ ಎಲ್ಲಾ ಚಕ್ಕೆಯನ್ನು ಮೈಸೂರು ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರೆಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ ಸಾಹೇಬರು (100) ರೂಪಾಯಿ ವರವಿಗೂ ಜುಲ್ಮಾನೆಯನ್ನು ಸಹಾ ಇಜಾರೆದಾರನಿಗೆ ವಿಧಿಸಬಹುದು.

ಇಷ್ತಿಹಾರ್ನಾಮೆ, ತಾರೀಖು 31ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಉಡ್ಯಾರ್ಡಿನಲ್ಲಿ ಚೌಬೀನಾವನ್ನು 1907ನೆ ಸೆಪ್ಟಂಬರ್ ತಾರೀಖು 31ರಲ್ಲು ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಾಟಾಗಳ ವಿವರ.	ಸಲೆಅಡಿ.		ಷರಾ.
	ನಂಬರ್.	ಅಡಿ.	
ಸಾಗ್ವಾನಿ ಸರಾ	1,725	1,725	ಶ್ರೀಗಂಧ
ಮತ್ತಿ ನಾಟಾ	211	5,534	ಶ್ರೀಗಂಧ
ಡಿಟೋ ಜಂತಿ	30	372	ಶ್ರೀಗಂಧ

ಹರಾಜು ಷರತ್ತುಗಳು.

1. ಖಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡೆದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಪಸಾರೆ, ಇಷ್ತಿಹಾರ್.

ತಾರೀಖು 30ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಜಂಗಲ್‌ಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮಾನಿ ಮತ್ತು ಬೇಲಿಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1907ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1908ನೆ

ಸೆಪ್ಟಂಬರು 30ನೇ ತಾರೀಖಿನ ವರಿವಿಗೆ ಜಮಾಯಿಸುವ ಹಕ್ಕನ್ನು ಪಡೆಯಲು 1907ನೇ ಇಸವಿ ಆಗಸ್ಟು ತಾರೀಖು 31ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತು ತೆಗೆದುಕೊಳ್ಳಲ್ಪಡುವದು.

"ಜಿನಸುಗಳ ತಪಸೀಲು" ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕತಕ್ಕುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು	8. ನಂಜನಗೂಡು
2. ಶ್ರೀರಂಗಪಟ್ಟಣ	9. ಚಾಮರಾಜನಗರ
3. ನಾಗಮಂಗಲ	10. ಗುಂಡ್ಲು ಪೇಟೆ
4. ಕೃಷ್ಣರಾಜಪೇಟೆ	11. ಹೆಗ್ಗಡದೇವನಕೋಟೆ
5. ಮಂಡ್ಯ	12. ಹುಣಸೂರು
6. ಮಳವಳ್ಳಿ	13. ಯಡತೊರೆ
7. ಟಿ. ನರಸೀಪುರ	

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲಬೀಜ, 12. ಚಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮಡ್ಡಿ, 16. ಉದಂಡ ಸಾರಗದಕೊಂಬು 17. ಗುಗ್ಗಳ, 18. ಬೇಲದಹಣ್ಣು, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ವಿನಹಾ) 20. ಶೀತಾಫಲದಹಣ್ಣು, 21. ಬೆಂಡೆನಾರು, 22. ಬೇವಿನಬೀಜ, 23. ಇಪ್ಪೇಬೀಜ 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟು ಸುತ್ತು ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂದಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಣಾಪುರ, 7. ಮಾದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂಕಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಡನೇ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೆ ಮೇಲೆ "ಪಸಾರೆ ದರಖಾಸ್ತು" ಎಂದು ಬರೆದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1907ನೇ ಇಸವಿ ಸೆಪ್ಟಂಬರ್ ತಾರೀಖು 2ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ವಡೆಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಸ್ತುದಾರನಿಗೆ ಕೂಡ್ಲೆ ಕಳುಹಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೆ ಮಾಡಬೇಕು. ಮತ್ತು ಈ ಮೂರು ದಿನಗಳಲ್ಲಿ ಈ ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 3 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಟ್ಟು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರರೇ ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕು ದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸರ್ಟ 1907ನೆ ಇಸವಿ ಜೂನ್ ತಾರೀಖು 10ರಲ್ಲು ಕೋಲಾರದಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡ್ ಮೀಟಿಂಗಿನ ತೀರ್ಮಾನಗಳು

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಮೆ॥ ಸಿ. ಶ್ರೀಕಂಠೇಶ್ವರ ಐಯ್ಯರವರು, ಪ್ರೆಸಿಡೆಂಟರು.
2. ,, ಹಸನ್‌ಅಲ್ಲಿ ಸಾಹೇಬರವರು, ವೈಸ್ ಪ್ರೆಸಿಡೆಂಟರು.
3. ,, ಕೆ. ಶ್ರೀನಿವಾಸರಾಯರವರು, ಕೋಲಾರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು.
4. ,, ಜಿ. ಆರಾವಮುದೈಯ್ಯಂಗಾರ್ರವರು, ಬಿ. ಎ., ಬಿ. ಎಲ್., ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು.
5. ,, ನರಸಿಂಗರಾವು ಪೂರ್ಣೈಯ್ಯನವರು, ಮಾಲೂರು ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರು.
6. ,, ಪೊನ್ನ ಸಾಮಿಪಿಳ್ಳೆಯವರು, ಡಿ॥ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
7. ,, ಕೆ. ಕೃಷ್ಣಯ್ಯಂಗಾರ್ರವರು, ಎಗ್ಸಿಕ್ಯೂಟಿವ್ ಇಂಜನಿಯರ್.
8. ,, ಎಸ್. ಗೋಪಾಲರಾಯರವರು, ಸ್ಕೂಲ್‌ಡಿ॥ ಇನ್ಸ್‌ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸ್ (ಬಿ)

1. ಮೆ॥ ಮುನಿನಾರಾಯಣ ಶೆಟ್ಟಿಯವರು, ಕೋಲಾರ.
2. ,, ರಾಮರಾಯರವರು, ಮಾಲೂರು.
3. ,, ದೊಂತಿ ಚಿಕ್ಕಸುಬ್ಬಾಯಪ್ಪನವರು, ಶಿಡ್ಲಘಟ್ಟ.
4. ,, ಚೌಡರಡ್ಡಿಯವರು, ಚಿಂತಾಮಣಿ.
5. ,, ಉಮ್ಮಂಣ್ಣೈಯ್ಯನವರು, ಬವರಿಂಗಪೇಟೆ.
6. ,, ಕಾಸ್ತಿ ಹೈದರಸಾಹೇಬರವರು, ಮುಳಬಾಗಲು.
7. ,, ಮಹಮದ್‌ಹಸನ್‌ಸಾಹೇಬರವರು, ಶ್ರೀನಿವಾಸಪುರ.
8. ,, ಲಕ್ಷ್ಮಣರಾಯರವರು, ಗುಡಿಬಂಡೆ.
9. ,, ರಾಮಣ್ಣನವರು, ಗೋರಿಬಿದನೂರು.
10. ,, ನಾರಾಯಣಸಾಮಿ ಶೆಟ್ಟಿಯವರು, ಚಿಕ್ಕಬಳ್ಳಾಪುರ.

ಕ್ಲಾಸ್ (ಇ)

11. ಮೆ॥ ಬಸವೇಗೌಡರವರು, ಬವರಿಂಗಪೇಟೆ.
12. ,, ವೆಂಕಟಸ್ವಾಮಿರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.
14. ,, ಶ್ರೀನಿವಾಸಾಚಾರ್ರು, ಶಿಡ್ಲಘಟ್ಟ.
15. ,, ಗೌಡಗೆರೆ ಕೃಷ್ಣಾಚಾರ್ರು, ಗೋರಿಬಿದನೂರು.
16. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.

ಗೈರ್ ಹಾಜರು.

ನಾನ್ ಅಫಿಷಿಯಲ್ ಮೆಂಬರುಗಳು.

ಕ್ಲಾಸು (ಡಿ)

1. ಮೆ॥ ಶೀನಪ್ಪನವರು ಬಾಗೇಪಲ್ಲಿ.

ಇದರಡಿ ಕಂಡ ಅಮಲ್ದಾರ್ರು ಮತ್ತು ಡೆಪ್ಯುಟಿ ಅಮಲ್ದಾರ್ರು ಸಹಾ ಮೀಟಿಂಗಿಗೆ ಹಾಜರಾಗಿದ್ದರು.

1. ಮೆ॥ ನಾರಾಯಣರಾಯರು, ಕೋಲಾರ ತಾಲ್ಲೂಕು ಅಮಲ್ದಾರ್ರು.
2. ,, ಒಬೆದುಲ್ಲಾ ಸಾಹೇಬರವರು, ಬವರಿಂಗಪೇಟೆ ತಾಲ್ಲೂಕು ಅಮಲ್ದಾರ್ರು.
3. ,, ಟಿ. ಎಸ್. ರಾಘವಾಚಾರ್ರು, ಚಿಂತಾಮಣಿ ತಾಲ್ಲೂಕು ಅಮಲ್ದಾರ್ರು.
4. ,, ವೈ. ನರಸಿಂಗರಾಯರು, ಶ್ರೀನಿವಾಸಪುರ ತಾಲ್ಲೂಕು ಅಮಲ್ದಾರ್ರು.
5. ,, ಎಂ. ಎಸ್. ಪುಟ್ಟಣ್ಣನವರು, ಮುಳಬಾಗಲ್ ತಾಲ್ಲೂಕು ಅಮಲ್ದಾರ್ರು.
6. ,, ಜಿ. ನಾರಾಯಣರಾಯರು, ಶಿಡ್ಲಘಟ್ಟ ತಾಲ್ಲೂಕು ಅಮಲ್ದಾರ್ರು.
7. ,, ಶಾಮರಾಯರು, ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್ದಾರ್ರು.
8. ,, ಜಿ. ಹನುಮಂತರಾಯರು, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ರು.
9. ,, ವಿ. ಗೋಪಾಲರಾಯರು, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ರು.
10. ,, ಪಿ. ಸುಬ್ಬರಾಯರು, ಮಾಲೂರು ತಾಲ್ಲೂಕು ಅಮಲ್ದಾರ್ರು.
11. ,, ಅನಂತರಾಮೈಯ್ಯಂಗಾರ್ರು, ಗುಡಿಬಂಡೆ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರು.

1907ನೆ ಮಾರ್ಚಿ 23ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು ಓದಿ ನಿರ್ಧರಿಸಲ್ಪಟ್ಟಿತು.

ಕಂಟ್ರೋಲರ್ ಸಾಹೇಬರವರಿಂದ ಆಡಿಟ್ ಆಗಿ ಬಂದ 1906ನೆ ನವಂಬರು, ಡಿಸೆಂಬರ್ ಮಾಹೆಗಳ ಮತ್ತು 1907ನೆ ಜನವರಿ ಮಾಹೆಯು ಜಮಾಖರ್ಚು ಲೆಕ್ಕಗಳು ಓದಿ ರಿಕಾರ್ಡು ಮಾಡಲ್ಪಟ್ಟಿತು.

3. ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟು ಸಾಹೇಬರವರು ದನಗಳ ಪ್ರದರ್ಶನೆಯಲ್ಲಿ ಬಹುಮಾನ ಹೊಂದಿದವರಿಗೆ ಕೊಡತಕ್ಕ ಸರ್ಟಿಫಿಕೇಟು ನಮೂನೆಯನ್ನು ತಿಳುವಳಿಕೆ ಬಗ್ಯೆ ಕಳುಹಿಸಿರುವದಾಗಿ ಜನರಲ್ ಮತ್ತು ರವಿನ್ಯೂ ಸೆಕ್ರೆಟರಿ ಸಾಹೇಬರವರ 24—4—1907ನೆ ಮುರ್ಸ್ಸಂ 9781-7-L. B. 320-06ನೆ ನಂಬರು ಡಾಕೆಟ್ಟು ಬಹನೆ ಬಂದದ್ದನ್ನ ಓದಿ ರಿಕಾರ್ಡು ಮಾಡಿದ್ದಲ್ಲದೆ ಈ ಡಿಸ್ಟ್ರಿಕ್ಟಿನಲ್ಲಿ ಇಂಥಾ ಸಂದರ್ಭಗಳಲ್ಲಿ ಉಪಯೋಗಿಸುತ್ತಿರುವ ಫಾರಮನ್ನು ಗವರ್ನಮೆಂಟನವರ ತಿಳುವಳಿಕೆಗಾಗಿ ಕಳುಹಿಸಬೇಕೆಂತಾ ತೀರ್ಮಾನವಾಯಿತು.

4. ಕಲ್ಲು ಅಥವಾ ಹೆಂಚು ನೆಲಕ್ಕೆ ಹಾಸಬೇಕಾಗಿರುವ ಆಸ್ಪತ್ರೆ ಮತ್ತು ವೈದ್ಯಶಾಲೆಗಳ ಹೆಸರು ಇದಕ್ಕೆ ತಗಲಬಹುದಾದ ಖರ್ಚು ತೋರಿಸುವ ತಖ್ತೆಯು ನಕಲನ್ನು ಆಲೋಚನೆ ಬಗ್ಯೆ ಮತ್ತು ಬೋರ್ಡು ರೆಜಲ್ಯೂಷನ್ ಕಾಪಿ ಕಳುಹಿಸತಕ್ಕ ಬಗ್ಯೆ ತಲ್ಪಿರುವ 27—4—1907ನೆ ಮುರ್ಸ್ಸಂ 9952-61—Med. 133-06—4ನೆ ನಂಬರು ಗವರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

1907—08ನೆ ಸಾಲು ಬಜೆಟ್ಟಿನಲ್ಲಿ IX contribution ಬಾಬಿಗೆ ದಾಖಲಾಗಿರುವ ರೂ. 1,500 ಪೈಕಿ ಈ ಮೊಬಲಗು ಖರ್ಚು ಮಾಡಬಹುದೆಂದು ತೀರ್ಮಾನವಾಯಿತು.

5. ಗ್ರಾಮಗಳನ್ನು ಒಳ್ಳೇ ಪಾಕೀಜಾ ಸ್ಥಿತಿಯಲ್ಲಿ ಇಡತಕ್ಕ ಪಟೇಲರುಗಳಿಗೆ ಬಹುಮಾನ ಕೊಡತಕ್ಕದ್ದಕ್ಕೆ ಬೇಕಾದ ಮೊಬಲಗನ್ನು 1908—09ನೆ ಸಾಲು ಬಜೆಟ್ಟಿನಲ್ಲಿ ಸೇರಿಸಬೇಕೆಂದು 7—5—1907ನೆ ಮುರ್ಸ್ಸಂ 10397-404—L. B. 353-06—5ನೆ ನಂಬರು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

6. 1907—08ನೆ ಸಾಲು ಡಿಸ್ಟ್ರಿಕ್ಟು ಫಂಡು ಬಜೆಟ್ಟು ಮಂಜೂರು ಮಾಡಿರುವದಾಗಿ ತಲ್ಪಿದ 23—4—1907ನೆ ಮುರ್ಸ್ಸಂ 9730-40—L. B. 348-06—2ನೆ ನಂಬರ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

7. ಅವಧಿ ಕಳದಿರತಕ್ಕ ಮೆಂಬರುಗಳ ಬದಲಾಗಿ ಹೊಸ ಮೆಂಬರುಗಳನ್ನು ಚುನಾಯಿಸಲು ಶಿಫಾರಸು ಮಾಡಿ ಕಳುಹಿಸಬೇಕೆಂದು ತಲ್ಪಿದ 13—5—1907ನೆ ಮುರ್ಸ್ಸಂ 10578-84—L. B. 399-06—1ನೆ ನಂಬರು ಪ್ರೊಸೀಡಿಂಗ್ಸು ಓದಲಾಯಿತು.

ಈ ಸಂಗತಿ ತಾಲ್ಲೂಕು ಬೋರ್ಡಿನಲ್ಲಿ ಚರ್ಚಿಸಿ ತ್ವರ್ಯದಲ್ಲಿ ಮೆಂಬರುಗಳ ತಖ್ತೆ ಕಳುಹಿಸಿ ಕೊಡಬೇಕೆಂದು ತೀರ್ಮಾನವಾಯಿತು.

8. ಹಾಲಿ ಕೆಲಸದಲ್ಲಿರುವ ವರ್ಕ್ ಇನ್ಸ್‌ಪೆಕ್ಟರು ಮ್ಯುನಿಸಿಪಲ್ ಓವರ್ಸಿಯರು ಮತ್ತು ದರೋಗರನ್ನು ಈಚೆಗೆ ಲೋಕಲು ಫಂಡು ಬ್ರಾಂಚಿಗೆ ಮಂಜೂರಾದ ಗುಮಾಸ್ತೇರುಗಳನ್ನಾಗಿ ನೇಮಿಸಿಕೊಳ್ಳಬೇಕೆಂತ ತಲ್ಪಿದ 28—5—1907ನೆ ಮರ್ಕ್ಯುಂ 11118-25—L. B. 427-06—2ನೆ ನಂಬರು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲ್ಪಟ್ಟಿತು.

9. ದೊಡ್ಡ ಮಳೆಗಳಿಂದ ಕೊಚ್ಚಿಕೊಂಡು ಹೋದ ಮುಳಬಾಗಲು-ಗೋರೀಬಿದನೂರು ರೋಡು ರಿಪೇರಿ ವಗೈರಲು 499 ರೂಪಾಯಿನ ಅಂದಾಜು ಮಂಜೂರಿ ವಿಷಯದಲ್ಲಿ ಪುನರಾಲೋಚನೆ ಮಾಡತಕ್ಕ ಬಗ್ಗೆ ವ್ಯಾಪಾರಸ್ಥರಿಗೆ ಉಂಟಾದ ಕುಂದಕವನ್ನು ಪರಿಹರಿಸಲೋಸುಗ ಅಂದಾಜಿನಲ್ಲಿ ದಾಖಲಾಗಿದ್ದ ಕೆಲವು ಭಾಗವನ್ನು ಕುಮಗಾರಿ ನಡಿಸಿದ ಎಂತಲೂ ಬರದಿರುವ ಕೋಲಾರ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ ಸಾಹೇಬರವರ 17—4—07ನೆ ಮರ್ಕ್ಯುಂ 162ನೆ ನಂಬರು ಡಾಕೆಟ್ಟು ಓದಿ ಮಂಜೂರ್ಮಾಡಲ್ಪಟ್ಟಿತು.

10. ಮಂಜೂರಿ ಬಗ್ಗೆ 46 ರೂಪಾಯಿನ Supplemental re-appropriation ಶೀಟ್ ಕಳುಹಿಸಿರುವದಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಂದ 4—5—1907ನೆ ಮರ್ಕ್ಯುಂ 186ನೆ ನಂಬರು ಡಾಕೆಟ್ಟು ಓದಿ ಮಂಜೂರ್ಮಾಡಲ್ಪಟ್ಟಿತು.

11. ಚಿಕ್ಕಬಳ್ಳಾಪುರದ ತಾಲ್ಲೂಕು ಆರೂರು ಗ್ರಾಮದ ಬಳಿ ಹಾಲಿ ಪೋಲೀಸು ಲೈನಿಗೆ ಉಪಯೋಗಿಸಿಕೊಳ್ಳುತ್ತಿರುವ ಹಳೇ ಅಂಚೇಮನೆ ರಿಪೇರಿಗೆ ತಗಲುವ ಅರ್ಧ ಖರ್ಚನ್ನು ಡಿಸ್ಟ್ರಿಕ್ಟು ಬೋರ್ಡಿನವರು ಕೊಡುವ ಪಕ್ಷದಲ್ಲಿ ಬಾಕಿ ಅರ್ಧ ಮೊಬಲಗನ್ನು ಪೋಲೀಸು ಫಂಡಿನಿಂದ ಕೊಡುವದಾಗಿ ಪೋಲೀಸು ಇನ್ಸ್‌ಪೆಕ್ಟರ ಜನರಲ್ ಸಾಹೇಬರವರ 6—5—07ನೆ ಮರ್ಕ್ಯುಂ 7847—Mis 1051ನೆ ನಂಬರು ಲೆಟರು ಓದಲಾಯಿತು.

ಈ ವಿಷಯದಲ್ಲಿ ತಾಲ್ಲೂಕು ಬೋರ್ಡಿನವರ ಅಭಿಪ್ರಾಯವನ್ನು ತರಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

12. ನಂದಿ ಜಾತ್ರೇಲಿ ದನಗಳ ಪ್ರದರ್ಶನಕ್ಕಾಗಿ ಬಂದಿದ್ದ ಅತ್ಯುತ್ತಮವಾದ ದನಗಳಿಗೆ ಬಹುಮಾನವಾಗಿ ಕೊಡಬೇಕಾದ ಮೊಬಲಗು 210 ರೂಪಾಯಿಗೆ ಬಂದು ಬಿಲ್ಲು ಇದೇ ಸಂಬಂಧದಲ್ಲಿ ಕಂಟಿಂಜಂಟಿಗಾಗಿ ಖರ್ಚು ಬಿದ್ದಿರುವ 30 ರೂಪಾಯಿಗಳು ಮಂಜೂರಾಗಬೇಕೆಂದು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರವರ 21—3—1907ನೆ ಮರ್ಕ್ಯುಂ 1069ನೆ ನಂಬರು ಓದಿ ಮಂಜೂರ್ಮಾಡಲ್ಪಟ್ಟಿತು.

13. ಮಂಡಿಕಲ್ಲು ಮುಸಾಫರಖಾನೆಗೆ ಬಡ್ಜೆಟ್ಟಿನಲ್ಲಿ 100 ರೂಪಾಯಿಗಳು ಮಾತ್ರ ಪ್ರೊವೈಡು ಆಗಿರುವದರಿಂದಲೂ ಜಾಸ್ತಿ 50 ರೂಪಾಯಿಗಳು ರಾಳಹಳ್ಳಿ ಭಾವಿ ಕಾಂಗಾರಿ ಪೂರೈಸಬೇಕಾದರೆ 9 ಅಡಿ ಆಳದಲ್ಲಿಯೇ ಬಂಡೆ ಬಿದ್ದಿರುವದರಿಂದ ಹಾಲಿ ಮಂಜೂರಾಗಿರುವ 80 ರೂಪಾಯಿ ಅಲ್ಲದೆ ಜಾಸ್ತಿ 300 ರೂಪಾಯಿ ಬೇಕಾಗಿರುವದರಿಂದಲೂ ಈ ಮೊಬಲಗನ್ನು ಈ ಕೆಲಸಕ್ಕೆ ಉಪಯೋಗಿಸಿಕೊಂಡು ಒಟ್ಟು 150 ರೂಪಾಯಿನ ಅಂದಾಜು ಮಂಜೂರ್ಮಾಡಬೇಕೆಂದು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರವರ 22—3—07ನೆ ಮರ್ಕ್ಯುಂ 1077ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

14. ಜಂಗಮಕೋಟೆ ಗ್ರಾಮದ ಜಾಡಮಾಲಿ ತಲಬು 4 ರೂಪಾಯಿಯಿಂದ 5 ರೂಪಾಯಿಗೆ ಬಡ್ತಿ ಮಾಡತಕ್ಕ ವಿಷಯದಲ್ಲಿ ತಾಲ್ಲೂಕು ಬೋರ್ಡು ರೆಜಲ್ಯೂಷನ್ ಪುನರಾಲೋಚನೆ ಬಗ್ಗೆ ಕಳುಹಿಸಿರುವದಾಗಿ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರವರ 18—3—07ನೆ ಮರ್ಕ್ಯುಂ 1058ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

15. ನಂಬಿಹಳ್ಳಿ ಮುಸಾಫರಖಾನೆ ಜಾಡಮಾಲಿ ತಲಬು 2 ರೂಪಾಯಿಂದ 3 ರೂಪಾಯಿಗೆ ಬಡ್ತಿ ಮಾಡತಕ್ಕ ವಿಷಯದಲ್ಲಿ ಶ್ರೀನಿವಾಸಪುರ ತಾಲ್ಲೂಕು ಬೋರ್ಡು ರೆಜಲ್ಯೂಷನ್ ಕಾಪಿಯನ್ನು ಮಂಜೂರಿ ಬಗ್ಗೆ ಕಳುಹಿಸಿದೆ ಎಂದು ಕೋಲಾರ ತಾಲ್ಲೂಕು ಸಬ್ ಡಿವಿಜನ್ ಸಾಹೇಬರವರ 31—3—07ನೆ ಮರ್ಕ್ಯುಂ 1213ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

16. ಬೀರ್ಜೇನಹಳ್ಳಿ ಮತ್ತು ಜೇಡೇರಹಳ್ಳಿ ಭಾವಿಗಳಿಗೆ ಮಂಜೂರಾಗಿರತಕ್ಕ ಮೊಬಲಗನ್ನು ದಂಡಪಾಳ್ಯ ಕುಂಟೆ ರಿಪೇರಿಗೆ ಉಪಯೋಗಿಸಿಕೊಂಡು 499 ರೂಪಾಯಿಗೆ ಅಂದಾಜು ಮಂಜೂರಿ ಬಗ್ಗೆ ಕಳುಹಿಸಿದೆ ಎಂದು ಬರದಿರತಕ್ಕ ಕೋಲಾರ ಸಬ್ ಡಿವಿಜನ್ ಆಫಿಸರವರ 19—4—07ನೆ ಮರ್ಕ್ಯುಂ 1321ನೆ ನಂಬರು ಯಾದಿ ಓದಲಾಯಿತು.

ಈ 3 ಕಾಂಗಾರಿಗಳ ಆವಶ್ಯಕತೆ ವಿಷಯದಲ್ಲಿ ಬೋರ್ಡಿನಲ್ಲಿ ಚರ್ಚಿಸಿ ರೆಜಲ್ಯೂಷನ್ ಕಾಪಿ ಕಳುಹಿಸಲು ತಾಲ್ಲೂಕು ಬೋರ್ಡಿಗೆ ಈ ಸಂಗತಿ ರಫರ್ ಮಾಡಬೇಕೆಂದು ತೀರ್ಮಾನಿಸಲಾಯಿತು.

17. ತಾಲ್ಲೂಕು ಬೋರ್ಡಿನವರು ರೆಜಲ್ಯೂಷನ್ ಮಾಡಿರುವಂತೆ ಮಾಲೂರು ತಾಲ್ಲೂಕು ದಾದೇನಾಯ್ಕನಬೊಡ್ಡಿ ಗ್ರಾಮದಲ್ಲಿ ವೆಂಕಟಗಿರಿಯಪ್ಪನ ಗೋರಿ ಬಳಿ ಪ್ರತಿ ಸೋಮವಾರ ಸಂತೆ ನಡಿಯತಕ್ಕ ವಿಷಯದಲ್ಲಿ ಮಂಜೂರ್ಮಾಡಬೇಕೆಂದು ಮಾಲೂರು ಡಿವಿಜನ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ 1552ನೆ ನಂಬರು ಯಾದಿ ಓದಲಾಯಿತು.

ಅವಶ್ಯಕವಾದ ತಪ್ಸೀಲು ತಿಳಿದುಕೊಂಡ ನಂತರ ತಾಲ್ಲೂಕು ಬೋರ್ಡಿನವರ ತೀರ್ಮಾನಕ್ಕೆ ಇಡಬೇಕೆಂತ ತೀರ್ಮಾನಿಸಲಾಯಿತು.

18. ಬವರಿಂಗಪೇಟೆಯಿಂದ ಟೇಕಲ್ಲಿಗೆ ಹೋಗುವ ಬಂಡೀ ಜಾಡಾ ರಿಪೇರಿಗೆ 200 ರೂಪಾಯಿ ಅಂದಾಜು ಮಂಜೂರ್ಮಾಡಬೇಕೆಂದು ಮಾಲೂರು ಸಬ್ ಡಿವಿಜನ್ ಆಫಿಸರವರ 18—4—07ನೆ ಮರ್ಕ್ಯುಂ 1562ನೆ ನಂಬರು ಯಾದಿ ಓದಿ ಮಂಜೂರ್ಮಾಡಲ್ಪಟ್ಟಿತು.

19. ಟೇಕಲು ಮುಸಾಫರಖಾನೆ ರಿಪೇರಿಗಾಗಿ 110 ರೂಪಾಯಿನ ಅಂದಾಜು ಮಂಜೂರ್ಮಾಡಬೇಕೆಂತ ಮಾಲೂರು ತಾಲ್ಲೂಕು ಅಮಲ್ದಾರರ 12—4—07ನೆ ಮರ್ಕ್ಯುಂ 644ನೆ ನಂಬರು ರಿಪೋರ್ಟು ಓದಲಾಯಿತು. ನಂಗ್ಲಿ ಮುಸಾಫರಖಾನೆಗೆ ಪ್ರೊವೈಡಾಗಿರುವ 450 ರೂಪಾಯಿ ಪೈಕಿ ಈ ಮೊಬಲಗು ಖರ್ಚು ಬೀಳಬೇಕೆಂದು ತೀರ್ಮಾನವಾಯಿತು.

20. ಕೋಲಾರ ತಾಲ್ಲೂಕು ವಕ್ಕಲೇರಿ ಗ್ರಾಮವನ್ನು "Union Panchayet" ಆಗಿ ಮಾಡಲು ಕೋಲಾರ ಸಬ್ ಡಿವಿಜನ್ ಆಫಿಸರವರ 5—6—07ನೆ ಮರ್ಕ್ಯುಂ 1603ನೆ ನಂಬರು ಯಾದಿ ಓದಲಾಯಿತು.

ಈ ಸಂಗತಿ ಗವರ್ನ್ಮೆಂಟಿಗೆ ರಫರ್ ಮಾಡಬೇಕೆಂದು ತೀರ್ಮಾನಿಸಲಾಯಿತು.

21. 400 ರೂಪಾಯಿಗೆ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು ಉಪಯೋಗಕ್ಕಾಗಿ ಒಂದು "ಟೈಪುರೈಟರು" ಕೊಂಡುಕೊಳ್ಳ ತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ರೆಜಲ್ಯೂಷನ್ ಕಾಪಿ ಕಳುಹಿಸಬೇಕೆಂದು ಬರದಿರುವ 7-5-07ನೆ ಮಾರ್ಕ್ಕಂ 10407-L. B. 421-6-2ನೆ ನಂಬರು ಸೆಕ್ರೆಟರಿ ಸಾಹೇಬರವರ ಡಾಕೆಟ್ಟು ಓದಲಾಯಿತು.

ಅಂಗೀಕರಿಸಲ್ಪಟ್ಟಿತು.

22. ದಸರಾ Representative Assembly ಗೆ ಹೋಗಲು ಇಬ್ಬರು Non-Official ಮೆಂಬರುಗಳನ್ನು ಚುನಾಯಿಸಬೇಕೆಂದು ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ 5—6—07ನೆ ಮಾರ್ಕ್ಕಂ 8369ನೆ ನಂಬರು ಡಾಕೆಟ್ ಓದಲಾಯಿತು.

ಮ॥ ರಾ॥ ಗುಡಿಬಂಡೆ ಲಕ್ಷ್ಮಣರಾಯರು, ಚಿಕ್ಕಬಳ್ಳಾಪುರ ನಾರಾಯಣಸ್ವಾಮಿಶೆಟ್ಟರವರು ಈ ಇಬ್ಬರನ್ನೂ ಚುನಾಯಿಸಬಹುದೆಂದು ತೀರ್ಮಾನವಾಯಿತು.

23. ದಂಡಗಾನಹಳ್ಳಿ ಭಾವಿ ಕಾಂಗಾರಿಗೆ ಮಂಜೂರಾಗಿರುವ 300 ರೂಪಾಯಿ ಪೈಕಿ ನಾಗಾತಿಹಳ್ಳಿ ಮತ್ತು ಕದರೇನಹಳ್ಳಿಗಳಲ್ಲಿ ಭಾವಿ ಅಗಿಯಲು ಬೇಕಾಗಿರುವ ಜಾಸ್ತಿ ಮೊಬಲಗು 289 ರೂಪಾಯಿ ಮಂಜೂರಾಗಬೇಕೆಂದು ಬರದಿರುವ ಗೌರಿಬಿದನೂರು ಅಮಿಲ್ದಾರರ 8—6—07ನೆ ಮಾರ್ಕ್ಕಂ 120ನೆ ನಂಬರು ರಿಪೋರ್ಟು. ಇದರ ಮೇಲೆ ಚಿಕ್ಕಬಳ್ಳಾಪುರದ ಸಬ್. ಡಿವಿಜನ್ ಆಫೀಸರವರ ಶಿಫಾರಸ್ಸು ಓದಿ ಅಂಗೀಕರಿಸಲ್ಪಟ್ಟಿತು.

24. ಹೊಸಹುಡ್ಯ ಭಾವಿಗೆ ಮಂಜೂರಾಗಿರುವ ಮೊಬಲಗು ಪೈಕಿ ನಲ್ಲಕೆರವು ಮುಸಾಫರಖಾನೆ ರಿಪೇರಿಗೆ 210 ರೂಪಾಯಿ ವರ್ಗಾಯಿಸಬೇಕೆಂದು ಚಿಕ್ಕಬಳ್ಳಾಪುರ ಸಬ್ ಡಿವಿಜನ್ ಆಫೀಸರವರ 10—6—07ನೆ ಮಾರ್ಕ್ಕಂನ ಯಾದಿ ಓದಲಾಯಿತು.

ಅಂಗೀಕರಿಸಲ್ಪಟ್ಟಿತು.

25. ಡಿಸ್ಟ್ರಿಕ್ಟ್ ಬೋರ್ಡಿನವರು ಮಂಜೂರ್ಮಾಡಿದ 500 ರೂಪಾಯಿಗೆ ಒಳಪಟ್ಟ ಕಾಂಗಾರಿಗಳ ತಖ್ತೆ ಇದರಡಿ ದಾಖಲ್ಮಾಡಿದೆ.

ತಾಲ್ಲೂಕು.	ಕೆಲಸಗಳ ವಿವರ.	ಮೊಬಲಗು.
		ರೂ.
ಕೋಲಾರ	ನಾಗರಕುಂಟೆಯಿಂದ ನೀರು ಎತ್ತಿ ಹಾಕಿ ಹೂಳು ತೆಗಿಯುಲು ...	86
	ಡೆಪ್ಯುಟಿ ಕಮಿಷನರ್ ಸಾಹೇಬರವರ ಬಂಗಲೆ ಬಳಿ ಭಾವಿಯಲ್ಲಿ ಹೂಳು ತೆಗಿಯುಲು.	16
ಬವರಿಂಗಪೇಟೆ ...	ಬವರಿಂಗಪೇಟೆಯಿಂದ ಟ್ಯಾಕಲ್ಲಿಗೆ ಬಂಡಿ ಜಾಡಾ ರಿಪೇರಿ ಮಾಡಲು ...	200
ಮುಳಬಾಗಲು	ಗಜಾಗೊಂಡ್ಲ ಹೂಳು ತೆಗೆಯುಲು	224
	ನಂಗಿ ಭಾವಿಯಲ್ಲಿ ಹೂಳು ತೆಗೆಯುಲು	128
	ಯಮ್ಮನೂರು ಬಳಿ ಭಾವಿ ಅಗಿಯುಲು	208
	ಮುಂಡಿಕಲ್ಲು ಡಿಟೋ	169
ಚಿಕ್ಕಬಳ್ಳಾಪುರ ...	ಮುಂಡಿಕಲ್ಲು ಮುಸಾಫರಖಾನೆ ಅಭಿವೃದ್ಧಿಪಡಿಸಲು ...	150
ಬಾಗೇಪಲ್ಲಿ ...	ನಲ್ಲಕೆರವು ಮುಸಾಫರಖಾನೆ ಅಭಿವೃದ್ಧಿಪಡಿಸಲು	210
	ಗುಟ್ಟಪಾಳ್ಯ ಚೇಳೂರು ರಸ್ತೆ ಚಾಕವೇಲುವರೆಗೆ ಬಿಡಾಯಿಸಲು ..	200
ಗುಡಿಬಂಡೆ ..	ಬೀಚಗಾನಹಳ್ಳಿ ಭಾವಿ ಆಳಪಡಿಸಲು	36
ಗೌರಿಬಿದನೂರು ..	ನಾಗಾತಿಹಳ್ಳಿಯಲಿ ಭಾವಿ ಅಗಿಯುಲು	166
	ಕದರೇನಹಳ್ಳಿ ಡಿಟೋ	73
ಶಿಡ್ಲಘಟ್ಟ ...	ಗಂಜಿಗುಂಟೆ ಮುಸಾಫರಖಾನೆ ರಿಪೇರಿಗೆ	100
ಶ್ರೀನಿವಾಸಪುರ ...	ಕಂಬಾಲಪಲ್ಲಿ ಕುಂಟೆ ರಿಪೇರಿಗಾಗಿ	200

—ಇದರಡಿ ಕಂಡ ತಾಲ್ಲೂಕು ಬೋರ್ಡ್ ಪ್ರೊಸೀಡಿಂಗ್ಸುಗಳು ಓದಿ ರಿಕಾರ್ಡ್ ಮಾಡಲ್ಪಟ್ಟವು.

ನಂಬರು.	ತಾಲ್ಲೂಕು ಬೋರ್ಡ್.	ತಾರೀಖು.
1	ಕೋಲಾರ	16—5—07
2	ಬವರಿಂಗಪೇಟೆ	18—5—07
3	ಚಿಂತಾಮಣಿ	9—4—07
4	ಶ್ರೀನಿವಾಸಪುರ	20—5—07
5	[illegible]	22—5—07
6	ಶಿಡ್ಲಘಟ್ಟ	24—4—07
7	ಚಿಕ್ಕಬಳ್ಳಾಪುರ	30—4—07
8	ಬಾಗೆಪಲ್ಲಿ	20—5—07
9	ಗುಡಿಬಂಡೆ	16—4—07
10	ಮಾಲೂರು	30—5—07

27. ಮುಂದಿನ ಮೀಟಿಂಗು 4—9—07ನೆ ತಾರೀಖಿನಲ್ಲಿ ನಡೆಯಬೇಕೆಂದು ತೀರ್ಮಾನಿಸಲ್ಪಟ್ಟಿತು.

ಸಿ. ಶ್ರೀಕಂಠೇಶ್ವರ ಐಯ್ಯರ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡು ಬೋರ್ಡ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 17ನೆ ಜುಲೈ 1907.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಹಿಟ್ನೆ ಹೆಬ್ಬಾಗಿಲು ಗ್ರಾಮದ ದಿಡ್ಡೆ ನರಸಿಂಹ ಉಪಾಧ್ಯರು ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಸೆಪ್ಟಂಬರ್ 2ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ. ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಖಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906-07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರೆಗೆ ರೂಪಾಯಿ 841—0—7 ಆಗಿರುತ್ತೆ.

2. ಹರಾಜು ಕಾಲದಲ್ಲಿ ಹರಾಜದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆಮು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತ್ತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರ ದಸ್ತಕತ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಖ್ತೆ: ಕಟ್ಟಡಗಳು: ಕಟ್ಟಡದ ಹೆಸರು.	ಕಟ್ಟಡಗಳು: ಅಂದಾಜಾ ಕಿಮ್ಮತ್ತು.	ಜಮೀನು: ನಂಬರ್ ಅಥವಾ ಜಮೀನಿನ ಹೆಸರು	ಜಮೀನು: ಖುಷ್ಕಿ, ತರೀ ಯಾ ಬಾಗಾಯತು.	ಜಮೀನು: ವಿಸ್ತೀರ್ಣ.	ಜಮೀನು: ಆಕಾರ.	ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕ್ವಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
ಹುಣಸೂರು	ಪಿರ್ಯಾಪಟ್ಟ	ಜೋಡಿ ಹಿಟ್ನೆ ಹೆಬ್ಬಾಗಿಲು	ದಿಡ್ಡೆ ನರಸಿಂಹ ಉಪಾಧ್ಯರು ವಗೈರೇರಿಂದ									

ಪೂರ್ವಕ್ಕೆ—ಸಂನ್ಯಾಸಪುರ.
ಪಶ್ಚಿಮಕ್ಕೆ—ಅವರೆಕಾಯಿ ಗುಡ್ಡದಕಾವಲು.
ದಕ್ಷಿಣಕ್ಕೆ—ಕಗ್ಗುಂಡಿ ಗ್ರಾಮ.
ಉತ್ತರಕ್ಕೆ—ಹಿಟ್ನೆಹಳ್ಳಿಗ್ರಾಮ.

	ಎ.	ಗು.		ರೂ.	ಆ.
ಈ ಮಧ್ಯೆ-ಖುಷ್ಕಿ ...	552	32	...	375	8
ತರಿ ..	35	3	...	125	0
ಬಾಗಾಯಿತು ...	69	5	..	280	0
...	487	39	..	7	8
...	1,144	39	..	788	0

ರೂ.	ಆ.	ಪೈ.	
18	2	4	ಶುಭಕೃತು
136	14	5	ಶೋಭಕೃತು
171	1	11	ಕ್ರೋಧಿ
171	1	11	ವಿಶ್ವಾವಸು
342	4	0	ಪರಾಭವ
83[illegible]	8	7	[illegible]
841	0	7	ಪಾವತಿ ತಾರೀಖಿನ ವರೆಗಿನ ಬಡ್ಡಿ ಸಹಿತ

ಸಾಲೀಯಾನಾ ಸರ್ಕಾರಕ್ಕೆ ಗ್ರಾಮದಿಂದ ಬರಬೇಕಾದ್ದು.

ಜೋಡಿ.	ಕ್ವಿಟರೆಂಟು.	ಲೋಕಲ್.		ಜುಮ್ಲಾ.	
ರೂ.	ರೂ.	ರೂ.	ಆ.	ರೂ.	ಆ.
222	71	49	4	342	4

ಎ. ಸುಬ್ರಹ್ಮಣ್ಯ ಐಯ್ಯರ್, ಫಾರ ಡೆಪ್ಯುಟಿ ಕಮಿಷನರ.

ಹಾಸನ ಡಿಸ್ಟ್ರಿಕ್ಟು.

ತಾರೀಖು 1ನೆ ಆಗಸ್ಟು 1907.

ಸಕಲ ಜನಗಳಿಗೂ ತಿಳಿಯುವ ಬಗ್ಯೆ (ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಾಸ್ತಿದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾಯಂಮಾಡಿದ ಕೂಡಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ; ಅಂತಾ ಅಪ್ಪೀಲ್‌ನಲ್ಲಿ ಆಗುವ ಅಖೈರು ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.		ಅಂದಾಜಾ ಜೋಡಿ ಮತ್ತು ಸಿಸ್ತು ಬೆರಿಜು.	ಸಾಧಾರಣ ಕಿಮ್ಮತ್ತು.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.		ಹರಾಜು ತಾರೀಖು ಜಾಗೆ.
						ಎ. ಗು.	ರೂ. ಆ.	ರೂ.	ರೂ. ಆ. ಪೈ.		
ಹಾಸನ	ಹಾಸನ	ಹಾಸನ ಕಸಬಾ	ಜೋಡಿ ಹಂದಿನಕೆರೆ	ವೆಂಕಟನಾರಾಯಣಶಾಸ್ತ್ರಿ	ಖರಾಬ್ ...	1,194 4	18 12	959	3,754 7 1	1906ನೇ ಜೂನ್ ಆಖೈರು ವರಿಗಿನ ಬಾಕಿ	1907ನೇ ಇಸವಿ ಸೆಪ್ಟಂಬರ್ 23ನೇ ತಾ॥ ಸೋಮವಾರ ದಿವಸ 11 ಘಂಟೆ ವರಿ ಗಾಯಿತು ಹಾಸನ ತಾ॥ ಕಛೇರಿಯಲ್ಲಿ ಹಾಸನ ಡಿ॥ ಪ್ರೆಸಿಡೆಂಟ್ ಡಿ॥ ಕೌ॥ ರವರು ಯಾ ಡಿ॥ ಕ॥ ರವರಿಂದ ನೇಮಿಸಲ್ಪಡುವ ಇತರ ಆಫೀಸರು ಹರಾಜ್ ನಡಸುತ್ತಾರೆ.
					ಖುಷ್ಕಿ ...	1,037 32	926 4		44 8 0	ನೋಟೀಸ್ ಫೀ ವಗೈರೆ.	
					ತರಿ ...	311 9	1,105 12		291 9 0	1906ನೇ ಜೂನ್ ಆಖೈರು ವರಿಗಿನ ಬಡ್ಡಿ	
					ಬಾಗಾಯಿತು...	43 6	195 0				
					ಜುಮ್ಲಾ ...	2,586 11	2,245 12		4,090 8 1	ಮತ್ತು 1906–07ನೇ ಸಾಲಿನ ಜೋಡಿ ಬಾಕಿ ಮತ್ತು ಬಡ್ಡಿ ಸಹ.	

ಕೆ. ಆರ್. ಶ್ರೀನಿವಾಸಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು ನೋಟಿಸು, ತಾರೀಖು 27ನೆ ಜುಲೈ 1907.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸಾಗಿ ಇರುವ ಇದರಡಿ ಕಂಡ ದಸ್ತೈವಜುಗಳನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೆ ಆಗಲಿ ಈ ನೋಟಿಸ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ರೂಬ್ ರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, 1903ನೆ ಇಸವಿ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತೈವಜುಗಳನ್ನು ನಾಶಪಡಿಸುತ್ತೆ:—

ಜಾಬಿತ ನಂಬರು.	ಸಬ್ ರಿಜಿಸ್ಟ್ರಾರ್ ಆಫೀಸು ಹೆಸರು.	ಪುಸ್ತಕದ ನಂಬರು.	ದಸ್ತೈವಜಿನ ನಂಬರು.	ದಸ್ತೈವಜು ಹುಟ್ಟಿದ ತಾರೀಖು.	ದಸ್ತೈವಜು ರಿಜಸ್ಟ್ರಾರು ಅಥವಾ ತಿರಸ್ಕರಿಸಿದ ತಾರೀಖು.	ದಸ್ತೈವಜು ಬರೆದುಕೊಟ್ಟವರ ಹೆಸರು.	ದಸ್ತೈವಜು ಬರೆಸಿಕೊಂಡವರ ಹೆಸರು.	ದಸ್ತೈವಜು ಸ್ವಭಾವ ಮತ್ತು ಕಿಮ್ಮತ್ತು.
1	ಅರ್ಕಲಗೂಡು ...	I	540 / 1904-05	20—8—04	20—12—04	ಕೊಣನೂರಲ್ಲಿರುವ ತಿಪ್ಪಶೆಟ್ಟಿ ಮಗ ರಾಮಶೆಟ್ಟಿ.	ಸರಗೂರಲ್ಲಿರುವ ಗಂಗಾಧರ ಶಾಸ್ತ್ರಿ ಮಗ ವೆಂಕಟಸುಬ್ಬಾ ಶಾಸ್ತ್ರಿ.	50 ರೂಪಾಯಿಗಳಿಗೆ ಕ್ರಯ ಪತ್ರ.
2	ಡಿಟೋ ...	IV	18 / 1904-05	8—3—05	4—5—05	ಹುಲಿಕಲ್ಲು ಗ್ರಾಮದಲ್ಲಿರುವ ರಾಮಸ್ವಾಮ್ಯಯ್ಯಂಗಾರ್ ಮಗ ಕೃಷ್ಣಯ್ಯಂಗಾರ್.	ಹುಲಿಕಲ್ಲು ಗ್ರಾಮದಲ್ಲಿರುವ ಶಾಸ್ತ್ರಿ ಶಿಂಗೈಯ್ಯಂಗಾರು.	25 ರೂಪಾಯಿಗಳಿಗೆ ಹಣ ಸಂಗ ರಶೀತಿ
3	ಆಲೂರು ...	I	27 / 1904-05	20—7—04	21—7—04	ಹರಗು ನಾರಣ್ಯೈಯ್ಯಂಗಾರ್	ಕಣದಹಳ್ಳಿ ಈರಗನ ಮಗ ಲಕ್ಕ...	50 ರೂಪಾಯಿನ ಕ್ರಯ ಪತ್ರ.
4	ಡಿಟೋ ...	I	439 / 1904-05	14—6—05	16—6—05	ಶಿದ್ದಾಪುರದ ಜುಂಜೇಗೌಡನ ಮಗ ಶಿದ್ದೇಗೌಡ ಉರುಫ್ ಅಪ್ಪಣಿ.	ಸಾಣೇಹಳ್ಳಿ ದಾಖಲೆ ಕಳಿಕೊಪ್ಪಲು ವಾಸಸ್ಥಳ ಹುಲ್ಲುಂದದ ಜವರೇಗೌಡನ ಹೆಂಡತಿ ಸಣ್ಣಮ್ಮ.	85 ರೂಪಾಯಿನ ಕ್ರಯ ಪತ್ರ.

ಕೆ. ಆರ್. ಶ್ರೀನಿವಾಸ್ಯೈಯ್ಯಂಗಾರ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಅಬ್‌ಸ್ಟ್ರಾಕ್ಟ್ ನೋಟಿಫಿಕೇಷನ್, ತಾರೀಖು 24ನೇ ಜುಲೈ 1907.

ಚನ್ನಗಿರಿ ತಾಲ್ಲೂಕು ಸೂಳೆಕೆರೆ ಗ್ರಾಮದಲ್ಲಿ ಇರುವ ಮ॥ ಕೆ. ಶ್ಯಾಮೈಯ್ಯಂಗಾರ್ರಿಂದ ಸರಕಾರಕ್ಕೆ ಬರಬೇಕಾದ ಮೊಬಲಗು ಬಾರದೇ ಇರುವದರಿಂದ ಸದರಿಯವರ ಬಾಬತು ಜಮೀನುಗಳು ಸನ್ 1907ನೇ ಇಸವಿ ಆಗಸ್ಟು 1ನೇ ತಾರೀಖು ಮೈಸೂರು ಗೆಜೆಟಿನ IIನೇ ಭಾಗದ 363, 364ನೇ ಸಂಪುಟದಲ್ಲಿ ಪ್ರಾಯಿಷ್ಟ ಆಗಿರುವ ಡೀಟೇಲ್ಡ್ ನೋಟಿಫಿಕೇಷನ್‌ನಲ್ಲಿ ನಮೂದಿಸ್ಲ ಇರುವ ತಪಶೀಲ್ ಮೇರೆ ಇರುವವುಗಳನ್ನು 14—9—1907ನೇ ದಿವಿ 11 ಘಂಟೆಗೆ ಸೂಳೆಕೆರೆ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಛಾರ್ ಡೆಪ್ಯುಟಿ ಕಮೀಷನರ್.

1907ನೇ ಇಸವಿ ಮೇ ತಾರೀಖು 6ನೇ ಸೋಮವಾರ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡು ಪ್ರೊಸೀಡಿಂಗ್ಸಿಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗದ ಮೆಂಬರುಗಳು.

1. ಮ॥ ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್, ಮತ್ತು ಪ್ರೆಸಿಡೆಂಟರವರು.
2. ,, ಮಹಮ್ಮದ್ ರಜಾ, ಶಿವಮೊಗ್ಗ ಡಿ॥ ಅಸಿಸ್ಟೆಂಟ್ ಕಮಿಷನರವರು.
3. ,, ಟಿ. ಶ್ರೀನಿವಾಸರಾವ್, ಹೊನ್ನಾಳಿ ಡಿ॥ ಡಿಟೋ
4. ,, ಎಸ್. ಸುಬ್ಬರಾವ್, ಸಾಗರ ಡಿವಿಜನ್, ಅಸಿಸ್ಟೆಂಟ್ ಕಮಿಷನರ್.
5. ,, ಎ. ಕೃಷ್ಣಸ್ವಾಮಿ ಅಯ್ಯಂಗಾರ್, ಶಿವಮೊಗ್ಗಾ ಟವನ್ ಮ್ಯು॥ ವೈಸ್ ಪ್ರೆಸಿಡೆಂಟರವರು ಮತ್ತು ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು.
6. ,, ಆರ್. ವಿ. ಸುಂದರಂ ಐಯ್ಯರ್, ಎಗ್ಜಿಕ್ಯೂಟಿವ್ ಇಂಜನಿಯರವರು.
7. ,, ಮಹಮದ್ ಉಸ್ಮಾನ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
8. ,, ಕೆ. ರಂಗಪ್ಪ, ಸ್ಕೂಲ್‌ಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.

ಉದ್ಯೋಗಸ್ಥರಲ್ಲದ ತಾಲ್ಲೂಕುಗಳ ಮೆಂಬರುಗಳು.

9. ,, ನಾಡಿಗ ಗೋಪಾಲಯ್ಯನವರು, ಹೊನ್ನಾಳಿ ತಾಲ್ಲೂಕು.
10. ,, ತಾಗರ್ತಿ ದ್ಯಾವಪ್ಪನವರು, ಶಿಕಾರಿಪುರ ತಾಲ್ಲೂಕು.
11. ,, ಎ. ನರಸಿಂಹಯ್ಯಂಗಾರು, ಸಾಗರ ತಾಲ್ಲೂಕು.

ಇತರ ಮೆಂಬರುಗಳು.

12. ,, ರೆವರೆಂಡ್ ಫಾದರ್ ಎಫ್. ಪಾಲ್ನೆ ಯವರು.
13. ,, ಮರಿದೇವರ ಗುರುಶಿದ್ದಪ್ಪ, ಹೊನ್ನಾಳಿ ತಾಲ್ಲೂಕ್.
14. ,, ವೀರಬಸಪ್ಪನವರು, ಶಿಕಾರಿಪುರ ತಾಲ್ಲೂಕ್.
15. ,, ರಟ್ಟೆಹಳ್ಳಿ ಪುಟ್ಟಪ್ಪನವರು, ಸಾಗರ ತಾಲ್ಲೂಕು.

ಗೈರ್ ಹಾಜರು.

ಉದ್ಯೋಗಸ್ಥರಲ್ಲದ, ತಾಲ್ಲೂಕು ಮೆಂಬರುಗಳು.

1. ,, ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗಾ ತಾಲ್ಲೂಕ್.
2. ,, ಲಾಡಿ ಅಬ್ದುಲ್ ಕರೀಂ, ಕುಂಸಿ ಸಬ್ ತಾಲ್ಲೂಕು.
3. ,, ಹೋದಿಗೆರೆ ಆಡವಪ್ಪ, ಚನ್ನಗಿರಿ ತಾಲ್ಲೂಕು.
4. ,, ಹೊಸಬಾಳೆ ತಿಮ್ಮಪ್ಪನವರು, ಸೊರಬ ತಾಲ್ಲೂಕು.
5. ,, ಚಂದ್ರಯ್ಯನ ನಾಗಪ್ಪ, ನಗರ ತಾಲ್ಲೂಕು.
6. ,, ಆಗುಂಬೆ ಲಕ್ಷ್ಮೀನಾರಣಪ್ಪ, ತೀರ್ಥಹಳ್ಳಿ ತಾಲ್ಲೂಕು.

ಇತರ ಮೆಂಬರುಗಳು.

7. ,, ಟಿ. ಭೀಮರಾವ್, ಶಿವಮೊಗ್ಗ.
8. ,, ಖಾಜಿ ಸೈಯದ್ ಮಹಮದ್.
9. ,, ರೆವರೆಂಡ್ ಎ. ಇ. ನೈಟಿಂಗೇಲ್, ಶಿವಮೊಗ್ಗ.
10. ,, ಕೋರಿ ಹಿರಂಣಪ್ಪ, ಸಾಗರ.

1. ಕಂಟ್ರೋಲರವರಿಂದ ಆಡಿಟ್ಟಾಗಿ ಬಂದ 1906ನೆ ಇಸವಿ ಸೆಪ್ಟಂಬರ, ಅಕ್ಟೋಬರ ಮತ್ತು ನವಂಬರ ಮಾಹೆಗಳ ಬಾಬತು ಡಿಸ್ಟ್ರಿಕ್ಟ ಫಂಡ್ ಲೆಖ್ಖಗಳನ್ನು ಓದಲಾಯಿತು.

	ಜಮಾ ರೂ.	ಆ.	ಪೈ.	ಖರ್ಚು ರೂ.	ಆ.	ಪೈ.
ಸೆಪ್ಟಂಬರ 1907	1,447	10	7	7,685	6	10
ಅಕ್ಟೋಬರ 1907	1,149	8	8	8,987	6	9
ನವಂಬರ 1907	1,744	1	6	5,611	4	4
	4,341	4	9	22,284	1	11

ತೀರ್ಮಾನ.—ರಿಕಾರ್ಡು ಮಾಡಲಾಯಿತು.

2. ಅನವಟ್ಟಿಯಲ್ಲಿರುವ ಹಳೇ ಬಾರಲೈನನ್ನು ಮುಸಾಫರಖಾನೆಯಾಗಿ ಬದಲಾಯಿಸಬೇಕಾದ ವಿಷಯದಲ್ಲಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 484ನೆ ತಾರೀಖು 9—3—07ನೆ ಯಾದಿಯನ್ನು ಓದಿ—

ಎಕ್ಸಿಕ್ಯೂಟಿವ ಇಂಜನಿಯರವರಿಂದ ಕಟ್ಟಡದ ಅಂದಾಜಾವನ್ನು ಮಂಜೂರಿ ಬಗ್ಯೆ ಗವರ್ನಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲ್ಪಟ್ಟಿತು.

3. ದಾವಣಗೆರೆ-ಸೂಳೆಕೆರೆ ರೋಡ ಕಾಮಗಾರಿ ಪೂರೈಸುವ ಬಗ್ಯೆ ಹೆಚ್ಚಾಗಿ 5,000 ರೂಪಾಯಿ ಮಂಜೂರ್ ಮಾಡಿರುವ ಬಾಗಿ ತಲ್ಪಿದ ನಂಬರ 8045-7—ಲೋ. ಬೋ. 292-06-2 ತಾರೀಖು 12-3-1907ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

4. ಶಿರಾಳಕೊಪ್ಪದಲ್ಲಿ ಆಷುರಖಾನೆ ಕಟ್ಟತಕ್ಕ ಬಗ್ಯೆ ಮಾಫಿಯಾಗಿ ಜಾಗಾ ಕೊಡಿಸುವ ವಿಷಯದಲ್ಲಿ ಶಿಕಾರಿಪುರ ತಾಲ್ಲೂಕು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಎಕಸ್ಟ್ರಾಕ್ಟ ಸಹಿ ತಲ್ಪಿದ ಹೊನ್ನಾಳಿ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1,085, ತಾರೀಖು 26-3-07ನೆ ಯಾದಿಯನ್ನು ಓದಿ—

ಆರು ತಿಂಗಳೊಳ್ಳಗಾಗಿ ಕಟ್ಟಡ ಪೂರೈಸುವ ಷರತ್ತಿನ ಮೇಲೆ ಜಾಗಾವನ್ನ ಮಾಫಿಯಾಗಿ ಕೊಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

5. ಜಡೆ-ಬೊಮ್ಮನಹಳ್ಳಿ ಬಂಡಿ ದಾರಿಯ ರೀಪೇರಿ ವಿಷಯದಲ್ಲಿ ಸೊರಬ ತಾಲ್ಲೂಕು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಎಕಸ್ಟ್ರಾಕ್ಟ ಸಹಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1125, ತಾರೀಖು 27—3—07ನೆ ಯಾದಿಯನ್ನು ಓದಿ—

ಈ ರಸ್ತೆಯ ರಿಪೇರಿ ಬಗ್ಯೆ ಒಟ್ಟು 50 ರೂಪಾಯಿ ಕೊಡಬಹುದಾಗಿ ತೀರ್ಮಾನವಾಯಿತು.

6. ಕುಪ್ಪಗಡ್ಡೆ-ಹಸವಿಹಳ್ಳಿ ಬಂಡಿದಾರಿ ರಿಪೇರಿ ಬಗ್ಯೆ ತಲಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರ ನಂಬರು 1166, ತಾರೀಖು 2—4—07ನೆ ಯಾದಿಯನ್ನು ಓದಿ—

ಹೆಚ್ಚಾಗಿ ಕೆಟ್ಟುಹೋಗಿರುವ ಸ್ಥಳಗಳಲ್ಲಿ ರಿಪೇರಿ ಮಾಡಿಸಿ ರಸ್ತೆಯನ್ನ ಸರಿಯಾದ ಸ್ಥಿತಿಯಲ್ಲಿಡಿಸುವಂತೆ ಎಗ್ಸಿಕ್ಯೂಟಿವ ಇಂಜನೀರವರಿಗೆ ಬರೆಯಬೇಕಾಗಿ ತೀರ್ಮಾನಿಸಲ್ಪಟ್ಟಿತು.

7. ಅನಪಿನ ಕಟ್ಟೆಯಲ್ಲಿರುವ ದೊಡ್ಡಿಯನ್ನ ಖುನ್ನಾ ಮಾಡಿ ಮಲ್ಲಿಗೇನಹಳ್ಳಿಯಲ್ಲಿ ಒಂದನ್ನ ಸ್ಥಾಪಿಸಬೇಕಾಗಿ ತಲ್ಪಿದ ಶಿವಮೊಗ್ಗಾ ಡಿವಿಜನ್ ಅಸಿಸ್ಟೆಂಟ ಕಮಿಷನರವರ ನಂಬರು 115, ತಾರೀಖು 26—3—07ನೆ ಯಾದಿಯನ್ನು ಓದಿ—

ಮಲ್ಲಿಗೇನಹಳ್ಳಿ ದೊಡ್ಡಿ ಇಡಬಹುದಾಗಿಯೂ ಅನಪಿನಕಟ್ಟೆಯ ದೊಡ್ಡಿ ಮನ್ನಾ ಮಾಡುವ ಪೊದಲು ಆ ದೊಡ್ಡಿಯ ಹುಟ್ಟುವಳಿ ಏನು, ದೊಡ್ಡಿಯನ್ನ ಗ್ರಾಮಸ್ಥರು ಇಟ್ಟುಕೊಳ್ಳತ್ತಿದ್ದರೆ ? ಎಂಬ ವಿಷಯದಲ್ಲಿ ರಿಪೋರ್ಟು ಬರಮಾಡಿಕೊಳ್ಳಬೇಕಾಗಿ ತೀರ್ಮಾನಿಸಲ್ಪಟ್ಟಿತು.

8. ಕಳೂರ ಕಟ್ಟೆ ಆಸ್ಪತ್ರೆ ಅಸಿಸ್ಟೆಂಟರು ವಾರಕ್ಕೊಂದಾವರ್ತಿ ಲಕ್ಷ್ಮಿಪುರ ಗ್ರಾಮಕ್ಕೆ ಹೋಗಿ ಬರಬೇಕಾಗಿ ನಗರ ತಾಲ್ಲೂಕು ಅಮಲ್ದಾರರ ರಿಪೋರ್ಟು ಸಹಿ ತಲ್ಪಿದ ಸಾಗರ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರವರ ನಂ. 1041, ತಾರೀಖು 5—3—07ನೆ ಯಾದಿಯನ್ನು ಓದಿ—

ಈ ವಿಷಯವನ್ನು ಬರುವ ಮೀಟಿಂಗ ವರೆಗು ನಿಲ್ಲಿಸಬೇಕಾಗಿ ತೀರ್ಮಾನಿಸಲ್ಪಟ್ಟಿತು.

9. ದೇವನಹಳ್ಳಿ ಮತ್ತು ಕಳೂರುಕಟ್ಟೆ ಆಸ್ಪತ್ರೆ ಕಟ್ಟಡಗಳ ನೆಲಕ್ಕೆ ಇಟ್ಟಿಗೆಗಳನ್ನ ಕಟ್ಟತಕ್ಕ ಬಾಗವಡು ಪೈಕಿ ಮ್ಯುನಿಸಿಪಲ್ ಹಿಸ್ಸೆ ಹಣವನ್ನು ಪ್ರಾವಿನ್ಷಿಯಲ್ ಫಂಡಿನಿಂದ ಕೊಡಲು ಆಗುವದಿಲ್ಲವೆಂದು ತಲ್ಪಿದ ರೆವಿನ್ಯೂ ಮತ್ತು ಜನರಲ್ ಸೆಕ್ರಿಟೆರಿಯವರ ನಂಬರ 8480, ತಾರೀಖು 18—3—07ನೆ ಡಾಕೆಟ ಓದಿ—

ಈ ಬಗ್ಯೆ ಇದುವರೆಗೆ ಕೊಟ್ಟ 205 ರೂಪಾಯಿಗಳ ವಿನಹಾ ಮ್ಯುನಿಸಿಪಲ್ ಹಿಸ್ಸೆಯ 10 ರೂಪಾಯಿಗಳನ್ನ ಸಹ ಕೊಡಲು ಡಿಸ್ಟ್ರಿಕ್ಟ ಬೋರ್ಡಿನವರು ಸಿದ್ಧರಾಗಿದ್ದಾರೆಂದು ತೀರ್ಮಾನಿಸಲ್ಪಟ್ಟಿತು.

10. ತೀರ್ಥಹಳ್ಳಿ ತಾಲ್ಲೂಕು ಮುನಿಯೂರಲ್ಲಿ ದೊಡ್ಡಿಯನ್ನ ಸ್ಥಾಪಿಸಬೇಕಾಗಿ ತಲ್ಪಿದ ಶಿವಮೊಗ್ಗಾ ಡಿ|| ಅಸಿಸ್ಟೆಂಟ ಕಮಿಷನರವರ ನಂಬರು 1083ನೆ ಯಾದಿಯನ್ನು ಓದಿ—

ದೊಡ್ಡಿಯನ್ನು ಸ್ಥಾಪನೆ ಮಾಡಲು ಮಂಜೂರ್ ಮಾಡಿರುವುದಾಗಿ ತೀರ್ಮಾನಿಸಲ್ಪಟ್ಟಿತು.

11. ಕೆಲವು ಆಸ್ಪತ್ರೆಗಳ ಕಂಪಾಂಡ್ ಗೋಡೆಗಳನ್ನ ಕಟ್ಟತಕ್ಕ ವಿಷಯದಲ್ಲಿ ತಲ್ಪಿದ ನಂಬರು 7731-40, ತಾರೀಖು 6—3—07ನೆ ಗವರ್ನಮೆಂಟಿನ ಪ್ರೊಸೀಡಿಂಗ್ಸನ್ನು ಓದಿ—

ರಿಕಾರ್ಡು ಮಾಡಲಾಯಿತು.

12. ಹೆಂಣು ರೋಗಿಗಳ ಬಗ್ಯೆ ಲೋಕಲ ಫಂಡ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಒಂದು ಕೋಣೆಯನ್ನು ಕಟ್ಟತಕ್ಕ ಭಾಗದಲ್ಲಿ ಅನೇಕ ಡಿಸ್ಟ್ರಿಕ್ಟು ಬೋರ್ಡುಗಳ ತೀರ್ಮಾನಗಳ ನಿಶಿ ತಲ್ಪಿದ ನಂಬರು 8469-79—ಮೆಡಿಕಲ 243-05, ತಾರೀಖು 18-3—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

13. ನಗರ ಯೂನಿಯನ್‌ಗಳಲ್ಲಿರುವ ಝಾಡಮಾಲಿಗಳ ಪೈಕಿ ಒಂದು ಇಸಮ್ಮನ್ನು ವಜಾ ಮಾಡಬೇಕಾಗಿಯೂ, ಝಾಡಮಾಲಿಗಳು ಮಾಡುವ ಕೆಲಸವನ್ನು ಮೇಲ ತನಿಖಿ ಮಾಡುವ ಬಗ್ಯೆ ಪಟೇಲನಿಗೆ 1 ರೂಪಾಯಿ ಅಲೋಯನ್ಸ ಕೊಡಬಹುದಾಗಿ ಸಹ ತಲ್ಪಿದ ಸಾಗರ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರ ನಂಬರು 1016, ತಾರೀಖು 23—2—07ನೆ ಯಾದಿಯನ್ನು ಓದಿ—

ಆರೀತಿ ಮಾಡಲು ಮಂಜೂರ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

14. ಕರೂರು-ತೊರೆಮನೆ ರಸ್ತೆಯನ್ನು ಡಿಸ್ಟ್ರಿಕ್ಟು ಫಂಡಿನಿಂದ ರಿಪೇರಿ ಸ್ಥಿತಿಯಲ್ಲಿಡಿಸಬೇಕಾಗಿ ತಲ್ಪಿದ ಸಾಗರ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರ ನಂಬರು 1008, ತಾರೀಖು 22—2—07ನೆ ಯಾದಿಯನ್ನು ಓದಿ—

ಮೈಲ ಒಂದಕ್ಕೆ 10 ರೂಪಾಯಿಗಳನ್ನ ಕೊಡಲು ಮಂಜೂರ್ಮಾಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

15. ನಂಬರು 7279—80-ಲೋ. ಬೋ. 113-06-4, ತಾರೀಖು 25—2—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ಶಿವಮೊಗ್ಗಾ ತಾಲ್ಲೂಕು ರಾಮೇನಕೊಪ್ಪ-ಅನುಪಿನಕಟ್ಟೆ ಗ್ರಾಮಗಳಲ್ಲಿ ಭಾವಿಗಳಿಗೋಸ್ಕರ ಬೇಕಾಗಿರುವ 220 ರೂಪಾಯಿಗಳನ್ನ "ಸಿ VI (ಸಿ)" ಎಂಬ ಬಾಬಿನಲ್ಲಿರುವ 500 ರೂಪಾಯಿಗಳ ಪೈಕಿ ಉಪಯೋಗಿಸಿಕೊಳ್ಳಬಹುದೆಂತ ತೀರ್ಮಾನಿಸಲ್ಪಟ್ಟಿತು.

16. ಅನಂತಪುರದಲ್ಲಿ ಆಸ್ಪತ್ರೆ ಇಡಲು ಮಾಹೆಯಾನಾ 3 ರೂಪಾಯಿ ಮನೆ ಬಾಡಿಗೆ ಮಂಜೂರ ಮಾಡಿರುವದಾಗಿ ತಲ್ಪಿದ ನಂಬರು 6967-9-ಮಿಸ. 203-06-2, ತಾರೀಖು 12—2—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

17. ಸಾಲಾಖೈರೊಳಗೆ ಪ್ರಾರಂಭಮಾಡದೆ ಇರುವ ಕಾಮಗಾರಿಗಳನ್ನ ಸದರಿ ಸಾಲ ಬಾಬತು "ಇನ್‌ಕಂಪ್ಲೀಟ" ಕಾಮಗಾರಿಗಳೊಂದಿಗೆ ಸೇರಿಸಕೂಡದಾಗಿ ತಲ್ಪಿದ ನಂಬರು 7351-9—ಲೋ. ಬೋ. 146-06-4, ತಾರೀಖು 4—2—07 ಗವರ್ನಮೆಂಟ ಪ್ರೊಸೀಡಿಂಗ್ಸ ಓದಿ—

ರಿಕಾರ್ಡು ಮಾಡಲಾಯಿತು.

18. ಸಂತೆಕಟ್ಟೆ ಛತ್ರಕ್ಕೋಸ್ಕರ ಒಬ್ಬ ಕೇರ್‌ಟೇಕರ ಇಸಮಿನ ಮೊಕರರೂರಾತಿಯನ್ನು ಮಂಜೂರ ಮಾಡಿರುವದಾಗಿ ತಲ್ಪಿದ ನಂಬರು 6950-1—ಲೋ. ಬೋ. 467-05-06, ತಾರೀಖು 12—2—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

19. ನಗರದಲ್ಲಿ ಒಬ್ಬ ಸೂಲಗಿತ್ತಿ ಇಸಂ ಮೊಕರರೂರಾತಿಯನ್ನ ಮಂಜೂರ ಮಾಡಿರುವದಾಗಿ ತಲ್ಪಿದ ನಂಬರ 7204-06-ಮೆಡಿಕಲ 204-06-4, ತಾರೀಖು 21—2—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

20. ಡಿಸ್ಟ್ರಿಕ್ಟು ಬೋರ್ಡುಗಳ ಮೀಟಿಂಗುಗಳ ಬಗ್ಯೆ ಅನುಲ್ಹಾರರನ್ನ ಬರಮಾಡಿಕೊಳ್ಳಲು ಪ್ರೆಸಿಡೆಂಟರುಗಳಿಗೆ ಅಧಿಕಾರ ಕೊಟ್ಟಿರುವದಾಗಿ ತಲ್ಪಿದ ನಂಬರು 7791-800-ಲೋ. ಬೋ. 170-06-1, ತಾರೀಖು 1—3—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

21. ಭತ್ಯ ಬಿಲ್ಲುಗಳು ಯಾವ ತಿಂಗಳಿಗೆ ಸಂಬಂಧಪಟ್ಟಿರುತ್ತವೆಯೋ ಆ ತಿಂಗಳಾದ ಕೂಡ್ಲೆ ಅವುಗಳನ್ನ ಹಾಜರ ಮಾಡದಿದ್ದರೆ ಅಂಥವುಗಳನ್ನ ಹಿಡಿಯಕೂಡದೆಂಬ ವಿಷಯ ಮೆಂಬರುಗಳು ಮತ್ತು ಪ್ರೆಸಿಡೆಂಟರುಗಳು ಸಹ ಚೆನ್ನಾಗಿ ತಿಳಿದುಕೊಂಡಿರಬೇಕಾಗಿ ತಲ್ಪಿದ ನಂಬರು 8068-76—ಲೋ. ಬೋ. 253-06-2, ತಾರೀಖು 12—3—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

22. ಜುನಾಯಿಸಿ ಬಜೆಟ್ಟಿನಲ್ಲಿ ದಾಖಲ ಮಾಡುವ ಪೂರ್ವವೇ ಕಾಮಗಾರಿ ಆಗಬೇಕಾದ ಪ್ರೊಜೆಕ್ಟುಗಳನ್ನ ಅಂದಾಜಾಗಳ ನಿಸಿ ಸಕಾಲದಲ್ಲಿ ಸಿದ್ಧಪಡಿಸಿರಬೇಕಾಗಿ ತಲ್ಪಿದ ನಂಬರು 8030-7 ಲೋ. ಬೋ. 289-06-2ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

23. ಕುಪ್ಪಗಡ್ಡೆ ದೊಡ್ಡಿಯನ್ನ ಮನ್ನಾ ಮಾಡುವ ವಿಷಯದಲ್ಲಿ ತಲ್ಪಿದ ಸಾಗರ ಸಬ ಡಿವಿಜನ ಅಸಿಸ್ಟೆಂಟ ಕಮಿಷನರವರ ನಂಬರು 1124, ತಾರೀಖು 30-3-07ನೆ ಯಾದಿಯನ್ನು ಓದಿ—

ಮನ್ನಾ ಮಾಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

24. ಬೆಂಕಿಪುರ ಯೂನಿಯರ್ನಲ್ಲಿ ಕಚೇರಿ ಗ್ರಾಡಿಗಳನ್ನ ಬಾಡಿಗೆಗೆ ತೆಗೆದುಕೊಳ್ಳುವ ವಿಷಯದಲ್ಲಿ ತಲ್ಪಿದ ಶಿವಮೊಗ್ಗಾ ಡಿವಿಜರ್ಣ ಅಸಿಸ್ಟೆಂಟ ಕಮಿಷ್ಷನರವರ ನಂಬರು 1207, ತಾರೀಖು 6—4—07ನೆ ಯಾದಿಯನ್ನು ಓದಿ—

ಬರುವ ಮೀಟಂಗನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲ್ಪಟ್ಟಿತು.

25. ಹೊಳೇಹೊನ್ನೂರ ರಸ್ತೆ ಕಾಮಗಾರಿ ಪೂರೈಸಬೇಕಾದ ವಿಷಯದಲ್ಲಿ ಎಗ್ಸಿಕ್ಯೂಟಿವ ಇಂಜನಿಯರವರಿಂದ ನಂಬರ 275, ತಾರೀಖು 12-3-07ನೆ ಡಾಕೆಟ ನಿಸಿ ತಲ್ಪಿದ 3,217 ರೂಪಾಯಿನ ಅಂದಾಜಾ ಮತ್ತು ಪ್ಲಾನ್ ಮಂಜೂರ ಮಾಡಿರುವದಾಗಿ ಯೂ ಅದನ್ನ ಗವರ್ನಮೆಂಟನವರ ಮಂಜೂರಾತಿಯ ಬಗ್ಯೆ ಕಳುಹಿಸಬೇಕಾಗಿಯೂ ತೀರ್ಮಾನಿಸಲ್ಪಟ್ಟಿತು.

26. ಚಿತ್ರದುರ್ಗ-ಬೆಂಕೀಪುರ ರಸ್ತೆ 136ನೆ ಮೈಲ 4ನೆ ಫರ್ಲಾಂಗಿನಲ್ಲಿ ನಾದುರಸ್ತಾಗಿರುವ ಮೋಹರಿ ಕಾಮಗಾರಿ ಬಗ್ಯೆ ಬೇಕಾಗಿರುವ ಹಣ ರಿ-ಅಪ್ರೊಪ್ರಿಯೇಷರ್ನಿಂದ ಕೊಡಿಸಬೇಕಾಗಿ ಎಗ್ಸಿಕ್ಯೂಟಿವ ಇಂಜಿನಿಯರವರಿಂದ ತಲ್ಪಿದ ನಂಬರು 448, ತಾರೀಖು 28—4—07ನೆ ಡಾಕೆಟ ನಿಸಿ ಬಂದ ಅಂದಾಜಾ ಮಂಜೂರ ಮಾಡಿರುವದಾಗಿಯೂ ಗೌವರ್ನಮೆಂಟನವರ ಮಂಜೂರಾತಿಯ ಬಗ್ಯೆ ಕಳುಹಿಸಬೇಕಾಗಿಯೂ ತೀರ್ಮಾನಿಸಲ್ಪಟ್ಟಿತು.

27. ಕೆಲವು ಆಸ್ಪತ್ರೆಗಳ ನೆಲವನ್ನು ಕಡಪಾಕಲ್ಲುಗಳಿಂದ ಅಥವಾ ಇಟ್ಟಿಗೆಗಳಿಂದ ರಿಪೇರಿ ಆಗಲು ತರ್ಕವಾಗಿರುವ ಆಸ್ಪತ್ರೆಗಳ ಲೀಸ್ಟನಿಸಿ ತಲ್ಪಿದ ನಂಬರು 9952-61—ಮೆಡಿಕಲ 133—06, ತಾರೀಖು 27—4—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ಬೆಂಕಿಪುರ, ಹೊನ್ನಾಳಿ, ಚನ್ನಗಿರಿ ಆಸ್ಪತ್ರೆಗಳ ಭಾಗಗಳನ್ನ ರಿಪೇರಿ ಬಗ್ಯೆ ತಲ್ಪಿದ 173 ರೂಪಾಯಿಗಳ ಅಂದಾಜಾ ಮಂಜೂರ ಮಾಡಿರುವದಾಗಿಯೂ ಈ ಬಗ್ಯೆ ಡಿಸ್ಟ್ರಿಕ್ಟು ಫಂಡ ಹಿಸ್ಸೆಯ ಹಣಾಚಾಲ್ತಿ ಸಾಲ ಬಜ್ಜೆಟ್ಟನಿಂದ ಕೊಡಲ್ಪಡುವದಾಗಿಯೂ ತೀರ್ಥಹಳ್ಳಿ ಮತ್ತು ಕಳೂರಕಟ್ಟೆ ಆಸ್ಪತ್ರೆಗಳ ಅಂದಾಜುಗಳು ಈ ಮೊದಲೆ ಫೈಸಲಾಗಿರುವದಾಗಿಯೂ ಶಿಕಾರಿಪುರ ಆಸ್ಪತ್ರೆ ಬಾಬತು ಅಂದಾಜಾ ಬರುವ ಮೀಟಿಂಗನಲ್ಲಿ ಫೈಸಲ ಮಾಡುವದಾಗಿಯೂ ತೀರ್ಮಾನಿಸಲ್ಪಟ್ಟಿತು.

28. ಮಲೆನಾಡು ತಾಲ್ಲೂಕುಗಳ ರಸ್ತೆಗಳಿಗೋಸ್ಕರ ಹಣ ಮಂಜೂರ ಮಾಡಿರುವ ಸಂಗತಿಯನ್ನ ಈ ವಿಷಯ ಚರ್ಚಿಸಿದ ಮೆಂಬರುಗಳಿಗೆ ತಿಳಿಸಬೇಕಾಗಿ ತಲ್ಪಿದ ನಂಬರು 10021-4—ಲೋ. ಬೋ. 179-06-6, ತಾರೀಖು 1-5-07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

29. ನಗರ ಟ್ರಾವಲರ್ಸ ಬಂಗ್ಲೆ ಉಪಯೋಗಕ್ಕೋಸ್ಕರವಾಗಿ ಬೇಕಾದ ಪಾತ್ರೆಗಳನ್ನ ಕೊಂಡುಕೊಳ್ಳಬೇಕಾದ ವಿಷಯದಲ್ಲಿ ಸಾಗರ ಸಬ ಡಿವಿಜರ್ನ ಅಸಿಸ್ಟೆಂಟ ಕಮಿಷ್ನರವರಿಂದ 35 ರೂಪಾಯಿ ಅಂದಾಜಾನಿಸಿ ತಲ್ಪಿದ ನಂಬರು 1250, ತಾರೀಖು 24—4—07ನೆ ಯಾದಿಯನ್ನು ಓದಿ—

ಅಂದಾಜಾ ಮಂಜೂರ ಮಾಡಿರುತ್ತೆಂತ ತೀರ್ಮಾನಿಸಲ್ಪಟ್ಟಿತು.

30. ನ್ಯಾಮತಿ—ಜಕ್ಕನಹಳ್ಳಿ ರಸ್ತೆ ಸರ್ವೆ ಮಾಡುವ ವಿಷಯದಲ್ಲಿ ಎಗ್ಸಿಕ್ಯೂಟಿವ ಇಂಜನಿಯರವರಿಂದ 400 ರೂಪಾಯಿಗಳ ಅಂದಾಜಾನಿಸಿ ತಲ್ಪಿದ ನಂಬರು 412, ತಾರೀಖು 17—4—07ನೆ ಡಾಕೆಟ ಓದಿ—

ಸದ್ಯಕ್ಕೆ ಈ ಕೆಲಸ ಅವಶ್ಯವಿಲ್ಲವೆಂದು ತೀರ್ಮಾನಿಸಲ್ಪಟ್ಟಿತು.

31. ಕಾಮಗಾರಿಗಳಿಗೋಸ್ಕರ ಟ್ರಾನ್ಸಫರ ಮೂಲಕ ಜಾಸ್ತಿ ಹಣವನ್ನ ಬಂದು ಹೆಡ್ಡಿನಿಂದ ಇನ್ನೊಂದಕ್ಕೆ ಬದಲಾಯಿಸಿಕೊಂಡದ್ದು ಮಂಜೂರಾಗಬೇಕಾಗಿ ತಲ್ಪಿದ ಎಕ್ಸಿಕ್ಯೂಟಿವ ಇಂಜನಿಯರವರ ನಂಬರು 442, ತಾರೀಖು 27—4—07ನೆ ಡಾಕೆಟ ಓದಿ—

ರಿ-ಅಪ್ರೊಪ್ರಿಯೇಷರ್ನ ಮಂಜೂರ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

32. ಶಿವಮೊಗ್ಗ ತಾಲ್ಲೂಕು ಜೋಡಿ ಕೊಮ್ಮನಹಾಳು ಗ್ರಾಮದಲ್ಲಿರುವ ದೊಡ್ಡಗ್ಗನಕೆರೆ ಕಾಮಗಾರಿ ವಿಷಯವನ್ನ ಡಿಸ್ಟ್ರಿಕ್ಟು ಬೋರ್ಡಿನಲ್ಲಿಟ್ಟು ತೀರ್ಮಾನ ತಿಳಿಸಬೇಕಾಗಿ ಮುಜರಾಯಿ ಸೆಕ್ರಿಟೆರಿಯವರಿಂದ ಅಂದಾಜಾನಿಸಿ ತಲ್ಪಿದ ನಂಬರು 5081, ತಾರೀಖು 27—4—07ನೆ ಡಾಕೆಟ ಓದಿ—

ಸದರಿ ಕಾಮಗಾರಿ ಬಗ್ಯೆ ಕಂಟ್ರಿಬ್ಯೂಷನ ಕೊಡಲು ಡಿಸ್ಟ್ರಿಕ್ಟು ಬೋರ್ಡಿನವರಿಗೆ ಏನೂ ಕಾರಣವಿಲ್ಲವಾಗಿ ತೀರ್ಮಾನಿಸಲ್ಪಟ್ಟಿತು.

33. ಶಿರಾಳಕೊಪ್ಪ-ಹಿರೇಕೆರೂರ ರೋಡಿನಲ್ಲಿರುವ ವಡಗೆರೆ ಎಂಬ ಮುಜರೆ ಗ್ರಾಮದಲ್ಲಿ ಟೋಲ್‌ಗೇಟ ಸ್ಥಾಪಿಸಬೇಕಾಗಿ ತಲ್ಪಿದ ಹೊನ್ನಾಳಿ ಡಿವಿಜರ್ನ ಅಸಿಸ್ಟೆಂಟ ಕಮಿಷ್ನರವರ ನಂಬರು 339, ತಾರೀಖು 25—4—07ನೆ ಡಾಕೆಟ ಓದಿ—

ಟೋಲ್‌ಗೇಟ ಇಡಬಹುದಾಗಿಯೂ ಕಂಟ್ರಾಕ್ಟುದಾರನು ಕರಾರುವಾಕಾ ಲೆಖ್ಖ ಇಡಬೇಕಾಗಿಯೂ ಟೋಲ ವಸೂಲ ಮಾಡುವ ಹಕ್ಕನ್ನು ಬಹಿರಂಗವಾಗಿ ಹರಾಜ ಹಾಕಬಹುದಾಗಿಯೂ ತೀರ್ಮಾನಿಸಲ್ಪಟ್ಟಿತು.

34. ಕುಂಸಿ ಸಬ ತಾಲ್ಲೂಕಿನಲ್ಲಿ ಲೋಕಲ ಫಂಡ ಕೆಲಸ ನೋಡುವದಕ್ಕೆ ಅವಶ್ಯವಿದ್ದರೆ ಒಬ್ಬ ಗುಮಾಸ್ತೆಯನ್ನ ಮೊಕರ್ರೂರ ಮಾಡಿಕೊಳ್ಳಲು ಮಂಜೂರ ಮಾಡಿರುವದಾಗಿ ತಲ್ಪಿದ ನಂಬರು 10092-100—ಲೋ. ಬೋ. 351-06—3, ತಾರೀಖು 2—5—07ನೆ ಗವರ್ನಮೆಂಟ ಪ್ರೊಸೀಡಿಂಗ್ಸನ್ನ ಓದಿ—

ರಿಕಾರ್ಡು ಮಾಡಲಾಯಿತು.

35. 1907—08ನೆ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಡ್ಜೆಟ್ ಮಂಜೂರ್ ಮಾಡಿರುವದಾಗಿ ತಲ್ಪಿದ ನಂಬರು 10325-35-ಲೋ. ಬೋ. 350-06—4ನೆ ತಾರೀಖು 4—5—07ನೆ ಗವರ್ನಮೆಂಟ್ ಪ್ರೊಸೀಡಿಂಗ್ಸನ್ನ ಓದಿ—

1907—08ನೆ ಸಾಲಿನ ಅಂದಾಜಾ ಹುಟ್ಟುವಳಿ 92,146 ರೂಪಾಯಿಗಳಲ್ಲಿ 9,300 ರೂಪಾಯಿಗಳು ಸುಪಾರಿ ಹಾಳ ತದ ಮೇಲೆ ವಸೂಲಾಗುತ್ತಿದ್ದ ಹಣದ ಶೇಕಡಾ 76ರಂತೆ ಆಗುವ ಲೋಕಲಸೆಸ್ ಮೊಬಲಿಗಾಗಿ ಸೇರಿಕೊಂಡಿದೆ. 1907ನೆ ಜುಲೈ ಗುರ್ರೆ ಲಾಗಾಯಿತು ಸುಪಾರಿ ಹಾಸಲು ವಸೂಲಿಯು ಮನ್ನಾ ಆಗಿರುವದರಿಂದ ಈ ಬಾಬಿನ ಹುಟ್ಟುವಳಿ ಏನೂ ಇರುವದಿಲ್ಲಾ ಆದ್ದರಿಂದ ಡಿಸ್ಟ್ರಿಕ್ಟು ಫಂಡಿಗೆ ಆಗಿರುವ ಲುಕ್ಸಾನ್ ಭರ್ತಿ ಬಗ್ಯೆ ಸದರಿ 9,300 ರೂಪಾಯಿಗಳನ್ನ ಮಂಜೂರ್ ಮಾಡಬೇಕಾಗಿ ಗವರ್ನಮೆಂಟಿಗೆ ಬರಕೊಳ್ಳಬೇಕಾಗಿಯೂ ಮ್ಯಾಂಗನೀಸ್ ಕಲ್ಲುಗಳನ್ನು ಸಾಗಿಸತಕ್ಕ ಡಿಸ್ಟ್ರಿಕ್ಟು ಫಂಡ್ ರಸ್ತೆಗಳನ್ನ ಸರಿಯಾದ ಸ್ಥಿತಿಯಲ್ಲಿಡಬೇಕಾದ್ದರಿಂದ ಮೇಲ್ಕಂಡ ಹಣವನ್ನ ರಾಯಲ್ಟಿ ಹಣದಿಂದಲಾಗಲೀ ಅಥವಾ ಇನ್ಯಾವ ಹಣದಿಂದಲಾಗಲೀ ಭರ್ತಿಮಾಡಿದ ಶಿವಾಯಿ ಸದರಿ ರಸ್ತೆಗಳನ್ನ ಸರಿಯಾದ ಸ್ಥಿತಿಯಲ್ಲಿಡುವದು ಸಾಧ್ಯವಿಲ್ಲವೆಂತಲೂ ಮತ್ತು ಪ್ರಜೆಗಳ ಅನುಕೂಲತೆಗಾಗಿ ಇರುವ ಭಾವಿಗಳು ಮತ್ತು ಇತರ ಉಪಯೋಗವಾದ ಕೆಲಸಗಳನ್ನ ರಿಪೇರಿ ಸ್ಥಿತಿಯಲ್ಲಿಡುವುದು ಸಹ ಅಸಾಧ್ಯವೆಂತ ತೀರ್ಮಾನಿಸಲ್ಪಟ್ಟಿತು.

36. ಶಿವಮೊಗ್ಗಾ ತಾಲ್ಲೂಕು ಸಂತ ಕಡೂರಲ್ಲಿ ಒಂದು ಸೇದುವ ಭಾವಿ ಕಾಮಗಾರಿ ಬಗ್ಯೆ 482 ರೂಪಾಯಿಗಳ ಅಂದಾಜಾನಿಸಿ ತಲ್ಪಿದ ಶಿವಮೊಗ್ಗಾ ಡಿ॥ ಅ॥ ಕಮಿಷನರವರ ನಂಬರು 1303, ತಾರೀಖು 2—5—07ನೆ ಯಾದಿಯನ್ನು ಓದಿ—

ಅಂದಾಜಾ ಮಂಜೂರ್ ಮಾಡಿರುವದಾಗಿಯೂ ಈ ಲಾಗವಡನ್ನು ಬರುವ ಸಾಲ ಬಡ್ಜೆಟ್ಟನಲ್ಲಿ ಕೂಡಬೇಕಾಗಿಯೂ ತೀರ್ಮಾನಿಸಲ್ಪಟ್ಟಿತು.

37. ಶಿವಮೊಗ್ಗಾ ತಾಲ್ಲೂಕು ಪಿಳ್ಳಂಗೆರೆಯಲ್ಲಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಬಳಿ ಕೆರೆಬಾಕ ಮಾಡಿಸುವ ಬಗ್ಯೆ 50 ರೂಪಾಯಿಗಳ ಅಂದಾಜಾನಿಸಿ ತಲ್ಪಿದ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರವರ ನಂಬರು 1308, ತಾರೀಖು 2—5—07ನೆ ಯಾದಿಯನ್ನು ಓದಿ—

ಅಂದಾಜಾ ಮಂಜೂರ್ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

38. ಬೋರ್ಡಿನವರ ಮಂಜೂರಾತಿಗೆ ಬಳೆಪಟ್ಟ ಪ್ರೆಸಿಡೆಂಟರವರಿಂದ ಮಂಜೂರ್ ಮಾಡಲ್ಪಟ್ಟ ಕಾಮಗಾರಿಗಳ ಲೀಸ್ಟನ್ನು ಓದಿ—

ಮಂಜೂರ್ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

39. ಬೋರ್ಡಿನವರ ಮಂಜೂರಾತಿಗೆ ಬಳೆಪಟ್ಟ ಪ್ರೆಸಿಡೆಂಟರವರಿಂದ ಕೌಂಟರ್ ಸೈನ್ ಆಗಲ್ಪಟ್ಟ ಕಾಮಗಾರಿಗಳ ಅಂದಾಜಾಗಳ ಲೀಸ್ಟನ್ನು ಓದಿ—

ಮಂಜೂರ್ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

40. ಹೊಳೆಹೊನ್ನೂರ್ ಯೂನಿಯನ್ ಉಪಯೋಗಾರ್ಥವಾಗಿ 60 ರೂಪಾಯಿ ಕಿಮ್ಮತ್ತಿನ 2 ಕಚರಾ ಗಾಡಿಗಳನ್ನ ಕೊಂಡುಕೊಳ್ಳುವ ಬಗ್ಯೆ ಅಂದಾಜಾನಿಸಿ ತಲ್ಪಿದ ಶಿವಮೊಗ್ಗಾ ಡಿ॥ ಅಸಿಸ್ಟೆಂಟ್ ಕಮಿಷನರವರ ನಂಬರು 1035, ತಾರೀಖು 2—5—07ನೆ ಯಾದಿಯನ್ನು ಓದಿ—

ಅಂದಾಜಾ ಮಂಜೂರ್ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

41. ಶಿವಮೊಗ್ಗಾ ತಾಲ್ಲೂಕು ಮುಳ್ಳಕೆರೆ ಗ್ರಾಮದಲ್ಲಿ ತೋಡಿಸಿದ ಭಾವಿಯು ಕಾಮಗಾರಿಯು ಪೂರೈಸುವ ಸ್ಥಿತಿಯಲ್ಲಿಲ್ಲವಾದ್ದರಿಂದ ಈ ಬಗ್ಯೆ ಮಂಜೂರಾದ ಹಣದಲ್ಲಿ ಉಳಿದಿರುವ ಹಣವನ್ನು ಗಾಡಿಕೊಪ್ಪ ಗ್ರಾಮದಲ್ಲಿರುವ ಭಾವಿಯನ್ನ ಆಳಪಡಿಸಲು ಉಪಯೋಗಿಸಿಕೊಳ್ಳಬಹುದೆಂಬ ವಿಷಯದಲ್ಲಿ ತಲ್ಪಿದ ಶಿವಮೊಗ್ಗಾ ಡಿ॥ ಅಸಿಸ್ಟೆಂಟ್ ಕಮಿಷನರವರ ನಂಬರು 1302, ತಾರೀಖು 3—5—07ನೆ ಯಾದಿಯನ್ನ ಓದಿ—

ಆ ರೀತಿ ಮಾಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

42. ಜಂಕಿಪುರ-ಗಂಗೂರ್ ರಸ್ತೆಯ ಕಾಮಗಾರಿ ಮಾಡಿಸಲಾಗುವದಿಲ್ಲವೆಂಬ ಬಗ್ಯೆ ಆಗಿರುವ ಶಿವಮೊಗ್ಗಾ ತಾಲ್ಲೂಕು ಬೋರ್ಡ್ ಮೀಟಿಂಗ್ ತೀರ್ಮಾನದ ನಿಸಿ ತಲ್ಪಿದ ಶಿವಮೊಗ್ಗಾ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರವರ ನಂಬರು 1307, ತಾರೀಖು 2—5—07ನೆ ಯಾದಿಯನ್ನು ಓದಿ—

ಈ ಗ್ರಾಮದ ರೈತರ ಉಪಯೋಗಕ್ಕೆ ಆ ರಸ್ತೆ ಅನವಶ್ಯವಾಗಿರುತ್ತೆಂತಲೂ ಅವಶ್ಯವಿದ್ದರೆ ಫಾರೆಸ್ಟು ಇಲಾಖೆಯವರು ಆ ಕಾಮಗಾರಿಯನ್ನ ಮಾಡಿಸಬಹುದೆಂಬದಾಗಿಯೂ ತೀರ್ಮಾನಿಸಲ್ಪಟ್ಟಿತು.

43. ಹೊಳೆ ಹೊನ್ನೂರಲ್ಲಿ ನದಿಯಿಂದ ಊರೊಳಗೆ ಹೋಗುವುದಕ್ಕೆ ಇರುವ ರಸ್ತೆ ರಿಪೇರಿ ಬಗ್ಯೆ 45 ರೂಪಾಯಿಗಳ ಅಂದಾಜಾನಿಸಿ ತಲ್ಪಿದ ಶಿವಮೊಗ್ಗಾ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 1304, ತಾರೀಖು 2—5—07ನೆ ಯಾದಿಯನ್ನ ಓದಿ—

ಅಂದಾಜಾ ಮಂಜೂರ್ ಮಾಡಿರುವದಾಗಿ ತೀರ್ಮಾನಿಸಲ್ಪಟ್ಟಿತು.

ಬರುವ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗ್ 1907ನೆ ಆಗಸ್ಟು ತಾರೀಖು 5ನೆ ಸೋಮವಾರ ನಡೆಯತಕ್ಕದ್ದೆಂದು ನಿಶ್ಚಯಿಸಲ್ಪಟ್ಟಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಬೆಂಗಳೂರು ಸಬಾರ್ಡಿನೇಟ ಜಡ್ಜರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಮಾಮೂಲ್ ಪೇಟೇಲಿರುವ ಗುರುಬಸಪ್ಪನವರ ವಿಷಯದಲ್ಲಿ

ಸರ್ 1906—07ನೆ ಇಸವಿ ದಿವಾಳಿ ಕೇಸ ಮಿಸ. ನಂಬರು 220.

ಹುಕ್ಮುಂ

ಮೇಲ್ಕಂಡ ಗುರುಬಸಪ್ಪನವರು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಬೆಂಗಳೂರು ಸಬಾರ್ಡಿನೇಟ ಜಡ್ಜ ಜೆ. ಹೆಚ್. ಭಾಭಾ, ಎಸ್ಕೊಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜೀದಾರರಾದ ಗುರುಬಸಪ್ಪನವರ ಪರವಾಗಿ ಮತ್ತು ಸದರೀಯವರ ಲೇಣೇದಾರರಾದ 1ನೆ ಶರಬಶೆಟ್ಟರನ್ನು ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—1. ವೀರಭದ್ರಶೆಟ್ಟಿ, 2. ದೊಡ್ಡವೀರಶೆಟ್ಟಿ, 3. ಹುಚ್ಚಣ್ಣ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುರುಬಸಪ್ಪನವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ ಮಾಡಲಾಗಿರುತ್ತೆ ಎಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸರ್ 1907ನೆ ಇಸವಿ ಜುಲೈ 27ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು	ಬಡ್ಡಿ ಪ್ರಮಾಣ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ.			
1	ಬೆಂಗಳೂರು ಮಾಮೂಲ್‌ಪೇಟೇಲಿರುವ 1. ಶರಬಶೆಟ್ಟಿ, 2. ವೀರಭದ್ರಶೆಟ್ಟಿ, 3. ದೊಡ್ಡವೀರಶೆಟ್ಟಿ ಸಹ.	160	...	ಡಿಕ್ರೀ ಬಾಬತು	ಈ ಕೋರ್ಟಿನ ಜಾರಿ 69—06-07
2	ಡಿಟೋ ...	6,700	...	ಡಿಟೋ	ಡಿಟೋ 536-05-06
3	ಗುಡೇಮಾರ್ನಹಳ್ಳಿ ಹುಚ್ಚಣ್ಣ ...	525		ಸರ್ ಡಿಮ್ಯಾಂಡ ಪ್ರಾಂಸರಿ ಬಾಬತು.	
	ಜುಮ್ಲಾ ...	7,385			

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ರಣವೀರಶೆಟ್ಟಿ ಪ್ಯಾಟೆಯಲ್ಲಿರುವ ಮಂಜರಾಬಾದ ಪಾಳ್ಯೇಗಾರ

ಚಿಕ್ಕ ಕೃಷ್ಣಪ್ಪನಾಯಕರ ವಿಷಯದಲ್ಲಿ—

ಸರ್ 1906—07ನೆ ಇಸವಿ ದಿವಾಳಿ ಮಿ॥ ಕೇಸ ನಂಬರು 276

ಹುಕ್ಮುಂ

ಮೇಲ್ಕಂಡ ಚಿಕ್ಕ ಕೃಷ್ಣಪ್ಪನಾಯಕನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು—ಬೆಂಗಳೂರು ಸಬಾರ್ಡಿನೇಟ ಜಡ್ಜ ಜೆ. ಹೆಚ್. ಭಾಭಾ, ಎಸ್ಕೊಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜೀದಾರರಾದ ಚಿಕ್ಕ ಕೃಷ್ಣಪ್ಪನಾಯಕರ ಪರವಾಗಿ ಅಡ್ವೊಕೇಟ ಮ॥ ಹೆಚ್. ಕೃಷ್ಣಪ್ಪನವರು ಹಾಜರು ಮತ್ತು ಸದರೀ ಯವರ ಲೇಣೇದಾರರಾದ ಒಂದನೆ ಪಾಪಮ್ಮನ ಪರ ಮೆ॥ ಮೂರ್ತಿರಾಯರು ಹಾಜರು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತು ನೋಟೀಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವುದಕ್ಕೆ ತಪ್ಪಿಹೋದರು, ಯಾರಂದರೆ, ತಿರುಮಳೈಯ್ಯ, ಪಾಪಣ್ಣ, ನರಸೈಯ್ಯ, ಅನಂತಯ್ಯ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಚಿಕ್ಕಕೃಷ್ಣಪ್ಪ ನಾಯಿಕರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇವಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಜಾಲಸ್ ಮಾಡಲಾಗಿರುತ್ತೆ ಎಂದು, ಇದರಿಂದ ಹುಕ್ಕುಂ ಮಾಡಲ್ಪಟ್ಟು ಇರುತ್ತೆ.

ಸ್ 1907ನೆ ಇಸವಿ ಜೂನ್ 12ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತ್‌ನಿಂದ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ಸಂಖ್ಯೆ	ಲೇಣೇದಾರರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು	ಬಡ್ಡಿ ಮೊಬಲಗು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಬೆಂಗಳೂರು ಕುಂಚಿಗರ ಪ್ಯಾಟೆಯಲ್ಲಿರುವ ದೇವಾಂಗದ ಪಾಪಮ್ಮ.	40 0 0	(....)	ಬಡ್ಡಿ ಪತ್ರದ ಬಾಬತು.	
2	ಡಿಟೋ	91 5 0	...	ಈ ಕೋರ್ಟು ಸ್ಮಾಲ್‌ಕಾಜ್ 270–04–05 ಡಿಕ್ರಿ ಬಾಬತು.	
3	ತ್ಯಾಮಗೊಂಡ್ಲದಲ್ಲಿರುವ ಬಿಳೀ ಮಗ್ಗ ಬ್ಯಾಟಿ ವೆಂಕಟ್ರಾಯಪ್ಪನ ಮಗ ತಿರುಮಳಯ್ಯ.	150 0 0	...	ಅರ್ಜಿದಾರ ಮತ್ತು ಈತನ ಮಗ ಸಹ ಬರಕೊಟ್ಟಿರುವ ಪ್ರಾಂಸರಿ ಬಾಬತು.	
4	ಡಿಟೋ ..	500 0 0	...	ಬಡ್ಡಿ ಪತ್ರದ ಬಾಬತು.	
5	ಮೈಸೂರು ದೊಡ್ಡ ಪೇಟೆ ಕುಂಬಾರ ಗೇರೀಲಿರುವ ಅಕ್ಕಿ ಅಂಗಡಿ ಪಾಪಣ್ಣ ಮತ್ತು ಇವರ ಅಣ್ಣ ನರಸೈಯ್ಯ.	70 0 0	...	ಅರ್ಜಿದಾರ ಮತ್ತು ಇವರ ಕುಟುಂಬ ಸಹ ಬರಕೊಟ್ಟಿರುವ ಪ್ರಾಂಸರಿ ಬಾಬತು.	ನರಸೈಯ್ಯನ ಹೆಸರಿನ ಪ್ರಾಂಸರಿ.
6	ಬೆಂಗಳೂರು ದೊಡ್ಡಪೇಟೆ 1816ನೆ ನಂಬರ ಅಂಗಡೀಲಿರುವ ಕುಸುಮೊ ಅನಂತಯ್ಯ.	20 0 0	...	ಲೆಖ್ಖದ ಬಾಬತು.	
	ಜಾಮ್ಲ ...	871 5 0			

ದಿವಾಳಿಯಾದ ಡಿಕ್ರೀ ದೇಣೇದಾರ ಆನೆಕಲ್ ತಾಲ್ಲೂಕು ಸರ್ಜಾಪುರದ ಹೋಬಳಿ ದೊಮ್ಮಸಂದ್ರದಲ್ಲಿರುವ ಗಾಣಿಗರ ಗುರುಮೂರ್ತಪ್ಪನ ವಿಷಯದಲ್ಲಿ.

ಸ್ 1906—07ನೆ ಇಸವಿ ದಿವಾಳಿ ಕೇಸ್ ಮಿಸ್. ನಂಬರು 334.

ಹುಕ್ಕುಂ.

ಮೇಲ್ಕಂಡ ಗುರುಮೂರ್ತಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು-ಬೆಂಗಳೂರು ಸಬಾರ್ಡಿನೇಟ್ ಜಡ್ಜ್ ಜೆ. ಹೆಚ್. ಭಾಭಾ, ಎಸ್ಕ್ವಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜಿದಾರರಾದ ಗುರುಮೂರ್ತಪ್ಪನನ್ನು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ 1. ಚಿನ್ನಪ್ಪ, 2. ರಾಮರಡ್ಡಿ, 3. ಈರಪ್ಪ, 4. ದೊಡ್ಡಗೌಡ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುರುಮೂರ್ತಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿ ಯಾಗಲೀ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಜಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸನ್ 1907ನೆ ಇಸವಿ ಜುಲೈ 19ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನನ್ನ ದಸ್ತಖತನಿಸಿ ಕೊಡಲ್ಪಟ್ಟಿತ

ಸಾಲದ ಪಟ್ಟಿ.

ನಂಬರ.	ಲೇಣೇದಾರ್ರ ಅಥವಾ ಹಕ್ಕು ದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಕಿಂತು ಗಿಡ್ಡದಿ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.			
1	ಬೆಂಗಳೂರು ಚಾಮರಾಜಪೇಟೇಲಿ ತರಗಿನ ಮಂಡಿಯಲ್ಲಿರುವ ಚಿನ್ನಪ್ಪ.	90 2 6	..	ಡಿಕ್ರಿ ಬಾಬತು	ಈ ಕೋಟು ಸ್ಮಾಲಕಾಸ 6—04—05
2	ಬೆಂಗಳೂರು ತಾಲ್ಲೂಕು ಆಗರದಲ್ಲಿರುವ ರಾಮರಡ್ಡಿ.	200 0 0	..	ಪತ್ರದ ಬಾಬತು	
3	ಶಿಡ್ಲಘಟ್ಟ ತಾಲ್ಲೂಕು ದೇವರ ಮಳ್ಳೂರಿನಲ್ಲಿರುವ ಕೊತಲು ಈರಪ್ಪ.	100 0 0	..	ಡಿಟೋ	
4	ಡಿಟೋ ಸ್ಥಳದಲ್ಲಿರುವ ಕೊತಲು ದೊಡ್ಡಗಾಡ.	50 0 0	..	ಡಿಟೋ	
	ಜುಮ್ಲಾ	440 2 6			

ಜೆ. ಹೆಚ್. ಭಾಭಾ,
ಸಬಾರ್ಡಿನೇಟ್ ಜಡ್ಜ್.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 0	1 12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗ	7 0	3 8
ಚಷ ಮಾಹೇ ಯಾ ಕ್ವಾರಟರಿಗೆ		

ದಾವಾ ಷಾಯಿ ಪ್ರಕಾರ ದರಗಳು

	ರೂ. ಆ.
ಚಾಲತಿ ವರುಷದ ಗೆಜೆಟಿ ಕಾಪಿ 1ಕ್ಕೆ ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರ್ರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಾರ್ಕ್ಕಿಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಬರೆದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ 21ನೆ ಮಾರ್ಕ್ಕಿಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು:—

	ರೂ. ಆ.
ಮೊದಲನೇ ದಫಾ ಪಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1 4

ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ:—

	ರೂ. ಆ.
ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕೆ	..	10	0
ಎರಡನೇ ಸಲ ಮ ಆತರುವಾಯು ಪ್ರತಿ ಸಲಕ್ಕೂ	,,	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ ..	0	8
ಎರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ಮ ಆತರುವಾಯು ಪ್ರತಿ ಸಲಕ್ಕೆ	..	..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ. ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಾಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಧ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯು ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಪಿಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ್ ಛಾಯಿಸ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 15, ಸರ್ 1907.

II ನೆ ಬಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 10ನೆ ಆಗಸ್ಟು 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಇದರಡೀ ಕಂಡ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ಮತ್ತು ತುಮಕೂರು ರೇಂಜುಗಳ ಕ್ಯಾಸರೀನಾ ಪ್ಲಾಂಟೇಷನ್‌ಗಳಲ್ಲಿನ 1907—08ನೆ ಸಾಲಿನ ಥಿನಿಂಗ್ ತಾಕುಗಳಲ್ಲಿನ ಮಾರ್ಕು ಮಾಡಲು ಪಟ್ಟ ಕ್ಯಾಸರೀನಾ ಮರಗಳನ್ನು ಮತ್ತು ಪ್ಲಾಂಟೇಷನ್‌ಗಳ ಎಲ್ಲಾ ಭಾಗಗಳಲ್ಲಿಯ ಒಣ ಮರಗಳನ್ನೂ ಸವುದೆಗಾಗಿ ಕತರಾಯಿಸಿಕೊಳ್ಳುವ ಹಕ್ಕುದಾರಿಯು 1907ನೆ ಇಸವಿ ಆಗಸ್ಟ್ ತಾರೀಖು 30ರಲ್ಲು ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರಿಂದ ತುಮಕೂರು ಮೊಕ್ಕಾಂನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ ಮಧ್ಯಾಹ್ನ 2 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡುವದು. ಸವಾಲು ಮಾಡಲು ಇಷ್ಟವುಳ್ಳವರೆಲ್ಲರೂ 100 ರೂಪಾಯಿ ಠೇವಣಿ ಇಟ್ಟು ಸವಾಲು ಮಾಡಬಹುದು. ಹರಾಜು ಖೈದಾದ ಒಡನೆ ಛಡ ಸವಾಲುದಾರ್ರವರದು ಜಾತಾ ಉಳಿದವರ ಡಿಪಾಜಟ್ಟು ಹಣ ವಾಪಸು ಮಾಡಲ್ಪಡುತ್ತೆ. ಹರಾಜು ಮಂಜೂರಾತಿಯು ಹಜರತ್ ಕನ್ಸರ್ವೇಟರ್ ಸಾಹೇಬರವರನ್ನು ಹೊಂದಿರುತ್ತೆ.

ರೇಂಜು ಹೆಸರು.	ಪ್ಲಾಂಟೇಷನ್ ಹೆಸರು.	ಕ್ಯಾಸರೀನಾ ಮರದ ಮೊತ್ತ.
ತುಮಕೂರು ...	1 ಪಂಡಿತನಹಳ್ಳಿ	ಸುಮಾರು 200 ಟನ್.
	2 ಗೊಲ್ಲಹಳ್ಳಿ	
	3 ಮಲಸಂದ್ರ	
	4 ಬಳ್ಳಾಪುರ ...	
	5 ಲಿಂಗನಹಳ್ಳಿ	
	6 ಹಿರೆಹಳ್ಳಿ	
	7 ದಾಸರಹಳ್ಳಿ	
	8 ಫಾರೆಸ್ಟು ಗೊಲ್ಲಹಳ್ಳಿ ...	
ಗುಬ್ಬಿ ...	1 ಅಡಗೂರು	ಸುಮಾರು 500 ಟನ್.
	2 ಚನ್ನಶೆಟ್ಟಿಹಳ್ಳಿ ...	
	3 ಹೊನ್ನವಳ್ಳಿ ...	
	4 ನೆಟ್ಟಿಗುಂಟೆ	
	5 ಅಮ್ಮನಗಟ್ಟ	
	6 ಗೋಪಾಲಪುರ	
	7 ಉದ್ದಿಹೊಸಕೆರೆ	
	8 ಅಂಕಾಪುರ	
	9 ಮಾರಶೆಟ್ಟಿಹಳ್ಳಿ	
	10 ಹರೇನಹಳ್ಳಿ	

ಷರತ್ತುಗಳು.

ಜಿಡ ದರಖಾಸ್ತುದಾರನು ತನ್ನ ಸವಾಲ್ ಮಂಜೂರಾದ ಒಂದು ವಾರದೊಳಗಾಗಿ ಈ ಕೆಳಗೆ ಕಾಣಿಸುವ ಷರತ್ತುಗಳ ಪ್ರಕಾರ ನಡೆಯಲು ಬದ್ಧನಾಗಿ ಛಾಪಾಕಾಗದ ಮುಚ್ಚಳಿಕೆ ಬರೆಕೊಡಬೇಕು. ಷರತ್ತು ಮೇರೆ ನಡೆಯಲು ಸೆಕ್ಯೂರಿಟಿಗಾಗಿ 500 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟುಕೊಳ್ಳಲ್ಪಡುತ್ತೆ.

(a) ಕಡಿಯತಕ್ಕ ಗಿಡಗಳಿಗೆ ಮುಂಚಿತವಾಗಿ ರೇಂಜ್ ಆಫೀಸರು ಜೂನಾಯಿಸಲ್ಪಟ್ಟ ಕಂಪಾರ್ಟುಮೆಂಟುಗಳಲ್ಲಿ ಮಾತ್ರ ಗುರ್ತುಹಾಕಿ ಕೊಡುತ್ತಾರೆ. ಕಡಿಯುವದರಲ್ಲಿ ಒಂದು ಕಂಪಾರ್ಟುಮೆಂಟ್ ಪೂರೈಸಿದ ನಂತರ ಇನ್ನೊಂದು ಕಂಪಾರ್ಟುಮೆಂಟ್ ಈ ಮೇರೆ ಕ್ರಮವಾಗಿ ಕತ್ತರಣಿ ಕೆಲಸ ಮಾಡಬೇಕು.

(b) ಕಡಿಯುವದಕ್ಕೆ ಕೊಡ್ಲಿಗಳನ್ನು ಉಪಯೋಗಿಸಕೂಡದು. ಆದರೆ ಸಾಧ್ಯವಾದ ಮಟ್ಟಿಗೂ ಮರಗಳನ್ನು ಭೂಮಿ ಮಟ್ಟಕ್ಕೆ ಗರಗಸದಿಂದ ಕೊಯಿದುಕೊಳ್ಳಬೇಕು. ಬೇಕಾದಷ್ಟು ಉದ್ದಕ್ಕೆ ಅಂದರೆ, ಮೂರು ಅಡಿ ಉದ್ದಕ್ಕೆ ಮೀರದೆ ತುಕ್ಕಡಿಗಳನ್ನು ಗರಗಸದಿಂದ ಕೊಯ್ಯಬೇಕು.

(c) ಕಂಪಾರ್ಟುಮೆಂಟ್ ಲೈನಿನಲ್ಲಿ ಆಗಲಿ ಅಥವಾ ಡಿ|| ಫಾರೆಸ್ಟ್ ಆಫೀಸರು ಒಪ್ಪುವ ಜಾಗದಲ್ಲಿ ಹುಷಾರಿಯಿಂದ ಸವುದೆಯನ್ನು ಬೇರೆಬೇರೆ ವಿಂಗಡಿಸಿ ಸ್ಟಾಕ್ ಕಟ್ಟತಕ್ಕದ್ದು. ಸ್ಟಾಕುಗಳು ಚೌಕ ನೀಳವಾಗಿ ಕಟ್ಟಬೇಕಲ್ಲದೆ ಅಳತೇಲಿ 68 ಸಲೆ ಅಡಿ ಬರುವಂತೆ ಕಟ್ಟಿರಬೇಕು.

(d) ಥಪ್ಪದಲ್ಲಿ ಒಂದೂವರೆ ಇಂಚಿಗಿಂತ ಜಾಸ್ತಿ ಇರುವ ಸವುದೆ ತುಂಡುಗಳೆಲ್ಲವನ್ನು ಮಂಜೂರಾದ ದರದಂತೆ ಮೊಬಲಗು ಕೊಟ್ಟು ಸಾಗಿಸಿಕೊಳ್ಳಲು ಕಂಟ್ರ್ಯಾಕ್ಟರನು ಬದ್ಧನಾಗಿರತಕ್ಕದ್ದು. ಅದರಂತೆ ಕಮ್ಮಿ ಅಳತೆವುಳ್ಳ ಸವುದೆಯು ಬೇಕಾದರೆ ತಾನೆ ಗಾಡಿ ಬೋಜಾ 1ಕ್ಕೆ 8 ಆಣೆ ಮೇರೆ ಕೊಟ್ಟು ತೆಗದುಕೊಳ್ಳತಕ್ಕದ್ದು. ಹಾಗೆ ತೆಗದುಕೊಳ್ಳದಿದ್ದರೆ ಸ್ಥಳದಲ್ಲಿ ಬಿಕರಿಗೆ ಇಳಸಲ್ಪಡುತ್ತೆ.

(e) ಮಂಜೂರಾದ ದರದ ಮೇಲೆ ಸಾಗಿಸಿಕೊಳ್ಳುವ ಎಲ್ಲಾ ಸವುದೆಗೂ ಮೊಬಲಗನ್ನು ಪಾವತಿ ಮಾಡಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್ ಹೊರಗೆ ಸಾಗಿಸಿಕೊಳ್ಳುವದಕ್ಕೆ ಮೊದಲೇ ರೇಂಜ್ ಆಫೀಸರಿಂದ ಪಾಸ್ ಪಡೆಯಬೇಕು.

(f) ಸೂರ್ಯೋದಯಕ್ಕೆ ಮುಂಚೆ ಸೂರ್ಯಾಸ್ತಮಯ ಆದನಂತರ ಸವುದೆ ಸಾಗಿಸಿಕೊಳ್ಳಕೂಡದು.

(g) ಕಂಟ್ರ್ಯಾಕ್ಟರನು ಈ ಕಂಟ್ರ್ಯಾಕ್ಟು ಮೇರೆ ಕೆಲಸ ಮಾಡುತ್ತಿರುವಾಗ ಅಜುಬಾಜು ಇರುವ ಜನರ ಸ್ವಂತ ಪ್ಲಾಂಟೇಷನ್ ಸವುದೆಯನ್ನು ಖರೀದಿಗೆ ತೆಗದುಕೊಳ್ಳಕೂಡದು ಅಲ್ಲದೆ ಸರಕಾರದ ಪ್ಲಾಂಟೇಷನಿಗೆ ಲಗತ್ತು ಇರುವ ತನ್ನ ಸ್ವಂತ ಪ್ಲಾಂಟೇಷನ್ ಇದ್ದರೆ ಅದರಲ್ಲಿಯೂ ಕೆಲಸ ನಡಸಕೂಡದು.

(h) 1908ನೆ ಜೂನ್ ಮಾಹೆ ಆಖೈರು ವಳಗಾಗಿ ಕತ್ತರಣಿ ಮತ್ತು ಗಾಡಿಗಳ ಮೇಲೆ ಸಾಗಿಸಿಕೊಳ್ಳತಕ್ಕದ್ದೆಲ್ಲ ಪೂರೈಸಬೇಕು.

(i) ಗುರ್ತುಮಾಡಿಕೊಟ್ಟ ಮರ ಕಡಿಯುವಾಗ ಸಮೀಪದಲ್ಲಿರುವ ಸಂಡಲ್ ಅಥವಾ ಇತರ ಮರಕ್ಕೆ ಏನೂ ಇಜಾ ಆಗದಂತೆ ಹುಷಾರಾಗಿ ಇರಬೇಕು. ಹಾಗೆ ಏನಾದರೂ ಅಜುಬಾಜು ಇರುವ ಬೆಳೆಯತಕ್ಕ ಮರಗಳಿಗೆ ಕಂಟ್ರ್ಯಾಕ್ಟರನಿಂದಲೆ ಆಗಲಿ ಅಥವಾ ಆತನ ಕಡೆ ಜನರಿಂದಲೇ ಆಗಲಿ ಮನಃಪೂರ್ವಕವಾಗಿ ಅಥವಾ ಉದಾಸೀನದಿಂದಾಗಲಿ ಇಜಾ ಸಂಭವಿಸಿದರೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಗೊತ್ತು ಮಾಡುವಷ್ಟು ನಷ್ಟದ ಮೊಬಲಗನ್ನು ಸರಕಾರಕ್ಕೆ ಕಂಟ್ರ್ಯಾಕ್ಟರನು ಕೊಡಲು ಬದ್ಧನಾಗಿರುತ್ತಾನೆ.

(j) ಯಾವ ಸಂದರ್ಭದಲ್ಲಿಯೂ ಪ್ಲಾಂಟೇಷನ್ನಲ್ಲಿ ಬೆಂಕಿ ಹಚ್ಚಕೂಡದು.

(k) ಕಂಟ್ರ್ಯಾಕ್ಟರನು ರೈಲಮೇಲೆ ಸಾಗಿಸುವ ಸವುದೆ ಮೊತ್ತ ಅಂದರೆ, ವಾರ್ಗಿನ್ ಸಂಖ್ಯೆ—ಎಲ್ಲಿಗೆ ಸಾಗಿಸತಕ್ಕದ್ದು—ತೂಕ ಈ ತಪಶೀಲಗಳನ್ನು ಆಗಾಗ್ಯೆ ರೇಂಜ್ ಆಫೀಸರಿಗೆ ರಿಪೋರ್ಟು ಮಾಡುತ್ತಾ ಬರಬೇಕು.

(l) ಕಂಟ್ರ್ಯಾಕ್ಟರನೆ ಆಗಲಿ ಅವನ ಕಡೆ ಜನರೆ ಆಗಲಿ ಮೇಲೆ ಕಂಡ ಷರತ್ತುಗಳಲ್ಲಿ ಯಾವ ಷರತ್ತಿಗಾದರೂ ತಪ್ಪಿ ನಡದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ 190(ನೆ ಇಸವಿ ಫಾರೆಸ್ಟ್ ರೂಲ್ಸು 84ನೆ ಸೆಕ್ಷನ್ ಮೇರೆ ಕಂಟ್ರ್ಯಾಕ್ಟನ್ನೇ ರದ್ದು ಮಾಡಿ ಅದುವರಿಗೆ ಸೀನಿರೇಜ್ ಪಾವತಿ ಮಾಡಿ ಸಾಗಿಸಿಕೊಳ್ಳದೆ ಬಿಟ್ಟಿರುವ ಎಲ್ಲಾ ಸವುದೆಯು ಸರಕಾರಕ್ಕೆ ಸೇರಿಹೋಗುತ್ತೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ತುಮಕೂರು ಡಿಸ್ಟ್ರಿಕ್ಟ್.

ಪಸಾರೆ, ಇಸ್ತಿಹಾರ್.

ತಾರೀಖು 30ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಜಂಗಲಿಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮಾನಾಯಿ ಮತ್ತು ಬೇಲಿಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1907ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1908ನೆ ಸೆಪ್ಟಂಬರು 30ನೆ ತಾರೀಖಿನ ವರಿವಿಗೆ ಜಮಾಯಿಸುವ ಹಕ್ಕನ್ನು ಪಡೆಯಲು 1907ನೆ ಇಸವಿ ಆಗಸ್ಟು ತಾರೀಖು 31ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು.

“ ಜಿನಸುಗಳ ತಪಸೀಲು ” ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೇನೇ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1. ಮೈಸೂರು
2. ಶ್ರೀರಂಗಪಟ್ಟಣ
3. ನಾಗಮಂಗಲ
4. ಕೃಷ್ಣರಾಜಪೇಟೆ
5. ಮಂಡ್ಯ
6. ಮಳವಳ್ಳಿ
7. ಟಿ. ನರಸೀಪುರ
8. ನಂಜನಗೂಡು
9. ಚಾಮರಾಜನಗರ
10. ಗುಂಡ್ಲು ಪೇಟೆ
11. ಹೆಗ್ಗಡದೇವನಕೋಟೆ
12. ಹುಣಸೂರು
13. ಯಡತೊರೆ

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟುವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲಬೀಜ, 12. ಚಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮಡ್ಡಿ, 16. ಉದರಂದ ಸಾರಗದಕೊಂಬು 17. ಗುಗ್ಗಳ, 18. ಬೇಲದಹಣ್ಣು, 19. ಆರಗು, (ನಾರಾಯಣದುರ್ಗ ಸ್ಟೇಟ ಫಾರೆಸ್ಟ ವಿನಹಾ) 20. ಶೀತಾಫಲದಹಣ್ಣು, 21. ಬೆಂಡೆನಾರು, 22. ಬೇವಿನಬೀಜ, 23. ಇಪ್ಪೇಬೀಜ. 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ ಫಾರೆಸ್ಟ ಸುತ್ತು ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ:—

ನಾಗಮಂಗಲದ ತಾಲ್ಲೂಕು ಬಾಬತು:—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು:—1. ಗುಜ್ಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಸಾಪುರ, 7. ಮಾದನಹಳ್ಳಿ, 8. ಕರ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು:—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚೆಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂಕಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಡನೇ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಯೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್‌ಷೂರ್ ಮಾಡಿ ಲಿಫಾಫೆ ಮೇಲೆ “ ಪಸಾರೆ ದರಖಾಸ್ತು ” ಎಂದು ಬರದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೊಡಿರುತ್ತೆ. ಜಾಸ್ತಿ ದರ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1907ನೆ ಇಸವಿ ಸೆಪ್ಟಂಬರ ತಾರೀಖು 2ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ತೆರೆಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಸ್ತುದಾರನಿಗೆ ಕೂಡ್ಲೆ ಕಳುಹಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣಿ ಮಾಡಬೇಕು. ಮತ್ತು ಈ ಮೂರು ದಿನಗಳಲ್ಲಿ ಈ ಇಸ್ತಿಹಾರನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

9. ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 3 ದಿವಸಗಳೊಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆಯೊಳಗಾಗಿ ಪಾವತಿ ಮಾಡಲು ತಪ್ಪಿದರೆ ಅವನ ಡಿಪಾಜಿಟ್ಟು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಈ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರರು ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನಕಡೇ ಆಳುಗಳ ಅಜಾಗ್ರತೆಯಿಂದ ಜಂಗ್ಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಇಸ್ತಿಹಾರ್ನಾಮೆ, ತಾರೀಖು 31ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—ಮೈಸೂರು ಡಿಪೋ ಯಾರ್ಡಿನಲ್ಲಿ ಚೌಬೀನಾವನ್ನು 1907ನೆ ಸೆಪ್ಟಂಬರ ತಾರೀಖು 31ರಲ್ಲು ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಾಟಾಗಳ ವಿವರ.	ಸಲೆಅಡಿ.		ಶರಾ.
	ನಂಬರ.	ಅಡಿ.	
ಸಾಗ್ವಾನಿ ಸರಾ … … …	1,725	1,725	[illegible]
ಮತ್ತಿ ನಾಟಾ … …	211	5,534	
ಡಿಟ್ಟೋ ಜಂತಿ … …	30	372	

ಹರಾಜು ಷರತ್ತುಗಳು.

1. ಥಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಮೈಸೂರು ಡಿಸ್ಟ್ರಿಕ್ಟ.

ತಾರೀಖು 8ನೆ ಆಗೆಸ್ಟ 1907ನೆ ಇಸವಿ.

ಸಮಸ್ತ ಜನಗಳಿಗೂ ತಿಳಿಸುವದೇನಂದರೆ—ಈ ಡಿಸ್ಟ್ರಿಕ್ಟಿಗೆ ಸೇರಿದ, ಈ ಕೆಳಗೆ ಕಂಡ ತಾಲ್ಲೂಕಿನಲ್ಲಿ ಇರುವ ಸ್ಟೇಟ ಫಾರೆಸ್ಟು ಮತ್ತು ಪ್ಲಾಂಟೇಷರ್ಗಳು ವಿನಹ ಹಿಡುವಳೀಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಚಕ್ಕೆ ಮತ್ತು ಕಕ್ಕೆ ಚಕ್ಕೆಯನ್ನ 1907ನೆ ಇಸವಿ ಜುಲೈ ಲಾಗಾಯ್ತು 1909ನೆ ಇಸವಿ ಜೂನ್ ಆಖೈರ್ ವರೆಗೆ ಎರಡು ವರುಷಗಳ ವರೆವಿಗೆ ಜಮಾಯಿಸಿಕ್ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗಿನ ಪಟ್ಟಿಯಲ್ಲಿ ಕಾಣಿಸಿ ಇರುವ ತಾರೀಖು ಮತ್ತು ಸ್ಥಳದಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ತಾಲ್ಲೂಕ ಅಮಲ್ದಾರರೊಡನೆ ಹರಾಜು ಮಾಡಿಸಲ್ಪಡುತ್ತೆ:—

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
ಕಡೂರು	24—9—07	ಕಡೂರು ತಾಲ್ಲೂಕು ಕಛೇರಿಯಲ್ಲಿ.

ನೋಟ—ಹರಾಜು ಅವಶ್ಯಕ ಕಂಡುಬಂದರೆ ಸಂಮತುವಾರ ಹರಾಜು ಮಾಡಿಸಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯುಟಿ ಕಮಿಷ್ನರ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಸವಾಲ್ ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲೀ ಅಥವಾ ಕ್ರಮಪ್ರಕಾರ ಮೊಖ್ತ್ಯಾರಿ ವಹಿಸಿದ ಏಜಂಟರ ಮುಖಾಂತ್ರವಾಗಲಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡಲೆ ಛಡ ಸವಾಲ್ದಾರನು ನಗದಾಗಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ ರೂಪಾಯಿಗೆ ಒಂದಾಣೆ ಮೇರಿಗೆ ಸೇರಿಸಿ ಬಿಟ್ಟು ಹಣದಲ್ಲಿ ನಾಲ್ಕನೆ ಒಂದು ಭಾಗ ಮೊಬಲಗನ್ನು ಡಿಪಾಜಟ ಹಾಜರ್ಮಾಡಬೇಕು, ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಹ ಹರಾಜು ಮಾಡಿಸುತ್ತೆ.

6. ಮೇಲೆ ಹೇಳಿದಂತೆ ದುಸರಾ ಹರಾಜು ಮಾಡಿಸುವದರಲ್ಲಿ ಲುಕ್ಸಾನಿಗೆ ಅವ್ವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆ ದುಸರಾ ಹರಾಜಿನಲ್ಲಿ ಲಾಭ ಬಂದರೆ ಹಕ್ಕೇನು ಇರುವದಿಲ್ಲ. ನಷ್ಟಬಂದರೆ ಮೊದಲು ಹರಾಜಿನಲ್ಲಿ ಬಂದ ಸವಾಲ್ ಮೊಬಲಗಿಗೂ ಎರಡನೆ ಹರಾಜಿನಲ್ಲಿ ಬಂದ ಮೊಬಲಗಿಗೂ ಇರುವ ಕಮ್ಮಿ ಮೊಬಲಗು ಅವ್ವಲ್ ಹರಾಜುದಾರನಿಂದ ರವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುವದು.

7. ಛಡ ಸವಾಲ್ದಾರನು ಬಾಕಿ ¾ ಹಿಸ್ಸೆ ಹರಾಜು ಮೊಬಲಗನ್ನು ಮತ್ತು ಅದರ ಲೋಕಲ್ ಸೆಸ ಸಹಾ ಹರಾಜು ತಾರೀಖು ಲಾಗಾಯಿತು ಒಂದು ತಿಂಗಳಲ್ಲಿ ಪಾವತಿ ಮಾಡದೆ ತಪ್ಪಿದರೆ ಮೊದಲು ಇಟ್ಟ ಡಿಪಾಜಟ ಮೊಬಲಗು ಸರ್ಕಾರಕ್ಕೆ ಸೇರಿಸಲ್ಪಡುತ್ತೆ. ಅದಲ್ಲದೇ ಮುಂದೇ ಜಮಾಯಿಸಿಕೊಳ್ಳುವದಕ್ಕೆ ಇಜಾರೆ ಹಕ್ಕು ಸಹಾ ತಪ್ಪಿಹೋಗುತ್ತೆ. ಬಾಕೀ ಏನಾದರೂ ಮೊಬಲಗು ನಿಂತರೆ ರೆವಿನ್ಯೂ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ (3) ದಿವಸಗಳ ಒಳಗಾಗಿ ಸರಿಯಾದ ಛಾಪಾ ಕಾಗದ್ದಲ್ಲಿ 9ನೆ ಪ್ಯಾರಾದಲ್ಲಿ ಕಂಡ ಷರತುಗಳ ಮೇರೆ ನಡದುಕೊಳ್ಳಲು ಬದ್ಧನಾಗಿ ಇರುವದಕ್ಕೆ ಮುಚ್ಚಳಿಕೆ ಬರದು ರುಜು ಮಾಡಿಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳ ಮೇರೆ ಹರಾಜುದಾರನು ನಡದುಕೊಳ್ಳಬೇಕು.

(1) ಒಂದು ವರುಷಕ್ಕೆ ಒಳಪಟ್ಟ ಗಿಡಗಳನ್ನ ಕಡಿಯಕೂಡದು.

(2) ತೊಬಟೆ ತೆಗೆದ ಕಡ್ಡಿಗಳು ಇಜಾರೆದಾರನದಾಗಿ ಇರತಕ್ಕದ್ದು.

(3) ಇಜಾರೆ ಮೇರೆ ಸಾಗಿಸಿಕ್ಕೊಂಡ ಚಕ್ಕೆ ಮೊತ್ತದ ತಪಶೀಲ್ ಲೆಖ್ಖ ಇಡಬೇಕು. ತಾಲ್ಲೂಕ ಅಮಲ್ದಾರ್ರು ಅಥವಾ ಡೆಪ್ಯುಟಿ ಕಮ್ಮಿಷನರ ಸಾಹೇಬರವರಿಂದ ನೇಮಿಸುವ ಇತರ ಆಫಿಸರು ಲೆಖ್ಖ ತನಿಖೀ ಮಾಡಲು ಬಂದಾಗ ಲೆಖ್ಖ ತೋರಿಸಬೇಕು.

(4) ಡೆಪ್ಯುಟಿ ಕಮಿಷನರ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಯೆ ಪ್ಯಾಸ ಪಡಿಯಬೇಕು.

(5) 1909ನೆ ಇಸವಿ ಜೂನ್ ಆಖೈರು ಒಳಗಾಗಿ ಕಡದು ಜಮಾಯಿಸಿಕೊಂಡಿರುವ ಚಕ್ಕೆಯನ್ನೆಲ್ಲಾ ಆಯಾಯ ತಾಲ್ಲೂಕಿನ ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

(6) ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲೀ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೇ ಸಾಗಿಸದೇ ನಿಂತಿರುವ ಚಕ್ಕೆ ವಿಶಿಷ್ಟವೂ ಸರ್ಕಾರಕ್ಕೆ ಸೇರಿಸಲ್ಪಡುತ್ತೆ.

(7) ತಂಗಡಿ ಗಿಡಗಳನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸೊಪ್ಪಿಗಾಗಿ ಆಗಲಿ, ಸಾದೇ ಬಗ್ಯಾಗಲೀ ಅಥವಾ ಇನ್ಯಾವದಕ್ಕಾಗಲೀ ಕಡಿಯಕೂಡದು.

ಬಿ. ಹಿರಾಸಿಂಗ,
ಫಾರ ಡೆಪ್ಯುಟಿ ಕಮ್ಮಿಷನರ, ಕಡೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 6 ಆಗಸ್ಟು 1907.

ಇದರಿಂದ ತಿಳಿಯಪಡಿಸುವದೇನಂದರೆ:—ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ರಿಜಿಸ್ಟ್ರೇಷನ್ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರಿ ದಸ್ತೈವಜು ಹಾಜರು ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ಅವುಗಳಿಗೆ ಬಾಧ್ಯತೆವುಳ್ಳವರಾಗಲಿ ಅಲ್ಲಲ್ಲಿ ಹಾಜರಾಗಿ ತತ್ಸಂಬಂಧ ದಸ್ತೈವಜುಗಳನ್ನು ವಾಪಸು ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ರಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ದಸ್ತೈವೇಜುಗಳನ್ನು ನಾಶಪಡಿಸಲ್ಪಡುತ್ತೆ.

1906—1907ನೆ ಸಾಲ್ ಬಗೆ.

ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ಬುಕ್ ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಿಸ್ಟರು ಮಾಡಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಹುತ್ತು ಕಿಮ್ಮತು.
ಶಿರಾ ಸಬ್ ರಿಜಿಸ್ಟ್ರಾರ್ ಆಫೀಸ್	I	84 / 1904—05	8—8—1904	9—8—1904	ಚಿಕ್ಕನಹಳ್ಳಿ ಲಿಂಗದ ವೀರನಂಜಪ್ಪನ 2ನೆ ಹೆಂಡತಿ ಮಕ್ಕಳು— (a) ದೊಡ್ಡವೀರಪ್ಪ. (b) ಚಿಕ್ಕವೀರಪ್ಪ. (c) ಹೊಸಳ್ಳಪ್ಪ. (d) ಈರಪ್ಪ.	...	400 ರೂಪಾಯಿನ ವಿಭಾಗ ಪತ್ರ.
ಡಿಟೋ ...	I	339	2—2—1905	2—2—1905	ಕಳ್ಳಂಬಳ್ಳದ ಭಾಸ್ಕರಪ್ಪನ ಮಗ ನಂಜುಂಡಪ್ಪ.	ಬಸವಂತನಹಳ್ಳಿ ರಂಗಣ್ಣನ ಮಗ ತಿಪ್ಪಣ್ಣ.	50 ರೂಪಾಯಿನ ಕ್ರಯ.
ಗುಬ್ಬಿ ಸಬ್ ರಿಜಿಸ್ಟ್ರಾರ್ ಆಫೀಸ್.	I	430	8—9—1904	15—12—1904	ಮೂದಲಾಪುರದ ಶಿದ್ದಲಿಂಗಣ್ಣನ ಮಗ ಶಿದ್ದೈಯ್ಯ.	ನಾಗಲವಾಡಿ ಪುಮ್ಮಾಜಿ ವೆಂಕಟೈಯ್ಯನ ಮಗ ಕರಿಹನುಮಯ್ಯ.	200 ಡಿಟೋ
ಕುಣಿಗಲ್ ಸಬ್ ರಿಜಿಸ್ಟ್ರಾರ್ ಆಫೀಸ್.	I	231 / 1904—05	22—9—1904	29—9—1904	ಬ್ಯಾಡರಹಳ್ಳಿ ಸಮ್ಮತು ನಾಗನಹಳ್ಳಿಗೆ ಶೇರಿದ ಕಾಡೇಗೌಡನ ಪಾಳ್ಯದ ದಾಸೇಗೌಡನ ಮಗ ಹುಚ್ಚಾ.	ಇದೆ ನಾಗನಹಳ್ಳಿ ಗ್ರಾಮದಲ್ಲಿರುವ ತಿರುಮಲೈಯ್ಯನ ಮಗ ಅರಸ.	4 ಡಿಟೋ

ಕುಣಿಗಲ್ ಸಬ್ ರಿಜಿಸ್ಟ್ರಾರ್ ಆಫೀಸ್.	I	361 / 1904—05	8—10—1904	6—1—1905	ಹುಲಿಯೂರು ದುರ್ಗದ ಸಂಮತು ದೊಡ್ಡ ಮಾವತ್ತೂರಿನಲ್ಲಿರುವ ನಿಟ್ಟೂರು ಬಿರಾಂಸಾಬಿ ಮಗ ಹುಸೇನ್‌ಸಾಬಿ.	ಹುಲಿಯೂರುದುರ್ಗದ ಸಂಮತು ಸರ್ವಮಾನ್ಯ ಚಿಕ್ಕ ಮಾವತ್ತೂರಲ್ಲಿರುವ ಸಾವಂದಿಶೆಟ್ಟಿ ಮಗ ಭದ್ರಶೆಟ್ಟಿ.	100 ರೂಪಾಯಿನ ಕ್ರಯ.
ಡಿಟೋ ...	I	451 / 1904—05	8—12—1904	2—3—1905	ಹುಲಿಯೂರುದುರ್ಗದ ಸಮ್ಮತು ಚಲ್ಮಸಂದ್ರದಲ್ಲಿರುವ ನಿಡಗಟ್ಟದ ಪೀರಸಾಬರ ಮಗ ಬುಡ್ನಾಸಾಬರು.	ಇದೆ ಚಲ್ಮಸಂದ್ರದಲ್ಲಿರುವ ಹೊಸ ಪ್ಯಾಟೆ ಮಂಡೇದ ಪೀರಸಾಬರ ಮಗ ದಸ್ತಗಿರಿಸಾಬ್.	50 ಡಿಟೋ
ಕೊರಟಗೆರೆ ಸಬ್ ರಿಜಿಸ್ಟ್ರಾರ್ ಆಫೀಸ್.	I	164	1—12—1904	4—1—1905	ನಂಜುಂಡಪ್ಪ ...	ಶಿವಲಿಂಗೈಯ್ಯ ...	98 ರೂಪಾಯಿನ ಆಧಾರ.
ಡಿಟೋ ...	I	188	26—10—1904	27—1—1905	ವೆಂಕಟೇಶಯ್ಯ ...	ಬಸೈಯ್ಯ ...	50 ರೂಪಾಯಿನ ಕರಾರು.
ಡಿಟೋ ...	II	...	7—5—1903	13—6—1905	ಗಂಗಪ್ಪ ಮಲ್ಲಯ್ಯ ...	ಪಂಚನಾಥರಾವ್ ...	100 ರೂಪಾಯಿನ ಆಧಾರ.
ಮಧುಗಿರಿ ಸಬ್ ರಿಜಿಸ್ಟ್ರಾರ್ ಆಫೀಸ್.	II	1	6—8—1903	8—12—1903	ದಾಸಂಣ ...	ಮಲ್ಲಿಗೌಡ ...	100 ರೂಪಾಯಿನ ಕ್ರಯ.

ಸಿ. ನಾರಾಯಣರಾವ್,
ಛೀಫ್ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ಆಗಸ್ಟು 1907.

1. ಕಂದಾಯದ ಬಾಕೀದಾರರಾದ ಜೋಡಿ ನಲ್ಕುಂದಿ ಗ್ರಾಮದ ಜೋಡಿದಾರ್ ಗೋವಿಂದಪ್ಪಯ್ಯಂಗಾರ್ ವಗ್ಯೆರೆ 18 ಜನ ವೃತ್ತಿವಂತರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ನಲ್ಕುಂದಿ ಗ್ರಾಮದಲ್ಲಿ 1907ನೆ ಸೆಪಟಂಬರ್ 16ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು ಸದರಿ ತಾರೀಖಿನ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907—08ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 218—7—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬ್ತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು.		ಜಮೀನು.				ಅಂದಾಜು ಕಿಮ್ಮತ್ತು.	ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಕಾರ.			
								ಎ. ಗುಂ.	ರೂ. ಆ. ಪೈ.	ರೂ. ಆ.	ರೂ. ಆ.	ರೂ.-ಆ.
ನಾಗಮಂಗಲ	ದೇವಲಾಪುರ	ಜೋಡಿ ನಲ್ಕುಂದಿ ಗ್ರಾಮ	ಜೋಡಿದಾರ್ ಗೋವಿಂದಪ್ಪಯ್ಯಂಗಾರ್ ವಗ್ಯೆರೆ 18 ಜನ ವೃತ್ತಿವಂತರು	...	...	...	ಖುಷ್ಕಿ ..	446 9	324 12 0	999		666 13
							ತರಿ ...	43 27	160 4 0			
							ಬಾಗಾಯಿತು ...	2 10	9 0 0			
							ಖರಾಬು ..	360 31	5 12 0		ಸಾಲ್ 1ಕ್ಕೆ ಜೋಡಿ 184 8	
								852 37	499 12 0		ಸಾಲ್ 1ಕ್ಕೆ ಸೆಸ್ಸು 33 15	
							ಗ್ರಾಮ ಪೂರ್ತಾ ಹರಾಜು ಆಗುತ್ತೆ. ಈ ಹರಾಜು ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಹುಜೂರ್ ಅಸಿಸ್ಟೆಂಟ್ ಕಮಿಷನರವರಿಂದ ನಡಿಸಲ್ಪಡುತ್ತೆ.				218 7 ಲೆಕ್ಕಾಚಾರದ ಮೇರ ಆಗುವ ಬಡ್ಡಿಯನ್ನು ಕೊಡಬೇಕು.	

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 3ನೇ ಆಗಸ್ಟು 1907.

1. ಕಂದಾಯದ ಬಾಕೀದಾರರಾದ ದೇವಲಾಪುರದ ಹೋಬಳಿ ನಾರಣಭಟ್ಟ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಬೊಮ್ಮನಹಳ್ಳಿ ಗ್ರಾಮದಲ್ಲಿ 1907ನೇ ಇಸವಿ ಸೆಪ್ಟಂಬರ್ 17ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರಿ ತಾರೀಖಿನ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕವಂ ಛಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907-08ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಸೀಲ್ ಮೇರಿಗೆ ರೂಪಾಯಿ 149—13—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅನು ಜಾತಾ ಹರಾಜ್ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದದ್ದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:

ತಾಲ್ಲೂಕು	ಹೋಬಳಿ	ಗ್ರಾಮ	ಬಾಕೀದಾರರ ಹೆಸರು	ಸ್ವತ್ತಿನ ತಪ್ಸೀಲ್.						ಅಂದಾಜು ಕಿಮ್ಮತ್ತು	ಸರಕಾರಕ್ಕೆ ಸಾಲಿಯಾನಾ ಕೊಡಬೇಕಾದ ಕಂದಾಯ ಮೊಬಲಗು	ಸರಕಾರಕ್ಕೆ ಬರಬೇಕಾದ ಬಾಕಿ ಮೊಬಲಗು
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು	ಸರ್ವೆ ನಂಬರು ಅಥವಾ ಜಮೀನಿನ ಹೆಸರು	ಖುಷ್ಕಿ ಬಾಗಾಯಿತು ಮುಂತಾದ ಕಿಸ್ತು	ವಿಸ್ತೀರ್ಣ	ಕಂದಾಯ			
ನಾಗಮಂಗಲ	ದೇವಲಾಪುರ	ಜೋಡಿ ಬೊಮ್ಮನಹಳ್ಳಿ ಗ್ರಾಮ	ನಾರಣಭಟ್ಟ ವಗೈರ 7 ಜನ ಬಾಕೀದಾರರು	...				ಎ. ಗು.	ರೂ. ಆ.		ರೂ. ಆ. ಪೈ.	ರೂ. ಆ. ಪೈ.
							ಖುಷ್ಕಿ ...	376 11	239 0		134 0 0 ಸಾಲು 1ಕ್ಕೆ ಜೋಡಿ	125 13 6 ಐನ್
							ಬಾಗಾಯಿತು ...	1 25	6 0		15 13 6 ಸೆಸ್ಸು	1 8 0 ನೋಟಸ್‌ಫೀ ವಗೈರೆ
							ಬಂಜರು ...	27 30	0 8	ರೂ. 491		
								405 26	245 8		149 13 6	127 5 6
							ಲೆಕ್ಕಾಚಾರದ ಮೇರೆ ಆಗುವ ಬಡ್ಡಿಯನ್ನು ಕೊಡಬೇಕು.					

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 31ನೇ ಜುಲೈ 1907.

1. ಕಂದಾಯದ ಬಾಕೀದಾರರಾದ ಜೋಡಿ ಕಣ್ನಾಗಾಲದ ನರಸಿಹ್ಮ ಉಪಾಧ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಸರ್ಕಾರಕ್ಕೆ ತೆಗೆದುಕೊಂಡ; ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಅಕ್ಟೋಬರ್ 2ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಕೂಗಿದರ ಖರೀದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1907ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪಶೀಲ್ ಮೇರಿಗೆ ರೂಪಾಯಿ 262—4—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲ್ಕೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೋ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಖಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲ್ಪತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಮಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್.						ಅಂದಾಜಾ ಕಿಮ್ಮತ್ತು.	ಸರ್ಕಾರಕ್ಕೆ ಸಾಲಿಯಾನಾ ಕೊಡಬೇಕಾದ ಜೋಡಿ ಯಾ ಕಾಯಂಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.						
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.			
								ಎ. ಗು.	ರೂ. ಆ. ಪೈ.	ರೂ.	ಜೋಡಿ. ರೂ.	ರೂ. ಆ. ಪೈ.
ಚಾಮರಾಜನಗರ	ಸಂತೆಮಾರಹಳ್ಳಿ	ಜೋಡಿ ಕಣ್ನಾಗಾಲ	ನರಸಿಹ್ಮ ಉಪಾಧ್ಯ ವಗೈರೆ			ಗ್ರಾಮ ಪೂರ್ತಾ.	ಖುಷ್ಕಿ ... ತರಿ ... ಬಾಗಾಯಿತು ಸಾ॥ ನಾಲಾ. ಯಖು.	265 27 114 5 142 20 178 6	330 0 0 543 0 0 604 0 0 2 0 0	2,000	928	260 12 0 ಬಾಕಿ 1 8 0 ಫೀ
								700 18	1,484 0 0			

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟ್ ನೋಟಿಸು, ತಾರೀಖು 27ನೆ ಜುಲೈ 1907.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಬೇವಾರಸಾಗಿ ಇರುವ ಇದರಡಿ ಕಂಡ ದಸ್ತಾವೇಜುಗಳನ್ನು ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಖ್ತಾಲೀಕರೆ ಆಗಲಿ ಈ ನೋಟಿಸ್ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ರೂಬರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, 1903ನೆ ಇಸವಿ ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜುಗಳನ್ನು ನಾಶಪಡಿಸುತ್ತೆ :—

ಜಂಜತಿ ನಂಬರು.	ಸಬ್ ರಿಜಿಸ್ಟ್ರಾರ್ ಆಫೀಸು ಹೆಸರು.	ಪುಸ್ತಕದ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ಅಥವಾ ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಮತ್ತು ಮೊಬಲಗು.
1	ಅರ್ಕಲಗೂಡು ...	I	540 / 1904-05	20—8—04	20—12—04	ಕೊಣನೂರಲ್ಲಿರುವ ತಿಪ್ಪಶೆಟ್ಟಿ ಮಗ ರಾಮಶೆಟ್ಟಿ.	ಸಂಗೂರಲ್ಲಿರುವ ಗಂಗಾಧರ ಶಾಸ್ತ್ರಿ ಮಗ ವೆಂಕಟಸುಬ್ಬಾ ಶಾಸ್ತ್ರಿ.	50 ರೂಪಾಯಿಗಳಿಗೆ ಕ್ರಯ ಪತ್ರ.
2	ಡಿಟೋ ...	IV	18 / 1904-05	8—3—05	4—5—05	ಹಾಲಿಕಲ್ಲು ಗ್ರಾಮದಲ್ಲಿರುವ ರಾಮಸ್ವಾಮ್ಯಯ್ಯಂಗಾರ್ ಮಗ ಕೃಷ್ಣಯ್ಯಂಗಾರಿ.	ಹಾಲಿಕಲ್ಲು ಗ್ರಾಮದಲ್ಲಿರುವ ಶಾಸ್ತ್ರಿ ಶಿಂಗ್ರಯ್ಯಂಗಾರು.	25 ರೂಪಾಯಿಗಳಿಗೆ ಹಣ ಸಂದ ರಶೀತಿ
3	ಆಲೂರು ...	I	27 / 1904-05	29—7—04	21—7—04	ಹೆರಗು ನಾರಸ್ಯಯ್ಯಂಗಾರಿ	ಕಣದಹಳ್ಳಿ ಈರಂಗನ ಮಗ ಲಿಂಗ್ರಾ ...	50 ರೂಪಾಯಿನ ಕ್ರಯ ಪತ್ರ.
4	ಡಿಟೋ ...	I	439 / 1904-05	14—6—05	16—6—05	ಶಿದ್ದಾಪುರದ ಜಂಜೇಗೌಡನ ಮಗ ಶಿದ್ದೇಗೌಡ ಉರುಫ್ ಅಪ್ಪಂಣಿ.	ಸಾಣೇಹಳ್ಳಿ ದಾಖಲೆ ಕಳಿಕೊಪ್ಪಲು ವಾಸಸ್ಥಳು ಹುಲ್ಕುಂದದ ಜವರೇಗೌಡನ ಹೆಂಡತಿ ಸಂಣಮ್ಮ.	85 ರೂಪಾಯಿನ ಕ್ರಯ ಪತ್ರ.

ಕೆ. ಆರ್. ಶ್ರೀನಿವಾಸ್ಯಯ್ಯಂಗಾರ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಅಬ್‌ಸ್ಟ್ರಾಕ್ಟು ನೋಟಿಫಿಕೇಶನ್, ತಾರೀಖು 24ನೆ ಜುಲೈ 1907.

ಚನ್ನಗಿರಿ ತಾಲ್ಲೂಕು ಸೂಳೆಕೆರೆ ಗ್ರಾಮದಲ್ಲಿ ಇರುವ ಮೆ॥ ಕೆ. ಶ್ಯಾಮೈಯ್ಯಂಗಾರ್ರಿಂದ ಸರಕಾರಕ್ಕೆ ಬರಬೇಕಾದ ಮೊಬಲಗು ಬಾರದೇ ಇರುವದರಿಂದ ಸದರಿಯವರ ಬಾಬತು ಜಮೀನುಗಳು ಸರ್ 1907ನೆ ಇಸವಿ ಆಗಸ್ಟ್ 1ನೆ ತಾರೀಖು ಮೈಸೂರು ಗೆಜೆಟಿನ 11ನೆ ಭಾಗದ 363, 364ನೆ ಸಂಪುಟದಲ್ಲಿ ಪ್ರಾಯಿಷ್ ಆಗಿರುವ ಡೀಟೇಲ್ಡ್ ನೋಟಿಫಿಕೇಶನ್‌ನಲ್ಲಿ ನಮೂದಿಸಿ ಇರುವ ತಪಶೀಲ್ ಮೇರೆ ಇರುವವುಗಳನ್ನು 14—9—1907ನೆ ದಿವಿ 11 ಘಂಟೆಗೆ ಸೂಳೆಕೆರೆ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸರ್ 1907—08ನೆ ಮಿ॥ ಅರ್ಜೀ ನಂಬರ್ 40.

ಬೆಂಗಳೂರು ತಾಲ್ಲೂಕು ಎಲಹಂಕದಲ್ಲಿದ್ದು ಮೃತಪಟ್ಟ ಕರಗಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ನಂಜಪ್ಪ, 2ನೆ ಪುಟ್ಟಪ್ಪ, ಮೈನರ್ ಗಾರ್ಡಿಯನ್ ದೊಡ್ಡ ತಂದೆ ಸಂಜೀವಪ್ಪ ಮೃತಪಟ್ಟ ಸದರೀ ಕರಗಪ್ಪನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಎಲಹಂಕದ ಸ್ಥಳದ ನಂಜಪ್ಪ ಮತ್ತು ಪುಟ್ಟಪ್ಪನು ಡಿಟೋ ವಾಸಸ್ಥರಾಗಿ ಮೃತಪಟ್ಟ ಕರಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 497—13—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಶನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ನಂಜಪ್ಪ ಮತ್ತು ಪುಟ್ಟಪ್ಪನವರ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಗಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1907—08ನೆ ಇಸವಿ ಮಿ॥ ಅರ್ಜೀ ನಂಬರ್ 71.

ಮೃತಪಟ್ಟ ದೊಡ್ಡ ಬಳ್ಳಾಪುರದ ವಾಸುದೇವಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿದ್ದಿಕಟ್ಟೆಯಲ್ಲಿರುವ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ, ಮೃತಪಟ್ಟ ಸದರೀ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ ಎಂಬವರು ಡಿಟೋ ವಾಸಸ್ಥರಾಗಿ ಮೃತಪಟ್ಟ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 3,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಶನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಶೇಷಶಾಸ್ತ್ರಿಗಳ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 79.

ಬೆಂಗಳೂರು ಕೀಗೇಬೇಲಿಯಲ್ಲಿ ವಾಸವಾಗಿದ್ದು ಮೃತಪಟ್ಟ ಮುಂಡಿದಾರ್ ಎಲ್. ಸೆಟ್ವಾಜಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ವೆಂಕಟರಾವ್ ಉರಫ್ ಬಾಪೂರಾವ್, 2 ವಾಸುದೇವರಾವ್, ಮೈನರ್ ಗಾರ್ಡಿಯನ್ ವೆಂಕಟರಾವ್ ಉರಫ್ ಬಾಪೂರಾವ್ ಮೃತಪಟ್ಟ ಸದರೀ ಸೆಟ್ವಾಜಿರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾವ್ ಎಂಬುವರು ಡಿಟೋ ವಾಸಸ್ಥರಾಗಿ ಮೃತಪಟ್ಟ ಸೆಟ್ವಾಜಿ ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 660 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಶನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾಯರ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೆಟ್ವಾಜಿರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1906—07ನೆ ಇಸವಿ ಮಿ॥ ಅರ್ಜಿ ನಂಬರ್ 752.

ಬೆಂಗಳೂರು ಸಿಟಿ ಸಬ್ ರಜಿಸ್ಟ್ರಾರ್ರ ಆಫೀಸಿನಲ್ಲಿ ಕ್ಲಾರ್ಕ ಆಗಿದ್ದ ಮೃತಪಟ್ಟ ಶಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹಾಲಿ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ರಾಮೋಹಳ್ಳಿಲಿ ವಾಸವಾಗಿರುವ ರಾಘವೇಂದ್ರಪ್ಪನವರ ಮಗಳು ರಂಗವ್ವ, ಮೃತಪಟ್ಟ ಸದರೀ ಶಾಮರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ರಾಮೋಹಳ್ಳಿ ಸ್ಥಳದ ರಂಗವ್ವ ಎಂಬುವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ 350 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ, ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ರಂಗವ್ವನವರ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟ ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 756.

ಮಾಗಡಿ ತಾಲ್ಲೂಕು ಕುದೂರು ಹೋಬಳಿ ಶಿಡ್ಲಿಪುರದ ವಾಸಸ್ಥರಾಗಿಯೂ ಮತ್ತು ದಾವಣಗೆರೇಲಿ ನೌಕರಿಲಿದ್ದು ಮೃತಪಟ್ಟ ತಿರುಮಲಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ಕೃಷ್ಣಮಾಚಾರ್ರು, 2. ರಘುನಾಥಾಚಾರ್ರು, ಇವರುಗಳು ಮೈನರ್, ಇವರ ಗಾರ್ಡಿಯನ್ ತಾಯಿ ಲಕ್ಷ್ಮೀದೇವಮ್ಮ ಉರಫ್ ಪೆರಂದೇವಮ್ಮ, ಮೃತಪಟ್ಟ ಸದರೀ ತಿರುಮಲಾಚಾರ್ರಿಗೆ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ತಾಲ್ಲೂಕು ಶಿಡ್ಲೀಪುರ ಸ್ಥಳದ ಕೃಷ್ಣಮಾಚಾರ್ರು ಮತ್ತು ರಘುನಾಥಾಚಾರ್ರು ಇವರ ಗಾರ್ಡಿಯನ್ ಲಕ್ಷ್ಮೀದೇವಮ್ಮ ಉರಫ್ ಪೆರಂದೇವಮ್ಮನು ದಾವಣಗೆರೆ ವಾಸಸ್ಥರಾಗಿ ಮೃತಪಟ್ಟ ತಿರುಮಲಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಮಾಚಾರ್ರು ಮತ್ತು ರಘುನಾಥಾಚಾರ್ರು ಮೈನರ್, ಗಾರ್ಡಿಯನ್ ಪೆರಂದೇವಮ್ಮನ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾ॥ ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 760.

ಬೆಂಗಳೂರು ಶಿದ್ದಿಕಟ್ಟೆಲಿದ್ದು ಮೃತಪಟ್ಟ ಮದ್ದಗಿರಿ ಶೀನಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿದ್ದಿಕಟ್ಟೆ 1ನೆ ಬೀದಿಲಿರುವ ಲಕ್ಷ್ಮಮ್ಮ, ಮೃತಪಟ್ಟ ಸದರೀ ಮದ್ದಗಿರಿ ಶೀನಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಲಕ್ಷ್ಮಮ್ಮ ಎಂಬುವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮದ್ದಗಿರಿ ಶೀನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮ್ಮನವರ ಅರ್ಜಿಯನ್ನು ಸರ್ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮದ್ದಗಿರಿ ಶೀನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಭಾಭಾ,
ಸಬಾರ್ಡಿನೇಟ ಜಡ್ಜ.

ಪ್ರಸಿದ್ಧ ಪತ್ರಿಕೆ.

ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ಕಿಕ್ಕೇರಿಯಲ್ಲಿದ್ದು ಮೃತಪಟ್ಟ ವೈಶ್ಯರ ವೆಂಕಟರಮಣ ಶೆಟ್ಟರ ಮಗ ಅಣ್ಣಯ್ಯಶೆಟ್ಟ ಎಂಬುವನು ತನ್ನ ಹೆಂಡತಿಯಾದ ಮೈನರ್ ರಂಗಲಕ್ಷ್ಮಮ್ಮ ಎಂಬುವಳನ್ನ ಮಾತ್ರಾ ಬಿಟ್ಟು ಪಾತೀಯಾದನು. ಆತನ ಸೋದರಳಿಯ ಡಿಟೋ ಕಿಕ್ಕೇರಿ ಗ್ರಾಮದ ವೈಶ್ಯರ ಲಕ್ಷ್ಮಯ್ಯಶೆಟ್ಟರ ಮಗ ಸುಬ್ಬಶೆಟ್ಟಿಯು ಪಾತೀಯವನು ಬರದುಕೊ

ಟ್ಟಿದ್ದಾನೆಂಬ ವಿಲ್ ಆಧಾರದ ಮೇಲೆ ಸದರೀ ಪಾರ್ತಿಯುವನ ಸ್ಥಿರ ಆಸ್ತಿಗಳನ್ನ ಮಾರುವನಾಗಿದ್ದಾನೆ. ಆ ವಿಲ್ ನಿಜವಾದದ್ದಲ್ಲ. ಆದ್ದರಿಂದ ಸದರೀ ಪಾರ್ತೀಯುವನ ಆಸ್ತಿಯನ್ನು ಯಾರೂ ಕೊಂಡುಕೊಳ್ಳಬಾರದು ಎಂದು ಮೈನರ್ ರಂಗಲಕ್ಷ್ಮಮ್ಮನ ಗಾರ್ಡಿಯನ್ ಮತ್ತು ತಂದೆ ಕಡಬುವ ವೈಶ್ಯರ ಕೊಪ್ಪಾಲ್ ವೇಂಕಟರಂಗಶೆಟ್ಟಿಯು ಇದರಿಂದ ಎಲ್ಲರಿಗೂ ತಿಳಿಸಿದ್ದಾನೆ.

ಕೊಪ್ಪಾಲು ವೆಂಕಟರಂಗಶೆಟ್ಟಿ ರುಜು.

ನೋಟೀಸು.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಸಿಟಿ ರಾಜಾಸಿಂಗನಪ್ಪನಪೇಟೆಗೆ ಸೇರಿದ ಜಮೂತಿ ಮುನಿಯಪ್ಪನ ಗಲ್ಲಿಯಲ್ಲಿರುವ ಮುನಿಸಿಪಲ್ 19ನೆ ನಂ. ಮನೆ ಮತ್ತು ಮಾಗಡಿ ತಾಲ್ಲೂಕ ಸೋಲೂರು ಹೋಬಳಿ ಲಕ್ಕೇನಹಳ್ಳಿಯಲ್ಲಿ ಸರ್ವೆ 48—2ನೆ ನಂ. ಹೊಲವು ಮತ್ತು ಸರ್ವೆ 119—1ನೆ ನಂ. ಗದ್ದೆ ಸಹ ಈ ಮೂರು ಸ್ಥಿರಸೊತ್ತುಗಳು ನಾನು ಮತ್ತು ನನ್ನ ಖಾಸಾ ಚಿಕ್ಕಪ್ಪನಾದ ಕ್ರಿಷ್ಣಾಜಿರಾವ್ ದಳವೆ ಯವರು ಸಹ ಏಕ ಗೃಹಕೃತ್ಯದಲ್ಲಿ ಅವಿಭಕ್ತರಾಗಿದ್ದು ಸಂಪ್ರಸ್ಥದಲ್ಲಿ ಸಂಪಾದಿಸಿರುವಂಥಾದ್ದು ಆದ್ದರಿಂದ ಸದರಿ ಸೊತ್ತುಗಳಲ್ಲಿ ಅರ್ಧ ಹಿಸ್ಸೆಗೆ ನಾನು ಹಕ್ಕುದಾರನಾಗಿರುತ್ತೇನೆ. ಮೇಲ್ಕಂಡ ಕ್ರಿಷ್ಣಾಜಿರಾವ್ ದಳವೆ ಯವರು ಈಗ ನನ್ನ ಹಕ್ಕಿಗೆ ಮೋಸಪಡಿಸಬೇಕೆಂಬ ಕೆಟ್ಟ ಇರಾದೆಯಿಂದ ಏರ್ಪ ಸೊತ್ತುಗಳನ್ನ ಪರಾಧೀನ ಮಾಡಬೇಕೆಂದು ಪ್ರಯತ್ನಪಡುತ್ತಾ ಇದ್ದಾರೆ. ಸದರಿ ಸೊತ್ತುಗಳೆಲ್ಲವೇ ಆಗಲಿ, ಆ ಪೈಕಿ ಯಾವದೊಂದೇ ಆಗಲಿ ಆಧಾರ, ಭೋಗ್ಯ, ಕ್ರಯ ಮುಂತಾದ್ದು ಯಾವದು ಮಾಡಿಕೊಳ್ಳತಕ್ಕವರು ನನ್ನ ರುಜು ಇಲ್ಲದೆ ಮಾಡಿಕೊಳ್ಳಕೂಡದು. ಮಾಡಿಕೊಂಡಿದ್ದೇ ಆದರೆ ಅದು ಮಂಜೂರಾಗಲಾರದು. ತಾರೀಖು 12ನೆ ಆಗಸ್ಟ್ 1907. | ರುಜು ಹೀರೋಜಿರಾವ್, ಉರುಫ್ ಬಾಪೂರಾವ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಷ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮುರ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಬಂದು ಸರಟಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮುರ್ಕಂ 24205—6—ಜಿ. 6200ನೆ ನಂಬರ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟಿಸಗಳು:—	ರೂ. ಆ.
ಮೊದಲನೇ ದಫೆ ಛಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1 4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‍ಗಳ ಬಗ್ಗೆ ನೋಟಿಸಗಳಿಗೆ:—	
ಮೊದಲನೇ ಸಲಕ್ಕೆ ..	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ ..	2 8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.	
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—	
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ ..	0	8
ಎರಡನೇ ದಫಾ	ಡಿಟೋ	ಡಿಟೋ	0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಯೆ ಕಂಟ್ರೋಲರವರ ಅಪ್ಪಣೆ ಆಗಿರೋತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮುಜಕೂರಿಗೆ ದಾಖಲೆ ಬಗ್ಯೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಸಿ. ಹೆಚ್. ಏಟ್ಸ್,
ಕಂಪೈಲರ್, ಮೈಸೂರ ಗೆಜೆಟ್.

444

422

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಕಟವಾದ್ದು. [ನಂ. 34

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 22, ಸ 1907.

II ನೆ ಭಾಗ

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 12ನೆ ಆಗಸ್ಟು 1907.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಬಾರಿಂಗಪೇಟೆ ತಾಲ್ಲೂಕಿಗೆ ಶೇರಿದ ವಿಶಿಷ್ಟ ಸ್ಟೇಟ್ ಫಾರೆಸ್ಟು ಪ್ಲಾಂಟೇಷನ್ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು *1908*ನೆ ಇಸವಿ ಜೂನ್ *30*ರ ವರಿವಿಗೆ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1907ನೆ ಸೆಪ್ಟಂಬರು 11ನೆ ತಾರೀಖಿನ ವರಿವಿಗೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು:—

ನೋಟ:— ಇನಾಂ ಜೋಡಿ, ಖಾಯಂಗುತ್ತಾ, ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.

2. ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್ರವರ ಆಫೀಸಿನಲ್ಲಿ 1907ನೆ ಇಸವಿ ಸೆಪ್ಟಂಬರು 12ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

3. ಇತರ ಷರತ್ತುಗಳಿಗೆ 1907ನೆ ಇಸವಿ ಜುಲೈ 18ನೆ ತಾರೀಖಿನ ಮೈಸೂರು ಗೆಜೆಟ್ಟಿನ ಎರಡನೇ ಭಾಗದಲ್ಲಿ ಫಾ[illegible]ಯಿಷ್ ಆಗಿರುವ ಈ ಇಲಾಖಾ 1907ನೆ ಜುಲೈ 12ನೆ ಮರ್ಕ್ಯುಂನ ನೋಟಿಫಿಕೇಷನ್‌ಗೆ ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 19ನೆ ಆಗಸ್ಟು 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ನಮೂದಾಗುವ ತಪಶೀಲ್ ಮೇರಿಗೆ ಶಿವಮೊಗ್ಗಾ ಡಿಪೋದಲ್ಲಿರುವ ಚೌಬೀನೆಯನ್ನು ತಾರೀಖು 18ನೆ ಸೆಪ್ಟಂಬರ 1907ರಲ್ಲಿ—ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರಸ್ಟು ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಆಫಿಸರವರಿಂದಾಗಲಿ ಹರಾಜು ಮಾಡಿಸಲ್ಪಡುತ್ತೆ :—

(1)	ಸಾಗುವಾನಿನಾಟ	...	10	(6)	ಇತರ ಕಾಡುಜಾತಿ ನಾಟ	...	100
(2)	ಬೀಟೀ ನಾಟ	...	50	(7)	ಸಾಗುವಾನಿ ಬೆಲಗು	...	200
(3)	ನಂದಿನಾಟ	...	60	(8)	ಕಾಡುಜಾತಿ ಬೆಲಗು	...	150
(4)	ಇತರ ಮನ್ನಾ ಜಾತಿ ನಾಟ	...	50	(9)	ಕಿರಳಭೋಗಿ ತೀರುಗಳು	...	30
(5)	ಮತ್ತಿನಾಟ	...	50				

ಹರಾಜು ಷರತ್ತು :—ಸಮೀಪವಾದ ಖಜಾನೆಗೆ ಪ್ರತಿ ಲಾಟು ತೆಗದುಕೊಂಡ ಹರಾಜುದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆ ಹಣವನ್ನು ಹರಾಜು ತಾರೀಖು ಲಾಗಾಯಿತು 3 ದಿವಸಗಳೊಳಗೆ ಜಮ ಮಾಡಿಸಬೇಕು. ತಪ್ಪಿದಲ್ಲಿ 2ನೆ ಹರಾಜು ಮಾಡಿಸಿ ನಷ್ಟದ ಮೊಬಲಗಿಗೆ ಅವಲ್ ಹರಾಜುದಾರನಿಗೆ ಗುರಿಪಡಿಸುತ್ತೆ. ಷುರು ಹರಾಜಿನ ಹಣಕ್ಕಿಂತ ಜಾಸ್ತಿ ಬಂದಲ್ಲಿ ಅಂಥಾ ಹಣಕ್ಕೆ ಅವಲ್ ಹರಾಜುದಾರನು ಅರ್ಹನಲ್ಲಾ.

(2) ಬಾಕೀ ಹಣವನ್ನು ಹರಾಜು ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಪಾವತಿ ಮಾಡಬೇಕು. ತಪ್ಪಿದಲ್ಲಿ ಷುರು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರಕಾರಕ್ಕೆ ಸೇರಿಸಿಕೊಳ್ಳುತ್ತೆ. ಅಲ್ಲದೆ ಮೇಲೆ ನಮೂದಿಸಿದಂತೆ ದುಸರಾ ಹರಾಜು ಮಾಡಿಸುತ್ತೆ.

(3) ಪೂರಾ ಹಣ ಪಾವತಿ ಮಾಡಿ ಲೈಸೆನ್ಸ್ ಪಡದ ವಿನಹ ಯಾವ ಚೌಬೀನೆಯನ್ನಾಗಲಿ ರಪ್ತು ಮಾಡಿಕೊಳ್ಳಕೂಡದು.

(4) ಹರಾಜಾದ ಚೌಬೀನೆಯನ್ನು ಹರಾಜು ತಾರೀಖು ಲಾಗಾಯಿತು 90 ದಿವಸಗಳೊಳಗೆ ರಪ್ತು ಮಾಡದೆ ಬಿಟ್ಟಲ್ಲಿ ಹರಾಜುದಾರರು ಡಿಪೋ ಬಾಡಿಗೆಯನ್ನು ಹರಾಜು ಮೊಬಲಗಿನ ಮೇಲೆ ಸಾಲಿಯಾನ ಶೇಕಡ 12 ರೂಪಾಯಿನಂತೆ ಹರಾಜು ತಾರೀಖು ಲಾಗಾಯಿತು ವಸೂಲ್ ಮಾಡಲ್ಪಡುತ್ತೆ.

ಪಿ. ಎಸ್ ಗೋವಿಂದರಾವ್,
ಡಿಸ್ಟ್ರಿಕ್ಟು ಫಾರಸ್ಟು ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ಪಸಾರೆ, ಇಷ್ತಿಹಾರ್.

ತಾರೀಖು 30ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳ ಸ್ಟೇಟ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಕೇಲಿಗಳ ಅಮರಾಯಿ ಮತ್ತು ಕೇಲಿಗಳಲ್ಲಿಯೂ ದೊರೆಯುವ ಪಸಾರೆ ಜಿನಸುಗಳನ್ನು 1907ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1908ನೆ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕನ್ನು ಪಡೆಯಲು 1907ನೆ ಇಸವಿ ಆಗಸ್ಟು ತಾರೀಖು 31ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತು ತೆಗದುಕೊಳ್ಳಲ್ಪಡುವದು.

"ಜಿನಸುಗಳ ತಪಸೀಲು" ಎಂದು ಷರಾ ಮಾಡಿರತಕ್ಕದ್ದರ ಅಡಿಯಲ್ಲಿ 1ನೆ ಪ್ಯಾರಾದಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ದೊರಕಬಹುದಾದ ಜಿನಸುಗಳನ್ನು ಜಮಾಯಿಸತಕ್ಕ ಹಕ್ಕಿಗೋಸ್ಕರ ಬೇರೆ ದರಖಾಸ್ತನ್ನು ಕೊಡಬೇಕು.

ತಾಲ್ಲೂಕು.

1.	ಮೈಸೂರು	8.	ನಂಜನಗೂಡು
2.	ಶ್ರೀರಂಗಪಟ್ಟಣ	9.	ಚಾಮರಾಜನಗರ
3.	ನಾಗಮಂಗಲ	10.	ಗುಂಡ್ಲುಪೇಟೆ
4.	ಕೃಷ್ಣರಾಜಪೇಟೆ	11.	ಹೆಗ್ಗಡದೇವನಕೋಟೆ
5.	ಮಂಡ್ಯ	12.	ಹುಣಸೂರು
6	ಮಳವಳ್ಳಿ	13.	ಯಡತೊರೆ
7.	ಟಿ. ನರಸೀಪುರ		

ಜಿನಸುಗಳ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅಂಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡುಅರಿಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲರಂಗು, 9. ಪತಂಗ, 10. ಮುಡ್ಡಿ, 11. ಚಿಲ್ಲಬೀಜ, 12. ಚಗಚೇಬೀಜ, 13. ಹೊಂಗೇಬೀಜ, 14. ಗೇರುಬೀಜ, 15. ಹಾಲುಮಡ್ಡಿ, 16. ಉದುರಿದ ಸಾರಗದ ಕೊಂಬು, 17. ಗುಗ್ಗಳ, 18. ಜೋಲದಹಣ್ಣು, 19. ಅರಗು, (ನಾರಾಯಣದುರ್ಗ ಸ್ಟೇಟ್ ಫಾರಸ್ಟು ವಿನಹಾ) 20. ಸೀತಾಫಲದಹಣ್ಣು, 21. ಜಿಂಡೆನಾರು, 22. ಬೇವಿನಬೀಜ, 23. ಇಪ್ಪೇಬೀಜ 24. ಅಳಲೇಕಾಯಿ; ಈ ಕೆಳಗೆ ವಿವರಿಸಿರುವ ನಾರಾಯಣದುರ್ಗದ ಸ್ಟೇಟ್ ಫಾರೆಸ್ಟು ಸುತ್ತು ಇರುವ ಹಳ್ಳಿಗಳ ಅಳಲೆಕಾಯಿ ಸೇರಿ ಇಲ್ಲಾ:—

ನಾಗಮಂಗಲದ ತಾಲ್ಲೂಕು ಬಾಬತ್ತು:—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೋರನಗುಂಡಿ, 5. ಇಂಡಸಹಳ್ಳಿ, 6. ವೀರಹಳ್ಳಿ, 7. ಬೋಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು:—1. ಗುಂಜಗಾನಹಳ್ಳಿ, 2. ಸಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಡಗಳ್ಳಿ, 6. ನಾರಣಾಪುರ, 7. ಮಾದನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು:—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಳಂಕಪುರ, 8. ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಪ್ರತಿ ಒಂದು ತಾಲ್ಲೂಕಿಗೂ ಬೇರೆ ಬೇರೆ ದರಖಾಸ್ತು ಕೊಡತಕ್ಕದ್ದು ಮತ್ತು ಮೇಲೆ ವಿನಾಯಿತಿ ಮಾಡಿರತಕ್ಕ ಪ್ರದೇಶಕ್ಕೆ ಬೇರೆ ದರಖಾಸ್ತು ಕೊಡಬೇಕು.

3. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

4. ಪ್ರತಿ ಒಂದು ದರಖಾಸ್ತಿನೊಡನೇ (100) ಒಂದು ನೂರು ರೂಪಾಯಿನ ಕರೆನ್ಸಿ ನೋಟ ಠೇವಣಿ ಬಗ್ಗೆ ಕಳುಹಿಸಬೇಕು ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್‌ಷೂರ್ ಮಾಡಿ ಲಿಫಾಫೆ ಮೇಲೆ "ಪಸ್ಸೇರೆ ದರಖಾಸ್ತು" ಎಂದು ಬರೆದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರ ಹೆಸರಿಗೆ ರವಾನಿಸಬೇಕು.

5. ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ. ಮತ್ತು ಯಾವ ಕಾರಣವನ್ನು ನಮೂದಿಸದೇನೇ ಯಾವ ದರಖಾಸ್ತನ್ನೂ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

6. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ 1907ನೆ ಇಸವಿ ಸೆಪ್ಟಂಬರ ತಾರೀಖು 2ರಲ್ಲಿ ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ಒಡೆಯುವರು.

7. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡಲೆ ಕಳುಹಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡಲೆ ವಾಪಸ್ಸು ಮಾಡಲ್ಪಡುವದು.

8. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿವಸಗಳೊಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೆ ಮಾಡಬೇಕು. ಮತ್ತು ಈ ಮೂರು ದಿನಗಳಲ್ಲಿ ಈ ಇಸ್ತಿಹಾರ ನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರೆದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

9. ಈರೀತಿ ದುಸರಾ ಹರಾಜು ಮಾಡಿಸುವದರಿಂದ ಉಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

10. ಈ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ಒಪ್ಪಿರುತ್ತೇನೆಂದು ಇಜಾರೆದಾರನು ಇಜಾರೆ ಮಂಜೂರಾದ 3 ದಿವಸಗಳೊಳಗಾಗಿ ಮುಚ್ಚಳಿಕೆ ಬರೆದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

11. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಅವನ ದರಖಾಸ್ತು ಮಂಜೂರಾದ ಸಂಗತಿಯನ್ನು ಅವನಿಗೆ ತಿಳಿಯಪಡಿಸಿದ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಪೂರ್ತಿ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಮೇಲ್ಕಂಡಂತೆ ವಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದರ ಅವನ ಡಿಪಾಜಿಟ್ಟು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾದೀತು. ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ.

12. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇಜಾರೆದಾರರು ರೂಢಿಸಬೇಕು. ಹಾಗೆ ತಮ್ಮ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

13. ಹಿಡುವಳಿ ಜಮೀನುಗಳಲ್ಲಿ ಇತರಕ್ಕೆ ಮರಗಳ ಮತ್ತು ಸ್ವಂತ ಅನುಭೋಗಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

14. ಇನಾಂದಾರರ ಸ್ಥಿರಪಟ್ಟ ಹಕ್ಕು ದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

15. ಕಂಟ್ರಾಕ್ಟುದಾರನ ಅಥವಾ ಅವನ ಕಡೇ ಆಳುಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಇಸ್ತಿಹಾರ್ನಾಮೆ, ತಾರೀಖು 31ನೆ ಜುಲೈ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಉಡ್ಯಾರ್ಡಿನಲ್ಲಿ ಚೌಬೀನಾವನ್ನು 1907ನೆ ಸೆಪ್ಟಂಬರ ತಾರೀಖು 31ರಲ್ಲು ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಾಟುಗಳ ವಿವರ.	ಸಲೆಅಡಿ.		ಷರಾ.
	ನಂಬರ.	ಅಡಿ.	
ಸಾಗ್ವಾನಿ ಸರಾ ...	1,725	1,725	ಚೌಬೀನ
ಮತ್ತಿ ನಾಟು ...	211	5,534	ಚೌಬೀನ
ಡಿಟೋ ಜಂತಿ ...	30	372	ಡಿಟೋ

ಹರಾಜು ಷರತ್ತುಗಳು.

1. ಛಡ ದರಖಾಸ್ತುದಾರನು ಹರಾಜು ಆದ 3 (ಮೂರು) ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಶೇಕಡ 25 ರಂತೆ ಆಗುವ ಮೊಬಲಗನ್ನು ಹತ್ತಿರವಿರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಅದರಿಂದುಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.
2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.
3. ತಾನು ಹರಾಜಿನಲ್ಲಿ ಪಡದಿರುವ ಚವುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚವುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಪ್ತು ಮಾಡಕೂಡದು.
4. ಹರಾಜು ತಾರೀಖು ಲಾಗಾಯಿತು 90 ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಯಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಒಂದಕ್ಕೆ ಶೇಕಡ ಒಂದಕ್ಕೆ 12 ರೂಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ನವರತ್ನದ ವೆಂಕೋಬಾಚಾರ್ಯರು ವಗೈರೇರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1907ನೆ ಇಸವಿ ಸೆಪ್ಟಂಬರು 18ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

